12th Century's
Enlightenment Technic
and Revolution



ಹಡಪದ ಅಪ್ಪಣ್ಣಗಳ

ವಚನಾನುಭಾವ

ಬಸವರಾಜ ಸ್ವಾಮಿ

12th Century's
Enlightenment Technic
and Revolution

ಹಡಪದ ಅಪ್ಪಣ್ಣಗಳ

ವಚನಾನುಭಾವ

ಹನ್ನೆರಡನೆ ಶತಮಾನದ ಸ್ವಯಂ ಜ್ಞಾನ ಕ್ರಾಂತಿ ಮತ್ತು ತಂತ್ರಗಾರಿಕೆ

ಲೇಖಕರು:

ಬಸವರಾಜ ಸ್ವಾಮಿ

ಪ್ರಕಾಶಕರು

ಶ್ರೀ ಬಸವ ಸೇವಾ ಪ್ರತಿಷ್ಠಾನ

ಬಾಲಂಕು ಆಸ್ಪತ್ರೆ ಪಕ್ಕದಲ್ಲಿ, ಮುನ್ನೂರುವಾಡಿ ಶಾಲೆ ಎದುರುಗಡೆ,
ಬಸವನಗರ, ಗಂಜ್‌ರಸ್ತೆ, ರಾಯಚೂರು -584102
ರಾಯಚೂರು - 584 102 ಕರ್ನಾಟಕ

12th Century's
Enlightenment Technic
and Revolution

HADPADA APPANNAGALA VACHANANUBHAVA
by : **Basavaraj Swamy**
Editor, Suddimoola Kannada Daily
Siyatalab, Raichur-584102
M. 9980553750

ಹಡಪದ ಅಪ್ಪಣ್ಣಗಳ
ವಚನಾನುಭಾವ
ಲೇಖಕರು: ಬಸವರಾಜ ಸ್ವಾಮಿ

ಹಕ್ಕುಗಳು	: ಲೇಖಕರವು
ಬೆಲೆ	: ರೂ. 100/
ಪ್ರತಿಗಳು	: 1000
ಮುದ್ರಣ	: 2019
ಕಾಗದ ಬಳಕೆ	: 60 ಜಿಎಸ್ಎಂ. ಎನ್ ಎಸ್ ಮ್ಯಾಪಲಿತೋ
ಆಕಾರ	: ಡೆಮಿ 1/8

Page	*: 281 + viii*
Price	*: Rs. 100/-*
Copies	*: 1000*
ಮುಖಪುಟ	: ಮುರಳೀಧರ . ವಿ. ರಾಠೋಡ್, ಬೆಂಗಳೂರು
ಮುದ್ರಣ	: ಶುಭೋದಯ ಪ್ರಿಂಟರ್ಸ್, ಬೆಂಗಳೂರು.

ಪ್ರಕಾಶನ :
ಶ್ರೀ ಬಸವ ಸೇವಾ ಪ್ರತಿಷ್ಠಾನ
ಬಾಲಂಕು ಆಸ್ಪತ್ರೆ ಪಕ್ಕದಲ್ಲಿ, ಮುನ್ನೂರುವಾಡಿ ಶಾಲೆ ಎದುರುಗಡೆ,
ಬಸವನಗರ, ಗಂಜ್‌ರಸ್ತೆ, ರಾಯಚೂರು -584102
ರಾಯಚೂರು - 584 102 ಕರ್ನಾಟಕ

...... ಓದುವ ಮುನ್ನ

ಮನುಷ್ಯ ಮಹಾಜ್ಞಾನಿ! ಜ್ಞಾನ ಮನುಷ್ಯನಲ್ಲಿಯೇ ಮಹಾ ಮನುಷ್ಯನಾಗಿ ಮನುಷ್ಯನಲ್ಲಿಯೇ ಬಚ್ಚಿಟ್ಟುಕೊಂಡಿದೆ. ತನ್ನಲ್ಲಿಯೇ ಬಚ್ಚಿಟ್ಟುಕೊಂಡ ಮಹಾಮನುಷ್ಯನನ್ನು ಮನುಷ್ಯ ಹುಡುಕದೆ ಮನುಷ್ಯನಂತೆ ಮುಖವಾಡ ಧರಿಸಿ ಮನುಷ್ಯನಾಗಲು ಹೊರಟಿದ್ದಾನೆ.

ಕಾವಿ ಅರಿವಿನ ಚಿನ್ಹೆ . ಅರಿವಾದ ಮೇಲೆಯೇ ತನುವಿಗೆ ಧರಿಸಬೇಕು. ಇದು ನಿಯಮ. ಆದರೆ ಮನ ತನುವಿಗೆ ಅರಿವಿನ ವೇಷ ಧರಿಸಿ ವ್ಯವಹಾರ ಮಾಡುತ್ತದೆ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಬತ್ತುವುದಿಲ್ಲ. ತನುವಿನ ವೇಷ ನೋಡಿ ಭಕ್ತರು ಪೂಜೆ ಮಾಡುತ್ತಾರೆ. ಅಶನಕ್ಕೆ ಅನ್ನವ ನೀಡಿ, ಹೊದಿಯಲು ಕಂಬಳಿ ಕೊಟ್ಟು ಆರೈಕೆ ಮಾಡುತ್ತಾರೆ. ಭಕ್ತರಿಗೆ ಇದು ಸಹಜ. ಆದರೆ ವೇಷ ಧರಿಸಿದವನು ಒಮ್ಮೆ ತನ್ನನ್ನು ತಾನು ನೋಡಿಕೊಳ್ಳಬೇಕಲ್ಲ!

ತನುವಿನಲ್ಲಿ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ನಿಂತಿವೆಯೆ? ಎಂದು ಪರೀಕ್ಷಿಸಿಕೊಳ್ಳಬೇಕಲ್ಲ. ಪೂಜಿಸುವ ಭಕ್ತ , ಪೂಜೆಗೊಳಗಾದ ತಾನು ಭಿನ್ನವೆ? ಎಂದು ಪರೀಕ್ಷಿಸಿಕೊಳ್ಳಬೇಕಲ್ಲ. ಅರಿವಿನ ಬಟ್ಟೆ ಧರಿಸಿದರೆ ಅಂತರಂಗದ ಅರಿಷಡ್ವರ್ಗಗಳು ಕಳಚಿ ಬೀಳುವುದಿಲ್ಲ.

ಜ್ಞಾನ ಒಂದು ವ್ಯವಹಾರವಲ್ಲ. ಅದು ಪ್ರತಿ ತನುವಿನಲ್ಲಿ ಸಂಗಮವಾದ ಶಕ್ತಿ . ಒಲವಾದರೆ ಸಾಕು ಆ ಶಕ್ತಿಯೇ ಮನಕ್ಕೆ ಬೋಧಿಸುತ್ತದೆ. ಮನಕ್ಕೆ ಒಲವಾಗದಿದ್ದರೆ ಜ್ಞಾನದ ಬೋಧೆ ಕೇಳುವುದಿಲ್ಲ. ಬದಲಾಗಿ ಜ್ಞಾನದ ವೇಷವನ್ನು ತನುವಿಗೆ ಧರಿಸಿ ತನುಗಳೊಂದಿಗೆ ವ್ಯವಹರಿಸುತ್ತದೆ. ಇದು ಪ್ರತಿ ತನುವಿನ ಅಂತರಾಳದಲ್ಲಿ ನಡೆಯುವ ಕ್ರಿಯೆ.

ಕಾಯದಿಂದ ಗುರುವಾದಾತ ವ್ಯವಹಾರಿಕ ಗುರು, ವೇಷದ ಗುರು. ಕಾಯದಲ್ಲಿ ಸಂಗಮವಾದ ಅರಿವೇ ಗುರು. ಆ ಗುರುದೇವನನ್ನು ತಿಳಿಯುವ ಬಯಕೆಯುಳ್ಳ ಮನವೇ ಶಿಷ್ಯ . ಗುರು ಶಿಷ್ಯರಿಬ್ಬರೂ ಕಾಯದಲ್ಲಿಯೇ ಸಂಗಮವಾಗಿದ್ದಾರೆ. ಇಂತಹ ಕಾಯವೇ ಕೈಲಾಸ.

ಅರಿವೆಂಬುದು ಅರಿವಿನ ಲಿಂಗವಾದರೂ, ಆವರಿಸಿದ ಮನದ ಕಾರಣದಿಂದಾಗಿ ಒಂದಂಗವನ್ನೇ ಗುರು ಲಿಂಗ ಜಂಗಮವೆಂದು ಮೂರು ಭಾಗಗಳಲ್ಲಿ ಜ್ಞಾನ ತಿಳಿಯಲಿಕ್ಕಾಗಿ ವಿಂಗಡಿಸಲಾಗಿದೆ. ಆದರೆ ಮನಕ್ಕೆ ಭ್ರಮೆ ಆವರಿಸಿ, ಗುರುವನ್ನು ಲಿಂಗವನ್ನು ಜಂಗಮವನ್ನು ಪುನಃ ಹೊರಗೆ ನೋಡುತ್ತದೆ. ಶಿಲೆಯೇ ಲಿಂಗದ ಕುರುಹು ಎಂದು ಭಾವಿಸಿ ಅಂಗದ ಮೇಲೆ ಧರಿಸುತ್ತದೆ. ಲಿಂಗ ಕೊಟ್ಟಾತ ಗುರುವೆಂದು, ಶಿಷ್ಟಾಚಾರ ಬೋಧಿಸಿದಾತನನ್ನು ಜಂಗಮನೆಂದು ಕರೆದು ಪೂಜಿಸಿ ಭಕ್ತನೆನ್ನಿಸಿಕೊಳ್ಳುತ್ತದೆ. ಅಂಗವನ್ನು ಆವರಿಸಿದ ಇಂತಹ ಅಜ್ಞಾನಿ ಮನಕ್ಕೆ ಅಪ್ಪಣ್ಣ ಶರಣರು: ಊರೆಲ್ಲರ ಮುಂದೆ ದೂರಿಯಾಡುವ ನಾಯಿ ಎಂದು ಕರೆದರು. ಈ ನಾಯಿತನವನ್ನು ತನಗೆ ತಾನೇ ಕಳೆದುಕೊಂಡವನೇ ಮನುಷ್ಯ. ಮಹಾ ಮನುಷ್ಯ !

ಜಂಗಮ ಒಂದು ಜಾತಿಯಲ್ಲ. ಮಠ ಪೀಠಾದಿಗಳ ಮೇಲೆ ಕೂಡುವ ಒಂದು ಅಂಗವಲ್ಲ. ಕಾವಿ ಧರಿಸಿದ ವಿರಕ್ತನೂ ಅಲ್ಲ . ಜಗದ ಪ್ರತಿ ಅಂಗಗಳ ಅಂತರಂಗದಲ್ಲಿ ಸಂಗಮವಾದ ಅರಿವು. ಅವ್ಯಕ್ತ ಜಂಗಮನಾಗಿ ಅಂಗಕ್ಕೆ ಭೋಧಿಸುತ್ತ ಅಜ್ಞಾನವನ್ನು ಪ್ರಸಾದ ಮಾಡಿಕೊಂಡು, ಅಂಗ ಅಜ್ಞಾನದಲ್ಲಿ ತೊಡಗದಂತೆ ತಡೆಯುವ ವೀರ. ಅಂಗಕ್ಕೆ ಬಂದ ವಿಪತ್ತುಗಳೊಂದಿಗೆ ಕಾದಿ ಗೆಲುವು ಸಾಧಿಸುವ ಮಹಾವೀರ.

ಜಂಗಮ ಕಾಣುವುದಿಲ್ಲ, ಅಂಗ ಕಾಣುತ್ತದೆ; ಅಂಗಕ್ಕೆ ಆವರಿಸಿದ ಅಜ್ಞಾನಿ ಮನವೂ ಕಾಣುವುದಿಲ್ಲ. ಕಾಣದ ಮನ ಕಾಣದಿರುವ, ಕಾಣಲು ಬಾರದ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ಸೃಷ್ಟಿ ಮಾಡಿದೆ. ಸಪ್ತ ವ್ಯಸನಗಳನ್ನು, ಅಷ್ಟಮದಗಳನ್ನು ಸೃಷ್ಟಿ ಮಾಡಿದೆ.

ಜಗದ ತನುಗಳಲ್ಲಿ ಮನ ಸೃಷ್ಟಿ ಮಾಡಿದ ವೈರಿಗಳೂ ಇದ್ದಾರೆ, ಜಗದೀಶ ಸೃಷ್ಟಿ ಮಾಡಿದ ಜಂಗಮನೂ ಇದ್ದಾನೆ. ವೈರಿಗಳನ್ನು ಸೃಷ್ಟಿ ಮಾಡಿದ ಮನದಿಂದಲೇ ಜಂಗಮನನ್ನು ಅಂಗದಲ್ಲಿಯೇ ಕಂಡುಕೊಳ್ಳಬೇಕು. ವೈರಿಗಳೊಂದಿಗೆ ಯುದ್ಧ ಮಾಡಿ ಜಂಗಮ ಮಾತ್ರ ಉಳಿಯುತ್ತಾನೆ. ಜಂಗಮನೊಂದಿಗಿದ್ದ ಅಂಗವೇ ಲಿಂಗಾಂಗ !

ಇಡೀ ಬ್ರಹ್ಮಾಂಡವೇ ತನ್ನ ಕುಕ್ಷಿಯೊಳಗೆ ನಿಕ್ಷೇಪವಾಗುತ್ತದೆ. ಈತನಿಗೆ ಭವವಿಲ್ಲ; ಬಂಧನವಿಲ್ಲ.

ಕಾಸು ಹೊಲಸಿಗೆ ಕೈಯೊಡ್ಡಿ, ವೇಶಿ ದಾಸಿಯರ ಬಾಗಿಲ ಕಾಯುವ ವೇಷದ ಜಂಗಮನೆಂತು ಜಂಗಮನಾಗುವನು? ಜಂಗಮ ವೇಷಕ್ಕೆಲ್ಲ ಭಂಗವ ಹೊರಿಸುವ ಪಾತಕಿಯವನು. ಅವರ ಸುತ್ತಿರ್ದ ಪಾಶವ ಕಂಡು ಹೇಸಿತ್ತೆನ್ನ ಮನ ನಿಮ್ಮಾಣೆ ಎಂದು ಅಪ್ಪಣ್ಣ ಶರಣರು ಮಮ್ಮಲ ಮರುಗಿದ್ದಾರೆ.

ಜಗದಲ್ಲಿ ಹುಟ್ಟಿದ ತನುಗಳೆಲ್ಲ ಒಂದೇ. ಆದರೆ ತನುವೇ ತನುವಿನ ಹಂಗಿಗನಾಗಿ ಬದುಕುತ್ತಿದೆ. ಒಂದು ತನು ವೇಷಹಾಕಿ ಜಂಗಮನೆಂದು ಹೇಳಿಕೊಳ್ಳುತ್ತದೆ; ಮತ್ತೊಂದು ತನು ವೇಷಕ್ಕೆ ನಮಿಸಿ ಭಕ್ತನೆಂದು ಹೇಳಿಕೊಳ್ಳುತ್ತದೆ. ತನುಗಳೆಲ್ಲಾ ಒಂದೇ ಆದರೂ ಜಂಗಮ, ಭಕ್ತ ಎನ್ನುವ ನುಡಿ ನುಡಿಯಲು ಎರಡು ತನುಗಳಿಗೂ ನಾಚಿಕೆಯಾಗುತ್ತಿಲ್ಲ!

ಅಂಗ ಯಾವುದಾದರೇನು? ಬ್ರಹ್ಮನ ಹುಟ್ಟಿಗೆ, ವಿಷ್ಣುವಿನ ಸ್ಥಿತಿಗೆ, ರುದ್ರನ ಲಯಕ್ಕೆ ಒಳಗಾಗುತ್ತದೆ ಎನ್ನುವ ಶಾಸ್ತ್ರ ಬೇರೆ! ಅದು ಹಾಗಲ್ಲ ಕೇಳಿರಣ್ಣಾ : ಜಂಗಮ ತನುವಾದರೆ ಜಗದೊಳಗೆ ಹುಟ್ಟಿ, ಜಗದ ಹಂಗ ಹರಿದು, ಹೊನ್ನು ಹೆಣ್ಣು ಮಣ್ಣು ಕಣ್ಣಲೆ ನೋಡಿ ಕಾಮಿಸದೆ, ಮನದಲ್ಲಿ ನೆನೆಯದೆ, ಮಾಯವನುಣ್ಣದೆ, ಆಶೆಗೊಳಗಾಗದೆ, ವೇಷವ ಹೊರದೆ, ದೇಶದ ತನುಗಳನ್ನು ಸುತ್ತಿದ ಪಾಶದ ಮೋಸಕ್ಕೆ ಹೊರಗಾಗಿ, ಸುಳಿದಾಡುವ ತನುವನ್ನು ಜಂಗಮ ತನುವೆನ್ನುವೆ. ಆ ತನುವನ್ನು ಈಶನ ತನುವೆಂದು ಕಾಣುವೆ. ಆ ಜಂಗಮ ತನುವಿಗೆ ಅರ್ಥ ಪ್ರಾಣ ಅಭಿಮಾನವನೊಪ್ಪಿಸುವೆ. ತನುವಿನ ಅಜ್ಞಾನ ಕಳೆವ ಜ್ಞಾನಿ ಒಡೆಯನ ತನುವೆಂದು ಮಾಡುವ ಸೇವೆಯ ತನುವನ್ನು ಭಕ್ತನ ತನುವೆಂದು ಹೆಸರಿಸುವೆ.

ಅರಿವು ಪಡೆಯಲೇ ಬೇಕು ಎಂದು ಬಯಕೆಯುಳ್ಳ ತನುಗಳು ಅಪ್ಪಣ್ಣನ ಈ ಸೂತ್ರವನ್ನು ಹೇಗಾದರೂ ಒಪ್ಪಿಕೊಳ್ಳಿ ಎಂದು ಅಪ್ಪಣ್ಣ ಶರಣರೆ ಜಗದ ತನುಗಳಿಗೆ ಮನವಿ ಮಾಡಿದ್ದಾರೆ. ಬಸವ ಪ್ರಿಯ ಕೂಡಲ ಚೆನ್ನಸಂಗನ ಬಸವಣ್ಣನಲ್ಲಿ ಒಂದಾಗುವ ಬಯಕೆ ಉಳ್ಳ ತನುಗಳಿಗೆ ಮಾತ್ರ ಶರಣರ ಈ ಸೂತ್ರ ಅರ್ಥವಾಗುತ್ತದೆ.

ಭೌತಿಕ ಜಗತ್ತನ್ನು ಗೆದಿಯ ಬೇಕೆಂದು ಬಯಸಿ ಸಾಮ್ರಾಟ, ಚಕ್ರವರ್ತಿ, ಮಹಾರಾಜ ಎನ್ನಿಸಿಕೊಂಡವರುಂಟು. ಆಂತರಿಕ ಅರಿವನ್ನು ಜಯಿಸಿ ಮಹಾವೀರ ಅನ್ನಿಸಿಕೊಂಡವರು ವಿರಳ. ಇವರು ಜಗದಲ್ಲಿಯೇ ಹುಟ್ಟಿ, ಜಗದಲ್ಲಿಯೇ ಬೆಳೆದು, ಜಗದಂತೆ ಇದ್ದು, ಈ ಜಗವ ಗೆದ್ದವರು. ತನುವಿನ ಅಜ್ಞಾನದೊಂದಿಗೆ ಯುದ್ಧ ಮಾಡಿ, ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ, ಸಪ್ತ ವ್ಯಸನಗಳು ಅಷ್ಟ ಮದಗಳನ್ನು ಗೆದ್ದವರೇ ತನ್ನ ಗೆದ್ದವರು.

ತನ್ನ ತಾನು ಗೆದ್ದವನು ಮಾತ್ರ ಜಗವ ಗೆದಿಯಬಲ್ಲ. ಜಗತ್ತು ತನ್ನಂತೆ ಅರಿವಿನಿಂದ ಭರಿತವಾಗಿದೆ. ಜಗತ್ತು ಸಮಾಧಾನಿಯೇ ಆಗಿದೆ. ತಾನು ಸಮಾಧಾನಿಯಲ್ಲದ ನಿಮಿತ್ತ ಜಗತ್ತು ಸಮಾಧಾನಿಯಲ್ಲ,

ಅದು ಕೆಟ್ಟಿದೆ ಎಂದು ಭಾಸವಾಗುತ್ತದೆ.

ಮನ ಹಾಗಲ್ಲ. ಅದಕ್ಕೆ ಸೋಲು ಗೆಲವುಗಳಿವೆ. ಗೆಲ್ಲುವುದಕ್ಕಾಗಿ ಮನ ತನುವಿನೊಂದಿಗೆ ಯುದ್ಧ ಮಾಡುತ್ತದೆ. ತನ್ನಂತೆ ಇರುವ ಹಲವಾರು ತನುಗಳಿಗೆ ಸಾವು ನೋವುಂಟು ಮಾಡಿ ಗೆಲುವಿನ ಕೃತಕ ಸುಖ ಹೊಂದುತ್ತದೆ. ಸೋತು ಸೋಲಿನ ದುಃಖ ಅನುಭವಿಸಿ, ಗೆಲುವಿನ ಮಸಣ ಸೇರುತ್ತದೆ.

ತನು ತನುವಿನೊಂದಿಗೆ ಕಾದುವುದೊಂದು ಸುಖವಲ್ಲ. ತನು ತನುವಿನೊಂದಿಗೆ ಗೆಲ್ಲ ಸೋಲನುಭವಿಸುವುದೊಂದು ಸುಖ ಸುಖವಲ್ಲ ಇದು ತನುವಿನಲ್ಲಿ ಉಂಟಾಗುವ ವಿಕೃತ ಸುಖದುಃಖಗಳ ರಸಾಯನ.

ಮನ ಅರಿವಿನೊಂದಿಗೆ ಸಂಗಮವಾಗಿ ನೋಡಿದರೆ ಯುದ್ಧವೇ ಬೇಡ. ತನ್ನಂತೆಯೇ ಅರಿವಿನ ಸುಖಬಯಸಿ ಭೂಮಿಗೆ ಬಂದ ತನುಗಳು. ಮನದ ಅಜ್ಞಾನದಿಂದಾಗಿ ಗೆಲುವು ಸೋಲಿನ ವಿಕೃತ ಕ್ರಿಯೆಯಲ್ಲಿ ಭಾಗವಹಿಸಿವೆ. ಮನಕ್ಕೆ ಅರಿವಾಗಲು ಮನವೇ ಮಹಾವೀರ. ಮನಕ್ಕೆ ಅರಿವಾಗದಿದ್ದರೇನಂತೆ ಪ್ರತಿ ತನುವಿನ ಅರಿವಿನ ಕ್ರಿಯೆಗಳೆಲ್ಲ ಒಂದೇ ಆಗಿವೆ. ಮನಕ್ಕೆ ಪಾಠ ನಿಲ್ಲುವುದಿಲ್ಲ; ಅರಿವಿಗೆ ಪಾಠಬೇಡ! ಇದನ್ನು ತಿಳಿದ ಜ್ಞಾನಿ ಸದಾ ಸುಖಿ. ಜಗವೂ ಸುಖಿ! ತಿಳಿಯುದ ಮನಕ್ಕೆ ಸುಖ ಉಂಟು ದುಃಖ ಉಂಟು. ಇಂತಹ ಕೃತಕ ಸುಖ ದುಃಖಗಳಿಂದ ಜ್ಞಾನಿ ಸದಾ ದೂರವಾಗಿರುತ್ತಾನೆ.

ತನ್ನ ತಾನರಿಯುವ ಬಯಕೆಯಾದ ತನುಗಳು ಸಾಧ್ಯವಾದರೆ ಇಂತಹವರನ್ನು ಹುಡುಕಲೇಬೇಕು. ಏಕೆಂದರೆ ಇವರು ನಿಜ ಸುಖಿ ಅಪ್ಪಣ್ಣ ಶರಣರಂತೆ ಯಾರಿಗೂ ಗುರುವಾಗದವರು.

ಧರೆಯನ್ನು ಸರ್ಪ ಹೊತ್ತಿದೆ. ಸರ್ಪ ಜಲದ ಅಶ್ರಯದಲ್ಲಿ ನಿಂತಿದೆ. ಧರೆಯ ಮೇಲೆ ಸಕಲ ಪ್ರಾಣಿ ಪಶು ಪಕ್ಷಿ ಕೀಟ ಗಿಡ ಮರ ಬಳ್ಳಿ ಜಲಚರಗಳು ನಿಂತಿವೆ. ಇದೊಂದು ಪೌರಾಣಿಕ ಕಥೆ. ಆದರೆ ಜ್ಞಾನ ಪ್ರಧಾನವಾದ ಕತೆ. ಆಳವಾಗಿ ಅರಿತು ಸಮಾಧಾನದಿಂದ ನೋಡಿದರೆ ಸಕಲರ ಗಮನಕ್ಕೂ ಬರುತ್ತದೆ. ಯತಾರ್ಥವಾಗಿ ತಿಳಿದರೆ ಇದೊಂದು ಮೌಢ್ಯನಂಬಿಕೆಯ ಕಥೆ.

ಹಾವು ತನ್ನ ಹೆಡೆಯ ಮೇಲೆ ಭೂಮಿಯನ್ನು ಹೊರಲು ಸಾಧ್ಯವೇ? ಇದು ಊಹಿಸಲು ಸಾಧ್ಯವಿಲ್ಲ. ಆದರೆ ಭಾರತೀಯರು ಬಲವಾಗಿ ನಂಬುತ್ತಾರೆ. ಜಲದ ಮೇಲೆ ಹಾವು ತನ್ನ ಐದೆಡೆಯನ್ನು ಎತ್ತಿ ನೆರಳುಮಾಡಿ ಆ ನೆರಳ ಕೆಳಗಡೆ ಹಾವಿನ ಹಾಸಿಗೆಯ ಮೇಲೆ ವಿಷ್ಣು ಮಲಗಿ ವಿರಮಿಸಿದ ಚಿತ್ರವಿದೆ. ಪೌರಾಣಿಕ ಕತೆಯೂ ಇದೆ.

ಹಾವನ್ನೇ ಆಭರಣ ಮಾಡಿಕೊಂಡ ಶಿವನ ಚಿತ್ರವೂ ಇದೆ. ಹಿಮಾಲಯವನ್ನೇ ಕಡಗೋಲು ಮಾಡಿ, ಹಾವನ್ನೇ ಹಗ್ಗ ಮಾಡಿ. ಸಮುದ್ರವನ್ನೇ ಕ್ಷೀರ ಮಾಡಿ, ಹೆಡೆಯೆಡೆಗೆ ರಕ್ಕಸರು, ಬಾಲದೆಡೆಗೆ ದೇವತರು ನಿಂತು ಕಡೆಯುವ ಚಿತ್ರವೂ ಇದೆ. ಇದರ ಶ್ರಮದಿಂದಾಗಿ ಸಮುದ್ರ ಉಗುಳಿದ ಅಮೃತ ಹಾಗೂ ವಿಷದ ಚಿತ್ರವೂ ಇದೆ; ವಿಷವನ್ನು ಶಿವ ಕಂಠದಲ್ಲಿ ಧರಿಸಿ ನೀಲಕಂಠನಾದ ಕತೆಯೂ ಇದೆ.

ನಾಗ ಪಂಚಮಿಯನ್ನು ಭಾರತ ಸಡಗರದಿಂದ ಐದು ದಿನಗಳವರೆಗೆ ನಾಗಕ್ಕೆ ಹಾಲೆರೆದು ಮಹಿಳೆಯರು ಬಾಲೆಯರು ಜೋಕಾಲಿ ಹಾಡಿ ಆಚರಿಸುತ್ತಾರೆ. ಅಂಡದಿಂದ ಹೊರಬಂದ ಉರುಗ ಹಾಲು ಕುಡಿಯುವುದಿಲ್ಲವೆಂದು ಈ ದೇಶದ ಜನಕ್ಕೆ ಗೊತ್ತಿದೆ. ಆದರೂ ಹಾವಿಗೆ ಹಾಲೆರೆಯುತ್ತಾರೆ. ಹಾಲಿನೊಂದಿಗೆ ಪೂಜಿಸುತ್ತಾರೆ.

ಹಾವಿಗೂ ಈ ದೇಶದ ಜನಕ್ಕೂ ಅವಿನಾಭಾವ ಸಂಬಂಧ. ಹೊರ ದೇಶದ ಜನ ಭಾರತವನ್ನು

ಹಾವಾಡಿಗರ ದೇಶವೆಂದು ಹೀಯಾಳಿಸುತ್ತಾರೆ. ಅದಕ್ಕೆ ಕಡಿವಾಣ ಹಾಕುವೆ ಅಭಿವೃದ್ಧಿಗೊಳಿಸುವೆ ಎಂದು ಈ ದೇಶದ ಪ್ರಧಾನಿ ನರೇಂದ್ರ ಮೋದಿ ಜಪಾನಿಗೆ ಭೇಟಿ ಕೊಟ್ಟಾಗ ಮಾಧ್ಯಮಗಳೊಂದಿಗೆ ಈ ಮಾತು ಹಂಚಿಕೊಂಡಿದ್ದಾರೆ.

ಹಿಂದಿನ ಜನ ಹಾವು ಮತ್ತು ಮನಷ್ಯನನ್ನು ಅರಿವು ಮತ್ತು ಮನಸ್ಸಿಗೆ ಹೋಲಿಸಿದ್ದಾರೆ. ಅಂಗದಲ್ಲಿ ಅರಿವಿನಂತಹ ಅಮೃತವೂ ಇದೆ. ಹಾವಿನಂತಹ ವಿಷವೂ ಇದೆ. ಹಾವಿಗೆ ಅರಿವಿನ ಹಾಲೆರೆದು ಆರೈಸಿದರೆ ಮಾತ್ರ ಮನ ಕಲಕುವುದಿಲ್ಲ. ಹಾವಿನಂತೆ ಹರಿದಾಡುವುದಿಲ್ಲ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ತನುವಿನಿಂದ ಹೊರಚೆಲ್ಲುವುದಿಲ್ಲ. ದೇಹಕ್ಕೆ ಹಿಂಸೆ ಕೊಡುವುದಿಲ್ಲ. ಮನವೆಂಬ ಹಾವಿಗೆ ಅರಿವಿನ ಹಾಲೆರೆದು ಪಳಗಿಸಿ ಅದನ್ನು ಕೊರಳಿಗೆ ಧರಿಸಿದ ಮಹಾಜ್ಞಾನಿಯೇ ನಾಗಭೂಷಣ ಎನ್ನಿಸಿಕೊಂಡ. ಅದರ ವಿಷ ದಶದಿಕ್ಕುಗಳಿಗೆ ಪಸರಿಸದಂತೆ ಕಂಠದಲ್ಲಿ ಧರಿಸಿಕೊಂಡ ಮಹಾಜ್ಞಾನಿಯೇ ಶಿವನೆಂದು ಕರೆಯಿಸಿಕೊಂಡ.

ಮನವೆಂಬ ಹಾವು ಹಿಡಿದು ಅದರ ಐದೆಡೆಯ ನೆರಳಲ್ಲಿ ಮಲಗಿದ ಜ್ಞಾನಿ ವಿಷ್ಣುವೆನ್ನಿಸಿಕೊಂಡ. ಮನದ ವಿಷ ಕಣ್ಣಿನಲ್ಲಿ ಬೆರೆತು ನೋಡದಂತೆ ಮಾಡಿದೆ. ಚರ್ಮದಲ್ಲಿ ಬೆರೆತು ಮುಟ್ಟದಂತೆ ಮಾಡಿದೆ. ನಾಲಗೆಯಲ್ಲಿ ಬೆರೆತು ರುಚಿಸದಂತೆ, ಕಿವಿಯಲ್ಲಿ ಬೆರೆತು ಕೇಳದಂತೆ, ಮೂಗಿನಲ್ಲಿ ಬೆರೆತು ಮೂಸಿಸದಂತೆ ಮಾಡಿದೆ, ಈ ಐದೂ ವಿಧದ ವಿಷ ಉಗುಳುವ ಹಾವಿನ ನೆರಳಲ್ಲಿ ಅರಿವು ನಿಶ್ಚಿಂತವಾಗಿ ಮಲಗಿದೆ. ಮನದ ಭ್ರಮೆ ಕಳೆದು ಕೊಂಡವನೆ ಬ್ರಹ್ಮ. ಹಾವಿನ ವಿಷದ ಹಲ್ಲು ಕಿತ್ತಿ ಪಳಗಿಸಿ ಕೊರಳಿಗೆ ಆಭರಣದಂತೆ ಧರಿಸಿಕೊಂಡವನೆ ಶಿವ. ಮನದ ಅಜ್ಞಾನ ಅತ್ತಿತ್ತ ಅಲೆಯದಂತೆ ಹಾವನ್ನೇ ಹಾಸಿಗೆ ಮಾಡಿ ಅದರ ಮೇಲೆ ಪವಡಿಸಿದಾತನೆ ವಿಷ್ಣು.

ಈ ಮೂರು ಜನ ದೇಶದ ಮನುಜರಿಗೆಲ್ಲ ಮನವೆಂಬ ಹಾವು ಹಿಡಿದು ಪಳಗಿಸಿ ಹಾವಾಡಿಸುವ ಜ್ಞಾನ ಶಿಕ್ಷಣವನ್ನು ಭೋದಿಸಿದರು. ಕಲಿತವರು ಜ್ಞಾನಿಗಳಾದರು. ಕಲಿಯದವರು ಹಾವ ಪೂಜಿಸಿದರು. ಬ್ರಹ್ಮ ವಿಷ್ಣು ಮಹೇಶ್ವರನ ಚಿತ್ರ ಬರೆದು ಮಂದಿರ ಕಟ್ಟಿದರು, ಹೊಟ್ಟೆ ಹೊರೆಯಲು ಹಾವು ಹಿಡಿದು ಹಾವಾಡಿಗರಾದರು. ಅಂಗದ ಐದು ಜ್ಞಾನೇಂದ್ರಿಯಗಳಲ್ಲಿ ವಾಸಮಾಡಿದ ಐದೆಡೆಯ ಮನವೆಂಬ ಹಾವನ್ನು ಪಳಗಿಸಲರಿಯದೆ ನಾಗ ಪಂಚಮಿಯಂದು ಕಲ್ಲ ನಾಗಕ್ಕೆ ಐದು ದಿನ ಹಾಲನೆರೆದು ಮೌಢ್ಯ ಮೆರೆದರು. ಈ ದೇಶದ ಮಹಾಜ್ಞಾನದ ಬೆಡಗಿನ ಮಾತನರಿಯದ ಪ್ರಧಾನಿ ಹಾವಾಡಿಗ ದೇಶವನ್ನು ಅಭಿವೃದ್ಧಿ ಪಡಿಸುತ್ತೇವೆಂದು ಜಪಾನಿನಲ್ಲಿ ನುಡಿದರು.

ಅಂಗವನ್ನು ಆವರಿಸಿದ ಮನವನ್ನು ಅರಿವಿನತ್ತ ಕೊಂಡೊಯ್ಯುವುದೆ ಅಭ್ಯುದಯವೆಂದು ಈ ದೇಶದ ಶರಣರು, ದಾಸರು, ಸಂತರು ಮಾತ್ರ ತಿಳಿದರು. ಆಯಾಕಾಲದ ಕಾಲಘಟ್ಟದನುಗುಣವಾಗಿ ಬೆಡಗಿನ ಭಾಷೆಯನ್ನು ಜ್ಞಾನದ ಸೂತ್ರಗಳಿಗಾಗಿ ಬಳಕೆ ಮಾಡಿದ್ದಾರೆ. ಈ ಶಿಕ್ಷಣ ತಿಳಿದರೆ ಇಡೀ ದೇಶವೇ ಜ್ಞಾನ ಪ್ರಧಾನವಾದ ರಾಷ್ಟ್ರ.

ಮಹಾ ಮನುಷ್ಯರೆಂದರೆ ಬಸವಾದಿ ಶರಣರು, ದಾಸವರೇಣ್ಯರು. ಕ್ರಿಷ್ಣ ಕ್ರಿಸ್ತ ಬುದ್ಧ ಪೈಂಗಬರರು. ಇವರು ಮನುಷ್ಯರಾಗಿ ಹುಟ್ಟಿದರು. ಮಹಾ ಮನುಷ್ಯನನ್ನು ತಮ್ಮಲ್ಲಿಯೇ ಕಂಡುಕೊಂಡರು. ಅವನನ್ನೇ ಬೇಡಿದರು. ಅವನನ್ನೇ ಕಾಡಿದರು. ಆ ಮಹಾ ಮನುಷ್ಯನಿಗೆ ಕ್ರಿಷ್ಣ 'ವಿರಾಟ ಸ್ವರೂಪಿ' ಎಂದು ಕರೆದ. ಕ್ರಿಸ್ತ 'ಗಾಡ್' ಎಂದು ಕರೆದ. ಪೈಗಂಬರರು 'ಅಲ್ಲಾ' ಎಂದು ಕರೆದರು. ಬಸವಾದಿ ಶರಣರು ಅಂಗದಲ್ಲಿಯೇ ಸಂಗಮವಾದ ಮಹಾಮನುಷ್ಯನನ್ನು 'ಲಿಂಗಯ್ಯ' 'ಕೂಡಲಸಂಗಯ್ಯ' ಎಂದು ಕರೆದರು. ದಾಸರು ಆ ಮಹಾತ್ಮನಿಗೆ 'ದಾಸನು ದಾಸರಾದರು'.

ವರ್ಧಮಾನ ಆತನನ್ನು 'ಮಹಾವೀರ'ನೆಂದು ಕರೆದ. ಸಿದ್ಧಾರ್ಥ ಆತನನ್ನು 'ಬುದ್ಧ'ನೆಂದು ಕರೆದ.

ಸಿದ್ಧಾರ್ಥನ ಅಜ್ಞಾನ ಸಿದ್ಧಾರ್ಥನಿಗೆ ಸಿದ್ಧಾರ್ಥನಿಂದಲೇ ಗೊತ್ತಾಯಿತು. ಹಾಗೆಯೇ ಲೋಕ ಕೂಡಾ, ಲೋಕದ ಸಕಲ ಮನುಷ್ಯರು ಕೂಡಾ ತನ್ನಂತೆಯೇ ಇರುವರೆಂದು ಸಿದ್ಧಾರ್ಥನಿಗೆ ಗೊತ್ತಾಯಿತು. ಲೋಕದ ಅಜ್ಞಾನ ಸಿದ್ಧಾರ್ಥನಿಗೆ ಗೊತ್ತಾದರು ಕೂಡಾ ರಾಜನಾದ ತಾನು ಲೋಕಕ್ಕೆ ಜ್ಞಾನ ಬೋಧಿಸಲಿಲ್ಲ. ಏಕೆಂದರೆ ತಾನು ಕೂಡಾ ಲೋಕದಂತೆಯೇ ಇರುವೆ ಎಂದು ಸಿದ್ಧಾರ್ಥನಿಗೆ ಗೊತ್ತಾಯಿತು. ಇದನ್ನು ಸಿದ್ಧಾರ್ಥನಲ್ಲಿಯೇ ಸಂಗಮವಾದ ಮಹಾಮಾನವ ಸಿದ್ಧಾರ್ಥನಿಗೆ ಮನವರಿಕೆ ಮಾಡಿದ. ಆ ಮಹಾಮಾನವನನ್ನು ತನ್ನಲ್ಲಿಯೇ ಹುಡುಕಬೇಕೆಂದು ಸಿದ್ಧಾರ್ಥ ದೃಢವಾಗಿ ನಿರ್ಧರಿಸಿದ. ತನ್ನಲ್ಲಿಯೇ ಹುದುಗಿದ ಮಹಾ ಮಾನವ ಘನವಾಗಿ ಕಂಡ. ಅದರ ಹೊರತು ಸಿದ್ಧಾರ್ಥನಿಗೆ ಮತ್ತೇನೂ ಕಾಣಲಿಲ್ಲ. ತಾನು ಹುಟ್ಟಿದ ರಾಜ್ಯ ತನಗೆ ತೃಣವಾಯಿತು. ಹೆಂಡತಿ ಮಕ್ಕಳು ಕೂಡಾ ನಗಣ್ಯರಾದರು. ಸಂಪತ್ತು ಹುಸಿ ಎನ್ನಿಸಿತು.

ತನ್ನ ತನುವಿನಲ್ಲಿಯೇ ಸಂಗಮವಾದ ತನಗಿಂತ ಭಿನ್ನವಿರುವ ಅವ್ಯಕ್ತನನ್ನು ತನ್ನಲ್ಲಿಯೇ ಹುಡುಕಹತ್ತಿದ. ಈ ಕೃಷಿಯಲ್ಲಿ ತೊಡಗಿದ ಅಡ್ಡಿಪಡಿಸುವ ತಂದೆ ತಾಯಿಗಳಿಂದ, ಬಂಧು ಬಾಂಧವರಿಂದ, ಇತರರಿಂದ ಬಹುದೂರ ತೆರಳಿದ. ಕೃಷಿ ಫಲಿಸಿತು! ವ್ಯಕ್ತ ಅವ್ಯಕ್ತನನ್ನು ಹುಡುಕಿದ. ಆ ಅವ್ಯಕ್ತನಿಗೆ ಬುದ್ಧ ಎಂದು ನಾಮಕರಣ ಮಾಡಿದ. ಸಿದ್ಧಾರ್ಥ ಬುದ್ಧನಲ್ಲಿ ಸಂಗಮವಾದ. ಸಿದ್ಧಾರ್ಥ ಬುದ್ಧನಲ್ಲಿ ಕಳೆದು ಹೋದ. ತನಗೆ ತಾನೇ ಬುದ್ಧನೆಂದು ಇತರರಿಗೆ ಪರಿಚಯಿಸಿಕೊಂಡ.

ಸಕಲ ಮಾನವರಲ್ಲಿ ಮಹಾ ಮಾನವ ಸಂಗಮವಾದುದನ್ನು ಬುದ್ಧ ನೋಡಿದ. ಆತನಿಗೆ ಪರಮಾನಂದವಾಯಿತು. ಬುದ್ಧಂ ಶರಣಂ ಗಚ್ಛಾಮಿ ಎಂದು ಬುದ್ಧ ಬುದ್ಧನಿಗೆ ಶರಣು ಹೋದ!

ಮಾನವನೇ, ನೀನು ಮಹಾಮಾನವನೇ ಇರುವಿ. ನೀನು ಬುದ್ಧನೇ ಇರುವಿ. ಆದರೆ ನಿನಗೆ ಬುದ್ಧನ ಪರಿಚಯವಿಲ್ಲ. ನನ್ನೊಳಗೆ ಇರುವ ಆತನನ್ನು ನಾನು ಕಂಡುಕೊಳ್ಳಲು ನಲವತ್ತು ವರ್ಷಗಳೇ ಕಳೆದು ಹೋದವು! ಈಗ ನಾನು ಆತನನ್ನು ಕಂಡುಕೊಂಡಿದ್ದೇನೆ. ನಾನು ಆತನೇ ಆಗಿದ್ದೇನೆ. ಇನ್ನು ನೀನು ತಡಮಾಡುವುದು ಬೇಡ. ಈ ಸೂತ್ರ ಅನುಸರಿಸು. ನಿನ್ನನ್ನು ನೀನೇ ತಿಳಿ. ತಿಳಿತಿಳಿಯಾಗು! ನಿನ್ನಲ್ಲಿಯೇ ಇರುವ ಬುದ್ಧನೊಂದಿಗೆ ನೀನು ಸಂಗಮವಾಗು. ಆತನೇ ನೀನಾಗು ಎಂದು ಬುದ್ಧ ಸಕಲರಿಗೂ ಬೋಧಿಸಿದ.

ಮಾನವ ಮಹಾಮಾನವನಾಗಿದ್ದರೂ ಅದನ್ನು ತಿಳಿಯದೆ ಬೋಧಿಸಿದ ಬುದ್ಧನನ್ನೇ ಪೂಜಿಸಿದ! ಆತನ ಸ್ತೂಪವನ್ನು ನಿರ್ಮಿಸಿದ. ಆತನದೇ ಒಂದು ಧರ್ಮವನ್ನು ಮಾಡಿ ಆ ಧರ್ಮದವನು ತಾನೆಂದು ಘೋಷಿಸಿಕೊಂಡ. ಮಹಾ ಮಾನವನೇ ತಾನಾಗಬೇಕಾದ ಮನುಷ್ಯ ಬುದ್ಧನಾಗಲಿಲ್ಲ. ಬದಲಾಗಿ ಬೌದ್ಧನಾದ! ಬೌದ್ಧ ಧರ್ಮ ಶ್ರೇಷ್ಠವೆಂದ! ಬೌದ್ಧನಲ್ಲಿಯೇ ಹುದುಗಿದ ಬುದ್ಧನನ್ನು ಬೌದ್ಧ ಕಂಡುಕೊಳ್ಳಲಿಲ್ಲ.

ಮಾನವ ಧರ್ಮಕ್ಕೆ ಜಯವಾಗಲಿ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂದು ಪಲ್ಲಕ್ಕಿಯಲ್ಲಿ ಕುಳಿತು ಕೂಗಿದರೆ ಮಾನವ ಮಹಾಮಾನವನಾಗಲು ಸಾಧ್ಯವೆ? ಲಿಂಗಕಟ್ಟಿಕೊಂಡ ಮನುಷ್ಯ ಲಿಂಗಯ್ಯನಾಗಲು ಸಾಧ್ಯವೆ? ಬತ್ತಲೆಯಿದ್ದ ಮನುಷ್ಯ ಮಹಾವೀರನಾಗಲು ಸಾಧ್ಯವೆ? ಗಡ್ಡ ಬಿಟ್ಟು ಟೋಪಿ ಧರಿಸಿ ನಮಾಜ ಮಾಡುವ ಮನುಷ್ಯ ತನ್ನಲ್ಲಿಯೇ ಸಂಗಮವಾದ ಅಲ್ಲಾನ ಕೃಪೆ ಹೊಂದಲು ಸಾಧ್ಯವೆ?

ಬಸವಣ್ಣ ಬಿಜ್ಜಳನನ್ನು ಬೇಡಿದನೆ? ನಾನು ಜೋಳವಾಳಿಗನಲ್ಲ; ವೇಳೆಯವಾಳಿಗ ಎಂದ.

ಬೇಡಿದರೆ ಎನ್ನೊಡೆಯನ ಬೇಡುವೆ ಎಂದ. ಈ ಮಹಾಸೂತ್ರವನ್ನು ದಯಪಾಲಿಸಿದ ಶರಣರನ್ನು ನಮ್ಮದು ಶರಣ ಧರ್ಮ ಲಿಂಗಾಯತ ಧರ್ಮ ವೀರಶೈವ ಧರ್ಮ ಎಂದು ಹೇಳಿಕೊಳ್ಳುವವರು ಬೀದಿಗೆ ತಂದಿದ್ದಾರೆ. ಸರಕಾರದ ಅಲ್ಪಲಾಭಕ್ಕಾಗಿ ಕಚ್ಚಾಡುವ ಪರಿಸ್ಥಿತಿಯನ್ನು ತಂದುಕೊಂಡಿದ್ದಾರೆ. ನೀವು ವೀರಶೈವರು, ನೀವು ಲಿಂಗಾಯತರು, ನೀವು ಶರಣರು, ನೀವು ಬೌದ್ಧ, ಜೈನ, ಫಾರ್ಸಿ, ಮುಸಲ್ಮಾನರು ಎಂದು ಸರಕಾರ ಸರ್ಟಿಫಿಕೇಟ್ ಕೊಡಲು ಸಾಧ್ಯವೆ? ಹಾಗೆ ಕೊಡಮಾಡಿದ ಪ್ರಮಾಣ ಪತ್ರದಿಂದ ತಾನು ಮಹಾಮಾನವನಾಗಲು ಸಾಧ್ಯವೆ?

ಮನುಷ್ಯನಿಗೆ ಮಹಾಮಾನವನಾಗಿ ಬದುಕುವುದು ಗೌಣವಾಗಿದೆ. ಬದುಕುವುದೇ ಶ್ರೇಷ್ಠವಾಗಿದೆ. ಜ್ಞಾನ ಜೀವನ ಗೌಣವಾಗಿ ಉಪಜೀವನವೇ ಶ್ರೇಷ್ಠವಾಗಿದೆ. ಪಶು ಪಕ್ಷಿ ಪ್ರಾಣಿ ಉರುಗ. ಕೀಟ ಗಿಡ ಮರ ಬಳ್ಳಿ ಜಲಚರಗಳು ಸಹಜವಾಗಿ ಬದುಕುತ್ತವೆ. ಆದರೆ ಮನುಷ್ಯನ ಬದುಕು ಮಾತ್ರ ಅಸಹಜ! ಸಹಜವಾಗಿ ಬದುಕುವ ಮಾರ್ಗವನ್ನು ತೋರಿದ ಮಹಾಮಾನವರಾದ ಕ್ರಿಷ್ಣಕ್ರಿಸ್ತ ಪೈಗಂಬರರಿಗೆ, ಬುದ್ಧ ಮಹಾವೀರ ಬಸವಾದಿ ಶರಣರಿಗೆ, ದಾಸವರೇಣ್ಯರಿಗೆ ಮನುಷ್ಯ ಫ್ಯಾನ್ ಆಗಿದ್ದಾನೆ. ಅವರದೆ ಹೆಸರಿನ ಧರ್ಮ ಮಾಡಿಕೊಂಡು ಅಧರ್ಮಿಯಾಗಿದ್ದಾನೆ.

ತನುವಿನ ಅಜ್ಞಾನವನ್ನು ತನುವಿನ ಜ್ಞಾನದಿಂದಲೇ ಹೇಗೆ ಹೊರಹಾಕಿ ಜ್ಞಾನಿಯಾಗಬಹುದು ಎಂದು ಮಹಾಜ್ಞಾನಿ ಹಡಪದ ಅಪ್ಪಣ್ಣ ಶರಣರು ತಮ್ಮ ಎರಡುನೂರಾ ನಲವತ್ತೂರು ವಚನ ಸೂತ್ರಗಳನ್ನು ಓದುಗರಿಗಾಗಿ ನೀಡಿದ್ದಾರೆ. ಅವುಗಳನ್ನೇ ಎತ್ತಿಕೊಂಡು ನನ್ನ ಅನುಭವಕ್ಕೆ ತೋಚಿದಷ್ಟು ಅನುಭಾವ ಮಾಡಿದ್ದೇನೆ. ವಚನಗಳು ಸರಳವಾಗಿದ್ದರೂ ಜಟಿಲ. ಜಟಿಲವಾಗಿದ್ದರೂ ಜಟಿಲ. ಓದುಗನಿಗೆ ಅನುಭಾವಕ್ಕೆ ಹೋಗುವ ಬಯಕೆಯಾದಾಗ ಮಾತ್ರ ವಚನಗಳು ಸರಳವಾಗುತ್ತವೆ. ಯಾರ ವಚನಗಳಾದರೇನು ಅವು ಓದುಗನವೇ ಆಗುತ್ತವೆ.

ಶರಣು ಸಮರ್ಪಣೆ :

ಶರಣ ಶ್ರೀ ಡಾ|| ಶಿವರಾಜ ಪಾಟೀಲರು ಮಾನ್ಯ ಶಾಸಕರು ರಾಯಚೂರು ಕ್ಷೇತ್ರ ಅವರ ಮಾತಾ ಪಿತೃಗಳು ಶರಣ ದಂಪತಿಗಳೂ ಆದಂತಹ ಶರಣೆ ಶ್ರೀಮತಿ ಹಂಪಮ್ಮ ವೀರನಗೌಡ ಸಾನಬಾಳ, ಶರಣ ಶ್ರೀ ವೀರನಗೌಡ ಬಸನಗೌಡ ಸಾನಬಾಳ ಈ ಪುಸ್ತಕದ ಮುದ್ರಣ ಸೇವೆಯನ್ನು ಅತ್ಯಂತ ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡಿದ್ದಾರೆ. ಅವರಿಗೆ ಶರಣರು ಆಯುರಾರೋಗ್ಯವನ್ನು ಕರುಣಿಸಲಿ ಎಂದು ಶರಣ ದಂಪತಿಗಳಿಗೂ ಅವರ ಪುತ್ರ ಶರಣಶ್ರೀ ಡಾ|| ಶಿವರಾಜ ಪಾಟೀಲ ಅವರಿಗೂ ಶರಣು ಸಮರ್ಪಿಸುವೆ.

ಬಸವರಾಜ ಸ್ವಾಮಿ
ಸಂಪಾದಕ, ಸುದ್ದಿಮೂಲ ಪತ್ರಿಕೆ
ರಾಯಚೂರು

ಮುದ್ರಣ ಸೇವೆ

(ಸನ್ಮಾನ್ಯ ಶರಣ ಶ್ರೀ ಡಾ॥ಶಿವರಾಜ ಪಾಟೀಲ್, ಶಾಸಕರು
ರಾಯಚೂರು ವಿಧಾನಸಭಾ ಸದಸ್ಯರು, ಇವರ ಮಾತಾ ಪಿತೃಗಳು)

ಶರಣ ದಂಪತಿಗಳಾದ



ಶರಣೆ ಶ್ರೀಮತಿ ಹಂಪಮ್ಮ ವೀರನಗೌಡ ಸಾನಬಾಳ
ಶರಣ ಶ್ರೀ ವೀರನಗೌಡ ಬಸನಗೌಡ ಸಾನಬಾಳ
ಸಾನಬಾಳ, ತಾ॥ ಲಿಂಗಸೂಗೂರು,
ಜಿ॥ ರಾಯಚೂರು

1

ಅಂಗಕ್ಕೆ ಲಿಂಗಕ್ಕೆ ಪೊಂಗೆ ಪರಿಮಳದ ಶೃಂಗಾರದ ಹಾರ.
ಕಂಗಳ ಬೆಳಗಿನಲ್ಲಿ ಮಂಗಳದ ಮಹಾಬೆಳಗಿರುತಿರಲು,
ಇದ ಅಂಗವಿಸಿ ನೋಡಿ, ಎರಡರ ಸಂಗಸುಖವನೊಂದುಗೂಡಿ,
ತಾನೇ ಬೇರೆ ಲಿಂಗವಾಗಿ ನಿಂದು,
ಅಂಗವಳಿಯದೆ, ಬಿಂದು ತುಳುಕದೆ, ನಂದಿ ಮುಂದುಗೆಡದ ಮುನ್ನ,
ನಿಮ್ಮೊಳು ಒಂದಾದ ಲಿಂಗೈಕ್ಯವನರಿದು,
ಕಣ್ದೆರೆದು ಕರಗಿ ಆಲಿ ನೀರಾದಂತಾದೆನಯ್ಯಾ ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಅಂಗಕ್ಕೆ ಲಿಂಗಕ್ಕೆ ಪೊಂಗೆ ಪರಿಮಳದ ಶೃಂಗಾರದ ಹಾರ:

ಅಂಗ ಲಿಂಗ ಒಂದನ್ನು ಮತ್ತೊಂದು ಭೇದಿಸದಂತೆ ಸಮರಸವಾಗಿ ಬೆರೆತಿದೆ. ಅಂಗವೆಂದು ಹೇಳಲು ಹೋದರೆ ಅದು ಲಿಂಗ. ಲಿಂಗವೆಂದು ಹೇಳಲು ಹೋದರೆ ಅದು ಲಿಂಗಾಂಗ. ಅಂಗವೆಂದು ಹೇಳುವಂತಿಲ್ಲ; ಬರೀ ಲಿಂಗವೆಂದು ಹೇಳುವಂತಿಲ್ಲ.

ಅರಿವಿಲ್ಲದಿದ್ದರೆ ಅಂಗವೆನ್ನುವಂತಿಲ್ಲ; ಅದು ಶವ. ಶವವನ್ನು ಲಿಂಗವೆನ್ನುವಂತಿಲ್ಲ! ಅರಿವಿಲ್ಲದ ಅಂಗ ಅಂಗವೂ ಅಲ್ಲ; ಲಿಂಗವೂ ಅಲ್ಲ. ಅಂಗದಲ್ಲಿ ಅರಿವಿದೆ; ಅದೇ ಲಿಂಗ! ಲಿಂಗದಲ್ಲಿಯೇ ಅಂಗ ಮೇಳೈಸಿಕೊಂಡಿದೆ ಅದು ಲಿಂಗಾಂಗ! ಲಿಂಗ ಅಂಗ ಸಮರಸವಾಗಿ ಬೆರೆತು ಲಿಂಗಾಂಗವಾಗಿದೆ. ಈ ಅಂಗದಲ್ಲಿರುವ ಲಿಂಗವನ್ನು ಬೇರ್ಪಡಿಸಲು ಬರುವುದಿಲ್ಲ; ಹಿಡಿದು ಕಟ್ಟಲು ಬರುವುದಿಲ್ಲ!

ಅಂಗದಲ್ಲಿರುವ ಲಿಂಗದ ರಹಸ್ಯ ಮನದಿಂದ ತಿಳಿಯುವುದೇ ಲಿಂಗಾಂಗ ಸಾಮರಸ್ಯ. ಅಂಗ ಕಮಲದಂತೆ ಸುಂದರವಾಗಿ ಕಂಡರೆ; ಲಿಂಗ ಕಮಲದ ಪರಿಮಳದಂತೆ ಸುವಾಸನೆ ಬೀರುತ್ತದೆ. ದುಂಬಿ ಕಮಲದ ಸೌಂದರ್ಯ ನೋಡಿ ಬಂತೋ ಅಥವಾ ಅದರ ಪರಿಮಳ ಹೀರಲು ಬಂತೋ! ಬಹುದೂರ ಚಲಿಸುವ ದುಂಬಿಗೆ ಹೂವಿನ ಸೌಂದರ್ಯ ಕಾಣುವುದಿಲ್ಲ; ಹೂವಿನ ಪರಿಮಳ ದುಂಬಿಯನ್ನು ಕರೆದು ತಂದು ತನ್ನ ಪಕಳೆಗಳ ಸೌಂದರ್ಯದಲ್ಲಿ ಬಂಧಿಸುತ್ತದೆ.

ಮನವೆಂಬ ದುಂಬಿ ಅಂಗವೆಂಬ ಹೂವಿನ ಸೌಂದರ್ಯವನ್ನು ಲಿಂಗವೆಂಬ ಅರಿವಿನ ಪರಿಮಳವನ್ನು ಸವಿಯುತ್ತಾ ಸವಿಯುತ್ತಾ ಅಂಗಕ್ಕೆ ಲಿಂಗಕ್ಕೆ ಹೊನ್ನಿನ ಪರಿಮಳದ ಶೃಂಗಾರದ ಹಾರವಾಗಿ ಬಂಧಿಯಾಗುತ್ತದೆ. ತನುವಿನಲ್ಲಿ, ತನುವಿನ ಅರಿವಿನಲ್ಲಿ ಮನ ಕೂಡಿ ಕೂಡಲಸಂಗಮವಾಗುತ್ತದೆ!

ಕಂಗಳ ಬೆಳಗಿನಲ್ಲಿ ಮಂಗಳದ ಮಹಾಬೆಳಗಿರುತಿರಲು ಇದ ಅಂಗವಿಸಿ ನೋಡಿ, ಎರಡರ ಸುಖವನೊಂದುಗೂಡಿ, ತಾನೇ ಬೇರೆ ಲಿಂಗವಾಗಿ ನಿಂದು:

ಕಂಗಳ ಬೆಳಕಿನಲ್ಲಿರುವ ಮಂಗಳದ ಮಹಾಬೆಳಕಿನಲ್ಲಿ ಮನ ಬೆರೆತು ಆ ಬೆಳಕೆ ತಾನಾಗುತ್ತದೆ. ಆ ಬೆಳಕಿನೊಂದಿಗೆ ಅಂಗದಲ್ಲಿ ಹೊಕ್ಕು ನೋಡುತ್ತದೆ. ಅಂಗದ ಸುಖವನ್ನು

ಅನುಭವಿಸುತ್ತದೆ; ಹಾಗೆಯೇ ಲಿಂಗದ ಸುಖವನ್ನೂ ಅನುಭವಿಸುತ್ತದೆ. ಮನ ಅಂಗದ ಲಿಂಗದ ಸುಖವನ್ನು ಅನುಭವಿಸಿ; ಈ ಸಂಗ ಸುಖವನ್ನು ಒಂದುಗೂಡಿ; ತಾನೇ ಬೇರೆ ಲಿಂಗವಾಗಿ ನಿಲ್ಲುತ್ತದೆ!

ಅಂಗವಳಿಯದೆ, ಬಿಂದು ತುಳುಕದೆ, ನಂದಿ ಮುಂದುಗೆಡದ ಮುನ್ನ, ನಿಮ್ಮೊಳು ಒಂದಾದ ಲಿಂಗೈಕ್ಯವನರಿದು, ಕಣ್ದೆರೆದು ಕರಗಿ ಆಲಿ ನೀರಾದಂತಾದೆನಯ್ಯಾ, ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ:

ಅಂಗವೂ ಇದೆ ಅರಿ (ಲಿಂಗ) ವೂ ಇದೆ. ಅಂಗದ ಅರಿವಿನಲ್ಲಿ ಮನ ಬೆರೆಯದಿದ್ದರೆ ಅಂಗ ಅಂಗವೂ ಅಲ್ಲ ಲಿಂಗವೂ ಅಲ್ಲ; ಅದು ಬರೀ ನಂದಿ. ಅಂಗ ಲಿಂಗವಿದ್ದ ನಂದಿ! ಅಂಗ ಅಂಗದೊಂದಿಗೆ ಕೂಡಿ ಬಿಂದು ತುಳುಕಿಸುವ ನಂದಿ. ಲಿಂಗದ ಮುಂದೆ ನಂದಿಯಿದ್ದರೇನು? ಲಿಂಗಕ್ಕೆ ವಾಹನವಾದಾಗಲೇ ಶೋಭೆ! ಅಂತೆಯೇ ಅಂಗವಳಿಯದ ಮುನ್ನ, ಅಂಗದ ಬಿಂದು ಅಂಗಕ್ಕಾಗಿ ತುಳುಕದ ಮುನ್ನ, ಮನವೆಂಬ ನಂದಿ ಮುಂದುಗೆಡದ ಮುನ್ನ, ಅಂಗದ ಅರಿವಿನಲಿ ಒಂದಾಗಬೇಕು; ಮನ ಅಂಗದಲ್ಲಿ ಅಂಗದ ಲಿಂಗದಲ್ಲಿ ಐಕ್ಯನಾಗಬೇಕು. ಇದನ್ನು ಅರಿದರಿದು ಕಣ್ದೆರೆದು ಕರಗಿ ಆಲಿ ನೀರಾಗಬೇಕು.

ಜಲ ಬಿಂದುವಿನಿಂದಲೇ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು. ಆ ಬಿಂದುವಿನಿಂದಲೇ ಅಂಗ. ಆ ಬಿಂದುವಿನಿಂದಲೇ ಲಿಂಗ. ಆ ಬಿಂದುವಿನಿಂದಲೇ ನೋಡುವ ಕಂಗಳು, ಕೇಳುವ ಕಿವಿಗಳು, ವಾಸಿಸುವ ಮೂಗು, ರುಚಿಸುವ ನಾಲಿಗೆ, ಸ್ಪರ್ಶಿಸುವ ಚರ್ಮ ಸಕಲವೂ ಜಲಮಯ!

ಅಂಗವಳಿಯದ ಮುನ್ನ, ಬಿಂದು ತುಳಕದ ಮುನ್ನ ಮನವೆಂಬ ನಂದಿ ಮುಂದುಗೆಡದ ಮುನ್ನ ತಿಳಿಯಲೇಬೇಕು. ತಿಳಿದು ಲಿಂಗಾಂಗದಲ್ಲಿ ಒಂದಾಗಬೇಕು. ಕಣ್ದೆರೆದು ಕರಗಿ ನೀರಾಗ ಬೇಕು. ಆ ನೀರೂ ಕರಗಿ ಬಸವಪ್ರಿಯ ಅಪ್ಪಣ್ಣನಲ್ಲಿ ಕೂಡಿ ಮಹಾಜ್ಞಾನಿ ಚೆನ್ನಬಸವಣ್ಣನಂತೆ ಬಯಲಾಗಬೇಕು!

2

ಅಂಗ ಗುಣಂಗಳನೆಲ್ಲ ಅನಲಂಗಿಕ್ಕಿ,
ಲಿಂಗ ಗುಣವನೇ ಗಟ್ಟಿ ಮಾಡಿ,
ಕಂಗಳು ಲಿಂಗ ಕರಸ್ಥಲ,
ಜಂಗಮದ ಇಂಗಿತವನರಿದರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಅಂಗ ಗುಣಂಗಳನೆಲ್ಲ ಅನಲಂಗಿಕ್ಕಿ ಲಿಂಗ ಗುಣವನೇ ಗಟ್ಟಿ ಮಾಡಿ:

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೇ ಅಂಗ ಗುಣಗಳು. ಇವು ಮನದಿಂದ ಅಂಗದಲ್ಲಿ ಹುಟ್ಟಿ ಅಂಗವನ್ನೇ ಬಲಿ ತೆಗೆದುಕೊಳ್ಳುತ್ತವೆ. ಕಣ್ಣಿನಲ್ಲಿ ಮನ ಬೆರೆತು ಮತ್ತೊಂದು ಅಂಗವನ್ನು ನೋಡಿದಾಗ ಅಂಗದಲ್ಲಿ ರಸಾಯನಿಕ ಕ್ರಿಯೆ ಉಂಟಾಗುತ್ತದೆ. ಅಂಗ ರೂಪ ಉಳ್ಳದ್ದಾಗಿದ್ದರೆ ಕಾಮಿಸಿ ಭೋಗಿಸುವಂತೆ; ವೈರಿಯಾಗಿದ್ದರೆ ಕ್ರೋಧಗೊಂಡು ಕೊಲ್ಲು

ವಂತೆ ಪ್ರೇರೇಪಿಸುತ್ತದೆ. ಕ್ಷಣಾರ್ಧದಲ್ಲಿ ವಿಕೃತಗೊಂಡು ವಿಲವಿಲನೆ ಒದ್ದಾಡುತ್ತದೆ. ಕಾಮ ಕ್ರೋಧ, ನೋಡಿದ ಅಂಗದಲ್ಲಿಯೇ ಉಂಟಾಗುತ್ತದೆ. ನೋಟಕ್ಕೆ ಕಾರಣವಾದ ಅಂಗದಲ್ಲಿ ಯಾವ ಭಾವನೆಗಳೂ ಉಂಟಾಗುವುದಿಲ್ಲ. ಹೀಗೆ ನೋಟ ಮಾತ್ರಕ್ಕೆ ಉಂಟಾಗುವ ಅಂಗದ ದೋಷಗಳನ್ನು ಯಾವ ಗುರು ಕೂಡಾ ಪರಿಹರಿಸಲು ಸಾಧ್ಯವಾಗುವುದಿಲ್ಲ.

ನೋಟದಿಂದಾಗಿ ಅಂಗಕ್ಕೆ ಬಂದ ಅಂಗದ ಅವ ಗುಣಗಳನ್ನು ಅಂಗದಲ್ಲಿಯೇ ಸುಡಬೇಕು. ಜಪದಿಂದ, ತಪದಿಂದ, ಧ್ಯಾನದಿಂದ ಸುಡಲು ಸಾಧ್ಯವಾಗುವುದಿಲ್ಲ. ಅಂಗದಲ್ಲಿ ಅರಿವು ಎಂಬ ಲಿಂಗವಿದೆ. ಅದು ಅಂಗ ಗುಣಗಳನ್ನೆಲ್ಲ ಸುಡುವ ಅಗ್ನಿ. ಆ ಅರಿವೆಂಬ ಅಗ್ನಿಯನ್ನು ಗಟ್ಟಿ ಮಾಡಬೇಕು.

ಕಂಗಳು ಲಿಂಗ ಕರಸ್ಥಲ, ಜಂಗಮದ ಇಂಗಿತವನರಿದ, ಬಸವಪ್ರಿಯ
ಕೂಡಲಚೆನ್ನಬಸವಣ್ಣ:

ಕಣ್ಣುಗಳೆರಡು ಅರಿವಿನ ಲಿಂಗಗಳು. ಕಣ್ಣುಗಳು ಒಂದೇ ಅರಿವಲ್ಲ. ಕಿವಿ ಮೂಗು ನಾಲಿಗೆ ಚರ್ಮವನ್ನು ಹೊತ್ತ ಇಡೀ ಕರಸ್ಥಲವೆಂಬ ಅಂಗವೆಲ್ಲ ಲಿಂಗವೇ. ಅಂಗದ ಕಣಕಣದಲ್ಲಿ ಅರಿವೆಂಬ ಗುರುವೇ ಬೆರೆತಿದ್ದಾನೆ. ಈ ಛಲಗಾರ ಜಾಣ ಜಂಗಮನೂ ಹೌದು! ಈತನ ಇಂಗಿತವನ್ನು ಮನದಿಂದಲೇ ತಿಳಿಯಬೇಕು!

ಇದು ಬಲು ಜಟಿಲ. ಏಕೆಂದರೆ ಕಣ್ಣಿನಲ್ಲಿ ಮನ ಬೆರೆತು ರೂಪ ನೋಡಿ ಭೋಗಿಸುವ ಬಯಕೆ ಮಾಡಿದ್ದು ಮನ! ಅಂಗದಲ್ಲಿ ಅವಗುಣಗಳನ್ನು ಸೃಷ್ಟಿ ಮಾಡಿದ್ದು ಮನ! ಈ ಮನದಿಂದಲೇ ಅಂಗದಲ್ಲಿರುವ ಅರಿವೆಂಬ ಜಂಗಮನ ಇಂಗಿತವನ್ನು ಅರಿಯಬೇಕೆಂದರೆ ಅದು ಸುಲಭದ ಮಾತಲ್ಲ.

ಅರಿವಿನ ಅಂಗದಲ್ಲಿ ಹುಟ್ಟಿದ ಅಂಗದ ಗುಣಗಳನ್ನೆಲ್ಲ ಅಗ್ನಿಗೆ ಇಕ್ಕುವ ಸೂತ್ರವನ್ನು ಅಪ್ಪಣ್ಣ ಶರಣರು ಕೇವಲ ನಾಲ್ಕು ಸಾಲಿನ ವಚನದಲ್ಲಿ ಇಡೀ ಮನುಕುಲಕ್ಕೆ ಕರುಣಿಸಿದ್ದಾರೆ.

ಅಂಗದ ಗುಣ ಸುಗುಣವಾದರೇನು ದುರ್ಗುಣವಾದರೇನು ಇವೆರಡೂ ಅಂಗದ ಗುಣಗಳೇ. ಒಮ್ಮೆ ಸುಗುಣವಾಗುತ್ತದೆ. ಮತ್ತೊಮ್ಮೆ ಆ ಸುಗುಣವೇ ದುರ್ಗುಣವಾಗುತ್ತದೆ. ಉದಾಹರಣೆಗೆ ಹಸಿದ ಅಂಗಕ್ಕೆ ಅನ್ನ ಕೊಟ್ಟು ಅಲ್ಪ ಸ್ವಲ್ಪ ಕೆಲಸ ಕೊಟ್ಟು ಮನೆಯಲ್ಲಿಟ್ಟುಕೊಂಡಾಗ ತನ್ನ ಅಂಗದ ಗುಣ ಸುಗುಣವಾಯಿತು. ಅನ್ನದ ಹಸಿವು ಹಿಂಗಿದ ಅಂಗಕ್ಕೆ ವಿಷಯದ ಹಸಿವಾದಾಗ ತನ್ನಂಗವೇ ದುರ್ಗುಣವಾಯಿತು. ಅದಕ್ಕಾಗಿಯೇ ಅಪ್ಪಣ್ಣ ಶರಣರು ಅಂಗದ ಗುಣಗಳನ್ನೆಲ್ಲ ಅನಲಂಗಿಕ್ಕಬೇಕು ಎಂದಿದ್ದಾರೆ.

ಅಂಗದಲ್ಲಿರುವ ಅರಿವಿನ ಗುಣವನ್ನು ಗಟ್ಟಿ ಮಾಡಿದಾಗ ಅಂಗದ ಗುಣ ತಿಳಿಯುತ್ತದೆ. ಅಂಗದ ಗುಣಗಳನ್ನು ಅಗ್ನಿಗೆ ಹಾಕಲು ಬರುತ್ತದೆ.

ಅಂಗದ ಕಣ ಕಣದಲ್ಲಿ ಅರಿವೇ ತುಂಬಿರುವಾಗ ಕಣ್ಣುಗಳು ಕೂಡಾ ಅರಿವಿನ ಕಣ್ಣುಗಳೇ ಆಗಿವೆ. ಅರಿವಿನ ಕಣ್ಣುಗಳಿಗೆ ರೂಪ ಕಾಣುತ್ತದೆ. ರೂಪಕ್ಕೆ ಕಾರಣವಾದ ನಿರೂಪವೂ ಕಾಣುತ್ತದೆ. ರೂಪ ತನ್ನಂತೆಯೇ ಚರ್ಮದ ಕವಚವನ್ನು ಹೊದ್ದಿದೆ. ಅದರೊಳಗಡೆ ಮೂಳೆ ಮಾಂಸ ರಕ್ತ ಮಜ್ಜೆ ಮೇದಸ್ಸು ಬಂಧಿಯಾಗಿದೆ. ಹೀಗಿರುವ ರೂಪವೂ ಒಂದೇ; ನೋಡುವ ತನ್ನ ರೂಪವೂ ಒಂದೇ. ಕಣ್ಣಿನ ಅರಿವಿನ ಬೆಳಕು ರೂಪದ ಮೇಲೆ ಬಿದ್ದು ನಿರೂಪವಾಯಿತು. ಅಂಗದಲ್ಲಿದ್ದ ಜಂಗಮ ರೂಪದ ನಿರೂಪವನು ಅರಿತ. ರೂಪಕ್ಕೆ ಕಾರಣವಾದ ಜಲಬಿಂದುವನ್ನು ಅರಿತ. ಜಲ

ಬಿಂದುವೇ ತಾಯಿ ಗರ್ಭ ಪ್ರವೇಶಿಸಿ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಆದುದನ್ನು ಅರಿತ. ಚರ್ಮದ ಕವಚದಲ್ಲಿ ಬಂಧಿಯಾಗಿ ರೂಪವಾದುದನ್ನು ಅರಿತ. ಆ ರೂಪವೇ ಹಿಂದೆ ಜಲವಾಗಿದ್ದುದನು ಅರಿತ. ಕಾಣುವ ಆ ಜಲ ಹಿಂದೆ ಜಲಜನಕ ಮತ್ತು ಆಮ್ಲಜನಕ ವಾಗಿದ್ದುದನ್ನು ಅರಿತ. ಇವೆರಡೂ ಬಯಲಲ್ಲಿರುವುದನ್ನೂ ಅರಿತ.

ಆ ಬಯಲೇ ಜಲಜನಕವನ್ನು, ಆಮ್ಲಜನಕವನ್ನು ಬೆರಸಿ ಅದರಲ್ಲಿ ಬಂಧಿ ಯಾಗಿರುವುದನ್ನು ಅರಿತ. ಅರಿತು ಅರಿತು ನೋಡಿದ. ಆ ಅರಿವನ್ನೇ ಗಟ್ಟಿ ಮಾಡಿ ನೋಡಿದ. ನೋಡಿದ ನೋಟವೆಲ್ಲ ಬಯಲೇ; ನೋಡಿದ ರೂಪವೆಲ್ಲ ಬಯಲೇ! ಬಸವಣ್ಣನೂ ಬಯಲೇ; ಬಯಲ ಜ್ಞಾನಿ ಚೆನ್ನಬಸವಣ್ಣನೂ ಬಯಲೇ. ಬಸವ ಪ್ರಿಯ ಅಪ್ಪಣ್ಣ ಬಯಲ ಜ್ಞಾನಿ ಚೆನ್ನ ಬಸವಣ್ಣನಲ್ಲಿ ಕೂಡಿ ಬಯಲಲ್ಲಿ ಬಯಲಾದ. ಸಕಲರಿಗೂ ಈ ಬಯಲ ಜ್ಞಾನ ಉಣ್ಣಿಸಿ ಬಯಲಲ್ಲಿ ಬಯಲಾದ.

3

ಅಂಗದ ಮೇಲೆ ಲಿಂಗವಿದ್ದವರೆಲ್ಲ ಸರಿಗಾಣಬೇಕೆಂಬರು.
ಲಿಂಗಲಾಂಛನಧಾರಿಗಳೆಲ್ಲ ಶರಣಂಗೆ ಸರಿಯೆ?
ಶರಣರ ಸಂಗ ಎಂತಿಪ್ಪುದೆಂದರೆ,
ಪರಮಜ್ಞಾನವೆಂಬ ಉರಿಯನೆ ಉಟ್ಟು,
ಉರಿಯನೆ ತೊಟ್ಟು, ಉರಿಯನೆ ಉಂಡು,
ಉರಿಯನೆ ಹಾಸಿ, ಉರಿಯನೆ ಹೊದ್ದು,
ನಿರವಯಲಾದ ಶರಣಂಗೆ ನರರುಗಳ ಸರಿ ಎನ್ನಬಹುದೆ?
ಹರಿಗೆ ಕರಿ ಸರಿಯೇ? ಉರಗಗೆ ಒಳ್ಳೆ ಸರಿಯೆ?
ಮರುಗಕ್ಕೆ ಗರುಗ ಸರಿಯೇ? ಇಂತೀ ನಿರ್ವಯಲಾದ ಶರಣಂಗೆ
ಮರ್ತ್ಯದ ನರಗುರಿಗಳು ಸರಿ ಎಂದರೆ ನಾಯಕನರಕದಲ್ಲಿಕ್ಕುವ,
ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ.

ಅಂಗದ ಮೇಲೆ ಲಿಂಗವಿದ್ದವರೆಲ್ಲ ಸರಿಗಾಣಬೇಕೆಂಬರು. ಲಿಂಗ ಲಾಂಛನಧಾರಿಗಳೆಲ್ಲ ಶರ ಣಂಗೆ ಸರಿಯೆ:

ಅಂಗ ಅರಿವಿನ ಕುರುಹು. ಅಂಗದ ಕಣಕಣದಲ್ಲಿ ಅರಿವು ತುಂಬಿದೆ. 'ಬೊಟ್ಟಿಡಲೆಡೆ ತೆರೆ ಹಿಲ್ಲದ ಘನ' ಎಂದು ಅಲ್ಲಮಪ್ರಭು ಹೇಳುತ್ತಾರೆ. ಹೀಗಿದ್ದಾಗ ಅಂಗದ ಮೇಲೆ ಲಿಂಗ ಧರಿಸಿದವರೆಲ್ಲರನು ಶರಣರೆನ್ನಲು ಬರುವುದಿಲ್ಲ. ಲಿಂಗಧಾರಣೆ ಮಾಡಿಕೊಂಡವರು ಶರಣರಿಗೆ ಸರಿಸಾಟಿಯಾಗಲಾರರು.

'ಎರೆದರೆ ನೆನೆಯದು ಮರೆತರೆ ಬಾಡದು ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ' ಅಂಗಕ್ಕೆ ನೀರೆರೆದರೆ ಆನಂದವಾಗುತ್ತದೆ. ಮರೆತರೆ ಬಾಡುತ್ತದೆ. ಅಂಗದಲ್ಲಿ ಲಿಂಗವೆಂಬ ಅರಿವು ಸಮರ ಸವಾಗಿ ಬೆರೆತಿದೆ. ಹೀಗಿರುವಾಗ ಅಂಗ ಲಿಂಗವೋ? ಧರಿಸಿದ ಲಿಂಗ ಲಿಂಗವೋ?

'ಲಿಂಗ ಒಳಗೊ ಹೊರಗೊ, ಬಲ್ಲಡೆ ನೀವು ಹೇಳಿರೆ? ಲಿಂಗ ಎಡನೊ ಬಲನೊ,

ಬಲ್ಲಡೆ ನೀವು ಹೇಳಿರೆ? ಲಿಂಗ ಮುಂದೊ ಹಿಂದೊ, ಬಲ್ಲಡೆ ನೀವು ಹೇಳಿರೆ? ಲಿಂಗ ಸ್ಥೂಲವೋ ಸೂಕ್ಷ್ಮವೊ, ಬಲ್ಲಡೆ ನೀವು ಹೇಳಿರೆ? ಲಿಂಗಪ್ರಾಣವೊ ಪ್ರಾಣ ಲಿಂಗವೋ, ಬಲ್ಲಡೆ ನೀವು ಹೇಳಿರೆ ಗುಹೇಶ್ವರ ಲಿಂಗವನು' ತನುವಿನ ಒಳಹೊರಗೂ, ಎಡಬಲಕೂ, ಮುಂದು ಹಿಂದೆ, ಸ್ಥೂಲ ಸೂಕ್ಷ್ಮ ಪ್ರಾಣ ಎನ್ನಲು ಕೂಡಾ ಬರದಂತೆ ಜಗದಗಲ ಮುಗಿಲಗಲ ಮಿಗೆಯಗಲವಿದ್ದದ್ದು, ಪಾತಾಳದಿಂದತ್ತತ್ತಲೂ ಬ್ರಹ್ಮಾಂಡದಿಂದತತ್ತತ್ತಲೂ ಇದ್ದದ್ದು ತನುವೆಂಬ ಕರಸ್ಥಲಕ್ಕೆ ಬಂದು ಚುಳು ಕಾ(ಡಿಜಿಟಲ್)ಗಿರುವಾಗ; ಇಂತಹ ಲಿಂಗವನ್ನು ಕಣಕಣದಲ್ಲಿ ಧರಿಸಿದ ಶರಣರೆತ್ತ? ದೇಹದ ಮೇಲೆ ಲಿಂಗ ಲಾಂಛನ ಧರಿಸಿದವರೆತ್ತ? ಇಂಥವರನ್ನು ಶರಣರಿಗೆ ಹೋಲಿಸಬಹುದೇ? ಲಿಂಗ ಧರಿಸಿದವರನೆಲ್ಲ ಶರಣರೊಂದಿಗೆ ಸರಿಗಾಣಬಹುದೆ?

ಶರಣರ ಸಂಗ ಎಂತಿಪ್ಪುದೆಂದರೆ:

ಶರಣರು ತನುವಿನ ಕಣ ಕಣದಲ್ಲಿರುವ ಪರಮಜ್ಞಾನವೆಂಬ ಉರಿಯನು ಉಂಡವರು. ಆ ಉರಿಯನೆ ಹಾಸಿ ಆ ಉರಿಯೆಂಬ ಜ್ಞಾನವನೇ ಹೊದ್ದು ನಿರವಯಲಾದವರು. ಅಂತಹ ಶರಣರಿಗೆ ನರರುಗಳನ್ನು ಸರಿಗಟ್ಟಬಹುದೆ? ಬಿಳಿಗೆ ಕರಿ ಸರಿ ಹೊಂದುವುದೆ? ನಾಗಕ್ಕೆ ನೀರ ಹಾವು ಸರಿ ಎನ್ನಬಹುದೆ? ಮರುಗಕ್ಕೆ ಗರುಗ ಸರಿ ಎನ್ನಬಹುದೆ?

ಇಂತೀ ನಿರ್ವಯಲಾದ ಶರಣಂಗೆ ಮರ್ತ್ಯದ ನರಗುರಿಗಳು ಸರಿ ಎಂದರೆ ನಾಯಕ ನರಕದಲ್ಲಿಕ್ಕುವ, ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ:

ಶರಣ ತನ್ನಂತೆ ಎಲ್ಲರನ್ನೂ ನೋಡುತ್ತಾನೆ. ಆತ ರೂಪದಲ್ಲಿರುವ ನಿರೂಪ ತಿಳಿದಾತ. ಶಬ್ದದಲ್ಲಿರುವ ನಿಃಶಬ್ದ ತಿಳಿದಾತ. ವಾಸನೆಯಲ್ಲಿರುವ ಸುವಾಸನೆಯನ್ನು ತಿಳಿದಾತ. ರುಚಿಯ ಲ್ಲಿರುವ ಪ್ರಸಾದವನ್ನು ತಿಳಿದಾತ. ಸ್ಪರ್ಶದಲ್ಲಿರುವ ಸುಖವನ್ನು ತಿಳಿದಾತ. ಶಬ್ದ ರೂಪ ರಸ ಗಂಧ ಸ್ಪರ್ಶದಲ್ಲಿರುವ ಮೂಲ ಜ್ಞಾನವನ್ನು ತಿಳಿದು ಮಹಾಜ್ಞಾನಿಯಾಗಿ ನಿರ್ವಯಲಾದಾತ.

ಶರಣನಂತೆಯೇ ಇರುವ ಸಾಮಾನ್ಯ, ಶರಣನಂತೆಯೇ ವಿಭೂತಿ ಬಳಿದು, ಲಿಂಗ ಧರಿಸಿದವನನ್ನು ಶರಣನಿಗೆ ಸಮ ಎನ್ನಲು ಬರುವುದಿಲ್ಲ. ಶರಣ ಧರಿಸಿದ ವಿಭೂತಿಯೇ ಬೇರೆ; ಸಾಮಾನ್ಯರು ಧರಿಸಿದ ವಿಭೂತಿಯೇ ಬೇರೆ.

ತುವಿನಲ್ಲಿರುವ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ತನುವಿಗೆ ನಿರಂತರವಾಗಿ ಕಾಡುವ ಶಬ್ದ ಸ್ಪರ್ಶ ರೂಪು ರಸ ಗಂಧಾದಿಗಳೆಂಬ ಸಗಣಿಯನ್ನು ಸುಟ್ಟು ಶರಣ ವಿಭೂತಿಯನ್ನು ಧರಿಸಿದ್ದಾನೆ. ಸಾಮಾನ್ಯ ತನು ಸೆಗಣಿ ಸುಟ್ಟು ವಿಭೂತಿ ಧರಿಸುತ್ತಾನೆ. ತೋರಿಕೆಗೆ ಸಾಮಾನ್ಯ ಶರಣನಂತಿದ್ದರೂ ಶರಣನಿಗೆ ತಾನು ಸರಿ ಎನ್ನಲು ಬರುವುದಿಲ್ಲ. ಶರ ಣನ ಸಂಗ ಮಾಡಿ ಶರಣನಾಗಲು ಬರುತ್ತದೆ. ಶರಣನ ವೇಷ ಧರಿಸಿ ತಾನು ಕೂಡಾ ಶರಣನೆ ನ್ನಲು ಬರುವುದಿಲ್ಲ. ಶರಣನೆಂದರೆ ಮಹಾಜ್ಞಾನಿ. ಓದಿ ಜ್ಞಾನಿಯಾದವನಲ್ಲ. ತನ್ನ ತನುವಿನಲ್ಲಿ ರುವ ಮಹಾಜ್ಞಾನವನ್ನು ತನ್ನ ತನುವಿನ ಮನದಿಂದಲೇ ತಿಳಿದು ಶರಣು ಹೋದವನು. ಜ್ಞಾನಕ್ಕೆ ಶರಣು ಹೋಗಿ ಶರಣನಾದವನು.

ತನುವಿನಲ್ಲಿರುವ ಇಂತಹ ಮಹಾಜ್ಞಾನವನ್ನು ತಿಳಿಯದೆ ಶರಣನೆಂದು ಹೆಸರಿಟ್ಟು ಕೊಳ್ಳುವುದು ತಪ್ಪು. ನಾನು ಆತ ಸರಿ ಸಮ ಎಂದು ನುಡಿದು ಹೇಳಿದರೆ; ಆ ನುಡಿಯ ಮರೆ ಯಲ್ಲಿದ್ದ ತನುವಿನ ಮಹಾಜ್ಞಾನ ತನುವನ್ನು ನಾಯಕ ನರಕದಲ್ಲಿಕ್ಕುವುದು. ನುಡಿದ ನುಡಿ ಯನ್ನು ನುಡಿಯಿಂದಲೇ ಚುಚ್ಚಿ ಚುಚ್ಚಿ ಕೊಲ್ಲುವುದು.

ಅಪ್ಪಣ್ಣ ಶರಣರು ಬಸವಣ್ಣನಿಗೆ ಪ್ರಿಯವಾದವರು. ಬಸವಣ್ಣನ ಸಂಗವನ್ನು ಚೆನ್ನಬಸವಣ್ಣನ ಸಂಗವನ್ನು ಮಾಡಿ ಅವರಿಬ್ಬರ ಮಹಾಜ್ಞಾನದಲ್ಲಿ ಕೂಡಿದವರು. ಆ ಮಹಾಜ್ಞಾನವೇ ತಾವಾದವರು.

4

ಅಂಗದ ಲಯ ಲಿಂಗದೊಳಗೆ, ಲಿಂಗದ ಲಯ ಅಂಗದೊಳಗೆ.
ಇವೆರಡರ ಸಂಗ ಸುಖ ಜಂಗಮದೊಳಗೆ ಏಕವಾಯಿತ್ತು.
ಅಂದೆ ಪ್ರಸಾದದಿಂದ ರೂಪಾಯಿತ್ತು.
ಮುಂದೆ ಪ್ರಸಾದದಲ್ಲಿ ಪರಿಪೂರ್ಣವಾಯಿತ್ತು.
ಇದರಂದವ ಬಲ್ಲ ಶರಣರೆ ಎನ್ನ ತಂದೆಗಳಾಗಿಪ್ಪರು ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಜ್ಞಾನ ಮನುಷ್ಯನಿಗೆ ಮಾತ್ರ ತಿಳಿಯಲು ಬರುತ್ತದೆ. ತನ್ನ ಜ್ಞಾನ ತಾನು ತಿಳಿಯದ ಮನುಷ್ಯನನ್ನು ಮನುಷ್ಯನೆನ್ನಲು ಬರುವುದಿಲ್ಲ. ಅವನು ನಿಯಂತ್ರಣದಲ್ಲಿದ್ದವನು. ನಿಯಂತ್ರಣದಲ್ಲಿದ್ದ ಮನುಷ್ಯನ ಅಜ್ಞಾನದ ಕಟ್ಟೆ ಎಂದಾದರೂ ಒಡೆಯಬಹುದು. ಮನಕ್ಕೆ ಸುಖವೆನಿಸಿದಾಗ, ಅದಕ್ಕೆ ಅನುಕೂಲ ಒದಗಿ ಬಂದಾಗ, ತನ್ನ ಸುಖಕ್ಕಾಗಿ ರಕ್ಕಸ ರೂಪ ತಾಳುತ್ತದೆ. ವಿಕೃತ ಕಾಮಿಯಾಗಿ ಪೈಶಾಚಿಕ ಸುಖ ಅನುಭವಿಸುತ್ತದೆ. ಉದಾ:

ಡಿ.16, 2012 ರ ಮಧ್ಯರಾತ್ರಿ ದೆಹಲಿಯಲ್ಲಿ ಆರು ಜನ ಸೇರಿ ಸಾರ್ವಜನಿಕ ಬಸ್ಸೊಂದರಲ್ಲಿ ಯುವತಿಯೊಂದಿಗೆ ಪೈಶಾಚಿಕ ಸುಖ ಅನುಭವಿಸಿದರು. ಕಬ್ಬಿಣದ ಸರಳುಗಳಿಂದ ಲಿಂಗಾಂಗ ಘಾಸಿಗೊಳಿಸಿದರು. ದೇಶದ ಮಾಧ್ಯಮಗಳಲ್ಲೆಲ್ಲ ಪ್ರಸಾರಗೊಂಡು ಇಡೀ ಪ್ರಪಂಚದ ಜನರೆಲ್ಲ ಮರುಕ ವ್ಯಕ್ತಪಡಿಸಿದರು. ಆರೂ ಜನರನ್ನು ಗಲ್ಲಿಗೆ ಹಾಕಲು ಒಕ್ಕೊರಲಿನಿಂದ ಜಗದಜನ ಕೂಗಿದರು. ಇಂತಹ ಘಟನೆಗಳು ಪ್ರಪಂಚದಲ್ಲಿ ಪ್ರತಿದಿನ ಸಾವಿರಾರು ನಡೆಯುತ್ತವೆ. ಮಾಧ್ಯಮಗಳಿಗೆ ಗೊತ್ತಾಗುವುದಿಲ್ಲ.

ತಂದೆ ಮಗಳೊಂದಿಗೆ, ತಾಯಿ ಮಗನೊಂದಿಗೆ, ಅಣ್ಣ ತಂಗಿಯೊಂದಿಗೆ, ಗುರು ಶಿಷ್ಯಳೊಂದಿಗೆ, ಮಾವ ಸೊಸೆಯೊಂದಿಗೆ ಹೀಗೆ ಸಮಾಜಬಾಹಿರ ವಿಕೃತಕಾಮ ಪ್ರತಿದಿನ ಪ್ರತಿಕ್ಷಣ ಅಲ್ಲಲ್ಲಿ ನಡೆಯುತ್ತಲೆ ಇರುತ್ತದೆ.

ದೈಹಿಕವಾಗಿ ನಿಯಂತ್ರಣ ತಪ್ಪಿ ಪೈಶಾಚಿಕ ಸುಖ ಅನುಭವಿಸಿದವರು ಸಮಾಜದಿಂದ ಸರಕಾರದಿಂದ ಶಿಕ್ಷೆ ಅನುಭವಿಸುತ್ತಾರೆ. ಏಕೆಂದರೆ ಇದು ಸರ್ವರಿಗೂ ಗೊತ್ತಾಗುತ್ತದೆ. ಗೊತ್ತಾಗದವರು ಮನದಲ್ಲಿಯೇ ಪೈಶಾಚಿಕ ಸುಖ ಅನುಭವಿಸುತ್ತಿರುತ್ತಾರೆ. ಇದು ಇತರರಿಗೆ ಗೊತ್ತಾಗುವುದಿಲ್ಲ. ತನಗೆ ತನ್ನ ಅರಿವಿಗೆ ಗೊತ್ತಾಗದೆ ಇರುವುದಿಲ್ಲ. ತನು ಇರುವವರೆಗೆ ಅರಿವು ಮನಕ್ಕೆ ನಿರಂತರ ಶಿಕ್ಷೆ ಕೊಡುತ್ತದೆ. ಏಕೆಂದರೆ ಅರಿವು ಮನದ ಸುಖದಲ್ಲಿ ಭಾಗಿಯಲ್ಲ!

ದೆಹಲಿಯಲ್ಲಿ ನಡೆದ ಘಟನೆಯ ಹಿಂದಿನ ದಿನ ಆರೂ ಜನರ ಮನ ದೈಹಿಕ ಸುಖದಲ್ಲಿ ಭಾಗಿಯಾಗಿರಲಿಲ್ಲ. ಮನ ತನುವಿನಲ್ಲಿಯೇ ಹಾದರ ಮಾಡಿ ಸುಖಿಸಿ ಆನಂದ ಪಡುತ್ತಿತ್ತು. ಯಾರಿಗೂ ಗೊತ್ತಾಗಿರಲಿಲ್ಲ. ನಿಯಂತ್ರಣದಲ್ಲಿತ್ತು. ಅವಕಾಶ ಒದಗಿ ಬಂದಾಗ ನಿಯಂತ್ರಣದ

ಕಟ್ಟೆ ಒಡೆದು ಮನ ದೈಹಿಕವಾಗಿ ಪೈಶಾಚಿಕ ಸುಖವನ್ನು ಅನುಭವಿಸಿತು. ಅರಿವಿನ ಮಾತು ಮನಕ್ಕೆ ಮನವರಿಕೆಯಾಗಲಿಲ್ಲ. ಅರಿವು ಗೌಣವಾಗಿ ಮನ ಮುಂದಾಯಿತು. ಮನದ ಸುಖ ಕ್ಷಣಾರ್ಧದಲ್ಲಿ ಮುಗಿದ ಮೇಲೆ ಮತ್ತೆ ತನುವಿನಲ್ಲಿ ಅರಿವು ಪ್ರಧಾನವಾಯಿತು. ಮನದ ಕೃತ್ಯಕ್ಕೆ ಮನವೇ ಮರುಗಿ ನಾಚಿ-ನೀರಾಯಿತು. ಆದರೆ ಘಟನೆ ನಡೆದು ಹೋಗಿದೆ. ಮನ ಮಾಡಿದ್ದು ಘೋರ ಅಪರಾಧ. ಈ ಅಪರಾಧ ಮಾಡಲು ಮನ ತನುವನ್ನು ಆಯುಧವನ್ನಾಗಿ ಬಳಕೆ ಮಾಡಿಕೊಂಡಿತು. ಹಾಗೆಯೇ ವಿಕೃತ ಸುಖ ಪಡಲು ಮನ ತನುವನ್ನು ಉಪಕರಣವನ್ನಾಗಿ ಮಾಡಿಕೊಂಡಿತು.

ಆರು ಯುವಕರ ಮನ ಆರು ತನುಗಳನ್ನೇ ಉಪಕರಣಗಳನ್ನಾಗಿ ಮಾಡಿಕೊಂಡು ಯುವತಿಯ ತನುವನ್ನು ಸುಖಿಸಿತು. ಸಮಾಧಾನವಾಗಲಿಲ್ಲ; ಸರಳುಗಳಿಂದ ಚುಚ್ಚಿ-ಚುಚ್ಚಿ ದೇವಾಂಗಕ್ಕೆ ಘಾಸಿಗೊಳಿಸಿ ವಿಕೃತ ಸುಖ ಅನುಭವಿಸಿತು. ಮನಕ್ಕೆ ತನು ಹಾಗೂ ಸರಳುಗಳು ಉಪಕರಣಗಳಾದವು. ಮನದ ಪೈಶಾಚಿಕ ಕೃತ್ಯ ನಿಲ್ಲಲಿಲ್ಲ. ಯುವತಿಯ ತನುವನ್ನು ಬೀದಿಗೆಸೆದು ಸಾಯಿಸಲು ಪ್ರಯತ್ನಿಸಿತು. ಸತ್ತಿತೆಂದು ನಿರಾಳವಾಯಿತು. ಆಗ ಅರಿವಿನ ಮಾತು ಮನಕ್ಕೆ ಕೇಳ ಹತ್ತಿದವು. ಮನ ಅಪರಾಧಿ ಭಾವದಿಂದ ನಾಚಿ ನೀರಾಯಿತು.

ತನು ಅರಿವಿನ ಸಂಪತ್ತು. ಅರಿವಿನ ಉಪಕರಣವಾಗಬೇಕಿತ್ತು! ಆದರೆ ಮನ ತನುವನ್ನು ತನ್ನ ಸುಖಕ್ಕಾಗಿ ವಿಕೃತ ಕಾಮಕ್ಕಾಗಿ ಉಪಕರಣದಂತೆ ದುರ್ಬಳಕೆ ಮಾಡಿಕೊಂಡಿತು. ಮನದ ಹೇಯ ಕೃತ್ಯಕ್ಕಾಗಿ ಯುವತಿಯ ತನು ಬಲಿಯಾಯಿತು. ಯುವಕರ ತನುಗಳೂ ಬಲಿಯಾದವು. ಮನಕ್ಕೆ ಶಿಕ್ಷೆಯಾಗಲಿಲ್ಲ; ಮನ ಬಳಕೆ ಮಾಡಿದ ತನುಗಳಿಗೆ ಶಿಕ್ಷೆಯಾಯಿತು. ಮನ ಬಳಕೆ ಮಾಡಿದ ಸರಳುಗಳಿಗೆ ಶಿಕ್ಷೆಯಿಲ್ಲ; ಮನ ಬಳಕೆ ಮಾಡಿದ ತನುಗಳಿಗೆ ಶಿಕ್ಷೆ.

ಮನ ತನುವನ್ನು ಕೊಂದು ಹಾಕಲು ಆಯುಧವನ್ನು ತನುವನ್ನು ಉಪಕರಣವನ್ನಾಗಿ ಬಳಕೆ ಮಾಡುತ್ತದೆ. ಜನ, ನ್ಯಾಯಾಲಯ ಆಯುಧಕ್ಕೆ ಶಿಕ್ಷೆ ಕೊಡುವುದಿಲ್ಲ; ಹಾಗೆಯೇ ಮನಕ್ಕೂ ಶಿಕ್ಷೆ ಕೊಡುವುದಿಲ್ಲ. ಮನ ಉಪಕರಣದಂತೆ ಬಳಕೆ ಮಾಡಿದ ತನುವಿಗೆ ಶಿಕ್ಷೆ ಕೊಡುತ್ತಾರೆ. ಏಕೆಂದರೆ ನಿಜವಾದ ಅಪರಾಧಿಗಳು ಯಾರೆಂದು ಜನಕ್ಕೆ ನ್ಯಾಯಾಲಯಕ್ಕೆ ತಿಳಿಯುವುದಿಲ್ಲ. ಜ್ಞಾನಿಗಳಿಗೆ ಮಾತ್ರ ತಿಳಿಯುತ್ತದೆ. ಜ್ಞಾನಿಗಳು ತನುವನ್ನು ಮನದ ಉಪಕರಣವೆಂದು ತಮ್ಮ ಜ್ಞಾನದಿಂದ ತಿಳಿದು ಮನಕ್ಕೆ ಶಿಕ್ಷೆ ಕೊಡುತ್ತಾರೆ. ಅಂದಿನಿಂದ ಮನ ಸತ್ತು ತನು ಜ್ಞಾನದ ಉಪಕರಣವಾಗುತ್ತದೆ!

ಸಿದ್ಧಾರ್ಥ ರಾಜನಾಗಿಯೇ ಉಳಿದಿದ್ದರೆ, ಸಾವಿರ ಜನರನ್ನು ಕೊಂದ ಅಂಗುಲಿಮಾಲನನ್ನು ಸಾವಿರ ಬಾರಿ ಗಲ್ಲಿಗೆ ಹಾಕುತ್ತಿದ್ದ. ಆದರೆ ಸಿದ್ಧಾರ್ಥನೆಂಬ ಮನ ಸತ್ತು ಬುದ್ಧ ಮಾತ್ರ ಉಳಿದಿದ್ದ. ತನು ಅರಿವೆಂಬ ಬುದ್ಧನಿಗೆ ಬಳಕೆಯಾಯಿತು. ಆ ಬುದ್ಧನಿಗೆ ಅಂಗುಲಿಮಾಲನೆಂಬ ಮನ ದೊರೆತ. ಅಂಗುಲಿಮಾಲನೊಂದಿಗೆ ಬುದ್ಧ ಅರಿವಿನ ಯುದ್ಧ ಮಾಡಿ ಕೊಂದು ಹಾಕಿದ. ಅಂಗುಲಿಮಾಲ ಸತ್ತು ಬುದ್ಧ ಮಾತ್ರ ಉಳಿದ. ಬುದ್ಧ ಬುದ್ಧನೊಂದಿಗೆ ಸಂಚರಿಸುತ್ತ ಅರಿವಿನ ಸುಖವನ್ನು ಜಗದ ತನುವಿನ ಮನಕ್ಕೆ ಪರಿಚಯಿಸಿದರು.

ಹಾಗೆಯೇ ಅಪ್ಪಣ್ಣ ಶರಣರು ಅರಿವಿನ ಸುಖ ಉಂಡು ಆ ಸುಖವನ್ನು ತಮ್ಮ ಐದು ಸಾಲಿನ ವಚನದಲ್ಲಿ ಸೂತ್ರ ರೂಪವಾಗಿ ವಿವರಿಸಿದ್ದಾರೆ.

ಅಂಗದ ಅವಗುಣವೆಂಬ ಮನ, ಅಂಗದ ಅರಿವೆಂಬ ಲಿಂಗದೊಳಗೆ ಲಯವಾಗಬೇಕು.

ಆ ಅರಿವೆಂಬ ಲಿಂಗವು ಅಂಗದೊಳಗೆ ಲಯವಾಗಿ ಅಂಗದ ಕಣ ಕಣಗಳಲ್ಲಿಯೂ ಅರಿವೇ ತುಂಬಬೇಕು. ಅಂಗ ಮತ್ತು ಅರಿವು ಒಂದರೊಳಗೆ ಮತ್ತೊಂದು ಕೂಡಿ; ಕೂಡಿದ ಈ ಕೂಟದ ಸಂಗದ ಸುಖವು ಜಂಗಮದೊಳಗೆ ಏಕವಾಗಬೇಕು. ಅಂದರೆ ತನಗೆ ಅರಿವಾಗಬೇಕು. ಅಂದೇ ತನು ಅರಿವಿನ ಪ್ರಸಾದದಿಂದ ಥಳ ಥಳನೆ ಹೊಳೆಯುವ ರೂಪವಾಗುತ್ತದೆ.

ಮುಂದೆ ಪ್ರಸಾದದಲ್ಲಿ ಪರಿಪೂರ್ಣವಾಯಿತ್ತು:

ನೋಡುವ ತನುಗಳೆಲ್ಲ ಕಣ್ಣಿನ ಅರಿವಿನಲ್ಲಿ ಪ್ರಸಾದವಾಗಿ ತನುವಿಗೆ ಆನಂದವನ್ನುಂಟು ಮಾಡುತ್ತದೆ. ಕಣ್ಣು ತನುಗಳನ್ನು ಅರಿವಿನಿಂದ ನೋಡುತ್ತದೆ. ನೋಡುವ ತನುಗಳೆಲ್ಲ ಚರ್ಮದ ಕವಚ ಹೊಂದಿವೆ. ಅದರೊಳಗೆ ಮೂಳೆ ಮಾಂಸ ರಕ್ತ ಮಜ್ಜೆ ಮೇದಸ್ಸುಗಳು ಬಂಧಿಯಾಗಿವೆ. ಅರಿವೂ ಇದೆ. ಅರಿವು ಅರಿವಿನಲ್ಲಿ ಸಂಗಮವಾಗಿ ತನು ಪರಿಪೂರ್ಣ ಅರಿವಿನ ಪ್ರಸಾದವಾಯಿತು. ಮನ ತನುವಿನ ಅರಿವಿನಲ್ಲಿ ಸಂಪೂರ್ಣ ಲಯವಾಯಿತು.

ಹಾಗೆಯೇ ಕಿವಿಗೆ ಶಬ್ದ ಬಡಿದು; ಶಬ್ದ ಅರಿವಿನಿಂದ ಕಿವಿಯಲ್ಲಿ ಅನಾವರಣಗೊಂಡು ಕು-ಶಬ್ದ, ಸು-ಶಬ್ದಗಳೆರಡೂ ತನುವಿಗೆ ಪರಿಪೂರ್ಣ ಪ್ರಸಾದವಾಯಿತು. ಚರ್ಮ, ವಾಸನೆ, ರುಚಿಗಳು ತನುವಿನ ಅರಿವಿಗೆ ಅರಿವಾಗಿ ತನುವಿನಲ್ಲಿಯೇ ಪ್ರಸಾದವಾಗಿ ತನು ಪರಿಪೂರ್ಣ ಅರಿವಿನ ತನುವಾಯಿತು.

ನೋಡಿದ ನೋಟ ಕಣ್ಣಿನಲ್ಲಿ, ಕೇಳಿದ ಶಬ್ದ ಕಿವಿಯಲ್ಲಿ, ವಾಸಿಸಿದ ವಾಸನೆ ಮೂಗಿನಲ್ಲಿ, ಸ್ಪರ್ಶಿಸಿದ ಚರ್ಮ ಚರ್ಮದಲ್ಲಿ, ರುಚಿಸಿದ ರುಚಿ ನಾಲಗೆಯಲ್ಲಿ ಲಯವಾಗಿ ತನುವಿಗೆ ಪ್ರಸಾದವಾಯಿತು. ಮನ ಅರಿವಿನಲ್ಲಿ ಲಯವಾಗಿ ಅರಿವೆ ಆಗಿದ್ದರಿಂದ ತನು ವಿಕೃತಗೊಳ್ಳಲಿಲ್ಲ, ಅರಿವಿನ ತನು, ಬುದ್ಧ ಬಸವಾದಿ ಶರಣರ ತನು, ಕ್ರಿಸ್ತ, ಕ್ರಿಷ್ಣರ ತನು, ದಾಸವರೇಣ್ಯರ ತನು, ಸಂತ ಪೈಗಂಬರರ ತನು, ಮಹಾವೀರರ ತನುವೆಂದು ಮಾನ್ಯತೆ ಪಡೆಯಿತು.

ಇದರಂದವ ಬಲ್ಲ ಶರಣರೆ ಎನ್ನ ತಂದೆಗಳಾಗಿಪ್ಪರು ಕಾಣಾ, ಬಸವಪ್ರಿಯ ಕೂಡಲ ಚೆನ್ನಬಸವಣ್ಣ:

ಅಪ್ಪಣ್ಣ ಶರಣರು ಮಹಾಜ್ಞಾನಿಗಳು. ತನುವಿಗೆ ಜನ್ಮ ನೀಡಿದ್ದು ಅರಿವು; ತನುವಿನಲ್ಲಿ ಮನಕ್ಕೆ ಗೊತ್ತಾಗದಂತೆ ಬಂಧಿಯಾದದ್ದು ಅರಿವು. ಮನಕ್ಕೆ ಜನ್ಮ ನೀಡಿದ್ದೂ ಅರಿವೇ. ಮನಕ್ಕೆ ಗೊತ್ತಾಗದ ನಿಮಿತ್ತ ಜನ್ಮ ಕೊಟ್ಟ ಅರಿವನ್ನು ಬಿಟ್ಟು ಜನ್ಮ ಕೊಟ್ಟ ತನುಗಳನ್ನು ಆರಾದಿಸುತ್ತದೆ; ಹಾಗೆಯೇ ಸಂಕಟಕ್ಕೂ ಒಡ್ಡುತ್ತದೆ.

ಅರಿವಿನ ಕಣ ಜಲಬಿಂದುವಾಗಿ ತನುವಿನ ಗರ್ಭದಿಂದ, ತನುವಿನ ಗರ್ಭಕ್ಕೆ ಪ್ರವೇಶ ಮಾಡಿತು. ಆ ಅರಿವಿನ ಕಣವೇ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಚರ್ಮವಾಗಿ ಮಾರ್ಪಡು ಹೊಂದಿ ತನುವಾಗಿ ಗರ್ಭದಿಂದ ಹೊರಬಂದಿತು. ಅರಿವಿನ ತನುವಾಗಿ ಗೋಚರಿಸಿತು.

ತನುವಿನ ಗರ್ಭ ಅರಿವಿನ ತನುವಿನ ರಕ್ಷಣೆಗೆ ಫ್ರೀಜ್‌ನಂತೆ ಕೆಲಸ ಮಾಡಿತೆ ಹೊರತು ತಂದೆ ತಾಯಿಯೆಂದು ಅಲ್ಲ. ತನುವಿನ ಅರಿವು ಮರೆಯಾಗಿ, ತನುವಿನ ಮನ ತನುವಿನೊಂದಿಗೆ ಬೆರೆತದ್ದು ಮನದ ಸುಖಕ್ಕಾಗಿಯೇ ಹೊರತು ಅರಿವಿನ ತನುವನ್ನು ಪಡೆಯಲು ಅಲ್ಲ. ಅಂದ ಮೇಲೆ ಮನ ಅರಿವಿನ ತನುವಿಗೆ ತಂದೆ ತಾಯಿಯಾಗಲು ಸಾಧ್ಯವಿಲ್ಲ. ಮನ ಕೂಡಾ ಒಮ್ಮೆ ತಂದೆ ತಾಯಿಯಾಗಿ ಭಾವಿಸುತ್ತದೆ; ಭಾವ ಕೆರಳಿದಾಗ ತಂದೆ ತಾಯಿ ಎಂದವರನ್ನೇ ಕೊಲ್ಲುತ್ತ

ದೆ; ಇಲ್ಲ ವಿಕೃತ ಕಾಮಿಯಾಗಿ ತಂದೆ ತಾಯಿಗಳನ್ನೇ ಭೋಗಿಸುತ್ತದೆ. ಅರಿವಿನ ತನುವನ್ನು ಅಪರಾಧಿಯನ್ನಾಗಿ ನಿಲ್ಲಿಸುತ್ತದೆ.

ಅಪ್ಪಣ್ಣ ಶರಣರು, ಇದರಂದವಬಲ್ಲ ಶರಣರೆ ಎನ್ನ ತಂದೆಗಳಾಗಿಪ್ಪರು ಎಂದರು. ಹಾಗೆಯೇ ಬಸವಣ್ಣನವರು ತನುವಿನ ಅರಿವಿಗೆ ಶರಣು ಹೋಗಿ ಆ ಅರಿವಿಗೆ: ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು. ನೀನಲ್ಲದೆ ಮತ್ತಾರೂ ಇಲ್ಲವಯ್ಯಾ. ಹಾಲ ಲ್ಲಾದರೂ ಅದ್ದು ನೀರಲ್ಲಾದರೂ ಅದ್ದು ನಿಮ್ಮ ಧರ್ಮ ಎಂದು ಅರಿವಿಗೆ ಮೊರೆ ಹೋದರು. ತನುವಿನಲ್ಲಿಯೇ ಸಂಗಮವಾದ ಅರಿವಿಗೆ ಕೂಡಲ ಸಂಗಯ್ಯನೆಂದು ಹೆಸರಿಟ್ಟು ಕರೆದರು. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳಿಂದ ತನುವನ್ನು ಕ್ಷಣ ಕ್ಷಣಕ್ಕೂ ಜರ್ಝರಿತನನ್ನಾಗಿ ಮಾಡುವ ತನುವಿನಲ್ಲಿರುವ ಮನದಿಂದಲೇ ಪ್ರಾರ್ಥಿಸಿದರು. ತನುವಿನಲ್ಲಿ ಸಂಗಮವಾದ ಅರಿವಿನಲ್ಲಿ ಅಜ್ಞಾನದ ಮನವನ್ನು ಸಂಗಮಗೊಳಿಸಿ ಕೂಡಲಸಂಗಮವಾದರು.

ಮೂರು ನದಿಗಳು ಒಂದೆಡೆ ಕೂಡಿ ಹೆಸರು ಕಳೆದುಕೊಂಡು ಸಂಗಮವಾದಂತೆ, ತನು, ಅರಿವು, ಮನ, ಮಹಾಜ್ಞಾನದಲ್ಲಿ ಲಯವಾಗಿ ಪರಿಪೂರ್ಣ ಪ್ರಸಾದವಾಯಿತು ಎಂದಿದ್ದಾರೆ ಅಪ್ಪಣ್ಣ ಶರಣರು.

5

ಅಂಗ ಲಿಂಗವಾಯಿತ್ತೆಂಬಿರಿ, ಲಿಂಗ ಅಂಗವಾಯಿತ್ತೆಂಬಿರಿ
ಅಂಗ ಲಿಂಗ ಸಂಬಂಧ ಎಲ್ಲರಿಗೆ ಎಂತಾಯಿತ್ತು ಹೇಳಿರಣ್ಣಾ.
ಅಂಗ ಲಿಂಗ ಸಂಬಂಧವಾದರೆ, ಗುರುವಿನಲ್ಲಿ ಗುಡ್ಡನಾಗಿರಬೇಕು,
ಲಿಂಗದಲ್ಲಿ ನಿಷ್ಠನಾಗಿರಬೇಕು, ಜಂಗಮದಲ್ಲಿ ಅವಧಾನಿಯಾಗಿರಬೇಕು,
ಇವ ಮೂರರಲ್ಲಿ ದೂರಾಗಿಪ್ಪರ ಎನಗೊಮ್ಮೆ ತೋರದಿರಾ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಅಂಗ ಲಿಂಗವಾಯಿತ್ತೆಂಬಿರಿ, ಲಿಂಗ ಅಂಗವಾಯಿತ್ತೆಂಬರಿ ಅಂಗ ಲಿಂಗ ಸಂಬಂಧ ಎಲ್ಲರಿಗೆ ಎಂತಾಯಿತ್ತು ಹೇಳಿರಣ್ಣಾ:

ಅಂಗದಲ್ಲಿ ಅರಿವು (ಲಿಂಗ) ಸಮರಸವಾಗಿ ಬೆರೆತಿದೆ, ಹೀಗಾಗಿ ಅಂಗ ಅರಿವಿನ ಅಂಗ; ಅದು ಲಿಂಗಾಂಗ. ಶರಣರು ಅಂಗವನ್ನು ಲಿಂಗಾಂಗ ಸಾಮರಸ್ಯವೆಂದೇ ಕರೆದರು. ಅಂಗದ ಸಾಮರಸ್ಯ ಸಕಲರಿಗೆ ತಿಳಿಯುವಂತೆ ಸೂತ್ರ ರೂಪದಲ್ಲಿ ವೈಜ್ಞಾನಿಕವಾಗಿ ವಚನಗಳನ್ನು ರಚಿಸಿ ದರು. ಆದರೂ ಅಂಗ ಅಂಗವಾಗಿಯೇ ಉಳಿಯಿತ್ತು; ಲಿಂಗವಾಗಲಿಲ್ಲ.

ಲಿಂಗವೇ ಅಂಗವಾಯಿತು ಎನ್ನುವ ಅಂಗ ಲಿಂಗದ ಸಂಬಂಧ ಸಕಲರಿಗೂ ತಿಳಿಯ ಲಿಲ್ಲ. ತಿಳಿದ ಜ್ಞಾನಿಗಳಿಂದ ಕೇಳಿ ತಿಳಿಯುವ ಗೊಡವೆಗೂ ಹೋಗಲಿಲ್ಲ. ವಚನಗಳನ್ನು ಓದಿ, ಅಂಗವೇ ಲಿಂಗ; ಆ ಲಿಂಗವೇ ಅಂಗವೆಂದು ಶಬ್ದದಿಂದ ನುಡಿಯಬಹುದು; ಆದರೆ ನುಡಿದಂತೆ ಅಂಗ ಲಿಂಗ(ಅರಿ)ವಾಗಿ ಇರಲು ಸಾಧ್ಯವಾಗುವುದಿಲ್ಲ. ಅಂಗ ಲಿಂಗ ಸಂಬಂಧ ಹೇಗೆ ಎಂದು ಹೇಳಲೂ ಸಾಧ್ಯವಾಗುವುದಿಲ್ಲ. ಅಂಗ ಸಂಪೂರ್ಣ ಲಿಂಗ(ಅರಿ)ವಾಗಿ ಇರಲು ಬಂದಾಗ ಮಾತ್ರ ಹೇಳಲು ಸಾಧ್ಯವಾಗುತ್ತದೆಯೇ ಹೊರತು ನುಡಿಯಿಂದ ಹೇಳಲು ಬರುವುದಿಲ್ಲ.

ಅಂಗವೂ ತನ್ನದೇ, ಅರಿವೂ ತನ್ನದೇ. ಆದರೂ ಅಂಗ ಲಿಂಗ ಸಂಬಂಧ ಹೇಗೆ ಎನ್ನುವುದನ್ನು ಹೇಳಲು ಬಾರದಿದ್ದರೆ ಅಂಗವಿದ್ದೂ ಇಲ್ಲದಂತೆ; ಅಂಗದಲ್ಲಿ ಅರಿ(ಲಿಂಗ)ವಿದ್ದೂ ಇಲ್ಲದಂತೆ ಅಲ್ಲವೆ? ಅವೆರಡನ್ನು ಉಳ್ಳಾತ ಬಳಕೆ ಮಾಡಲು ಬರಲಿಲ್ಲವೆಂದಂತಾಗಲಿಲ್ಲವೆ? ಹೊರಗಿನದೆಲ್ಲವನ್ನೂ ಕಲಿಯುವ ನೈಪುಣ್ಯವುಳ್ಳ ಅಂಗ; ಅಂಗದೊಳಗಿರುವ ಲಿಂಗ ಸಂಬಂಧವೇ ತಿಳಿದಿಲ್ಲವೆಂದರೇನು? ಇದು ಸಕಲ ಅಂಗಗಳಿಗೂ ಸೋಜಿಗದ ಮಾತೇ ಸರಿ.

ಅಂಗ ಹೆಣ್ಣಾದರೇನು ಗಂಡಾದರೇನು ಅದು ಅಂಗವಲ್ಲವೆ? ಈ ಭೇದವನ್ನು ಭೇದಿಸಿ ಅಂಗದಲ್ಲಿರುವ ಲಿಂಗಕ್ಕೆ ಹೋಗುವ ಮಾರ್ಗವನ್ನು ಅಂಗವೇ ಕಂಡುಕೊಳ್ಳಬೇಕು. ಈ ಕುತೂಹಲದ ಬಯಕೆ ಅಂಗಕ್ಕೆ ಆಗಬೇಕಲ್ಲ? ಅಪ್ಪಣ್ಣ ಶರಣರು ಹೇಳಿದಂತೆ ಇದು ಬಲು ಜಟಿಲ!

ಅಂಗ ಲಿಂಗ ಸಂಬಂಧವಾದರೆ, ಗುರುವಿನಲ್ಲಿ ಗುಡ್ಡನಾಗಿರಬೇಕು, ಲಿಂಗದಲ್ಲಿ ನಿಷ್ಠನಾಗಿರಬೇಕು, ಜಂಗಮದಲ್ಲಿ ಅವಧಾನಿಯಾಗಿರಬೇಕು:

ಅಂಗಕ್ಕೆ ಲಿಂಗ ಸಂಬಂಧವಾಗಿದ್ದರೆ ಅದು ಗುರುವಿನಲ್ಲಿ ಗುಡ್ಡನಾಗಿರಬೇಕು, ಲಿಂಗದಲ್ಲಿ ನಿಷ್ಠನಾಗಿರಬೇಕು, ಜಂಗಮದಲ್ಲಿ ಅವಧಾನಿಯಾಗಿರಬೇಕು ಎನ್ನುತ್ತಾರೆ ಅಪ್ಪಣ್ಣ ಶರಣರು.

ಗುರುವಿನಲ್ಲಿ ಗುಡ್ಡನಾಗಿರುವುದು ಹೇಗೆ? ಗುರುವೆಂದರೆ ಯಾರು? ಅಂಗ ಯಾರನ್ನು ಗುರುವೆನ್ನಬೇಕು? ವ್ಯಕ್ತಿಯನ್ನು ಗುರುವೆನ್ನಬೇಕೆ? ಆತ ಕೂಡಾ ಒಂದು ಅಂಗದಿಂದ ಕೂಡಿದ್ದಾನೆ. ಗುರು ಅಂಗ, ಶಿಷ್ಯನೂ ಅಂಗ. ಹೀಗಾಗಿ ಶಿಷ್ಯ ಗುರು ಎಂದುಕೊಳ್ಳಲೂ ಬರುವುದಿಲ್ಲ.

ಅಂಗವೇ ಒಂದು ಸಂಜೀವಿನಿ ಗುಡ್ಡ; ಬೆಟ್ಟ. ಅದರಲ್ಲಿ ಅರಿವೆಂಬ ಗುರು ವಾಸವಾಗಿದ್ದಾನೆ. ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆಂತಯ್ಯಾ? ಎಂದು ಅಕ್ಕ ಕೇಳುತ್ತಾಳೆ. ಬೆಟ್ಟದೊಳಗೆ ಹುಲಿ ಚಿರತೆ ಕರಡಿ ಸಿಂಹ ಹಾವು ಚೇಳು ಸೇರಿದಂತೆ ಭಯಂಕರ ಪ್ರಾಣಿಗಳಿರುತ್ತವೆ. ಬೆಟ್ಟ; ಗಿಡ ಮರ ತರುಗಳಿಗೆ ಜನ್ಮ ನೀಡಿದಂತೆ ಇತರ ಪ್ರಾಣಿಗಳಿಗೂ ಜನ್ಮ ನೀಡಿದೆ. ಅದು ಯಾರಿಗೂ ಅಂಜುವುದಿಲ್ಲ. ಗಿರಿಯಂಜುವುದು ವಜ್ರಕ್ಕೆ ಮಾತ್ರ. ಹಾಗೆಯೇ ಅಂಗವೆಂಬ ಗುಡ್ಡದಲ್ಲಿ, ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ವಾಸ ಮಾಡಿವೆ. ಮನ ಇವುಗಳಿಗೆ ಅಧಿಪತಿಯಾಗಿದ್ದಾನೆ. ಅರಿವೆಂಬ ಗುರು ಕೂಡಾ ವಾಸ ಮಾಡಿದ್ದಾನೆ. ಅಂಗ, ಲಿಂಗಯ್ಯನೆಂಬ ಅರಿವಿನ ಅರಮನೆ; ಗುರು ಮನೆಯೂ ಹೌದು. ಈ ಗುರುವಿನ ಮಾತು ಕೇಳುತ್ತಾ ಅಂಗ ಅರಿಷಡ್ವರ್ಗಗಳಿಗೆ ತುತ್ತಾಗದೆ ಗುಡ್ಡನಾಗಿರಬೇಕು.

ಲಿಂಗದಲ್ಲಿ ನಿಷ್ಠನಾಗಿರಬೇಕು:

ಅಂಗದಲ್ಲಿ ಅರಿವಿದೆ; ಮನವಿದೆ. ಅಂಗದಲ್ಲಿರುವ ಅರಿವೇ ಲಿಂಗ. ಆ ಲಿಂಗಯ್ಯನನ್ನು ಅಂಗದಲ್ಲಿರುವ ಮನದಿಂದಲೇ ತಿಳಿಯಬೇಕು. ಆ ಲಿಂಗಯ್ಯನಿಗೆ ಮನ ನಿಷ್ಠೆ ಮಾಡಬೇಕು. ಆತ ಹೇಳಿದಂತೆ ಕೇಳಬೇಕು. ಆತನ ಸೇವೆ ಮಾಡಬೇಕು.

ಜಂಗಮದಲ್ಲಿ ಅವಧಾನಿಯಾಗಿರಬೇಕು:

ಅಂಗದಲ್ಲಿರುವ ಲಿಂಗವೆಂಬ ಅರಿವನ್ನು ಮನದಿಂದಲೇ ತಿಳಿಯಬೇಕು. ಅರಿವೆಂಬ ಗುರುರಾಯ ಹೇಳಿದ ಮಾತುಗಳನ್ನು, ಸೂಚಿಸಿದ ಮಾರ್ಗವನ್ನು ಜಂಗಮನಾಗಿ ಛಲದಿಂದ ಪಾಲನೆ ಮಾಡಬೇಕು.

ವೇದ ಆಗಮ ಉಪನಿಷತ್ತು ಶಾಸ್ತ್ರ ಪುರಾಣ, ರಾಮಾಯಣ ಮಹಾಭಾರತ,

ಭಗವದ್ಗೀತೆ ಬೈಬಲ್‌ಗಳು ಸಕಲ ಗ್ರಂಥಗಳು ಹುಟ್ಟಿದ್ದು, ಅಂಗವೆಂಬ ಗ್ರಂಥ ಸಾಹೇಬನಿಂದಲೇ! ಅಂಗದಿಂದ ಹುಟ್ಟಿದ ಪುಸ್ತಕಗಳಿಗೆ ಅಂಗ ಮರುಳಾಗಿದೆ. ಹೀಗೆ ಅಂಗದಲ್ಲಿರುವ ಸಕಲ ವೇದ ಆಗಮ ಶಾಸ್ತ್ರ ಪುರಾಣಗಳನ್ನು ಅಂಗದಲ್ಲಿರುವ ಅವಧಾನಿಯಿಂದಲೇ ತಿಳಿಯಬೇಕು.

ಅವಧಾನಿಯೆಂದರೆ ಪುಸ್ತಕದಲ್ಲಿದ್ದದ್ದನ್ನು ನೆನಪಿನಲ್ಲಿಟ್ಟುಕೊಂಡು ಹೇಳುವವನಲ್ಲ. ಅಂಗದಲ್ಲಿದ್ದದ್ದನ್ನೇ ಅರಿವಿನಿಂದ ತಿಳಿ ಹೇಳುವವನು. ಅವನು ಛಲದಂಕ ಮಲ್ಲ; ಜಂಗಮನಿಗೆ ನಿಷ್ಠನಾಗಿರಬೇಕು. ಇದೇ ಅಂಗಲಿಂಗ ಸಂಬಂಧವೆಂದು ಹೇಳುತ್ತಾರೆ ಅಪ್ಪಣ್ಣ ಶರಣರು.

ಇವ ಮೂರರಲ್ಲಿ ದೂರಾಗಿಪ್ಪರ ಎನಗೊಮ್ಮೆ ತೋರದಿರಾ, ಬಸವಪ್ರಿಯ ಕೂಡಲ ಚೆನ್ನಬಸವಣ್ಣ:

ಅಂಗ ಲಿಂಗ ಸಂಬಂಧವಾಗದ ಅಂಗ ಜಗತ್ತಿನಲ್ಲಿ ಒಂದು ಕೂಡಾ ಇಲ್ಲ. ಅಂಗದಲ್ಲಿ ಅರಿವು ಇದೆ; ಮನವೂ ಇದೆ. ಅಂಗದಲ್ಲಿಯ ಅರಿವನ್ನು ಬಳಕೆ ಮಾಡುವ ವಿಧಾನ ಮನಕ್ಕೆ ತಿಳಿದಿಲ್ಲ. ಅಂಗದಲ್ಲಿ ಮನದ ಅಜ್ಞಾನದಿಂದ ಹುಟ್ಟಿದ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ಮನ ಅಂಗದಿಂದಲೇ ಬಳಕೆ ಮಾಡುತ್ತಾ ಅರಿವಿನ ಲಿಂಗಯ್ಯನ ಅಂಗವನ್ನು ಮಂಗದಂತೆ ಮಾಡಿದೆ. ಇದು ಲಿಂಗಯ್ಯನಿಗೆ ದೋಷವಿಲ್ಲ. ಆತ ಸರ್ವಾಂಗಗಳಲ್ಲಿ ಥಳಥಳನೆ ಹೊಳೆಯುತ್ತಲಿದ್ದಾನೆ.

ಗುರುವಿನಲ್ಲಿ ಗುಡ್ಡನಾಗಿರದ, ಲಿಂಗದಲ್ಲಿ ನಿಷ್ಠನಾಗಿರದ, ಜಂಗಮದಲ್ಲಿ ಅವಧಾನಿಯಾಗಿರದ, ಅಂಗದಲ್ಲಿ ವಾಸ ಮಾಡಿದ ಅಂಗಗಳನ್ನೇ ಮಂಗದಂತೆ ಮಾಡಿದ ಮನಗಳನ್ನು ಎನಗೊಮ್ಮೆಯೂ ತೋರದಿರಾ ಎಂದು ಅಪ್ಪಣ್ಣ ಶರಣರು, ಬಸವಣ್ಣನಿಗೆ ಪ್ರಿಯರಾದ ಕೂಡಲ ಚೆನ್ನಬಸವಣ್ಣನನ್ನು ಅಂಗದ ಅರಿವೆಂಬ ಗುರುವನ್ನಾಗಿಸಿ ಪ್ರಾರ್ಥಿಸಿದ್ದಾರೆ.

6

ಅಂಗ ಲಿಂಗವೆಂದರಿದ ಬಳಿಕ, ಲಿಂಗ ಅಂಗವೆಂದರಿದ ಬಳಿಕ,
ಇನ್ನೊಂದು ಸಂಗ ಉಂಟೆಂದು ಏಕೆ ಅರಸುವಿರಯ್ಯ?
ಸಂಗ ಉಂಟೆಂಬನ್ನಕ್ಕ ಕಂಗಳ ಪಟಲ ಹರಿದುದಿಲ್ಲ.
ಅದು ಮರೆವೆಗೆ ಬೀಜ.
ಈ ಮರಹಿಂದಲೆ ನೆರೆ ಮೂರು ಲೋಕವೆಲ್ಲ ಬರುಸೂರೆಹೋಯಿತ್ತು.
ಅರಿದ ಶರಣಂಗೆ ಅಂಗಲಿಂಗ ಸಂಬಂಧವಿಲ್ಲ.
ಅಂಗಲಿಂಗ ಸಂಬಂಧವಳಿದ ಬಳಿಕ ಪ್ರಾಣಲಿಂಗಸಂಬಂಧ.
ಲಿಂಗಪ್ರಾಣಿ ಇವನರಿದರೆ ಲಿಂಗಸಂಬಂಧಿ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಅಂಗ ಲಿಂಗವೆಂದರಿದ ಬಳಿಕ, ಲಿಂಗ ಅಂಗವೆಂದರಿದ ಬಳಿಕ, ಇನ್ನೊಂದು ಸಂಗ ಉಂಟೆಂದು ಏಕೆ ಅರಸುವಿರಯ್ಯ:

ಅಂಗವೇ ಅರಿವು; ಅರಿವೇ ಅಂಗವೆಂದು ಅರಿತ ಬಳಿಕ ಇನ್ನೊಂದು ಸಂಗ ಉಂಟೆಂದು ಹುಡುಕುವದೆ? ಅಂಗಕ್ಕೆ ಅರಿವಾಯಿತೆಂದು; ಅಂಗವೇ ಅರಿವು, ಅರಿವೇ, ಅಂಗವೆಂದು ನುಡಿದು

ಹೇಳುವ ಅಂಗ ಮಾತ್ರ ಮತ್ತೊಂದು ಸಂಗವನ್ನು ಬಯಸುತ್ತದೆ. ಅಂಗವೇ ಅರಿವು ಅರಿವೇ ಅಂಗವೆಂದು ತಂತ್ರಗಾರಿಕೆಯಿಂದ ತಿಳಿದು ಆನಂದವನ್ನು ಅನುಭವಿಸಿದ ಅಂಗ ಮತ್ತೊಂದು ಸಂಗವನ್ನು ಬಯಸುವುದಿಲ್ಲ. ಏಕೆಂದರೆ:

ಅಂಗದಲ್ಲಿರುವ ಮನ; ಅಂಗದಲ್ಲಿರುವ ಅರಿವಿನ ಸಂಗ ಮಾಡಿ ಅರಿವೇ ಆಗಿರುತ್ತದೆ. ಸಂಗ ಬಯಸುವ ಅಂಗ ಲಿಂಗವಾಗಿ ಕಾಣುತ್ತದೆ. ಸಂಗ ಬಯಸುವ ಆಭರಣ ಲೋಹವಾಗಿ ಕಾಣುತ್ತದೆ. ಜಲ ಕುದ್ದು ಪಾಕವಾದ ಮಣ್ಣು ಜಲವಾಗಿ ಕಾಣುತ್ತದೆ. ಅಂಗ ಲಿಂಗವೆಂದು ಅರಿತ ಅಂಗ; ಆ ಲಿಂಗವೇ ಅಂಗವೆಂದು ಅರಿತ ಅಂಗ ಮತ್ತೊಂದು ವಸ್ತುವಿನ ಸಂಗ ಮಾಡುವುದಿಲ್ಲ.

ಸಂಗ ಉಂಟೆಂಬನ್ನಕ್ಕ ಕಂಗಳ ಪಟಲ ಹರಿದುದಿಲ್ಲ ಅದು ಮರೆವೆಗೆ ಬೀಜ:

ಅಂಗಕ್ಕೆ ಮತ್ತೊಂದು ಅಂಗದ ಸಂಗ ಮಾಡಬೇಕು, ಆಭರಣದ ಸಂಗ ಮಾಡಬೇಕು, ಅಧಿಕಾರದ ಸಂಗ ಮಾಡಬೇಕು, ಮಣ್ಣಿನ ಸಂಗ ಮಾಡಬೇಕು ಎಂದು ಬಯಕೆ ಆಗುತ್ತಿದ್ದರೆ ಕಣ್ಣಿನಲ್ಲಿ ಆವರಿಸಿದ ಮನವೆಂಬ ಅಜ್ಞಾನದ ಪೊರೆ ಹರಿದಿಲ್ಲವೆಂದು ತಿಳಿಯಬೇಕು. ಆ ಮನವೇ ಮರೆವೆಗೆ ಬೀಜ!

ಈ ಮರೆಹಿಂದಲೆ ನೆರೆ ಮೂರು ಲೋಕವೆಲ್ಲ ಬರುಸೂರೆ ಹೋಯಿತ್ತು:

ಅಂಗದಲ್ಲಿ ಆವರಿಸಿದ ಮನವೆಂಬ ಮರಹಿನಿಂದಲೇ ಜಗದ ಅಂಗಗಳೆಲ್ಲ ಅಜ್ಞಾನಕ್ಕೆ ಬಲಿಯಾಗುತ್ತಲಿವೆ. ಅಂಗದಲ್ಲಿ ಲಿಂಗವೆಂಬ ಅರಿವಿದೆ. ಅದು ಜಗದಗಲ ಮುಗಿಲಗಲ. ಹಾಗೆಯೇ ಅಂಗದಲ್ಲಿ ಮನ ಆವರಿಸಿದೆ. ಅದು ಅಂಗವನ್ನು ಸಾತ್ವಿಕ, ರಾಜಸ, ತಾಮಸ ಎಂಬ ಮೂರು ಭಾಗದಲ್ಲಿ ಸೀಳಿದೆ. ಸಾತ್ವಿಕ ಗುಣದ ಒಂದು ಲೋಕ, ರಾಜಸ ಗುಣದ ಒಂದು ಲೋಕ, ತಾಮಸ ಗುಣದ ಮತ್ತೊಂದು ಲೋಕವನ್ನಾಗಿ ಮಾಡಿದೆ. ಈ ಮೂರು ಗುಣಗಳು ಒಂದೇ ಅಂಗದಲ್ಲಿ ಮನೆ ಮಾಡಿವೆ.

ಅಂಗ ಪ್ರಾತಃಕಾಲದಲ್ಲಿ ಶೌಚ ಸ್ನಾನಾದಿಗಳನ್ನು ಮುಗಿಸಿ, ಪೂಜೆ ಪ್ರಾರ್ಥನೆಗಳನ್ನು ಮಾಡಿ ನೋಡುಗರಿಗೆ ಸಾತ್ವಿಕನೆನ್ನಿಸಿಕೊಳ್ಳುತ್ತದೆ. ಮನೆಯಲ್ಲಿ ಮಾಲೀಕನಾಗಿ, ಆಫೀಸಿನಲ್ಲಿ ಅಧಿಕಾರಿಯಾಗಿ ರಾಜಸನೆನ್ನಿಸಿಕೊಳ್ಳುತ್ತದೆ. ಲಂಚಕ್ಕೆ ಕೈ ಒಡ್ಡಿ, ಕ್ಲಬ್‌ಗೆ ಹೋಗಿ ಜೂಜು ಆಡಿ, ಕುಡಿದು ಕಾಮಕೇಳಿಯಲ್ಲಿ ಮುಳುಗಿ ತಾಮಸನೆನ್ನಿಸಿಕೊಳ್ಳುತ್ತದೆ. ಹೀಗೆ ಲೋಕದ ಅಂಗಗಳೆಲ್ಲ ಮನದ ಮೂರು ಗುಣಗಳಿಗೆ ಬಲಿಯಾಗಿವೆ.

ಮನ ಅಂಗಕ್ಕೆ ವಿಭೂತಿ ಬಳಿದು ಸಾತ್ವಿಕನ ವೇಷ ಹಾಕಿ ಮತ್ತೊಂದರ ಸಂಗ ಮಾಡಿ ಹಾದರದಿಂದ ಸುಖ ಪಡೆಯುತ್ತದೆ. ತೋರಿಕೆಗೆ ಸಾತ್ವಿಕನ ವೇಷಧರಿಸಿ, ಮನದಲ್ಲಿ ಹಾದರದಿಂದ ಸುಖ ಪಡುವ ಅಂಗಗಳು ಲೋಕದಲ್ಲೆಲ್ಲ ಇವೆ. ಇವು ನಿಯಂತ್ರಣದಲ್ಲಿದ್ದ ಅಂಗಗಳು. ನಿಯಂತ್ರಣದ ಕಟ್ಟೆ ಒಡೆದಾಗ ಅಂಗ ತಾಮಸ ಗುಣದ ಹಣೆಪಟ್ಟಿ ಹಚ್ಚಿಕೊಳ್ಳುತ್ತದೆ. ಹೀಗೆ ಲೋಕದ ಅಂಗಗಳೆಲ್ಲ ಅಂಗದಲ್ಲಿರುವ ಲಿಂಗದ (ಜ್ಞಾನ) ಸುಖ ಅನುಭವಿಸದೆ ಮೂರು ಗುಣಗಳಿಗೆ ಬಲಿಯಾಗಿ ಹಾಳಾಗುತ್ತಲಿವೆ ಎಂದು ಅಪ್ಪಣ್ಣ ಶರಣರು ಮರುಕ ವ್ಯಕ್ತಪಡಿಸಿದ್ದಾರೆ.

ಅರಿದ ಶರಣಂಗೆ ಅಂಗ ಲಿಂಗ ಸಂಬಂಧವಿಲ್ಲ:

ಶರಣನೆಂದರೆ ಅಂಗದಲ್ಲಿರುವ ಲಿಂಗ(ಅರಿವಿಗೆ) ಕ್ಕೆ ಶರಣು ಹೋದಾತ. ಆ ಲಿಂಗವೇ ತಾನಾದಾತ. ಆತ ಅಂಗ ಸಂಬಂಧಿಯೂ ಅಲ್ಲ; ಲಿಂಗ ಸಂಬಂಧಿಯೂ ಅಲ್ಲ. ಅಂಗವನ್ನು ಅಂಗದ ಅರಿವನ್ನು ಅಂಗದಲ್ಲಿ ಆವರಿಸಿದ ಮನದಿಂದಲೇ ತಿಳಿದು; ಮನವೆಂಬ ಮರ್ಕಟವನ್ನು

ನಷ್ಟ ಮಾಡಿಕೊಂಡಾತ.

ಅಂಗದ ಕಣಕಣದಲ್ಲಿ ಅರಿವು ಬೆರೆತಿದೆ. ಅರಿವಿನ ಕಣದಿಂದಲೇ ಅಂಗ ಜನ್ಮ ತಳೆದಿದೆ. ಜಲಬಿಂದು ತಂದೆಯ ಗರ್ಭದಿಂದ ತಾಯಿ ಗರ್ಭಕ್ಕೆ ಪ್ರವೇಶ ಮಾಡಿ, ರಕ್ತವಾಯಿತು. ಮಾಂಸದ ಪಿಂಡವಾಯಿತು. ಮೂಳೆ, ಮಜ್ಜೆ, ಮೇದಸ್ಸು ಆಯಿತು. ಇವು ಹೊರಚೆಲ್ಲದಂತೆ, ಚರ್ಮದ ಕವಚವಾಯಿತು. ಅಂಗವೆಂದು ಹೆಸರು ಪಡೆದು ಭೂಮಿಯಲ್ಲಿ ಕಾಣಿಸಿಕೊಂಡಿತು. ಗರ್ಭದಲ್ಲಿ ಹೋದದ್ದು ಅರಿವಿನ ಜೀವ ಜಲ; ಹೊರಬಂದದ್ದು ಅಂಗ!

ಅಂಗದ ಅರಿವಿನಿಂದ ಜಲ ನೋಡಲು ಹೋದರೆ, ಜಲವೂ ಜಲವಲ್ಲ. ಜಲಜನಕದ ಎರಡು ಪ್ರಮಾಣ ಆಮ್ಲಜನಕದ ಒಂದು ಪ್ರಮಾಣ ಬೆರೆತು ಜಲವೆಂದು ಹೆಸರು ಪಡೆದು ಗೋಚರಿಸಿತು. ಜಲಜನಕವೂ ಬಯಲು ಆಮ್ಲಜನಕವೂ ಬಯಲು, ಬಯಲೂ ಬಯಲೇ. ಬಯಲೇ ಜಲಜನಕವನ್ನು ಆಮ್ಲಜನಕವನ್ನು ಬೆರೆಸಿ ಜಲ ಮಾಡಿತು. ಆ ಜಲದಲ್ಲಿ ಅರಿವಾಗಿ ಬೆರೆತು ಅಂಗದ ಗರ್ಭದಲ್ಲಿ ಸೇರಿತು; ಲಿಂಗವಾಗಿ ಹೊರಗೆ ಬಂದಿತು. ಇದನ್ನು ಅರಿವಿನಿಂದ ಅರಿತ ಶರಣನಿಗೆ ಅಂಗವೂ ಅಂಗವಲ್ಲ, ಲಿಂಗವೂ ಲಿಂಗವಲ್ಲ. ಆತ ಅಂಗ ಸಂಬಂಧಿಯೂ ಅಲ್ಲ; ಲಿಂಗ ಸಂಬಂಧಿಯೂ ಅಲ್ಲ; ಬರೀ ಬಯಲ ಸಂಬಂಧಿ!

ಅಂಗ ಲಿಂಗ ಸಂಬಂಧವಳಿದ ಬಳಿಕ ಪ್ರಾಣಲಿಂಗ ಸಂಬಂಧ ಲಿಂಗಪ್ರಾಣಿ ಇವನರಿದರೆ ಲಿಂಗ ಸಂಬಂಧಿ, ಬಸವಪ್ರಿಯ ಕೂಡಲ ಚೆನ್ನಬಸವಣ್ಣ:

ಅಂಗ ಲಿಂಗದಿಂದಲೇ ಹುಟ್ಟಿ, ಲಿಂಗದ ಅವಿನಾಭಾವ ಸಂಬಂಧವನ್ನು ಹೊಂದಿದೆ. ಅಂಗ ಅರಿವಿನ ಪ್ರಾಣ ಸಂಬಂಧ ಹೊಂದಿದ ಲಿಂಗಪ್ರಾಣಿ ಎಂಬುದನ್ನು ಅಂಗ ಅರಿವಿನಿಂದ ತಿಳಿದಾಗ ಮಾತ್ರ ಲಿಂಗ ಸಂಬಂಧಿಯಾಗುತ್ತದೆ. ಅರಿವಿನ ಸಂಬಂಧಿಯಾಗುತ್ತದೆ. ಸಕಲ ಅಂಗಗಳಿಗೆ ಲಿಂಗವೆಂಬ ಅರಿವಿನ ಸುಳುಹು ನೀಡಿದ ಬಸವಣ್ಣನಾಗುತ್ತದೆ. ಬಸವಣ್ಣನಿಗೆ ಪ್ರಿಯನಾದ ಚೆನ್ನಬಸವಣ್ಣನಲ್ಲಿ ಕೂಡಿ ಅಂಗ ಅರಿವಿನ ಪ್ರಾಣಿಯಾಗುತ್ತದೆ ಎಂದು ಅಪ್ಪಣ್ಣ ಶರಣರು ಸಕಲ ಅಂಗಗಳಿಗೆ ಅರಿವಿನ ಬೀಜ ಬಿತ್ತುವ ಸೂತ್ರ ನೀಡಿದ್ದಾರೆ.

7

ಅಂಗ ಲಿಂಗವೆಂದರಿದುದಕ್ಕೆ ಕುರುಹು ಎಂತಿಪ್ಪುದೆಂದರೆ,
ಕರುಣರಸಭರಿತವಾಗಿಪ್ಪುದೇ ಕುರುಹು.
ಕಂಗಳು ಲಿಂಗವೆಂದರಿದುದಕ್ಕೆ ಕುರುಹು ಎಂತಿಪ್ಪುದೆಂದರೆ,
ಕಾಮಾದಿಗಳ ಸೃಜಿಸದುದೇ ಕುರುಹು.
ಕರವೇ ಲಿಂಗವೆಂದರಿದುದಕ್ಕೆ ಕುರುಹು ಎಂತಿಪ್ಪುದೆಂದರೆ,
ಇಹಪರ ಮೋಕ್ಷವ ಬಯಸದಿಪ್ಪುದೇ ಕುರುಹು.
ಈ ತ್ರಿವಿಧವು ಏಕವಾದರೆ,
ಎಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣನಲ್ಲಿ ಮಹಾಲಿಂಗೈಕ್ಯವು.

ಅಂಗ ಲಿಂಗವೆಂದರಿದುದಕ್ಕೆ ಕುರುಹು ಎಂತಿಪ್ಪುದೆಂದರೆ, ಕರುಣರಸಭರಿತವಾಗಿಪ್ಪುದೇ ಕುರುಹು:

ಅಂಗವೇ ಅರಿವು ಎಂದು ಮನದಿಂದ ಅರಿತ ಮೇಲೆ, ಮನದ ಮರ್ಕಟತನವೆಲ್ಲ ಕಳೆದು, ಅಂಗ ಕರುಣರಸ ಭರಿತವಾಗಿರುತ್ತದೆ. ಕಹಿ ಸಿಹಿ ಶಬ್ದಗಳನ್ನೆಲ್ಲ ಆನಂದದಿಂದ ಕೇಳಿ; ಅಂಗದ ಕಣ ಕಣದಲ್ಲಿ ಕರುಣೆಯ ರಸ ಬುಗ್ಗೆಗಳು ಪುಟಿದು ಪುಳಕಿತಗೊಳ್ಳುತ್ತವೆ. ಕೇಳಿದ ಶಬ್ದಗಳೆಲ್ಲ ಕಿವಿಗೆ ಪ್ರಸಾದವಾಗಿ ತನುವನ್ನು ಘಾಸಿಗೊಳಿಸದೆ ಅರಿವಾಗುತ್ತದೆ. ಶಬ್ದ ನುಡಿದ ತನುವಿನ ಮೇಲೆ ಕೋಪಗೊಳ್ಳದೆ ಕರುಣೆ ಹುಟ್ಟುತ್ತದೆ. ಅಂಗ ಲಿಂಗವೆಂದರಿದುದಕ್ಕೆ ಕರುಣರಸಭರಿತವಾಗಿರುವುದೇ ಕುರುಹು. ಇದು ಶಬ್ದದಿಂದ ನುಡಿದು ಹೇಳುವುದಲ್ಲ; ಪ್ರಯೋಗಕ್ಕೆ ಹೋಗಿ ಅನುಭವಿಸಿ ಆನಂದ ಪಡುವ ತಂತ್ರಗಾರಿಕೆಯ ಮಾತನ್ನು ಅಪ್ಪಣ್ಣ ಶರಣರು ಬೆಡಗಿನ ಸೂತ್ರದಲ್ಲಿ ಹೆಣೆದಿದ್ದಾರೆ.

ಕಂಗಳು ಲಿಂಗವೆಂದರಿದುದಕ್ಕೆ ಕುರುಹು ಎಂತಿಪ್ಪುದೆಂದರೆ, ಕಾಮಾದಿಗಳ ಸೃಜಿಸದುದೇ ಕುರುಹು:

ಕಣ್ಣಿನಲ್ಲಿರುವ ಅರಿವಿಗೆ ವಿಷಯ ಬೇಕಿಲ್ಲ. ಕಣ್ಣಿನಲ್ಲಿ ಆವರಿಸಿದ ಮನಕ್ಕೆ ಕಾಮವೆಂದರೆ ಬಲು ಪ್ರೀತಿ! ಅದಕ್ಕೆ ಲಿಂಗ(ಅರಿವು) ಕಾಣುವುದೇ ಇಲ್ಲ! ಕಣ್ಣಿನಲ್ಲಿರುವ ಅರಿವಿಗೆ ವಸ್ತುವಿನ ಮೂಲ ಕಾಣುತ್ತದೆ. ಅದು ಬೆಳಕು ಬೆಳಕಿನಲ್ಲಿ ಸೇರಿ ಬೆಳಕೇ ಆಗುತ್ತದೆ. ಅಲ್ಲಿ ಕಾಮಾದಿಗಳ ಬಯಕೆಯೇ ಇಲ್ಲ. ಕಣ್ಣಿನಲ್ಲಿ ಆವರಿಸಿದ ಮನಕ್ಕೆ ಬಂಗಾರ ಬೇಕು; ಆಭರಣ ಬೇಕು. ಅಂಗದ ರತಿಸುಖ ಬೇಕು. ದಕ್ಕದಿದ್ದರೆ ಅಂಗವನ್ನು ಕೊಂದು ಭೋಗಿಸುತ್ತದೆ. ಆಭರಣದ ಆಸೆಗಾಗಿ ಅಂಗಕ್ಕೆ ಘಾಸಿಗೊಳಿಸಿ ಅಂಗವನ್ನು ಕೊಂದಾದರೂ ಆಭರಣ ದೋಚುತ್ತದೆ.

ಕಣ್ಣಿನಲ್ಲಿರುವ ಅರಿವು ಅದು ಅಂಗದ ಲಿಂಗ! ಆಭರಣ ನೋಡಿ ಅದು ಹಳದಿ ಬಣ್ಣದ ಲೋಹವೆಂದು ಸುಮ್ಮನಾಗುತ್ತದೆ. ಬಣ್ಣಕ್ಕೆ ಲೋಹಕ್ಕೆ ಮಾರು ಹೋಗುವುದಿಲ್ಲ. ಆಭರಣ ಧರಿಸಿದ ಅಂಗವನ್ನೂ ನೋಡುವುದಿಲ್ಲ. ಅದಕ್ಕೆ ವಿಷಯಾಸಕ್ತನೂ ಆಗುವುದಿಲ್ಲ. ಏಕೆಂದರೆ ಅಂಗ ತನ್ನಂತೆ ಇರುವ ಲಿಂಗ! ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ತುಂಬಿಕೊಂಡ ಚರ್ಮ! ಚರ್ಮ ಚರ್ಮವನ್ನು ಬಯಸುವುದೆ? ಮನದ ಆಟ ಅರಿವಿನ ಮುಂದೆ ನಡೆಯುವುದಿಲ್ಲ. ಮನದ ಕಾಮಾದಿ ಬಯಕೆಗಳು ಅರಿವಿಗೆ ಬೇಕಿಲ್ಲ. ಮನ ಅಂಗ ನೋಡಿ ಕಾಮಾಸಕ್ತನಾದರೆ ಅದಕ್ಕೆ ಅರಿವು ಅಂಗದಲ್ಲಿಯೇ ಕಾಮದ ಸುಖ ತೋರಿಸುವುದು.

ಎಲೆ ಮನವೇ ನೀನು ನೋಡಿ ಕೂಡಿ ಸುಖಿಸಬೇಕು ಎನ್ನುವ ಅಂಗದಲ್ಲಿ ಕಾಮದ ಸುಖವಿಲ್ಲ. ಅದು ನಿನ್ನ ಅಂಗದಲ್ಲಿಯೇ ಇದೆ. ಸ್ವಲ್ಪ ತಡವಾದರೆ ಸಾಕು, ನಿನ್ನ ಅಂಗದ ಸುಖದ ದ್ರವ್ಯ ಹೊರಬಂದು ನಿನಗೆ ಸುಖವಾಗುತ್ತದೆ. ಆಗ ನೀನು ನೋಡಿ ಬಯಸಿದ ಅಂಗ ನಿನಗೆ ಬೇಕಿಲ್ಲ. ಸುಖ ನಿನ್ನಲ್ಲಿದೆಯೋ, ನೀನು ನೋಡಿದ ಅಂಗದಲ್ಲಿದೆಯೋ ಸ್ವಲ್ಪ ತಿಳಿದು ನೋಡು. ನೀನು ನೋಡಿ ಅದರೊಂದಿಗೆ ಸುಖಿಸಬೇಕೆಂದು ಬಯಸಿದ ಅಂಗ; ಅದು ನಿನ್ನಂತೆಯೇ ಇರುವ ಲಿಂಗ! ನಿನ್ನ ಅಂಗವೂ ಲಿಂಗ; ನೀನು ನೋಡುವ ಅಂಗವೂ ಲಿಂಗ! ಲಿಂಗ ಲಿಂಗ ನೋಡಿ ಲಿಂಗವೇ ಆಗುತ್ತದೆ. ಅಂಗ ನೋಡಿದ ಕಂಗಳು ಲಿಂಗವೇ ಆಗುತ್ತದೆ. ಅಲ್ಲಿ ಕಾಮಾದಿಗಳ ಬಯಕೆಗಳೇ ಇಲ್ಲ. ನೋಡುವ ಕಂಗಳೆಲ್ಲ ಲಿಂಗವೆಂದು ಅರಿತ ಮನ ಆ ಲಿಂಗದಲ್ಲಿ ಆಲಿಂಗನವಾಗಿ ಲಿಂಗವೇ ಆಗುತ್ತದೆ.

ಕರವೇ ಲಿಂಗವೆಂದರಿದುದಕ್ಕೆ ಕುರುಹು ಎಂತಿಪ್ಪುದೆಂದರೆ ಇಹ ಪರ ಬಯಸದಿಪ್ಪುದೇ ಕುರುಹು:

ಕರ ಎಂದರೆ ಕೈ ಅಲ್ಲ ; ಕೈ ಎಂದರೂ ಕೈ ಅಲ್ಲ ; ಅದು ಅಂಗ. ಕೈ ಎಂದರೆ ಅಂಗೈ! ಅಂಗೈ ಎಂದರೆ ಅಂಗದ ಐದು ಭಾಗಗಳು. ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮವನ್ನು ಹೊಂದಿದ ಅಂಗಕ್ಕೆ ಅಂಗೈ ಎಂದು ಕರೆಯುತ್ತಾರೆ. ಅಂಗವೆಂದು ಕರವೆಂದೂ ಕರೆಯುತ್ತಾರೆ. ಅಪ್ಪಣ್ಣ ಶರಣರು ಇದನ್ನು ಲಿಂಗವೆಂದು ಕರೆದರು! ಅಂಗದ ಕಣ ಕಣದಲ್ಲಿ ಅರಿವೇ ತುಂಬಿರುವುದರಿಂದ ಇದು ಲಿಂಗವೇ ಆಗಿದೆ. ಅಂಗದಲ್ಲಿ ಮನ ಆವರಿಸಿರುವುದರಿಂದ; ಇದಕ್ಕೆ ಅಂಗದಲ್ಲಿರುವ ಲಿಂಗದ ಪರಿಚಯವಿಲ್ಲದಿರುವುದರಿಂದ ಅಂಗದೊಂದಿಗೆ ಇಹವನ್ನು, ಪರವನ್ನು ಬಯಸುತ್ತದೆ. ಅಂಗದಲ್ಲಿ ತಾನೇ ಬಂಧಿಯಾಗಿ ಮುಕ್ತಿಯನ್ನು ಬಯಸುತ್ತದೆ.

ಕಲ್ಲು ಕಡೆದು ದೇವರನ್ನಾಗಿಸಿ ಪುಣ್ಯ ಕ್ಷೇತ್ರಗಳಿಗೆ ಅಲೆಯುತ್ತದೆ. ಜಪ ತಪಗಳನ್ನು ಮಾಡಿ, ಮಣಿಯನೆಣಿಸಿ ಅಂಗದೊಂದಿಗೆ ವ್ಯರ್ಥ ಕಾಲ ಕಳೆಯುತ್ತದೆ. ಅಂಗದಲ್ಲಿರುವ ಲಿಂಗವನ್ನು ಮರೆತು ಅಂಗಕ್ಕೆ ನಾನಾ ಸಂಕಟಗಳನ್ನು ಒಡ್ಡುತ್ತದೆ. ಇಲ್ಲದ ಸ್ವರ್ಗ ಸುಖಕ್ಕಾಗಿ ಅಂಗಕ್ಕೆ ಭಂಗ ತಂದು ಅಂಗದ ನೆಮ್ಮದಿಯನ್ನೇ ಹಾಳು ಮಾಡುತ್ತದೆ. ನೂರಾರು ಗೋಚರದ ಆಚಾರಗಳನ್ನು ಮಾಡಿ ಅಗೋಚರದ ಆಚಾರಕ್ಕೆ ಕಡಿವಾಣ ಹಾಕುತ್ತದೆ.

ಇಹಪರ ಮೋಕ್ಷದ ಬಯಕೆಯುಳ್ಳ ಮನದ ಮರ್ಕಟತನವನ್ನು ಅಂಗದ ಅರಿವಿನಿಂದಲೇ ಅಳಿದು, ಅಂಗವೇ ಲಿಂಗವೆಂದರಿತು ಆ ಲಿಂಗದಲ್ಲಿ ಆಲಿಂಗನವಾಗಿ ಲಿಂಗವೇ ಆಯಿತು. ಅಂಗ ಲಿಂಗ ಮನವೆಂಬ ತ್ರಿವಿಧವೂ ಏಕವಾಯಿತು ಎಂದು ಅಪ್ಪಣ್ಣ ಶರಣರು ಅಂಗದಲ್ಲಿ ಮೂರು ಒಂದಾದ ಬಗೆಯನ್ನು ಪರಮಾನಂದದ ಸೂತ್ರದ ಮೂಲಕ ವಿವರಿಸಿದ್ದಾರೆ. ಬಸವಣ್ಣನಿಗೆ ಪ್ರಿಯನಾದ ಮಹಾಜ್ಞಾನಿ ಚೆನ್ನಬಸವಣ್ಣನಲ್ಲಿ ಕೂಡಿ ಮಹಾಲಿಂಗೈಕ್ಯದ ಪದವಿಯನ್ನು ಹೊಂದಿದ್ದಾರೆ.

8

ಅಂಗ ಲಿಂಗ ಸಂಬಂಧವಾದ ಬಳಿಕ ಮನ ಹಿಂಗದಿಪ್ಪುದು.
ತನುವನ್ನು ಬಿಟ್ಟು, ಸಂಗ ಸುಖದ ಶರಣರ ಗೋಷ್ಠಿಯೊಳು ಇಪ್ಪಾತ
ಮಂಗಳಾತ್ಮಕ ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಅಂಗ ಬಿಟ್ಟು ಲಿಂಗ ಇಲ್ಲ ; ಲಿಂಗ ಬಿಟ್ಟು ಅಂಗ ಇಲ್ಲ. ಅಂಗದಲ್ಲಿಯೇ ಅರಿವು ಇದೆಯೆಂದು ಮನಕ್ಕೆ ತಿಳಿದಿಲ್ಲ. ಅದಕ್ಕಾಗಿ ಮನ ಅಂಗಕ್ಕೆ ಲಿಂಗ ಕಟ್ಟಿಸಿಕೊಂಡು ಆ ಲಿಂಗ ಪೂಜಿಸುತ್ತ ಲಿಂಗಾಯತನಾಗಿದೆ. ಅಂಗದಲ್ಲಿ ಅರಿವಿದೆ; ಅದೇ ಲಿಂಗ. ಆ ಲಿಂಗ ಪ್ರಾಣದೊಂದಿಗೆ ಸಂಬಂಧ ಬೆಳೆಸಿ ಪ್ರಾಣ ಸಂಬಂಧಿಯಾಗಿದೆ. ಲಿಂಗವಿಲ್ಲದ ಅಂಗವಿರಲು ಸಾಧ್ಯವೇ ಇಲ್ಲದಿರುವಾಗ ಅಂಗಕ್ಕೆ ಲಿಂಗ ಕಟ್ಟಲು ಬರುವುದೆ? ಅಂಗಕ್ಕೆ ಲಿಂಗ ಕಟ್ಟಿಕೊಂಡ ಮನ ಆ ಲಿಂಗದಲ್ಲಿ ಹಿಂಗುವುದೆ?

''ಅಂಗಕ್ಕೆ ಲಿಂಗ ಕೊಟ್ಟವ ಆಚಾರ್ಯನಾದ. ಮನಕ್ಕರಿವ ತೋರಿದಾತ ಮೋಕ್ಷ ಆಚಾರ್ಯನಾದ. ಮೋಕ್ಷ ವಿಮೋಕ್ಷವಾಗಿ ಉಭಯದ ಗೊತ್ತ ತೋರಿ, ಕಾಯದ ಕರ್ಮವ ಕೆಡಿಸಿ, ಜೀವನ ಭವವ ಭೇದಿಸಿ, ತದ್ರೂಪ ತೋರಿದ ಜ್ಞಾನದ ಗುರು. ಆತ ಪರಮಪ್ರಕಾಶ, ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವು ತಾನೆ'' ಎಂದು ಶಿವಲೆಂಕ ಮಂಚಣ್ಣನವರು ಹೇಳುತ್ತಾರೆ.

ಅಂಗದೊಂದಿಗೆ ಲಿಂಗ ಬಂದಿರುವುದನ್ನು ತಿಳಿಯದೆ ಅಂಗ ಗರ್ಭದಿಂದ ಹೊರಬಂದ

ಮೇಲೆ ಆ ಅಂಗಕ್ಕೆ ಲಿಂಗ ಕಟ್ಟುವಾತ ಆಚಾರ್ಯನಾಗುತ್ತಾನೆ. ಕಟ್ಟಿದ ಲಿಂಗಕ್ಕೂ ಅಂಗದೊಂದಿಗೆ ಬಂದ ಲಿಂಗಕ್ಕೂ ಸಂಬಂಧವಿರುವುದಿಲ್ಲ. ಬಂಧನ ಮೋಕ್ಷಗಳೆಂಬ ಉಭಯದ ಗೊತ್ತನ್ನು ಅಂಗದಲ್ಲಿ ತೋರಿ, ಕಾಯಕ್ಕೆ ಅಂಟಿದ ಮನದ ರೋಗಕ್ಕೆ ಅರಿವಿನ ಮದ್ದನರೆದು ಕಾಯದ ಮರಣದ ಭಯವನ್ನು ಭೇದಿಸಿ, ಅಂಗದ ಕಣಕಣದಲ್ಲಿರುವ ಲಿಂಗದ ತದ್ರೂಪವನ್ನು ಅಂಗದಲ್ಲಿಯೇ ತೋರಿಸಿ, ಜ್ಞಾನದ ಗುರುವಾಗಿ ಮೆರೆಯುತ್ತಾನೆ. ಅಂಗ ಮತ್ತು ಲಿಂಗದ ಸಂಗ ಸುಖ ಶರಣರ ಗೋಷ್ಠಿಯಲ್ಲಿ ನಡೆಯುತ್ತದೆ. ಈ ಗೋಷ್ಠಿಯನ್ನು ಆಲಿಸಿದ ಮನ ತನುವನ್ನು ಬಿಟ್ಟು ಶರಣರ ಸಂಗ ಸುಖದಲ್ಲಿ ತನ್ಮಯವಾಗಿ ಮಂಗಳ ಮೂರ್ತಿಯಾಗುತ್ತದೆ. ಬಸವಣ್ಣನಿಗೆ ಪ್ರಿಯನಾದ ಚೆನ್ನಬಸವಣ್ಣನಲ್ಲಿ ಕೂಡಿದ ಮನ ಮಹಾಜ್ಞಾನಿ ಚೆನ್ನಬಸವಣ್ಣನೇ ಆಗುತ್ತದೆ ಎಂದು ಅಪ್ಪಣ್ಣ ಶರಣರು ಮೂರು ಸಾಲಿನ ಸೂತ್ರದೊಂದಿಗೆ ಹೇಳಿದ್ದಾರೆ.

9

ಅಂಗವದಾರದು? ಲಿಂಗವದಾರದು? ಸಂಗವದಾರದು?
ಸಮರಸವದಾರದು? ಸಂದೇಹದಿಂದ ಮುಂದುಗಾಣದೆ
ಒಂದೊಂದ ಕಲ್ಪಿಸಿಕೊಂಡು ಬಂದಿರಲ್ಲಾ ಭವಭವದಲ್ಲಿ.
ಅಂಗವೆ ಗುರು, ಲಿಂಗವೇ ಪ್ರಾಣ,
ಸಂಗವೆ ಜಂಗಮ, ಸಮರಸವೆ ಪ್ರಸಾದ.
ಈ ಚತುರ್ವಿಧವು ಒಂದಂಗ.
ಈ ಚತುರ್ವಿಧವ ಶ್ರುತಿ ಸ್ಮೃತಿಗಳರಿಯವು,
ನಿಮ್ಮ ಶರಣ ಬಲ್ಲ. ಆ ಶರಣನೆ ಶಿವನಲಾ
ಬಸವಪ್ರಿಯ ಕೂಡಲಚೆನ್ನ ಸಂಗಮದೇವಾ, ನಿನ್ನ ನೀನೆ ಬಲ್ಲೆ.

ಅಂಗ ತನ್ನದೆ; ಅಂಗದ ಅರಿವು ತನ್ನದೆ; ಅಂಗಕ್ಕೆ ಆವರಿಸಿದ ಮನವು ತನ್ನದೆ. ಅಂಗದಲ್ಲಿ ಅರಿವು ಸಮರಸವಾಗಿ ಬೆರೆತದ್ದು, ತನ್ನ ಗಮನಕ್ಕಿದೆ. ಆದರೂ ಸಂದೇಹದಿಂದ ಏನೆಲ್ಲವನ್ನೂ ಕಲ್ಪಿಸಿಕೊಳ್ಳುತ್ತಿದ್ದಾನೆ. ಜನನ ಮರಣಗಳಿಂದ, ಸುಖ ದುಃಖಗಳಿಂದ ತೊಳಲಿ ಬಳಲುತ್ತಿದ್ದಾನೆ. ತನ್ನನ್ನು ತಾನು ತಿಳಿಯಲು ಸಾಧ್ಯವಾಗುತ್ತಿಲ್ಲ.

ಅಂಗವೇ ಗುರು, ಲಿಂಗವೇ ಪ್ರಾಣ, ಸಂಗವೇ ಜಂಗಮ, ಸಮರಸವೇ ಪ್ರಸಾದ. ಈ ಚತುರ್ವಿಧವು ತನ್ನಂಗದಲ್ಲಿಯೇ ಇದೆ. ತನ್ನಂಗದಲ್ಲಿರುವ ಹಿರಿಮೆ ತಾನು ತಿಳಿಯದೆ, ಶ್ರುತಿಯಲ್ಲಿ ಸ್ಮೃತಿಯಲ್ಲಿ ಹುಡುಕಿದರೆ ಸಿಗುವುದೆ? ಭಗವದ್ಗೀತೆ ಬೈಬಲ್‌ನಲ್ಲಿ ಹುಡುಕಿದರೆ ಸಿಗುವುದೆ? ರಾಮಾಯಣ ಮಹಾಭಾರತದಲ್ಲಿ ಹುಡುಕಿದರೆ ದಕ್ಕುವುದೆ? ವೇದ ಆಗಮ ಉಪನಿಷತ್‌ಗಳಲ್ಲಿ ಹುಡುಕಿದರೆ ಸಿಗುವುದೆ?

ವೇದ ಆಗಮ ಶಾಸ್ತ್ರ ಪುರಾಣ, ಶ್ರುತಿ ಸ್ಮೃತಿ ಭಗವದ್ಗೀತೆ ಬೈಬಲ್ ಉಪನಿಷತ್‌ಗಳು ರಾಮಾಯಣ ಮಹಾಭಾರತ ಮುಂತಾದ ಪುಸ್ತಕಗಳೆಲ್ಲ ಬಂದಿರುವುದು ಅಂಗದಿಂದಲೇ. ಅವೆಲ್ಲ ಅಂಗದಿಂದ ಬಂದ ಎಂಜಲು! ಅಂಗದಿಂದ ಬಂದ ಎಂಜಲು ಹಿಡಿದು ಅಂಗದಿಂದಲೇ ಜಗ್ಗಾಡುವುದು ಅಂಗಕ್ಕೆ ಶೊಭೆಯೇ? ಒಂದೊಂದು ಪುಸ್ತಕ ಕಲ್ಪಿಸಿಕೊಂಡು ಮುಂದುಗಾಣದೆ

ಸಂದೇಹದಿಂದ ಭವಭವದಲ್ಲಿ ಬರುವುದೆ? ಅಂಗದಿಂದಲೇ ಸೃಷ್ಟಿಯಾದ ಸುಳಿಯಲ್ಲಿ ಅಂಗ ಸಿಕ್ಕಿ ಹಾಕಿಕೊಂಡು ವಿಲವಿಲನೆ ಒದ್ದಾಡುತ್ತಿರುವುದು ಸೋಜಿಗವೇ ಸರಿ!

ನಿತ್ಯ ನಿರಂಜನ ತಾನೆಂದರಿಯದೆ 'ತತ್ವಮಸಿ' ಎಂದು ಹೊರಗನೆ ಹಾಡಿ ಸಾಯುತ್ತಿದೆ ಜಗವೆಲ್ಲ ನಾಯಿಸಾವ. ತಮ್ಮ ತಾವರಿಯದೆ, ಸತ್ತವರ ಪತ್ರ ಓದಿದಡೆ ಎತ್ತಣ ಮುಕ್ತಿ ಗುಹೇಶ್ವರ ಎಂದು ಅಪ್ಪಣ್ಣ ಶರಣರಂತೆ ಅಲ್ಲಮ ಪ್ರಭುಗಳು ಕೂಡಾ ಹೇಳಿದ್ದಾರೆ.

ಅಂಗದಲ್ಲಿಯೇ ಅಂಗಕ್ಕೆ ತಿಳಿಹೇಳುವ ಗುರುವಿದ್ದಾನೆ. ಅಂಗದಲ್ಲಿಯೇ ಅರಿವಿನ ಪ್ರಾಣವಿದೆ. ಇವೆರಡರ ಸಂಗವನ್ನು ಅಂಗದಲ್ಲಿಯೇ ಮಾಡಿದ ಜಂಗಮನಿದ್ದಾನೆ. ಅರಿವಿನ ಸಮರಸ ಪ್ರಸಾದವೂ ಅಂಗದಲ್ಲಿಯೇ ಇದೆ. ಈ ಚತುರ್ವಿಧ ಒಂದಂಗದಲ್ಲಿಯೇ ಇದ್ದಾಗ; ಇದನ್ನು ಶ್ರುತಿ ಸ್ಮೃತಿಗಳಲ್ಲಿ ಹುಡುಕುವುದೆ? ಅವು ಅರಿಯವು. ಅವುಗಳಿಂದ ತಿಳಿ ಹೇಳುವ ಶಾಸ್ತ್ರಿಗಳೂ ಅರಿಯರು. ಅವರು ಅಂಗದ ಎಂಜಲಿನಿಂದ ಬಂದ ಎಂಜಲನ್ನು ತಿಂದವರು; ಅಂಗದಲ್ಲಿ ಥಳ ಥಳನೆ ಹೊಳೆಯುವ ಮೀಸಲೆತ್ತ ಬಲ್ಲರು?

ಗುರು ಲಿಂಗ ಜಂಗಮ ಪ್ರಸಾದದ ಪ್ರಸಾದವನ್ನು ಉಂಡ ನಿಮ್ಮ ಶರಣ ಮಾತ್ರ ಬಲ್ಲ. ಆ ಶರಣನೆ ಶಿವ! ಆ ಶಿವನೂ ಅಂಗದಲ್ಲಿಯೇ ಅರಿವಿನ ಲಿಂಗ ರೂಪದಲ್ಲಿದ್ದಾನೆ. ಆ ಶಿವನನ್ನು ತಿಳಿಯುವ ಮನವೂ ಸರ್ವಾಂಗದಲ್ಲಿ ಆವರಿಸಿದ್ದಾನೆ. ಅವನೇ ಶರಣ. ಆ ಶರಣನೇ ಅಂಗದಲ್ಲಿರುವ ಅರಿವಿನ ಶಿವನಿಗೆ ಶರಣು ಹೋಗಬೇಕು.

ಬಸವಪ್ರಿಯ ಕೂಡಲಚೆನ್ನಸಂಗಮದೇವಾ, ನಿನ್ನ ನೀನೆ ಬಲ್ಲೆ:

ಅರಿವು ಬಸವಣ್ಣನಿಗೆ ಪ್ರಿಯವಾದದ್ದು. ಸರ್ವರ ಅಂಗದಲ್ಲಿರುವ ಆ ಅರಿವಿಗೆ ಬಸವಣ್ಣ ಸದಾ ಕಿರಿಯನಾದ. ಅಂಗದಲ್ಲಿರುವ ಅರಿವೆಂಬ ಶಿವನೇ ಹಿರಿಯನಾದ. ಅಂಗದಲ್ಲಿ ಅರಿವು ಗುರುವಾಗಿ ಸಂಗಮವಾಗಿದೆ. ಆ ಅರಿವೇ ಪ್ರಾಣವಾಗಿ ಸಂಗಮವಾಗಿದೆ. ಇವರು ಹೇಳಿದಂತೆ ಪಾಲಿಸುವ ಛಲದಂಕಮಲ್ಲ ಜಂಗಮನ ಅಂಗದಲ್ಲಿಯೇ ವಾಸವಾಗಿದ್ದಾನೆ. ಇವರು ಒಕ್ಕ ಮಿಕ್ಕ ಪ್ರಸಾದವನ್ನುಣ್ಣುತ್ತಾ ಮನವೆಂಬ ದಾಸ ಇವರಿಗೆ ಶರಣು ಹೋಗಿ ಶರಣನಾಗಿದ್ದಾನೆ. ಆ ಶರಣನೆ ಶಿವ. ಇದನ್ನು ನೀನು ನಿನ್ನ ಅಂಗದಿಂದಲೇ ತಿಳಿಯಬೇಕು ಎಂದು ಅಪ್ಪಣ್ಣ ಶರಣರು ಓದುಗರಿಗೆ ಸಂದೇಶದ ಆದೇಶ ನೀಡಿದ್ದಾರೆ.

10

ಅಂಗವ ಮರೆದು ಲಿಂಗವ ಕೂಡಿ,
ಸಂಗವ ಮರೆದು ಜಂಗಮವ ಕೂಡಿ,
ಗುಣವ ಮರೆದು ಗುರುವ ಕೂಡಿ,
ಪರವ ಮರೆದು ಪ್ರಸಾದವ ಕೂಡಿ,
ಹರುಷವ ಮರೆದು ಹರನ ಕೂಡಿ,
ಬೆರಸಿ ಬೇರಿಲ್ಲದಿಹ ನಿಜ ಶರಣಂಗೆ ನಮೋ ನಮೋ ಎಂಬೆ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಅಂಗವ ಮರೆದು ಲಿಂಗವ ಕೂಡಿ:

ಅಂಗ ಮತ್ತೊಂದು ಅಂಗವನ್ನು ಕೂಡುವುದರಲ್ಲಿಯೇ ಸುಖಿಸಿ ಸಮಯವನ್ನು ಕಳೆಯುತ್ತದೆ. ಕಾಮಕ್ಕಾಗಿ ಕೂಡುವ ತವಕ, ಸ್ನೇಹಕ್ಕಾಗಿ ಕೂಡುವ ತವಕ, ಸೇವೆಗಾಗಿ ಕೂಡುವ ತವಕ, ಕರುಣೆ, ಭಾವಕ್ಕಾಗಿ ಕೂಡುವ ತವಕ, ಬಾಂಧವ್ಯ ಹಾಗೂ ಸಂಬಂಧಿಗಳಿಗಾಗಿ ಕೂಡುವ ತವಕ. ಬಾಳ ಸಂಗಾತಿಗಾಗಿ ಕೂಡುವ ತವಕ, ಅಧಿಕಾರಕ್ಕಾಗಿ ಕೂಡುವ ತವಕ ಈ ಅಂಗವನ್ನೇ ಗುರುವನ್ನಾಗಿ ಮಾಡಿಕೊಂಡು ಆ ಅಂಗದೊಂದಿಗೆ ಕೂಡುವ ಕೂಟದ ತವಕ ಅಂಗಕ್ಕೆ ಉಂಟಾಗುತ್ತದೆ. ಇದಕ್ಕಾಗಿ ಅಂಗವೊಂದು ಅಂಗದೊಂದಿಗೆ ಸ್ನೇಹ ಮಾಡುತ್ತದೆ. ಅದು ಹೆಣ್ಣಾಗಿರಬಹುದು, ಗಂಡಾಗಿರಬಹುದು ಇವೆರಡೂ ಅಂಗಗಳೇ.

ಅಂಗ ಮತ್ತೊಂದು ಅಂಗದೊಂದಿಗೆ ಕೂಡುವ ಕೂಟವನ್ನು ಶರಣರು ಹೆಣ್ಣು ಹೆಣ್ಣು ಕೂಡುವ ಕೂಟವದು ಸಲ್ಲದ ಕೂಟವೆಂದು ಜರಿದಿದ್ದಾರೆ. ಅಂಗ ಮರೆತು ಅಂಗದ ಕಣಕಣದಲ್ಲಿರುವ ಅರಿವೆಂಬ ಲಿಂಗವನ್ನು ಕೂಡುವ ಕೂಟ ಅಂಗ ಲಿಂಗ ಕೂಡುವ ಕೂಟ; ಗಂಡು ಹೆಣ್ಣು ಕೂಡುವ ಕೂಟ; ಸತಿ ಪತಿಗಳೊಂದಾಗಿ ಕೂಡಿದ ಕೂಟ ಶಿವನಿಗೆ ಹಿತವಾದ ಕೂಟ. ಇದು ಕೂಡದ ಅಗಲದ ಕೂಟವೆಂದು ಅಪ್ಪಣ್ಣ ಶರಣರು ಒಂದು ಸಾಲಿನಲ್ಲಿ ಹೇಳಿದ್ದಾರೆ.

ಸಂಗವ ಮರೆದು ಜಂಗಮವ ಕೂಡಿ:

ಅಂಗದ ಕಣ ಕಣದಲ್ಲಿರುವ ಲಿಂಗದ ಸಂಗಮಾಡಿ, ಆ ಲಿಂಗದೊಂದಿಗೆ ಕೂಡಿ; ಆ ಲಿಂಗದ ಸಂಗವನ್ನು ಮರೆದು ಜಂಗಮವನ್ನು ಕೂಡಿದ ಕೂಟ. ಇದು ಕೂಡಿ ಎಂದೆಂದೂ ಅಗಲದ ಕೂಡದ ಅಗಲದ ಕೂಟ. ಅಂಗದ ಗುಣ ಅವಗುಣಗಳನ್ನು ಮರೆತು ನಿರ್ಗುಣಿಯಾಗಿ ಅಂಗದ ಕಣ ಕಣದಲ್ಲಿರುವ ಅರಿವೆಂಬ ಗುರುವ ಕೂಡಿದ ಸುಖ ಕೂಡದಗಲದ ಕೂಟದ ಸುಖ!

ಪರವ ಮರೆದು ಪ್ರಸಾದವ ಕೂಡಿ:

ಅಂಗಕ್ಕೆ ಅಂಗದ ಗುಣಗಳಿಗೆ ಹೆಣ್ಣು ಗಂಡೆಂಬ ಭೇದವುಂಟು. ಶ್ರೀಮಂತ, ಬಡವ, ಭಿಕ್ಷುಕ, ಅಧಿಕಾರಿ, ಶಾಸಕ, ಸಚಿವ ಜವಾನನೆಂಬ ಭೇದವುಂಟು. ಇಹಪರಗಳುಂಟು. ಪಾಪ ಪುಣ್ಯಗಳುಂಟು. ಸ್ವರ್ಗ ನರಕಗಳುಂಟು. ಗುರು-ಶಿಷ್ಯನೆಂಬ ಭೇದವುಂಟು. ಉಂಟು-ಇಲ್ಲ ಎಂಬ ಅಂಗದ ಗುಣ-ಅವಗುಣಗಳನ್ನು ಪ್ರಸಾದ ಮಾಡಿ ಸ್ವೀಕರಿಸಿ ನಿರ್ಗುಣಿಯಾಗಿ ಪ್ರಸಾದವ ಕೂಡಿದ ಕೂಟ ಕೂಡದಗಲದ ಕೂಟ.

ಹರುಷವ ಮರೆದು ಹರನ ಕೂಡಿ, ಬೆರಸಿ ಬೇರಲ್ಲದಿಹ ನಿಜ ಶರಣಂಗೆ ನಮೋ ನಮೋ ಎಂಬೆ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ:

ಅಂಗವ ಮರೆದು ಲಿಂಗವ ಕೂಡಿದ ಹರುಷ, ಸಂಗವ ಮರೆದು ಜಂಗಮವ ಕೂಡಿದ ಹರುಷ, ಗುಣವ ಮರೆದು ಗುರುವನು ಕೂಡಿದ ಹರುಷ, ಪರವನು ಮರೆದು ಪ್ರಸಾದವನು ಕೂಡಿದ ಹರುಷ, ಈ ಎಲ್ಲ ಹರುಷವನೂ ಮರೆತು ಬೆರಸಿ ಬೇರಿಲ್ಲದೆ ಬಯಲಲಿ ಬೆರೆತು ಬಯಲಾದ ನಿಜಶರಣಂಗೆ ನಮೋ ನಮೋ ಎಂಬೆ, ಬಸವಣ್ಣನಿಗೆ ಪ್ರಿಯನಾದ ಚೆನ್ನಬಸವಣ್ಣನೆಂಬೆ ಎಂದಿದ್ದಾರೆ ಅಪ್ಪಣ್ಣ ಶರಣರು.

11

ಅಂಗವ ಮಾರಿಕೊಂಡು ಉಂಬಾತನೊಬ್ಬ ಠಕ್ಕ.
ಲಿಂಗವ ಮಾರಿಕೊಂಡು ಉಂಬಾತನೊಬ್ಬ ಠಕ್ಕ.

ಜಂಗಮವ ತೋರಿಕೊಂಡು ಉಂಬಾತನೊಬ್ಬ ಠಕ್ಕ.
ಇವರು ಮೂವರು ಕಂಗಳು ಕಾಲು ಹೋದವರ ಸಂಗದಂತೆ,
ಲಿಂಗಜಂಗಮಕ್ಕೆ ದೂರ,
ನಮ್ಮ ಶರಣರ ಸಂಗ ಸುಖಕ್ಕೆ ಸಲ್ಲರು ನೋಡಾ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಅಂಗವ ಮಾರಿಕೊಂಡು ಉಂಬಾತನೊಬ್ಬ ಠಕ್ಕ:

ಅಪ್ಪಣ್ಣ ಶರಣರು ತಮ್ಮ ಈ ವಚನದಲ್ಲಿ ಮೂರು ಜನ ಠಕ್ಕರನ್ನು ಪರಿಚಯಿಸಿದ್ದಾರೆ. ಒಬ್ಬ ಅಂಗ ಮಾರಿಕೊಂಡು ಉಪಜೀವನ ನಡೆಸುವಾತ. ಮತ್ತೊಬ್ಬ ಅಂಗದ ಮೇಲೆ ಕಟ್ಟಿ ಕೊಳ್ಳುವ ಲಿಂಗವನ್ನು ಮಾರಿಕೊಂಡು ಉಪಜೀವನ ನಡೆಸುವಾತ. ಮಗದೊಬ್ಬ ಅಂಗಕ್ಕೆ ಲಿಂಗ ಕಟ್ಟಿ ಜಂಗಮದ ಕಸಬು ತೋರಿಸಿಕೊಂಡು ಉಪಜೀವನ ಮಾಡುವಾತ.

ಈ ಮೂರೂ ಜನ ಅರಿವಿನ ಜೀವನ ಮರೆತು; ಉಪಜೀವನಕ್ಕಾಗಿ, ಉಣ್ಣುವು ದಕ್ಕಾಗಿಯೇ ಅರಿವಿನ ಕಾಯ ತೋರಿ ಬದುಕುತ್ತಿರುವ ಠಕ್ಕರು.

ಈ ಮೂರೂ ಜನ ಕಣ್ಣು ಇಲ್ಲದ ಕುರುಡರು, ಕಾಲಿಲ್ಲದ ಹೆಳವರು. ಇವೆರಡಿದ್ದೂ ಅನಾಥರಂತೆ ಬದುಕುವ ಭಿಕ್ಷುಕರು; ಇವರು ಲಿಂಗ ಜಂಗಮಕ್ಕೆ ಬಹುದೂರ. ಶರಣರ ಸಂಗ ಸುಖಕ್ಕೆ ಸಲ್ಲರು; ಎಂದಿದ್ದಾರೆ ಅಪ್ಪಣ್ಣ ಶರಣರು.

ಅಂಗ ಎನ್ನುವುದು ಅರಿವಿನ ಕುರುಹು. ಶರಣರು ಇದನ್ನು ಲಿಂಗ ಎಂದು ಕರೆದಿದ್ದಾರೆ. ಅಂಗದಿಂದ ಅರಿವನು ತಿಳಿದು; ಈ ಅಂಗವನ್ನೇ ಲಿಂಗ ಮಾಡಿಕೊಂಡು ಲಿಂಗಾಂಗ ಸಾಮರಸ್ಯದ ಸುಖವನು ಉಂಬಾತನೆ ಲಿಂಗಾನುಭಾವಿ. ಹೀಗೆ ತಿಳಿಯದೆ; ಅಂಗಕ್ಕೆ ನೇತಾಡುವ; ಏನೂ ತಿಳಿಯದ ಲಿಂಗ ಕಟ್ಟಿಕೊಂಡು; ಕಾಶಾಯ ಉಟ್ಟುಕೊಂಡು; ಪೀಠದ ಮೇಲೆ ಅಂಗವನ್ನು ಕೂಡಿಸಿ ಇದು ಅರಿವಿನ ಅಂಗವೆಂದು ತೋರಿಸುತ್ತ, ಅರಿವ ತಿಳಿಯದೆ, ಅರಿವಿನ ಅಂಗವನ್ನೇ ಮಾರಿ ಉಂಬಾತನು ಒಬ್ಬ ಠಕ್ಕನು.

ಏನೂ ತಿಳಿಯದ ಲಿಂಗವನ್ನು ತಯ್ಯಾರು ಮಾಡಿ, ಅರಿವಿನ ಅಂಗಕ್ಕೆ ಕಟ್ಟಿ, ಇದೇ ದೇವರೆಂದು ಮೋಸ ಮಾಡಿ, ತಾನೂ ಮೋಸಕ್ಕೆ ಗುರಿಯಾಗಿ, ಲಿಂಗವನ್ನೇ ದೇವರೆಂದು ಮಾರಿ ಕೊಂಡು ಉಂಬುವಾತನೊಬ್ಬ ಠಕ್ಕ.

ತೋರುವ ಅಂಗಗಳೆಲ್ಲ ಅರಿವಿನ ಲಿಂಗಗಳೇ; ಅರಿವನ್ನು ಚಾಚೂ ತಪ್ಪದೆ ಪಾಲಿಸುವ ಜಂಗಮುಗಳು ಎನ್ನುವುದನ್ನು ಮರೆತು; ಅಂಗಕ್ಕೆ ಲಿಂಗ ಕಟ್ಟುವ ಕಸುಬಿನ ಜಂಗಮನೆಂದು ಹೇಳಿ ಕೊಂಡು ಉಂಬುವಾತನೊಬ್ಬ ಠಕ್ಕ ಎಂದು ಅಪ್ಪಣ್ಣ ಶರಣರು ಜರಿದು ಅಂಗಕ್ಕೆ ಅರಿವನುಂಟು ಮಾಡಿದ್ದಾರೆ. ಕಂಗಳಲ್ಲಿ ಅರಿವಿನ ಲಿಂಗವಿದ್ದೂ ಕಾಣದ ಕುರುಡರು; ಕಾಲಿಲ್ಲದ ಹೆಳವರು. ಇವರು ಲಿಂಗ ಜಂಗಮಕ್ಕೆ ಬಹುದೂರ. ಶರಣರ ಸಂಗ ಸುಖಕ್ಕೆ ಸಲ್ಲರು ಎಂದು ಹೇಳಿದ್ದಾರೆ.

12

ಅಂತರಂಗದಲ್ಲಿ ಆಸೆ, ಬಹಿರಂಗದಲ್ಲಿ ಕ್ರೋಧ,
ಭಾವಕ್ಕೆ ವೇಷ, ಪ್ರಾಣಕ್ಕೆ ರೋಷ, ಕಾಮಕ್ಕೆ ಮದ.

ಇಂತಿವನಿಂಬಿಟ್ಟುಕೊಂಡು ನಾವು ಜಂಗಮವೆಂದು ಸುಳಿದರೆ,
ಹೇಯವಿಲ್ಲದ ಭಕ್ತರು ವೇಷವ ಕಂಡು ಪೂಜೆಯ ಮಾಡಿದರೆ,
ಅಶನಕ್ಕೆ ಅನ್ನವನಿಕ್ಕಿದರೆ, ಶೀತಕ್ಕೆ ರಗಟೆಯ ಕೊಟ್ಟರೆ,
ಅವರಿಗದು ಸಹಜ. ನಿಮ್ಮ ನೀವು ನೋಡಲಿಲ್ಲವೆ?
ನಾವು ದೇವರಾದೆವೆಂದು ವಿಚಾರಿಸಿ ನೋಡಿ,
ಉಭಯವ ಮೆಟ್ಟನಿಂದು, ಅಭವನೆಂಬ ಹೆಸರಿಗೆ
ಸಂದವರಿಗೆ ಸುಲಭದಿಂದ ಜಗವೆಲ್ಲವು
ನಮೋ ನಮೋ ಎಂಬುದು
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.
ಈ ಉಭಯದ ಭೇದವ ನೀವೇ ಬಲ್ಲಿರಿ.

ಕಾವಿ ಅರಿವಿನ ಚಿನ್ಹೆ. ಅರಿವಾದ ಮೇಲೆಯೇ ತನುವಿಗೆ ಧರಿಸಬೇಕು. ಇದು ನಿಯಮ. ಆದರೆ ಮನ ತನುವಿಗೆ ಜಂಗಮನ ವೇಷಧರಿಸಿ ವ್ಯವಹಾರ ಮಾಡುತ್ತದೆ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಬತ್ತುವುದಿಲ್ಲ. ಜಂಗಮವೆಂದು ಸುಳಿದರೆ ತನುವಿನ ವೇಷ ನೋಡಿ ಭಕ್ತರು ಪೂಜೆ ಮಾಡುತ್ತಾರೆ. ಅಶನಕ್ಕೆ ಅನ್ನವ ನೀಡಿ, ಹೊದಿಯಲು ಕಂಬಳಿ ಕೊಟ್ಟು ಆರೈಕೆ ಮಾಡುತ್ತಾರೆ. ಭಕ್ತರಿಗೆ ಇದು ಸಹಜ; ಆದರೆ ಜಂಗಮನಾದವನು ಒಮ್ಮೆ ತನ್ನನ್ನು ತಾನು ನೋಡಿಕೊಳ್ಳಬೇಕಲ್ಲ!

ತನುವಿನಲ್ಲಿ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ನಿಂತಿವೆಯೆ? ಎಂದು ಪರೀಕ್ಷಿಸಿಕೊಳ್ಳಬೇಕಲ್ಲ. ಪೂಜಿಸುವ ಭಕ್ತ, ಪೂಜೆಗೊಳಗಾದ ತಾನು ಭಿನ್ನವೆ? ಎಂದು ಪರೀಕ್ಷಿಸಿಕೊಳ್ಳಬೇಕಲ್ಲ. ಅರಿವಿನ ಬಟ್ಟೆ ಧರಿಸಿದರೆ ಅಂತರಂಗದ ಅರಿಷಡ್ವರ್ಗಗಳು ಕಳಚಿ ಬೀಳುವುದಿಲ್ಲ.

ಕಾಯದ ಅರಿವಿನತ್ತ ಮನ ಪಯಣಿಸಲೇಬೇಕು. ಕಾಯದ ಅರಿಷಡ್ವರ್ಗಗಳು ಅರಿವಿನ ಸಹಾಯದಿಂದ ಕಾಯದಲ್ಲಿಯೇ ಹಿಂಗಬೇಕು. ಈ ಕಾಯಕಕ್ಕೆ ಮನ ಕಾಯದ ಅರಿವಿನಲ್ಲಿಯೇ ಸೋತು ದುಡಿಯಬೇಕು. ಅರಿವಿಗೆ ಸೋತ ಮನ ಘನ ಮನವಾಗಬೇಕು. ಉಭಯ ಮೆಟ್ಟಿ ಒಂದಾದ ಅಭವನಿಗೆ ಇಡೀ ಜಗವೆಲ್ಲವೂ ನಮೋ ನಮೋ ಎನ್ನುತ್ತದೆ.

ಬಸವಪ್ರಿಯ ಕೂಡಲ ಚೆನ್ನಬಸವಣ್ಣನೇ ತಾನಾದ ತನುವಿಗೆ ವೇಷವಿಲ್ಲ, ಆಸೆ ಕ್ರೋಧ ರೋಷಗಳಿಲ್ಲ. ಕಾಮ ಮದ ಮತ್ಸರಗಳು ಮೊದಲೇ ಇಲ್ಲ. ಜಂಗಮನೆಂಬ ಅಹಂಕಾರವಿಲ್ಲ, ಭಕ್ತನೆಂಬ ತಾತ್ಸರವಿಲ್ಲ. ಈ ಉಭಯದ ಭೇದವನು ಮಹಾಜ್ಞಾನಿ ಶರಣ ಮಾತ್ರ ಸೂಚಿಸಬಲ್ಲ. ಆಸೆಯಿಂದ ತಿಳಿಯಲು ಬಂದವರನ್ನು ತನ್ನಂತೆ ಮಾಡಿಕೊಳ್ಳಬಲ್ಲ.

13

ಅಖಂಡ ಗೋಳಕಾಕಾರವಾಗಿರ್ದ ಮಹಾಲಿಂಗವೇ ಅಂಗವಿಡಿದಲ್ಲಿ,
ಪ್ರಾಣಲಿಂಗವೆಂದು, ಇಷ್ಟಲಿಂಗವೆಂದು,
ಇವೆರಡರ ಸಂಘಟ್ಟ ಭಾವಲಿಂಗವೆಂದು
ಅಂಗವ ಕುರಿತು ಮೂರು ತೆರನಾಯಿತ್ತು.

ಆಚಾರಾದಿ ಮಹಾಲಿಂಗವೆಂದು ಇಂದ್ರಿಯ ಕುರಿತು ಆರು ತೆರನಾಯಿತ್ತು.
ತತ್ವವ ಕುರಿತು ಮೂವತ್ತಾರು ತೆರನಾಯಿತ್ತು.
ಸ್ಥಲವ ಕುರಿತು ನೂರೊಂದು ತೆರನಾಯಿತ್ತು.
ಕರಣವ ಕುರಿತು ಇನ್ನೂರ ಹದಿನಾರಾಯಿತ್ತು.
ಇಂತೀ ಪಸರಿಸಿದ ಪರಬ್ರಹ್ಮವೇ ಏಕಮಯವಾಗಿ ನಿಂದುದಕ್ಕೆ ದೃಷ್ಟ:
ಲಿಂಗಮದ್ಯೇ ಜಗತ್‌ಸರ್ವಂ ತ್ರೈಲೋಕ್ಯಂ ಸಚರಾಚರಂ
ಲಿಂಗಬಾಹ್ಯ ಪರಂ ನಾಸ್ತಿ ತಸ್ಮಾಲಿಂಗಂ ಪ್ರಪೂಜಯೇತ್
ಇಂತಪ್ಪ ಲಿಂಗವೆ ನೀನಲಾ, ಬಸವಪ್ರಿಯ ಕೂಡಲ ಚೆನ್ನಸಂಗಮದೇವಾ,
ಮಾಂ ತ್ರಾಹಿ, ತ್ರಾಹಿ ಕರುಣಾಕರನೆ.

ಅಖಂಡ ಗೋಳಾಕಾರವಾಗಿರ್ದ ಮಹಾಲಿಂಗವೇ ಅಂಗವಿಡಿದಲ್ಲಿ, ಪ್ರಾಣಲಿಂಗವೆಂದು ಇಷ್ಟಲಿಂಗವೆಂದು, ಇವೆರಡರ ಸಂಗಟ್ಟ ಭಾವಲಿಂಗವೆಂದು ಅಂಗವ ಕುರಿತು ಮೂರು ತೆರನಾಯಿತ್ತು:

ಇಡೀ ಬಯಲ ಬ್ರಹ್ಮಾಂಡವೇ ತನುವಾಗಿ, ಆ ತನುವಿನಲ್ಲಿ ಬಯಲು ಅರಿವೆಂಬ ಮಹಾಲಿಂಗವಾಗಿ ಚುಳುಕಾಯಿತು. ಅದೇ ಪ್ರಾಣಲಿಂಗವಾಯಿತು. ಅದೇ ತನುವಾಗಿ ಗೋಚರಕ್ಕೆ ಬಂದು ಇಷ್ಟಲಿಂಗವೆಂದು ಹೆಸರು ಪಡೆಯಿತು. ಅದರಲ್ಲಿ ಭಾವ ಅಂಕುರಿಸಿ ಭಾವಲಿಂಗವೆಂದು, ಅಂಗ ಮೂರು ತೆರನಾದ ಹೆಸರು ಪಡೆಯಿತು. ಎಂದು ಅಪ್ಪಣ್ಣ ಶರಣರು ಹೇಳಿದ್ದಾರೆ.

ತನುವಿನ ಜ್ಞಾನ ತನುವಿಗೆ ಸರಳವಾಗಿ ತೋರಿಸಿಕೊಟ್ಟ ಅವರ ಮಹಿಮೆ ಅಪಾರವಾದುದು.

ಬಯಲು ಒಂದೇ. ಅದಕ್ಕೆ ಆಕಾರವಿಲ್ಲ. ನಿರಾಕಾರವಾದ ಬಯಲು ಆಕಾರವಾದ ಬೆಡಗನ್ನು ಅದರ ಲೀಲೆಯ ವಿನೋದವನ್ನು ಶರಣರು ವಿವರಿಸಿದ್ದಾರೆ.

ಬಯಲಿನಲ್ಲಿ ಬೆರೆತ ಜಲಜನಕವೂ ಬಯಲು. ಬಯಲಿನಲ್ಲಿ ಬೆರೆತ ಆಮ್ಲಜನಕವೂ ಬಯಲು. ಬಯಲು ಕಾಣುವುದಿಲ್ಲ. ಜಲಜನಕ ಆಮ್ಲಜನಕವೂ ಕಾಣುವುದಿಲ್ಲ. ಬಯಲಿನಲ್ಲಿ ಬೆರೆತ ಇವೆರಡನ್ನು ಬೆರಸಿ ತಾನು ಅದರಲ್ಲಿ ಒಂದಾಗಿ ಬಯಲು ಜಲವಾಯಿತು. ಬಯಲು ಗೋಚರಕ್ಕೆ ಬಂದು, ಬಿಂದುವಾಗಿ ಗರ್ಭ ಸೇರಿ ಬ್ರಹ್ಮಾಂಡವನ್ನೇ ಪಿಂಡಾಂಡದಲ್ಲಿ ಬಂಧಿಸಿ, ಅಂಗವಾಗಿ ಲಿಂಗಾಂಗವಾಗಿ ಭಾವಲಿಂಗವಾಗಿ ಮೂರು ವಿಧವಾಯಿತು.

ಆಚಾರಾದಿ ಮಹಾಲಿಂಗವೆಂದು ಇಂದ್ರಿಯ ಕುರಿತು ಆರು ತೆರನಾಯಿತ್ತು. ತತ್ತ್ವವ ಕುರಿತು ಮೂವತ್ತಾರು ತೆರನಾಯಿತ್ತು:

ಅಂಗ ಒಂದೇ: ಅರಿವಿನ ಆಚಾರದಿಂದ ಮಹಾಲಿಂಗವೆಂದು ಹೆಸರು ಪಡೆಯಿತು. ಈ ಅಂಗವೆಂಬ ಮಹಾಲಿಂಗಕ್ಕೆ ಜ್ಞಾನೇಂದ್ರಿಯಗಳು ಐದು. ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ. ಇವುಗಳನ್ನು ಸದ್ಬಳಕೆ ಮಾಡಿಕೊಳ್ಳುವ ಘನ ಮನದಿಂದಾಗಿ ಅಂಗ ಒಂದಾದರೂ ಆರು ತೆರನಾಯಿತ್ತು. ಇದನ್ನೇ ಶರಣರು ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂದು ಅಂಗವನ್ನು ಆರುಸ್ಥಲಗಳಲ್ಲಿ ವಿಂಗಡಿಸಿದ್ದಾರೆ.

ಮೂಗು-ಆಚಾರಲಿಂಗ, ನಾಲಿಗೆ ಗುರುಲಿಂಗ, ಕಣ್ಣು-ಶಿವಲಿಂಗ, ಚರ್ಮ-ಚರಲಿಂಗ, ಕಿವಿ-ಪ್ರಸಾದಲಿಂಗ, ಭಾವ-ನಿರ್ಭಾವವಾದಾಗಲೇ ಮಹಾಲಿಂಗವೆಂದು ಹೇಳಿದ್ದಾರೆ.

ಮೂಗು ವಾಸನೆಯನ್ನು ಅರಿವಿನಿಂದ ತಿಳಿದಾಗ ತನುವನ್ನು ವಿಚಲಿತಗೊಳಿಸದಿದ್ದರೆ ಅದು ಪ್ರಾಣಲಿಂಗವಾಗುತ್ತದೆ. ನಾಲಿಗೆ-ಅರಿವಿನಿಂದ ರುಚಿಯನ್ನು ಅರಿತು ತನುವಿಗೆ ಸಂಕಟವನ್ನು ಒಡ್ಡದೆ ಸ್ವೀಕರಿಸಿದಾಗ ಅದು ಗುರುಲಿಂಗವಾಗುತ್ತದೆ. ಕಣ್ಣು-ರೂಪ ನೋಡಿ ತನುವಿಗೆ ಸಂಕಟವನ್ನುಂಟು ಮಾಡದೆ ರೂಪದ ನಿರೂಪ ಕಣ್ಣಿಗೆ ದರ್ಶನವಾದಾಗ ಅದು ಶಿವಲಿಂಗವಾಗುತ್ತದೆ. ಚರ್ಮ ಸ್ಪರ್ಶದಿಂದ ತನುವಿಗೆ ಸಂಕಟ ಉಂಟು ಮಾಡದೆ ಮುಟ್ಟಿದ ವಸ್ತು ಚರ್ಮಕ್ಕೆ ಅರಿವಾದಾಗ ಆ ಅರಿವಿನಲ್ಲಿಯೇ ಚರ್ಮ ಸದಾ ಉಳಿದಾಗ ಅದು ಚರಲಿಂಗವಾಗುತ್ತದೆ. ಕಿವಿ-ಕೇಳುವ ಶಬ್ದದಿಂದ ತನುವಿಗೆ ಸಂಕಟ ಒಡ್ಡದೆ, ಅನಾವರಣ ಮಾಡಿ ಅರಿವಿನಿಂದ ಕೇಳಿದಾಗ, ಕೇಳುವ ಶಬ್ದಗಳೆಲ್ಲ ತನುವಿಗೆ ಪ್ರಸಾದವಾಗಿ, ಕಿವಿ ಪ್ರಸಾದಲಿಂಗವಾಗುತ್ತದೆ. ಭಾವದಿಂದ ತನು ಅರಳುತ್ತದೆ. ದುರ್ಭಾವದಿಂದ ತನು ಕೆರಳುತತ್ತದೆ. ಭಾವ ದುರ್ಭಾವಗಳನ್ನು ಕಳೆದುಕೊಂಡು ನಿರ್ಭಾವವಾದಾಗ ಅದು ಮಹಾಲಿಂಗವಾಗುತ್ತದೆ. ಇದು ಆರು ತೆರನಾದ ಅಂಗದ ವಿವರ.

ತತ್ತ್ವವ ಕುರಿತು ಮೂವತ್ತಾರು ತೆರನಾಯಿತ್ತು:

ಮೂವತ್ತಾರು ತತ್ತ್ವಗಳ ಮೂಲಕ ಸರಳವಾಗಿ ಆತ್ಮ ತತ್ವ ತಿಳಿಯಲು ಸಾಧ್ಯವಾಗುವುದು.

ಭೂಮಿ ಜಲ ಅಗ್ನಿ ವಾಯು ಆಕಾಶವೆಂಬ ಪಂಚಭೂತಗಳು. ಶಬ್ದ ಸ್ಪರ್ಶ ರೂಪ ರಸ ಗಂಧವೆಂಬ ಪಂಚ ತನ್ಮಾತ್ರಗಳು. ಕಣ್ಣು ಕಿವಿ ಮೂಗು ನಾಲಿಗೆ ಚರ್ಮವೆಂಬ ಪಂಚಾಜ್ಞಾನೇಂದ್ರಿಯಗಳು. ವಾಕ್ ಪಾಣಿ ಪಾದ ಪಾಯು ಉಪಸ್ಥಾ ಎನ್ನುವ ಪಂಚ ಕರ್ಮೇಂದ್ರಿಯಗಳು. ಜ್ಞಾತೃ ಬುದ್ಧಿ ಮನ ಚಿತ್ತ ನಿರಹಂಕಾರ ಎಂಬ ಪಂಚ ಅಂತಃಕರಣಗಳು. ಇವು ಇಪ್ಪತ್ತೈದು ತತ್ವಗಳು ಇವುಗಳನ್ನು ಆತ್ಮ ತತ್ತ್ವ ಎಂದು ಕರೆಯುವರು. ಕರ್ಮಸಾದಾಖ್ಯ, ಕರ್ತೃ ಸಾದಾಖ್ಯ, ನಿವೃತ್ತಿ ಸಾದಾಖ್ಯ, ಅಮೂರ್ತಿ ಸಾದಾಖ್ಯ, ಶಿವ ಸಾದಾಖ್ಯ, ನಿವೃತ್ತಿ ಕಲೆ, ಪ್ರತಿಷ್ಠಾಕಲೆ, ವಿದ್ಯಾಕಲೆ, ಶಾಂತಿ ಕಲೆ, ಶಾಂತ್ಯತೀತ ಕಲೆ. ಇವು ಹತ್ತು ವಿದ್ಯಾ ತತ್ತ್ವಗಳು ಹಾಗೂ ಒಂದು ಶಿವತತ್ತ್ವದೊಂದಿಗೆ ತನು ಮೂವತ್ತಾರು ತತ್ವಗಳಿಂದ ಕೂಡಿದೆ.

ವ್ಯಾಸ ಮಹರ್ಷಿಗಳು ಮಹಾಭಾರತದಲ್ಲಿ ಒಂದಂಗವನ್ನು ಶ್ರೀ ಕೃಷ್ಣನೆಂಬ ಬ್ರಹ್ಮಾಂಡ ವನ್ನಾಗಿ ಮಾಡಿದರು. ಅದೇ ಒಂದಂಗವನ್ನೇ ಪಾಂಡವರೆಂಬ ಐದಂಗಗಳನ್ನಾಗಿ ಮಾಡಿದರು. ಅದಕ್ಕೆ ಮನವೆಂಬ ದ್ರೌಪದಿಯ ಸೇರಿಸಿದರು. ಕಣ್ಣು, ಕಿವಿ, ಮೂಗು, ಚರ್ಮ, ನಾಲಿಗೆ ಎಂಬ ಪಂಚ ಜ್ಞಾನೇಂದ್ರಿಯಗಳಿಗೆ ಮನ ಒಂದೇ. ಇದು ಪಾಂಡವರಂತೆ ಸಾತ್ವಿಕರನ್ನಾಗಿಯೂ ಮಾಡುತ್ತದೆ. ಕೌರವರಂತೆ ನೂರಾ ಒಂದು ರಕ್ಕಸರನ್ನಾಗಿಯೂ ಮಾಡುತ್ತದೆ. ಕೃಷ್ಣನಂತೆ ಬ್ರಹ್ಮಜ್ಞಾನಿಯನ್ನಾಗಿಯೂ ಮಾಡುತ್ತದೆ. ಅಂತೆಯೇ ವ್ಯಾಸರು ತನುವನ್ನು ತನುವಿನ ಮನವನ್ನು ತನುವಿನ ಅರಿವೆಂಬ ಈ ಮೂರು ಭಾಗಗಳನ್ನು ಸರಿಯಾಗಿ ತಿಳಿಯಲೆಂದು ಮಹಾಭಾರತವನ್ನು ರಚಿಸಿದರು. ಒಂದು ತನುವಿನಲ್ಲಿಯೇ ದುರ್ಯೋಧನರಾಗಿ ನೂರಾ ಒಂದು ಕೌರವರನ್ನು ಸೃಷ್ಟಿಸಿದರು.

ತನು ಬಯಲ ಬೀಜದ ಕುಡಿ; ವಟವೃಕ್ಷ; ಜ್ಯೋತಿರ್ಲಿಂಗ! ಅರಿಯದ್ದಕ್ಕಾಗಿ ಜಾತಿ ಮತ ಪಂಥ ಹೆಣ್ಣು ಗಂಡಾಗಿದೆ ಅರಿತರೆ ನೀನೆ ಲಿಂಗ ಎನ್ನುವ ಅಪ್ಪಣ್ಣನಿಗೆ ಪ್ರಿಯವಾದ ಬಸವಣ್ಣನವರ ವಚನ ನೋಡೋಣ:

ನಮ್ಮ ಶರಣ ಅಂತರಂಗದ ಅಷ್ಟವಿಧಾರ್ಚನೆ ಮಾಡಿ ಸುಜ್ಞಾನ ದೃಷ್ಟಿಯಿಂದ ನೋಡಲು ಆ ಜ್ಯೋತಿರ್ಲಿಂಗ ಒಂದೆರಡಾಯಿತ್ತು. ಎರಡು ಮೂರಾಯಿತ್ತು: ಮೂರಾರಾಯಿತ್ತು: ಆರೊಂಬತ್ತಾಯಿತ್ತು, ಒಂಬತ್ತು ಹದಿನೆಂಟಾಯಿತ್ತು: ಹದಿನೆಂಟು ಮೂವತ್ತಾರಾಯಿತ್ತು; ಆ ಮೂವತ್ತಾರೆ ಇನ್ನೂರ ಹದಿನಾರಾಯಿತ್ತು. ಇನ್ನೂರ ಹದಿನಾರೆ ಸಾವಿರದ ಏಳುನೂರಾ ಎಪ್ಪತ್ತೆಂಟಾಯಿತ್ತು. ಆ ಲಿಂಗಗಳೆ ಶರಣನ ರೋಮದ ಕುಳಿಯಲ್ಲಿ ನಿಂದು ಸರ್ವಾಂಗ ಲಿಂಗವಾಯಿತ್ತು. ಆ ಲಿಂಗ ಶರಣಂಗೆ ಚೈತನ್ಯವಾಯಿತ್ತು. ಆ ಶರಣನೆ ಲಿಂಗಕ್ಕೆ ಚೈತನ್ಯವಾಗಲು, ಶರಣಸತಿ ಲಿಂಗಪತಿಯೆಂಬೆರಡಳಿದು ಒಬ್ಬ ಶರಣನೆ ಉಳಿಯಲು ಆ ಶರಣನ ಪಾದೋದಕವೆ ಲಿಂಗಕ್ಕೆ ಅಭಿಷೇಕವಾಗಿತ್ತು. ಆ ಶರಣನ ಪಾದಕ್ಕರ್ಪಿಸಿದ ಕುಸುಮವೆ ಪ್ರಸಾದ ಪುಷ್ಪವಾಯಿತ್ತು. ಆ ಶರಣನ ಪಾದಕ್ಕರ್ಪಿಸಿದ ಗಂಧಾಕ್ಷತೆಯೆ, ತಾಂಬುಲವೆ ಲಿಂಗ ಪ್ರಸಾದಗಳಾದವು. ಆ ಶರಣನ ಸನ್ನಿದಿಯಲ್ಲಿ ಪ್ರಕಾಶವಾದ ಧೂಪದೀಪಂಗಳೆ ಲಿಂಗದ್ರವ್ಯಂಗಳಾಗಿ, ಆ ಶರಣನ ಪಾದ ಪೂಜಾ ದ್ರವ್ಯವೆ ಲಿಂಗಪೂಜಾದ್ರವ್ಯವಾಗಿ ಆಚರಿಸುತಿರ್ದಲ್ಲಿ ಶರಣಸತಿ ಲಿಂಗಪತಿ ಎಂಬ ನ್ಯಾಯ ಒಂದಾಯಿತ್ತು. ಲಿಂಗ ಹಿರಿದು ಅಂಗ ಕಿರಿದು ಎಂಬ ನ್ಯಾಯ ಇಲ್ಲದೆ ಹೋಯಿತ್ತು. ಅದೆಂತೆಂದಡೆ; ದೀಪದಿಂದ ದೀಪ ಹುಟ್ಟಿದಲ್ಲಿ, ಆವ ಆವ ದೀಪ ಮೊದಲೆಂಬುದು ಕಾಣದಂತೆ: ಸರ್ಪ ಕಚ್ಚಿದ ಮನುಷ್ಯನ ಅಂಗ ವಿಷ ಒಂದು ಠಾವಿನಲ್ಲಿದೆಯೆಂದು ಕುರುಹಿಡಬಾರದಂತೆ, ಲಿಂಗ ಪ್ರಾಣವಾದ ಶರಣಂಗೆ, ಶರಣ ಪ್ರಾಣವಾದ ಲಿಂಗಕ್ಕೆ ಭೇದವಿಲ್ಲ ಹರಗುರು ವಾಕ್ಯದಲ್ಲಿ ಶರಣ ಲಿಂಗದಾಚರಣೆ ಇಂತಿಹುದು. ಈ ಶರಣ ಲಿಂಗದೂಷಣೆಯ ಮಾಡುವ ದ್ರೋಹಿಗಳಿಗೆ ನಾಯಕ ನರಕ ತಪ್ಪದು, ಕೂಡಲಚೆನ್ನಸಂಗಮದೇವಾ.

ತನುವೇ ಲಿಂಗ; ಲಿಂಗವೇ ತನು. ಈ ಲಿಂಗ ತನುವಿನಲ್ಲಿ ಜಗತ್ತು ಚುಳುಕಾಗಿದೆ. ಮುಗಿಲು ಚುಳುಕಾಗಿದೆ. ಪಾತಾಳ ಬ್ರಹ್ಮಾಂಡಗಳು ಚುಳುಕಾಗಿ ತನು ಜಗದಗಲ ಮುಗಿಲಗಲವಾಗಿದೆ. ಮಿಗೆಯಗಲವಾದ ತನು ತನ್ನಗಲಕ್ಕೆ ಬಂದಿದೆ. ತನುವಿನ ಶ್ರೀ ಮುಕುಟ ಬ್ರಹ್ಮಾಂಡದಿಂದಲೂ ಅತ್ತತ್ತ; ತನುವಿನ ಶ್ರೀಪಾದ ಪಾತಾಳದಿಂದಲೂ ಅತ್ತತ್ತ. ಗಮನಕ್ಕೂ ಗೋಚರಕ್ಕೂ ನಿಲುಕದ ಶಕ್ತಿ ತನುವಿನಲ್ಲಿ ಬಂದು ಚುಳುಕಾಗಿದೆ. ಇಂತಪ್ಪ ಲಿಂಗವೇ ತನು. ಇಂತಪ್ಪ ಮಹಾಜ್ಞಾನವನ್ನು ಭೋದಿಸಿದ ಜ್ಞಾನಭಂಡಾರಿ ಬಸವಣ್ಣನಿಗೆ ಪ್ರಿಯನಾಗಿ, ತನುವಿನಲ್ಲಿಯೇ ಸಂಗಮವಾದ ಆ ಮಹಾಜ್ಞಾನವನು ಉಂಡು, ಎನಗೆ ಉಣಬಡಿಸಿದ ಚೆನ್ನಬಸವಣ್ಣನಿಗೆ ನಮೋ ನಮೋ. ಮಹಾಜ್ಞಾನವನು ನನಗೆ ಕರುಣಿಸಿದ ಕರುಣಾಕರನೆ ತ್ರಾಹಿ ಮಾಂ ತ್ರಾಹಿ ಮಾಂ ಎಂದಿದ್ದಾರೆ.

ಚೆನ್ನಬಸವಣ್ಣನವರಿಂದ ಉಂಡ ಜ್ಞಾನ ಪ್ರಸಾದವನ್ನು ಅಕ್ಷರ ರೂಪದಲ್ಲಿ ತನು ಕುಲಕ್ಕೆ ಉಣಬಡಿಸಿದ ಅಪ್ಪಣ್ಣ ಶರಣರಿಗೆ ತ್ರಾಹಿ ಮಾಂ ತ್ರಾಹಿ ಮಾಂ. ಕರುಣಾಕರನಿಗೆ ತ್ರಾಹಿ ಮಾಂ ತ್ರಾಹಿ ಮಾಂ.

14

ಅತ್ತಿಗೆ ಸತ್ತಳು, ನಾದಿನಿ ಮೊರೆಯಲಿಲ್ಲ.
ಅತ್ತೆಯ ಕಣ್ಣು ಅರಿಯಿತ್ತು, ಮಾವನ ಕಾಲು ಮುರಿಯಿತ್ತು.
ಭಾವನ ಸಂದು ಸಂದುವೆಲ್ಲವ ಮುರಿದವು,
ಮೈದುನನ ಮೈಯೆಲ್ಲ ಉರಿಯಿತ್ತು.

ಹಿತ್ತಿಲಗೋಡೆ, ಪಶ್ಚಿಮದ ಬಾಗಿಲು ಬಯಲಾಯಿತ್ತು.
ಇದ ನೋಡಿ ಕೂಡಿ, ನಾ ನಿಶ್ಚಿಂತ ಲಿಂಗೈಕ್ಯನಾದೆನಯ್ಯಾ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ತನು ಪ್ರೀತಿಗೆ ಅರಳುತ್ತದೆ; ಅಸೂಯೆಗೆ ತಲ್ಲಣಿಸುತ್ತದೆ; ಅಹಂಕಾರಕ್ಕೆ ಕುದಿಯುತ್ತದೆ. ದರ್ಪಕ್ಕೆ ಮುರಿಯುತ್ತದೆ. ಭಾವಕ್ಕೆ ಅರಳುತ್ತದೆ. ದುರ್ಭಾವಕ್ಕೆ ಕೆರಳುತ್ತದೆ. ಅಲ್ಲದುದು ತಾಕಿದರೆ ಮೈಯೆಲ್ಲ ಉರಿಯುತ್ತದೆ. ಪಶ್ಚಿಮದ ಬಾಗಿಲು ಬಯಲಾಗುವವರೆಗೆ ತನುವಿನ ಸಂಕಟ ತಪ್ಪಿದ್ದಲ್ಲ.

ಅಪ್ಪಣ್ಣ ಶರಣರ ಈ ವಚನದಲ್ಲಿ; ತನುವಿನ ಸಂಪತ್ತು ತನು ಬಳಕೆ ಮಾಡುವ ಬೆಡಗಿನ ತಂತ್ರಗಾರಿಕೆ ತುಂಬಿದೆ. ಸಂಬಂಧಗಳು ತನುವಿಗೆ ಒಮ್ಮೆ ಸುಖ ಉಂಟು ಮಾಡಿದರೆ ಮತ್ತೊಮ್ಮೆ ದುಃಖ ಉಂಟು ಮಾಡುತ್ತವೆ. ತನುವಿನ ಮಾತು ತನು ತಿಳಿದರೆ ಊರ್ಧ್ವಮುಖಿ ತನು. ತನುವಿನ ಮಾತು ತನು ತಿಳಿಯದಿದ್ದರೆ ಅಧೋಮುಖಿ (ಪಶ್ಚಿಮದ್ವಾರ) ತನು.

ತನುವಿನಲ್ಲಿ ಮಾತು ತಿಳಿಯುವ ಸಂಪತ್ತು ಇದೆ. ಮಾತು ತನುವನ್ನು ಘಾಸಿಗೊಳಿಸುವ ಹಾಗೂ ಕ್ಷಣ (ಹೊಗಳಿಕೆಯ) ಅರಳಿಸುವ ಅಜ್ಞಾನವೂ ಇದೆ. ಮಾತು ತನುವಿನ ಅರಿವು ಸ್ವೀಕರಿಸಿದರೆ ತನು ನಿಶ್ಚಿಂತ! ತನುವಿಗೆ ಬಡಿದ ಮಾತು ಲಿಂಗ (ಅರಿವು) ಸ್ವೀಕರಿಸಿ ತನುವಿನಲ್ಲಿ ಐಕ್ಯ ಮಾಡುತ್ತದೆ. ಆಗ ತನು ಅತ್ತಿಗೆ, ನಾದಿನಿ, ಅತ್ತೆ, ಮಾವನ ಮಾತಿಗೆ ಕೆರಳಲಿಲ್ಲ-ಅರಳಲಿಲ್ಲ.

ಸಂಬಂಧಿಕರ ಮಾತುಗಳಿಗೆ ಒಮ್ಮೆ ಅರಳುವ ಮತ್ತೊಮ್ಮೆ ಕೆರಳುವ ಭಾವ ತನುವಿನಲ್ಲಿದೆ. ಮನ, ಮಾತು ಸ್ವೀಕರಿಸಿ ತನುವಿನಲ್ಲಿಯ ಭಾವಕ್ಕೆ ತಲುಪಿಸುತ್ತದೆ. ಮಾತು ಪರೀಕ್ಷಿಸಿ ಸುಖದ ಮಾತಾದರೆ ಭಾವ ತನುವನ್ನು ಅರಳಿಸುತ್ತದೆ; ದುಃಖದ ಮಾತಾದರೆ ತನುವನ್ನು ಕೆರಳಿಸುತ್ತದೆ. ಭಾವಕ್ಕೆ ಸುಖ ದುಃಖಗಳ ಪರಿಚಯವಿದೆಯೇ ಹೊರತು ಮಾತು ಪರೀಕ್ಷಿಸಿ; ಮಾತಿನಲ್ಲಿ ಅರಿವಿದೆಯೆಂದು ತಿಳಿಯುವ ಶಕ್ತಿ ಭಾವಕ್ಕಿಲ್ಲ.

ಭಾವಕ್ಕೆ-ದುರ್ಭಾವಕ್ಕೆ ತನುವನ್ನು ಒಳಗು ಮಾಡುವ ಭಾವದ ಸಂದು ಸಂದುವೆಲ್ಲವ ಮುರಿದು ನಿರ್ಭಾವ ಮಾಡುವ ಶಕ್ತಿ ಅರಿವಿಗಿದೆ. ಆ ಅರಿವೆಂಬ ಗುರುದೇವನು ಕೂಡಾ ತನುವಿನಲ್ಲಿಯೇ ಇದ್ದಾನೆ.

ಮನವೆಂಬ ಭಕ್ತ ಅರಿವೆಂಬ ಗುರುದೇವನನ್ನು ನೋಡಿ ಆತನನ್ನು ಕೂಡಿದರೆ ಸಾಕು. ಆಗ ತನು ಮಾತಿನಿಂದ ಅರಳುವುದಿಲ್ಲ. ಮಾತಿನಿಂದ ಕೆರಳುವುದಿಲ್ಲ; ಮಾತು ಅರಿವಿನಿಂದ ನಪುಂಸಕವಾಗಿ ಅರಿವಿನ ಮಾತಾಗಿ ತನುವಿಗೆ ಪ್ರಸಾದವಾಗಿ ತನುವಿನಲ್ಲಿಯೇ ಐಕ್ಯವಾಗುತ್ತದೆ.

ಅತ್ತಿಗೆ ನಾದಿನಿ ಅತ್ತೆ ಮಾವ ಭಾವ ಮೈದುನ ಸಂಬಂಧಗಳು ಕಳಚಿ ಬಿದ್ದು ಅರಿವಿನ ತನು ಗೋಚರಕ್ಕೆ ಬರುತ್ತದೆ. ರಭಸದ ಮಾತುಗಳು ಕಿವಿಯಲ್ಲಿ ಸೋಸಿ ಅರಿವಾಗಿ ತನುವಿಗೆ ಪ್ರಸಾದವಾಗಿ ತನುವಿನಲ್ಲಿ ಐಕ್ಯವಾದಾಗ ತನು ನಿಶ್ಚಿಂತ; ಅರಳಲಿಲ್ಲ ಕೆರಳಲಿಲ್ಲ.

ಇದನ್ನು ಸಾಕ್ಷಿ ಭೂತವಾಗಿ ನೋಡಿ ಆ ಅರಿವೆಂಬ ಗುರುವಿನಲ್ಲಿ ಕೂಡಿ ನಾನು ನಿಶ್ಚಿಂತನಾದೆ; ಲಿಂಗೈಕ್ಯನಾದೆನಯ್ಯಾ ಎಂದು ಅಪ್ಪಣ್ಣ ಶರಣರು ಪ್ರಮಾಣೀಕರಿಸಿದ್ದಾರೆ.

ತನುವಿನಲ್ಲಿರುವ ಅರಿವಿನಿಂದ ತನುವಿನ ಅಜ್ಞಾನ ಕಳೆದುಕೊಂಡು; ತಾನು ಜ್ಞಾನಿಯೆಂದು ಘೋಷಿಸಿಕೊಂಡು; ತಾನೇ ಅರಿವಿನ ಪ್ರಮಾಣ ಪತ್ರ ಪಡೆದುಕೊಂಡು ನಿಶ್ಚಿಂತನಾಗುವ ಕೆಲಸ. ತನುವಿನ ಅರಿವು ತನು ಪಡೆಯುವ ಯಾವ ಪದವಿಯ ಪತ್ರವನ್ನು ಸಹಿಸದು. ತನುವೇ

ಬ್ರಹ್ಮನಿದ್ದಾಗ ಅದಕ್ಕಾರು ಪದವಿಯ ಕೊಡಬೇಕು? ಭ್ರಮೆ ಕಳೆದುಕೊಂಡು ತಾನೇ ಬ್ರಹ್ಮನಾಗಬೇಕು.

15

ಅನ್ನ ಉದಕವ ಕೊಂಡೆಹೆನೆಂದಡೆ ಭೂಮಿಯ ಹಂಗು
ಹೊನ್ನ ಹಿಡಿದಿಹೆನೆಂದಡೆ ಲಕ್ಷ್ಮಿಯ ಹಂಗು.
ಹೆಣ್ಣ ಹಿಡಿದಿಹೆನೆಂದಡೆ ಕಾಮನ ಹಂಗು.
ಹಾಲ ಕೊಂಡಿಹೆನೆಂದಡೆ ಹಸುವಿನ ಹಂಗು.
ಹೂ ಫಲಾದಿಗಳ ಕೊಂಡಿಹೆನೆಂದಡೆ ತರುಮರದ ಹಂಗು.
ತರಗೆಲೆಯ ಕೊಂಡಿಹೆನೆಂದಡೆ ವಾಯುವಿನ ಹಂಗು.
ಬಯಲಾಪೇಕ್ಷೆಯ ಕೊಂಡಿಹೆನೆಂದಡೆ ಆಕಾಶದ ಹಂಗು.
ಇದನರಿದು, ಇವೆಲ್ಲವನು ಕಳೆದು,
ವಿಶ್ವ ಬ್ರಹ್ಮಾಂಡಕ್ಕೆ ನಡೆನುಡಿ ಚೈತನ್ಯವಾದ ಜಂಗಮ ಲಿಂಗದ ಪಾದವಿಡಿದು,
ಅವರು ಬಿಟ್ಟ ಪ್ರಸಾದ, ಉಟ್ಟ ಮೈಲಿಗೆಯ, ಉಗುಳ ತಾಂಬೂಲವ,
ಈ ತ್ರಿವಿಧವ ಕೊಂಡೆನ್ನ ಭವಂ ನಾಸ್ತಿಯಾಯಿತ್ತು.
ಮರ್ತ್ಯಲೋಕದ ಮಹಾಗಣಂಗಳು ಸಾಕ್ಷಿಯಾಗಿ,
ದೇವಲೋಕದ ದೇವಗಣಂಗಳು ಸಾಕ್ಷಿಯಾಗಿ,
ನಾ ನಿಜ ಮುಕ್ತನಾದೆನಯ್ಯಾ, ನೀವು ಸಾಕ್ಷಿಯಾಗಿ,
ಬಸವಪ್ರಿಯ ಕೂಡಲ ಚೆನ್ನಸಂಗನಬಸವಣ್ಣಾ.

ಅನ್ನ ನೀರು ಹೊನ್ನು ಭೂಮಿಯ ಹಂಗು. ವಿಷಯ ಕಾಮನ ಹಂಗು. ಹಾಲು ಹಸವಿನ ಹಂಗು. ಪತ್ರಿ ಪುಷ್ಪ ಫಲ ಗಿಡ ಮರಗಳ ಹಂಗು. ತರಗೆಲೆಗಳು ವಾಯುವಿನ ಹಂಗು. ಬಯಲಿನ ಆಪೇಕ್ಷೆ ಕೂಡಾ ಆಕಾಶದ ಹಂಗು. ಈ ನಿಯಮಗಳ ಹಿಡಿದು ಪೂಜಿಸುವ ಪೂಜೆ, ಮಾಡುವ ದಾನ, ಬೇಡುವ ಭಿಕ್ಷೆ ಜ್ಞಾನಕ್ಕೆ ಬಹುದೂರ. ಅರಿತರೆ ಅನ್ನ ನೀರು ಹೊನ್ನು ಭೂಮಿಯ ಕೊಡುಗೆ; ಅದು ತನುವಿನದ್ದಲ್ಲ. ಅದನ್ನು ಕೊಟ್ಟು ಜ್ಞಾನ ಪಡೆಯಲು ಸಾಧ್ಯವಿಲ್ಲ. ಹಾಲು ಹಸುವಿನದು. ತುಪ್ಪ ಮೊಸರು ಬೆಣ್ಣೆ ಮಜ್ಜಿಗೆ ಹಾಲು ಗಿಣ್ಣ ಕೊಟ್ಟು ಜ್ಞಾನ ಪಡೆಯಲು ಬರುವುದಿಲ್ಲ.

ಪತ್ರಿ ಪುಷ್ಪ ಫಲಗಳು ಗಿಡಮರಗಳದ್ದು. ಇವುಗಳನ್ನು ಅರ್ಪಿಸಿ ಜ್ಞಾನ ಪಡೆಯಲು ಬರುವುದಿಲ್ಲ. ಪರಿಮಳಧೂಪ ತರಗೆಲೆಗಳು ಗಾಳಿಯದ್ದು. ಅವುಗಳನ್ನು ಕೊಟ್ಟು ಜ್ಞಾನ ಪಡೆಯಲು ಬರುವುದಿಲ್ಲ. ಬಯಲನ್ನು ಬೇಡಬೇಕೆಂದರೆ ಅದು ಆಕಾಶದ ಹಂಗು!

ಇದನರಿತು ಇವೆಲ್ಲವನು ಕಳೆದು ಭೂಮಿ, ಅಗ್ನಿ ಜಲ ವಾಯು ಆಕಾಶಗಳಿಗೆ, ತರುಮರ ಗಿಡಗಳಿಗೆ, ಪಶು ಪಕ್ಷಿ ಪ್ರಾಣಿ ಜಲಚರಗಳಿಗೆ, ಉರುಗ ಕೀಟಗಳಿಗೆ ವಿಶ್ವ ಬ್ರಹ್ಮಾಂಡದ ನಡೆ ನುಡಿ ಚೈತನ್ಯಕ್ಕೆ ಕಾರಣವಾದ ತನುಗಳಲ್ಲಿ ಚುಳುಕಾದ ಮಹಾಜ್ಞಾನವೆಂಬ ಜಂಗಮಲಿಂಗದ ಅರಿವಿನ ಪಾದ ಹಿಡಿದು ಮುಕ್ತನಾದೆ. ಆ ಜಂಗಮ ಉಂಡು ಬಿಟ್ಟ ಪ್ರಸಾದವ ಉಂಡು ಧನ್ಯ

ನಾದೆ. ಬಿಟ್ಟ ಮೈಲಿಗೆಯ ತೊಟ್ಟು ಮಾನ ಮುಚ್ಚಿಕೊಂಡೆ. ಆತ ಉಗುಳಿದ ತಾಂಬೂಲವ ಮೆದ್ದು ಎನ್ನ ಅಜ್ಞಾನದ ಜನನ ಮರಣಗಳ ರೋಗ ಕಳೆದು ಹೋಯಿತು.

ಮರ್ತ್ಯಲೋಕದ ಮಹಾಗಣಂಗಳು, ದೇವಲೋಕದ ಮಹಾಗಣಂಗಳು ಸಾಕ್ಷಿಯಾಗಿ ನಾ ನಿಜ ಮುಕ್ತನಾದೆನಯ್ಯಾ, ನೀವು ಸಾಕ್ಷಿಯಾಗಿ, ಬಸವಪ್ರಿಯ ಕೂಡಲಚೆನ್ನ ಸಂಗನಬಸವಣ್ಣಾ.

ತನುವಿನಲ್ಲಿರುವ ಅರಿವಿನಿಂದಲೇ ತನುವಿಗೆ ಬೇಕಾದ ಆಹಾರ ಜಲಪಾನೀಯಗಳು ಸೃಷ್ಟಿಯಾಗಿವೆ. ಅರಿವಿನಿಂದಲೇ ಭೂಮಿಯೊಳಗಿದ್ದ ಹಳದಿ ಲೋಹ ಹೇಮವೆಂದು ಹೆಸರು ಪಡೆದಿದೆ. ಭೂಮಿಯ ಮೇಲೆ ಬೆಳೆದ ಫಲ ಪುಷ್ಪ ಪತ್ರಿ ವನಸ್ಪತಿಗಳು ಅರಿವಿನಿಂದಲೇ ಹೆಸರು ಪಡೆದಿವೆ. ಹಸುವಿನ ಹಾಲು ಅದರ ಬಳಕೆ ಕೂಡಾ ಅರಿವಿನಿಂದಲೇ ಆಗಿದೆ. ಹೀಗಿದ್ದುದನ್ನು ಮರೆತು; ಮನ, ಇವುಗಳನ್ನೇ ದಾನ ಕೊಟ್ಟು ಅಜ್ಞಾನದಿಂದ ಮುಕ್ತನಾಗಲು ಹೊರಟಿದೆ. ಇದು ಸಾಧ್ಯವಾಗದ ಮಾತು ಎಂದಿದ್ದಾರೆ ಅಪ್ಪಣ್ಣ ಶರಣರು.

ಮನ, ತನುವಿನಲ್ಲಿರುವ ಅರಿವೆಂಬ ಗುರುವನ್ನು ಅರಿತರೆ; ತನು, ಮರ್ತ್ಯ ಲೋಕದ ಮಹಾಮಾನವ; ದೇವಲೋಕದ ದೇವಾನುದೇವ! ಆ ದೇವನ ಸಾಕ್ಷಿಯಾಗಿ ಆತ ಮೆದ್ದು ಉಗುಳಿದ ತಾಂಬೂಲ ಮೆದ್ದು ನಿಜಮುಕ್ತನಾದೆ; ಇದನ್ನು ನನಗೆ ತಿಳಿಹೇಳಿದ ಬಸವಣ್ಣನಿಗೆ ಪ್ರಿಯನಾದ ಚೆನ್ನಬಸವಣ್ಣನ ಸಾಕ್ಷಿಯಾಗಿ ಎಂದಿದ್ದಾರೆ ಅಪ್ಪಣ್ಣ ಶರಣರು.

16

ಅನ್ನವನಿಕ್ಕಿದರೇನು? ಹೊನ್ನ ಕೊಟ್ಟರೇನು?
ಹೆಣ್ಣು ಕೊಟ್ಟರೇನು? ಮಣ್ಣು ಕೊಟ್ಟರೇನು? ಪುಣ್ಯ ಉಂಟೆಂಬರು.
ಅವರಿಂದಾದೊಡವೆ ಏನೂ ಅವರೀವುದಕ್ಕೆ?
ಇದಕ್ಕೆ ಪುಣ್ಯವಾವುದು ಪಾಪವಾವುದು?
ನದಿಯ ಉದಕವ ನದಿಗೆ ಅರ್ಪಿಸಿ,
ತನತನಗೆ ಪುಣ್ಯ ಉಂಟೆಂಬ ಬಡ ಹಾರುವರಂತೆ,
ಸದಮಳ ಶಾಶ್ವತ ಮಹಾಘನಲಿಂಗವನರಿಯದೆ,
ಇವೇನ ಮಾಡಿದರೂ ಕಡೆಗೆ ನಿಷ್ಫಲವೆಂದಾತ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಅನ್ನ ಹೊನ್ನು ಹೆಣ್ಣು ಮಣ್ಣು ಕೊಟ್ಟು ಪುಣ್ಯ ಪಡೆಯಲು ಸಾಧ್ಯವಿಲ್ಲ. ಅದು ಅವರಿಂದಾದ ವಸ್ತುವೂ ಅಲ್ಲ. ಪುಣ್ಯಪಾಪಗಳೆಂಬುದೇ ಇಲ್ಲ. ನದಿಯಲ್ಲಿ ನಿಂತು; ನದಿಯಲ್ಲಿಯೇ ಮಿಂದು; ನದಿಯ ನೀರು ನದಿಗೆ ಅರ್ಪಿಸಿ ತನಗೆ ಪುಣ್ಯ ದೊರೆಯಿತೆಂದು ಅಂದುಕೊಂಡರೆ ಅದೊಂದು ಅಜ್ಞಾನದ ಸಂಪ್ರದಾಯವೇ ಹೊರತು ಪುಣ್ಯವಲ್ಲ.

ಅನ್ನ ಹೊನ್ನು ಮಣ್ಣು ದಾನ ಮಾಡಿದರೆ ಪುಣ್ಯವೆಂದು ಹೇಳುವರು. ಹಾಗೆಯೇ ಕನ್ಯಾದಾನ ಮಾಡುವುದೂ ಪುಣ್ಯವೆಂದು ಹೇಳುವರು. ದಾನ ಯಾರಿಗೆ ಮಾಡಬೇಕು? ತಾನು ದಾನಿಯಾಗಿ ದಾನ ಮಾಡಲು ಹೋದರೆ ಆ ವಸ್ತುಗಳು ತನ್ನದೇ ಆದ ಪ್ರೊಡೆಕ್ಟ್ ಅಲ್ಲ; ತಾನು ಉತ್ಪಾದಿಸಿದ ವಸ್ತುಗಳಲ್ಲ. ಹಸು ಹಾಲು ಕೊಡುತ್ತದೆ; ಹಾಲು ಅದರ ಉತ್ಪನ್ನ! ಮನುಷ್ಯ

ಹಾಗೇನಾದಾರೂ ತಾನೇ ಉತ್ಪನ್ನ ಮಾಡಿದ ವಸ್ತುಗಳಿದ್ದರೆ ಕೊಟ್ಟು ದಾನಿ ಎನ್ನಿಸಿಕೊಳ್ಳಬಹುದು.

ತನ್ನದಲ್ಲದ ವಸ್ತುಗಳನ್ನು ತನ್ನಂತೆಯೇ ಇರುವ ಮತ್ತೊಬ್ಬರಿಗೆ ಕೊಟ್ಟು ದಾನಿ ಎನ್ನಿಸಿಕೊಳ್ಳುವುದು; ತನ್ನಂತೆಯೇ ಇರುವ ತನುವನ್ನು ಭಿಕ್ಷುಕ ಎಂದು ಕರೆಯುವುದು ಮೂರ್ಖತನವಲ್ಲವೆ? ಬಳಕೆಗೆ ಹೆಚ್ಚಾದ ವಸ್ತುಗಳನ್ನು ಕೊಡಬಹುದು; ಅಥವಾ ಅವುಗಳನ್ನು ಪಡೆಯಬಹುದು. ಕೊಟ್ಟು - ಕೊಳ್ಳುವುದು ಪುಣ್ಯ ಪಾಪ ಹೇಗಾದೀತು? ನದಿಯ ನೀರು ನದಿಗೆ ಚೆಲ್ಲಿ ವರ ಪಡೆಯುವುದೆಂದರೇನು?

ಜ್ಞಾನ ತನುವಿನಲ್ಲಿಯೇ ಇದೆ. ಅದನ್ನು ಕೊಡಲು ಬರುವುದಿಲ್ಲ; ತೆಗೆದುಕೊಳ್ಳಲು ಬರುವುದಿಲ್ಲ. ಜ್ಞಾನ ಮತ್ತು ಮನ ತನುವಿನಲ್ಲಿಯೇ ಕೂಡಿವೆ. ಕೊಟ್ಟು ದಾನಿ ಎಂದು ಬೀಗುವ ಮನ; ತೆಗೆದುಕೊಂಡು ಭಿಕ್ಷುಕ ಎಂದು ಕುಗ್ಗುವ ಮನಗಳೆರಡೂ ತನುವಿನಲ್ಲಿಯೇ ಯೋಚಿಸಬೇಕು.

ದಾನಿ-ಭಿಕ್ಷುಕ ಎನ್ನುವುದೊಂದು ಅಜ್ಞಾನದ ಅಮಲು! ಪಡೆದವನು ಹೊಗಳುತ್ತಾನೆ ಕೊಟ್ಟವನು ಬೀಗುತ್ತಾನೆ! ಮನ ಈ ಅಮಲಿನಿಂದ ಹೊರಬಂದು ತನುವಿನಲ್ಲಿಯೇ ತನ್ಮಯವಾದ ಸತ್ಯದ ಅಮಲು ಎನ್ನುವ ಸದಮಳ ಮಹಾಜ್ಞಾನವನು ಅರಿತು ಆ ಮಹಾಜ್ಞಾನವೇ ತಾನಾಗಬೇಕಿದೆ.

ಇವೇನ ಮಾಡಿದರೂ ಕಡೆಗೆ ನಿಷ್ಫಲವೆಂದಾತ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ:

ಅಪ್ಪಣ್ಣ ಶರಣರು ಮಹಾಜ್ಞಾನಿಗಳು ಜ್ಞಾನವನ್ನೇ ಉಂಡು ಜ್ಞಾನವನ್ನೇ ಡೇಗಿದ್ದಾರೆ. ಜ್ಞಾನದ ಫಲವನ್ನು ವಚನ ರೂಪದ ಬುತ್ತಿಯ ಸೂತ್ರದಲ್ಲಿ ಇಟ್ಟಿದ್ದಾರೆ. ಬಿಚ್ಚಿ ಉಂಡ ಮನ ಜ್ಞಾನಿಯಾಗುವುದರಲ್ಲಿ ಸಂದೇಹವೇ ಇಲ್ಲ.

17

ಅನುಭಾವ ಅನುಭಾವವೆಂದು ನುಡಿದಾಡುತಿಪ್ಪಿರಿ,
ನಿಮ್ಮ ತನುವಿನಿಚ್ಛೆಗೆ ಅನುವಿಗೆ ಬಂದಂತೆ,
ಬಿನುಗರ ಮುಂದೆ ಬೊಗಳಿಯಾಡುವ ನಿನಗಂದೆ ದೂರ.
ಅನುಭಾವವೆಂತೆಂದರೆ, ನಮ್ಮ ಹಿಂದನರಿದು,
ಮುಂದೆ ಲಿಂಗದಲ್ಲಿ ನೋಡುವ ಶರಣರ
ಅಂಗವ ಸೋಂಕಿ ನಾ ಬದುಕಿದೆ ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣ

ಶರಣರ ಅನುಭಾವ ಮನಕ್ಕೆ ಬಲು ಸುಖ. ಅನುಭಾವ ಕೇಳಿ ಕೇಳಿ; ಮನ ತನ್ನ ಅನುವಿಗೆ ತಂದುಕೊಂಡು ನುಡಿದು ಸುಖಿಸುತ್ತದೆ. ತಿಳಿಯದ ತನುಗಳ ಮುಂದೆ ಬೊಗಳಿ ಬೊಗಳಿ ಬಾಯಿಯ ಅನುವಿಗೆ ಬಂದಿತೆ ಹೊರತು; ಅನುಭಾವ ತನುವಿಗೆ ದೂರವಾಯಿತು.

ನೋಡುವ ಕಣ್ಣು ಬೇಡುವುದನ್ನು ಬಿಡಲಿಲ್ಲ. ಕೇಳುವ ಕಿವಿಗೆ ಶಬ್ದ ಪ್ರಸಾದವಾಗಲಿಲ್ಲ. ಸ್ಪರ್ಶಿಸುವ ಚರ್ಮದ ಅಜ್ಞಾನ ಕಳೆಯಲಿಲ್ಲ. ಮೂಸಿಸುವ ಮೂಗಿನ ಅಜ್ಞಾನ ನಿರ್ನಾಮವಾಗಲಿಲ್ಲ. ರುಚಿಸುವ ನಾಲಿಗೆ ಪದಾರ್ಥದಾಸೆಗಾಗಿ ತನುವನ್ನು ಕುಣಿಸುವುದು ನಿಲ್ಲಲಿಲ್ಲ. ತನುವಿನ ಚೇಷ್ಟೆಗಳು

ಮನಕ್ಕೆ ಮನದಟ್ಟಾಗಲಿಲ್ಲ. ಬಾಯಿಗೆ ಬಂದ ಅನುಭಾವದ ನುಡಿಗಳು ತನುವಿಗೆ ಬರಲಿಲ್ಲ.

ನಮ್ಮ ಹಿಂದನರಿದು, ಮುಂದೆ ಲಿಂಗದಲ್ಲಿ ನೋಡುವ ಶರಣರ ಅಂಗವ ಸೋಂಕಿ ನಾ ಬದುಕಿದೆ ಕಾಣಾ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ:

ಮನದಿಂದ ಕೇಳಿದ ಅನುಭಾವ ಬಾಯಿಗೆ ಅಜ್ಞಾನ; ಅದು ತನುವಿಗೆ ಪ್ರಸಾದ ಮಾಡಿಕೊಳ್ಳಲರಿಯದು. ಮನದಿಂದ ನೋಡಿದ ನೋಟ ಕಣ್ಣಿಗೆ ಅಜ್ಞಾನ; ಅದು ಪ್ರಸಾದ ಮಾಡಿಕೊಳ್ಳಲರಿಯದು. ಮನದಿಂದ ಮುಟ್ಟಿದ ಸ್ಪರ್ಶ, ಮನದಿಂದ ರುಚಿಸಿದ ಪದಾರ್ಥ ಅದು ಪ್ರಸಾದ ಮಾಡಿಕೊಳ್ಳಲರಿಯದು.

ಮನ ತನುವಿನ ಜ್ಞಾನವನು ಅರಿತು; ಆ ಜ್ಞಾನದಿಂದ ನೋಡಿದ ನೋಟವೆಲ್ಲ ಲಿಂಗ ನೋಟ. ಮಹಾಜ್ಞಾನದ ನೋಟ! ಅದು ಬಾಯಿಗೆ ಬರಲಿಲ್ಲ. ತನುವಿನಲ್ಲಿಯೇ ತನ್ಮಯವಾದ ವಿರಾಟ ಸ್ವರೂಪದ ನೋಟ! ಅಂತಹ ಮಹಾಶರಣರ ಅಂಗವ ಸೋಂಕಿ ಬದುಕಿದೆನು ಎಂದಿದ್ದಾರೆ ಅಪ್ಪಣ್ಣ ಶರಣರು.

18

ಅಯ್ಯಾ ಅರಗಿನ ಮರದ ಮೇಲೆ ಗಿರಿ ಹುಟ್ಟಿತಯ್ಯಾ.
ಆ ಗಿರಿಯ ತಪ್ಪಲಲ್ಲಿ ಸಪ್ತ ಶರದಿಗಳಿಪ್ಪವು.
ಆ ಶರದಿಯ ನಡುವೆ, ತರು ಮರ ಗಿರಿ ಗಹ್ವರ ಖಗಮೃಗಂಗಳಿಪ್ಪವು.
ಈ ಭಾರವ ತಾಳಲಾರದೆ, ಅರಗಿನ ಮರದಡಿಯಲಿರ್ದ
ಪರಮಜ್ಞಾನವೆಂಬ ಉರಿಯೆದ್ದು,
ಅರಗಿನ ಮರ ಕರಗಿ ಕುಸಿಯಿತ್ತು,
ಗಿರಿ ನೆಲಕ್ಕೆ ಬಿದ್ದಿತ್ತು, ಸಪ್ತ ಶರದಿಗಳು ಬತ್ತಿದವು.
ಅಲ್ಲಿರ್ದ ತರುಮರ ಖಗ ಮೃಗಾದಿಗಳು ಗಿರಿಗಹ್ವರವೆಲ್ಲ ದಹನವಾದವು.
ಇದ ಕಂಡು, ನಾ ನಿಮ್ಮೊಳು ಬೆರಗಾಗಿ ನೋಡುತಿರ್ದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ತನು ಬೆಡಗು ಬಿನ್ನಾಣಗಳಿಂದ ತುಂಬಿದ ಮಹಾಜ್ಞಾನ ಪರ್ವತ. ಸರಳವಾಗಿ ಹೇಳಿದರೆ ಉದಾಸೀನ; ಜಟಿಲವಾದ ಮಾತುಗಳ ತಿಳಿಯವುದಿಲ್ಲ! ಅಪ್ಪಣ್ಣ ಶರಣರ ಈ ವಚನ ಸಂಪೂರ್ಣ ಬೆಡಗಿನಿಂದ ತುಂಬಿದೆ.

ತನು ಅರಗಿನ ಮರ; ಅದರಲ್ಲಿ ಅಗ್ನಿಯೂ ಇದೆ. ಜ್ಞಾನದ ಗಿರಿಯೂ ಇದೆ; ಸಪ್ತ ಸಾಗರಗಳೂ ಇವೆ. ತರುಮರ ಗಿರಿ ಗಹ್ವರ ಖಗಮೃಗಗಳೂ ಇವೆ. ತಿಳಿಯದಿದ್ದರೆ ಇದರ ಭಾರ ತಾಳಲಾರ, ಅರಗಿನ ಮರದಲ್ಲಿರುವ ಅಗ್ನಿ ಅರಗನ್ನೇ ಸುಟ್ಟು ಸತ್ಯ ತಿಳಿಯಲಾರದೆ ಸತ್ತು ಹೋಗುತ್ತದೆ.

ತಿಳಿದರೆ ಮರದ ಅರಗು ಬೆಂದು; ಫಲಭರಿತ ಭೋದಿವೃಕ್ಷವಾಗುತ್ತದೆ. ನುಡಿಯುತ್ತಾ ನಡೆದಾಡುತ್ತಾ, ವೃಕ್ಷದ ಮಾಗಿದ ಜ್ಞಾನದ ಫಲಗಳನ್ನು ಉಣಬಡಿಸುತ್ತಾ ಬೇರಿಲ್ಲದ ಭೋದೀ ವೃಕ್ಷವಾಗುತ್ತದೆ.

ಜಲ ಬಿಂದು ಗರ್ಭದಲ್ಲಿ ಹೊಕ್ಕು; ಆ ಜಲವೇ ರಸ, ರಕ್ತ, ಮಾಂಸ, ಮೇದಸ್ಸು, ಎಲಬು, ಮಜ್ಜೆ, ಶುಕ್ಲ ಎನ್ನುವ ಶರದಿ ರೂಪದ ಸಪ್ತ ಹೆಸರುಗಳನ್ನು ಪಡೆದು ತನುವಾಗಿ ಗರ್ಭದಿಂದ ಹೊರಬಂದಿದೆ. ತನು ಅರಗಿನ ಮರವೂ ಹೌದು; ಜ್ಞಾನದ ಗಿರಿಯೂ ಹೌದು. ಈ ಸಪ್ತ ಶರದಿಯಲ್ಲಿ, ತನುವ್ಯಸನ, ಮನವ್ಯಸನ, ಧನವ್ಯಸನ, ರಾಜವ್ಯಸನ, ಉತ್ಸಾಹವ್ಯಸನ, ಸೇವಕ ವ್ಯಸನ, ವಿಷಯವ್ಯಸನ ಈ ಸಪ್ತ ವ್ಯಸನಗಳು ಹುಟ್ಟಿದವು.

ತನುವೆಂಬ ಅರಗಿನ ಮರದಡಿಯಲ್ಲಿದ್ದ ಪರಮಜ್ಞಾನದ ಉರಿಯಿಂದ ಅರಗಿನ ಮರ ಕರಗಿದರೆ ಅದು ಜ್ಞಾನದ ಮರವಾಗುತ್ತದೆ. ಅಲ್ಲಿದ್ದ ಸಪ್ತವ್ಯಸನಗಳು ಸುಟ್ಟು ಬೂದಿಯಾಗುತ್ತವೆ. ಖಗಮೃಗಾದಿಗಳೂ ಸುಟ್ಟು ಬೂದಿಯಾಗುತ್ತವೆ.

ಜ್ಞಾನ ಎನ್ನುವುದು ಬಯಲು. ಬಯಲ ಗರ್ಭದಲ್ಲಿದ್ದ ಜಲಜನಕ ಆಮ್ಲಜನಕವನ್ನು ಬಯಲು ಬಂಧಿಸಿ ಜಲಮಾಡಿ; ಆ ಜಲದಲ್ಲಿ ತಾನಿದ್ದು ಗರ್ಭಸೇರಿ ಜ್ಞಾನದ ಶಿಶುವಾಯಿತು. ಈ ಬೆಳಕಿನ ನೆರಳೇ ಮನವಾಯಿತು. ಈ ಮನವೇ ಅಜ್ಞಾನದ ಸಪ್ತ ಸಾಗರವಾಯಿತು. ಅರಗಿನ ಮರವಾಯಿತು. ಖಗಮೃಗವಾಯಿತು; ಗಿರಿ ಗಹ್ವರವಾಯಿತು.

ಜ್ಞಾನದ ಉರಿ ತಾಗಿ ಅಲ್ಲಿದ್ದ ತರುಮರ ಖಗಮೃಗಾದಿಗಳು ಗಿರಿಗಹ್ವರವೆಲ್ಲ ದಹನವಾದವು. ಚೆನ್ನಬಸವಣ್ಣನವರ ಬೆಡಗಿನ ಜ್ಞಾನದ ಈ ಕ್ರಿಯೆಗೆ ಒಳಗಾಗಿ ಬೆರಗಾಗಿ ನೋಡಿ; ಆ ಮಹಾಜ್ಞಾನವೇ ತಾವಾಗಿದ್ದಾರೆ ಅಪ್ಪಣ್ಣ ಶರಣರು.

19

ಅಯ್ಯಾ ಆರೂ ಇಲ್ಲದ ಅರಣ್ಯದಲ್ಲಿ,
ನಾನಡಿಯಿಟ್ಟು ನಡೆವುತ್ತಿರ್ದೆನಯ್ಯಾ.
ಮುಂದೆ ಬರೆ ಬರೆ ಮಹಾಸರೋವರವ ಕಂಡೆ.
ಸರೋವರದೊಳಗೊಂದು ಹಿರಿಯ ಮೃಗವ ಕಂಡೆ.
ಆ ಮೃಗಕ್ಕೆ ಕೊಂಬುಂಟು ತಲೆಯಿಲ್ಲ,
ಬಾಯುಂಟು ಕಣ್ಣಿಲ್ಲ, ಕೈಯುಂಟು ಹಸ್ತವಿಲ್ಲ,
ಕಾಲುಂಟು ಹೆಜ್ಜೆಯಿಲ್ಲ, ಒಡಲುಂಟು ಪ್ರಾಣವಿಲ್ಲ.
ಇದಕಂಡು ನಾ ಹೆದರಿ, ಹವ್ವನೆ ಹಾರಿ, ಬೆದರಿ ಬಿದ್ದೆನಯ್ಯಾ.
ಆಗೆನ್ನ ಹೆತ್ತ ತಾಯಿ ಬಂದು ಎತ್ತಿ ಕುಳ್ಳಿರಿಸಿ,
ಚಿತ್ತ ಮೂಲಾಗ್ನಿಯ ಒತ್ತಿ ಉರುಹಿದರೆ,
ಇವೆಲ್ಲವ ಸುಟ್ಟು ಬಟ್ಟಬಯಲಾದವು.
ಆ ಬಟ್ಟ ಬಯಲೊಳಗೆ ಅಡಿಯಿಟ್ಟು ನಡೆವಾಗ,
ಮುಂದೆ ಇಟ್ಟಡಿಯ ಬಾಗಿಲೊಳಗೆ ಮತ್ತೊಂದು ಮೃಗವ ಕಂಡೆ.
ಆ ಮೃಗಕ್ಕೆ ತಲೆಯುಂಟು ಕೊಂಬಿಲ್ಲ, ಕಣ್ಣುಂಟು ಬಾಯಿಲ್ಲ,
ಹಸ್ತವುಂಟು ಕೈ ಇಲ್ಲ, ಹೆಜ್ಜೆಯುಂಟು ಕಾಲಿಲ್ಲ, ಪ್ರಾಣವುಂಟು ಒಡಲಿಲ್ಲ.
ಇದ ಕಂಡು ನಾ ಅಪ್ಪಿಕೊಳ ಹೋದಡೆ,
ಮುಟ್ಟದ ಮುನ್ನವೇ ಎನ್ನನೆ ನುಂಗಿತ್ತು.

ನುಂಗಿದ ಮೃಗ ಮಹಾ ಲಿಂಗದಲ್ಲಿಯೇ ಅಡಗಿತ್ತು .
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ತನುಗಳಿಗೆ ಸರಳವಾಗಿ ಅರಿವು ತಿಳಿಯಲೆಂದು ತನುವಿನ ಮೇಲೆ ಸುಂದರವಾದ ಕತೆ ಹೆಣೆದಿದ್ದಾರೆ ಅಪ್ಪಣ್ಣ ಶರಣರು. ತನು ಜಲಮಯವಾದ ಮಹಾಸರೋವರ! ತನುವಿಗೆ ತಂದೆ ತಾಯಿ ಬಂದು ಬಳಗದೊಂದಿಗೆ ಅನೇಕ ಸಂಬಂಧಿಗಳಿದ್ದರೂ ಅದು ಯಾರೂ ಇಲ್ಲದ ಘೋರವಾದ ಅರಣ್ಯ! ಆ ಅರಣ್ಯದೊಳಗೆ ಅಡಿಯಿಟ್ಟು ನಡೆಯುತ್ತಾ ವಿಚಾರಿಸಹೋದರೆ:

ಜಲಮಯವಾದ ತನು ಎನ್ನುವದೆ ಒಂದು ಸರೋವರ. ಅದರಲ್ಲಿ ಮನವೆನ್ನುವ ಹಿರಿಯ ಮೃಗವೊಂದಿದೆ. ಆ ಮೃಗಕ್ಕೆ ಕೊಂಬು ಇದೆ; ತಲೆ ಇಲ್ಲ. ಬಾಯಿ ಇದೆ ಕಣ್ಣಿಲ್ಲ. ಕೈ ಇದೆ ಹಸ್ತವಿಲ್ಲ. ಕಾಲುಗಳಿವೆ ಹೆಜ್ಜೆ ಇಲ್ಲ. ಒಡಲು ಇದೆ ಪ್ರಾಣ ಇಲ್ಲ. ಇಂತಹ ಮೃಗವನ್ನು ಕಂಡವನಿಗೆ ಭಯ; ಆದರೆ ಸಾಕಿದವನಿಗೆ ಬಲು ಪ್ರೀತಿ!

ಆ ಮೃಗಕ್ಕೆ ಕೊಂಬುಂಟು ತಲೆಯಿಲ್ಲ: ತಲೆ ತನುವಿನ ಶಿಖರ! ಅದು ತನುವಿನ ಕಣ ಕಣಕ್ಕೆ ರಕ್ತ ಮತ್ತು ಅರಿವಿನ ಸಂದೇಶ ಕಳುಹಿಸುವ ಅಮೃತದ ಕಣಜ! ಮನವೆಂಬ ಮಾಯಾ ಮೃಗ ಅಲ್ಲಿ ವಾಸ ಮಾಡಿದೆ. ಆದರೂ ಅದಕ್ಕೆ ಅರಿವಿನ ಅಮೃತದ ಪರಿಚಯವಿಲ್ಲ; ಬರೀ ರಕ್ತದ ರುಚಿ ಮಾತ್ರ ಗೊತ್ತು ; ಕೆಚ್ಚಲೊಳಗಿದ್ದ ಉಣ್ಣೆಯಂತೆ ಅದರ ವಾಸ!

ಬಾಯುಂಟು ಕಣ್ಣಿಲ್ಲ: ಮನವೆಂಬ ಮೃಗ ನೆತ್ತಿಯ ಅರಿವುಂಡು ಬಾಯಿಗೆ ಬರಬೇಕಿತ್ತು. ಆದರೆ ನೆತ್ತಿಯಿಲ್ಲದ ಅಹಂಕಾರಿ ಕೊಂಬುಳ್ಳ ಮನ ಬಾಯಿಗೆ ಬಂದು ಕಂಡವರನ್ನು ನಿಂದಿಸಿ, ಕೊಂಬಿನಿಂದ ತಿವಿಯುತ್ತದೆ. ನೆತ್ತಿಗೆ ಬಾಯಿ ಇಲ್ಲ. ಅದು ಮಾತನಾಡುವುದೂ ಇಲ್ಲ. ಅದೇನಿದ್ದರೂ ತುಂಬಿದ ಕೊಡ; ಅಮೃತದ ಮಹಾಸರೋವರ.

ನೆತ್ತಿಯ ಅಮೃತದ ಜಲವೇ ಕಣ್ಣಿಗೆ ಬಂದು ಆನಂದದಿಂದ ನೋಡುವುದನ್ನು ಕಲಿತಿದೆ. ಬೆಳಕು ಕತ್ತಲಿನ ಪರಿಚಯವಿದೆ. ಗಿಡ ಮರ ಬಳ್ಳಿ ಹರಿಯುವ ನದಿ ನಡೆದಾಡುವ ತನುಗಳನ್ನು ನೋಡಿ ಕಣ್ಣಿನಲ್ಲಿಯೇ ನಗುತ್ತದೆ. ಆದರೆ ಕೊಂಬುಳ್ಳ ಮನವೆಂಬ ಮೃಗಕ್ಕೆ ಬಾಯಿ ಇದೆ; ಕಣ್ಣಿಲ್ಲ. ಅದು ನೆತ್ತಿಯಿಂದ ಕಣ್ಣಿಗೆ ಹರಿದಿದೆ.

ನೋಡುವ ಕಣ್ಣು ಮಾತನಾಡುವುದಿಲ್ಲ. ಅದಕ್ಕೆ ಬಾಯಿ ಇಲ್ಲ! ಆದರೆ ಬಾಯಿ ಇದ್ದ ಮನವೆಂಬ ಮೃಗಕ್ಕೆ ಕಣ್ಣಿಲ್ಲ! ಅದು ಕಣ್ಣಿಗೆ ಹರಿದು, ನೋಡಲು ಬಾರದ ಬಾಯಿಯಿಂದ ನೋಡಿದೆನೆಂದು ಬೊಗಳುತ್ತದೆ. ಹರಿತವಾದ ಕೊಂಬಿನಿಂದ ಹಿರಿಯುತ್ತದೆ. ಇದೊಂದು ಮಾಯಾ ಮೃಗ; ವಿಕೃತವೆಂದರೆ ಅದಕ್ಕೆ ಬಲು ಸುಖ!

ಕೈ ಉಂಟು ಹಸ್ತವಿಲ್ಲ: ನೆತ್ತಿಯಿಂದ ಕಣ್ಣಿಗೆ ಕಣ್ಣಿನಿಂದ ಬಾಯಿಗೆ ಹರಿದ ಮಾಯಾಮೃಗ ಈಗ ಚರ್ಮಕ್ಕೆ ಹರಿದಿದೆ. ಚರ್ಮಕ್ಕೆ ಸ್ಪರ್ಶಿಸಿ ಸುಖಿಸುವ ಅರಿವಿದೆ. ಅರಿವಿನ ಸ್ಪರ್ಶ ಸುಖವನ್ನು ವ್ಯಕ್ತಪಡಿಸುವ ಬಾಯಿ ಇಲ್ಲ. ಆದರೆ ಸ್ಪರ್ಶಿಸುವ ಅರಿವಿನ ಹಸ್ತವಿಲ್ಲದ ಮಾಯಾಮೃಗಕ್ಕೆ ಕೈಗಳಿವೆ. ನಾನು ಮುಟ್ಟಿದೆನೆಂದು ಬಾಯಿಯಿಂದ ಬೊಗಳುತ್ತದೆ. ಅಹಂಕಾರದಿಂದ ಮೆರೆಯುತ್ತದೆ.

ಕಾಲುಂಟು ಹೆಜ್ಜೆಯಿಲ್ಲ : ಚರ್ಮದಿಂದ ಕಾಲಿಗೆ ನೆಗೆದ ಮಾಯಾಮೃಗಕ್ಕೆ ಹೆಜ್ಜೆ ಇಲ್ಲ; ಆದರೆ ಕಾಲುಗಳಿವೆ. ನೆತ್ತಿ ಕಣ್ಣು ಚರ್ಮ ಕಾಲು ಎಂದು ಅರಿವಿನ ತನುವಿನಲ್ಲಿ ಭೇದದ ಭೀತಿ ಹುಟ್ಟಿಸಿ ಕಾಲಿನಿಂದ ಒದೆಯುತ್ತದೆ. ತನುವಿಗೆ ಅರಿವಿನಿಂದ ನಡೆದಾಡುವ ಹೆಜ್ಜೆಗಳಿವೆಯೇ ಹೊರತು ಕಾಲುಗಳಿಲ್ಲ.

ಒಡಲುಂಟು ಪ್ರಾಣವಿಲ್ಲ: ಮನವೆಂಬ ಮಾಯಾಮೃಗಕ್ಕೆ ಒಡಲಿದೆ; ಪ್ರಾಣವಿಲ್ಲ. ಅದಕ್ಕೆ ಪ್ರಾಣದ ಭೀತಿಯೂ ಇಲ್ಲ. ಅರಿವಿನ ಒಡಲನ್ನು ಜೂಜಿನ ಮನೆಗೆ, ಸೆರೆಮನೆಗೆ, ವೇಶ್ಯಾಗೃಹಕ್ಕೆ, ಕಳುವಿಗೆ ಕರೆದುಕೊಂಡು ಹೋಗಿ ತಾನು ಸುಖಿಸುತ್ತದೆ; ಪ್ರಾಣದ ಭಯವಿಲ್ಲದೆ ಒಡಲನ್ನು ದಂಡಿಸುತ್ತದೆ. ಅತ್ಯಾಚಾರ, ಲಂಚ, ಭ್ರಷ್ಟಾಚಾರದಿಂದ ಒಡಲಿನೊಂದಿಗೆ ಸುಖಿಸಿ ಒಡಲನ್ನು ನೇಣಿನ ಕಂಬಕ್ಕೆ ಬಿಗಿಯುತ್ತದೆ.

ಇದಕಂಡು ನಾ ಹೆದರಿ, ಹವ್ವನೆ ಹಾರಿ, ಬೆದರಿ ಬಿದ್ದೆನಯ್ಯಾ ಆಗೆನ್ನ ಹೆತ್ತ ತಾಯಿ ಬಂದು ಎತ್ತಿ ಕುಳ್ಳಿರಿಸಿ, ಚಿತ್ತ ಮೂಲಾಗ್ನಿಯ ಒತ್ತಿ ಉರುಹಿದರೆ ಇವೆಲ್ಲವ ಸುಟ್ಟು ಬಯಲಾದವು:

ತನುವಿನಲ್ಲಿ ಮನವೆಂಬ ಮಾಯಾಮೃಗವಿದೆ. ಅದನ್ನು ಹೆತ್ತ ತಾಯಿಯೂ ಇದ್ದಾಳೆ. ತಾಯಿಗೆ ಮಗನ ಪರಿಚಯವಿಲ್ಲ. ಮಗನಿಗೆ ತಾಯಿ ಪರಿಚಯವಿಲ್ಲದಂತೆ ಮೃಗವಾಗಿ ಅರಿವಿನ ತನುವನ್ನೇ ಬಳಸಿಕೊಂಡು ಅಜ್ಞಾನದೆಡೆಗೆ ಸವಾರಿ ಮಾಡುತ್ತಲಿದೆ.

ಸವಾರಿ ಮಾಡುವ ಮಾಯಾಮೃಗಕ್ಕೆ ಹೆದರಿಕೆ ಬರಬೇಕಲ್ಲ; ಇದು ಬಲು ಜಟಿಲ! ಕಳ್ಳನಿಗೆ ಕಳ್ಳತನದಲ್ಲಿಯೇ ಸುಖ. ಅತ್ಯಾಚಾರಿಗೆ ಅತ್ಯಾಚಾರದಲ್ಲಿಯೇ ಸುಖ. ಲಂಚ ಭ್ರಷ್ಟಾಚಾರದಲ್ಲಿ ತೊಡಗಿದ ಮೃಗಕ್ಕೆ ಅದೇ ಯೋಚನೆ. ಅಧಿಕಾರ ಗೂಂಡಾಗಿರಿ ಚಲಾಯಿಸಿ ಮದದಿಂದ ಸುಖಿಸಿ ಮೆರೆಯುವ ಮನಕ್ಕೆ ಇದು ದುಃಖವೆಂದು ಹೆದರಿಕೆ ಬರಬೇಕಲ್ಲ! ಮಾಟ ಮಂತ್ರ ಮದ್ದನರಿದು ಸುಖಿಸುವ ಮನಕ್ಕೆ ಹೆದರಿಕೆ ಬರಬೇಕಲ್ಲ. ಜಾತಿ ಮತ ಪಂಥ ಧರ್ಮವೆಂದು ಅರಿವಿನ ತನುವನ್ನೇ ಸೀಳಿ ಗುರುವಿನ ವೇಷ ಹಾಕಿ ಪೀಠದಲ್ಲಿ ಪಲ್ಲಕ್ಕಿಯಲ್ಲಿ ಮೆರೆಯುವ ಮನಕ್ಕೆ ಹೆದರಿಕೆಯಾಗಿ ಹವ್ವನೆ ಹಾರಿ ಬೆದರಿ ಬೀಳಬೇಕಲ್ಲ. ಹೀಗೆ ಬಿದ್ದ ಮೃಗವನ್ನು ಹೆತ್ತ ತಾಯಿ ಬಂದು ಮೈದಡವಿ ಎತ್ತಿ ಕುಳ್ಳಿರಿಸುತ್ತಾಳೆ. ಮೃಗದ ಚಿತ್ತದ ಮೂಲಾಗ್ನಿಯನ್ನು ಒತ್ತಿ ಹಿಡಿದು ಅದಕ್ಕೆ ಉರಿ ಹಚ್ಚುತ್ತಾಳೆ. ಮೃಗದ ಅಜ್ಞಾನದ ಸ್ವಂತಿಕೆಯೆಲ್ಲಾ ಸುಟ್ಟು ಬಟ್ಟ ಬಯಲಾಗುತ್ತದೆ.

ಆ ಬಟ್ಟ ಬಯಲೊಳಗೆ ಅಡಿಯಿಟ್ಟು ನಡೆವಾಗ, ಮುಂದೆ ಇಟ್ಟಡಿಯ ಬಾಗಿಲೊಳಗೆ ಮತ್ತೊಂದ ಮೃಗವ ಕಂಡೆ:

ತನುವಿಗೆ ಅನೇಕ ಸಂಬಂಧಿಗಳಿದ್ದರೂ ಯಾರೂ ಇಲ್ಲದ ಘೋರಾರಣ್ಯ. ಜಲ ಬಿಂದುವಿನಿಂದಾದ ಬರೆಬರೆ ಮಹಾಸರೋವರ. ಅದರಲ್ಲಿ ಅಡಿಯಿಟ್ಟೊಡನೆ ಕಂಡು ಬಂದ ಮನವೆಂಬ ಹಿರಿಯ ಮೃಗ. ಇದೆಲ್ಲ ಸುಟ್ಟು ಬಟ್ಟ ಬಯಲಾಗಿ ಬಾಗಿಲೊಳಗೆ ಅಡಿಯಿಟ್ಟಾಗ ಮತ್ತೊಂದು ಮೃಗ! ಆ ಮೃಗಕ್ಕೆ ತಲೆಯಿದೆ ಕೊಂಬಿಲ್ಲ! ಕಣ್ಣಿದೆ ಬಾಯಿಯಿಲ್ಲ. ಹಸ್ತವಿದೆ ಕೈ ಇಲ್ಲ. ಹೆಜ್ಜೆ ಇದೆ ಕಾಲಿಲ್ಲ. ಪ್ರಾಣವಿದೆ ಒಡಲಿಲ್ಲ ಇದನ್ನು ಕಂಡು ಅಪ್ಪಿಕೊಳ್ಳಲು ಹೋದಡೆ, ಮುಟ್ಟದ ಮುನ್ನವೆ ಬಾಗಿಲೊಳಗೆ ಕಾಲಿಟ್ಟವನನ್ನು ನುಂಗಿತ್ತು. ನುಂಗಿದ ಮೃಗ ಮಹಾಲಿಂಗದಲ್ಲಿಯೇ ಅಡಗಿತ್ತು.

ಮೃಗಕ್ಕೆ ತಲೆಯುಂಟು ಕೊಂಬಿಲ್ಲ: ಇದು ಮೃಗವಲ್ಲ; ಅರಿವೆಂಬ ತನು; ಮಹಾಲಿಂಗ; ಅಂಗದ ಕಣಕಣದಲ್ಲಿಯೂ ಭರಿತವಾದ ಲಿಂಗಾಂಗ! ಮನವೆಂಬ ಮೃಗಕ್ಕೆ ಕೊಂಬಿದ್ದು ತಲೆಯಿಲ್ಲ. ಮಹಾಲಿಂಗವೆಂಬ ಮೃಗಕ್ಕೆ ತಲೆಯುಂಟು ಕೊಂಬಿಲ್ಲ. ನೆತ್ತಿಯ ತುಂಬ ಅರಿವಿನ ಅಮೃತವೇ ಭರಿತವಾಗಿದೆ.

ಕಣ್ಣುಂಟು ಬಾಯಿಲ್ಲ: ಅಂಗುಲಿಮಾಲ ಒಂದು ಮೃಗ; ಬಾಯಿ ಉಂಟು ಕಣ್ಣಿಲ್ಲ. ಸಾವಿರ ಅಂಗಗಳ (ಬೆರಳು) ಅಂಗುಲಿ ಕತ್ತರಿಸಿ ಕೊರಳಲ್ಲಿ ಧರಿಸಿತ್ತು. ಬುದ್ಧ ಕೂಡಾ ಮೃಗ ಕಣ್ಣುಂಟು

ಬಾಯಿಲ್ಲ. ಈ ಮೃಗ ಮಾತನಾಡಲೇ ಇಲ್ಲ. ಅಂಗುಲೀಮಾಲನನ್ನು ನುಂಗಿತು. ಬುದ್ಧನನ್ನು ಅಪ್ಪಿಕೊಂಡಿತು. ಕೊಂಬಿಲ್ಲದ ನೆತ್ತಿ; ಬೆಳಕು ತುಂಬಿದ ಕಣ್ಣುಳ್ಳ ಮೃಗ ಅಜ್ಞಾನವನ್ನು ಹೇಗೆ ನೋಡೀತು? ಕತ್ತಲ ಮೇಲೆ ಬೆಳಕು ಚೆಲ್ಲಿತು; ಕತ್ತಲು ಬೆಳಕಾಗಿ ಆ ಬೆಳಕನ್ನೇ ಅಪ್ಪಿಕೊಂಡಿತ್ತು.

ಹಸ್ತವುಂಟು ಕೈಯಿಲ್ಲ: ಹಸ್ತದಲ್ಲಿ ಅರಿವಿನ ಅಮೃತವಿದೆ. ಕೈಯಲ್ಲಿ ಅಜ್ಞಾನದ ಮಹಾ ರೋಗವಿದೆ. ಮಗು ಕನ್ಯೆ, ಯುವತಿ, ಮುದುಕಿ ಹಾಗೂ ರೋಗಗ್ರಸ್ಥ ತನುವನ್ನು, ಹೂವನ್ನು ರೋಗಗ್ರಸ್ತನಾಗಿ ಮುಟ್ಟುತ್ತದೆ. ಕೈಯಲ್ಲಿ ರೋಗವಿದೆ; ಹಸ್ತದಲ್ಲಿ ಅರಿವಿದೆ. ಅಜ್ಞಾನದ ಮೃಗಕ್ಕೆ ಕೈವುಂಟು; ಹಸ್ತವಿಲ್ಲ! ಜ್ಞಾನದ ಮೃಗಕ್ಕೆ ಹಸ್ತವುಂಟು ಕೈಯಿಲ್ಲ.

ಹೆಜ್ಜೆಯುಂಟು ಕಾಲಿಲ್ಲ: ಮೃಗದ ಕಾಲಲ್ಲಿ ಅಜ್ಞಾನದ ಅಹಂಕಾರ ತುಂಬಿದೆ. ದೂರ್ವಾಸ ಮುನಿ ಎಂಬ ಹೆಸರು ಪಡೆದರೂ ವಿಷ್ಣುವಿನ ಎದೆಗೆ ಒದ್ದು ಅಹಂಕಾರ ಮೆರೆಯಿತು. ಜ್ಞಾನಕ್ಕೆ ಕಾಲಿಲ್ಲ. ಇಡೀ ತನುವೆಲ್ಲ ಜ್ಞಾನದ ಕಣಜ. ಅದು ನಡೆದಾಡುವಾಗ ಹೆಜ್ಜೆ ಗುರುತುಗಳು ಬೀಳುತ್ತವೆ. ಅದು ಅರಿವಿನ ಶ್ರೀಪಾದ! ಕಾಲಲ್ಲ.

ಪ್ರಾಣವುಂಟು ಒಡಲಿಲ್ಲ: ಜ್ಞಾನದ ಮೃಗ ಒಡಲೊಳಗಿದೆ; ಅಜ್ಞಾನದ ಮೃಗವೂ ಒಡಲೊಳಗಿದೆ! ಜ್ಞಾನದ ಮೃಗವು ಒಡಲೊಳಗಿದ್ದು ಒಡಲಿಂಗಾಧಾರವಾಗಿ ಒಡಲ ಸೋಂಕದೆ ಇಡೀ ಒಡಲನ್ನೇ ಬೆಳಗುತ್ತಲಿದೆ. ಇದಕ್ಕೆ ಒಡಲಿಲ್ಲ; ಪ್ರಾಣದ ಬೆಳಕು ಮಾತ್ರ ಇದೆ. ಆ ಬೆಳಕಿನಿಂದಲೇ ನೋಡುತ್ತದೆ; ಆ ಬೆಳಕಿನಿಂದಲೇ ನುಡಿಯುತ್ತದೆ. ಆ ಬೆಳಕಿನಿಂದಲೇ ಮುಟ್ಟುತ್ತದೆ. ಕತ್ತಲನ್ನು ಬೆಳಕಿನಿಂದಲೇ ಅಪ್ಪಿಕೊಂಡು ಬೆಳಕು ಮಾಡುತ್ತದೆ.

ಜ್ಞಾನದ ಮೃಗ ಬೆಳಗಿಂಗೆ ಬೆಳಗಾಗಿ ಬೆಳಗುವ ಮಹಾಲಿಂಗ! 'ಕೋಟಿ ಸೂರ್ಯಂ ಸಮಪ್ರಭ' ಕೋಟಿ ಸೂರ್ಯರನ್ನು ಬೆಳಗುವ ಬೆಳಕು. ಬಸವಣ್ಣನಿಗೆ ಪ್ರಿಯವಾದ; ತನುವಿನಲ್ಲಿಯೇ ಕೂಡಿದ ಕೂಡದಗಲದ ಬಸವಣ್ಣನ ಬೆಳಕು! ಅಪ್ಪಣ್ಣ ಶರಣರು ಕಂಡು ಉಂಡು ಅನುಭವಿಸಿ ಹೊರ ಚೆಲ್ಲಿದ ಮಹಾಬೆಳಕು.

20

ಅಯ್ಯಾ ಎನಗೆ ಬಸವಪ್ರಿಯನೆಂದರೂ ನೀನೆ,
ಕೂಡಲ ಚೆನ್ನಬಸವಣ್ಣನೆಂದರೂ ನೀನೆ,
ಗುರುವೆಂದರೂ ನೀನೆ, ಲಿಂಗವೆಂದರೂ ನೀನೆ,
ಜಂಗಮವೆಂದರೂ ನೀನೆ, ಪ್ರಸಾದವೆಂದರೂ ನೀನೆ.
ಅದೇನು ಕಾರಣವೆಂದರೆ, ನೀ ಮಾಡಲಾಗಿ
ಅವೆಲ್ಲವೂ ನಾಮರೂಪಿಗೆ ಬಂದವು.
ಅದು ಕಾರಣ, ನಾನೆಂದರೆ ಅಂಗ,
ನೀನೆಂದರೆ ಪ್ರಾಣ. ಈ ಉಭಯವನು ನೀವೆ ಅರುಹಿದಿರಾಗಿ,
ಇನ್ನು ಭಿನ್ನವಿಟ್ಟು ನೋಡಿದೆನಾದರೆ, ಚೆನ್ನಮಲ್ಲೇಶ್ವರ ನೀವೆ ಬಲ್ಲಿರಿ.
ಎಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣನಲ್ಲಿ ಏಕವಾದ ಕಾರಣ,
ಎನಗೆ ಭವವಿಲ್ಲ, ಬಂಧನವಿಲ್ಲ, ಅದಕ್ಕೆ ನೀವೇ ಸಾಕ್ಷಿ.

ತನುವಿನಲ್ಲಿ ಅರಿವಿದೆ; ಅದನ್ನು ಸೂಚಿಸಿದ ಗುರುದೇವ ತಾವು. ತಾವು ಸೂಚಿಸಲಾಗಿ ಆ ಅರಿವು ಗುರುವಾಯಿತು. ಆ ಅರಿವೇ ಲಿಂಗವಾಯಿತು. ಆ ಅರಿವೇ ಜಂಗಮನಾಯಿತು. ಆ ಅರಿವೇ ಪ್ರಸಾದವಾಯಿತು. ಆ ಅರಿವೇ ಬಸವಣ್ಣನಿಗೆ ಪ್ರಿಯನಾದ ಚೆನ್ನಬಸವಣ್ಣನಾಯಿತು.

ತನುವಿನಲ್ಲಿ ತನ್ಮಯವಾದ ಅರಿವಿಗೆ ಗುರುವೆಂದು ನಾಮಕರಣ ಮಾಡಿದಿರಿ; ಲಿಂಗ ಜಂಗಮನೆಂದು ನಾಮಕರಣ ಮಾಡಿದಿರಿ. ಪ್ರಸಾದವೆಂದು ನಾಮಕರಣ ಮಾಡಲಾಗಿ ಹೆಸರಿಡಿದು ಕರೆಸಿಕೊಂಡವು.

ನಾನೆಂದರೆ ಅಂಗ, ನೀವೆಂದರೆ ಪ್ರಾಣ. ಇವೆರಡನೂ ತಾವೇ ತಿಳುಹಿದಿರಾಗಿ; ತಮ್ಮನ್ನು, ತಾವು ತಿಳುಹಿದ ಈ ತನುವನ್ನು ಭಿನ್ನವಿಟ್ಟು ನೋಡದಂತೆ ಮಾಡಿದಿರಿ.

ಬಸವಣ್ಣನಿಗೆ ಪ್ರಿಯನಾದ ಚೆನ್ನಬಸವಣ್ಣನು, ಆತ ಸೂಚಿಸಿದ ಸದ್‌ಗುರುವು ಅಂಗದಲ್ಲಿ ಲಿಂಗವಾಗಿ ಏಕವಾದ ಕಾರಣ ಜನನ ಮರಣಗಳ ಬಂಧನವಿಲ್ಲ. ಅದಕ್ಕೆ ತಾವು ಸೂಚಿಸಿದ ಅರಿವೇ ಸಾಕ್ಷಿ!

21

ಅಯ್ಯಾ ಎನ್ನಂಗದ ಮೇಲಿಪ್ಪ ಲಿಂಗವು ಕರ್ಪುರದಂತಾಯಿತ್ತು.
ಎನ್ನ ಪ್ರಾಣದ ಮೇಲಿಪ್ಪ ಲಿಂಗವು ಪರಂಜ್ಯೋತಿಯಂತಾಯಿತ್ತು.
ಎನ್ನ ನಿಃಪ್ರಾಣದ ಮೇಲಿಪ್ಪ ಲಿಂಗವು ನಿರಂಜನದಂತಾಯಿತ್ತು.
ಈ ತ್ರಿವಿಧ ಏಕವಾದ ಭೇದವ ಹೇಳಿಹೆನು ಕೇಳಿರಣ್ಣಾ!
ಎನ್ನ ಅಂಗದ ಮೇಲಿದ್ದ ಕರ್ಪುರದಂತಿರ್ದ ಲಿಂಗ,
ಪ್ರಾಣದ ಮೇಲಿಪ್ಪ ಪರಂಜ್ಯೋತಿ ಲಿಂಗವ ಬೆರೆಯಿತ್ತು.
ಎನ್ನ ಪ್ರಾಣದ ಮೇಲಿಪ್ಪ ಪರಂಜ್ಯೋತಿ ಲಿಂಗ,
ನಿಃಪ್ರಾಣದ ಮೇಲಿಪ್ಪ ನಿರಂಜನ ಲಿಂಗವ ಬೆರೆಯಿತ್ತು.
ಈ ತ್ರಿವಿಧವು ಏಕವಾದ ಮೇಲೆ, ಒಂದಲ್ಲದೆ ಎರಡುಂಟೆ?
ಇದಕ್ಕೆ ಸಂದೇಹ ಬೇರಿಲ್ಲವಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಅಂಗದಲ್ಲಿ ಅರಿವೆಂಬ ಲಿಂಗವು ಕರ್ಪುರದಂತಿದೆ. ಪ್ರಾಣ ಪರಂಜ್ಯೋತಿಯಂತೆ ಕರ್ಪುರಕ್ಕೆ ಹೊತ್ತಿ ಅಂಗವನ್ನೂ ಬೆಳಗುತ್ತಲಿದೆ. ಅಂಗದ ಕಣ ಕಣದಲ್ಲಿದ್ದ ಅರಿವು ಪ್ರಾಣಕ್ಕೆ ಪ್ರಾಣವಾಗಿ, ರಂಜನೆಯಿಲ್ಲದೆ ನಿರಂಜನದಂತೆ ಬೆಳಗುತ್ತಲಿದೆ. ಅಂಗ ಪ್ರಾಣ ನಿಃಪ್ರಾಣ ಎಂಬ ತ್ರಿವಿಧವು ಏಕವಾಗಿವೆ.

ಸರ್ವಾಂಗದಲ್ಲಿ ಕರ್ಪುರದಂತಿದ್ದ ಲಿಂಗವೆಂಬ ಅರಿವು, ಪ್ರಾಣದಲ್ಲಿದ್ದ ಪರಂಜ್ಯೋತಿಯೆಂಬ ಅರಿವನ್ನು ಬೆರೆತಿದೆ. ಪ್ರಾಣದಲ್ಲಿ ನಿಃಪ್ರಾಣವೆಂಬ ಅರಿವು ಯಾವ ರಂಜನೆಯೂ ಇಲ್ಲದ ನಿರಂಜನ ಅರಿವಿನಲ್ಲಿ ಬೆರೆತಿದೆ.

ಈ ತ್ರಿವಿಧವುಳ್ಳ ಲಿಂಗವೆಂಬ ಅರಿವೇ ಏಕಾಂಗವಾದ ಮೇಲೆ ಅಂಗ ಒಂದಲ್ಲದೆ ಹೆಣ್ಣು ಗಂಡೆಂಬ ಎರಡಂಗಗಳುಂಟೆ? ಇದಕ್ಕೆ ಸಂದೇಹವೇ ಇಲ್ಲದಂತೆ ಬಸವಣ್ಣನಿಗೆ ಪ್ರಿಯವಾದ ಚೆನ್ನ

ಬಸವಣ್ಣನು ಅಂಗದಲ್ಲಿಯೇ ಕೂಡಿದ್ದಾನೆ. ಚೆನ್ನಬಸವಣ್ಣನಿಗೆ ಪ್ರಿಯವಾದ ಅಪ್ಪಣ್ಣನೂ ಅಂಗದಲ್ಲಿಯೇ ಕೂಡಿ ಕೂಡಲ ಸಂಗಮವಾಗಿದ್ದಾನೆ.

22

ಅಯ್ಯಾ ಎನ್ನಂಗದಲ್ಲಿಪ್ಪ ಅರುವೆಯ ಕಂಡು,
ತೆಗೆದೆನ್ನ ಲಿಂಗಕ್ಕೆ ಹೊದ್ದಿಸಿ, ಆ ಲಿಂಗದಲ್ಲಿಪ್ಪ
ಅರುವೆಯ ಕಂಡೆನ್ನ ಕಂಗಳು ನುಂಗಿತ್ತು.
ಕಂಗಳೊಳಗಿನ ತಿಂಗಳ ತಿರುಳ ಮಂಗಳದ
ಮಹಾಬೆಳಗಿನ ಶೃಂಗಾರದೊಳು
ನಾನೋಲಾಡುತ್ತಿರ್ದೆನಯ್ಯಾ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಅಯ್ಯಾ ಎನ್ನಂಗದಲ್ಲಿಪ್ಪ ಅರುವೆಯ ಕಂಡು, ತೆಗೆದೆನ್ನ ಲಿಂಗಕ್ಕೆ ಹೊದ್ದಿಸಿ, ಆ ಲಿಂಗದಲ್ಲಿಪ್ಪ ಅರುವೆಯ ಕಂಡೆನ್ನ ಕಂಗಳು ನುಂಗಿತ್ತು.

ಇದು ಶರಣರ ಜ್ಞಾನದ ಆಟ. ಜಗದ ತನುಗಳೆಲ್ಲ ಜ್ಞಾನದ ತನುಗಳೇ ಜ್ಞಾನಬೇಕೆಂದು ಬಯಸಿ ಚೆನ್ನಬಸವಣ್ಣನಲ್ಲಿಗೆ ಹೋದ ಅಪ್ಪಣ್ಣನಿಗೆ ಪರಮಾಶ್ಚರ್ಯ ಕಾದಿತ್ತು.

ಬನ್ನಿ ಅಪ್ಪಣ್ಣನವರೆ ಎಂದು ಆದರದಿಂದ ಬರ ಮಾಡಿಕೊಂಡು; ಉತ್ತಮವಾದ ಆಸನದಲ್ಲಿ ಕುಳ್ಳಿರಿಸಿ; ಅವರ ತನುವಿನಲ್ಲಿಯೇ ತನ್ಮಯವಾದ ಅರುವೆಯ ವಸ್ತ್ರವನ್ನು ತೆಗೆದು ಅವರ ಅಂಗಕ್ಕೆ ಹೊದಿಸಿದರು. ಜಗದಗಲ ಮುಗಿಲಗಲ ಮಿಗೆಯಗಲವಿದ್ದ ಮಹಾಜ್ಞಾನ ತನ್ನಂಗದಲ್ಲಿ ಬಂದು ಚುಳುಕಾದುದನ್ನು ಕಂಗಳಿಗೆ ಪರಿಚಯಿಸಿದರು. ಪಾತಾಳದಿಂದಲೂ ಅತ್ತತ್ತಲಿದ್ದ ತನುವಿನ ಶ್ರೀ ಪಾದಗಳನ್ನು ಬ್ರಹ್ಮಾಂಡದಿಂದಲೂ ಅತ್ತತ್ತಲಿದ್ದ ತನುವಿನ ಶ್ರೀ ಮುಕುಟವನ್ನು ಅಂಗದಲ್ಲಿಯೇ ಲಿಂಗವಾಗಿಸಿ ಪರಿಚಯಿಸಿದರು.

ಗಮನಕ್ಕೆ ನಿಲುಕದ ಅಂಗದಲ್ಲಿರುವ ಲಿಂಗವೆಂಬ ಅರಿವನ್ನು ಗಮನಕ್ಕೆ ತಂದು ತೋರಿಸಿದರು. ಯಾರೂ ಪ್ರಮಾಣಿಸಲು ಬಾರದ ಅಪ್ರಮಾಣ ಅಪ್ರತಿಮ ಲಿಂಗವನ್ನು ಎನ್ನ ಪ್ರಮಾಣಕ್ಕೆ ತಂದು ಅಂಗದಲ್ಲಿಯೇ ಚುಳುಕಾದುದನ್ನು ತೋರಿಸಿದರು.

ತನ್ನಂಗದಲ್ಲಿದ್ದ ಅರಿವು, ಬೇಡಲು ಬಂದ ಚೆನ್ನಬಸವಣ್ಣನ ಅಂಗದಲ್ಲಿದ್ದ ಅರಿವು ಒಂದೇ ಆಗಿ ತೋರಿಸಿದರು. ಅಂಗದಲ್ಲಿದ್ದ ಅರಿವೆಂಬ ಗುರುದೇವನನ್ನು ಎನಗೆ ತೋರಿಸಿ; ಅಪ್ಪಣ್ಣ! ಈ ಮಹಾಮಹಿಮನಿಗೆ ನಾನು ಗುರುವಾಗಬಹುದೆ? ಈ ಗುರು ದೇವನನ್ನೇ ಹೊದ್ದ ನೀನು ಎನಗೆ ಶಿಷ್ಯನಾಗಬಹುದೆ? ಎಂದು ಪ್ರಶ್ನಿಸಿದರು. ಗುರು ಶಿಷ್ಯ ಎನ್ನುವುದು ಒಂದು ವಿನೋದವಷ್ಟೆ. ಗುರುವಿಗೆ ಗುರುವಾಗಲು ಬರುವುದಿಲ್ಲ ಅಪ್ಪಣ್ಣ. ನಿನ್ನಂತೆ ಎಲ್ಲ ತನುಗಳಿದ್ದರು ಜ್ಞಾನ ಸವಿಯಬೇಕೆಂಬ ಬಯಕೆ ಇಲ್ಲ. ಬಯಕೆಯಾದರೆ; ಸೂಚಿಸುವ ಸಮರ್ಥನಿದ್ದರೆ ಒಂದು ಕ್ಷಣ ಸಾಕು ಅಪ್ಪಣ್ಣ!

ಚೆನ್ನಬಸವಣ್ಣನವರು ಹೊದಿಸಿದ ಜ್ಞಾನ ವಸ್ತ್ರ ಕಂಗಳಲ್ಲಿರುವ ಅಜ್ಞಾನ ನುಂಗಿತ್ತು.

ತಿಂಗಳೊಳಗಿರುವ ತಿಂಗಳ ತಿರುಳ ಚಂದಿರನ ಮಹಾಜ್ಞಾನದ ಮಂಗಳದ ಮಹಾಬೆಳಗಿನ ಶೃಂಗಾದೊಳು ಓಲಾಡುತ್ತಿದ್ದೆನಯ್ಯಾ ಎಂದು ಜ್ಞಾನದ ಸುಖವನ್ನು ಅನುಭವಿಸಿ ಹೇಳಿದ್ದಾರೆ ಅಪ್ಪಣ್ಣ ಶರಣರು.

23

ಅಯ್ಯಾ ಎನ್ನ ಗುರು ಎನಗೆ ಉಪದೇಶ ಮಾಡಿದ
ಭೇದವ ಎಲ್ಲ ಗಣಂಗಳು ಕೇಳಿ. ಮಲತ್ರಯಂಗಳ ಹರಿದು,
ಕರ್ಮೇಂದ್ರಿಯಗಳ ಜ್ಞಾನೇಂದ್ರಿಯ ಮಾಡಿ,
ಕಾಯ ಜೀವ ಪ್ರಾಣ ಈ ತ್ರಿವಿಧವರತು ಭೇದವನರುಹಿಸಿದ.
ಉರಸ್ಥಲದ ಪರಂಜ್ಯೋತಿ ಲಿಂಗವ ಎನ್ನ ಕರಸ್ಥಲಕ್ಕೆ ಕೊಟ್ಟರು.
ಆ ಗುರು ಕೊಟ್ಟ ಲಿಂಗವೆಂಬ ದರ್ಪಣವ ನೋಡಿ,
ಎನ್ನ ಮನವೆಂಬ ಸರ್ಪ ಆ ದರ್ಪಣದಲ್ಲಿ ಲೀಯವಾಯಿತ್ತು,
ಆಲಿ ನುಂಗಿದ ನೋಟದಂತಾಯಿತ್ತು.
ಪುಷ್ಪ ನುಂಗಿದ ಪರಿಮಳದಂತೆ,
ಬಯಲು ನುಂಗಿದ ಬ್ರಹ್ಮಾಂಡದಂತೆ
ಅಂಗ ಲಿಂಗ ಸಂಗ ಸಂಯೋಗವಾದ ಭೇದ,
ಇದ ಹಿಂಗದೆ ಶರಣ ಸಂಗವ ಮಾಡಿದವರಂಘ್ರಿಯಲ್ಲಿ ಐಕ್ಯವಾದೆನಯ್ಯಾ.
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ,
ಇದನು ಕಂಗಳ ಪಟಲ ಹರಿದ ಲಿಂಗೈಕ್ಯರೇ ಬಲ್ಲರು.

ಅಪ್ಪಣ್ಣ ಶರಣರು ಗುರುವಿನಿಂದ ಪಡೆದ ಉಪದೇಶದ ಮಾಹಿತಿಯನ್ನು ಓದುಗರಿಗೆ ವಿವರಿಸಿದ್ದಾರೆ. ಜ್ಞಾನ ಪಡೆಯಬೇಕೆನ್ನುವ ಉತ್ಕಟ ಇಚ್ಛೆಯಿಂದ ಅಲೆದಾಡುವ ಎನ್ನನು ಕರೆದು ಹತ್ತಿರ ಕುಳ್ಳಿರಿಸಿಕೊಂಡು ಎನ್ನ ಅಂಗದ ಮೇಲೆ ಮಸ್ತಕವನ್ನಿಟ್ಟು ನುಡಿದರು.

ಅಪ್ಪಣ್ಣ, ಇದು ಅಂಗ. ಈ ಅಂಗದಲ್ಲಿ ಅರಿವಿದೆ. ಮನವಿದೆ ಆದರೂ ಅಂಗಕ್ಕೆ ಇವೆರಡರ ಪರಿಚಯವಿಲ್ಲ. ಮನ ಮಂಗದಂತೆ ಅಂಗದಲ್ಲಿ ಕುಣಿಯುತ್ತಲಿದೆ. ಮನದಿಂದಾಗಿ ಅಂಗ ಮಂಗವಾಗಿದೆ. ಅಂಗವೊಂದೇ ಮಂಗವಾಗಿಲ್ಲ; ಅಂಗದಲ್ಲಿರುವ ಜ್ಞಾನೇಂದ್ರಿಯಗಳಾದ ಕಣ್ಣು ಕಿವಿ ಮೂಗು ನಾಲಿಗೆ ಚರ್ಮ ಕೂಡಾ ಮಂಗಕ್ಕೆ ಮರುಳಾಗಿವೆ. ಮಂಗ ನೋಡಿದತ್ತ ಅಂಗ ಹೋಗುತ್ತದೆ. ಕಣ್ಣು ಕಿವಿ ಮೂಗು ಚರ್ಮ ಮನದ ಸ್ವಾದೀನವಾಗಿವೆ. ಮನ ಸರ್ಪವಾಗಿ ತನುವನ್ನೇ ಹುತ್ತ ಮಾಡಿಕೊಂಡು ಒಂಬತ್ತು ಬಿಲಗಳಲ್ಲಿ ಅಲೆದಾಡುತ್ತಲಿದೆ. ಕಾಯ ಜೀವ ಪ್ರಾಣ ಸರ್ಪದ ಸ್ವಾಧೀನದಲ್ಲಿವೆ. ನೋಡಿ ಕೇಳಿ ಮುಟ್ಟಿ ರುಚಿಸಿ ಮೂಸಿಸಿ ಸರ್ಪ ವಾಸವಿದ್ದ ತನುವನ್ನೇ ಕಚ್ಚಿ ಕಚ್ಚಿ ಕೊಲ್ಲುತ್ತಲಿದೆ.

ಅಂಗದಲ್ಲಿ ಅರಿವಿದ್ದುದನು ಹೇಳಿದ. ಅರಿವಿದ್ದ ಲಿಂಗವೆಂದು ಹೇಳಿದ. ಮನ ಅರಿವೆಂಬ ಲಿಂಗವನು ಆರಾದಿಸುವ ಭಕ್ತ. ಮನವೆಂಬ ಶಿಷ್ಯನೇ ಅಂಗದಲ್ಲಿರುವ ಅರಿವೆಂಬ ಗುರುದೇವನಿಗೆ ಶಿಷ್ಯನಾಗಬೇಕೆಂದು ಹೇಳಿದ. ಗುರುದೇವ ಹೇಳಿದಂತೆ, ಗುರುದೇವ ನುಡಿದಂತೆ ನಡೆಯಬೇಕೆಂದು,

ಆ ಗುರುದೇವನಿಗೆ ಗುಲಾಮನಾಗಬೇಕೆಂದು ಆತನ ಉಪದೇಶ ಪಾಲಿಸಬೇಕೆಂದು ಹೇಳುತ್ತಾ ಎನಗೆ ಉಪದೇಶವ ಮಾಡಿದರು ಶ್ರೀ ಗುರು ಚೆನ್ನಬಸವಣ್ಣ.

ಅರಿವಿನ ಮರಕ್ಕೆ ಸುತ್ತಿಕೊಂಡ ಉರುಗವನ್ನು ಬಿಡಿಸಿ ಅರಿವಿನ ಅಂಗವನ್ನೇ ದರ್ಪಣವನ್ನಾಗಿಸಿ ಆ ದರ್ಪಣದಲ್ಲಿ ಸರ್ಪವನ್ನು ಲೀಯವಾಗಿಸಿದರು ಆ ತಂದೆ.

ಇದು ಕಾರಣ ಎನ್ನ ರೂಪೆಲ್ಲ ಅರಿವಿನ ಉರಿಯುಂಡ ಕರ್ಪುರದಂತಾಯಿತ್ತು. ಆಲಿ ನುಂಗಿದ ನೋಟದಂತಾಯಿತ್ತು. ಪುಷ್ಪ ನುಂಗಿದ ಪರಿಮಳದಂತೆ, ಬಯಲು ನುಂಗಿದ ಬ್ರಹ್ಮಾಂಡ ದಂತೆ ಆಯಿತು. ಅಂಗ ಲಿಂಗ ಸಂಗ ಸಂಯೋಗವಾದ ಭೇದ.

ಗುರುದೇವ ಹೇಳಿದ ಅರಿವಿನ ಉಪದೇಶ ಹಿಂಗಲಿಲ್ಲ. ಅರಿವಿಗೆ ಶರಣು ಹೋಗಿ ಶರಣನಾದೆ. ಅರಿವಿಗೆ ಶರಣು ಹೋಗಿ ಗುರುವಿಗೆ ಗುಲಾಮನಾದೆ. ಅರಿವಿಗೆ ಶರಣು ಹೋಗಿ ಶರಣರಾದವರ ಸಂಗವ ಮಾಡಿದೆ. ಅವರ ಸುಖದ ಅರಿವಿನ ಸುಖದಲ್ಲಿ ಐಕ್ಯವಾದೆನು. ಕಂಗಳ ಅಜ್ಞಾನ ಪಟಲ ಹರಿದ ಲಿಂಗೈಕ್ಯರೇ ಬಲ್ಲರು.

24

ಅಯ್ಯಾ ಎನ್ನ ತಂದೆ ತಾಯಿಗಳು
ತಮ್ಮ ಕಂದನಪ್ಪ ಶಕ್ತಿಯ ಕೈಲೆಡೆಗೊಟ್ಟು ಕಳುಹಿದಡೆ,
ಎನ್ನ ಇಲ್ಲಿಗೆ ತಂದು ಮದುವೆಯಂ ಮಾಡಿ,
ಮುಗ್ಧನಪ್ಪ ಗಂಡನ ಕೊರಳಲ್ಲಿ ಕಟ್ಟಿ,
ಎನ್ನ ಅತ್ತೆ ಮಾವಂದಿರ ವಶಕ್ಕೆ ಕೊಟ್ಟರು.
ಎಮ್ಮತ್ತೆ ಮಾವಂದಿರ ಊರ ಹೊಕ್ಕರೆ,
ಕತ್ತಲೆಯಲ್ಲದೆ ಬೆಳಗಿಲ್ಲ.
ಎಮ್ಮತ್ತೆ ಮಾವಂದಿರ ಮನೆಯ ಹೊಕ್ಕರೆ,
ಅತ್ತಿಗೆ ನಾದಿನಿ ಭಾವ ಮೈದುನ ಇವರು ನಾಲ್ವರು
ಎನ್ನ ಗಂಡನ ತಲೆ ಎತ್ತಿ ನೋಡಲೀಸರು.
ಹಟ್ಟಿಯಲಿಪ್ಪ ಶುನಕ ಅಡಿಯಿಟ್ಟು ನಡೆಯಲೀಸವು.
ಸುತ್ತಲಿಹ ಆನೆ ಕುದುರೆ ತೊತ್ತಳದುಳಿವುತಿಪ್ಪವು.
ಒತ್ತೊತ್ತಿನ ಬಾಗಿಲವರು ಎನ್ನ ಇತ್ತಿತ್ತ ಹೊರಡಲೀಸರು.
ಸುತ್ತಲಿಹ ಕಾಲಾಳ ಪ್ರಹರಿ, ಮೊತ್ತದ ಸರವರ
ಈ ಮುತ್ತಿಗೆಗೊಳಗಾಗಿ ನಾ ಸತ್ತು ಹುಟ್ಟುತಿರ್ದೆನಯ್ಯಾ.
ಆಗ ಎನ್ನ ಹೆತ್ತ ತಾಯಿ ಬಂದು
ತತ್ವವೆಂಬ ತವರು ಮನೆಯ ಹಾದಿ ತೋರಿದಡೆ,
ಇತ್ತ ತಾ ನೋಡಿ ಎಚ್ಚತ್ತು, ಎನ್ನ ಚಿಕ್ಕಂದಿನ ಗಂಡನ ನೋಡಿದೆ.
ಎಮ್ಮಿಬ್ಬರ ನೋಟದಿಂದ ಒಂದು ಶಿಶು ಹುಟ್ಟಿತ್ತು.
ಆ ಶಿಶು ಹುಟ್ಟಿದಾಕ್ಷಣವೇ ಎಮ್ಮಿಬ್ಬರ ನುಂಗಿತ್ತು.
ನುಂಗಿದ ಶಿಶು ತಲೆ ಎತ್ತಿ ನೋಡಲು,

ಎಮ್ಮತ್ತೆ ಮಾವಂದಿರಿಬ್ಬರು ಹೆದರಿ ಬಿದ್ದರು.
ಅತ್ತಿಗೆ ನಾದಿನಿ ಭಾವ ಮೈದುನ ಇವರು ನಾಲ್ವರು ಎತ್ತಲೊ ಓಡಿ ಹೋದರು.
ಈ ಹಟ್ಟಿಯಲ್ಲಿಪ್ಪ ಶುನಕ ಸುತ್ತಲಿನ ಆನೆ ಕುದುರೆ
ಒತ್ತೊತ್ತಿನ ಬಾಗಿಲವರು,
ಸುತ್ತಲಿಹ ಕಾಲಾಳ ಪುಹರಿ ಮೊತ್ತದ ಸರವರ
ಹೊತ್ತಿ ನಿಂದುರಿದು,
ನಾ ಸುತ್ತಿ ನೋಡಿದರೆ ಎಲ್ಲಿಯೂ ಬಟ್ಟ ಬಯಲಾಗಿರ್ದಿತ್ತು ಕಾಣಾ.
ಬಸವಪ್ರಿಯ ಕೂಡಲ ಚೆನ್ನಬಸವಣ್ಣ.

ತಂದೆ ತಾಯಿಗಳು ಕಂದನಪ್ಪ ಶಕ್ತಿಯನ್ನು ತನುವಿನೊಳಗಿಟ್ಟು ಮುಗ್ಧನೆಂಬ ಗಂಡನ ಕೊರಳಿಗೆ ಕಟ್ಟಿ ಮದ ಮತ್ಸರ ಎಂಬ ಅತ್ತೆ ಮಾವಂದಿರ ವಶಕ್ಕೆ ಕೊಟ್ಟರು.

ಮದ ಮತ್ಸರಗಳಿದ್ದ ಊರ ಹೊಕ್ಕರೆ ಬರೀ ಕತ್ತಲೆಯಲ್ಲದೆ ಬೆಳಗಿಲ್ಲ. ಮದ ಮತ್ಸರ ಉಳ್ಳ ತನುವೆಂಬ ಮನೆ ಹೊಕ್ಕರೆ ಕಾಮ ಕ್ರೋಧ ಲೋಭ ಮೋಹ ಎಂಬ ಅತ್ತಿಗೆ ನಾದಿನಿ ಭಾವ ಮೈದುನರು. ಇವರು ಎನ್ನ ಅರಿವಿನ ಗಂಡನನ್ನು ನೋಡಲೀಯರು. ಹಟ್ಟಿಯಲ್ಲಿದ್ದ ಮನವೆಂಬ ನಾಯಿ ನಡೆಯಲೀಯದು. ಸುತ್ತಮುತ್ತಲಿರುವ ಆನೆ ಕುದರೆ ಎಂಬ ಅಹಂಕಾರ ಮಮಕಾರಗಳೆರಡೂ ತೊತ್ತಳ ತುಳಿಯತ್ತಲಿವೆ.

ಒತ್ತೊತ್ತಿನ ಬಾಗಿಲವರು ಎನ್ನುವ ಸಪ್ತವ್ಯಸನಗಳು ಎನ್ನನ್ನು ಇತ್ತಿತ್ತ ಹೊರಡಲೀಯರು. ಅಷ್ಟಮದಗಳು ಕಾಲಾಳಿನ ಪ್ರಹರದ ಮುತ್ತಿಗೆಗೆ ಒಳಗಾಗಿ ನಾನು ಕ್ಷಣ ಕ್ಷಣಕ್ಕೂ ಹುಟ್ಟಿ ಕ್ಷಣ ಕ್ಷಣಕ್ಕೂ ಸಾಯುತ್ತಲಿದ್ದೇನೆ. ಅರಿವಿನ ಗಂಡನ ಸುಖಕ್ಕೆ ಪಯಣಿಸಲು ಅಡ್ಡಿಪಡಿಸುವ ಇವರ ಕಿರುಕುಳ ಅಷ್ಟಿಷ್ಟಲ್ಲ ಹೇಳತೀರದು.

ಮದುವೆಯಾದರೂ ಅರಿವಿನ ಸುಖ ಕಾಣದ ನನ್ನ ಯಾತನೆ ಕಂಡು ಹೆತ್ತತಾಯಿ ಬಂದಳು. ತತ್ವವೆಂಬ ತವರು ಮನೆಯ ಹಾದಿ ತೋರಿದಳು. ಇತ್ತ ನೋಡಿ ಎಚ್ಚತ್ತು, ಎನ್ನ ಚಿಕ್ಕಂದಿನ ಗಂಡನ ನೋಡಿದೆ. ತನುವೆಂಬ ತವರಿನಲ್ಲಿಯೇ ಅರಿವೆಂಬ ಗಂಡ ಚಿಕ್ಕಂದಿನಲ್ಲಿಯೇ ಎನ್ನನ್ನು ಮದುವೆಯಾಗಿದ್ದಾನೆ. ಮರೆತುದನು ಅರಿತು ಒಂದಾದೆ.

ನಮ್ಮಿಬ್ಬರ ನೋಟದಿಂದಲೇ ಒಂದು ಮಹಾಜ್ಞಾನದ ಶಿಶು ಹುಟ್ಟಿತ್ತು. ಆ ಶಿಶು ಹುಟ್ಟಿದಾಕ್ಷಣವೇ ಹಡೆದ (ತನು ಮನ) ನಮ್ಮಿಬ್ಬರನೂ ನುಂಗಿತ್ತು. ನುಂಗಿದ ಶಿಶು ತಲೆ ಎತ್ತಿ ನೋಡಲು ಅತ್ತೆ ಮಾವಂದಿರು ಹೆದರಿಬಿದ್ದರು. ಮದ ಮತ್ಸರಗಳು ಗಡಗಡನೆ ನಡುಗಿದವು. ಕಾಮ ಕ್ರೋಧ ಲೋಭ ಮೋಹ ಎಂಬ ಅತ್ತಿಗೆ ನಾದಿನಿ ಭಾವ ಮೈದುನರು ಓಡಿಹೋದರು. ಹಟ್ಟಿಯಲ್ಲಿದ್ದ ಮನವೆಂಬ ನಾಯಿ, ಅಹಂಕಾರ ಮಮಕಾರಗಳೆಂಬ ಆನೆ ಕುದುರೆ, ಸಪ್ತವ್ಯಸನಗಳು, ಅಷ್ಟಮದಗಳು ಹೊತ್ತಿ ನಿಂದು ಉರಿದವು.

ನಾ ಸುತ್ತಿ ನೋಡಿದರೆ ಎಲ್ಲೆಡೆಯೂ ಬಟ್ಟ ಬಯಲಾಗಿತ್ತು. ಬಯಲಿಂದ ಬಂದ ಬೀಜ ಜ್ಞಾನದ ನಡೆದಾಡುವ ಮರವಾಗಿ ಹೂ, ಕಾಯಿ, ಹಣ್ಣು ಬಿಟ್ಟು ಜ್ಞಾನದ ಪರಿಮಳದೊಂದಿಗೆ ಬಯಲು ಸೇರಿ ಬಟ್ಟ ಬಯಲಾಗಿತ್ತು.

25

ಅಯ್ಯಾ, ಎನ್ನ ಬಾಳುವೆಯಲ್ಲಿ ಹೇಳದೆ ಕೇಳದೆ,
ಒಬ್ಬ ಕಾಳ ರಕ್ಕಸಿ ನುಂಗಿದಳಯ್ಯಾ.
ಆ ಬಾಳುವೆಗೋಸುಗ ಕಾಳರಕ್ಕಸಿಯ ಬಾಯೊಳಗೆ ಸಿಲ್ಕಿದೆನಯ್ಯಾ.
ಆ ಕಾಳರಕ್ಕಸಿ ಆವಾಗ ಅಗಿದಾಳೆಂದರಿಯೆ,
ಆವಾಗ ಉಗಿದಾಳೆಂದರಿಯೆ.
ಆ ಕಾಳರಕ್ಕಸಿಯ ಬಾಯಿಂದವೆ ಹೊರಟು
ಆ ಬಾಳುವೆಯನಲ್ಲಿಯೆ ಬಿಟ್ಟು,
ಆ ಕಾಳರಕ್ಕಸಿಯ ಬಾಯಿಂದಲೆ ಹೊರವಂಟು
ಆ ಮಹಾಜಾಣ ಬಾಳುವ ಪುರವ ಹೊಕ್ಕೆ.
ಆ ಜಾಣನಾಳುವ ಪುರದೊಳಗೆ,
ಕಾಣಬಾರದುದನೆ ಕಂಡೆ, ಕೇಳಬಾರದುದನೆ ಕೇಳಿದೆ.
ಕದಳಿಯನೆ ದಾಂಟಿದೆ; ಜ್ಞಾನ ಜ್ಯೋತಿಯ ಕಂಡೆ.
ತಾನು ತಾನಾಗಿಪ್ಪ ಮಹಾಬೆಳಗಿನೊಳು ನಾನು ಓಲಾಡುತಿಪ್ಪೆನಯ್ಯ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಅರಿವಿನ ಆಟಕ್ಕಾಗಿ ಬಂದ ತನುವಿನ ಬಾಳುವೆಯಲ್ಲಿ ಮನವೆಂಬ ಕಾಳ ರಕ್ಕಸಿ ತನುವನ್ನು ಆವರಿಸಿ, ತನುವನ್ನು ತನುವಿನ ಅರಿವನ್ನೂ ನುಂಗಿದಳು. ಆ ಬಾಳುವೆಯೇ ತನುವಿಗೆ ಹಿತವಾಗಿ ಅರಿವಿನ ತನು ಕಾಳ ರಕ್ಕಸಿಯ ಬಾಯೊಳಗೆ ಸಿಲುಕಿತು. ಆ ಕಾಳ ರಕ್ಕಸಿ ಅರಿವಿನ ತನುವನ್ನು ಯಾವಾಗ ಅಗಿದಾಳೆಂದು ಅರಿಯೆ, ಆವಾಗ ಅರಿವಿನ ತನುವನ್ನು ಉಗುಳಿಯಾಳೆಂದು ಅರಿಯೆ.

ಮನವೆಂಬ ಕಾಳರಕ್ಕಸಿ ಅರಿವಿನ ತನುವನ್ನೇ ಬಾಯೊಳಗಿಟ್ಟುಕೊಂಡು ಆ ಬಾಯಿಂದ ಹೊರಟು; ಆ ನರಕದ ಬಾಳುವೆಯನು ಅಲ್ಲಿಯೇ ಬಿಟ್ಟು; ಆ ಕಾಳ ರಕ್ಕಸಿಯ ಬಾಯಿಂದಲೇ ಹೊರ ಹೊರಟು ಮಹಾ ಜಾಣನಾಳುವ ಅರಿವಿನ ಪುರವನ್ನು ಹೊಕ್ಕೆ.

ಆ ಜಾಣನಾಳುವ ಅರಿವಿನ ಪುರದೊಳಗೆ ಕಾಣಬಾರದ ಸತ್ಯ ಕಂಡೆ. ಕೇಳಬಾರದ ಸತ್ಯ ಕೇಳಿದೆ. ಕದಳಿಯನು ದಾಟಿದೆ, ಜ್ಞಾನ ಜ್ಯೋತಿಯನು ಕಂಡೆ. ತಾನು ತಾನಾಗಿಪ್ಪ ಮಹಾಬೆಳಗಿನೊಳು ಓಲಾಡುತಿಪ್ಪೆನಯ್ಯ ಬಸವಪ್ರಿಯ ಕೂಡಲ ಚೆನ್ನಬಸವಣ್ಣ.

ಅಪ್ಪಣ್ಣ ಶರಣರು ಸುಂದರವಾದ ಬೆಡಗಿನ ಅರಿವಿನ ವಚನವನ್ನು ಮನ ಬಳಸಿಕೊಳ್ಳಲೆಂದು ಆತ್ಮೀಯತೆಯಿಂದ ಹೆಣೆದಿದ್ದಾರೆ.

ಅರಿವಿನ ತನುವನ್ನು ಆವರಿಸಿಕೊಂಡ ಮನ ಅರಿವನ್ನು ಅರಿತರೆ ಅದು ಜ್ಞಾನದ ಮಹಾ ಜ್ಯೋತಿ; ಘನ ಮನ ಅರಿಯದಿದ್ದರೆ ಅದು ಕಾಳರಕ್ಕಸಿ! ಅರಿವಿನ ತನುವಿನ ಆಶ್ರಯ ಪಡೆದು ತನುವನ್ನೇ ರಕ್ಕಸ ತನುವನ್ನಾಗಿ ಮಾಡುವ ಮಹಾರಕ್ಕಸಿ; ಬ್ರಹ್ಮರಕ್ಕಸಿ!

ರಾಮನ ಕಣ್ಣಾದರೇನು? ರಾವಣನ ಕಣ್ಣಾದರೇನು? ನೋಡುವ ನೋಟವೊಂದೇ, ಕಣ್ಣು ಚೆಲ್ಲುವ ಬೆಳಕು ಒಂದೇ. ನೋಡುವುದೇ ಕಣ್ಣಿನ ಧರ್ಮ! ಆದರೂ ನೋಡಬಾರದ್ದನ್ನು ನೋಡುತ್ತದೆ.

ಚರ್ಮ ಮಂಡೋದರಿಯದಾದರೇನು? ಸೀತೆಯದಾದರೇನು? ಕಣ್ಣಿಗೆ ಚರ್ಮ ಕಾಣಬೇಕೇ ಹೊರತು ರಕ್ಕಸನೆಂಬ ಮೋಹ ಅಡ್ಡಿ ಬರಬಾರದು. ಕಣ್ಣಿನಲ್ಲಿ ರಕ್ಕಸ ಅಡ್ಡಿ ಬಂದು ಸೀತೆಯನ್ನು ನೋಡಿದ. ರಾವಣನೆಂಬ ರಕ್ಕಸನ ಹೆಸರು ಪಡೆದು ಅರಿವಿನ ತನುವನ್ನು ಸಂಕಟಕ್ಕೀಡು ಮಾಡಿದ. ನೋಡೂದನ್ನು ನೋಡಲರಿಯದೆ ತನ್ನನ್ನೂ ತನ್ನ ಬಂಧು ಬಳಗವನ್ನೂ, ಕೊನೆಗೆ ತನ್ನ ರಾಜ್ಯವನ್ನೂ ಕಳೆದುಕೊಂಡ.

ಕಣ್ಣಿನಲ್ಲಿ ಆವರಿಸಿದ ಕಾಳ ರಕ್ಕಸಿಯನ್ನು ರಾಮ ಮಾತ್ರ ಕೊಲ್ಲಬಲ್ಲನೆ ಹೊರತು ಅನ್ಯರಿಂದ ಸಾಧ್ಯವಾಗುವುದಿಲ್ಲ.

ನೋಡುವ ಮುನ್ನ ರಾಮನಾಗಿದ್ದ; ನೋಡಿದ ಮೇಲೆ ರಾವಣನಾದ. ನೋಡುವ ಕಣ್ಣಿಗೆ ಚರ್ಮ ಅಡ್ಡಿಪಡಿಸಬೇಕೆ? ರಾಮ ನೋಡಿದರೆ ಚರ್ಮ! ರಾವಣ ನೋಡಿದರೆ ಸೀತೆ! ರಾವಣನ ಅಜ್ಞಾನದ ಕಣ್ಣು ಸೀಳಿ ರಾಮ ಅಪ್ಪಿಕೊಳ್ಳುವುದಿಲ್ಲ. ರಾಮನ ಜ್ಞಾನದ ಕಣ್ಣಿನಲ್ಲಿ ರಾವಣ ಬೆರೆಯುವುದಿಲ್ಲ! ಕಾಳರಕ್ಕಸಿ ಸಾಯಲು ರಕ್ತಪಾತ ಆಗಲೇಬೇಕೆ ಹೇಗೆ? ತನು ರಾಮ ರಾವಣರ ಸಾಮ್ರಾಜ್ಯ! ಅದು ಅರಿವಿನ ಪುರ! ಮನ ಅರಿವಿನ ಪುರಹೊಕ್ಕರೆ ಕಾಣಬಾರದುದನ್ನು ಕಾಣುತ್ತದೆ. ಕೇಳಬಾರದುದನ್ನು ಕೇಳುತ್ತದೆ.

ತನು ಅರಿವಿನ ಕದಳಿ. ಅದರ ಅರಿವಿನ ಫಲ ಬಲು ಸಿಹಿ. ಸುಲಿದು ನೋಡಿದರೆ ಬೀಜವಿಲ್ಲದ ಮಧುರ ಫಲ. ಹಣ್ಣುಗಳ ರಾಜ! ಅದರ ದಿಂಡೇ ಅರಿವಿನ ದೇಹ. ಸುಲಿದು ನೋಡಿದರೆ, ಸುಲಿದಂತೆಲ್ಲ ಇಂಬಿಲ್ಲದಂತೆ ಸುಲಿಯುವುದು . ಹಣ್ಣಿನಲ್ಲಿ ಬೀಜವಿಲ್ಲ; ದಿಂಡಿನಲ್ಲಿ ಇಂಬಿಲ್ಲ; ಬರೀ ಬಯಲು! ತಾನು ತಾನಾಗಿಪ್ಪ ಮಹಾಬೆಳಗಿನ ಬಯಲೊಳು ಓಲಾಡುತ್ತಿಪ್ಪೆನಯ್ಯಾ ಬಸವಪ್ರಿಯ ಕೂಡಲಚೆನ್ನಬಸವಣ್ಣ.

26

ಅಯ್ಯಾ ಏನೂ ಇಲ್ಲದಂದು, ಧರೆ ಬ್ರಹ್ಮಾಂಡಗಳು ಇಲ್ಲದಂದು,
ಸಚರಾಚರ ರಚನೆಗೆ ಬಾರದಂದು,
ಅಂದು ನೀವಿಪ್ಪ ಭೇದವ ಎನಗೆ ತೋರಿದರಾಗಿ.
ಅದು ಹೇಗೆಂದರೆ: ನಾನು ಪುಷ್ಪದ ಹಾಗೆ,
ನೀವು ಪರಿಮಳದ ಹಾಗೆ, ನಾನಾಲಿಯ ಹಾಗೆ,
ನೀವು ನೋಟದ ಹಾಗೆ, ನಾ ಬ್ರಹ್ಮಾಂಡದ ಹಾಗೆ,
ನೀವು ಬಯಲಿನ ಹಾಗೆ, ಒಳಹೊರಗೆ ಪರಿಪೂರ್ಣವಾಗಿಪ್ಪಿರಿಯಾಗಿ,
ಆ ಭೇದವನು ಎನಗೆ ನೀವೆ ಅರುಹಿದಿರಾಗಿ.
ಉರಿ ಕರ್ಪುರದ ಸಂಯೋಗದಂತೆ ಎರಡೂ ಒಂದೇ ಎಂಬ ಭೇದವ
ಎನ್ನ ಗುರು ತಂದೆ ನೀವು ತೋರಿದಿರಲ್ಲ,
ಚೆನ್ನಮಲ್ಲೇಶ್ವರ ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ,
ನೀವೆನ್ನ ಪರಮಾರಾಧ್ಯರಾದ ಕಾರಣ.

ಈ ವಚನದಲ್ಲಿ ಅಪ್ಪಣ್ಣ ಶರಣರು ಅರಿವಿನ ದರ್ಶನ ಮಾಡಿಸಿದ ಪರಮಗುರು

ಚೆನ್ನ ಬಸವಣ್ಣನವರನ್ನು ಹೃದಯ ತುಂಬಿ ಸ್ಮರಿಸಿದ್ದಾರೆ.

ಏನೂ ಇಲ್ಲದಂದು, ಧರೆ ಬ್ರಹ್ಮಾಂಡಗಳು ಇಲ್ಲದಂದು, ಸಚಾರಾಚರ ರಚನೆಗೆ ಬಾರದಂದು, ಅಂದು ಕೂಡಾ ಅರಿವೆಂಬ ಗುರುದೇವನಿದ್ದುದನ್ನು, ಆ ಗುರುದೇವನನ್ನು ಎನಗೆ ತೋರಿದಿರಿ. ಅದು ಹೇಗೆಂದರೆ : ನಾನು ಪುಷ್ಪದ ಹಾಗೆ ಎಲ್ಲರಿಗೂ ತೋರಿಬರುತ್ತಿದ್ದೆ. ನೀವು ಪರಿಮಳದ ಹಾಗೆ ಪುಷ್ಪದಲ್ಲಿ ತನ್ಮಯರಾಗಿದ್ದಿರಿ. ನಾನು ಕಣ್ಣಿನ ಆಲಿಯಾಗಿದ್ದೆ ನೀವು ಆಲಿಯ ನೋಟವಾಗಿದ್ದಿರಿ. ನಾನು ಬ್ರಹ್ಮಾಂಡದ ಹಾಗೆ ತೋರಿಬರುತ್ತಿದ್ದೆ. ನೀವು ಬಯಲಿನ ಹಾಗೆ ಬ್ರಹ್ಮಾಂಡವನ್ನು ಹಿಡಿಟ್ಟಿದ್ದಿರಿ.

ತನುವಿನ ಒಳಹೊರಗೆ ಪರಿಪೂರ್ಣವಾಗಿ ಅರಿವೆಂಬ ಗುರುದೇವನಾದ ನೀವೆ ಇರುವ ಭೇದವನು ನೀವು ನನಗೆ ಅರುಹಿದಿರಿ. ಕರ್ಪುರದಲ್ಲಿ ಉರಿ ಬೆರೆತು ಸಂಯೋಗವಾಗಿ ಕರ್ಪುರವಾಗಿ ಕಂಡಂತೆ. ಕರ್ಪುರದಲ್ಲಿದ್ದ ಉರಿ, ಉರಿದ ಕರ್ಪುರವೂ ಉರಿಯೂ ಇಲ್ಲದಂತೆ ತೋರಿದಿರಿ.

ಚೆನ್ನಮಲ್ಲೇಶನೇ, ಬಸವಣ್ಣನಿಗೆ ಪ್ರಿಯನಾದ ಕೂಡಲ ಚೆನ್ನಬಸವಣ್ಣನೇ ನೀವೇ ಎನ್ನ ಪರಮ ಆರಾಧ್ಯರಾಗಿ ಪರಮ ಗುರುಗಳಾಗಿ ತೋರಿದ ಕಾರಣ ಅರಿವನುಂಡು ಅರಿವಿನಿಂದ ಬೆಳಗಿ ಅರಿವಿನಿಂದಲೇ ಸುಖಿಸುವುದು ಸಾಧ್ಯವಾಯಿತು ಎಂದಿದ್ದಾರೆ ಅಪ್ಪಣ್ಣ ಶರಣರು.

27

ಧರೆಯ ಮೇಲೆ ಹುಟ್ಟಿದವರೆಲ್ಲ
ವಾಕ್ಕು ಜಾಲವ ಕಲಿತುಕೊಂಡು,
ಅನುಭಾವವ ಬಲ್ಲೆವೆಂದು ನುಡಿವರು.
ಅನುಭಾವವೆಂತಿಪ್ಪುದೆಂದರಿಯರು.
ತೂರ್ಯಾತೂರ್ಯಾ ನುಡಿಯ ಪರಾತ್ಪರದ ನುಡಿ ಎಂದು
ಹರಶರಣರ ವಾಕ್ಯವ ಕಲಿತುಕೊಂಡು ನುಡಿದಾಡುವರು.
ತೂರ್ಯತೂರ್ಯವೆಂಬುದು ನಾಮರೂಪಿಗುಂಟೆ?
ಪರಾತ್ಪರವೆಂಬ ವಾಕ್ಯ ಮನಸಿಗುಂಟೆ?
ಹೆಸರಿಗೆ ಬಾರದ ಘನವೆಂದು ನೀವೆ ಹೇಳುತಿರ್ದು
ಮತ್ತೆ ಹೆಸರಿಗೆ ತಂದು ನುಡಿದಾಡುವರು.
ಇದು ಹುಸಿಯೋ, ದಿಟವೊ? ಇದು ಹಸು ಮಕ್ಕಳಾಟ.
ಸಸಿನೆ ನೆನೆದು ಬದುಕಿದೆ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಧರೆಯ ಮೇಲೆ ಹುಟ್ಟಿದವರೆಲ್ಲ ಮಾತು ಕಲಿತು, ಅನುಭಾವ ತಿಳಿದವರಂತೆ ಮಾತನಾಡಬಹುದು. ಆದರೆ ಅನುಭಾವದ ರುಚಿಯನು ಅರಿಯರು. ಕಾಗದದ ಮೇಲೆ ಮುದ್ರಣವಾದ ಹರ ಶರಣರ ನುಡಿ ಕಲಿತು ನುಡಿಯಬಹುದು. ಅದನ್ನು ಜನ ಮೆಚ್ಚಬಹುದು. ಆದರೆ ಅನುಭಾವದ ರುಚಿ ನುಡಿಗೆ ನಿಲುಕದ್ದು. ನುಡಿಗೆ ಎಡೆಗೊಡದ ಘನವನ್ನು ನುಡಿಗೆ ತಂದು ನುಡಿಯುವುದೆಂತು? ಅಂತಹ ನುಡಿಯನ್ನು ನಾಮ ರೂಪಿಗೆ ತಂದು ವಾಕ್ಯದಲ್ಲಿ ಹಿಡಿದು ಮನಸ್ಸಿನಿಂದ ನುಡಿಯಲು ಸಾಧ್ಯವೆ?

ಹೆಸರಿಲ್ಲದ ವೃಕ್ಷದಲ್ಲಿ ಬೆರೆತ ಮಹಾಜ್ಞಾನವನು ಹೆಸರಿಗೆ ತಂದು ನುಡಿಯಬಹುದೆ? ಇದು ಹುಸಿಯೊ, ದಿಟವೊ ಹಸು ಮಕ್ಕಳಾಟ. ಸಸಿನೆ ನೆನೆದು ಬದುಕಿದೆ.

ಹೆಸರಿಗೆ ಗುಲಾಬಿ ಸಸಿಯಾದರೂ ಸಸಿಯಲ್ಲಿ ಗುಲಾಬಿಯಿಲ್ಲ. ಹೆಸರಿಗೆ ಮಲ್ಲಿಗೆ ಸಸಿಯಾದರೂ ಸಸಿಯಲ್ಲಿ ಮಲ್ಲಿಗೆಯಿಲ್ಲ. ಹಾಗೆಯೇ ಹೆಸರಿಗೆ ಅರಿವಿನ ತನುವಾದರೂ ತನುವಿಗೆ ಅರಿವು ಬಳಕೆಯಾಗಿಲ್ಲ. ಇದು ಹುಸಿಯೊ ದಿಟವೊ ಹಸುಮಕ್ಕಳಾಟ!

ಗುಲಾಬಿ ಸಸಿಯಲ್ಲಿ ಗುಲಾಬಿ ಅರಳುತ್ತದೆ. ಸಸಿ ಬೇರಿನಲ್ಲಿ, ಕಾಂಡದಲ್ಲಿ, ಎಲೆಗಳಲ್ಲಿ, ರೆಂಬೆ ಕೊಂಬೆಗಳಲ್ಲಿ ಸಸಿ ಬಿಟ್ಟ ಮುಳ್ಳುಗಳಲ್ಲಿ ಗುಲಾಬಿ ತನ್ಮಯವಾಗಿದೆ. ಅಹಕಾಲಕ್ಕೆ ಅರಳುವುದು. ಅರಳದೆ ಗತ್ಯಂತರವಿಲ್ಲ. ಹೂ ಅರಳದಿದ್ದರೂ ಗುಲಾಬಿ ಸಸಿ; ಹೂ ಅರಳಿದರೂ ಗುಲಾಬಿ ಸಸಿ ಎಂದು ನಾಮದಿಂದ ಕರೆಯುತ್ತೇವೆ.

ತನುವಿನ ಕಣ್ಣ ನೋಟದಲ್ಲಿ ಗುಲಾಬಿ ಅರಳಿದೆ. ಅದರ ಪರಿಮಳ ಮೂಗಿನಲ್ಲಿ ಅರಳಿದೆ. ಗುಲಾಬಿಯ ಶಬ್ದ ಕಿವಿಯಲ್ಲಿ ಅರಳಿದೆ. ಗುಲಾಬಿಯ ಸ್ಪರ್ಶ ಚರ್ಮದಲ್ಲಿ ಮೂಡಿದೆ ಅದರ ನುಡಿ ರುಚಿ ನಾಲಗೆಯಲ್ಲಿ ಅರಳಿದೆ. ಈ ಜ್ಞಾನ ಗರ್ಭದಿಂದಲೇ ತನುವಿಗೆ ಬಂದು ತನ್ಮಯವಾಗಿದೆ. ಅರಿವಿಗೆ ಬಂದಿಲ್ಲ. ಬಾರದಿದ್ದರೇನಂತೆ ಹುಸಿಯೊ ದಿಟವೊ ಹಸುಮಕ್ಕಳಾಟ. ಸಸಿ ನೆನೆದು ಬದುಕಿದೆ ತಂದೆ. ಮಹಾಜ್ಞಾನಿ ಬಸವಣ್ಣನಿಗೆ ಪ್ರಿಯನಾಗಿ ತನುವಿನಲ್ಲಿಯೇ ತನ್ಮಯವಾಗಿ ಕೂಡಿದ ಕೂಟದ ಸುಖವನ್ನು ತೋರಿದ ಚೆನ್ನ ಬಸವಣ್ಣ ತಂದೆಯೇ ಎಂದು ಹಾಡಿದ್ದಾರೆ ಅಪ್ಪಣ್ಣ ಶರಣರು.

28

ಅಯ್ಯಾ ನಾ ಉತ್ತರವನೇರಿ ನೋಡಲಾಗಿ,
ಊರೊಳಗಣ ಉಲುಹೆಲ್ಲ ನಿಂದಿತ್ತು.
ಪಶ್ಚಿಮಕ್ಕಿಳಿದು ನೋಡಲಾಗಿ, ಪ್ರಾಣ ಪವನನ ಸುಳುಹು ನಿಂದಿತ್ತು.
ಪೂರ್ವವ ಮೆಟ್ಟಿ ನೋಡಲಾಗಿ, ಆರು ನೆಲೆ ಮೂರಾಗಿದ್ದವು.
ಅಯ್ಯಾ ನಾ ದಕ್ಷಿಣಕ್ಕೆ ಬಂದು ನೋಡಲಾಗಿ
ಈರೇಳು ಭುವನವು ಕುಕ್ಷಿಯೊಳಗೆ ನಿಕ್ಷೇಪವಾಗಿದ್ದಿತು.
ಅದು ಹೇಗೆಂದಡೆ: ಇಹಲೋಕವು ತನ್ನೊಳಗೆ,
ಪರಲೋಕವು ತನ್ನೊಳಗೆ, ಸಚಾರಚರವೆಲ್ಲವು ತನ್ನೊಳಗೆ,
ಶಿವಶಕ್ತಿಯು ತನ್ನೊಳಗೆ, ಭುವನಾದಿ ಭುವನಂಗಳು ತನ್ನೊಳಗೆ.
ಅದು ಹೇಗೆಂದಡೆ: ಅದಕ್ಕೆ ದೃಷ್ಟವ ಹೇಳಿಹೆನು,
ಬಲ್ಲವರು ತಿಳಿದು ನೋಡಿ,
'ಓಂ ಏಕಮೇವನದ್ವೀಯ' ಎಂಬ ಶ್ರುತಿ ಕೇಳಿಬಲ್ಲಿರೆ,
ಇಂತಪ್ಪ ಮನಕ್ಕೆ ಒಂದಲ್ಲದೆ ಎರಡುಂಟೆ?
ತಾನಲ್ಲದ ಅನ್ಯೋನ್ಯವಿಲ್ಲಾ ಎಂದು ಅರಿದ ಮೇಲೆ
ತನಗಿಂದ ಮುನ್ನ ಇವೇನಾದರೂ ಉಂಟೆ?
ಇದು ಕಾರಣ, ನಮ್ಮ ದೇವನೊಬ್ಬನೆ.

ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ, ಆತಂಗೆ ನಮೋ ನಮೋ ಎಂಬೆ.

ಅಯ್ಯಾ ನಾ ಉತ್ತರವನೇರಿ ನೋಡಲಾಗಿ ಉರೊಳಗಣ ಉಲುಹೆಲ್ಲ ನಿಂದಿತ್ತು:

ತನುವೇ ಒಂದು ಪ್ರಶ್ನೆ, ಆ ಪ್ರಶ್ನೆಗೆ ಉತ್ತರ ಹುಡುಕಲು ಹೊರಟರೆ ಆ ತನುವಿನೊಳಗೆ ಉತ್ತರ ದೊರಕಿ ತನುವಿನ ಉಲುಹೆಲ್ಲ ನಿಲ್ಲುತ್ತದೆ. ಈ ತನುವನ್ನೇ ಪೂರ್ವಜರು ಪುರ, ಊರು, ದೇಶ, ಜಗತ್ತು ಎಂದು ಕರೆದು ಪುರದಲ್ಲಿಯೇ ಪುರದೊಡೆಯ ಮಹಾಪುರುಷನನ್ನು ಹುಡುಕಿದ್ದಾರೆ. ತನುವಿನ ಉಲುಹು ಅಷ್ಟಿಷ್ಟಲ್ಲ. ತನು ಒಂದೇ. ಅದರ ಕಣ್ಣು, ಕಿವಿ, ಮೂಗು, ನಾಲಗೆ ಅದನ್ನು ಸುಂದರವಾಗಿ ಪ್ಯಾಕ್ ಮಾಡಿದ ಚರ್ಮ ಒಂದೇ. ಆದರೂ ಹೆಣ್ಣು, ಗಂಡು, ರಾಜ, ಮಂತ್ರಿ, ರಾಣಿ, ಬಡವ, ಶ್ರೀಮಂತ, ಭಿಕ್ಷುಕ, ಕಾಲಾಳು, ಸೇನಾಪತಿ, ಪ್ರಧಾನಿ, ಪ್ರಜೆ, ಶಾಸಕ, ಸಚಿವ, ಅಧಿಕಾರಿ, ಜವಾನ, ಗುರು, ಶಿಷ್ಯ, ಮಠಾಧಿಪತಿ, ಪೀಠಾಧಿಪತಿ, ಹಿಂದು, ಪಾರ್ಸಿ ಮುಂತಾದ ಕಂದಕಗಳನ್ನು ನಿರ್ಮಿಸಿಕೊಂಡು ಚೀರಾಡುತ್ತಲಿದೆ. ತನುವಿನಲ್ಲಿ ಉದ್ಭವಿಸಿದ ಪ್ರಶ್ನೆಗೆ ಉತ್ತರ ಪುಸ್ತಕದಲ್ಲಿ ಹುಡುಕಿದರೆ ಸಿಗುವುದಿಲ್ಲ. ಪುಸ್ತಕಗಳು ಗುಡುಗುವ ಗುಡುಗು ಕೂಡಾ ತನುವಿನಲ್ಲಿಯೇ ಹುಟ್ಟಿದೆ. ಹೀಗಾಗಿ ತನು ಹುಟ್ಟು ಹಾಕಿದ ಪ್ರಶ್ನೆಗೆ ಉತ್ತರ ಹುಡುಕಿದರೆ ತನುವಿನಲ್ಲಿಯೇ ಉತ್ತರ ದೊರೆಯುತ್ತದೆ.

ಪಶ್ಚಿಮಕ್ಕಿಳಿದು ನೋಡಲಾಗಿ ಪ್ರಾಣ ಪವನನ ಸುಳುಹು ನಿಂದಿತ್ತು. ಪೂರ್ವ ಮೆಟ್ಟಿ ನೋಡಲಾಗಿ, ಆರು ನೆಲೆ ಮೂರಾಗಿದ್ದವು:

ಪೂರ್ವದಲ್ಲಿ ಬೆಳಕು ಚೆಲ್ಲಿದ ಸೂರ್ಯ ಪಶ್ಚಿಮಕ್ಕೆ ಬಂದು ನಿಲ್ಲುತ್ತಾನೆ. ಪೂರ್ವದಲ್ಲಿ ಬರೀ ಬೆಳಕು ಪಶ್ಚಿಮದಲ್ಲಿ ಬರೀ ಕತ್ತಲು. ಪೂರ್ವದಲ್ಲಿ ಬೆಳಗಿದ ಬೆಳಕು ಪಶ್ಚಿಮದಲ್ಲಿ ನಿಂದು ಕತ್ತಲು ಸೃಷ್ಟಿ ಮಾಡಿತು. ಹಾಗೆಯೇ ಕಾಮ, ಕ್ರೋಧ, ಲೋಭ, ಮೋಹ ಮದ, ಮತ್ಸರಗಳೆಂಬ ಕತ್ತಲು ತನುವಿನಲ್ಲಿಯೇ ಹುಟ್ಟಿದವು. ಅರಿವಿನ ಬೆಳಕಿನಲ್ಲಿ ನೋಡಲಾಗಿ ಮೂರಾಗಿ ಕಂಡವು. ಅರಿವಿನ ಸೂರ್ಯ ಬೆಳಕು ಮಾತ್ರ ಸೃಷ್ಟಿಸಿದ. ಸ್ಥೂಲ ಸೂಕ್ಷ್ಮಕಾರಣಾಂಗದಿಂದ ಹುಟ್ಟಿದ ಬೆಳಕು ಅರಿಷಡ್ವರ್ಗವೆಂಬ ಕತ್ತಲನ್ನು ಸೃಷ್ಟಿಸಿತು. ಮತ್ತೆ ದಿಟ್ಟಿಸಿ ನೋಡಲಾಗಿ ಆ ಆರರ ನೆಲೆ ಮೂರಾಗಿದ್ದವು.

ಅಯ್ಯಾ ನಾ ದಕ್ಷಿಣಕ್ಕೆ ಬಂದು ನೋಡಲಾಗಿ ಈರೇಳು ಭುವನವು ಕುಕ್ಷಿಯೊಳಗೆ ನಿಕ್ಷೇಪ ವಾಗಿದ್ದಿತು. ಅದು ಹೇಗೆಂದಡೆ: ಇಹಲೋಕವು ತನ್ನೊಳಗೆ, ಪರಲೋಕವು ತನ್ನೊಳಗೆ, ಸಚರಾಚ ರವೆಲ್ಲ ತನ್ನೊಳಗೆ, ಶಿವಶಕ್ತಿಯು ತನ್ನೊಳಗೆ, ಭುವನಾದಿ ಭುವನಂಗಳು ತನ್ನೊಳಗೆ:

ಆರರ ನೆಲೆ ಮೂರಾಗಿದ್ದುದನ್ನು ಅರಿವಿನಿಂದ ನೋಡಲು ಇಹಲೋಕ, ಪರಲೋಕ, ಸಚರಾಚರವೆಲ್ಲ ತನುವಿನೊಳಗೆ ಇದೆ. ಶಿವ ಶಕ್ತಿಯು ಭುವನಾದಿ ಭುವನಂಗಳು ತನುವಿನೊಳಗೆ ಇದೆ. 'ಓಂ ಏಕಮೇವಧ್ವಿತೀಯ' ಎನ್ನುವ ಶೃತಿ ವಾಕ್ಯದಂತೆ.

ಎಲ್ಲವೂ ಬಯಲಿನಿಂದ ಹುಟ್ಟಿದ ಬೀಜ. ಜಲಜನಕ ಕಾಣುವುದಿಲ್ಲ; ಆಮ್ಲಜನಕವೂ ಕಾಣುವುದಿಲ್ಲ. ಇವೆರಡರ ವಾಸ ಬಯಲಿನಲ್ಲಿಯೇ. ಜಲಜನಕಕ್ಕೆ ಉರಿಯುವ ಗುಣವಿದೆ; ಆಮ್ಲಜನಕಕ್ಕೆ ಉರಿಸುವ ಗುಣವಿದೆ. ಇವೆರಡನ್ನೂ ಒಳಗೊಂಡ ಜಲಕ್ಕೆ ನಂದಿಸುವ ಗುಣವಿದೆ. ಬಯಲು ಇವೆರಡನ್ನೂ ಒಂದು ಮಾಡಿ ತಾನು ಅದರಲ್ಲಿ ಬೆರೆತು ಜೀವಜಲ ಬಿಂದುವಿನ ಬಯಲ ಬೀಜವಾಗಿದೆ. ಆ ಬೀಜವೇ ತನುವಿನ ಗರ್ಭದಲ್ಲಿ ಹೊಕ್ಕು ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸನ್ನು ಸುಂದರವಾದ ಚರ್ಮದ ಕವಚದಲ್ಲಿ ಬಂಧಿಸಿ ತನು ಕುಲವಾಯಿತು. ಆ ಬಯಲ ಬೀಜವೇ

ತನುವಿನಲ್ಲಿ ಬೆರೆತು ಅರಿವಾಯಿತು. ಆ ಅರಿವಿನ ಬೆಳಕಿನಿಂದ ಹುಟ್ಟಿದ ನೆರಳೆ ಅರಿವನ್ನು ತಿಳಿಯುವ ಮನವಾಯಿತು. ಅರಿವು ಶಿವನಾದರೆ ಮನ, ಶಿವನನ್ನು ಆರಾದಿಸುವ ಶಕ್ತಿಯಾಯಿತು. ಅರಿವು ಗಂಡಾದರೆ ಮನ ಹೆಣ್ಣಾಗಿ ತನು ಅರ್ಧನಾರೀಶ್ವರನಾಯಿತು.

ಜೀವ ಜಲ ಬಿಂದುವಿನ ಬಯಲ ಬೀಜದಿಂದಲೇ ಗಿಡ, ಮರ, ಬಳ್ಳಿ, ಪುಷ್ಪಗಳು ಹುಟ್ಟಿದವು. ಜಲ ಕುದ್ದು ಪಾಕಗೊಂಡು ಅನೇಕ ಭುವನಂಗಳು ಹುಟ್ಟಿದವು. ಖನಿಜ ಪದಾರ್ಥಗಳು ಹುಟ್ಟಿದವು. ಅಂದ ಮೇಲೆ ಬಯಲೊಂದೇ ಇದ್ದು ಬಯಲ ಗರ್ಭದಲ್ಲಿ ಜನಿಸಿದ ವಸ್ತುಗಳನ್ನು ತಿಳಿಯುವ ಶಕ್ತಿ ಬಯಲ ಬೀಜದಿಂದಲೇ ಹುಟ್ಟಿದ ತನುವಿಗೆ ದೊರೆತಂತಾಗಲಿಲ್ಲವೇ?

ಮನ, ತನುವಿನೊಳಗಿದ್ದ ಅರಿವು ತಿಳಿಯಲು ಹೋಗದೆ ಇವೆಲ್ಲವುಗಳನ್ನು ತಾನೇ ಸೃಷ್ಟಿ ಮಾಡಿ, ಅವುಗಳಿಗೆ ಆಯಾ ಹೆಸರು ಕೊಟ್ಟು ಅವುಗಳನ್ನು ಅರಿಯಲು ಹೋಯಿತು. ಸೃಷ್ಟಿಸಿದ ತಾನೇ ಚಿಕ್ಕದಾಗಿ ಬ್ರಹ್ಮಾಂಡ ದೊಡ್ಡದಾಯಿತು. ವೇದ ಆಗಮ ಉಪನಿಷತ್ತು ಪುರಾಣಗಳನ್ನು ಬರೆಯಿತು. ಭಗವದ್ಗೀತೆ ಬೈಬಲ್‌ಗಳನ್ನು ರಚಿಸಿ ಗ್ರಂಥಗಳನ್ನು ದೊಡ್ಡದು ಮಾಡಿತು. ಮನ ಚಿಕ್ಕದಾಯಿತು.

ಇಂತಹ ಮನ ಒಂದಲ್ಲದೆ ಎರಡುಂಟೆ? ಬೆಳಕು ಇದೆ. ಅದರಿಂದಲೇ ಕತ್ತಲು. ಅರಿವು ಇದೆ ಅದರಿಂದಲೇ ಮನ. ಬಯಲ ಬೆಳಕಿಗಿಂತ ಮುನ್ನ ಏನೂ ಇಲ್ಲ ಹಾಗೆಯೇ ಅರಿವಿಗಿಂತ ಮುನ್ನ ಮನವಿಲ್ಲ. ಮನಕ್ಕೆ ಅರಿವೇ ದೇವ. ಕತ್ತಲಿಗೆ ಬೆಳಕೇ ದೇವ. ಅರಿವು ಬಯಲ ಬೀಜ; ತನು ಅದರ ವೃಕ್ಷ ತಿಳಿದರೆ ಮನ ಅದರ ಸಿಹಿ ಫಲ! ಏಕಮೇವಾದ್ವಿತೀಯ.

29

ಅಯ್ಯಾ ನಾನು ದಿಟ್ಟಿಸಿ ನೋಡಿ ನಿಂದು ಬಟ್ಟ ಬಯಲ ಕಂಡೆ.
ಬಟ್ಟ ಬಯಲೊಳಗೊಂದು(ಮುಟ್ಟಬಾರದ) ಮೃಗವ ಕಂಡೆ.
ಆ ಮೃಗ ಹೋದ ಹೆಜ್ಜೆಯ ಕಾಣಬಾರದು,
ಮೇದ ಮೋಟನರಿಯಬಾರದು.
ಈ ಭೇದವ ನೋಡಿ ಸಾಧಿಸಿಕೊಂಡು ಬರುವನ್ನಕ್ಕ
ಆ ಮೃಗವೆನ್ನ ಬಲೆಗೊಳಗಾಯಿತ್ತು.
ಆ ಬಯಲೊಳಗಣ ಮೃಗದ ತಲೆಯ ಹಿಡಿದು,
ನೆಲಗೆಟ್ಟು ಹೋದೆನಯ್ಯಾ: ಬಸವಪ್ರಿಯ ಕೂಡಲಚೆನ್ನಬಸವಣ್ಣಾ,
ಇದರನುವ ಬಲ್ಲ ಶರಣರೆಲ್ಲರೂ ತಲೆ ಹೊಲನ ಹತ್ತಿ ಬಯಲಾದರು.
ಇದಕ್ಕೆ ನೀವೇ ಸಾಕ್ಷಿ.

ದಿಟ್ಟಿಸಿ ನೋಡಿದಡೆ, ತನು ಬಟ್ಟ ಬಯಲು. ಅದು ಬಯಲ ಬೀಜದಿಂದ ಹುಟ್ಟಿದ ರೂಪ. ಆ ರೂಪದ ತುಂಬೆಲ್ಲ ಬಯಲು ಅಡಗಿದೆ. ರೂಪದಲ್ಲಿ ನಿರೂಪ ತನ್ಮಯವಾಗಿದೆ. ಕಣ್ಣು ರೂಪಾದರೆ ನೋಟ ನಿರೂಪ. ಕಿವಿ ರೂಪಾದರೆ ಶಬ್ದ ನಿರೂಪ. ಮೂಗು ರೂಪಾದರೆ ಪರಿಮಳ ನಿರೂಪ. ಪದಾರ್ಥ ರೂಪಾದರೆ ರುಚಿ ನಿರೂಪ. ಸ್ಪರ್ಶ ರೂಪಾದರೆ ಅದರ ಸುಖದ ಸುಖ ನಿರೂಪ.

ತನು ರೂಪು. ಅದನ್ನು ಹೊತ್ತದ್ದು ನಿರೂಪು. ಈ ನಿರೂಪದ ಬಯಲೊಳಗೊಂದು ಮನವೆಂಬ ಮೃಗವಿದೆ. ಅದು ಇಟ್ಟ ವಿಕೃತದ ಹೆಜ್ಜೆಗಳು ಕಾಣುವುದಿಲ್ಲ; ಆದರೆ ತನುವಿನಲ್ಲಿಯೇ ಮೂಡುತ್ತವೆ. ಇದರ ಭೇದವನು ಅರಿತು ಬಲೆ ಹಾಕುವುದು ಬಲು ದುಸ್ತರ. ಇದು ಮೇಯುವುದು ತನುವಿನ ಹುಲ್ಲುಗಾವಿಲಿನೊಳಗೇ. ಆಶ್ರಯಕೊಟ್ಟ ತನುವಿನೊಳಗೇ ಮೇಯುತ್ತದೆ. ತಾನು ತಿಂದು ತನುವಿನ ಮುಖಕ್ಕೆ ಒರೆಸುತ್ತದೆ. ಜನ ಮೃಗವನ್ನು ನೋಡರು; ತನುವನ್ನು ನೋಡಿ ನಿಂದಿಸದೆ ಬಿಡರು.

ನೋಡಲು ಹೋದರೆ ತನು ಬಯಲು. ಆ ಬಯಲೊಳಗೊಂದು ಮೃಗ. ಬಯಲ ಬಲೆಯೊಳಗಣ ಮೃಗದ ತಲೆಯ ಹಿಡಿದು, ಅದರ ನೆಲೆಗೆಡಿಸಿದವನೇ ಜಾಣ. ಇದರನುವನು ಬಲ್ಲ ಶರಣರೆಲ್ಲರೂ ತಲೆಹೊಲನ ಹತ್ತಿ ಮೃಗವ ಹಿಡಿದು ಬಯಲಾದರು. ಇದಕ್ಕೆ ಮಹಾಗುರು ಚೆನ್ನಬಸವಣ್ಣನೇ ಸಾಕ್ಷಿ ಎಂದಿದ್ದಾರೆ ಅಪ್ಪಣ್ಣ ಶರಣರು.

30

ಅಯ್ಯಾ ನಾ ಹುಟ್ಟಿದಂದಿನಿಂದ ಎನ್ನ ಹೊಟ್ಟೆಗೆ ಕಾಣದೆ,
ಮೂರುವಟ್ಟೆಯನೆ ಕಾದಿರ್ದೆನಯ್ಯಾ.
ಹೊಟ್ಟೆಯ ಒಡೆಯರು ಹೊಟ್ಟೆಯ ಹೊಡೆದು ಹೋದರೆ
ಎನ್ನ ಹೊಟ್ಟೆ ಏಕೆ ತುಂಬಿತ್ತೆಂದು ನೋಡಿದರೆ,
ಅಲ್ಲಿ ಬಟ್ಟ ಬಯಲಾಗಿರ್ದಿತ್ತು ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ತನುವಿನ ಹೊಟ್ಟೆ ತುಂಬಿಸಿಕೊಳ್ಳುವುದೊಂದು ದೊಡ್ಡ ಚಿಂತೆಯೇನಲ್ಲ. ಪಶು ಪಕ್ಷಿ ಪ್ರಾಣಿ ಕೀಟ ಗಿಡ ಮರ ಬಳ್ಳಿ ಹೊಟ್ಟೆ ಹೊರೆಯುವುದಕ್ಕಾಗಿ ಅಷ್ಟೊಂದು ಚಿಂತೆ ಮಾಡುವುದಿಲ್ಲ. ಆದರೆ ಮನುಷ್ಯನಿಗೆ ಮಾತ್ರ ಹೊಟ್ಟೆ ಹೊರೆಯುವುದೇ ಒಂದು ದೊಡ್ಡ ಚಿಂತೆ.

ಅಪ್ಪಣ್ಣ ಶರಣರು, ಹುಟ್ಟಿದಾಗಿನಿಂದ ಹೊಟ್ಟೆಗೆ ಕಾಣದೆ ಮೂರುವಟ್ಟೆಯನೆ ಕಾದಿರ್ದೆನಯ್ಯಾ ಎಂದಿದ್ದಾರೆ. ಮೂರುವಟ್ಟೆ ಎಂದರೆ ಅರಿವಿಗೆ ಹೋಗಲು ಮೂರು ದಾರಿಗಳಿವೆ. ಸ್ಥೂಲ ಸೂಕ್ಷ್ಮ ಕಾರಣ ಶರೀರಗಳನ್ನು ಹಿಡಿದುಕೊಂಡೆ ಅರಿವಿಗೆ ಹೋಗಬೇಕು. ಈ ಮೂರರಲ್ಲಿ ಯಾವುದು ಹಿಡಿದುಕೊಂಡು ಹೋದರೂ ಜ್ಞಾನಮಾರ್ಗ ದಕ್ಕುತ್ತದೆ.

ಅರಿವಿಗೆ ಹೋಗಲು ಪ್ರಮುಖವಾಗಿ ಸ್ಥೂಲ ಸೂಕ್ಷ್ಮ ಕಾರಣ ಎನ್ನುವ ಈ ಮೂರು ದಾರಿಗಳು ಎಂದು ಮನಕ್ಕೆ ಅರಿವಾಗಬೇಕು.

ಸ್ಥೂಲ: ಹೆಣ್ಣು ಗಂಡೆಂದು ಕಾಣುವ ಶರೀರವೇ ಸ್ಥೂಲ ಶರೀರ. ಈ ಶರೀರದಿಂದಲೇ ಜನ ಮಹಾಜ್ಞಾನಿ ಎಂದು ಶ್ರೀಮಂತ ಬಡವ ಹೆಣ್ಣು ಗಂಡು ಕಳ್ಳ ರಾಜ ಮಂತ್ರಿ ಎಂದು ಮುಂತಾದ ಹೆಸರಿನಿಂದ ಗುರುತಿಸುತ್ತಾರೆ.

ಜನ ನಿರ್ಧರಿಸುವಂತೆ ಸ್ಥೂಲ ಶರೀರ ಅದು ಯಾವುದೂ ಅಲ್ಲ. ಅದನ್ನು ವೈಚಾರಿಕವಾಗಿ ನೋಡಲು ಸಾಧ್ಯವಾಗುತ್ತಿಲ್ಲ; ದೇಹದಿಂದ, ಅದರ ಕಾಯಕದಿಂದ, ದೇಹದ ರಚನೆಯಿಂದ ಜನ ಹಾಗೆ ಕರೆಯುತ್ತಾರೆ ಅಷ್ಟೆ. ಅದು ಬ್ರಹ್ಮಪುರ.

ಸೂಕ್ಷ್ಮ: ಸೂಕ್ಷ್ಮ ಶರೀರ ಕಾಣುವುದಿಲ್ಲ. ಸ್ಥೂಲ ಶರೀರಕ್ಕೆ ಹೆಸರಿಟ್ಟು, ಅದರ ಆಗು

ಹೋಗುಗಳನ್ನು ಸುಖದುಃಖಗಳನ್ನು ಉಂಟು ಮಾಡುವುದೇ ಸೂಕ್ಷ್ಮ ಶರೀರ. ಇದನ್ನು ಮನ ಎಂದು ಕರೆಯುತ್ತಾರೆ. ಇದು ಬ್ರಹ್ಮಪುರಕ್ಕೆ ಹೋಗುವ ರಹದಾರಿಯೂ ಹೌದು. ತಿಳಿದರೆ ಬ್ರಹ್ಮನ ಮಾನಸ ಪುತ್ರನೂ ಹೌದು!

ಕಾರಣ: ಬಯಲು ಜಲ ಬಿಂದುವಾಗಿ, ಜೀವಜಲಬಿಂದುವಾಗಿ, ಗರ್ಭದಲ್ಲಿ ಹೊಕ್ಕು, ಆ ಜೀವ ಜಲಬಿಂದುವೇ ರಕ್ತ ಮಾಂಸ ಮೂಳೆ ಮಜ್ಜೆ ಮೇದಸ್ಸು ಆಗಿ ಸುಂದರವಾದ ಚರ್ಮದ ಕವಚವಾಗಿ ತನು ರೂಪು ತಾಳಲು ಕಾರಣವಾದ ವಸ್ತುವೇ ಕಾರಣ ಶರೀರ. ಇದು ಕಾಣುವುದಿಲ್ಲ. ಕಾಣುವ ಶರೀರಕ್ಕೆ ಜೀವಾಳವಾಗಿದೆ. ಕಣ್ಣಿನ ಮೂಲಕ ನೋಟವಾಗಿದೆ. ಕಿವಿಯ ಮೂಲಕ ಶಬ್ದವಾಗಿದೆ. ಮೂಗಿನ ಮೂಲಕ ಪರಿಮಳವಾಗಿದೆ. ಚರ್ಮದ ಮೂಲಕ ಸ್ಪರ್ಶವಾಗಿದೆ. ನಾಲಿಗೆಯ ಮೂಲಕ ರುಚಿಯಾಗಿದೆ. ತನುವಿನ ಕಣಕಣದಲ್ಲಿ ಬೆರೆತು ಮಹಾಜ್ಞಾನವಾಗಿದೆ.

ಹೊಟ್ಟೆಯೇ ಪ್ರಧಾನವಾದ ತನುವಿಗೆ ಈ ಮೂರೂ ಬ(ವ)ಟ್ಟೆಯ ದಾರಿ ಕಾಣುವುದೇ ಇಲ್ಲ. ಅದೇನಿದ್ದರೂ ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ ಜೀವಿಸಿ ಅಂತ್ಯಯಾತ್ರೆ ಮುಗಿಸುತ್ತದೆ.

ಹೊಟ್ಟೆಯ ಒಡೆಯರು ಹೊಟ್ಟೆಯ ಹೊಡೆದು ಹೋದರೆ:

ಅಪ್ಪಣ್ಣ ಶರಣರು ಅತಿ ಸೂಕ್ಷ್ಮವಾದ ಬೆಡಗಿನ ಮಾತನ್ನು ಈ ಸಾಲಿನ ಮೂಲಕ ಹೇಳಿದ್ದಾರೆ.

ತನು ಅರಿವಿನ ಮಂತ್ರದಂಡ. ಈ ತನುವಿನಲ್ಲಿ ಅರಿವಿನ ಮಂತ್ರವಾದಿಯೊಬ್ಬನಿದ್ದಾನೆ. ಆತನೇ ಈ ತನುವಿಗೆ ಒಡೆಯ. ಮನಕ್ಕೆ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುವ ಬಯಕೆಯಾದರೆ, ತನುವಿನೊಡೆಯ, ತನುವಿನ ಹೊಟ್ಟೆಯನ್ನು ಹೊಡೆದು, ಅರಿವಿನ ಬ(ವ)ಟ್ಟೆಗೆ ಹೋಗುವ ಹಲಗೆಯನ್ನು ಬಾರಿಸುತ್ತಾನೆ. ಕೂಡಲೇ ಸ್ಥೂಲ ಸೂಕ್ಷ್ಮ ಕಾರಣಗಳು ಒಂದಾಗಿ ಮಹಾಜ್ಞಾನ ತನುವಾಗುತ್ತದೆ. ಅಂಗಾಂಗವೆಲ್ಲ ಲಿಂಗಾಂಗವಾಗುತ್ತದೆ. ಹೊಟ್ಟೆ ಜ್ಞಾನದಿಂದ ತುಂಬಿ ತುಳುಕಾಡುತ್ತದೆ. ಬಯಲ ಬೀಜದಿಂದ ಬಂದ ಅಂಗವೆಲ್ಲ ಲಿಂಗವಾಗಿ ಬಟ್ಟ ಬಯಲಾಗುತ್ತದೆ.

ತನು ಮೂರಾಬಟ್ಟೆಯಾಗದೆ ಮೂರು ಬಟ್ಟೆಯ(ದಾರಿ)ನ್ನು ಕಂಡುಕೊಳ್ಳಬೇಕಿದೆ. ಹೊಟ್ಟೆಗಾಗಿ ಬದುಕಿದರೆ ಬ(ವ)ಟ್ಟೆ (ದಾರಿ) ಕಾಣುವುದಿಲ್ಲ ಎನ್ನುವ ತಿರುಳು ಅಪ್ಪಣ್ಣ ಶರಣರು ತೊಳೆ ತೊಳೆಯಾಗಿ ಬಿಡಿಸಿ ಬಾಯಿಯಲ್ಲಿ ಹಾಕಿದ್ದಾರೆ. ತಿಂದು ಧನ್ಯರಾಗಬೇಕಿದೆ.

31

ಅಯ್ಯಾ ನಿಮ್ಮ ಶರಣರು
ವೇಷವ ತೋರಿ ಗ್ರಾಸವ ಬೇಡುವರಲ್ಲ.
ದೇಶವ ತಿರುಗಿ ಕಲಿತ ಮಾತ ನುಡಿವರಲ್ಲ.
ಲೇಸಾಗಿ ನುಡಿವರು, ಆಶೆ ಇಲ್ಲದೆ ನಡೆವರು,
ರೋಷವಿಲ್ಲದೆ ನುಡಿವರು. ಹರುಷವಿಲ್ಲದೆ ಕೇಳುವರು,
ವಿರಸವಿಲ್ಲದೆ ಮುಟ್ಟುವರು.
ಸರಸವಿದ್ದಲ್ಲಿಯೇ ವಾಸಿಸುವರು.
ಇಂತಪ್ಪ ಬೆರಸಿ ಬೇರಿಲ್ಲದ ನಿಜೈಕ್ಯಂಗೆ ನಮೋ ನಮೋ ಎಂಬೆ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.
ಇಂತಪ್ಪ ಶರಣರ ನೆಲೆಯ ನಾನೆತ್ತ ಬಲ್ಲೆನಯ್ಯಾ ?

ಶರಣರು ವಿಜ್ಞಾನಿಗಳು. ಆಹಾರಕ್ಕಾಗಿ ವೇಷ ಹಾಕುವವರಲ್ಲ. ದೇಶವ ತಿರುಗಿ ಕಲಿತ ಮಾತು, ಓದಿದ ಮಾತು ನುಡಿವವರಲ್ಲ. ಲೇಸಾಗಿ ನುಡಿವರು. ಆಶೆ ಇಲ್ಲದೆ ನಡೆವರು. ರೋಷ ಇಲ್ಲದೆ ನುಡಿವರು. ಹರುಷವಿಲ್ಲದೆ ಕೇಳುವರು. ವಿರಸವಿಲ್ಲದೆ ಮುಟ್ಟುವರು. ಸರಸವಿದ್ದಲ್ಲಿಯೇ ವಾಸಿಸುವರು.

ಆಶೆ ರೋಷವಿಲ್ಲದೆ, ಹರುಷ ವಿರಸಗಳಿಲ್ಲದೆ, ಲೇಸಾಗಿ ನುಡಿಯುವುದು ಸರಳವಲ್ಲ. ಅನುಭವಿ ಶರಣನಿಗೆ ಮಾತ್ರ ಈ ಕೆಲಸ ಬರುತ್ತದೆ. ಹೀಗೆ ನುಡಿಯುವುದು ಸರಳ. ಆದರೆ ರೋಷವಿಲ್ಲದೆ ನಡೆಯುವುದು ಬಲು ಜಟಿಲ.

ಆಭರಣಗಳ ಮೇಲೆ ಆಸೆ ಹುಟ್ಟುವುದು ಸಹಜ. ಆದರೆ ಶರಣನಿಗೆ ಆಸೆ ಹುಟ್ಟುವುದಿಲ್ಲ. ಏಕೆಂದರೆ ಆತ ಬಣ್ಣದ ಮೇಲೆ ಮೋಹ ಮಾಡುವಾತನಲ್ಲ. ಬೆಲೆಯ ಮೇಲೆಯೂ ಲೋಹದ ಮೇಲೆಯೂ ಮಾಟದ ಮೇಲೆಯೂ ಶರಣ ಮೋಹ ಮಾಡುವಾತನಲ್ಲ. ಬಂಗಾರಕ್ಕೆ ಬೆಲೆಯಿದೆ, ಬಣ್ಣವಿದೆ, ಮಾಟವಿದೆ, ಇವು ಮೂರು ಕಳೆದರೆ ಬಂಗಾರವೆನ್ನುವುದು ಬರೀ ಲೋಹ. ಲೋಹವನ್ನು ಯಾರೂ ಆಸೆ ಮಾಡುವುದಿಲ್ಲ. ಪ್ರಪಂಚಕ್ಕೆ ಬಂಗಾರವಾಗಿ ಕಂಡರೆ ಶರಣನಿಗೆ ಅದು ಬರೀ ಲೋಹವಾಗಿ ಕಾಣುತ್ತದೆ. ಶರಣನ ಕಣ್ಣು ಬರೀ ಸತ್ಯವನ್ನು ಮಾತ್ರ ನೋಡುತ್ತದೆ. ಸತ್ಯವಲ್ಲದೆ ಬೇರೇನೂ ನೋಡುವುದಿಲ್ಲ. ಹೀಗಾಗಿ ಶರಣರು ಆಸೆ ಇಲ್ಲದೆ ಲೇಸಾಗಿ ನಡೆವರು.

ರೋಷವಿಲ್ಲದೆ ನುಡಿವರು:

ಕುಶಬ್ಧವೂ ಸುಶಬ್ಧವೂ ಶಬ್ದದಲ್ಲಿ ಅಡಗಿದೆ. ಜನ ಶಬ್ದವನ್ನೇ ಕು ಶಬ್ದವಾಗಿ ಕೇಳಿ ಕೆರಳುವವರು. ಶಬ್ದವನ್ನೇ ಸು ಶಬ್ದವಾಗಿ ಕೇಳಿ ಅರಳುವರು. ಜನ ಶಬ್ದ ಕಲಿತವರೇ ವಿನಹ ಸಹಜ ನಿಶಬ್ದ ವೇದಿಗಳಲ್ಲ.

ಕತ್ತೆ ಎಂದು ಬೋರ್ಡಿನ ಮೇಲೆ ಬರೆದರೆ ಅದು ನಪುಂಸಕವಾಗುತ್ತದೆ. ಕೇಳಿದರೆ ಅರಿವಾಗುತ್ತದೆ. ಹಚ್ಚಿಕೊಂಡರೆ ಸಿಟ್ಟು ಬಂದು ದೇಹ ಕೆರಳುತ್ತದೆ. ನುಡಿದರೆ, ನುಡಿದವರಿಗೂ ಹಚ್ಚಿಕೊಂಡವರಿಗೂ ಸಿಟ್ಟು ಬರುತ್ತದೆ. ಕತ್ತೆ ಕತ್ತೆಯಲ್ಲ. ಅದು ಒಂದು ಪ್ರಾಣಿ. ಅದಕ್ಕೆ ಹೆಸರಿಟ್ಟವನು ಮನುಷ್ಯ . ಕತ್ತೆಗೆ ಕತ್ತೆ ಎಂದರೆ ಸಿಟ್ಟು ಬರುವುದಿಲ್ಲ. ಕತ್ತೆ ಅಲ್ಲದ ಮನುಷ್ಯನಿಗೇಕೆ ಸಿಟ್ಟು ಬರಬೇಕು? ಅರಿವು ಬಳಕೆಯಾಗಲಿಲ್ಲ. ಕಲಿತ ನುಡಿ, ನುಡಿಯಲು ಬರುತ್ತದೆ; ಅರಿವಿನಿಂದ ಕೇಳಲು ಬರುವುದಿಲ್ಲ. ಅರಿವು ಬಳಕೆಯಾಗದೆ ತನುವಿನಲ್ಲಿಯೇ ಉಳಿದು, ಕಲಿತ ನುಡಿ ಮನ ತನಗೆ ಬೇಕಾದಂತೆ ಹಚ್ಚಿಕೊಂಡು ತನುವನ್ನು ಕೆರಳುವಂತೆ ಇಲ್ಲ ಅರಳುವಂತೆ ಮಾಡುತ್ತದೆ.

ಶರಣರು ಅರಿವಿನಿಂದ ಶಬ್ದ ಕೇಳುತ್ತಾರೆ. ಅರಳುವುದಿಲ್ಲ ಕೆರಳುವುದಿಲ್ಲ; ರೋಷವಿಲ್ಲದೆ ನುಡಿಯುತ್ತಾರೆ. ಹರುಷವಿಲ್ಲದೆ ಕೇಳುತ್ತಾರೆ.

ವಿರಸವಿಲ್ಲದೆ ಮುಟ್ಟುವರು, ಸರಸವಿದ್ದಲ್ಲಿಯೇ ವಾಸಿಸುವರು:

ಮುಟ್ಟುವುದು ಬೇಡ; ನೋಡಿದರೆ ಸಾಕು ತನುವಿನಲ್ಲಿ ರಸಾಯನ ಕ್ರಿಯೆ ಉಂಟಾಗಿ ಇಡೀ ದೇಹವೇ ಕಾಮದಿಂದ ಅರಳುತ್ತದೆ. ಭೋಗಿಸುವ ರಸ ತನುವಿನಲ್ಲಿ ಉತ್ಪತ್ತಿಯಾಗುತ್ತದೆ. ನೋಡಿದ್ದಾದರೂ ಏನನ್ನು ಎಂದು ಕೇಳುವ ಸಮಯ ಕಣ್ಣಿಗೆ ಇಲ್ಲವಾಗುತ್ತದೆ. ಕಣ್ಣಿನಲ್ಲಿರುವ ಸತ್ಯ ಕಣ್ಣಿಗೆ ಬಳಕೆಯಾಗದೆ ತನುವನ್ನು ಕೆರಳಿಸುತ್ತದೆ. ತನುವಿಗೆ ತನುವನ್ನು ಮುಟ್ಟಿ ಸುಖಿಸುವ ಸಂದೇಶ ಕಣ್ಣಿನಿಂದಲೇ ರವಾನೆಯಾಗುತ್ತದೆ. ತನು ತನುವನ್ನು ನೋಡಲು ತನುವಿಗೆ ಕಣ್ಣುಗಳಿಲ್ಲ. ಕಣ್ಣಿನ ಮಾತು ತನು ಕೇಳಲೇಬೇಕು.

ಆದರೆ ಮುಟ್ಟುವ ಚರ್ಮದಲ್ಲಿ ಏನಿದೆ ಎಂದು ಚರ್ಮಕ್ಕೆ ಗೊತ್ತು. ಹಾಗೆಯೇ ಕಣ್ಣಿಗೆ ಕೂಡಾ ಗೊತ್ತು. ಆದರೂ ಕಾಮದ ಸರಸ ಹುಟ್ಟುತ್ತದೆ. ಅರಿತು ಒಳ ಕಣ್ಣಿನಿಂದ ವಿಚಾರಿಸಿದರೆ ನೋಡುವ ತನು ಹೇಗಿದ್ದರೇನು? ಅದು ತನ್ನಂತೆಯೇ ಚರ್ಮದ ಕವಚದಿಂದ ಬಂಧಿಸಲ್ಪಟ್ಟಿದೆ. ಚರ್ಮದ ಒಳಗೆ ರಕ್ತ ಮಾಂಸ ಮೂಳೆಗಳು ಇವೆ. ಮಜ್ಜೆ ಮೇದಸ್ಸು ಕೂಡಾ ಇದೆ. ಕಿವಿ ಮೂಗು ನಾಲಿಗೆ ಕಣ್ಣುಗಳಲ್ಲಿ; ಚರ್ಮದಲ್ಲಿ ವ್ಯತ್ಯಾಸವಿಲ್ಲ. ಈ ಅರಿವು ಕಣ್ಣಿನ ಗರ್ಭದಲ್ಲಿಯೇ ಉಳಿದು, ಕಣ್ಣಿನ ಅಜ್ಞಾನ ಮಾತ್ರ ಬಳಕೆಯಾಗುತ್ತದೆ. ಈ ತನು ವಿಕೃತವನ್ನೇ ನೋಡಿ ವಿಕೃತವಾಗುತ್ತದೆ. ಶರಣ ಅರಿವಿನಿಂದ ನೋಡಿ ವಿರಸವಿಲ್ಲದ ಮಮತೆಯಿಂದ ಮುಟ್ಟುತ್ತಾನೆ. ಸಹಜ ಸ್ಪರ್ಶಜ್ಞಾನ ಬಳಕೆಯಾಗಿ ಪುಳಕಿತನಾಗುತ್ತಾನೆ. ಸರಸ ಸಲ್ಲಾಪವಿದ್ದ ಸಲ್ಲಲಿತ ಜ್ಞಾನವಿದ್ದಲ್ಲಿಯೇ ವಾಸಿಸುತ್ತಾನೆ. ಶರಣರ ಸಂಗದಲ್ಲಿಯೇ ವಿರಮಿಸುತ್ತಾನೆ.

ಇಂತಪ್ಪ ಬೆರಸಿ ಬೇರಿಲ್ಲದ ನಿಜೈಕ್ಯಂಗೆ ನಮೋ ನಮೋ ಎಂಬೆ!

ಶರಣ ಸಂಸಾರದಲ್ಲಿರುತ್ತಾನೆ. ಆದರೆ ಸಂಸಾರದ ಎಲ್ಲ ಮಾತುಗಳನ್ನು ಕರಗಿಸಿ ಜೀರ್ಣಿಸಿಕೊಂಡು ವಿರಮಿಸುತ್ತಾನೆ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ತನುವಿನಲ್ಲಿಯೇ ಪ್ರಸಾದವಾದ ನಿಮಿತ್ತ ಯಾವ ವೇಷವನ್ನು ಹಾಕುವುದಿಲ್ಲ. ದೇಶವ ತಿರುಗುವುದಿಲ್ಲ ಕಲಿತ ಮಾತು ಆಡುವುದಿಲ್ಲ. ಲೇಸಾಗಿ ಆಸೆ ರೋಷ ಹರುಷವಿಲ್ಲದೆ ನುಡಿವನು. ಎಲ್ಲದರಲ್ಲಿಯೂ ಬೆರೆಯುತ್ತಾನೆ. ಯಾವುದಕ್ಕೂ ಬೇಯುವುದಿಲ್ಲ. ಇಂತಪ್ಪ ನಿಜ ಅರಿವಿನಲ್ಲಿ ಐಕ್ಯವಾದ ಶರಣನಿಗೆ ನಮೋ ನಮೋ ಎಂಬೆನು. ಇಂತಹ ಅರಿವಿನ ನೆಲೆ ಎಲ್ಲ ತನುಗಳಲ್ಲಿಯೂ ಇದೆ. ಅದನ್ನು ಬಲ್ಲವರಿಂದ ಕಲಿತು ತನುವಿನಲ್ಲಿಯೇ ಹುಡುಕಬೇಕಾಗಿದೆ.

32

ಅಯ್ಯಾ ನೀನಿಲ್ಲದಿದ್ದರೆ ಎನಗೆ ಮುನ್ನ ನಾಮರೂಪುಂಟೆ?
ನೀ ಮಾಡಲಾದೆನಯ್ಯಾ.
ಅದು ಕಾರಣವಾಗಿ ನಾ ಬಂದ ಭವಾಂತರದಲ್ಲಿ ನೀವು ಬರುತ್ತಿದ್ದಿರಾಗಿ,
ಇನ್ನೆನ್ನ ಗುರು ತಂದೆಗೆ ಬಳಲಿಕೆ ಆಗುತ್ತದೆ ಎಂದು ನಾ ನೋಡಲಾಗಿ,
ನೀವೆನ್ನ ಭವವ ಕೊಂಡಿರಾಗಿ.
ಇದು ಕಾರಣ, ಅಂದಂದಿಗೆ ನೂರು ತುಂಬಿತ್ತೆಂಬ ಭೇದವನು ನೀವೆ ತೋರಿದಿರಿ.
ಇದನರಿದರಿದು ನಾನು ಹಿಂದಣ ಭವವ ಹರಿದು,
ಮುಂದಣ ಭಾವ ಬಯಕೆಯ ಮುಗ್ಧವ ಮಾಡಿ,
ಹೊಂದದ ಬಟ್ಟೆಯನೆ ಹೊಂದಿ,
ಸದಮಳಾನಂದ ಚೆನ್ನಮಲ್ಲೇಶ್ವರನ ನಂಬಿ ಕೆಟ್ಟು,
ಬಟ್ಟ ಬಯಲಾದೆನಯ್ಯಾ. ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಜ್ಞಾನ ಇಲ್ಲದ ತನುವಿಲ್ಲ. ತನುವಿಲ್ಲದ ಜ್ಞಾನವಿಲ್ಲ. ಜ್ಞಾನವಿಲ್ಲದಿದ್ದರೆ ನಾಮರೂಪುಗಳು ಮೊದಲೇ ಇಲ್ಲ. ನೋಡುವ ಕಣ್ಣಿನಲ್ಲಿ, ಕೇಳುವ ಕಿವಿಯಲ್ಲಿ, ಸ್ಪರ್ಶಿಸುವ ಚರ್ಮದಲ್ಲಿ, ರುಚಿಸುವ ನಾಲಗೆಯಲ್ಲಿ, ಘ್ರಾಣಿಸುವ ಮೂಗಿನಲ್ಲಿ ಜ್ಞಾನವಿದೆ. ಜ್ಞಾನ ಇಲ್ಲದಿದ್ದರೆ, ನೋಡಲು ಕೇಳಲು

ಮುಟ್ಟಲು ರುಚಿಸಲು ಘ್ರಾಣಿಸಲು ಬರುವುದಿಲ್ಲ.

ಅರಿವೆಂಬ ಗುರುದೇವನೇ ಲಿಂಗಯ್ಯನಾಗಿ ಬಂದು ಅಂಗದಲ್ಲಿ ಚುಳುಕಾಗಿದ್ದಾನೆ. ಲಿಂಗಾಂಗವಾಗಿದ್ದಾನೆ. ಈ ಸಾಮರಸ್ಯವನ್ನು ಭೇದಿಸಿದ ಅಪ್ಪಣ್ಣ ಶರಣರು; ನೀನಿಲ್ಲದಿದ್ದರೆ ನನಗೆ ನಾಮರೂಪುಗಳಿಲ್ಲ; ನೀ ಮಾಡಲು ಆನಾದೆನು ಎಂದಿದ್ದಾರೆ.

ಅದು ಕಾರಣ ನಾ ಬಂದ ಬಂದ ಭವಾಂತರದಲ್ಲಿ ನೀವು ಬರುತ್ತಿದ್ದಿರಾಗಿ:

ಲಿಂಗಯ್ಯನೆಂಬ ಗುರುದೇವ ಮಾಡಲಾಗಿ ಅಂಗವೆಂಬ ನಾನು ಆದೆನು. ನೀ ಮಾಡಿ ನನ್ನನ್ನು ಮರೆತ ಕಾರಣ; ನಿನ್ನಿಂದ ಹುಟ್ಟಿದ ನಾನು ನಿನ್ನನ್ನು ಮರೆತ ಕಾರಣ ಜನನ ಮರಣಗಳ ಬಾಧೆಗೆ ಗುರಿಯಾದೆ. ನನ್ನನ್ನು ಹುಟ್ಟಿಸಿದಿರಿ; ನನ್ನನ್ನು ಸಾಯಿಸಿದಿರಿ. ಹುಟ್ಟು ಸಾವುಗಳ ಮಧ್ಯೆ ಅದಕ್ಕಾಗಿ ಬದುಕಿದೆನೆ ಹೊರತು ನಿಮ್ಮನ್ನು ನೋಡಲಿಲ್ಲ. ನನ್ನ ಗುರುತಂದೆಗೆ ಬಳಲಿಕೆಯಾಗ ಬಾರದೆಂದು ನಾನು ನನ್ನಂಗದಲ್ಲಿಯೇ ನೋಡಲಾಗಿ ಆ ಅಂಗವೇ ಲಿಂಗಯ್ಯನ ಕುರುಹೆಂದು ತೋರಿ ನನ್ನ ಜನನ ಮರಣದ ಬಾಧೆಯನ್ನು ನೀವೆ ತೆಗೆದುಕೊಂಡಿರಿ.

ಇದು ಕಾರಣ ಅಂದಂದಿಗೆ ನೂರು ತುಂಬಿತ್ತೆಂಬ ಭೇದವನು ನೀವೇ ತೋರಿದಿರಿ:

ಅಂಗದಲ್ಲಿರುವ ಲಿಂಗಯ್ಯನ ಕಂದನಾದ ನನಗೆ ನಿಮ್ಮ ದರುಶನವಾದ ಕೂಡಲೇ ಅಜ್ಞಾನದ ನೂರು ವರುಷಗಳು ತುಂಬಿತ್ತೆಂಬ ಭೇದವನು ನೀವೇ ತೋರಿದಿರಿ. ನೀವು ತೋರಿದ ನಿಮಿತ್ತ ಮಾಂಸ ಪಿಂಡ ನಿಮ್ಮಿಂದ ಮಂತ್ರಪಿಂಡವಾಯಿತು. ಹೊಸ ಜನ್ಮ ಪಡೆದು ಜನನ ಮರಣದ ಬಾಧೆಗಳಿಲ್ಲದ ಯುಗಪುರುಷನಾಯಿತು. ಇದನರಿದರಿದು ಹಿಂದಿನ ಜನನ ಮರಣವು ಹರಿಯಿತು.

ತನುವಿನ ಭಾವವನು ನಿರ್ಭಾವಗೊಳಿಸಿ ಮುಗ್ದ ಮಾಡಿದಿರಿ. ತೋರದ ದಾರಿಯನ್ನೇ ತೋರಿ ಸದಮಲಾನಂದ ಚೆನ್ನಮಲ್ಲೇಶ್ವರನ ನಂಬಿದೆನು. ಆತ ನನ್ನ ಅಂಗದೊಂದಿಗೆ ಬೆರೆತು ಅಜ್ಞಾನವ ಕೆಡಿಸಿದನು. ಸುಶೀಲೆಯಾಗಿ ಆತನೊಂದಿಗೆ ಬೆರೆತು ಆತನನ್ನೇ ನಂಬಿ ಆತನೊಂದಿಗೆ ಸುಖಿಸಿ ಅಮಲಾನಂದ ಹೊಂದಿ ಬಟ್ಟ ಬಯಲಾದೆನು. ಅಂಗವಿದ್ದೂ ಲಿಂಗಯ್ಯನೊಂದಿಗೆ ಬೆರೆತು ಬಟ್ಟ ಬಯಲಾಗುವುದೆಂದರೆ ಸಾಮಾನ್ಯ ಮಾತಲ್ಲ. ಸಾಮಾನ್ಯರಿಗೂ ತಿಳಿದು ಅಸಾಮಾನ್ಯ ಪದವಿ ಹೊಂದಲೆಂದು ನುಡಿದ ನುಡಿಗೆಟ್ಟ ಮಾತು. ಅಪ್ಪಣ್ಣ ಶರಣರ ಮಾತಲ್ಲದ ಮಾತು. ಅಮಲಾನಂದ ಪದವಿ ಹೊಂದುವ ಸೂತ್ರದ ಮಾತು.

33

ಅಯ್ಯಾ ಲಿಂಗವ ಪೂಜಿಸಿಹೆನೆಂದು ಅಂಗದ ಕುರುಹ ಮರೆದೆ.
ಜಂಗಮವ ಪೂಜಿಸಿಹೆನೆಂದು ಪ್ರಾಣದ ಕುರುಹ ಮರೆದೆ.
ಪ್ರಸಾದವ ಕೊಂಡಿಹೆನೆಂದು ಪರವ ಮರೆದೆ.
ಈ ತ್ರಿವಿಧದ ಭೇದವನು ಶ್ರುತಿ ಸ್ಮೃತಿಗಳರಿಯವು.
ಹರಿಹರ ಬ್ರಹ್ಮದೇವ ದಾನವರು ಅರಿಯರು.
ನಮ್ಮ ಶರಣರೆ ಬಲ್ಲರು.
ಇವ ಬಲ್ಲ ಶರಣ ಚೆನ್ನಮಲ್ಲೇಶ್ವರ ಹೋದ ಹಾದಿಯಲ್ಲದೆ
ಎನಗೆ ಬೇರೊಂದು ಹಾದಿ ಇಲ್ಲವಯ್ಯಾ,

ಬಸವಪ್ರಿಯ ಕೂಡಲಚೆನ್ನಬಸವಣ್ಣಾ.
ಇದಕ್ಕೆ ಮರ್ತ್ಯಲೋಕದ ಮಹಾಗಣಂಗಳೇ ಸಾಕ್ಷಿ.

ಲಿಂಗ ಕುರುಹು; ಅಂಗ ಕೂಡಾ ಕುರುಹು. ಅಂಗವಿಲ್ಲದೆ ಲಿಂಗ ಪೂಜಿಸುವುದೆಂತು? ಅಂಗದೊಂದಿಗೆ ಲಿಂಗ ಪೂಜಿಸುವುದು ಗೋಚರದ ಪೂಜೆ. ಅಪ್ಪಣ್ಣ ಶರಣರು ಪೂಜಿಸಿದ ಪೂಜೆಯು ಅಗೋಚರದ ಪೂಜೆ. ಈ ಪೂಜೆಗೆ ಲಿಂಗಬೇಕಿಲ್ಲ. ಕಣ್ಣಿಗೆ ಕಾಣುವ ಅಂಗಗಳೆಲ್ಲ ಲಿಂಗಗಳೇ. ಅಂಗ ಹೆಣ್ಣಲ್ಲ; ಗಂಡಲ್ಲ. ಆದರೆ ಲಿಂಗಪೂಜಿಸುವ ಎಲ್ಲರಿಗೂ ಅಂಗ ಹೆಣ್ಣಾಗಿ ಗಂಡಾಗಿ ಕಾಣುತ್ತದೆ. ಅಂಗ ಜಾತಿ ಮತ ಪಂಥಗಳಿಂದ ತೋರುತ್ತದೆ. ಅರಸ ಅರಸಿ ಪ್ರಧಾನಿ ಸೈನಿಕನಾಗಿ ಕಾಣುತ್ತದೆ. ಭಿಕ್ಷುಕ ಧನಿಕನಾಗಿ ಕಾಣುತ್ತದೆ. ಕಣ್ಣಿನಲ್ಲಿ ಲಿಂಗವೆಂಬ ಅರಿವಿದ್ದೂ ನಾನು ಎಂಬ ಅಜ್ಞಾನಕ್ಕೆ ತೋರದ ನಿಮಿತ್ತ ಅಂಗದಲ್ಲಿರುವ ಸತ್ಯ ಅಂಗಕ್ಕೆ ಹೊಳೆಯುತ್ತಿಲ್ಲ.

ನಾನು ಎನ್ನುವ ಮನದಿಂದ ಕಣ್ಣಿನಲ್ಲಿರುವ ಲಿಂಗವನ್ನು ಪೂಜಿಸಿದಾಗ ನಾನು ಲಿಂಗದ ಕಣ್ಣಿನಲ್ಲಿ ಬೆರೆತು ಲಿಂಗವೇ ಆಗುತ್ತದೆ. ಲಿಂಗದ (ಅರಿವಿನ) ಕಣ್ಣಿನಿಂದ ನೋಡಿದಾಗ ಅಂಗಗಳೆಲ್ಲ ಲಿಂಗಗಳೇ. ಅಂಗದ ಕುರುಹು ಇಲ್ಲವಾಗಿ ಲಿಂಗವೊಂದೇ ಉಳಿಯುತ್ತದೆ. ಅಂಗ ಯಾವುದಾದರೇನು? ಅದು ಲಿಂಗಯ್ಯನ ಸಂಪತ್ತು. ಅಂಗದ ಕುರುಹ ಮರೆತು ಪೂಜಿಸಲೇಬೇಕು. ಪೂಜಿಸುವುದೆಂದರೆ ಕುರುಹು ಮರೆತು ನೋಡುವುದೇ ಪೂಜೆ. ಇದೇ ಅಗೋಚರದ ಪೂಜೆ.

ಜಾತಿಯಿಂದ ಬಂದ ಜಂಗಮ ಜಂಗಮನಲ್ಲ. ಅಂಗದಲ್ಲಿರುವ ಅರಿವಿನ ಲಿಂಗದರುಶನ ಮನಕ್ಕೆ ಆದರೆ, ಆ ಮನ ಹೆಳವನಾಗುತ್ತದೆ. ಲಿಂಗಯ್ಯನೆಂಬ ಗುರುದೇವನ ನುಡಿ ಪಾಲಿಸುವ ಜಂಗಮ ಹುಟ್ಟುತ್ತಾನೆ. ಆತನಿಗೆ ಪ್ರಾಣದ ಹಂಗು ಇಲ್ಲ. ಅರಸ ಪ್ರಧಾನಿ ಸರಕಾರದ ಕಟ್ಟಳೆಗಳು ಆತನಿಗಿಲ್ಲ. ಅರಿವಿನಿಂದ ನೋಡುತ್ತಾನೆ. ಅಜ್ಞಾನದ ನೋಟ ಕತ್ತರಿಸುತ್ತಾನೆ; ಅಜ್ಞಾನದ ಶಬ್ದ ಸೀಳಿ ನಪುಂಸಕ ಮಾಡಿ ಪ್ರಸಾದವಾಗಿ ಸ್ವೀಕರಿಸುತ್ತಾನೆ.

ಪ್ರಸಾದವ ಕೊಂಡಿಹೆನೆಂದು ಪರವ ಮರೆದೆ:

ಸ್ವರ್ಗ ನರಕವೆಂಬುದು ಬೇರಿಲ್ಲ. ಸತ್ಯ ನುಡಿವ ತನುವೇ ಸ್ವರ್ಗ. ಮಿಥ್ಯೆ ನುಡಿವ ತನುವೇ ನರಕ. ಶರಣನಿಗೆ ಇಹ ಪರಗಳಿಲ್ಲ ಅಂದರೆ ಸ್ವರ್ಗ ನರಕಗಳಿಲ್ಲ. ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಪ್ರಸಾದವನ್ನು ಸ್ವೀಕರಿಸಿದ ಶರಣ ಸ್ವರ್ಗವನ್ನು ಮೆಟ್ಟಿ ನಿಂತವನು.

ನೋಡಿದ ರೂಪ ಅಂಗಕ್ಕೆ ಲಿಂಗವಾಗಿ ಪ್ರಸಾದವಾದಾಗ ಅಂಗದಲ್ಲಿ ರಸಾಯನಿಕ ಕ್ರಿಯೆ ಉಂಟಾಗುವುದಿಲ್ಲ. ರೂಪಕ್ಕೆ ಕಾರಣವಾದ ನಿರೂಪದ ಪೂಜೆಯೆ ಶರಣನಿಗೆ ಸ್ವರ್ಗಸುಖ. ಕೇಳಿದ ಶಬ್ದವೆಲ್ಲ ತನುವಿಗೆ ಬಡಿದು ತನುವಿನಲ್ಲಿಯೇ ಅರಿವಿನ ಪ್ರಸಾದವಾಗಿ ಅರಳಿದಾಗ ತನುವಿನಲ್ಲಿ ರಸಾಯನಿಕ ಕ್ರಿಯೆ ಹುಟ್ಟಲಿಲ್ಲ. ಕೇಳಿದ ಶಬ್ದಗಳೆಲ್ಲ ಸ್ವರ್ಗ ಸುಖ ನೀಡುತ್ತವೆ. ಮುಟ್ಟಿದ ವಸ್ತುಗಳೆಲ್ಲ ಚರ್ಮಕ್ಕೆ ಪ್ರಸಾದವಾಗಿ ರುಚಿಸಿದ ಪದಾರ್ಥವೆಲ್ಲ ನಾಲಿಗೆಗೆ ಪ್ರಸಾದವಾಗಿ ಅರಿವಿನ ಸುಖ ನೀಡುತ್ತದೆ. ಮೂಸಿಸಿದ ಸುಗಂಧ ದುರ್ಗಂಧಗಳೆಲ್ಲ ಮೂಗಿಗೆ ಪರಿಮಳವಾಗಿ ಬಡಿದು ಅರಿವಿನ ಸುಖ ನೀಡುತ್ತವೆ. ಶರಣ ಪ್ರಸಾದ ಸ್ವೀಕರಿಸಿ ಪರವೆಂಬ ಸ್ವರ್ಗವನ್ನು ಮರೆಯುತ್ತಾನೆ. ಅದು ಆತನಿಗೆ ತೃಣ. ಅರಿವೇ ಆತನಿಗೆ ಘನ.

ಈ ತ್ರಿವಿಧದ ಭೇದವನ್ನು ಶ್ರುತಿ ಸ್ಮೃತಿಗಳರಿಯವು ಹರಿಹರ ಬ್ರಹ್ಮ ದೇವದಾನವ

ಮಾನವರು ಅರಿಯರು, ಶರಣರು ಮಾತ್ರ ಬಲ್ಲರು. ಚೆನ್ನಬಸವಣ್ಣ ಹೋದ ಹಾದಿಯಲ್ಲದೆ ನನಗೆ ಬೇರೊಂದು ಹಾದಿ ಇಲ್ಲ. ಇದಕ್ಕೆ ಮರ್ತ್ಯಲೋಕದ ಮಹಾಗಣಂಗಳೇ ಸಾಕ್ಷಿ ಎಂದಿದ್ದಾರೆ ಅಪ್ಪಣ್ಣ ಶರಣರು.

34

ಅಯ್ಯಾ ಶಿವಭಕ್ತರು ನುಡಿವಲ್ಲಿ ಜಾಣತನದಿಂದ ನುಡಿವರು.
ನೀಡುವಲ್ಲಿ ಭೇದದಿಂದ ನೀಡುವರು.
ಕೊಡುವಲ್ಲಿ ಸತ್ಪಾತ್ರಕ್ಕೆ ಕೊಡುವರು.
ಬಿಡುವಲ್ಲಿ ಶರಣ ಗೋಷ್ಠಿಯ ಬಿಡುವರು.
ಪೊಡವಿಯೊಳಿವರ ಭಕ್ತರೆನ್ನಬಹುದೇ?
ಅದಂತಿರಲಿ, ಎನ್ನೊಡೆಯ ಬಸವಪ್ರಿಯನಡಿಗಳ ನೆನೆವ ಲಿಂಗೈಕ್ಯರು
ಮೆಡುವ ಪಡುಗ ಪಾದರಕ್ಷೆಯ ಕಾಯ್ದಿರಿಸಯ್ಯಾ, ಚೆನ್ನಬಸವಣ್ಣಾ.

ಅಯ್ಯಾ ಶಿವಭಕ್ತರು ನುಡಿವಲ್ಲಿ ಜಾಣತನದಿಂದ ನುಡಿವರು. ನೀಡುವಲ್ಲಿ ಭೇದದಿಂದ ನೀಡುವರು:

ತನುವಿನಲ್ಲಿರುವ ಅರಿವೇ ಗುರು. ಆ ಗುರುದೇವನೇ ಮಹಾದೇವ. ಆ ಮಹಾದೇವನೇ ಸದಾಶಿವ. ಈ ಶಿವನಿಗೆ ಭಕ್ತನಾದವನು ನುಡಿವಲ್ಲಿ ಅರಿವಿನಿಂದ ಜಾಣತನದಿಂದ ನುಡಿವನು. ಈ ಜಾಣತನವನ್ನು ಬಳಕೆ ಮಾಡುವ ಬಗ್ಗೆ ಸೂತ್ರವ ನೀಡಬೇಕಾದಲ್ಲಿ ಭೇದದಿಂದ ನೀಡುವನು. ಭೇಡುವ ತನು ಅರಿವಿನ ಸೂತ್ರವನ್ನು ಸದ್ಬಳಕೆ ಮಾಡುವುದೊ ಇಲ್ಲವೋ ಎಂದು ತಿಳಿದು ಯೋಗ್ಯ ತನುವಿಗೆ ಸೂತ್ರ ಕರುಣಿಸುವನು.

ಕೊಡುವಲ್ಲಿ ಸತ್ಪಾತ್ರಕ್ಕೆ ಕೊಡುವರು. ಬಿಡುವಲ್ಲಿ ಶರಣಗೋಷ್ಟಿಯ ಬಿಡುವರು:

ಸತ್ಪಾತ್ರದ ತನುವಿಗೆ ಮಾತ್ರ ಶರಣರು ಕರುಣಿಸುವರು. ಬಿಡಬೇಕಾಗಿ ಬಂದರೆ ಶರಣ ಗೋಷ್ಠಿಯ ಬಿಡುವರು. ಜನ ಇಂತಹವರನ್ನು ಶರಣರೆನ್ನಲು ಸಾಧ್ಯವೇ? ಲೋಕ ವಿರೋಧಿ ಶರಣ; ಶರಣ ವಿರೋಧಿ ಲೋಕ. ಲೋಕಕ್ಕೆ ಶರಣನ ಮಾರ್ಗದರ್ಶನ ಬೇಡ; ಶರಣನಿಗೆ ಲೋಕಕ್ಕೆ ಮಾರ್ಗದರ್ಶನ ಕೊಡುವುದು ಬೇಡ. ಏಕೆಂದರೆ ಪ್ರತಿ ತನುವಿನಲ್ಲಿ ಅರಿವು ಇದೆ; ಅದನ್ನು ಬಳಕೆ ಮಾಡುವ ಜಾಣತನವೂ ಇದೆ. ಜನ ಬಯಸಿದರೆ ಶರಣ ಈ ಸೂತ್ರವನ್ನು ಹೇಳಬಲ್ಲ. ಉಚಿತ ಉಪದೇಶ ಯಾರಿಗೂ ಬೇಡ. ಒಲ್ಲದ ಗೋಷ್ಠಿ ಶರಣನಿಗೂ ಬೇಡ.

ತನುವಿನ ಅಜ್ಞಾನದ ರೋಗ ಉಲ್ಬಣವಾಗಬೇಕಾಗಿದ್ದಲ್ಲಿ ತನು ಶರಣನಿರುವಲ್ಲಿಗೆ ಸುಳಿಯದು. ಶರಣನೂ ತನುವಿದ್ದಲ್ಲಿಗೆ ಸುಳಿಯ. ಗಂಧವಿಲ್ಲದ ಹೂವಿಗೆ ದುಂಬಿ ಚುಂಬಿಸದು. ಎನ್ನೊಡೆಯ ಸದ್ಗುರು ಚೆನ್ನಬಸವಣ್ಣ ನಡಿಯ ನೆನೆವ ಶರಣ ಲಿಂಗೈಕ್ಯ. ಆತ ಮೆಡುವ ಪಡುಗ ಪಾದರಕ್ಷೆಯ ಕಾಯ್ದಿರಿಸಯ್ಯ ಎಂದಿದ್ದಾರೆ ಅಪ್ಪಣ್ಣ ಶರಣರು.

35

ಅಯ್ಯಾ ಹಾಳೂರೊಳಗೊಂದು ಹಗವ ಕಂಡೆನಯ್ಯಾ.

ಹಗದ ಮೇಲೊಂದು ಬಾವಿ ಹುಟ್ಟಿತ್ತು.
ಹಗದ ಬಾವಿ ನಡುವೆ ವಡವಾಗ್ನಿಯೆಂಬ ಕಿಚ್ಚು ಹುಟ್ಟಿತ್ತು.
ಆ ಹಗದ ಧ್ಯಾನವ ತೆಗೆತೆಗೆದು,
ಬಾವಿಯ ನೀರ ಮೊಗೆ ಮೊಗೆದು,
ವಡವಾಗ್ನಿಯೆಂಬ ಕಿಚ್ಚಿನೊಳಗೆ ಅಡಿಗೆಯ ಮಾಡಿಕೊಂಡು,
ಉಂಡು ಉಟ್ಟಾಡ ಬಂದರು, ಹಲಬರು ಕೆಲಬರು.
ಉಂಡುಟ್ಟಾಡಿ ಗಂಡು ಗೆಲುವುದ ಕಂಡು ತಾಳಲಾರದೆ,
ಕುಂಡಲಿ ಅಗ್ನಿಯ ಎಬ್ಬಿಸಿ ಉರುಹಿದಡೆ,
ಇವರೆಲ್ಲರೂ ದಹನವಾದರು.
ಆ ಹಗವು ಬೆಂದಿತ್ತು, ಬಾವಿಯು ಬತ್ತಿತ್ತು,
ವಡವಾಗ್ನಿಯೆಂಬ ಕಿಚ್ಚು ಕೆಟ್ಟಿತ್ತು.
ಇದ ಕಂಡು ನಾ ನಿಮ್ಮೊಳು ಅಚ್ಚೊತ್ತಿದಂತಿರ್ದೆನಯ್ಯಾ.
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಅಪ್ಪಣ್ಣ ಶರಣರು ತನುವನ್ನು ಬೆಡಗಿನಿಂದ ಬಣ್ಣಿಸಿದ್ದಾರೆ. ತನುವೆಂಬುದೊಂದು ಧಾನ್ಯದ ಕಣಜ (ಹಗೇವು) ಇದ್ದಂತೆ. ಈ ಖಣಜದ ಮೇಲೊಂದು ಬಾವಿ ಹುಟ್ಟಿದೆ. ಹಗೇವು ಮತ್ತು ಬಾವಿ ನಡುವೆ ವಡವಾಗ್ನಿ ಹುಟ್ಟಿದೆ; ಸಮುದ್ರದ ನಡುವೆ ಅಗ್ನಿ ಹುಟ್ಟಿದಂತೆ. ಜಲದಲ್ಲಿ ಅಗ್ನಿ ಹುಟ್ಟುವುದೆಂದರೇನು ಎಂದು ವಿಚಾರಿಸಲು ಹೋದರೆ ಅಂಗದಲ್ಲಿ ಅರಿವಿದೆ. ಅದನ್ನು ಮನ ಅರಿತು ಲಿಂಗಾಂಗವಾಗಬೇಕು. ಹೀಗಾಗದಿದ್ದರೆ ಅದು ವಡವಾಗ್ನಿ. ಮನ, ತನುವನ್ನು ಸುಖಕ್ಕಾಗಿ ಕಾಡಿ ಸುಡುತ್ತದೆ. ಬೇಡಿ ಸುಡುತ್ತದೆ. ನೋಡಿ, ಕೇಳಿ, ಮೂಸಿಸಿ, ರುಚಿಸಿ. ಸ್ಪರ್ಶಿಸಿ ಸುಡುತ್ತದೆ. ಮನಕ್ಕೆ ತನು ಒಮ್ಮೆ ಸುಖಕ್ಕೆ ತುತ್ತಾಗಿ ಸುಡುತ್ತದೆ; ದುಃಖಕ್ಕೆ ತುತ್ತಾಗಿ ಸುಡುತ್ತದೆ. ಸುಖದುಃಖಗಳ ಅಡಿಗೆಯನ್ನು ತನುವಿನಲ್ಲಿ ಸೃಷ್ಟಿಯಾದ ಕೋಪಾಗ್ನಿಯಿಂದ ಮಾಡಿಕೊಂಡು ಉಣ್ಣುತ್ತದೆ.

ತನು ಸುಖ ದುಃಖಗಳ ಕಣಜವೂ ಹೌದು, ಬಾವಿಯೂ ಹೌದು ಬಾವಿಯಲ್ಲಿಯೇ ಹುಟ್ಟಿದ ವಡವಾಗ್ನಿಯೂ ಹೌದು. ಇದೆಲ್ಲ ತನುವಿನಲ್ಲಿಯೇ ಇದೆ. ಮನವೆಂಬ ಹಾದರಗಿತ್ತಿಯ ಸುಖದುಃಖಗಳನ್ನು ಉಂಡು ಉಟ್ಟಾಡಿ ಗೆಲುವ ಅರಿವಿನ ಗಂಡನು ತನುವಿನಲ್ಲಿಯೇ ತನ್ಮಯವಾಗಿದ್ದಾನೆ.

ಅರಿವಿನ ನಲ್ಲ ಎಬ್ಬಿಸಿದ ಅಗ್ನಿಯ ಉರಿ ತಾಳಲಾರದೆ ಹಾದರಗಿತ್ತಿ ದಹನವಾಗಿ ಪತಿಗೆ ಸತಿಯಾದಳು. ಆತನ ಕುಂಡಲಿನೀ ಶಕ್ತಿಗೆ ಮೊರೆ ಹೋದಳು. ಹಗೇವು ಬೆಂದು ಬಾವಿ ಬತ್ತಿ ಹೋಯಿತು. ವಡವಾಗ್ನಿಯ ಕಿಚ್ಚು ಕೆಟ್ಟಿತ್ತು.

ಇದ ಕಂಡು ನಾನು ಎಂಬ ಅಹಂಕಾರ ನಿಮ್ಮೊಳಡಗಿ ಅಂಗದಲ್ಲಿ ಅಚ್ಚೊತ್ತಿದ ಅರಿವಿನ ಲಿಂಗವಾಗಿ ಅರಿವಿನೊಂದಿಗೆ ಇರ್ದೆನಯ್ಯಾ. ಬಸವಣ್ಣನಿಗೆ ಪ್ರಿಯನಾದ ಕೂಡಲಚೆನ್ನಬಸವಣ್ಣಾ.

36

ಅಯ್ಯಾ ಹುಟ್ಟಿದ ಮನುಜರೆಲ್ಲ

ಹೊಟ್ಟೆ ಹೊಟ್ಟೆ ಎಂದು ಹೊಟ್ಟೆಗೆ ಹಸಿದು, ಹೊಟ್ಟೆಗೆ ಕುದಿದು,
ಹೊಟ್ಟೆಗೆ ಹೊರೆದು, ಹೊಟ್ಟೆಗೆ ತುಂಬಿ,
ತಾವು ಬಂದ ಬಟ್ಟೆಯನೆ ಅರಿಯದೆ ಕೆಟ್ಟಿತ್ತು ಜಗವೆಲ್ಲ.
ಅದಂತಿರಲಿ. ಇನ್ನು ಆ ಶರಣರ ಮತವೆಂತೆಂದರೆ,
ಹೊಟ್ಟೆ ಎಂಬುದನೆ ಮೆಟ್ಟಿಟ್ಟು ತೂರಿ,
ಅಲ್ಲಿದ್ದ ಗಟ್ಟಿಯಾಗಿದ್ದ ಪ್ರಸಾದವನೆ ಊಟವೆಂದು ಹಿಡಿದು,
ಮುಟ್ಟಿ ನಿಮ್ಮೊಡಳಲಿವೆರೆದು, ಬಟ್ಟ ಬಯಲಾದರು ಕಾಣಾ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಹುಟ್ಟಿದ ಮನುಜರೆಲ್ಲ ಹೊಟ್ಟೆಗಾಗಿಯೇ ಕೆಟ್ಟರು. ಬಂದ ಬಟ್ಟೆಯನು ಅರಿಯಲಿಲ್ಲ. ಬಟ್ಟೆ ಎಂದರೆ ಅರಿವಿನ ದಾರಿ. ಅರಿವಿನ ದಾರಿಯಲ್ಲಿ ನಡೆದು ಲೀಲಾ ವಿನೋದ ತೋರಲು ತನು ಬಂದಿದೆ. ದಾರಿ ತೋರುವ ಗುರು ತನುವಿನಲ್ಲಿದ್ದರೂ, ತನುವಿನಲ್ಲಿಯೇ ಇದ್ದ ಭಕ್ತನೆಂಬ ಮನ ಅರಿವಿನ ಗುರುವನು ಅರಿಯುತ್ತಿಲ್ಲ.

ಹೊಟ್ಟೆ ಎಂಬುವನೆ ಮೆಟ್ಟಿ ತೂರಿ, ಅಲ್ಲಿದ್ದ ಗಟ್ಟಿಯಾಗಿದ್ದ ಪ್ರಸಾದವನೆ ಊಟವೆಂದು ಹಿಡಿದು ಮುಟ್ಟಿ ನಿಮ್ಮೊಡಳಲಿವೆರೆದು ಬಟ್ಟ ಬಯಲಾದರು ಕಾಣಾ:

ಶರಣರು ವಿಜ್ಞಾನಿಗಳು; ಉದರ ಪೋಷಣೆಗಾಗಿ ಬದುಕಿದವರಲ್ಲ. ಹೊಟ್ಟೆಯನು ಮೆಟ್ಟಿ ತೂರಿದರು. ಗಟ್ಟಿಯಾಗಿದ್ದ ಅರಿವಿನ ಪ್ರಸಾದವನೆ ಊಟವೆಂದು ಹಿಡಿದರು. ಇದು ಯಾರಿಗೂ ಸಾಧ್ಯವಾಗುವುದಿಲ್ಲ; ಶರಣರಿಗೆ ಮಾತ್ರ ಸಾಧ್ಯವಾಗುತ್ತದೆ.

ಪ್ರತಿಯೊಂದು ಕಾಳು ಜಲದಿಂದಲೇ ಗಟ್ಟಿಯಾಗಿದೆ. ತನು ಕೂಡಾ ಜಲದಿಂದಲೇ ಗಟ್ಟಿಯಾಗಿದೆ. ಆದರೂ ನಾಲಗೆ ಸಕ್ಕರೆ, ಬೆಲ್ಲ, ಹುಳಿ, ಖಾರ, ಖಾದ್ಯ, ಪಾಯಸದಂತಹ ಮೃಷ್ಟಾನ್ನಗಳನ್ನೇ ಬಯಸುತ್ತದೆ. ಜಲ ಹರಿದು ಕಬ್ಬು ಗಟ್ಟಿಗೊಂಡು ಸಕ್ಕರೆ ನೀಡಿತು, ಜಲ ಹರಿದು ಹುಳಿ, ಖಾರ, ಖಾದ್ಯ ತೈಲವಾಯಿತು. ಜಲಬಿಂದು ಗರ್ಭದಲ್ಲಿ ಹೊಕ್ಕು ತನುವಾಯಿತು. ತನು ಕೂಡಾ ಜಲದಿಂದ ಗಟ್ಟಿಯಾಗಿದೆ. ಸಕಲ ಆಹಾರ ಪದಾರ್ಥಗಳು ಕೂಡಾ ಜಲದಿಂದಲೇ ಗಟ್ಟಿಯಾಗಿವೆ. ಜಲ ಜಲವನ್ನು ಬಯಸುವುದು, ಜಲಕ್ಕಾಗಿಯೇ ಜಲ ಮಾರು ಹೋಗುವುದು ಸೋಜಿಗಲ್ಲವೆ? ಜಲದಿಂದಾದ ಪದಾರ್ಥಗಳನ್ನು ತಿಳಿಯುವ ಶಕ್ತಿ ಜಲದಿಂದಾದ ತನುವಿಗಿದೆ. ಆದರೆ ಜಲದಿಂದಾದ ಪದಾರ್ಥಗಳಿಗಿಲ್ಲ.

ಮಹಾಜ್ಞಾನವನ್ನು ತನು ಹೊಂದಿದ್ದರೂ ತನು ಕುಲ ಆಹಾರಕ್ಕಾಗಿಯೇ ಬದುಕಿದೆ. ಈ ಸೂಕ್ಷ್ಮಾತಿ ಸೂಕ್ಷ್ಮ ಅರಿವನ್ನು ಶರಣರು ಮಾತ್ರ ತಿಳಿದರು. ಮನು ಕುಲವನ್ನೆ ಎಚ್ಚರಿಸಿದರು. ಭೂಮಿಯಲ್ಲಿ ಬೆಳೆದ ಪ್ರಸಾದ ಯಾವುದಾದರೇನು? ಬಯಸುವ ನಾಲಗೆಗೆ ಅರಿವಿನ ರುಚಿ ಎರೆದರು. ಲಭ್ಯವಾದ ಪ್ರಸಾದವನೆ ಊಟವೆಂದು ಹಿಡಿದು ಮುಟ್ಟಿ ತನುವಿನಲ್ಲಿಯೇ ತನ್ಮಯವಾದ ಬಸವಪ್ರಿಯ ಕೂಡಲ ಚೆನ್ನಬಸವಣ್ಣನ ಉದರದಲಿ ಎರೆದು ಬಟ್ಟ ಬಯಲಾದರು.

37

ಅರಿವೆಂಬುದೆ ಆಚಾರ, ಆಚಾರವೆಂಬುದೆ ಅರಿವು.

ಅರಿವು ಆಚಾರದ ಸಂಗಷ್ಟದ ಕೂಟದ ಸ್ಥಲದಲ್ಲಿ ವಿಭೇದವೇ ಕ್ರೀ.
ಆ ಕ್ರಿಯೆ ವರ್ಮ, ಧರ್ಮ. ಅದೇ ಮುಕ್ತಿಗೆ ಸಾಧನ.
ಆ ಭಕ್ತಿಯೇ ಮುಕ್ತಿ ಸಾಧನ, ಆ ಮುಕ್ತಿಯೆ ಗುರು ಪದ ಸಾಧನ.
ಗುರುಪದವೆ ಲಿಂಗಸಾಧನ, ಆ ಲಿಂಗಸಾಧನವೆ ಜಂಗಮಸಾಧ್ಯ.
ಆ ಜಂಗಮ ಸಾಧ್ಯವೇ ಪ್ರಸಾದಸಾಧ್ಯ,
ಆ ಪ್ರಸಾದ ಸಾಧ್ಯವೇ ಪರ ಸಾಧ್ಯ. ಆ ಪರಸಾಧ್ಯವಾದ ಬಳಿಕ,
ಕ್ರಿಯಾ ಕರ್ಮ ಧರ್ಮ ಭಕ್ತಿ ಯುಕ್ತಿ ಮುಕ್ತಿ,
ಗುರುಲಿಂಗ ಜಂಗಮ ಪ್ರಸಾದ ಗಣತ್ವವೆಲ್ಲವು ಉಂಟು.
ಇಂತೀ ಸರ್ವಾಂಗವೇದ್ಯವಾದ ಮಹಾಮಹಿನ
ಹಿಡಿದನೆನ್ನಬಾರದು, ಬಿಟ್ಟನೆನ್ನಬಾರದು,
ಮುಟ್ಟದನೆನ್ನಬಾರದು, ತಟ್ಟದನೆನ್ನಬಾರದು.
ಸರ್ವಭೋಗ ಮುಕ್ತಿ ಸುಖದುಃಖಗಳೊಳಗೆ
ಉಂಟೆನಬಾರದು ಇಲ್ಲೆನ್ನಬಾರದು ಅದೆಂತೆಂದಡೆ;
ಸರ್ವವೂ ಶಿವನಿಂದಲಾದವೆಂಬುದ ಕೇಳಿ ಬಲ್ಲಿರಿ.
ತನ್ನಿಂದಾದವರೊಳಗೆ ತಾನುಂಟಾಗಿ,
ಇಲ್ಲವಾಗಿರ್ಪ ಭೇದವ ತಾನೆ ಬಲ್ಲ.
ಇದು ಕಾರಣ, ಶಿವನಾದ ಶರಣನ ಅಂತಿಂತೆಂದಡೆ,
ನಮ್ಮ ಬಸವಪ್ರಿಯ ಕೂಡಲ ಸಂಗಮದೇವ ಸಾಕ್ಷಿಯಾಗಿ
ನಾಯಕ ನರಕದಲ್ಲಿಕ್ಕುವ.

ಅರಿವೆಂಬುದೇ ಆಚಾರ; ಆಚಾರವೆಂಬುದೇ ಅರಿವು. ಅರಿವಿನ ಆಚಾರವಿದು ಅಗೋಚರದ ಆಚಾರ. ಗೋಚರದ ಆಚಾರದಲ್ಲಿ ಬಂಧನವಿದೆ; ಸಂಕಷ್ಟವಿದೆ; ಸಾವು, ನೋವು, ಕೊಲೆ, ಕಳವು, ಭ್ರಷ್ಟಾಚಾರ, ಅತ್ಯಾಚಾರ, ಹತ್ಯಾಚಾರವಿದೆ. ಜಾತಿ ಮತ ಪಂಥ ಧರ್ಮ ದೇಶ ಭಾಷೆಯ ಗಡಿಯಿದೆ.

ಗೋಚರದ ಆಚಾರಕ್ಕೂ ಅಗೋಚರದ ಆಚಾರಕ್ಕೂ ಸಂಕಷ್ಟದ ಕೂಟವಿದೆ. ಈ ಕೂಟವನ್ನು ವಿಭೇದಿಸಿ ಅಗೋಚರದ ಆಚಾರ ಕ್ರಿಯೆಯಲ್ಲಿ ತೊಡಗುವುದೇ ವರ್ಮ, ಧರ್ಮ. ಅದೇ ಮುಕ್ತಿಗೆ ಸಾಧನ.

ಚಿನ್ನ ಗೋಚರದ ವಸ್ತು. ಇದರ ಮೋಹಕ್ಕೆ ಒಳಗಾಗಿ ಖರೀದಿಸುವುದು ಅಥವಾ ಕಳುವು ಮಾಡುವುದೇ ಗೋಚರದ ಆಚಾರ. ತನು ಶ್ರೀಮಂತ, ಕಳ್ಳ ಎನ್ನುವ ಹಣೆಪಟ್ಟಿ ಕಟ್ಟಿಕೊಳ್ಳುತ್ತದೆ. ಚಿನ್ನಕ್ಕಾಗಿ ಯುದ್ಧ ಮಾಡಿ ಕೊಂದು ಪಡೆದವನು ರಾಜ ಎನ್ನಿಸಿಕೊಳ್ಳುತ್ತಾನೆ.

ಇಲ್ಲಿ ಅರಿವು ಗುರುವಾಗಿ ಮನಕ್ಕೆ ಬೋಧಿಸಿದರೂ, ಮನ ಗೋಚರದ ಆಚಾರದಲ್ಲಿಯೇ ತೊಡಗುತ್ತದೆ. ಚಿನ್ನ ಸಂಗ್ರಹ ಮಾಡುವುದೇ ತನುವಿನ ಧರ್ಮವಾಗುತ್ತದೆ. ಕಲ್ಲು ಕಟೆದು ದೇವರನ್ನಾಗಿಸಿ ಅದಕ್ಕೆ ಕಿರೀಟ ಆಭರಣ ಗೋಪುರಕ್ಕೆ ಬಾಗಿಲುಗಳಿಗೆ ಚಿನ್ನದ ತಗಡು ಬಡಿದು ತನುವಿನ ಮನ ತನ್ನ ಗೋಚರದ ಕ್ರಿಯೆ ಮೂಲಕ ಸಂತೋಷಪಡುತ್ತದೆ. ಇದೇ ಅದಕ್ಕೆ ಧರ್ಮ ವರ್ಮ ಎಲ್ಲ.

ಅರಿವಿನ ಆಚಾರ ಹೀಗಲ್ಲ. ಚಿನ್ನಕ್ಕೆ ಮೆತ್ತಿದ ಹಳದಿ ಬಣ್ಣ ಕಳೆದರೆ ಅದು ಬರೀ ಲೋಹ.

ಇದನ್ನು ಯಾರೂ ಪ್ರೀತಿಸುವುದಿಲ್ಲ. ಬಣ್ಣ ಪ್ರಾಣಕ್ಕಿಂತ ದೊಡ್ಡದೋ? ಇದಕ್ಕಾಗಿ ಅರಿವಿನ ತನು ಹಗಲಿರುಳು ದುಡಿದು ಶ್ರೀಮಂತವೆನ್ನಿಸಿಕೊಳ್ಳಬೇಕೆ? ಚಿನ್ನ ಕದ್ದು ಕಳ್ಳನೆನ್ನಿಸಿಕೊಳ್ಳಬೇಕೆ? ಚಿನ್ನಕ್ಕಾಗಿ ಯುದ್ಧ ಮಾಡಿ ಕೊಂದು ರಾಜನೆನ್ನಿಸಿಕೊಳ್ಳಬೇಕೆ? ಕೊಲೆ ಮಾಡಿ ಹತ್ಯಾಚಾರಿ ಎನ್ನಿಸಿಕೊಳ್ಳಬೇಕೆ? ಚಿನ್ನ ಯಾಕೆ ಬೇಕು ಎಂದು ಪ್ರಶ್ನಿಸಿಕೊಂಡು ಅದನ್ನು ಲೋಹದಂತೆ ತೃಣವೆಂದು ಧೃಡಪಡಿಸಿಕೊಳ್ಳವುದೇ ಅರಿವಿನ ಆಚಾರ. ಇದು ಅಗೋಚರದ ಆಚಾರ. ಈ ಕ್ರಿಯೆಯೆ ಅರಿವಿನ ಧರ್ಮ ವರ್ಮ. ಇದೇ ಮುಕ್ತಿಗೆ ಸಾಧನ.

ಚಿನ್ನ ಬಯಸಿ ಸಂಗ್ರಹಿಸುವ ಮನ ಅಜ್ಞಾನದ ಹಾದಿ ಬಿಟ್ಟು ಅರಿವಿನತ್ತ ಪಯಣಿಸಿ, ಅರಿವಿಗೆ ಭಕ್ತಿ ಮಾಡುವುದೇ ಮುಕ್ತಿಗೆ ಸಾಧನ. ಈ ಮುಕ್ತಿಯೇ ಗುರುಪದ ಸಾಧನ. ಅರಿವೇ ಗುರು. ಅರಿವಿನ ಅಂಗವೇ ಲಿಂಗದ ಸಾಧನ. ಅರಿವು ಹೇಳಿದಂತೆ ನಡೆದು ಆ ಅರಿವಿನ ಮಾತು ಕೇಳಿ ಪಾಲಿಸುವವನೇ ಜಂಗಮ. ಆ ಜಂಗಮನಿಗೆ ಸಕಲ ಅಜ್ಞಾನಗಳೂ ಪ್ರಸಾದವಾಗುತ್ತವೆ.

ನೋಡುವ ನೋಟದಲ್ಲಿ ಅಜ್ಞಾನ ಜ್ಞಾನಕ್ಕೆ ಪ್ರಸಾದವಾಗುತ್ತದೆ. ಕೇಳುವ ಶಬ್ದ ಕಿವಿಗೆ ಪ್ರಸಾದವಾಗುತ್ತದೆ. ರುಚಿಸುವ ನಾಲಗೆ ಸ್ಪರ್ಶಿಸುವ ಚರ್ಮ, ಮೂಸಿಸುವ ಮೂಗಿಗೆ ಅಜ್ಞಾನ ಪ್ರಸಾದವಾಗಿ ಇಡೀ ಅಂಗವೇ ಅರಿವಿನ ಲಿಂಗಾಂಗವಾಗುತ್ತದೆ. ಈ ಪ್ರಸಾದದಿಂದಲೇ ಪರ ಸಾಧ್ಯವಾಗುತ್ತದೆ.

ಹೀಗೆ ಸರ್ವಾಂಗ ವೇದ್ಯಾವಾದ ಮಾಹಾ ಮಹಿಮನು ಹಿಡಿದನೆನ್ನಬಾರದು, ಬಿಟ್ಟನೆನ್ನಬಾರದು. ಅವನು ಕಮಲ ಪತ್ರವಿದ್ದಂತೆ. ಜಲದಲ್ಲಿ ಹುಟ್ಟಿ, ಜಲದಲ್ಲಿ ಬೆಳೆದು, ಜಲದಿಂದಲೇ ಜೀವಿಸಿದರೂ ಜಲ ತಾಗದಂತೆ! ಈ ಸರ್ವ ಭೋಗದಿಂದಲೂ ಮುಕ್ತಿ, ಸುಖ ದುಃಖಗಳೊಳಗೆ ಉಂಟೆನ್ನಬಾರದು, ಇಲ್ಲೆನಬಾರದು.

ಸರ್ವವೂ ಶಿವನಿಂದಲಾದವೆಂಬುದ ಕೇಳಿ ಬಲ್ಲಿರಿ. ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನು ತನುವನ್ನು ಆವರಿಸಿದ ಮನಕ್ಕೆ ದರ್ಶನ ನೀಡಿ, ಮನ ಗುರುವಿನಲ್ಲಿ ಲೀನವಾಗಿ, ಅರಿವಾಗಿ, ತನುವೇ ಅಲ್ಲ ತನುಗಳೆಲ್ಲ ಗುರುದೇವನ ತನುಗಳೆಂಬ ಅರಿವಿನ ಭೇದವನು ತಾನೇ ತಿಳಿದು; ತಾನೇ ಶಿವನಾದ. ಮನವೇ ಮಹಾದೇವನಾದ ಶರಣನನು ಅಂತಿಂತೆನಲುಬಾರದು.

ಇದಕ್ಕೆ ಸಾಕ್ಷಿ ಬಸವಣ್ಣನಿಗೆ ಪ್ರಿಯನಾದ ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಮನಾಥನೇ ಸಾಕ್ಷಿಯಾಗಿ ಇದನು ಅಲ್ಲಗಳೆದವರನು ನರಕದಲ್ಲಿಕ್ಕುವನು ಎಂದು ಅಪ್ಪಣ್ಣ ಶರಣರು ಗಂಟಾಘೋಷದಿಂದ ಅನುಭವಿಸಿ ನುಡಿದಿದ್ದಾರೆ.

38

ಆವರನಕ ಕೂಳ ಇಡಿದ ಒಡಲಿಗೆ
ಅದು ಕುದಿದು ಕೋಟಲೆಗೊಂಬುತ್ತಿದ್ದರು.
ಈ ಹದನನರಿಯದೆ ಕೆಡುತ್ತಿದ್ದೆಯಲ್ಲಾ ಎಂದು ತುದಿ ಹಿಡಿದು,
ತೆಗೆದುಕೊಂಡಾತ ಚೆನ್ನಮಲ್ಲೇಶ್ವರನಯ್ಯಾ.
ಆ ಒಡಲಗುಣವ ಕೆಡಿಸುವುದಕ್ಕೆ ಪ್ರಸಾದವೆಂಬ ಮದ್ದನಿಕ್ಕಿ,
ಸಲಹಿದಾತ ಚೆನ್ನಮಲ್ಲೇಶ್ವರನಯ್ಯಾ.
ಅಂಗಕ್ಕೆ ಆಚಾರ, ಮನಸ್ಸಿಗೆ ಅರುಹು,

ಕಂಗಳಿಗೆ ಲಿಂಗವ ತೋರಿದಾತ ಚೆನ್ನಮಲ್ಲೇಶ್ವರನಯ್ಯಾ.
ಇಂತು ಎನ್ನ ಭವವ ಕೊಂಡಿಹೆನೆಂದು
ಗುರುಲಿಂಗಜಂಗಮ ಈ ತ್ರಿವಿಧವಾಗಿಯು ಸುಳಿದಾತ ಚೆನ್ನಮಲ್ಲೇಶ್ವರನಯ್ಯ.
ಇಂತಪ್ಪ ಚೆನ್ನಮಲ್ಲೇಶ್ವರನ ಶ್ರೀ ಪಾದವಿಡಿದು ಕೆಟ್ಟು ಬಟ್ಟಬಯಲಾದೆನಯ್ಯ.
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ,
ಇಂತಪ್ಪ ಚೆನ್ನಮಲ್ಲೇಶ್ವರನ ಪಾದವ ಮುಟ್ಟಿ,
ಹುಟ್ಟುಗೆಟ್ಟು ಹೋದೆನಯ್ಯ.

ಕಾಮದ ಕೂಳಿಗಾಗಿ, ಹಸಿವಿನ ಕೂಳಿಗಾಗಿ, ಹೊನ್ನಿನ ಕೂಳಿಗಾಗಿ, ಮಣ್ಣಿನ ಕೂಳಿಗಾಗಿ ಮನ ತನುವನ್ನು ಕ್ಷಣ ಕ್ಷಣಕ್ಕೂ ಕೊಲ್ಲುತ್ತದೆ. ಅಧಿಕಾರ, ಪದವಿ ವ್ಯಾಮೋಹಕ್ಕಾಗಿ ಕುದಿದು ಕುದಿದು ಕೋಟಲೆಗೊಳ್ಳುತ್ತಿದೆ. ಈ ಹದವನರಿಯದೆ ಜಗದ ತನುಗಳೆಲ್ಲ ವ್ಯರ್ಥ ಜೀವ ಕಳೆದುಕೊಳ್ಳುತ್ತಿದೆ. ಅಪ್ಪಣ್ಣ ನೀನಾದರೂ ನನ್ನತ್ತ ಬಾ ಎಂದು ಎನ್ನ ತುದಿ ಹಿಡಿದು ಕರೆದು ಕರುಣೆ ತೋರಿದಾತ ಎನ್ನ ಶ್ರೀ ಗುರು ಚೆನ್ನಬಸವಣ್ಣ ಎಂದು ಹೇಳಿದ್ದಾರೆ.

ಒಡಲಗುಣ ಕೆಡಿಸುವುದಕ್ಕೆ ಪ್ರಸಾದವೆಂಬ ಮದ್ದನಿಕ್ಕಿ ಸಲಹಿದರು. ಅಂಗಕ್ಕೆ ಅಗೋಚರದ ಅರಿವಿನ ಆಚಾರ ತೋರಿದರು. ಮನಸ್ಸಿಗೆ ಅಂಗದಲ್ಲಿರುವ ಅರಿವಿನಿಂದ ನೋಡಲು ಹೇಳಿದರು. ಸ್ಪರ್ಶದಲ್ಲಿರುವ ಅರಿವಿನ ಅನುಭವವನ್ನು ಚರ್ಮದಲ್ಲಿ ವಾಸಿಸಿದ ಮನಕ್ಕೆ ಮದ್ದನರಿದು ಹೇಳಿದರು. ನಾಲಗೆಯ ತುದಿಯಲ್ಲಿ ವಾಸ ಮಾಡಿದ ಮನಕ್ಕೆ ಮದ್ದನರಿದು ರುಚಿಯ ಸತ್ಯವನ್ನು ವಿವರಿಸಿದರು. ಮೂಗಿನಲ್ಲಿ ವಾಸ ಮಾಡಿದ ಮನಕ್ಕೆ ಮದ್ದನರಿದು ಪರಿಮಳದ ನಿಜವನು ಅರುಹಿದರು. ಕಿವಿಯಲ್ಲಿದ್ದ ಅಜ್ಞಾನಿ ಮನಕ್ಕೆ ಮದ್ದನರಿದು ಶಬ್ದದಲ್ಲಿರುವ ಅರಿವಿನ ಸತ್ಯವನ್ನು ತೋರಿದರು. ಅರಿವು ಹೇಳಿದಂತೆ ನಡೆಯಲು ಅಂಗಕ್ಕೆ ಆಚಾರದ ಮದ್ದನು ಅರೆದು ಅಗೋಚರದ ಆಚಾರದಲ್ಲಿ ನಡೆಯುವಂತೆ ತೋರಿದರು. ಹೀಗೆ ಪಂಚೇಂದ್ರಿಯಗಳಲ್ಲಿ ವಾಸ ಮಾಡಿದ ಅಜ್ಞಾನಿ ಮನಕ್ಕೆ ಅರಿವಿನ ಆಚಾರದ ಮದ್ದನರೆದರು.

ಕಂಗಳಿಗೆ ಲಿಂಗವ ತೋರಿದಾತ ಚೆನ್ನಮಲ್ಲೇಶ್ವರನಯ್ಯ :

ಕಂಗಳಲ್ಲಿರುವ ಅರಿವಿನ ಲಿಂಗಕ್ಕೆ ಅಜ್ಞಾನಿ ಮನದ ಸೋಂಕಿನ ಪೊರೆ ಮುಸುಕಿರುವುದರಿಂದ ಕಣ್ಣು ನೋಡಿದ ಸುಖದತ್ತ ಅಂಗ ವಾಲುತ್ತದೆ. ಕಣ್ಣು ಮತ್ತೊಂದು ಅಂಗವನ್ನು ನೋಡಿ, ತನ್ನಂಗದಲ್ಲಿ ಕಾಮದ ನಂಜು ತುಂಬುತ್ತದೆ. ಅಂಗ ಅಂಗವನ್ನು ಬೆರೆತು ಭೋಗಿಸಲು ಆದೇಶ ನೀಡುತ್ತದೆ. ಚರ್ಮ ಒಂದೇ. ಚರ್ಮದೊಳಗೆ ಅಡಗಿದ ರಕ್ತ ಮಾಂಸ ಮೂಳೆ ಮಜ್ಜೆ ಮೇದಸ್ಸುಗಳು ಒಂದೇ. ಇವು ಹೆಣ್ಣಲ್ಲ, ಗಂಡಲ್ಲ. ಆದರೂ ಕಣ್ಣಿನಲ್ಲಿರುವ ಮನದ ಪೊರೆ ಚರ್ಮ ಹೆಣ್ಣೆಂದು, ಗಂಡೆಂದು ಅಂಗಕ್ಕೆ ಆದೇಶ ನೀಡಿ ಭೋಗದ ನಂಜು ಹುಟ್ಟಿಸುತ್ತದೆ. ಅರಿವಿನ ಲಿಂಗಾಂಗಕ್ಕೆ ಹಾದರ ಹಣೆಪಟ್ಟಿ ಕಟ್ಟುತ್ತದೆ. ಹೀಗೆ ಕಂಗಳಿಗೆ ಆವರಿಸಿದ ಮನಕ್ಕೆ ಅರಿವಿನ ಮದ್ದನರೆದು ಕಂಗಳಲ್ಲಿ ಬೆರೆತ ಅರಿವಿನ ಲಿಂಗದ ದರ್ಶನ ತೋರಿದಾತ ಚೆನ್ನಮಲ್ಲೇಶ್ವರ.

ಇಂತು ಎನ್ನ ಭವವ ಕೊಂದಿಹೆನೆಂದು ಗುರುಲಿಂಗ ಜಂಗಮ ಈ ತ್ರಿವಿಧವಾಗಿಯು ಸುಳಿದಾತ ಚೆನ್ನಮಲ್ಲೇಶ್ವರಯ್ಯ:

ಮನದಿಂದಾಗಿ ಒಡಲಿಗೆ ಜನನ ಮರಣಗಳ ಗರ ಬಡಿದಿತ್ತು. ಮನಕ್ಕೆ ಮದ್ದನರೆದುದಕ್ಕಾಗಿ ಕೂಡಲೇ ಅರಿವಿನ ದರ್ಶನವಾಗಿ ಜನನ ಮರಣಗಳ ಬಾಧೆ ಇಲ್ಲದಂತಾಯಿತು. ಒಡಲೊಳಗಿದ್ದು,

ಒಡಲಿಂಗಾಧಾರವಾಗಿ, ಒಡಲ ಸೋಂಕದೆ, ಒಡಲ ಬೆಳಗುವ ಅರಿವು ಮನಕ್ಕೆ ಒಲಿದು ಮನ ಬೆಳಗಿಂಗೆ ಬೆಳಗಾಗಿ ಬೆಳಗಿತು. ಬೆಳಗಿನಲ್ಲಿ ಬೆಳಗಿನಿಂದಾದ ಕತ್ತಲೆಂಬ ಮನ ಆ ಬೆಳಕಿನಲ್ಲಿಯೇ ಲೀನವಾಗಿ ಬೆಳಕೇ ಆಯಿತು.

ಒಡಲಲ್ಲಿಯೇ ಇದ್ದ ಅರಿವೆಂಬ ಲಿಂಗ ಮನಕ್ಕೆ ವೇದ್ಯವಾಯಿತು. ಒಡಲ್ಲಲಿಯೇ ಇದ್ದು, ಒಡಲೊಳಗೆ ನುಡಿದು ಬೆಳಗುವ ಅರಿವೆಂಬ ಗುರು ಮನಕ್ಕೆ ವೇದ್ಯವಾದ. ಗುರುವಿನ ನುಡಿ ಚಾಚೂ ತಪ್ಪದೇ ಪಾಲಿಸುವ ಒಡಲಲ್ಲಿಯೇ ಇದ್ದ ಜಂಗಮ ಪಾಲಿಸಿದ.

ಒಡಲು ನುಡಿದದ್ದೆ ಮುತ್ತಿನ ಹಾರವಾಯಿತು. ಒಡಲು ನುಡಿದದ್ದೆ ಮಾಣಿಕ್ಯದ ದೀಪ್ತಿಯಾಯಿತು. ಒಡಲು ನುಡಿದದ್ದೆ ಸ್ಪಟಿಕದ ಸಲಾಕೆಯಾಯಿತು. ಇಂತಪ್ಪ ಚೆನ್ನಮಲ್ಲೇಶ್ವರನ ಶ್ರೀಪಾದವಿಡಿದು ಪೂರ್ವಾಶ್ರಯದ ಅಂಗ ಕೆಟ್ಟು ಲಿಂಗಾಂಗವಾಯಿತು. ಬಯಲೊಳಗೆ ಬೆರೆತು ಬಟ್ಟ ಬಯಲಾಯಿತು.

ಬಸವಣ್ಣನಿಗೆ ಪ್ರಿಯವಾದ ಚೆನ್ನಬಸವಣ್ಣನ ಶ್ರೀಪಾದವ ಹಿಡಿದು ಹುಟ್ಟುಗೆಟ್ಟು ಹೋದೆನಯ್ಯ ಎಂದು ಸದ್‌ಗುರು ಹೇಳಿದ ಬೆಡಗನ್ನು ಓದುಗರಿಗೆ ಉಣಬಡಿಸಿದ್ದಾರೆ ಅಪ್ಪಣ್ಣ ಶರಣರು.

39

ಅವಲೋಹವ ಪರುಷ ಮುಟ್ಟಲು ಸುವರ್ಣವಾಗುತ್ತದೆ.
ಕಬ್ಬಿಣಕ್ಕೆ ಇದ್ದಲಿಯ ಹಾಕಿ ಅಗ್ನಿಯನಿಕ್ಕಿ,
ಕಾವುಗೊಳಲಾಗಿ, ಕರಗಿ ನೀರಾಗುತ್ತದೆ.
ಹಾಲಿಗೆ ನೀರ ಹೊಯ್ದರೆ ಅದು ಏರುವ ಭೇದವನಾರು ಅರಿಯರು.
ಶರಣರು ತನುವಿಡಿದಿದ್ದರೂ ಇದ್ದವರಲ್ಲ.
ಅದು ಹೇಗೆಂದರೆ, ಹಿಂದಣ ದೃಷ್ಟದ ಪರಿಯಲ್ಲಿ ಲಿಂಗವ ಹಿಡಿದಂಗಕ್ಕೆ
ಬೇರೊಂದು ಸಂಗಸುಖ ಉಂಟೆ?
ಅದು ಕಾರಣ, ಸರ್ವಾಂಗ ಲಿಂಗಿಯಾದ ಶರಣನು
ಮುಟ್ಟಿದ, ತಟ್ಟಿದ, ಕೇಳಿದ, ನೋಡಿದ,
ನುಡಿದ, ಸೋಂಕಿದನೆನ್ನಬೇಡ. ಅದು ಕಾರಣ,
ಕಬ್ಬಿಣ ನೀರುಂಡಂತೆ ಅರ್ಪಿತವ ಬಲ್ಲ ಐಕ್ಯಂಗೆ ಮೈಯಲ್ಲ ಬಾಯಿ.
ಇದರ ಭೇದವ, ನಮ್ಮ ಬಸವಪ್ರಿಯ
ಕೂಡಲ ಚೆನ್ನಬಸವಣ್ಣನೆ ಬಲ್ಲ.

ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುದೇವನನ್ನು ಹಿಡಿದವನು ಶರಣ ಮಾತ್ರ. ಅರಿವು ಪರುಷ. ಮರೆವೆಂಬ ಅಜ್ಞಾನವನ್ನು ಅರಿವು ಮುಟ್ಟಲೊಡನೆ ಅರಿವೇ ಆಗುತ್ತದೆ. ಕಬ್ಬಿಣಕ್ಕೆ ಇದ್ದಲಿಯ ಹಾಕಿ ಅಗ್ನಿಯನಿಕ್ಕಿದರೆ ಅದರ ಉರಿಗೆ ಕಬ್ಬಿಣ ಕಠಿಣವಾಗಿದ್ದರೂ ನೀರಾದಂತೆ.

ಹಾಲಿಗೆ ನೀರು ಹೊಯ್ದರೆ ಅದು ಹಾಲು ಆಗಿ ಹೆಚ್ಚಳವಾದಂತೆ. ಕಾದರೆ ನೀರು ಮೇಲೆ ಏರುವ ಭೇದವನು ಆರೂಅರಿಯರು. ಶರಣರು ಸಾಮಾನ್ಯರಂತೆ ತನುವಿಡಿದವರಂತೆ ಕಂಡರೂ ತನು ಗುಣಾದಿಗಳನ್ನು ಹಿಡಿದವರಲ್ಲ.

ತನುವಿನಲ್ಲಿ ಅರಿವು ತನ್ಮಯವಾಗಿದ್ದರೂ ಅರಿವು ತನು ಗುಣಾದಿಗಳನ್ನು ತಾಗುವುದಿಲ್ಲ. ಅಂಗ ಸುಖ ಬಯಸಿದರೂ ಅಂಗದೊಳಗಿದ್ದ ಲಿಂಗಕ್ಕೆ ಸುಖವಿಲ್ಲ ದುಃಖವಿಲ್ಲ. ಅರಿವು ಅಂಗವನ್ನೇ ಲಿಂಗಾಂಗವಾಗಿಸಿಕೊಂಡ ತನ್ನಂಗದ ಸಂಗ ಸುಖದಲ್ಲಿ ನಿರತವಾಗಿರುತ್ತದೆ. ಅರಿವೆಂಬ ಗುರುದೇವನಿಗೆ ಬೇರೊಂದು ಸಂಗಸುಖದ ಅವಶ್ಯಕತೆಯಿಲ್ಲ.

ಅರಿವು ಸರ್ವಾಂಗದಲ್ಲಿ ಬೆರೆತು, ಮನ ಅರಿವನು ಅರಿತು ಸರ್ವಾಂಗ ಲಿಂಗಿಯಾದ ಶರಣನ ಅಂಗವನು ಮುಟ್ಟಿದ, ತಟ್ಟಿದ, ಕೇಳಿದ, ನೋಡಿದ, ನುಡಿದ ಸೋಂಕಿದನೆನ್ನುವುದು ಉಚಿತವಲ್ಲ. ಏಕೆಂದರೆ ಶರಣ ಮುಟ್ಟಬಾರದ ವಸ್ತುವನು ಮುಟ್ಟಿದ. ತಟ್ಟಬಾರದ ವಸ್ತುವನು ತಟ್ಟಿದ. ಕೇಳಬಾರದ ನಿಃಶಬ್ದವನ್ನು ಕೇಳಿದ. ನೋಡಬಾರದ ಪರ ವಸ್ತುವನ್ನೇ ನೋಡಿದ. ನುಡಿಯಬಾರದ ನುಡಿಗೆಡೆಗೊಡದ ಘನವನೇ ನುಡಿದ ಶರಣನನು ಸೋಂಕಿದನೆನ್ನಬೇಡ.

ಶರಣ ಮುಟ್ಟಿದನೆಂದರೆ ಕಬ್ಬಿಣ ನೀರುಂಡಂತೆ. ಅರ್ಪಿತವ ಬಲ್ಲ ಐಕ್ಯಂಗೆ ಮೈಯೆಲ್ಲ ಬಾಯಿ. ಇದರ ಭೇದವ ಬಸವಣ್ಣನಿಗೆ ಪ್ರಿಯನಾದ ಚೆನ್ನಬಸವಣ್ಣನೆ ಬಲ್ಲನೆಂದು ಹೇಳಿದ್ದಾರೆ ಅಪ್ಪಣ್ಣ ಶರಣರು.

40

ಅವಿರಳ ಲಿಂಗವ ಕಂಡಿಹೆನೆಂದು ಅವರಿವರಲ್ಲಿನ್ನೇನ ಕೇಳುವಿರಿ?
ಭವವಿರಹಿತ ಗುರುಲಿಂಗ ಜಂಗಮದೊಳ್ ತಾವೆ ಬೆರೆಯೆ,
ತಲ್ಲೀಯವಾಗಿಪ್ಪಲ್ಲಿಗೆ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಅಂಗದಲ್ಲಿಯೇ ಲಿಂಗವಿದ್ದು ಸರ್ವಾಂಗವೆಲ್ಲ ಅರಿವಿನ ಲಿಂಗವಾಗಿರಲು ಲಿಂಗಕ್ಕಾಗಿ ಅವರಿವರಲ್ಲಿ ಬಾಯ್ದೆರೆಯುವುದೆ ಅಂಗದ ಮೇಲಿರುವ ಲಿಂಗಕ್ಕೆ ಅಂಗದ ಪರಿಚಯವಿಲ್ಲ. ಸರ್ವಾಂಗದ ಕಣಕಣದಲ್ಲಿರುವ ಲಿಂಗಕ್ಕೆ ಅಂಗದ ಪರಿಚಯವಿದೆ. ಅಜ್ಞಾನಕ್ಕೆಳೆಸುವ ಅಂಗವನ್ನು ಅರಿವಿನತ್ತ ಬರ ಸೆಳೆದು ಅರಿವನ್ನಾಗಿಸುವ ಯುಕ್ತಿಯಿದೆ. ಓದಿದರೆ, ಕೇಳಿದರೆ ನೋಡಿದರೆ, ಮುಟ್ಟಿ ಪೂಜಿಸಿದರೆ, ತೀರ್ಥಯಾತ್ರೆ ಮಾಡಿದರೆ, ಜಪ ತಪ ಯಜ್ಞ ಯಾಗಾದಿಗಳನ್ನು ಮಾಡಿದರೆ ಅಂಗದಲ್ಲಿರುವ ಲಿಂಗ (ಅರಿವು) ಅಂಗಕ್ಕೆ ಒಲಿಯದು.

ಬಾರಾಜ್ಯೋತಿರ್ಲಿಂಗವನ್ನು ದರ್ಶನ ಮಾಡಿದರೂ ಸರ್ವಾಂಗದಲ್ಲಿರುವ ಲಿಂಗ ಅಂಗವನ್ನು ಆವರಿಸಿರುವ ಮನಕ್ಕೆ ಒಲಿಯದು. ಜನ್ಮ ಜನ್ಮಗಳು ಕಳೆದರೂ ನರಜನ್ಮಕ್ಕೆ ಲಿಂಗಪೂಜಿಸಿದ ಫಲ ದಕ್ಕದು. ಏಕೆಂದರೆ ಲಿಂಗವೇ ತಾನಿದ್ದು ಮರೆವಿನಿಂದ ಪಾಷಾಣವನ್ನೇ ಲಿಂಗ ಮಾಡಿಕೊಂಡು ಪೂಜಿಸುತ್ತಿದ್ದಾನೆ. ಗುರುಲಿಂಗ ಜಂಗಮರ ದರ್ಶನ ಮಾಡುತ್ತಿದ್ದಾನೆ. ಗುರುಲಿಂಗ ಜಂಗಮನು ತಾನೇ ಎಂದು ತಿಳಿಯುವುದು ಮನಕ್ಕೆ ಸಾಧ್ಯವಾಗುತ್ತಿಲ್ಲ.

ಅಂಗದ ಕಣಕಣದಲ್ಲಿದ್ದ ಅರಿವೆಂಬ ಗುರುದೇವನೆ ಸಾಕ್ಷಾತ್ ಗುರುದೇವನಾಗಿದ್ದಾನೆ. ಸರ್ವಾಂಗದಲ್ಲಿ ಬೆರೆತ ಅರಿವೇ ಲಿಂಗವಾಗಿದೆ. ಗುರುದೇವನನ್ನು, ಲಿಂಗದೇವನನ್ನು ಪರಿಚಯಿಸಿ, ಗುರುದೇವನ ಮಾತು ಪಾಲಿಸುವಾತನೇ ಜಂಗಮನಾಗಿದ್ದಾನೆ. ಈ ಗುರುಲಿಂಗ ಜಂಗಮವನು ಅರಿತು ಅವರೊಳಗೆ ಮನ ಬೆರೆಯುವುದೆ ಜನನ ಮರಣಗಳನ್ನು ಕಳೆದುಕೊಳ್ಳುವ ತಿರುಳಾಗಿದೆ.

ಹೀಗೆ ಸರ್ವಾಂಗದಲ್ಲಿರುವ ಗುರು ಲಿಂಗ ಜಂಗಮರನು ಬೆರೆತು ತಲ್ಲೀನವಾಗಿ, ಮನಕ್ಕಂಟಿದ ಸುಖ ದುಃಖಗಳನು, ಜನನ ಮರಣಗಳ ಬಾಧೆಗಳನು ಕಳೆದುಕೊಳ್ಳುವುದೇ ಮನದ

ಕರ್ತವ್ಯವಾಗಿದೆ.

41

ಅಶನ ವಸನಕ್ಕಾಗಿ ಒಂದು ಪಶುವು ಹುಟ್ಟಿತ್ತು.
ತನ್ನ ಸುಖವನರಿಯಲಾಗಿ, ತನಗೊಂದು ಶಿಶು ಹುಟ್ಟಿತ್ತು.
ಆ ಶಿಶುವಿನ ಮೇಲಣ ಮೋಹದಿಂದ,
ಮೊಲೆಯಲ್ಲಿ ಅಮೃತ ಹುಟ್ಟಿತ್ತು. ಅಮೃತವ ಸೇವಿಸಿ,
ಆ ಶಿಶುವು ನಲಿದಾಡುವುದ ಕಂಡು,
ನಾನದರ ಬೆಂಬಳಿವಿಡಿದು ಹೋಗಿ,
ಅದು ಕೊಂಬ ಅಮೃತವ ನಾ ಕೊಳ್ಳಲಾಗಿ,
ಪರಮಸುಖ ಪರಿಣಾಮ ತಲೆದೋರಿತ್ತು.
ಅದರ ನೆಲೆವಿಡಿದು, ತಲೆ ಹೊಲನನೇರಿ ನೋಡಲಾಗಿ,
ಉಲುಹು ಅಡಗಿತ್ತು. ಪರದಗಲಕೆ ನಿಂದಿತ್ತು.
ಇಳಿದು ಬರುವುದಕ್ಕೆ ಹಾದಿಯ ಕಾಣದೆ,
ಅದರಲ್ಲಿಯೇ ನಿರ್ಮುಕ್ತನಾದೆನಯ್ಯಾ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಅಶನ ವಿಷಯಾದಿ ವ್ಯಸನಗಳನ್ನು ಅನುಭವಿಸಲು ತನುವಿನಲ್ಲಿಯೇ ಮನವೆಂಬ ಪಶು ಹುಟ್ಟಿತ್ತು. ತನಗೆ ತನ್ನಲ್ಲಿ ಉಂಟಾದ ಸುಖಗಳನ್ನು ಅರಿಯ ಹೋದರೆ, ಅರಿಯ ಹೋದ ಮನದ ತನುವಿನಲ್ಲಿಯೇ ಅರಿವೆಂಬ ಅಮೃತದ ಶಿಶು ಹುಟ್ಟಿತ್ತು. ಆ ಶಿಶುವಿನ ಮೇಲಣ ಮೋಹದಿಂದಾಗಿ ಮನಕ್ಕೆ ಅರಿವೆಂಬ ಸುಧೆ ಹುಟ್ಟಿತ್ತು. ಆ ಅಮೃತವ ಸೇವಿಸಿ, ಆ ಶಿಶುವು ನಲಿದಾಡುವುದ ಕಂಡು, ಮನ ಅರಿವಿನ ಬೆನ್ನತ್ತಿ ಹೋಗಲು ಶಿಶುಕೊಳ್ಳುವ ಅಮೃತ ಮನ ಕೊಳ್ಳಲಾಗಿ, ಮನಕ್ಕೆ ಪರಮಸುಖ ಪರಿಣಾಮ ತೋರಿತ್ತು.

ಅರಿವಿನ ನೆಲೆವಿಡಿದು ನೋಡಲಾಗಿ ಮನದ ಉಲುಹು ಅಡಗಿತ್ತು. ಸ್ವರ್ಗದಗಲಕ್ಕೆ ನಿಂದಿತ್ತು. ಅಲ್ಲಿಂದ ಇಳಿದು ಬರುವುದಕ್ಕೆ ಹಾದಿಯ ಕಾಣದೆ ಅಲ್ಲಿಯೇ ಮುಕ್ತಿ ಹೊಂದಿತ್ತು. ಬಸವಣ್ಣನಿಗೆ ಪ್ರಿಯನಾದ ಕೂಡಲ ಚೆನ್ನಬಸವಣ್ಣನಲ್ಲಿ ಕೂಡಿ ಬಸವಣ್ಣನೇ ತಾನಾಗಿತ್ತು.

42

ಆಕಾಶವ ನೂಕುತ್ತಿಯ ಹಾಗೆ ಆಟಗೋಲ ಹಂಗುಂಟೆ?
ಏಕ ಮನವ ನಿಲಿಸುವರೆ, ಬೇರೊಂದು ಸಾಕಾರ ಉಂಟೆ?
ಬೇಕು ಬೇಡೆಂಬವೆರಡಳಿದವಂಗೆ, ಇಹಲೋಕದ ಹಂಗುಂಟೆ?
ಈ ಜೋಕೆ ನಿಮ್ಮೊಳು ಏಕವಾಗಿಹ ಶರಣಂಗಲ್ಲದೆ,
ಲೋಕದ ಮಾನವರಿಗುಂಟೆ? ನಿಮ್ಮ ನೆಲೆಯನರಿವುದು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಆಕಾಶ ನಿಲುವುದಕ್ಕೆ ನಿಚ್ಚಣಿಕೆಯು ಬೇಕಿಲ್ಲ. ಹಾಗೆಯೇ ಹರಿದಾಡುವ ಮನ ನಿಲಿಸುವುದಕ್ಕೂ ಬೇರೊಂದರ ಸಹಕಾರದ ಅವಶ್ಯಕತೆಯಿಲ್ಲ. ಬೇಕು ಬೇಡೆಂಬುದನು ಅಳಿದವಂಗೆ ಇಹಲೋಕದ ಹಂಗಿಲ್ಲ. ಈ ಎಚ್ಚರ ಏಕವಾಗಿಹ ಶರಣಂಗಲ್ಲದೆ ಲೋಕದ ಮಾನವರಿಗೆ ಸಾಧ್ಯವಾಗುವುದಿಲ್ಲ.

ನಿಮ್ಮ ನೆಲೆಯನರಿವುದು, ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಅಲಿದಾಡುವ ಮನಕ್ಕೆ ಅರಿವಿನ ದರ್ಶನವಾದರೆ ಅದರ ಚಲನೆ ಅಡಗಿ ನಿಶ್ಚಲ ಬ್ರಹ್ಮನೇ ತಾನಾಗುತ್ತದೆ. ಅರಿವಿನ ನೆಲೆ ಹರಿದಾಡುವ ಮನಕ್ಕೆ ಸಾಧ್ಯವಾಗುವುದು ತನ್ನ ತಾನರಿದ ಶರಣನಿಗೆ ಮಾತ್ರ ಸಾಧ್ಯವಾಗುತ್ತದೆ. ಅನ್ಯರಿಗೆ ಸಾಧ್ಯವಾಗುವುದಿಲ್ಲ.

43

ಆಗುತಿವೆ ಉದಯ ಮಧ್ಯಾಹ್ನ ಅಸ್ತಮಾನ.
ಹೋಗುತಿವೆ ದಿನವಾರ ಮಾಸ ಸಂವತ್ಸರವು.
ಸಾವುತಿವೆ ಆಯುಷ್ಯ ಭಾಷೆ.
ಇವರೊಳು ಬೇಗದಿ ತಿಳಿದು ನೀಗಿ ನಿಷ್ಪತ್ತಿಯಾದರೆ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣ.

ಉದಯ ಮಧ್ಯಾಹ್ನ ಅಸ್ತಮಾನ, ದಿನ ವಾರ ಮಾಸ ಸಂವತ್ಸರಗಳು ವ್ಯರ್ಥ ಕಳೆಯುತ್ತಿವೆ. ಹಾಗೆಯೇ ತನುವಿಗೆ ಆಯುಷ್ಯವೂ ಮುಗಿಯುತ್ತದೆ. ಆದರೂ ತನುವಿನಲ್ಲಿಯೇ ತನ್ಮಯವಾದ ಅರಿವು ತನುವನ್ನಾವರಿಸಿದ ಮನಕ್ಕೆ ಎಟಕುವುದು ಜಟಿಲವಾಗುತ್ತಿದೆ.

ದಿನ ವಾರ ಸಂವತ್ಸರಗಳ ಎಣಿಸದೆ, ದಿನವೊಂದೆ ತನ್ನ ತಾನಾರಿದವಂಗೆ ಎನ್ನುವ ಸೂತ್ರ ಮನ ತನುವಿನ ಆಯುಷ್ಯ ಮುಗಿಯುವುದರೊಳಗೆ ಬೇಗ ತಿಳಿಯಬೇಕಿದೆ. ಬಸವಣ್ಣನಿಗೆ ಪ್ರಿಯವಾದ ಕೂಡಲ ಚೆನ್ನಬಸವಣ್ಣನೆಂಬ ಅರಿವಿನಲ್ಲಿ ಲೀನವಾಗಬೇಕಿದೆ.

44

ಆಚಾರದ ಅರಿವು ಹೊರಗಾದ ಮೇಲೆ,
ಅಂಗದ ಮೇಲೆ ಲಿಂಗವಿದ್ದು ಫಲವೇನು?
ಕುರುಡನ ಕೈಯ ಕನ್ನಡಿ ಇದ್ದ ಹಾಗೆ,
ಬರಡಾವಿಗೆ ಶಿಶು ಹುಟ್ಟಿದ ಹಾಗೆ,
ಕುರುಡಗೆ ಕಣ್ಬೇನೆ ಬಂದ ಹಾಗೆ
ಕುರುಡಿಗೆ ಮಕ್ಕಳಾದ ಹಾಗೆ
ದೀನನ ಮನೆಯಲ್ಲಿ ಹೊನ್ನಿದ್ದ ಹಾಗೆ.
ಇವರೇನ ಮಾಡಿದರೇನು?
ತಮ್ಮ ಹಾನಿ ವೃದ್ಧಿಯನರಿಯದನ್ನಕ್ಕ,
ಕಾಲಕಾಮಾದಿಗಳ ಬಾಯೊಳಗೆ ಸಿಲ್ಕಿ,
ಅಗಿದಗಿದು ತಿನಿಸಿಕೊಳುತಿಪ್ಪರಲ್ಲ,
ಎನ್ನ ದೇವ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಆಚಾರದಲ್ಲಿದ್ದ ತನುವಿಗೆ ಅಂಗದ ಮೇಲೆ ಲಿಂಗಬೇಕು. ಲಿಂಗವೆಂದರೆ ಆಚಾರದಲ್ಲಿದ್ದ ತನುವಿನ ಮನಕ್ಕೆ ಅದೇ ದೇವರು. ಅದನ್ನು ಬಿಟ್ಟು ಏನೂ ಇಲ್ಲ. ಮೂರು ವೇಳೆ ಲಿಂಗಪೂಜೆಯನ್ನು ಪತ್ರೆ, ಪುಷ್ಪಗಳಿಂದ ಅಲಂಕರಿಸಿ ವಿಭೂತಿ ಗಂಧಾದಿಗಳನ್ನು ಧರಿಸಿ ಮನ ಲಿಂಗದಲ್ಲಿರಿಸಿ, ಪೂಜಿಸುತ್ತದೆ. ಪೂಜಿಸುವ ಮನವನ್ನು ಪೂಜಿಸುತ್ತಿರುವ ತನುವನ್ನು ಲಿಂಗ ಅರಿಯಲು ಸಾಧ್ಯವೇ ಇಲ್ಲ.

ಮನ ಕೇರು ಸಂಸ್ಕರಿಸಿ, ಅದರೊಳಗೆ ಪಾಣಿವಾಟವಿಟ್ಟು, ತುಪ್ಪದ ದೀಪದಿಂದ ಕಾಂತಿ ಹಿಡಿದು ಉಜ್ಜಿ ಉಜ್ಜಿ ಮಿಣಿ ಮಿಣಿ ಮಿಂಚುವಂತೆ ಮಾಡಿ, ಅದರಲ್ಲಿ ದೀಪದ ಬೆಳಕು ಕಂಡು, ಲಿಂಗಯ್ಯ ನನಗೆ ಒಲಿದನೆಂದು ಭ್ರಮೆಯಿಂದ ಮತ್ತೆ ಮತ್ತೆ ಆರಾಧಿಸುತ್ತದೆ. ಮನ ತಾನು ಲಿಂಗದ ಮೇಲೆ ಭ್ರಮೆ ಇರಿಸಿ ತನುವನ್ನು ಪೂಜಿಸುವಂತೆ ಒತ್ತಡ ತರುತ್ತದೆಯೇ ಹೊರತು, ಲಿಂಗ ಅಂಗಕ್ಕೆ ಏನನ್ನೂ ಉಸುರದು.

ಲಿಂಗವೆಂದರೇನೆಂದು ಮನಕ್ಕೆ ಮನವರಿಕೆಯಾಗಿ; ತನುವಿನಲ್ಲಿ ತನ್ಮಯವಾದ ಅರಿವೆ ಲಿಂಗವೆಂದು ತಿಳಿದ ಮೇಲೆ; ಆ ಅರಿವು ಕರಿಗೊಂಡ ಬಳಿಕ ಅಂಗವದು ಲಿಂಗಾಂಗವಾಗುತ್ತದೆ. ಲಿಂಗವನ್ನು ಪೂಜಿಸಲಿಲ್ಲ. ಅಂಗದ ಮೇಲೆ ಧರಿಸಲಿಲ್ಲ. ಬದಲಾಗಿ ಅಂಗ ನೋಡಿದ ಅಂಗಗಳೆಲ್ಲ ಲಿಂಗಾಂಗಗಳೆಂದು ಕಾಣುತ್ತವೆ. ಆಗ ಲಿಂಗ ಪೂಜಿಸುವ ಆಚಾರ ನಿಂತು; ಅಗೋಚರದ ಆಚಾರದ ಅರಿವು ಮೂಡುತ್ತದೆ. ಗೋಚರಿಸುವ ಪಾಷಾಣವನ್ನು ಅಂಗದಿಂದ ಕಿತ್ತೆಸೆಯುತ್ತದೆ.

ಅಂಗದ ಮೇಲೆ ಲಿಂಗವಿದ್ದು ಫಲವೇನು? ಕುರುಡನ ಕೈಯಲ್ಲಿ ಕನ್ನಡಿಯಿದ್ದಂತೆ. ಬರಡು ಆಕಳು ಕರುವಿಗೆ ಜನ್ಮ ಕೊಟ್ಟಂತೆ, ಕುರುಡನಿಗೆ ಕಣ್ಣ ಬೇನೆ ಬಂದಂತೆ, ಕುರುಡಿಗೆ ಮಕ್ಕಳಾದಂತೆ, ದೀನನ ಮನೆಯಲ್ಲಿ ಹೊನ್ನಿದ್ದಂತೆ ಇವರೇನು ಮಾಡಿದರೇನು? ಅಂಗದ ಮೇಲೆ ಲಿಂಗ ಧರಿಸಿಕೊಂಡರೂ ಅಂಗಕ್ಕೆ ಲಿಂಗ ಏನೂ ಭೋದಿಸಲರಿಯದು.

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನು ತ್ಯಜಿಸಲರಿಯರು. ಅಂಗದ ಮೇಲಿನ ಲಿಂಗ ಅಂಗಕ್ಕೆ ಬಂದ ಆಪತ್ಕಾಲವನು ತಡೆಗಟ್ಟಲರಿಯದು. ಅರಿಷಡ್ವರ್ಗಗಳಿಗೆ ಅಂಗ ತುತ್ತಾಗಿ ಅದರಿಂದುಂಟಾಗುವ ಸುಖ ದುಃಖಗಳಿಗೆ ಈಡಾಗಿ ಒಮ್ಮೆ ಇಲ್ಲವಾಗುತ್ತದೆ. ಅಂಗದಲ್ಲಿಯೇ ಸಂಗಮವಾದ ಬಸವಪ್ರಿಯ ಕೂಡಲಚೆನ್ನ ಬಸವಣ್ಣನನ್ನೇ ದೇವರೆಂದು ಮನ ಅರಿಯದು.

45

ಆಚಾರದರಿವು ಆಗಮವ ಕೂಡಿಕೊಂಡಿಹುದು.
ವಿಚಾರದರಿವು ಶಾಸ್ತ್ರವ ಕೂಡಿಕೊಂಡಿಹದು.
ಲಿಂಗಾಚಾರದಿರವು ಅಂಗ ಭೋಗವ ಕೂಡಿಕೊಂಡಿಹುದು.
ಆದಿ ವಿಚಾರದರವು ಜ್ಞಾನವ ಕೂಡಿಕೊಂಡಿಹುದು.
ಈ ಚತುರ್ವಿಧದೊಳಗೆ ಆವಂಗವೂ ಅಲ್ಲ.
ಎಮ್ಮ ಶರಣರ ಪರಿ ಬೇರೆ. ಅದೆಂತೆಂದರೆ:
ಗುರುಕರದಲ್ಲಿ ಹುಟ್ಟಿದರು, ಲಿಂಗದಲ್ಲಿ ಬೆಳೆದರು.
ಜಂಗಮದ ಸಂಗವ ಮಾಡಿದರು, ಪ್ರಸಾದದಲ್ಲಿ ಅಡಗಿದರು.

ಇದೀಗ ನಮ್ಮ ಶರಣರ ನಡೆನುಡಿ ಅರಿವು ಆಚಾರ ಲಿಂಗೈಕ್ಯ.
ಈ ಚತುರ್ವಿಧವು ಹೊರತಾಗಿ, ಅವರೊಬ್ಬರು ಸಾಧಿಸಿ ಎಂದರೆ,
ಸಾಧಕರಿಗೆ ಸಾಧ್ಯವಲ್ಲ, ಭೇದಕರಿಗೆ ಭೇದ್ಯವಲ್ಲ.
ಅರಿವಿಂಗೆ ಅಪ್ರಮಾಣ, ವಾಙ್ಮನಕ್ಕಗೋಚರ.
ಆಗಮ ಶಾಸ್ತ್ರಂಗಳು ಅರಸಿ ಕಾಣವು. ಇದು ಕಾರಣವಾಗಿ
ಎಮ್ಮ ಶರಣರು ಗುರು, ಲಿಂಗ, ಜಂಗಮ, ಪ್ರಸಾದ
ಈ ಚತುರ್ವಿಧವಿಡಿದು ಅಚಲ ಪದವಿಯನೆಯ್ದಿದರು.
ಇದಕ್ಕೆ ನೀವೆ ಸಾಕ್ಷಿ, ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಮನಕ್ಕೆ ತಿಳಿಯದಿದ್ದರೆ ಅರಿವಿನ ಪುಸ್ತಕಗಳ ಮೇಲೆ ಸವಾರಿ ಮಾಡಿ ಆ ಪುಸ್ತಕಗಳನ್ನೇ ಆಚಾರವಾಗಿಸಿಕೊಂಡು ಉದಾಹರಣೆ ಕೊಡುತ್ತ ಆಗಮದ ಆಚಾರವನ್ನು ಪಾಲಿಸುತ್ತ ಆಚಾರ್ಯನೆನ್ನಿಸಿಕೊಳ್ಳುತ್ತದೆ.

ಹಲವಾರು ಶಾಸ್ತ್ರ ಗ್ರಂಥಗಳನ್ನು ಮನ ಅಭ್ಯಾಸಮಾಡಿ, ಶಾಸ್ತ್ರದ ವಿಚಾರಗಳನ್ನು ಹೇಳುತ್ತಾ ವ್ಯವಹಾರ ಮಾಡುತ್ತಾ ವೇಷ ಭೂಷಣಗಳನ್ನು ಅಂಗಕ್ಕೆ ಧರಿಸಿ ಶಾಸ್ತ್ರಿ ಎನ್ನಿಸಿಕೊಳ್ಳುತ್ತದೆ.

ಮನ ಅಂಗದ ಮೇಲೆ ಲಿಂಗ ಧರಿಸಿ, ಮೂರು ವೇಳೆಯಲ್ಲಿ ಪತ್ರಿ ಪುಷ್ಪಗಳನ್ನು ಧರಿಸಿ ಮಡಿ ಮೈಲಿಗೆಗಳನ್ನು ಆಚಾರಿಸುತ್ತಾ ಅಂಗದ ಮೇಲಿರುವ ಲಿಂಗಾರಾಧನೆಯಲ್ಲಿ ಕಾಲ ಕಳೆಯುತ್ತದೆ. ಹೀಗೆ ಪೂಜೆಯಲ್ಲಿ ತೊಡಗಿದ ಅಂಗವನ್ನು ಹೊಗಳಿದರೆ ಮನದ ಆಚಾರ ಇನ್ನೂ ಬಲಗೊಳ್ಳುತ್ತದೆ.

ಆದಿ ಕಾಲದಿಂದಲೂ ಬಂದ ಅರಿವು ಮರೆವಿನ ವಿಚಾರಗಳನ್ನು ಮನ ತನ್ನ ಬುದ್ಧಿ ಬಲದಿಂದ ಅಭ್ಯಾಸ ಮಾಡಿ ಆಗಮ ಪುರಾಣ ಶಾಸ್ತ್ರ ಗ್ರಂಥಗಳ ಆಧಾರಸಹಿತ ಪ್ರವಚನ ಮಾಡುತ್ತಾ ಸದಾಕಾಲ ವಾದ ವಿವಾದಗಳಲ್ಲಿ ತೊಡಗುತ್ತದೆ.

ಆಚಾರ, ವಿಚಾರ, ಲಿಂಗಾಚಾರ, ಆದಿಕಾಲದ ಆಚಾರಗಳೆಲ್ಲ ಅರಿವಿಗೆ ಸಂಬಂಧಿಸಿದ ಸೂತ್ರಗಳಾದರೂ ಮನ ತನ್ನ ಮೂಗಿನ ನೇರಕ್ಕೆ ಬಳಸಿಕೊಂಡು ಅಂಗಕ್ಕೆ ನಾಲ್ಕು ವೇಷಗಳನ್ನು ಧರಿಸುತ್ತದೆ. ಮನ ತನುವಿಗೆ ಆಚಾರದ ಪಾತ್ರ ಧರಿಸುತ್ತದೆಯೇ ಹೊರತು ತಾನೇ ಅರಿವಿನಲ್ಲಿ ಲೀನವಾಗಿ ಸ್ವತಹ ಆ ಅರಿವೇ ಆಗಲರಿಯದು. ಏಕೆಂದರೆ ವಿಚಾರಗಳು ಮನಕ್ಕೆ ಪುಸ್ತಕದಿಂದ ಆದಿಕಾಲದ ಆಚಾರ ವಿಚಾರಗಳಿಂದ ಲಭ್ಯವಾಗಿವೆಯೇ ಹೊರತು ತನುವಿನಲ್ಲಿಯೇ ಲಭ್ಯವಾಗಿಲ್ಲ. ಹೀಗಾಗಿ ಆಚಾರಗಳೇ ಮನಕ್ಕೆ ಪ್ರಧಾನವಾಗುತ್ತವೆ.

ಈ ಚತುರ್ವಿಧದೊಳಗೆ ಅಂಗ ಮನಕ್ಕೆ ಪ್ರಧಾನವಾಗಲಿಲ್ಲ. ಆದರೆ ಶರಣರ ಪರಿಯೇ ಬೇರೆ; ಅವರ ವಿಚಾರವೇ ಬೇರೆ. ಶರಣರಿಗೆ ಗ್ರಂಥಗಳು ಅದರ ವಿಚಾರಗಳು ಪ್ರಧಾನವಲ್ಲ. ಅವರಿಗೆ ಏನಿದ್ದರು ಅಂಗವೇ ಪ್ರಧಾನ. ಅಂಗದಲ್ಲಿಯೇ ಹುಟ್ಟಿದ ಅರಿವೇ ಪ್ರಧಾನ. ಹೀಗಾಗಿ ಶರಣರು ಅಂಗದಲ್ಲಿ ಹುಟ್ಟಿದರು, ಅರಿವಿನಿಂದ ಬೆಳೆದರು. ಅರಿವನ್ನೇ ಗುರು ಮಾಡಿಕೊಂಡು ಗುರುವಾಗಿ ಬೆಳೆದರು.

ಶರಣರು ಅಂಗದಲ್ಲಿಯೇ ಇದ್ದ ಗುರುವಿನ ಮಾತು ಪಾಲಿಸುವ ಜಂಗಮನ ಸಂಗ ಮಾಡಿದರು. ಅಂಗಕ್ಕೆ ಆಪತ್ಕಾಲವನ್ನುಂಟು ಮಾಡುವ ಕಣ್ಣು ಕಿವಿ ಮೂಗು ನಾಲಗೆ ಚರ್ಮಗಳ ಅಜ್ಞಾನವನ್ನೇ ಅರಿವೆಂಬ ಜಂಗಮನಿಗೆ ಪ್ರಸಾದವಾಗಿಸಿದರು. ಆ ಪ್ರಸಾದದಲ್ಲಿ ಅಡಗಿ ಅಂಗದ

ಆಪಾತ್ಕಾಲವನ್ನು ಅರಿವೆಂಬ ಲಿಂಗದಿಂದ ಜಯಿಸಿ ಮಹಾವೀರರಾದರು.

ಆಗ ಶರಣರ ನಡೆ ನುಡಿ ಲಿಂಗೈಕ್ಯ. ಅವರು ಆಚಾರಿಸಿದ ಅಗೋಚರದ ಆಚಾರವೂ ಲಿಂಗೈಕ್ಯ.

ಈ ಚತುರ್ವಿಧ ಹೊರತಾಗಿ ಅಂಗದಲ್ಲಿರುವ ಅರಿವನ್ನೇ ಮನ ಮೊದಲು ಮಾಡಿಕೊಂಡು ಸಾಧಿಸಿ ಎಂದು ಹೇಳಿದರೆ ಸಾಧಕರಿಗೆ ಸಾಧ್ಯವಲ್ಲ, ಭೇದಕರಿಗೆ ಭೇದ್ಯವಲ್ಲ. ಶರಣರು ಆಚರಿಸಿದ ಈ ಮಹಾಜ್ಞಾನ ಅರಿವಿಂಗೆ ಅಪ್ರಮಾಣು, ವಾಕ್ಕಿಗೂ ಮನಕ್ಕೂ ಅಗೋಚರ. ಆಗಮ ಶಾಸ್ತ್ರಂಗಳು ಅರಸಿ ಕಾಣವು.

ಶರಣರು ಮಾತ್ರ ಅರಿವೆಂಬ ಗುರುವನ್ನು ಹಿಡಿದರು. ಅಂಗವನ್ನೇ ಲಿಂಗಾಂಗ ಮಾಡಿಕೊಂಡರು. ಈ ಲಿಂಗಾಂಗದಲ್ಲಿಯೇ ಉದಯಿಸಿದ ಜಂಗಮನ ನೆನೆದರು. ಅಂಗದಲ್ಲಿಯೇ ಹುಟ್ಟಿದ ಅಜ್ಞಾನವನ್ನು ಜಂಗಮನಿಗೆ ಪ್ರಸಾದ ಮಾಡಿ ಉಣ ಬಡಿಸಿದರು. ಗುರು, ಲಿಂಗ, ಜಂಗಮ, ಪ್ರಸಾದವೆಂಬ ಚತುರ್ವಿಧವಿಡಿದು ಅಚಲ ಪದವಿಯನು ಹೊಂದಿದರು. ಇದಕ್ಕೆ ಅಂಗದಲ್ಲಿಯೇ ಇದ್ದ ಅರಿವೆಂಬ ಗುರುದೇವನೇ ಸಾಕ್ಷಿ. ಬಸವಣ್ಣನಿಗೆ ಪ್ರಿಯನಾದ ಸದ್ಗುರು ಕೂಡಲ ಚೆನ್ನಬಸವಣ್ಣನೇ ಸಾಕ್ಷಿ ಎಂದಿದ್ದಾರೆ ಅಪ್ಪಣ್ಣ ಶರಣರು.

46

ಆಚಾರಲಿಂಗ ಗುರುಲಿಂಗ ಶಿವಲಿಂಗ
ಜಂಗಮಲಿಂಗ ಪ್ರಸಾದ ಲಿಂಗ ಮಹಾಲಿಂಗದೊಳು ಬೆರೆದರೆ,
ಬಸವ ಪ್ರಿಯ ಕೂಡಲ ಚೆನ್ನಬಸವಣ್ಣ.

ಅಂಗವದು ಆಚಾರಲಿಂಗವೂ ಹೌದು. ಗುರುಲಿಂಗವೂ ಹೌದು. ಶಿವಲಿಂಗವೂ ಹೌದು. ಪ್ರಸಾದ ಲಿಂಗವೂ ಹೌದು. ಮಹಾಜ್ಞಾನ ಲಿಂಗವೂ ಹೌದು. ಅಂಗಕ್ಕೆ ಆವರಿಸಿದ ಅಜ್ಞಾನಿ ಮನ ಇದನ್ನು ತಿಳಿಯಬೇಕು. ಆಗ ಬಸವಪ್ರಿಯ ಕೂಡಲ ಚೆನ್ನಬಸವಣ್ಣನೇ ತಾನು!

ನೋಡುವ ನೋಟದಲ್ಲಿ ಅರಿವು ಬೆರೆಸಿ ನೋಡುವುದನ್ನು ಕಲಿಸುವಾತನೇ ಗುರುದೇವ. ಗುರುದೇವನ ನೋಟವನ್ನು ಪಾಲಿಸುವಾತನೇ ಆಚಾರದ ಲಿಂಗಯ್ಯ. ಈತ ಶಿವಲಿಂಗವೂ ಹೌದು. ಮನದ ಅಜ್ಞಾನ ನೋಟವನ್ನು ಬೇಧಿಸಿ, ಪ್ರಸಾದ ಮಾಡಿಕೊಂಡು ಉಣ್ಣುವಾತನೇ ಜಂಗಮ; ಈತನನ್ನು ಶರಣರು ಜಂಗಮ ಲಿಂಗ ಎಂದು ಕರೆದರು.

ಅಜ್ಞಾನದ ನೋಟವನು, ಅಜ್ಞಾನದ ಶಬ್ದವನು, ಅಜ್ಞಾನದ ಸ್ಪರ್ಶವನು, ದುರ್ಗಂಧದ ವಾಸನೆಯನು, ಅಜ್ಞಾನದ ಜಿಹ್ವೆಯ ರುಚಿಯನು, ಪ್ರಸಾದ ಮಾಡಿಕೊಂಡು ಉಣ್ಣುವಾತನೇ ಜಂಗಮಲಿಂಗ. ಈ ಜಂಗಮ ಲಿಂಗಕ್ಕೆ ಅಜ್ಞಾನವೇ ಪ್ರಸಾದವಾಗಿ, ಮಹಾಜ್ಞಾನವಾಗಿ ಪರಿವರ್ತನೆಯಾಗುತ್ತದೆ. ಅಜ್ಞಾನವೆಲ್ಲ ಅಂಗದಲ್ಲಿಯೇ ಇರುವ ಮಹಾಲಿಂಗದೊಳಗೆ ಬೆರೆತು ಸರ್ವಾಂಗವೂ ಲಿಂಗಾಂಗವಾಗಿ ಅರಿವಿನ ಅಂಗವಾಗಿ ಮಾರ್ಪಡುತ್ತದೆ. ಹೀಗೆ ಪರಿವರ್ತನೆಯಾದ ಮಹಾಲಿಂಗವೇ ಬಸವಣ್ಣನಿಗೆ ಪ್ರಿಯವಾದ ಕೂಡಲ ಚೆನ್ನಬಸವಣ್ಣನ ಅರಿವಿನ ಅಂಗವಾಗುತ್ತದೆ.

47

ಆಟ ಕೋಟಲೆ ಎಂಬ ರಾಟಳವ ಮುರಿದು,

ನೋಟ ನುಡಿಗಳೆಂಬುವ ಸೂತ್ರವರಿದು,
ದಾಟಿ ಸಪ್ತ ಮದವೆಂಟು, ನೋಟ ಬೇಟದೊಳು
ಲಿಂಗದೊಳು ಬೆರೆದಿದ್ದರೆ, ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಅಂಗದ ಸೃಷ್ಟಿಗೆ ಕಾರಣವಾದ ಅರಿವೆಂಬ ಲಿಂಗದ ನೆರಳೇ ಮನ! ಈ ಮನ ಅಂಗವನ್ನು, ಬೆಳಗುವ ಲಿಂಗವನ್ನು ನೆರಳಿನಾಕಾರದಲ್ಲಿ ಆವರಿಸಿದೆ. ಇದು ಅಂಗದ ಆಟ ಕೋಟಲೆಯ ರಾಟಾಳ. ಈ ಅಜ್ಞಾನದ ಚಕ್ರದಿಂದ ಸೃಷ್ಟಿಯಾಗುವ ನುಡಿ ನೋಟಗಳೆಲ್ಲ ಸೃಷ್ಟಿ ಮಾಡಿದ ಅಂಗಕ್ಕೆ ಸಂಕಟವನ್ನು ಉಂಟು ಮಾಡುತ್ತವೆ. ಈ ಮನದಿಂದಾಗಿ ಅಂಗದಲ್ಲಿ ಸಪ್ತವ್ಯಸನಗಳು ಹುಟ್ಟಿಕೊಂಡಿವೆ.

ತನುವ್ಯಸನ, ಮನವ್ಯಸನ, ಧನವ್ಯಸನ, ರಾಜ್ಯವ್ಯಸನ, ಉತ್ಸಾಹವ್ಯಸನ, ಸೇವಕವ್ಯಸನಗಳ ಬಾಧೆಯನ್ನು ಉಂಟು ಮಾಡಿ, ಮನ ತನುವನ್ನು ಚಿದ್ರಿಸುತ್ತದೆ. ಹಾಗೆಯೇ ಮನ ತನುವಿನಲ್ಲಿ ಕುಲಮದ, ಛಲಮದ, ಧನಮದ, ರೂಪಮದ, ಯೌವ್ವನಮದ, ವಿದ್ಯೆಯಮದ, ರಾಜ್ಯಮದ ಮತ್ತು ತಪಸ್ವಿ ಮದವನ್ನು ಸೃಷ್ಟಿ ಮಾಡಿ ಎಂಟು ವಿಧದಲ್ಲಿ ತೊಂದರೆ ಕೊಡುತ್ತದೆ. ತನುವಿನಲ್ಲಿಯೇ ಈ ಮದಗಳು ಸೃಷ್ಟಿಯಾಗಿ ಕ್ಷಣ ಕ್ಷಣಕ್ಕೂ ಸಾವು ನೋವುಗಳನ್ನುಂಟು ಮಾಡುತ್ತದೆ.

ಮನದ ಈ ಆಟ ಕೋಟಲೆಯ ರಾಟಾಳವನ್ನು ಅನ್ಯರು ಮುರಿಯಲು ಬರುವುದಿಲ್ಲ. ಸೃಷ್ಟಿ ಮಾಡಿಕೊಂಡು ಸುಖದುಃಖಗಳನ್ನು ಹೊಂದುವ ಮನವೇ ಅರಿವೆಂಬ ಗುರುದೇವನನ್ನು ಅಂಗದಲ್ಲಿಯೇ ಬೆರೆತರೆ ತಾನೇ ಬಸವಪ್ರಿಯ ಕೂಡಲಚೆನ್ನಬಸವಣ್ಣ.

48

ಆಟದಲ್ಲಿ ಕೆಲಹೊತ್ತುಗಳೆದು,
ಕೂಟದಲಿ ಕೆಲ ಹೊತ್ತುಗಳೆದು,
ನೋಟದಲ್ಲಿ ಕೆಲ ಹೊತ್ತುಗಳೆದು,
ಊಟದ ಹೊತ್ತಿಗೆ ಲಿಂಗವ ಕೂಡಿಹೆನೆಂಬವನೊಬ್ಬ,
ಊಟ ಮಾಟ ಕೂಟದಲ್ಲಿ ಕೋಟಲೆಗೊಳ್ಳುತ್ತಿದ್ದೆನೆಂಬುವನೊಬ್ಬ ಪೋಟ.
ಇವರಿಬ್ಬರ ನೋಟ ಬೇಟಕ್ಕೆ ಸಿಕ್ಕದೆ ದಾಂಟಿಹೋದನು.
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ

ಆಟದಲ್ಲಿ, ಕೂಟದಲ್ಲಿ, ನೋಟದಲ್ಲಿ ಅಂಗ ಆಪತ್ಕಾಲಕ್ಕೆ ತುತ್ತಾಗಿ, ಅಪಹಾಸ್ಯಕ್ಕೆ ಈಡಾಗಿ ಊಟದ ಹೊತ್ತಿಗೆ ಸ್ನಾನ ಮಾಡಿ, ಲಿಂಗಕ್ಕೆ ಮಜ್ಜನ ಮಾಡಿ, ಹೂ ಪತ್ರೆಗಳನ್ನು ಏರಿಸಿ ಜಪತಪಗಳನ್ನು ಮಾಡಿ ಚಾಮರ ಬೀಸಿ ಮನ ಅಂಗವನ್ನು ಪೂಜಾ ಪಾತ್ರದಲ್ಲಿಡುತ್ತದೆ. ಇದು ಕೋಟಲೆಯ ವಿಷಯವೆಂಬುದು ಮನಕ್ಕೆ ತಿಳಿದಿದ್ದರೂ ಅದೊಂದು ಕರ್ತವ್ಯದಂತೆ ಅಂಗವನ್ನು ನಿತ್ಯ ನಿತ್ಯ ಅಪಹಾಸ್ಯಕ್ಕೀಡು ಮಾಡುತ್ತದೆ.

ಊಟದ ಹೊತ್ತಿಗೆ ಆಟ, ಕೂಟ, ನೋಟ ಮುಗಿಸಿ ಲಿಂಗದೊಂದಿಗೆ ಕೂಡುವ ಮನವೊಂದು, ಊಟ ಮಾಟ ಕೂಟದೊಂದಿಗೆ ಅಂಗವನ್ನು ಕೂಡಿಸಿ ಸುಖಿಸಿ ಕೋಟಲೆಗೊಳ್ಳುವ

ಮನವೊಂದು.

ಇವರಿಬ್ಬರ ಅಜ್ಞಾನದ ನೋಟ ಬೇಟಕ್ಕೆ ಸಿಕ್ಕದೆ ದಾಟಿ ಲಿಂಗಯ್ಯನನ್ನೂ ಕೂಡುವ, ಅಂಗದಲ್ಲಿಯೇ ಇರುವ ಲಿಂಗಯ್ಯನೊಂದಿಗೆ ಸಂಗ ಮಾಡುವ ಇಚ್ಛೆ ಮನಕ್ಕೆ ಆದರೆ ಸಾಕು ಬಸವಣ್ಣನಿಗೆ ಪ್ರಿಯನಾದ ಚೆನ್ನಬಸವಣ್ಣನನ್ನು ಅಂಗದಲ್ಲಿಯೇ ಕೂಡಿ ಕೂಡದಗಲದ ಅರಿವಿನ ಕೂಟದಲ್ಲಿ ಸುಖಿಸುತ್ತದೆ.

49

ಆಡುವ ಹಾಡುವ ನಡೆವ ನುಡಿವ ಬೆಡಗ ಬಿಡದೆ,
ಒಡಲ ದುರ್ಗುಣಗಳ ಕೆಡದೆ,
ಪೊಡವಿಯೊಳು ನುಡಿಯ ನುಣ್ಣನೆ ನುಡಿದುಕೊಂಡು
ಒಡಲಹೊರೆವ ಅಣ್ಣಗಳಿರಾ,
ನೀವು ಭಕ್ತ ಮಹೇಶ್ವರರೆಂದು ನುಡಿದುಕೊಂಬಿರಿ. ಅಂತಲ್ಲ ಕೇಳಿರಣ್ಣಾ.
ನೋಡುವ ಕಣ್ಣು, ನುಡಿವ ನಾಲಿಗೆಯ ನುಂಗಿತ್ತು.
ಕೇಳುವ ಕಿವಿ, ಮೂಸಿಸುವ ನಾಸಿಕವ ನುಂಗಿತ್ತು .
ಕೊಡುವ ಕೊಂಬುವ ಕೈ, ಅಡಿ ಇಡುವ ಕಾಲ ನುಂಗಿತ್ತು.
ಇವನೊಡಬಿಡದೆ ಕೊಂಬ ತನುವ ನುಂಗಿತ್ತು.
ತಲೆಯಷ್ಟೆಯುಳಿದು, ಆ ತಲೆಯ ನೆಲವಿಡಿದು,
ಘನವ ನಂಬಿದವರ ಭಕ್ತ ಮಹೇಶ್ವರರೆಂಬೆ ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಬೆಡಗು ತುಂಬಿದ ವೈಯ್ಯಾರದ ದೇಹ. ಒಡಲ ಹೊರೆಯುವುದಕ್ಕಾಗಿ ವೈಯ್ಯಾರದ ಅವಯವಗಳು ಬಲು ಬೆಡಗಿನಿಂದ ಕೆಲಸ ಮಾಡುತ್ತಲಿವೆ. ಇದರ ಹಾಡು ಬೆಡಗು, ಆಟ ಬೆಡಗು, ನುಡಿಯುವ ನುಡಿ ಬೆಡಗು, ಒಡಲ ದುರ್ಗಣಗಳು ಕೆಡದಿದ್ದರೆ ತನು ಭಕ್ತನಲ್ಲ, ಮಹೇಶ್ವರನಲ್ಲ.

ನೋಡುವ ಕಣ್ಣು ನೋಡುವುದನ್ನು ನೋಡಲರಿಯದಿದ್ದರೆ ನುಡಿಯುವ ನಾಲಿಗೆಯನ್ನೇ ನುಂಗುತ್ತದೆ. ಕೇಳುವ ಕಿವಿ ಶಬ್ದವನು ಅರಿಯದಿದ್ದರೆ ಮೂಸಿಸುವ ಮೂಗನೆ ನುಂಗುತ್ತದೆ. ಕೊಡುವ ಕೊಂಬುವ ಕೈ, ಕೈ ತಪ್ಪಿ ಮುಟ್ಟಿದರೆ ಅಡಿ ಇಡುವ ಕಾಲನೆ ಕತ್ತರಿಸಿ ಆಡಲು ಬಾರದಂತೆ ಮಾಡುತ್ತದೆ. ಇವನೊಡಬಿಡದೆ ಕೊಂಬುವ ಆಸೆ ಬುರುಕ ತನುವನ್ನು ಆವರಿಸಿದ ಮನವೇ ನುಂಗುತ್ತದೆ.

ತಲೆಯಷ್ಟೇ ಉಳಿದು, ಆ ತಲೆಯ ನೆಲವಿಡಿದು, ಘನವ ನಂಬಿದವರ ಭಕ್ತ ಮಾಹೇಶ್ವರರೆಂಬೆ ಕಾಣಾ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಒಡಲು ದುರ್ಗಣಿಯಲ್ಲ. ಒಡಲನ್ನು ಆವರಿಸಿದ ಮಾಯೆ ಅದರ ಹಸಿವೆಗಾಗಿ ಒಡಲ ಮೂಲಕ ಒಡಲು ತುಂಬಿಸಿಕೊಳ್ಳುತ್ತದೆ. ಮನ ಒಡಲ ಮೂಲಕ ಆಡುತ್ತದೆ. ಹಾಡುತ್ತದೆ, ನಡೆಯುತ್ತದೆ, ನುಡಿಯುತ್ತದೆ. ಮನದ ಬೆಡಗ ಬಿಡದಿದ್ದರೆ ಒಡಲ ದುರ್ಗಣಗಳು ಕೆಡುವುದಿಲ್ಲ.

ನೋಡುವ ಕಣ್ಣಿನಲ್ಲಿ ಮನ ಬೆರೆತು ತನ್ನಂತೆಯೆ ಇರುವ ತನುವನ್ನು ಕಾಮಿಸಲು ಹೋಗುತ್ತದೆ. ನುಡಿವ ನಾಲಿಗೆ, ಮೂಸಿಸುವ ಮೂಗು, ಕೇಳುವ ಕಿವಿ, ಕೊಡುವ ಕೊಂಬುವ ಕೈಅಡಿ ಇಡುವ ಕಾಲು ಕಣ್ಣಿಗೆ ಸ್ಪಂದಿಸಿ, ಇಡೀ ಒಡಲಿಗೆ ದುರ್ಗಣದ ಪಟ್ಟ ಕಟ್ಟುತ್ತದೆ ಕಣ್ಣು. ಮನದ ಮಾಯೆಗೆ ಸ್ಪಂದಿಸಿದ

ಒಡಲು ಅದರ ಬಾಯಿಂದ ನಾನು ಭಕ್ತ ಮಾಹೇಶ್ವರನೆಂದು ನುಡಿಯುತ್ತದೆ.

ಒಡಲು ಜ್ಞಾನದ ಸೊತ್ತು. ಜ್ಞಾನ, ಕಣ್ಣು, ಕಿವಿ, ನಾಲಿಗೆ, ಚರ್ಮ, ಮೂಗಿನಲ್ಲಿ ತನ್ಮಯವಾಗಿದೆ. ಕಣ್ಣಿನಲ್ಲಿಯ ಅಜ್ಞಾನವನು ಕಣ್ಣಿನಲ್ಲಿಯ ಜ್ಞಾನವೇ ನುಂಗುತ್ತದೆ. ಅಜ್ಞಾನದಿಂದ ನುಡಿಯುವ ನಾಲಿಗೆಯನು, ಕೇಳುವ ಕಿವಿಯನು, ಮೂಸಿಸುವ ಮೂಗನು, ಮುಟ್ಟುವ ಚರ್ಮವನು ನುಂಗಿ ಜ್ಞಾನ ಮಾತ್ರ ಉಳಿಯುತ್ತದೆ. ಇಂತಹ ಘನವನು ನಂಬಿದ ಮನವೇ ಭಕ್ತ, ಮಾಹೇಶ್ವರನಾಗಲು ಸಾಧ್ಯ. ಬಸವಣ್ಣನಿಗೆ ಪ್ರಿಯವಾದ ಕೂಡಲ ಚೆನ್ನಬಸವಣ್ಣನಾಗಲು ಸಾಧ್ಯ.

50

ಅಣವಮಲ, ಮಾಯಾಮಲ, ಕಾರ್ಮಿಕ ಮಲದೊಳಗಣ
ಆಟ ಕೋಟಲೆ ಅಡಗಿದೆ.
ಕಂಡಕಂಡವರೊಳಗಣ ನುಡಿ ನೋಟ ಹಿಂಗದೆ,
ಮಾಟಕೂಟ ಜಪಕೋಟಲೆಯಿಂದ ನಟಿಸಿ,
ಲಿಂಗವ ನೋಡಿ ಕೂಡಿಹೆವೆಂಬವರ ಬದುಕೆಂತಾಯಿತ್ತೆಂದರೆ,
ಮೋಟ ಗಂಡನ ಮೂಕೊರತಿ ಹೆಂಡತಿ,
ಬೇಟವ ಮಾಡಿದಂತಾಯಿತು ಕಾಣಾ,
ಬಸವಪ್ರಿಯ ಚೆನ್ನಬಸವಣ್ಣಾ.

ಅನ್ಯ ತನುಗಳ ರೂಪ ನೋಡಿ ಹಾದರಕ್ಕೆ ಒಳಗಾಗುವ ತನು, ಕಂಡವರ ನುಡಿ ಕೇಳಿ ಆಚಾರಕ್ಕೆ ಒಳಗಾಗುವ ತನು. ಜಪ ಮಾಡಿದರೇನು, ತಪ ಮಾಡಿದರೇನು, ತ್ರಿಕಾಲ ಲಿಂಗವ ಪೂಜಿಸಿದರೇನು? ಅದರ ಬದುಕು ನರಕ. ಅದರ ಮಾತೊಂದು ಪರಿ. ಅದರ ನೋಟ ಮತ್ತೊಂದು ಪರಿ!

ಅನ್ಯ ತನುಗಳ ರೂಪು, ಮಾತುಗಳಿಗೆ ಮರುಳಾದ ತನು ಮಾತ್ರ ಕೀಟಲೆಗೆ ಒಳಗಾಗುತ್ತದೆ. ಆ ಕೀಟಲೆಗೆ ಕಾರಣವಾದ ಮನ, ಮನದ ಅರಿವಿಗೆ ಬಾರದೆ ಹೋಗುತ್ತದೆ. ಮನದ ಆಟ ಕೋಟಲೆಗೆ ತನು ಮಾರು ಹೋದರೆ, ಅರಿವಿನ ತನುವಿಗೆ ಅಜ್ಞಾನದ ಪಟ್ಟ!

ತನು ಅರಿವಿನ ಸಂಪತ್ತು. ಬಸವಣ್ಣನಿಗೆ ಪ್ರಿಯವಾದ ಚೆನ್ನಬಸವಣ್ಣನೆಂಬ ಮಹಾ ಜ್ಞಾನಿಯ ಸಂಪತ್ತು! ಅಪ್ಪಣ್ಣ ಮಹಾಜ್ಞಾನಿ. ಆತ ತನ್ನ ತನುವಿನಲ್ಲಿ ತನ್ಮಯವಾದ ಮಹಾಜ್ಞಾನಕ್ಕೆ ಬಸವಣ್ಣನಿಗೆ ಪ್ರಿಯವಾದ ಚೆನ್ನಬಸವಣ್ಣ ಎಂದು ನಾಮಕರಣ ಮಾಡಿದ. ಮನ ಹೇಳಿದಂತೆ ತನು ಕೇಳಲಿಲ್ಲ. ಮನಕ್ಕೆ ಸುಖವಾದಂತೆ ತನು ಭೋಗಿಸಲಿಲ್ಲ. ಕಂಡ ಕಂಡವರನ್ನು ನುಡಿ, ತನುವಿನ ಅರಿವಿನಿಂದ ಕೇಳಿದ ಶಬ್ದ ಅನಾವರಣ ಮಾಡಿ ಆಲಿಸಿದ. ನುಡಿ ಅರಿವಿಗೆ ಪ್ರಸಾದವಾಯಿತು. ಸು-ಶಬ್ದ, ಕು-ಶಬ್ದ ಶಬ್ದದಲ್ಲಿಯೇ ಇದೆಯೆಂದು ಶಬ್ದ ಆಲಿಸಿ ನಿಶಬ್ದವೇದಿಯಾದ.

ಕಂಡ ಕಂಡವರ ರೂಪು, ಅದನ್ನು ನೋಡುವ ಮನದ ತನುವಿನ ರೂಪು ಒಂದೇ ಆಗಿದೆ. ನಿರೂಪದ ಅರಿವು ಚರ್ಮದಲ್ಲಿರದಿದ್ದರೆ ಅದು ನಿಸ್ತೇಜ; ಶವ! ಶವವೂ ಒಂದು ರೂಪೇ ಆಗಿದ್ದರೂ ಮನ ಅದನ್ನು ನೋಡಿ ಕಾಮಿಸುವುದಿಲ್ಲ. ಹಾದರ ಮಾಡುವುದಿಲ್ಲ. ಆದರೆ ನಿರೂಪದೊಂದಿಗೆ ರೂಪ ನೋಡಲು ಮನಕ್ಕೆ ಸಾಧ್ಯವಾಗುವುದಿಲ್ಲ. ರೂಪಿನೊಳಗಿದ್ದ ಮಲ ಮನಕ್ಕೆ ಬೇಡ. ರೂಪು ತನ್ನದಾದರೇನು, ಇತರರದಾದರೇನು? ಅದರೊಳಗಿದ್ದ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸುಗಳೆಲ್ಲ

ಒಂದೇ. ಅದನ್ನು ಚೆಲ್ಲದಂತೆ ಬಂಧಿಸಲ್ಪಟ್ಟ ಚರ್ಮವೂ ಒಂದೇ. ನೋಟದ ಅಜ್ಞಾನಕ್ಕೆ ಚರ್ಮ ಬೇಕಾಯಿತು. ನೋಟದ ಜ್ಞಾನಕ್ಕೆ ಚರ್ಮ ಬೇಡ, ತನು ಕೂಡಾ ಬೇಡ. ಏಕೆಂದರೆ ತನು ತನ್ನದಾದರೇನು ಇತರದಾದರೇನು ಅದು ಬಸವಣ್ಣನಿಗೆ ಪ್ರಿಯವಾದ ಚೆನ್ನಬಸವಣ್ಣನ ತನು. ಮಹಾಜ್ಞಾನದ ತನು!

ಜ್ಞಾನದ ತನು ಮತ್ತೊಂದು ತನುವನ್ನು ತನ್ನಂತೆಯೇ ಮಹಾಜ್ಞಾನದ ತನುವಾಗಿ ನೋಡುತ್ತದೆ. ನೋಡುವ ನೋಟದಲ್ಲಿ ಜ್ಞಾನ ಬಳಕೆಯಾಗುತ್ತದೆ. ಅಜ್ಞಾನದ ಮನ ಜ್ಞಾನದ ನೋಟಕ್ಕೆ ತುತ್ತಾಗುತ್ತದೆ. ಮಾಟ ಕೂಟ ಜಪದ ಕೋಟಲೆಯಿಂದ ತನು ನಟಿಸುವುದಿಲ್ಲ.

ಕಣ್ಣಿನಲ್ಲಿಯ ಅರಿವಿನ ಲಿಂಗ ಬಳಕೆಯಾಗಿ ಅರಿವಿನ ಲಿಂಗದೊಂದಿಗೆ ಕೂಡುತ್ತದೆ. ನಿರೂಪ ನಿರೂಪದೊಂದಿಗೆ ಬೆರೆತು ಕೂಡದ ಅಗಲದ ಜ್ಞಾನ ಕೂಟದ ಸವಿಯನು ಹೀರುತ್ತದೆ. ಮಲಮಯವಾದ ಅಜ್ಞಾನಿ ಮನ ಮಹಾಜ್ಞಾನದಲ್ಲಿ ಬೆರೆತು ಘನ ಮನವಾಗುತ್ತದೆ. ಬಸವಣ್ಣನಿಗೆ ಪ್ರಿಯನಾದ ಚೆನ್ನಬಸವಣ್ಣನಾಗುತ್ತದೆ.

51

ಆದಿ ಅನಾದಿ ಅಂತ್ಯವೆಂದು ನುಡಿದಾಡುವರಲ್ಲದೆ,
ಇವರ ಭೇದಾಧಿ ಭೇದವನಾರೂ ಅರಿಯರು.
ಆದಿಯಿಂದತ್ತತ್ತಲಾರು ಬಲ್ಲರು?
ಅನಾದಿಯಿಂದತ್ತತ್ತಲಾರು ಬಲ್ಲರು? ಸಾಧಕರಿಗಳವಲ್ಲ.
ವೇದ, ಶಾಸ್ತ್ರ, ಆಗಮ ಪುರಾಣಂಗಳು ಕಾಣದೆ ಹೋದವು.
ಅದು ಹೇಗೆಂದರೆ; ಆದಿ ಕೂರ್ಮ ಕರಿ ಸರ್ಪಹೊತ್ತಿಪ್ಪವೆಂಬರು.
ಅವನಾಗುಮಾಡಿ, ಅದಕ್ಕೆ ಆದಿಯಾಗಿಪ್ಪವರಾರೆಂದು ಅರಿಯರು.
ಅನಾದಿಯೆಂಬ ಆಕಾಶದ ಮೇಲೆ, ದಿಕ್ಪಾಲಕರು,
ದೇವರ್ಕಳು, ರುದ್ರ, ಶಿವ, ಸದಾಶಿವ ಉಂಟೆಂಬರು.
ಅವರನಾಗು ಮಾಡಿ, ಅವರ ನಿಲಿಸಿಕೊಂಡಿಪ್ಪವರಾರೆಂದು ಅರಿಯರು.
ಇಂತೀ ಅಜಾಂಡ ಬ್ರಹ್ಮಾಂಡವೆಲ್ಲವು
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನ
ಕುಕ್ಷಿಯೊಳು ಇಪ್ಪವು ಕಾಣಿರೊ.

ಆದಿ ಅನಾದಿಯಿಂದತ್ತತ್ತಲಿದ್ದ ಮಹಾಲಿಂಗವೆಂಬ ಅರಿವಿನ ಶಿವನು ತನ್ನ ಲೀಲೆಗಾಗಿ ಅಂಗಧರಿಸಿ ಬಂದಾಗ ಆ ಅಂಗವನ್ನು ಆದಿಯೆಂದು ಅನಾದಿಯೆಂದು ಹೆಸರಿಟ್ಟು ಕರೆಯಬಹುದೆ?

ಸಾಧಕರಿಗೆ ಅಳವಲ್ಲ. ವೇದ ಶಾಸ್ತ್ರ ಪುರಾಣಗಳು ಆದಿ ಅನಾದಿಯಿಂದತ್ತತ್ತಲಿರುವ ಅರಿವೆಂಬ ಶಿವನನ್ನು ಕಾಣದೇ ಹೋದವು. ಇವೆಲ್ಲ ಆತನಿಂದ ಹುಟ್ಟಿದ ಎಂಜಲುಗಳು.

ಆಮೆ, ಆನೆ, ಸರ್ಪ ಹೊತ್ತಿವೆ ಎಂದು ಹೇಳುವ ಶಾಸ್ತ್ರಗಳು ಅವುಗಳನ್ನು ಸೃಷ್ಟಿಸಿ ಅದಕ್ಕೆ ಆದಿಯಾಗಿರುವವರು ಯಾರೆಂದು ಶಾಸ್ತ್ರವನ್ನು ಪ್ರೀತಿಸುವವರು ಹೇಳಲರಿಯರು.

ಅನಾದಿಯೆಂಬ ಆಕಾಶದ ಮೇಲೆ ದಿಕ್ಪಾಲಕರು, ದೇವರು, ರುದ್ರ, ಶಿವ, ಸದಾಶಿವ

ಉಂಟೆಂದು ಹೇಳುವರು. ಅವರನ್ನು ಕೂಡಾ ಸೃಷ್ಟಿಸಿ ದೇವಾನು ದೇವತರೆಂದು ಹೆಸರಿಸಿದವರಾರು ಎಂದು ಅರಿಯರು.

ಅಜಾಂಡ ಬ್ರಹ್ಮಾಂಡವೆಲ್ಲವು ನಮ್ಮ ಬಸವಣ್ಣನಿಗೆ ಪ್ರಿಯನಾದ ಚೆನ್ನಬಸವಣ್ಣ ಸರ್ವಾಂಗದಲ್ಲಿ ಚುಳುಕಾಗಿ, ಆತನ ಕುಕ್ಷಿಯೊಳಗೆ ಅಡಗಿಪ್ಪವು ಕಾಣಿರೋ ಎಂದು ಅಪ್ಪಣ್ಣ ಶರಣರು ಘೋಷಿಸಿದ್ದಾರೆ.

ಜ್ಞಾನ ಶಾಸ್ತ್ರಗಳಲ್ಲಿಲ್ಲ, ವೇದ ಆಗಮ ಉಪನಿಷತ್ತುಗಳಲ್ಲಿಲ್ಲ.

ಜಗದ ಅಂಗಗಳಲ್ಲಿ ಮಹಾಲಿಂಗವಾಗಿ ಚುಳುಕಾಗಿದೆ. ಅಂಗವನ್ನು ಆವರಿಸಿದ ಮನದಿಂದ ಮಾತ್ರ ಅರಿಯಬಹುದಾಗಿದೆ.

52

ಆದಿ ಅನಾದಿ ಎಂದು ಗಾದೆಯ ಮಾತು ನುಡಿದಾಡುವರೆಲ್ಲ
ಇವೆರಡರ ಮಧ್ಯದಲ್ಲಿಪ್ಪ ಮಾಯಾ ಪ್ರಪಂಚನೆ ಅಳೆವುತ್ತಸುರಿವುತ್ತಿಪ್ಪರಲ್ಲದೆ,
ಆದಿಯಿಂದತ್ತತ್ತಲಾರು ಬಲ್ಲರು? ಅನಾದಿಯಿಂದಲತ್ತತ್ತಲಾರು ಬಲ್ಲರು?
ಇದರ ಭೇದಾದಿ ಭೇದವ ಮುನ್ನಿನ ಆದ್ಯರು ಬಲ್ಲರಲ್ಲದೆ, ಸಾಧಕರಿಗಳವಲ್ಲ.
ವೇದ ಶಾಸ್ತ್ರಆಗಮ ಪುರಾತರ ವಚನ ಬಹುಶ್ರುತಿ ಇದಿರಿಟ್ಟುಕೊಂಡು, ಕೂಗಿಯಾಡಿ,
ಗೋಡೆ ಹಾಯಿಸುವ ಜಡವಾದಿಗಳ ಮಾತ ಮೆಚ್ಚರು ನಮ್ಮ ಶರಣರು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ದೇವರು ಆದಿ ಎನ್ನುವರು, ಆನಾದಿ ಎನ್ನುವರು ಇವೆರಡರ ಮಧ್ಯದಲ್ಲಿರುವ ಮಾಯಾ ಪ್ರಪಂಚವನು ನಂಬಿ ನುಡಿವವರು ಆದಿಯನು ಎತ್ತ ಬಲ್ಲರು. ಅನಾದಿಯನು ಎತ್ತ ಬಲ್ಲರು? ಇದರ ಭೇದಾದಿ ಭೇದವನು ಮುನ್ನಿನ ಆದ್ಯರು ಮಾತ್ರ ಬಲ್ಲರು ಅಲ್ಲದೆ ಸಾಧನೆಯಿಂದ, ಜಪತಪಗಳಿಂದ ಪೂಜೆಯಿಂದ ಸಾಧಿಸುವ ಸಾಧಕರಿಗೆ ಸಾಧ್ಯವಿಲ್ಲ.

ವೇದ ಶಾಸ್ತ್ರ ಪುರಾಣ ಆಗಮಗಳನ್ನು ಆಧಾರವಾಗಿಟ್ಟುಕೊಂಡು ನುಡಿಯಬಲ್ಲರೆ ಹೊರತು ಆದಿ ಅನಾದಿಯಿಂದತ್ತತ್ತಲಿದ್ದುದನು ಅರಿಯರು.

ವೇದ ಶಾಸ್ತ್ರ ಪುರಾಣ ಆಗಮಗಳು ಇವು ಅಕ್ಷರಗಳ ರಾಶಿ. ಈ ರಾಶಿಯನ್ನು ಸೃಷ್ಟಿಸುವ ಅಕ್ಷರೋತ್ತಮನನ್ನು ಅಕ್ಷರಗಳಿಂದ ಅಳೆಯಲು ಸಾಧ್ಯವೆ? ಗೋಡೆಗೆ ಗುದ್ದಿ ಮೈ ನೋಯಿಸಿಕೊಳ್ಳುವ ಜಡವಾದಿಗಳ ಮಾತಿಗೆ ನಿಲುಕಬಹುದೇ? ಮೆಚ್ಚರು ನಮ್ಮ ಶರಣರು. ಅಂಗದಲ್ಲಿಯೇ ಕೂಡಿ ಲಿಂಗಾಂಗವಾದಾತ ಬಸವಣ್ಣ. ಆತನಿಗೆ ಪ್ರಿಯವಾದಾತ ಚೆನ್ನಬಸವಣ್ಣ ಎನ್ನಂಗದಲ್ಲಿಯೇ ಸಂಗಮವಾಗಿರುವಾಗ ಹೊರಗೆ ಹುಡುಕಿದರೆ ಸಿಕ್ಕುವನೆ ಎಂದಿದ್ದಾರೆ ಅಪ್ಪಣ್ಣ.

53

ಆದಿ ಅನಾದಿಯೆಂದು ನೀವು ಗಾದೆಯ ಮಾತ ನುಡಿದಾಡುವಿರಿ.
ಇದರ ಭೇದಾದಿ ಭೇದವಬಲ್ಲರೆ ನೀವು ಹೇಳಿರೊ.
ಅಂಗವನೆ ಆದಿಯ ಮಾಡಿ, ಸಂಗವನೆ ಅನಾದಿಯ ಮಾಡಿ,

ಈ ಎರಡರ ಮಧ್ಯದಲ್ಲಿಪ್ಪ ಲಿಂಗವ ಸ್ಥಾಪ್ಯವ ಮಾಡಿದವರಾರೊ?
ಅಲ್ಲಿ ಮಾಂಗಲ್ಯಕ್ಕೆ ಮಾಂಗಲ್ಯವಾದ ಶೃಂಗಾರವ ಮಾಡಿದವರಾರೊ?
ಅಲ್ಲಿಗೆರಡು ಕಂಗಳ ಧವಳಾರವ ಹೂಡಿದವರಾರೊ?
ಈ ಕಂಗಳ ಧವಳಾರದಿಂದ ನೋಡಿದವರು
ಹೆರೆ ಹಿಂಗಲಾರದೆ, ಆ ಲಿಂಗ ಗೂಡಾದರು ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಆದಿ ಅನಾದಿಯೆಂದು ಶಬ್ದದಿಂದ ನುಡಿಯಬಹುದು. ಇದರ ಭೇದಾದಿ ಭೇದವನು ಅರಿಯಲು ಸಾಧ್ಯವಾಗುವುದ್ದಿಲ. ಶಬ್ದವನು ನಿಃಶಬ್ದದ ಇರುವಿನಿಂದ ನೋಡಲು ಸಾಧ್ಯವಾಗುವುದಿಲ್ಲ. ಶಬ್ದವನ್ನು ಭೇದಿಸಿ, ನಿಃಶಬ್ದ ಮಾಡಿ ಕೇಳಲು ಬಂದ ಶರಣರು ಮಾತ್ರ ಆದಿ ಅನಾದಿಯನ್ನು ಭೇದಿಸಿ ಅದರ ಅತ್ತತ್ತ ಪಯಣಿಸಿದವರು. ಅದನ್ನು ಪರಿಚಯಿಸಿಕೊಂಡು ಅದೇ ತಾವಾದವರು.

ಅಂಗ ಆದಿಯಾದರೆ ಅದರ ಸಂಗ ಮಾಡಿದ ಅರಿವೆಂಬ ಲಿಂಗವೇ ಅನಾದಿ. ಈ ಎರಡರ ಮಧ್ಯದಲ್ಲಿರುವ ಮಹಾಜ್ಞಾನವೆಂಬ ಮಹಾಲಿಂಗವ ಸ್ಥಾಪಿಸಿದವರು ಯಾರು? ಅಂಗಕ್ಕೂ ಅರಿವಿಗೂ ಅದನ್ನು ತಿಳಿಯುವ ಮನಕ್ಕೂ ಮಾಂಗಲ್ಯಧಾರಣೆ ಮಾಡಿದವರು ಯಾರು? ಮಾಂಗಲ್ಯಕ್ಕೆ ಮಂಗಲವಾದ ಶೃಂಗಾರವ ಮಾಡಿದವರಾರು?

ಅಂಗದ ಎರಡು ಕಂಗಳಲ್ಲಿ ಅರಿವಿನ ದೇವಾಲಯವ ಸ್ಥಾಪಿಸಿದವರಾರು? ಅಂಗದ ಎರಡು ಶ್ರೋತ್ರಗಳಲ್ಲಿ ನಿಃಶಬ್ದದ ಅರಿವನು ತುಂಬಿದವರಾರು?

ಅರಿವಿನ ದೇವರು ಕಣ್ಣುಗಳನ್ನೇ ಮನೆ ಮಾಡಿಕೊಂಡು ಆ ದೇವಾಲಯದಲ್ಲಿ ವಾಸವಾಗಿದ್ದಾನೆ. ಕಣ್ಣುಗಳನ್ನು ಆವರಿಸಿದ ಮನ ಆ ಕಂಗಳಿಂದ ತೆರೆಹಿಂಗದೆ ನೋಡಿ ಆ ಕಂಗಳ ಗೂಡಾಯಿತು. ಬಸವಣ್ಣನಿಗೆ ಪ್ರಿಯವಾದ ಅರಿವಿನ ಕಣ್ಣಂಗಳಲ್ಲಿ ಕೂಡಿ ಮಹಾಜ್ಞಾನಿ ಚೆನ್ನಬಸವಣ್ಣನೇ ಆಯಿತು.

ಒಂದು ತನು ಅರಿವಿನಿಂದ ನಡೆಯಲು, ನುಡಿಯಲು, ನೋಡಲು ಅರಿವಿನಿಂದ ಮುಟ್ಟಿ, ಅರಿವಿನಿಂದ ರುಚಿಸಲು ಜ್ಞಾನದ ಪುಸ್ತಕಗಳನ್ನು ಓದಬೇಕಿಲ್ಲ. ಕಣ್ಣು ಕಿವಿ ಮೂಗು ನಾಲಿಗೆಗಳಲ್ಲಿ ಮನ ಆವರಿಸಿದೆ; ಜ್ಞಾನ ಭರಿತವಾಗಿದೆ. ಪಂಚ ಜ್ಞಾನೇಂದ್ರಿಯಗಳಿಗೆ ಆವರಿಸಿದ ಮನ, ಪಂಚೇಂದ್ರಿಯಗಳಲ್ಲಿ ಭರಿತವಾದ ಜ್ಞಾನ ಬಳಸಿಕೊಳ್ಳಬೇಕು. ಆಗ ತನು ಮಹಾಜ್ಞಾನಿ ತನು ಆಗುತ್ತದೆ. ತನುವಿನ ಜ್ಞಾನ ತನುವಿನ ಮನ ಬಳಸಿಕೊಳ್ಳುವ ಶಿಕ್ಷಣ ಮನಕ್ಕೆ ದಕ್ಕುತ್ತದೆ.

54

ಆದಿ ನಿರಾಳ, ಮಧ್ಯ ನಿರಾಳ, ಊರ್ಧ್ವ ನಿರಾಳ,
ಪ್ರಮಾಣು ನಿರಾಳ, ಅಪ್ರಮಾಣು ನಿರಾಳ.
ಆಕಾರವು ನಿರಾಳ, ಉಕಾರವು ನಿರಾಳ, ಮಕಾರವು ನಿರಾಳ.
ನಿರಾಳವೆಂಬುದು ನಿರಾಳ, ಸುರಾಳವೆಂಬುದು ನಿರಾಳ,
ಅವಿರತವೆಂಬುದು ನಿರಾಳ. ಬಂದೆನೆಂಬುದು ನಿರಾಳ,
ಹೋದೆನೆಂಬುದು ನಿರಾಳ. ಅದೆಂತೆಂದಡೆ:

ಪ್ರಣಮ ನಿರಾಳವಾದ ಕಾರಣ ಪ್ರತಿಯಿಲ್ಲ.
ಪ್ರತಿಯಿಲ್ಲವಾಗಿ ಅಪ್ರತಿಮ ನಮ್ಮ ಶರಣ
ಬಸವಪ್ರಿಯ ಕೂಡಲ ಚೆನ್ನಸಂಗಮದೇವ.

ಆದಿ ಮಧ್ಯ ಊರ್ಧ್ವ ಹಿಡಿದು ಅಂಗವನ್ನು ಪ್ರಮಾಣಿಸಿ ನೋಡಿದಾಗ ಅದು ಅರಿವಿನ ಲಿಂಗಾಂಗವೆಂದೇ ಗೋಚರಿಸುತ್ತದೆ. ಜಾತಿ ಮತ ಪಂಥ ಹೆಣ್ಣು ಗಂಡು ಶ್ರೀಮಂತ ಬಡವ ಜ್ಞಾನಿ ಅಜ್ಞಾನಿ ಪಂಡಿತ ಪಾಮರ ಎನ್ನುವ ಅಜ್ಞಾನ ಅಂಗವನ್ನು ಆವರಿಸಿದ ಮನದಿಂದ ಸಿದ್ಧವಾಗಿದೆ. ಅರಿವಿನಿಂದ ನೋಡಿದಾಗ ಅಂಗವದು ಅಗಮ್ಯ, ಅಪ್ರಮಾಣ. ಜಗದಗಲ ಮುಗಿಲಗಲ ಬ್ರಹ್ಮಾಂಡದಿಂದಲೂ ಅತ್ತತ್ತ ಪಾತಾಳದಿಂದಲೂ ಅತ್ತತ್ತಲಾಗಿ ವಿರಾಟ ಸ್ವರೂಪು ತಾನೇ ಆಗಿ ನಿಲ್ಲುತ್ತದೆ. ಅ-ಕಾರ ಉ-ಕಾರ ಮ-ಕಾರಗಳಿಂದ ಭರಿತವಾದ ಓಂಕಾರವು ತಾನೇ ಆಗಿ ಕಾಣುತ್ತದೆ.

ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸುಗಳಿಗೆ ಯಾವ ಜಾತಿ ಇದೆ? ಸಕಲ ಅಂಗಗಳಲ್ಲಿ ಜ್ಞಾನವಾಗಿ ಭರಿತವಾಗಿದೆ. ಇದನ್ನು ಹೊರಚೆಲ್ಲದಂತೆ ಓಂಕಾರವೇ ಅರಿವಿನ ಚರ್ಮವಾಗಿ ಪ್ರತಿಯಿಲ್ಲದಂತೆ ಬಂಧಿಸಿದೆ.

ಭೂಮಿ ನೀರು ಬೆಂಕಿ ಗಾಳಿ ಆಕಾಶವನ್ನು ಬಯಲು ತನ್ನ ಗರ್ಭದಲ್ಲಿ ಬಂಧಿಸಿಕೊಂಡಂತೆ ಓಂಕಾರ ಸ್ವರೂಪಿ ಚರ್ಮ ತನುವಿಗೆ ಮಹಾಜ್ಞಾನದ ಪ್ರಣಮವಾಗಿ ರಕ್ಷಿಸಿದೆ. ಇದು ನಿರಾಳವಾದ ಕಾರಣ ಓಂಕಾರಕ್ಕೆ ಪ್ರತಿಯಿಲ್ಲ. ಇದನ್ನು ತಿಳಿದು ಪ್ರಣಮಕ್ಕೆ ಶರಣು ಹೋದ ಮನವೇ ಶರಣ. ಹೀಗಾಗಿ ಶರಣ ಅಪ್ರತಿಮ. ಓಂ ನಮಃ ಶಿವಾಯವನ್ನು ಅಂಗದಲ್ಲಿಯೆ ತಿಳಿದು ಸರ್ವಾಂಗದಲ್ಲಿ ಕೂಡಿ ಬಸವಣ್ಣನಿಗೆ ಪ್ರಿಯವಾದ ಚೆನ್ನಸಂಗಮದೇವನೆ ತಾನಾದ!

55

ಆದಿ ಪ್ರಸಾದಿ, ಅನಾದಿ ಪ್ರಸಾದಿ, ಅಂತ್ಯ ಪ್ರಸಾದಿ
ಆದಿ ಪ್ರಸಾದಿಯೆ ಗುರು, ಅನಾದಿ ಪ್ರಸಾದಿಯೆ ಲಿಂಗ,
ಅಂತ್ಯ ಪ್ರಸಾದಿಯೆಂಬುದೆ ಜಂಗಮ.
ಈ ಗುರುಲಿಂಗ ಜಂಗಮದಿಂದಾದುದೆ ಪ್ರಸಿದ್ಧ ಪ್ರಸಾದ.
ಅದಕ್ಕೆ ದೃಷ್ಟ: ಮತ್ಪ್ರಾಣೋ ಜಂಗಮೊ ನಿತ್ಯಂ ಮಲ್ಲಿಂಗಂ
ಜಂಗಮಸ್ತಥಾ ಅವಯೋಸ್ತತ್ಪ್ರಸಾದಂ ಚ ಭೋಗಸ್ಯಾದಿ ನಿಶ್ಚಯಂ
ಎಂದುದಾಗಿ, ಇಂತಪ್ಪ ಪ್ರಸಿದ್ಧ ಪ್ರಸಾದಿಗೆ ನಮೋ ನಮೋ ಎಂಬೆ.
ಬಸವಪ್ರಿಯ ಕೂಡಲ ಚೆನ್ನಸಂಗಮದೇವಾ,
ಮಾಂ ತ್ರಾಹಿ, ತ್ರಾಹಿ ಕರುಣಾಕರನೆ.

ಅಂಗ ಅದ್ಭುತವಾದ ಅರಿವಿನ ಚಮತ್ಕಾರಗಳನ್ನು ತನ್ನಲ್ಲಿಯೇ ಸಂಗಮ ಮಾಡಿಕೊಂಡಿದೆ. ಗುರುವಿನ ಪಾಠವೂ ಅಂಗದಲ್ಲಿಯೇ, ಅರಿವಿನ ಮಹಾಲಿಂಗದ ಪಾಠವೂ ಅಂಗದಲ್ಲಿಯೇ, ಇವೆರಡನ್ನೂ ಪಾಲಿಸುವ ಜಂಗಮನೂ ಅಂಗದಲ್ಲಿಯೇ ಸಂಗಮವಾಗಿದ್ದಾನೆ.

ಆದಿಯಿಂದ ಬಂದಾತನೆ ಗುರು, ಅನಾದಿಯಿಂದ ಬಂದಾತನೇ ಲಿಂಗ, ಆದಿ

ಅನಾದಿಯನು ಪ್ರಸಾದವಾಗಿ ಸ್ವೀಕರಿಸಿ ಆದಿ ಅನಾದಿಗೆ ಅಂತ್ಯ ಹಾಡುವಾತನೆ ಜಂಗಮ. ಈ ಗುರು ಲಿಂಗ ಜಂಗಮದಿಂದ ನಿರ್ಮಾಣವಾದುದೇ ಅಂಗ!

ಅಂಗ ಹೆಣ್ಣಾದರೇನು, ಗಂಡಾದರೇನು? ಅರಿವಿನ ಅಂಗ; ಮಹಾಜ್ಞಾನವೇ ಸಂಗಮವಾದ ಲಿಂಗಾಂಗವೆಂದು ಜಗತ್ತಿನಲ್ಲಿಯೇ ಪ್ರಸಿದ್ಧಿ ಪಡೆದಿದೆ.

ಅಂಗದಲ್ಲಿ ಸಂಗಮವಾದ ಪ್ರಾಣ ಒಂದೇ. ಅರಿವು ಒಂದೇ. ಅರಿವನ್ನು ತಿಳಿಯುವ ಮನ ಒಂದೇ. ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಒಂದೇ. ಇವೆಲ್ಲವನ್ನು ಸೋರದಂತೆ ಬಂಧಿಸಿ, ಸುಂದರವಾಗಿ ಕಾಣುವ ಚರ್ಮ ಒಂದೇ. ಅಂಗದಿಂದ ಹೊರಹೊಮ್ಮುವ ಅರಿವಿನ ಧ್ವನಿ ಒಂದೇ. ಕಾಣುವ ಸತ್ಯ ದೃಶ್ಯ, ಕೇಳುವ ಶಬ್ದ ಒಂದೇ. ಹಸಿವು ನಿದ್ರೆ ಮೈಥುನ ಜ್ಞಾನ ಒಂದೇ ಹೀಗೆ ಸಕಲ ಜಗತ್ತನ್ನು ಅಂಗದೊಳಗೆ ಬಂಧಿಸಿಕೊಂಡ ಮಹಾಲಿಂಗವೇ ಅಂಗ. ಲಿಂಗಮಧ್ಯೆ ಜಗತ್‌ಸರ್ವಂ ಇಂತಪ್ಪ ಪ್ರಸಿದ್ಧ ಪ್ರಸಾದಿ ಮಹಾಲಿಂಗಾಂಗಕ್ಕೆ ನಮೋ ನಮೋ ಎಂಬೆ.

ಅಂಗವನ್ನೇ ಮಹಾಲಿಂಗವೆಂದು ಆದರಿಸಿ ಗೌರವಿಸುವ ಮನ ಅಂಗವನ್ನು ಆವರಿಸಿಕೊಂಡಿದೆ. ತಿಳಿದರೆ ಆದರಿಸಿ ಗೌರವಿಸುತ್ತದೆ. ತಿಳಿಯದಿದ್ದರೆ ಹಾದರದ ಪಟ್ಟ ಕಟ್ಟುತ್ತದೆ.

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನ ದರ್ಶನ ಮನಕ್ಕೆ ಆದರೆ ನಮೋ ನಮೋ ತ್ರಾಹಿ ತ್ರಾಹಿ ಕರುಣಾಕರನೆ ಕೃಪೆಮಾಡು ಗುರುವೇ ಎಂದು ಬೇಡಿಕೊಂಡು ಆ ಗುರುದೇವನ ಚರಣ ಕಮಲದಲ್ಲಿ ದುಂಬಿಯಾಗಿ ಪರಿಮಳ ಹೀರುತ್ತಾ ಬಂಧಿಯಾಗುತ್ತದೆ.

56

ಆದಿಯ ತೋರಿದ, ಅನಾದಿಯ ತೋರಿದ,
ಭಾವವ ತೋರಿದ. ಅದು ಹೇಗೆ ಎಂದರೆ,
ಆದಿ ಲಿಂಗವೆಂದು ಅರುಹಿದಿರಿ, ಅನಾದಿ ಶರಣನೆಂದು ಅರುಹಿದಿರಿ.
ಈ ಎರಡರ ಭಾವವೇ ಜಂಗಮವೆಂದು ಅರುಹಿದಿರಿ.
ಈ ತ್ರಿವಿಧ ಪರಿಣಾಮವೆ ಪ್ರಸಾದವೆಂದರುಹಿದಿರಿ.
ಇಂತೀ ಚತುರ್ವಿಧವು ಏಕವೆಂದು ತೋರಿದ ಲೋಕಾರಾಧ್ಯರು
ಚೆನ್ನಮಲ್ಲೇಶ್ವರನ ಸಾಕಾರವೇ ರೂಪಾಗಿ,
ನಾ ಬದುಕಿದೆನಯ್ಯಾ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಆದಿ ಲಿಂಗ, ಅನಾದಿ ಶರಣ, ಈ ಎರಡರ ಭಾವವೇ ಜಂಗಮ. ಈ ತ್ರಿವಿಧ ಪರಿಣಾಮವೇ ಪ್ರಸಾದ. ಈ ಚತುರ್ವಿಧವೂ ಏಕವೆಂದು ತೋರಿದ ಲೋಕಾರಾಧ್ಯ ಮಹಾಜ್ಞಾನಿಯೇ ಚೆನ್ನಬಸವಣ್ಣಾ. ಸದ್ಗುರು ದೇವನು ನಿರಾಕಾರವಾದುದು ಸಾಕಾರಕ್ಕೆ ತಂದು ತೋರಿದುದಕ್ಕಾಗಿ ನಾನು ಬದುಕಿದೆನಯ್ಯಾ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಸರ್ವಾಂಗದ ಕಣಕಣದಲ್ಲಿಯೂ ಅರಿವೆಂಬ ಲಿಂಗವು ಬೆರೆತುದನು ಶರಣ ಅದಕ್ಕೆ ಶರಣು ಹೋಗಿ ಕಂಡ. ಈ ಎಡರಡರ ಭಾವವೇ ಜಂಗಮವೆಂದು ಅರಿತ. ಈ ತ್ರಿವಿಧ ಪರಿಣಾಮವೇ ಅಂಗಕ್ಕೆ ಅರಿವಿನ ಪ್ರಸಾದವೆಂದು ಅರಿತ. ಈ ಚತುರ್ವಿಧದಿಂದಲೇ ಲಿಂಗಾಂಗ ಸಾಮರಸ್ಯದ ಕಲೆ ಅಂಗದಲ್ಲಿ ಸಂಗಮವಾದುದನು ಅರಿವಿನಿಂದ ಅರಿತ. ಅಂಗದಿಂದಲೇ ಸಾಕಾರಕ್ಕೆ ತಂದು

ಮಾತಲ್ಲದ ಮಾತಿನ ಕಲೆಯಿಂದ ಮಾತಿನಿಂದಲೇ ತೋರಿದ. ಈ ಚತುರ್ವಿಧದ ಲೋಕಾರಾಧ್ಯ ಸಂಪತ್ತು ಅಂಗದಲ್ಲಿ ಸಂಗಮವಾದುದನ್ನು ತೋರುವುದೆಂದರೆ ಸಾಮಾನ್ಯವಲ್ಲ. ಅದು ಬಸವಪ್ರಿಯ ಕೂಡಲ ಚೆನ್ನಬಸವಣ್ಣನಿಗೆ ಮಾತ್ರ ಸಾಧ್ಯ.

57

ಆಧಾರದ ಕುಂಡಲಿ ಸರ್ಪನ ಮಂಡೆಯ ಮೆಟ್ಟಿ ನಿಲಲು,
ಗಂಡಾಳ ಕಾಮ ಕಾಲ ಇಬ್ಬರೂ ಹತವಾದರು.
ಅವರ ಹೆಂಡಿರುಗಳು ಮುಂಡ ಮೋಚಿದರು.
ದಂಡೆಯನೂಡಿದರು, ತೊಂಡಲ ಹರಿದರು.
ತಮ್ಮ ಗಂಡಂದಿರ ಕೂಡೆ ಸಮಾಧಿಯ ಹೊಕ್ಕರು.
ಇದ ಕಂಡು ನಾ ಬೆರಗಾಗಿ ಮುಂದೆ ನೋಡಲು,
ಒಂದೂ ಇಲ್ಲದೆ ಸಂದು ಸಂಶಯವಳಿಯಲು,
ಹೊಂದದ ಬಟ್ಟೆಯನೆ ಹೊಂದಿದೆ.
ಬಂದ ಬಟ್ಟೆಯನೊಲ್ಲದೆ ನಿಮ್ಮ ವೃಂದ ಚರಣದಲ್ಲಿ ವಂದಿದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.
ಇದರಂದವನಳಿದು ನೋಡಿದ ಶರಣರೆ ಬಲ್ಲರು.

ಅಂಗದ ಅಂದವನಳಿದು, ಬಂದ ಬಟ್ಟೆಯನು ಕಿತ್ತಿ, ಎಂದೆಂದಿಗೂ ಹೊಂದದ ಬಟ್ಟೆಯನೇ ಹೊಂದುವ ಶಕ್ತಿ ಶರಣನಿಗೆ ಮಾತ್ರ ಸಿದ್ಧಿಸುವುದು, ಆಧಾರವಿಡಿದು ಮಂಡೆಯವರೆಗೂ ಹಬ್ಬಿ ವಿಷ ಚೆಲ್ಲಿದ ಸರ್ಪನ ನೆತ್ತಿಯ ಮೆಟ್ಟಿದ ಮಹಾವೀರನಾತ. ಶರಣನ ಅರಿವಿನ ಖಡ್ಗಕ್ಕೆ ಗಂಡಾಳು ಕಾಮ ಕಾಲ ಇಬ್ಬರೂ ಹತರಾದರು. ಅವರ ಹೆಂಡಿರು ಮುಂಡ ಮೋಚಿದರು. ದಂಡೆಯ ನೂಡಿ ತೊಂಡಲ ಹರಿದರು. ತಮ್ಮ ಅಜ್ಞಾನದ ಗಂಡರೊಂದಿಗೆ ಸಮಾಧಿಯ ಹೊಕ್ಕರು.

ಆಧಾರದಿಂದ ಹಿಡಿದು ನೆತ್ತಿಯವರೆಗೆ ಸರ್ಪ ಹೆಡೆ ಎತ್ತಿ ಆಡುತ್ತಲಿದೆ. ಅದನ್ನು ಕುಂಡಲಿನಿ ಎಂದು ಕರೆಯುತ್ತಾರೆ. ನುಡಿಯುವಾಗ ಎಚ್ಚತ್ತು ನುಡಿಯದಿದ್ದರೆ ನುಡಿಯುವ ಅಂಗವನ್ನೇ ಕಚ್ಚುತ್ತದೆ. ನಡೆಯುವಾಗ ಎಚ್ಚತ್ತು ನಡೆಯದಿದ್ದರೆ ನಡೆಯುವ ಅಂಗವನ್ನೇ ಕಚ್ಚುತ್ತದೆ. ನುಡಿಯುವಾಗಲೂ, ನಡೆಯುವಾಗಲೂ ಮೈ ಮರೆಸಿ ವಿಷ ಉಗುಳುತ್ತದೆ. ಲಿಂಗಾಂಗವನ್ನೇ ಹುತ್ತ ಮಾಡಿಕೊಂಡು ಅಂಗದ ಮನೆಯಲ್ಲಿಯೇ ವಾಸ ಮಾಡಿದೆ. ಬಂದ ಬಟ್ಟೆಯನೂ ಒಲ್ಲದು; ಹೊಂದುವ ಬಟ್ಟೆಯನೂ ಒಲ್ಲದು. ಇದರಂದವನು ಅಳಿದು ಅಜ್ಞಾನದ ಸರ್ಪದ ಮಂಡೆಯ ಮೆಟ್ಟಿ ನಿಲಬಲ್ಲ ಶರಣ ಮಾತ್ರ ಬಲ್ಲ.

58

ಆಧಾರ, ಸ್ವಾದಿಷ್ಟಾನ, ಮಣಿಪೂರಕ, ಅನಾಹತ,
ವಿಶುದ್ಧಿ, ಆಜ್ಞಾಚಕ್ರವೆಂಬ ಷಡಾಧಾರ ಚಕ್ರವನರಿದು,
ಏರಿ ಏರಿ ಇಳಿದು ಆದಿಯ ನೋಡಿಕೊಂಡು,
ಆದಿ ಅನಾದಿ ಎಂಬ ಭೇದವ ನೋಡಿ ಶೋಧಿಸಿ,

ಸಪ್ತಧಾತುವಿನ ನೆಲೆಯ ಕಂಡು,
ಮನ ಬುದ್ಧಿ ಚಿತ್ತವ ಏಕ ಹುರಿಯ ಮಾಡಿ,
ಸ್ಥಿತಿ ಲಯವೆಂಬ ಕಾಲ ಮೂಲಾದಿಗಳ ಸುಟ್ಟು,
ಧ್ಯಾನದಲ್ಲಿ ನಿಂದು, ಅಂಗಲಿಂಗ ಹಸ್ತ ಮುಖ
ಅರ್ಪಿತ ಅವಧಾನವೆಂಬ ಷಟಸ್ಥಲವ ಮೆಟ್ಟಿ ನಿಂದು,
ಆರರಿಂದ ಮೀರಿ ತೋರುವ ಬೆಳಗ ಕಂಡು,
ನಾನು ಒಳಹೊಕ್ಕು ನೋಡಲಾಗಿ,
ಒಳಹೊರಗೆ ತೊಳ ತೊಳಗಿ ಬೆಳಗುತ್ತ
ಇಳೆ ಬ್ರಹ್ಮಾಂಡ ತಾನೆಯಾಗಿರ್ದ
ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾಚಕ್ರವೆಂದು ಆರು ವಿಧಗಳಾಗಿ ಅಂಗವನ್ನು ತಾನೇ ಭೇದಿಸಿ ನೋಡಬೇಕು. ಪುನಃ ತಾನೇ ಭೇದವಿಲ್ಲದೆ ಆದಿ ಅನಾದಿಗಳಿಂದಲೂ ನೋಡುತ್ತ ಹೋದರೆ ಅಂಗ ಲಿಂಗಾಂಗವೆಂದು ಸಿದ್ಧಿಯಾಗುತ್ತದೆ.

ಸಪ್ತಧಾತುಗಳು ಅಂಗದಿಂದಲೇ, ಮನಬುದ್ಧಿ ಚಿತ್ತ ಕೂಡಾ ಅಂಗದಿಂದಲೇ ಹುಟ್ಟಿ ಅಂಗದ ಲಿಂಗಾಂಗದಲ್ಲಿ ಲಯವಾಗುವುದನ್ನು ಕಂಡುಕೊಳ್ಳಬೇಕು.

ಜಲದಲ್ಲಿ ಅಲೆ ಹುಟ್ಟಿ ಜಲದಲ್ಲಿಯೇ ಅಡಗಿತು. ಜಲದಲ್ಲಿ ಗುರುಳೆ ಹುಟ್ಟಿ ಜಲದಲ್ಲಿಯೇ ಅಡಗಿತು. ಜಲದಲ್ಲಿ ನೊರೆ ಹುಟ್ಟಿ ಜಲದಲ್ಲಿಯೇ ಅಡಗಿ ಜಲವೆಂದು ಸಿದ್ಧಿಯಾಯಿತು. ನೋಡಲು ಹೋದರೆ ಜಲ ಆದರೆ ಹೆಸರುಗಳು ಬೇರೆ ಬೇರೆ.

ಅಂಗವನ್ನು ಲಿಂಗವೆಂದು, ಹಸ್ತವೆಂದು, ಮುಖವೆಂದು, ಷಟಸ್ಥಲವೆಂದು ಕರೆದರೂ ಅದು ಅಂಗವೇ ಆಗಿದೆ. ಗಂಡೆಂದು ಹೆಣ್ಣೆಂದು ಕರೆದರೂ ಅದು ಅರಿವಿನ ಅಂಗವೇ ಆಗಿದೆ. ಒಳಹೊರಗೆ ತೊಳತೊಳಗಿ ಬೆಳಗುತ್ತ ಇಳೆ ಬ್ರಹ್ಮಾಂಡ ತಾನೇ ಆಗಿದೆ. ಜಗದಗಲ ಮುಗಿಲಗವಾಗಿರ್ದ ಲಿಂಗ ಅಂಗದಲ್ಲಿ ಬಂದು ಚುಳುಕಾಗಿದೆ. ಡಿಜಿಟಲ್ ಆಗಿದೆ. ನ್ಯಾನೋ ಆಗಿದೆ. ಬಸವಣ್ಣನಿಗೆ ಪ್ರಿಯವಾದ ಚೆನ್ನಬಸವಣ್ಣನು ತಾನೇ ಆಗಿ ಅಂಗದಲ್ಲಿ ಸಂಗಮವಾಗಿದೆ. ಗುರು ಶಿಷ್ಯ ಎನ್ನುವ ಶಬ್ದವನ್ನು ಕಳೆದುಕೊಂಡು ಅರಿವೇ ತಾನಾಗಿದೆ.

59

ಆಯತ ಲಿಂಗದಲ್ಲಿ ನೀವೆನಗೆ ಆಯತವ ತೋರಿದಿರಾಗಿ,
ಸ್ವಾಯತ ಲಿಂಗದಲ್ಲಿ ನೀವೆನಗೆ ಅರುಹ ತೋರಿದಿರಾಗಿ,
ಸನ್ನಿಹಿತ ಲಿಂಗದಲ್ಲಿ ನೀವೆನಗೆ ಪರಿಣಾಮವ ತೋರಿದಿರಾಗಿ,
ಈ ತ್ರಿವಿಧದ ವರನೆಲೆಯ ತೋರಿ,
ಈ ತ್ರಿವಿಧದ ಸಂಬಂಧವನು ಹರಿದು,
ಎನ್ನ ಭವವ ದಾಂಟಿಸಿದ ಕಾರಣ,
ಭವರಹಿತನೆಂದು ಚೆನ್ನಮಲ್ಲೇಶ್ವರನ ನಂಬಿ,
ಕೆಟ್ಟು ಬಟ್ಟ ಬಯಲಾದೆನಯ್ಯಾ

ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಅಂಗಕ್ಕೆ ಅಂಟಿದ ಜನನ ಮರಣಗಳನ್ನು ಅಂಗದಲ್ಲಿಯೇ ಅರಿವಿಗೆ ತಂದು ತೋರಿದಿರಿ. ಅಂಗದಲ್ಲಿ ಸಂಗಮವಾದ ಅರಿವನು ಅಂಗಕ್ಕೆ ತೋರಿದಿರಿ. ಅಂಗವನ್ನು ಆವರಿಸಿದ ಮನವನ್ನು ಹಿಡಿದು ಅಂಗದಲ್ಲಿಯೇ ಸಂಗಮವಾದ ಅರಿವಿನ ಲಿಂಗವನ್ನು ತೋರಿದಿರಿ. ಅಂಗ ಮನ ಅರಿವು ಎಂಬ ವರವನ್ನು ಅಂಗದಲ್ಲಿಯೇ ಕರುಣಿಸಿದಿರಿ.

ಬೇರಿದ್ದ ಮರ ಸಹಜವಾಗಿಯೇ ನೆಲಕ್ಕಂಟಿ ಮೇಲೆ ಫಲಗಳನ್ನು ನೀಡಿ ನಳನಳಿಸುತ್ತದೆ. ಜನನ ಮರಣಗಳ ಬಾಧೆಯಿಲ್ಲದೆ ಸಹಜ ಫಲ ನೀಡುತ್ತದೆ. ಅರಿವಿದ್ದೂ ಅರಿವಿದೆಯೆಂದು ಓಡಾಡುವ ಅಂಗ; ಮರೆವಿನಿಂದ ಓಡಾಡುವ ಅಂಗ; ಅರಿವು ಮರೆವುಗಳನು ಮರೆತು ಓಡಾಡುವ ಅಂಗದ ಭಂಗವನ್ನು ಹರಿದು ಭವವ ದಾಂಟಿಸಿ, ಮಹಾಜ್ಞಾನದ ಬೋಧಿ ಮರವನ್ನಾಗಿ ಮಾಡಿದಿರಿ. ನಡೆದಾಡಿ ಪರಿಮಳ ಬೀರುವ ಅರಿವಿನ ಮರವನ್ನಾಗಿ ಮಾಡಿದಿರಿ. ಅರಿವನ್ನು ನಂಬಿ ಅರಿವುಗೆಟ್ಟು ಬಟ್ಟಬಯಲಾದೆನಯ್ಯಾ .

60

ಆಸೆಯನಳಿದು ನಿರಾಸೆಯಲ್ಲಿ ನಿಂದು,
ವೇಷವ ಮರೆದು, ಜಗದ ಹೇಸಿಯಾಟವ ತೊರೆದು,
ಮೀಸಲಾಗಿದ್ದ ಮನವನೆ ಲಿಂಗವ ಮಾಡಿ,
ಗಾಸಿಗೊಳಗಾಗುವ ತನುವನೆ ಗುರುವ ಮಾಡಿ,
ಇವಿಷ್ಟಕ್ಕೂ ಕರ್ತನಾಗಿರುವ ಪ್ರಾಣವನೆ ಜಂಗಮವ ಮಾಡಿ,
ಈ ತ್ರಿವಿಧವನು ಏಕವ ಮಾಡುವೆ.
ಆ ಭಾವವನೆ ಭಾವರುಚಿ ಪ್ರಸಾದವ ಮಾಡುವೆ.
ಈ ತ್ರಿವಿಧವನರಿದು ಅಂಗವಿಸಿದವನೆ ಎನ್ನ ದೇವನೆಂದು ಕಾಂಬೆ ಕಾಣಾ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ, ನೀವು ಸಾಕ್ಷಿಯಾಗಿ.

ಆಸೆ, ವೇಷ, ಹೇಸಿಯಾಟಗಳು ಅಂಗದಲ್ಲಿಯೇ ಹುಟ್ಟುತ್ತವೆ. ಇದಕ್ಕೆ ಮನ ಜನ್ಮ ನೀಡುತ್ತದೆ. ಅಂಗವನ್ನು ಆವರಿಸಿಕೊಂಡ ಮನ ಅಂಗದೊಂದಿಗೆ ಆಸೆ ಮಾಡಿ ತನಗೆ ಉಂಟಾಗುವ ಸುಖವನ್ನು ಅಂಗದೊಂದಿಗೆ ಅನುಭವಿಸುತ್ತದೆ. ತನಗೆ ಉಂಟಾಗುವ ದುಃಖವನ್ನು ಅಂಗದೊಂದಿಗೆ ಅನುಭವಿಸುತ್ತದೆ.

ಅಂಗದಲ್ಲಿಯೇ ಸಂಗಮವಾದ ಅರಿವನ್ನು ಬಳಸಿಕೊಂಡು ಅಂಗವನ್ನೇ ಲಿಂಗಾಂಗ ಮಾಡುವುದಕ್ಕಾಗಿ ಮೀಸಲಿರಬೇಕಾದ ಮನ ತನುವನ್ನೇ ಗಾಸಿಗೊಳಿಸಿದೆ. ಇಂತಹ ಮನ ಅರಿವಿಗೆ ಮೀಸಲಾಗಿಸಿ ಲಿಂಗವ ಮಾಡಬೇಕು. ಅರಿವಿನ ತನುವನ್ನೇ ಗುರುವನ್ನಾಗಿ ಮಾಡಬೇಕು. ಅಂಗಕ್ಕೂ ಅರಿವಿಗೂ ಮನಕ್ಕೂ ಕರ್ತನಾದ ಪ್ರಾಣವನ್ನು ಜಂಗಮ ಮಾಡಬೇಕು. ಗುರುಲಿಂಗ ಜಂಗಮವೆಂಬ ತ್ರಿವಿಧವನು ಅಂಗದಲ್ಲಿಯೇ ಏಕಗೊಳಿಸಬೇಕು.

ಆ ಭಾವವನೆ ಭಾವರುಚಿ ಪ್ರಸಾದವ ಮಾಡುವೆ:

ಮನ ಭಾವವನ್ನು ಸೃಷ್ಟಿ ಮಾಡುತ್ತದೆ. ದುರ್ಭಾವವನ್ನೂ ಸೃಷ್ಟಿ ಮಾಡುತ್ತದೆ. ತಾನು ಸೃಷ್ಟಿ ಮಾಡಿದ ಭಾವ ದುರ್ಭಾವಗಳನ್ನು ನಿರ್ಭಾವ ಮಾಡಲರಿಯದು. ಹೀಗಾಗಿ ಮನ ಅಂಗದಲ್ಲಿರುವ ಅರಿವನು ಉಂಡು ಗುರುವಾಗಬೇಕು. ಕಂಡು ಬರುವ ಭಾವ ದುರ್ಭಾವಗಳನ್ನು ಜಂಗಮಕ್ಕರ್ಪಿಸಬೇಕು. ಆ ಜಂಗಮ ಅವುಗಳನ್ನು ನಿರ್ಭಾವ ಪ್ರಸಾದವಾಗಿ ಸ್ವೀಕರಿಸಬೇಕು.

ಅಂಗದಲ್ಲಿ ಈ ತ್ರಿವಿಧವನ್ನು ಅಂಗೈಸಿದವನೆ ದೇವರ ದೇವ. ಅದು ಬರೀ ಅಂಗವಲ್ಲ; ಲಿಂಗಾಂಗ! ತ್ರಿವಿಧವನು ಏಕ ಮಾಡಿದ ಅಂಗಕ್ಕೆ ಭಾವವಿಲ್ಲ ದುರ್ಭಾವವಿಲ್ಲ. ಭಾವ ದುರ್ಭಾವಗಳನ್ನೂ ಏಕ ಮಾಡಿ, ಅರಿವಿನ ಪರಿಮಳ ಮಾಡಿಕೊಂಡು ಸ್ವೀಕರಿಸುತ್ತಾನೆ. ಅರಿವಿನ ಓಡಾಡುವ ಲಿಂಗಾಂಗವಾಗಿ ಪರಿಣಮಿಸುತ್ತದೆ.

61

ಆಸೆಯಳಿದು, ನಿರಾಸೆಯಲ್ಲಿ ನಿಂದು,
ವೇಷವ ಜರೆದು ಸರ್ವವ ಮರೆದು,
ಈ ಗುಣತ್ರಯಮಂ ತೊರೆದು,
ನಿರಾಸೆಯ ಮೇಲೆ ನಿಂದರೆ,
ಅದೇ ಶರಣಂಗೆ ಸರಿ ಎಂಬೆ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಆಸೆಯಳಿದು, ನಿರಾಸೆಯಲ್ಲಿ ನಿಂದು, ವೇಷವ ಜರೆದು, ಸರ್ವವ ಮರೆದು ಈ ಗುಣತ್ರಯಮಂ ತೊರೆದು:

ಅಂಗವದು ಅರಿವಿನ ಮಹಾಲಿಂಗವೇ ಇರುವಾಗ ಅಂಗ ಸಾತ್ವಿಕ, ರಾಜಸ, ತಾಮಸ ಗುಣಗಳು ಹೊಂದಿರುವುದು ಹೇಗಾಗುತ್ತದೆ? ಇದು ಮನದ ನಾಟಕ! ಮನ, ತನುವಿಗೆ ಹಾಕಿದ ಪಾತ್ರ ! ಈ ಪಾತ್ರಗಳೆ ನಿಜವಲ್ಲ ಎಂದು ಮನವೇ ತಿಳಿಯಬೇಕು. ಮನಕ್ಕೆ ಅರಿವೆಂಬ ಗುರುದೇವನ ದರ್ಶನವಾದಾಗಲೇ ಇದು ಸಾಧ್ಯವಾಗುತ್ತದೆ.

ಅಂಗದಲ್ಲಿ ಸಂಗಮವಾದ ಅರಿವೆಂಬ ಗುರುದೇವನು ಜಗದಗಲ ಮುಗಿಲಗಲ. ಮಿಗೆಯಗಲವಿದ್ದು ಅಂಗದಗಲದಲ್ಲಿ ಬಂದು ತನ್ನ ವಿನೋದಕ್ಕಾಗಿ ಚುಳುಕಾಗಿದ್ದಾನೆ. ಆತನ ಶ್ರೀಪಾದ ಪಾತಾಳದಿಂದ ಅತ್ತತ್ತಲೂ ಚಾಚಿದೆ. ಆತನ ಶ್ರೀ ಮುಕುಟ ಬ್ರಹ್ಮಾಂಡದಿಂದತ್ತತ್ತಲೂ ಹರಡಿದೆ. ಅಂಗವೆಂಬ ಲಿಂಗ ಅಗಮ್ಯ ; ಗಮನಕ್ಕೆ ನಿಲುಕದು. ಗೋಚರಕ್ಕೂ ನಿಲುಕದು. ಅದನ್ನು ಯಾರೂ ಪ್ರಮಾಣಿಸಲು ಕೂಡಾ ಬಾರದು. ಇಂತಹ ವಿರಾಟ ಸ್ವರೂಪನು ಅಂಗದಲ್ಲಿ ಅರಿವಿನ ಲಿಂಗವಾಗಿ ಚುಳುಕಾಗಿದ್ದಾನೆ; ಡಿಜಿಟಲ್ ಆಗಿದ್ದಾನೆ; ನ್ಯಾನೋ ಆಗಿದ್ದಾನೆ. ಇಂತಹ ಲಿಂಗಾಂಗಕ್ಕೆ ಆಸೆಯುಂಟು ಎನ್ನಲು ಬಂದೀತೆ? ಬಾರದು ಆಸೆ ಮಾಡುವ ಪ್ರಾಣಿ, ಮನ! ಇದು ಅಂಗವನ್ನು ಆವರಿಸಿದೆ. ಇದಕ್ಕೆ ಆಸೆಯುಂಟು; ವೇಷವುಂಟು.

ಅಂಗವನ್ನು ಆವರಿಸಿದ ಮನವೇ ಅಂಗದಲ್ಲಿಯೇ ಸಂಗಮವಾದ ಅರಿವಿನ ಲಿಂಗಕ್ಕೆ ಶರಣು ಹೋಗಬೇಕು. ಆತ ಆಸೆಯೇ ಇಲ್ಲದ ನಿಸ್ಸೀಮ, ವೇಷವೇ ಇಲ್ಲದ ಅಗಮ್ಯ. ಗುಣತ್ರಯಗಳೇ ಇಲ್ಲದ ನಿರ್ಗುಣಿ ಜಂಗಮ. ಆತನಿಗೆ ಶರಣು ಹೋದವನೇ ಶರಣ!

ಸಕಲ ವಸ್ತುಗಳು ಶರಣನಿಂದ ಸೃಷ್ಟಿಯಾಗಿವೆ. ಆತ ಸೃಷ್ಟಿ ಮಾಡಿದ ವಸ್ತುಗಳನ್ನು ಆತನೇ ಆಸೆ ಮಾಡಿ ಪಡೆಯಲು ಸಾಧ್ಯವೇ?

ಭೂಮಿಯ ಮೇಲೆ ಆಸೆ ಮಾಡಲು ಹೋದರೆ ಭೂಮಿ ನಿನ್ನದಲ್ಲ. ಹೇಮದ ಮೇಲೆ ಆಸೆ ಮಾಡಲು ಹೋದರೆ ಅದು ಭೂಮಿಯ ಗರ್ಭದಿಂದ ಬಂದ ಹಳದಿ ಲೋಹ. ಕಾಮಿನಿಯ ಮೇಲೆ ಆಸೆ ಮಾಡಲು ಹೋದರೆ ಅದು ತನುವಿನಲ್ಲಿ ಮನದಿಂದ ಹುಟ್ಟಿದ ರೋಗ!

ಭೂಮಿ ಹೇಮ ಕಾಮಿನಿ ನಿನ್ನದಲ್ಲ ಅದು ಜಗಕ್ಕಿಕ್ಕಿದ ವಿಧಿ. ನಿನ್ನದೆಂಬುದು ಜ್ಞಾನರತ್ನ ಅದನ್ನು ಕೆಡಗೊಡದೆ ಅಲಂಕರಿಸಿದ ಮನವೇ ಶ್ರೀಮಂತ.

ಅರಿವಿನ ಜಲಬಿಂದು ಗರ್ಭ ಹೊಕ್ಕು ಪಿಂಡವಾಗಿ, ಅರಿವಿನ ತನುವಾಗಿ ಹೊರಬಂತು. ಜಲಬಿಂದುವೇ ಗಟ್ಟಿಯಾಗಿ ಭೂಮಿಯಾಯಿತು. ಹೇಮವಾಯಿತು. ಗಿಡ ಮರ ಬಳ್ಳಿ ಪಶು ಪಕ್ಷಿ ಪ್ರಾಣಿ ಉರಗ ಜಲಚರಗಳು ಜನನವಾದದ್ದು ಜಲಬಿಂದುವಿನಿಂದಲೇ. ಜಲಬಿಂದುವಿನಿಂದ ಹುಟ್ಟಿದ ವಸ್ತು ಜಲಬಿಂದುವನ್ನು ಆಸೆ ಮಾಡುವುದು ಉಚಿತವೇ?

ತನುವನ್ನು ಆವರಿಸಿದ ಮನ ತನುವಿನಲ್ಲಿ ತನ್ಮಯವಾದ ಅರಿವನ್ನು ಅರಿಯದಿದ್ದರೆ ಆಸೆ ಅಳಿಯದು, ನಿರಾಸೆಯಲ್ಲಿ ನಿಲ್ಲದು, ವೇಷವು ಅಳಿಯದು, ಸರ್ವವನ್ನು ಮರೆದು, ಗುಣತ್ರಯಗಳನ್ನು ತೊರೆಯದು.

ಆಭರಣದ ಮೇಲೆ ಆಸೆ ಮಾಡುವ ಮನ, ತಾನು ಮೋಹ ಮಾಡುವುದು ಹಳದಿ ಬಣ್ಣಕ್ಕೋ, ಲೋಹಕ್ಕೋ, ಮಾಟಕ್ಕೋ ? ಎನ್ನುವುದು ತಿಳಿಯದ್ದಕ್ಕಾಗಿ ಆಭರಣದ ಮೇಲೆ ಆಸೆ ಮಾಡಿಕೊಂಡು ಶ್ರೀಮಂತನಾಗುತ್ತದೆ. ಕಳುವು ಮಾಡಿ ಕಳ್ಳನಾಗುತ್ತದೆ. ಮಾರಾಟ ಮಾಡಿ ವ್ಯಾಪಾರಿಯಾಗುತ್ತದೆ. ಕೊಂದು ಹತ್ಯಾಚಾರಿಯಾಗುತ್ತದೆ. ಯುದ್ಧ ಮಾಡಿ ಸೈನಿಕರನ್ನು ರಾಜನನ್ನು ಕೊಂದು ಸಾಮ್ರಾಟನಾಗುತ್ತದೆ. ಆಭರಣದ ಬಣ್ಣಕ್ಕೆ ಬೆಲೆಗೆ ಮರುಳಾಗಿ ಹಲವಾರು ಮೋಸದ ವೇಷ ಧರಿಸುತ್ತದೆ.

ಕೆಲಸಕ್ಕೆ ಬಾರದ ಬಣ್ಣದ ಲೋಹದ ಮೇಲೆ ಮನ ಆಸೆ ಮಾಡಿ, ಅದನ್ನು ದಾನ ಮಾಡಿ ಸಾತ್ವಿಕನಾಗುತ್ತದೆ. ಯುದ್ಧ ಮಾಡಿ ಪಡೆದು ರಾಜಸನಾಗುತ್ತದೆ. ಕೊಂದು ಕದ್ದು ಪಡೆದು ತಾಮಸನಾಗುತ್ತದೆ.

ಶರಣ ಗುಣತ್ರಯಗಳನ್ನು ತೊರೆದ ತ್ರಿಗುಣಾತೀತ ಆಸೆಯನ್ನು ವೇಷವನ್ನು ಅರಿವಿನಿಂದ ಅರಿತು ನಿರಾಸೆಯಲ್ಲಿ ನಿಂದು ನಿಜವನು ಅರಿತಾತ. ಬಸವಣ್ಣನಿಗೆ ಪ್ರಿಯವಾದ ಅರಿವಿನ ಚೆನ್ನಬಸವಣ್ಣನಿಗೆ ಪ್ರಿಯವಾದ ಅರಿವಿನ ಚೆನ್ನಬಸವಣ್ಣನನ್ನು ಅಂಗದಲ್ಲಿಯೇ ಕೂಡಿ ಅಪ್ಪಣ್ಣನಾದಾತ. ಅಂಗದಲ್ಲಿಯೇ ಸಂಗಮವಾದ ಅರಿವನ್ನು ಉಂಡು ಆನಂದದಿಂದ ಮೆರೆದಾತ.

62

ಆಸೆ ರೋಷವೆಂಬ ದ್ವೇಷವ ಬಿಟ್ಟು,
ದೋಷ ದುರಿತವ ಬಿಟ್ಟು, ಕ್ಲೇಶವ ಹರಿದು,
ಸಾಸಿರಮುಖದೊಳ್ ಸೂಸುವ ಮನವ ನಿಲ್ಲಿಸಿ,
ನಿರಾಶಿಕನಾಗಿ ನಿಂದರೆ, ಬಸಪ್ರಿಯ ಕೂಡಲಚೆನ್ನಬಸವಣ್ಣ.

ಮನ ಸಾಸಿರ ಮುಖದೊಳಗೆ ಸೂಸಿ ಆಸೆ ಮಾಡುತ್ತದೆ. ದ್ವೇಷವ ಕಟ್ಟಿಕೊಂಡು ತನುವಿಗೆ ದೋಷದ ಪಟ್ಟ ಕಟ್ಟುತ್ತದೆ. ಮನ ತನ್ನ ಅಜ್ಞಾನ ಕಳೆದುಕೊಳ್ಳಬೇಕಾದರೆ ಅದಕ್ಕೆ ಮಹಾಜ್ಞಾನದ ದರ್ಶನವಾಗಲೇಬೇಕು.

ಜ್ಞಾನ ಅಂಗದಲ್ಲಿಯೇ ಸಂಗಮವಾಗಿದೆ; ಅಂಗವನ್ನು ಮನ ಆವರಿಸಿದೆ. ಮರೆವಿನಿಂದಾಗಿ ಮನ ಆಸೆ ಮಾಡುತ್ತದೆ. ಆಸೆ ಮಾಡುವ ವಸ್ತುವಿನ ಸತ್ಯ ಅರಿಯುವ ಶಕ್ತಿ ಮನಕ್ಕೆ ಇಲ್ಲ. ಹೀಗಾಗಿ ಅದಕ್ಕೆ ವಸ್ತು ದಕ್ಕದಿದ್ದರೆ ರೋಷ ಹುಟ್ಟುತ್ತದೆ. ಮತ್ತೊಂದು ತನುವನ್ನು ದ್ವೇಷದಿಂದ ನೋಡುತ್ತದೆ. ದೋಷಿಯನ್ನಾಗಿಸಿ ದೋಷ ಹೊಂದುತ್ತದೆ. ತನುವಿನ ದೋಷ ಹರಿದು, ಆಸೆ ರೋಷ ದ್ವೇಷವ ಬಿಡದ ಹೊರತು ಮನ ಸಮಾಧಾನಿಯಲ್ಲ.

ತನುವನ್ನೇ ಹುತ್ತ ಮಾಡಿಕೊಂಡು ಮನ ಸಾಸಿರ ಮುಖದಲ್ಲಿ ಹಾವಿನಂತೆ ಓಡಾಡುತ್ತದೆ. ಮನ ಓಡಾಡಿದಂತೆಲ್ಲ ತನು ಘಾಸಿಗೊಳ್ಳುತ್ತದೆ. ಏಕೆಂದರೆ ಮನ ತನುವಿನೊಂದಿಗೆ ಸುಖಿಸುತ್ತದೆ; ತನುವಿನೊಂದಿಗೆ ದುಃಖಿಸುತ್ತದೆ. ತನುವಿನೊಂದಿಗೆ ಭಾವಿಸುತ್ತದೆ; ತನುವಿನೊಂದಿಗೆ ದುರ್ಭಾವಕ್ಕೆ ಒಳಗಾಗುತ್ತದೆ.

ಮನಕ್ಕೆ ಜ್ಞಾನದ ಸುಖ ಸಿಕ್ಕಾಗ ನಿರಾಶಿಕನಾಗಿ ನಿಲ್ಲುತ್ತದೆ. ಅದರ ದೋಷ ತೊಲಗುತ್ತದೆ. ಆಸೆ ರೋಷ ದ್ವೇಷವ ಬಿಡುತ್ತದೆ. ಮಹಾಜ್ಞಾನಿ ಬಸವಪ್ರಿಯ ಕೂಡಲ ಚೆನ್ನಬಸವಣ್ಣ ತಾನೇ ಆಗುತ್ತದೆ.

63

ಇಂತಪ್ಪ ಘನವನಗಲಿಸಿದ ಮಹಾಪ್ರಸಾದಿಯ ನಿಲವೆಂತಿಪ್ಪುದೆಂದರೆ,
ಉರಿಯುಂಡ ಕರ್ಪುರದಂತೆ, ಶರಧಿಯ ಬರೆದ ಸಾರದಂತೆ,
ನೀರೊಳಗೆ ಬಿದ್ದ ಆಲಿಯಂತೆ, ಉರಿಯ ಗಿರಿಯನೆಚ್ಚ ಅರಗಿನ ಬಾಣದಂತೆ,
ಪರಿಮಳವನುಂಡ ಹರಿಯಂತೆ. ಇದರ ವಿವರವನರಿದರೆ,
ಪರವ ಬಲ್ಲವ, ತನ್ನ ಬಲ್ಲವ, ಎಲ್ಲವು ತನ್ಮಯನಾಗಿರುವ.
ಇಂತಪ್ಪ ಅಣುವಿಂಗೆ ಅಣುವಾಗಿ ನಿಂದ ಮಹಾಪ್ರಸಾದವ ನಾನೆತ್ತ ಬಲ್ಲೆನಯ್ಯಾ?
ಇದ ಬಲ್ಲ ಪ್ರಸಾದಿಗಳ ಸೊಲ್ಲಿನೊಳಗೆ ನಾನಡಗಿದೆನಯ್ಯಾ
ನಿಮ್ಮ ಧರ್ಮ ನಿಮ್ಮ ಧರ್ಮ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಅಂಗದಲ್ಲಿ ತನ್ಮಯವಾಗಿದ್ದು, ಅಂಗಕ್ಕೆ ಸುಲಭವಾಗಿ ಬಳಕೆಗೆ ಬಾರದ ಜ್ಞಾನದ ಇರುವನು ವರ್ಣಿಸಲು ಅಸಾಧ್ಯ. ಅದನ್ನು ಪುರಾತನರು ಲಿಂಗ ಎಂದು ಕರೆದರು. ಶಿವ, ವಿರಾಟ ಸ್ವರೂಪವೆಂದು ಕರೆದರು. ಅಂತಹ ಜ್ಞಾನ ಉರಿಯುಂಡ ಕರ್ಪುರದಂತಿದೆ. ಶರಧಿ ಬರೆದ ಸಾರದಂತಿದೆ. ನೀರೊಳಗೆ ಬಿದ್ದ ಆಲಿಯ ಕಲ್ಲಿನಂತಿದೆ.

ಬಯಲ ಬೀಜದಿಂದ ಜನಿಸಿದ ಜಲ; ಜಲಬಿಂದುವಿನಿಂದ ಜನಿಸಿದ ಅಂಗ; ಅಂಗದಲ್ಲಿ ತನ್ಮಯವಾದ ಲಿಂಗವು ಲಿಂಗಾಂಗವಾಗಿದೆ. ಇಂತಪ್ಪ ಅಣುವಿಂಗೆ ಅಣುವಾಗಿ ನಿಂದ ಮಹಾಪ್ರಸಾದವ ನಾನೆತ್ತ ಬಲ್ಲೆನಯ್ಯಾ? ಇದನ್ನು ಬಲ್ಲ ಪ್ರಸಾದಿಗಳ ಸೊಲ್ಲಿನೊಳಗೆ

ನಾನಡಗಿದೆನಯ್ಯಾ. ನಿಮ್ಮ ಧರ್ಮ ನಿಮ್ಮ ಧರ್ಮ, ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಅಂಗದಲ್ಲಿಯೇ ಸಂಗಮವಾದ ಮಹಾಜ್ಞಾನವನ್ನು ಅಂಗಕ್ಕೆ ಆವರಿಸಿದ ಮನದಿಂದಲೇ ತಿಳಿಯಬೇಕು. ಇದು ಮನಕ್ಕೆ ಎಟುಕದ ನಿಮಿತ್ತ ಮನವೇ ತನುವನ್ನು ದುರ್ಬಳಕೆ ಮಾಡಿಕೊಂಡು ಹೊರಕಾಣುವ ವಸ್ತುಗಳನ್ನು ವಿಪರೀತವಾಗಿ ನೋಡುತ್ತದೆ. ಮನಕ್ಕೆ ವಸ್ತುವಿನಲ್ಲಿರುವ ಸತ್ಯ ಅರಿವಾಗುವುದಿಲ್ಲ.

ಮನ ಅಂಗದಲ್ಲಿ ಸಂಗಮವಾದ ಅರಿವಿನಿಂದ ನೋಡಿದಾಗ ಆ ಅರಿವಿಗೆ ವಸ್ತುವಿನ ಸತ್ಯ ಮಾತ್ರ ಗೋಚರಕ್ಕೆ ಬರುತ್ತದೆ. ನೋಡಿದ ಕಣ್ಣು ನೋಡುವ ಕರ್ಮ ಮಾತ್ರ ಮಾಡುತ್ತದೆ; ಬೇಡುವುದಿಲ್ಲ. ಏಕೆಂದರೆ ನೋಡುವುದು ಮಾತ್ರ ಕಣ್ಣಿನ ಧರ್ಮ. ಕಣ್ಣಿಗೆ ಬೇಡುವ ದುರ್ಗುಣ ಬಂದಿರುವುದು ಮನದಿಂದಾಗಿ. ಆ ಮನವೇ ಜ್ಞಾನದಲ್ಲಿ ಸಂಗಮವಾಗಿ ಘನಮನವಾದಾಗ; ಜ್ಞಾನೇಂದ್ರಿಯಗಳು ಆಯಾ ಕ್ರಿಯೆಯಲ್ಲಿ ತೊಡಗುತ್ತವೆ. ಬೇಡುವ ಬಯಕೆಯನ್ನು ದೇಹಕ್ಕೆ ರವಾನಿಸುವುದಿಲ್ಲ.

ಇಂತಹ ಅಪರೂಪದ ಸತ್ಯವನ್ನು ಶರಣರು ಮಾತ್ರ ಬಲ್ಲರು. ಅವರು ಮಾತ್ರ ನಿಜ ಪ್ರಸಾದಿಗಳು. ಅಜ್ಞಾನವನ್ನು ಉಂಡು ಜೀರ್ಣಿಸಿಕೊಳ್ಳುವ ಶಕ್ತಿ ಆ ಮಹಾಂತರಿಗೆ ಮಾತ್ರ ಇದೆ. ಅದನ್ನು ಅಂಗದಲ್ಲಿಯೇ ಕೂಡಿದ ಕೂಡಲ ಚೆನ್ನಬಸವಣ್ಣನೆ ಮನಕ್ಕೆ ದಯಪಾಲಿಸಿದ್ದಾನೆ. ಅದನ್ನು ಉಂಡ ಮನವೇ ಘನಮನವಾಗಿದೆ. ಅದು ಆತನ ಧರ್ಮ. ನಾನು ಆ ಪ್ರಸಾದಿಗಳ ಸೊಲ್ಲಿನೊಳಗೆ ಅಡಗಿದವ ಎಂದಿದ್ದಾರೆ ಅಪ್ಪಣ್ಣ ಶರಣರು.

64

ಇಂದು ನಾಳೆ ಎಂಬ ಸಂದೇಹವ ಬಿಟ್ಟು,
ನಿಂದ ನಿಜಾನಂದದಿಂದ ನೋಡಿ,
ಹಿಂದು ಮುಂದು, ಕುಂದು ಹೆಚ್ಚು,
ದಂದುಗಧಾವತಿಯ ಕೊಂದು ನಿಂದರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಇಂದು ನಾಳೆ ನಿನ್ನೆ ಮೊನ್ನೆ ಹಗಲು ಇರುಳು ಎನ್ನುವುದು ಅಜ್ಞಾನ. ಭ್ರಮೆಯಿಂದ ದಿನಗಳನ್ನು ಎಣಿಸಿ ಅದಕ್ಕೆ ಹೆಸರಿಟ್ಟು ಆನಂದ ಪಡುವುದು ಹಾಗೂ ದುಃಖದಿಂದ ಹೆದರುವುದು.

ಅರಿವಿನಿಂದ ನೋಡಿದರೆ ಹಗಲು ಇರುಳುಗಳನ್ನು ಹಿಡಿದುಕೊಂಡು ಒಂದೇ ಆಗಿದೆ. ಸೂರ್ಯಗ್ರಹದಿಂದ ಭೂಮಿಗೆ ಬೆಳಕು ಬಿದ್ದ ಭಾಗ ಹಗಲಾಗುತ್ತದೆ. ಅದೇ ಭೂಮಿ ಸರಿದಾಗ ಕತ್ತಲಾಗುತ್ತದೆ. ಸೂರ್ಯನ ಬೆಳಕಿನಿಂದ ದಿನವಾಯಿತು. ಆ ಬೆಳಕಿನಿಂದಲೇ ಇರುಳಾಯಿತು. ಬೆಳಕಿನಿಂದಲೆ ಆದ ಇರುಳು ಬೆಳಕಿನಲ್ಲಿ ಸರಿದು ನಾಳೆಯಾಯಿತು; ಬೆಳಕಾಯಿತು.

ಇಂದು ನಾಳೆ ಎಂಬ ಸಂದೇಹ ಬಿಟ್ಟು ನಿಜ ಆನಂದದಿಂದ ನಿಂದು ನೋಡಿದರೆ ಹಿಂದಿಲ್ಲ ಮುಂದಿಲ್ಲ. ಹಿಂದು ಮುಂದುನಲ್ಲಿ ಉಂಟಾದ ಕುಂದು ಸರಿಯಿತು. ಅಜ್ಞಾನದಿಂದ ಉಂಟಾಗುವ ಧಾವತಿಯನ್ನು ಜ್ಞಾನವೇ ಕೊಂದು ನಿಂತಿತು. ಇದು ನಿಜ ಶರಣ ಅಪ್ಪಣ್ಣನವರ ಸೂತ್ರ.

65

ಇತ್ತಲು ಪೃಥ್ವಿಯಿಂದ, ಅತ್ತಲು ಉತ್ತರಿಯ ಬೆಟ್ಟಕ್ಕೆ ಹತ್ತದ
ಕಸ್ತೂರಿಯ ಮೃಗದ ವಿಸ್ತಾರವ
ಹಸ್ತವಿಲ್ಲದೆ ಎಚ್ಚು, ಕಿಚ್ಚಿಲ್ಲದೆ ಸುಟ್ಟು, ಮಡಕೆಯಿಲ್ಲದೆ ಅಟ್ಟು,
ಮನವಿಲ್ಲದುಂಡು, ನೆನಹಿಲ್ಲದಾಡಿ ಪಾಡುವ ಘನವೇ
ಅಗಮ್ಯ ಅಗೋಚರ ಅಪ್ರಮಾಣ ಸುಪ್ರಭಾಕಳಾನಂದ
ಪ್ರಾಣಲಿಂಗ ಪರಂಜ್ಯೋತಿ, ಬಸವಪ್ರಿಯ ಕೂಡಲ ಚೆನ್ನಸಂಗಮದೇವಾ.

ತನುವಿನಲ್ಲಿ ತನ್ಮಯವಾದ ಸಂಪತ್ತು ತನುವನ್ನು ಆವರಿಸಿದ ಮನಕ್ಕೆ ಗೊತ್ತಾಗದ ನಿಮಿತ್ತ, ತನುವನ್ನು ಅತ್ಯಂತ ಆನಂದದಿಂದ ಭೂಮಿಯ ಮೇಲೆ ಇರಲು ಬಿಡದು; ಅತ್ತ ಆನಂದದ ಕೈಲಾಸ ಪರ್ವತವನ್ನು ಹತ್ತಲೂ ಬಿಡದು.

ಕಸ್ತೂರಿ ಮೃಗದ ನಾಭಿಯಲ್ಲಿ ಕಸ್ತೂರಿ ಇದ್ದರೂ ಮೃಗಕ್ಕೆ ತಿಳಿಯದು. ಏಕೆಂದರೆ ಅದು ಮೃಗ. ಕಸ್ತೂರಿಯ ವಿಸ್ತಾರವನು ಅದು ಹೇಗೆ ಬಲ್ಲುದು? ಕಸ್ತೂರಿಯ ಪರಿಮಳವನು ನೋಡಲು ಬರುತ್ತದೆಯೇ? ಹಿಡಿಯಲು ಬರುತ್ತದೆಯೇ? ಅದು ನಾಭಿಯಲ್ಲಿಯೇ ಇದೆಯೆಂದು ಮೃಗಕ್ಕೆ ತಿಳಿಯಲು ಬರುತ್ತದೆಯೆ? ಆದರೂ ಕಸ್ತೂರಿ ಮೃಗದ ನಾಭಿಯಲ್ಲಿಯೇ ಇದೆ. ಮೃಗಕ್ಕೆ ಕಸ್ತೂರಿ ಹೇಗೆ ಗೊತ್ತಿಲ್ಲವೋ ಹಾಗೆಯೆ ಮನಕ್ಕೆ ತನುವಿನ ಅರಿವಿನ ಪರಿಮಳದ ಸಂಪತ್ತು ಗೊತ್ತಿಲ್ಲ. ಅದರ ಆಳ ವಿಸ್ತಾರ ಅಗಲವೂ ಗೊತ್ತಿಲ್ಲ. ಅದನ್ನು ಹೇಗೆ ಪಡೆಯಬೇಕೆಂಬುದೂ ಗೊತ್ತಿಲ್ಲ.

ಮನ ತನುವಿನ ಅರಿವನ್ನು ಪಡೆಯುವುದಕ್ಕಾಗಿಯೇ ಭಗವದ್ಗೀತೆ ಬೈಬಲ್ ವೇದ ಆಗಮ ಉಪನಿಷತ್ತು ರಾಮಾಯಣ ಮಹಾಭಾರತ ಬೆಟ್ಟದಷ್ಟು ಪುಸ್ತಕಗಳನ್ನೂ ಸೃಷ್ಟಿಸಿತು. ಅವೆಲ್ಲ ತನುವಿನ ಅರಿವಿನಿಂದ ಬಂದ ಎಂಜಲು ರಾಶಿ ಎನ್ನುವುದನ್ನೇ ಮರೆತು ಮರಳಿ ಮರಳಿ ಓದಿ ಆನಂದ ಪಟ್ಟಿತು. ಇದು ಅವರು ಬರೆದದ್ದು ಇವರು ಬರೆದದ್ದು, ರಾಮ ಹೇಳಿದ್ದು, ಕ್ರಿಷ್ಣ ಹೇಳಿದ್ದು, ಕ್ರಿಸ್ತ ಬುದ್ಧ ಮಹಾವೀರ ಹೇಳಿದ್ದು ಎಂದು ಮನ ಓದಿ ಓದಿ ಭ್ರಮೆಯಿಂದ ತನುವಿ ಆಯುಷ್ಯ ಕಳೆದು ಪಂಡಿತ ಶಾಸ್ತ್ರಿ ಪ್ರವಚನಕಾರನಾಯಿತೇ ಹೊರತು ಜ್ಞಾನಿಯೆ ತಾನಾಗಲಿಲ್ಲ.

ಜ್ಞಾನ ಎನ್ನುವುದು ತನುವಿನ ಸಂಪತ್ತು. ಅದನ್ನು ಕಣ್ಬಿಟ್ಟು ಓದಬೇಕೆ? ಕೈ ಹಿಡಿದು ಮುಟ್ಟಬೇಕೆ?

ಕೈ ಇಲ್ಲದೆ ಎಚ್ಚಿ, ಕಿಚ್ಚಿಲ್ಲದೆ ಸುಟ್ಟು, ಮಡಕೆಯಿಲ್ಲದೆ ಅಡುಗೆ ಮಾಡಿ, ಮನವಿಲ್ಲದೆ ಉಂಡು, ನೆನೆಹಿಲ್ಲದೆ ತನಗೆ ತಾನೇ ಹಾಡಿ ಆನಂದ ಪಡುವ ಘನವದು. ಜ್ಞಾನವೆನ್ನುವುದು ಗಮನಕ್ಕೆ ನಿಲುಕದ ಅಗಮ್ಯ, ದೃಷ್ಟಿಗೆ ನಿಲುಕದ ಅಗೋಚರ, ಯಾರೂ ಪ್ರಮಾಣಿಸಬಾರದ ಅಪ್ರಮಾಣ. ಅಪ್ರತಿಮವಾದ ಪ್ರಾಣಲಿಂಗದ ಪರಂಜ್ಯೋತಿಯೇ ತನುವಿನಲ್ಲಿ ತನ್ಮಯವಾಗಿರುವಾಗ ಅದನ್ನು ಉಂಡು ಆನಂದ ಪಡಬೇಕು ಅಷ್ಟೆ!

66

ಈ ಜಗದೊಳಗಣ ಆಟವ ನೋಡಿದರೆ,
ಎನಗೆ ಹಗರಣವಾಗಿ ಕಾಣಿಸುತ್ತಿದೆ.
ಅದೇನು ಕಾರಣವೆಂದರೆ,

ಹಿಂದಣ ಮುಕ್ತಿಯನರಿಯರು,
ಮುಂದಣ ಮುಕ್ತಿಯನರಿಯರು.
ಬಂದ ಬಂದ ಭವದಲ್ಲಿ ಮುಳುಗುತ್ತಲಿದ್ದಾರೆ.
ನಾನಿದರಂದವನರಿದು, ದ್ವಂದ್ವವ ಹರಿದು,
ಜಗದನಿಂದೆ ಸ್ತುತಿಯ ಸಮಗಂಡು
ಹಿಂದ ಹರಿದು ಮುಂದನರಿದು,
ಸದಮಳಾನಂದದಲ್ಲಿ ನಿಂದು,
ಸಚ್ಚಿದಾನಂದದಲ್ಲಿ ಐಕ್ಯವಾಗಿ,
ಸತ್ಯ ಶರಣರ ಪಾದದಲ್ಲಿ ನಿರ್ಮುಕ್ತನಾದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಜಗದ ತನುಗಳೆಲ್ಲ ಬಂಧನಕ್ಕೆ ಒಳಪಟ್ಟಿವೆ. ತನುಗಳೆಲ್ಲ ಒಂದೇ ಆದರೂ ಹೆಣ್ಣು ಗಂಡು ಎಂಬ ಬಂಧನ. ಶ್ರೀಮಂತ ಬಡವನೆಂಬ ಬಂಧನ. ಜಾತಿ ಮತ ಪಂಥಗಳ ಬಂಧನ. ರೈತ ಅಧಿಕಾರಿ ರಾಜಕಾರಣಿ ಎಂಬ ಬಂಧನ. ದೇಶ ಭಾಷೆ ಗಡಿಗಳ ಬಂಧನದಲ್ಲಿ ತನು ತನಗರಿಯದಂತೆ ಬಂಧಿಸಿಕೊಂಡಿದೆ. ಇದಕ್ಕೆ ಮನವೇ ಕಾರಣ.

ಮನ ಮೇಲಿನಂತೆ ತನು ಹಿಡಿದು ಯೋಚಿಸಿದರೆ ಅದು ತನುವನ್ನು ಪಾರು ಮಾಡಲು ಅರಿಯದು. ಬದಲಾಗಿ ಆಯಾ ದುಃಖಗಳನ್ನು ಸರಿಸುತ್ತಾ ಸುಖ ಮೆಲ್ಲಲು ಪ್ರಯತ್ನಿಸುತ್ತದೆ. ಮೇಲಿನ ಯೋಚನೆಗಳೆಲ್ಲ ಸುಖವಲ್ಲ ಅದು ದುಃಖವೂ ಅಲ್ಲ. ಆದರೂ ಮನ ಸುಖವೆಂದು ಅದು ತನಗೆ ದಕ್ಕದ್ದಕ್ಕಾಗಿ ದುಖವೆಂದು ಭ್ರಮೆಯಿಂದ ಭಾವಿಸಿ ತನುವನ್ನು ಸುಖ ದುಃಖಗಳ ಬಾಧೆಯಲ್ಲಿ ಮುಳುಗಿಸುತ್ತದೆ. ಜಾತಿ ಮತ ಪಂಥಗಳ ಸಂಕೋಲೆಗಳಿಂದ ತನುವನ್ನು ಮನ ಬಂಧಿಸಿಕೊಳ್ಳುತ್ತದೆ.

ಕಣ್ಣು ಕಿವಿ ಮೂಗು ನಾಲಿಗೆ ಚರ್ಮ ಇವುಗಳ ಜ್ಞಾನ ಧರ್ಮ ಒಂದೇ ಆಗಿದೆ. ಇವುಗಳ ಕರ್ಮವೂ ಒಂದೇ ಆಗಿದೆ. ಆದರೂ ಮನ ಕಣ್ಣಿನಿಂದಲೇ ನೋಡಿ ತನುವನ್ನು ತನ್ನಂತೆ ಇರುವ ತನುವೆಂದು ಗುರುತಿಸದೆ ಹೆಣ್ಣು ಗಂಡು ದೇಶ ಭಾಷೆ ಮುಂತಾದ ಅಜ್ಞಾನದಿಂದ ಗುರುತಿಸುತ್ತದೆ. ಹಾಗೆಯೇ ತನ್ನನ್ನೂ ಗುರುತಿಸಿಕೊಂಡು ಸುಖ ಇಲ್ಲ ದುಃಖ ಪಡುತ್ತದೆ. ತನ್ನ ಈ ಬಂಧನವನ್ನು ಯಾರು ಬಿಡಿಸಬೇಕು. ಕಣ್ಣಿಗೆ ನೋಡುವ ಕರ್ಮ ಮಾತ್ರ ಮಾಡು ಅದು ನಿನ್ನ ಧರ್ಮವೆಂದು ಯಾರು ಹೇಳಬೇಕು? ಕಣ್ಣಿನಲ್ಲಿ ಬೆರೆತ ಮನ ದೂರ ಸರಿದರೆ ಕಣ್ಣಿನ ಕೆಲಸ ಕಣ್ಣು ಸರಿಯಾಗಿ ಮಾಡುತ್ತದೆ. ಮನವನ್ನು ದೂರ ಸರಿಸಲು ಯಾರಿಗೂ ಸಾಧ್ಯವಾಗುವುದಿಲ್ಲ. ಕಣ್ಣಿನಲ್ಲಿದ್ದ ಅರಿವೆಂಬ ಗುರುವಿಗೆ ಮಾತ್ರ ಸಾಧ್ಯವಾಗುತ್ತದೆ. ಆ ಅರಿವನ್ನು ಕಂಡು ಹಿಡಿಯಬೇಕಾದದ್ದು ಕೂಡಾ ಮನವೇ ಆಗಿರುವುದರಿಂದ ಮುಕ್ತನಾಗಲು ಸಾಧ್ಯವಾಗುವುದಿಲ್ಲ.

ಜಗದೊಳಗಣ ತನುಗಳ ಆಟ ನೋಡಿದರೆ ಅದೊಂದು ಹಗರಣವೆಂದು ಕಾಣಿಸುತ್ತದೆ. ಜನನ ಮರಣಗಳನ್ನು, ದ್ವಂದ್ವಗಳನ್ನು ಹರಿಯಲು ಮನಕ್ಕೆ ಸಾಧ್ಯವಾಗುವುದಿಲ್ಲ. ಭೂತಕಾಲದ ನೆನಪು, ಭವಿಷ್ಯದ ಆಗು ಹೋಗುಗಳನ್ನು, ವರ್ತಮಾನ ಕಾಲದ ಸುಖ ದುಃಖಗಳು ತನುವನ್ನು ಸುಣ್ಣದ ಕಲ್ಲು ಹಾಕಿ ಕುದಿಸಿದಂತೆ ಭಾಸವಾಗುತ್ತದೆ. ಸಂಕಟ ನರಕ ಯಾತನೆಗೆ ತನು ಒಳಗಾಗುತ್ತದೆ.

ಇದು ಮನದಿಂದಲೇ ಎಂದು ಮನಕ್ಕೆ ಅರಿವಾಗುವುದೇ ಇಲ್ಲ.

ಮನದಿಂದಲೇ ತನುವಿನಲ್ಲಿ ತನ್ಮಯವಾದ ಅರಿವನು ಅರಿತು ಸದಾ ಆನಂದದಿಂದಿರುವ ಸೂತ್ರವನ್ನು ಅಪ್ಪಣ್ಣ ಶರಣರು ಈ ವಚನದ ಮೂಲಕ ಕರುಣಿಸಿದ್ದಾರೆ.

67

ಈಡಾ ಪಿಂಗಳ ಸುಷುಮ್ನ ನಾಳದ
ಗಾಢ ಅಗಮ್ಯವನರಿದು ನೋಡೆ,
ಬ್ರಹ್ಮರಂಧ್ರವ ತಟೆ ಹಾಯ್ದು ಕೂಡಾಡಿ ಪಶ್ಚಿಮದೋಳ್ಬೆರೆದರೆ
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಉಸಿರಾಟವನ್ನು ತನುವಿಗೆ ಯಾರೂ ಕಲಿಸಬೇಕಿಲ್ಲ. ಆದರೂ ಮನ ಉಸಿರಾಡುವುದಕ್ಕೆಂದೆ ಶಾಸ್ತ್ರವನ್ನು ಬರೆದು ಅದಕ್ಕೆ ಯೋಗವೆಂದು ಕರೆದಿದೆ. ಈ ದೇಶದಲ್ಲಿ ಯೋಗಕ್ಕೆ ಬಹುದೊಡ್ಡ ವ್ಯಾಪಾರ. ಸಾವಿರಾರು ಸಂಸ್ಥೆಗಳು ಅದಕ್ಕಾಗಿಯೇ ಹುಟ್ಟಿಕೊಂಡಿವೆ. ಆದರೂ ಉಸಿರಾಟದ ವಿದ್ಯೆ ಕಲಿತು ಉಸಿರನ್ನು ತನುವಿನೊಳಗೆ ಬಂಧಿಸಿ ಬದುಕುಳಿದವನು ಒಬ್ಬನೂ ಇಲ್ಲ. ಯೋಗ ಎಂದರೆ ಕೂಡುವುದು.

ತನುವಿನಲ್ಲಿ ಅರಿವು ಮತ್ತು ಮನ ಸಂಗಮವಾಗಿವೆ. ಆದರೂ ಮನದ ಅರಿವಿಗೆ ಬಾರದೆ ಇರುವುದರಿಂದ ಯೋಗ ಎನ್ನುವ ಶಾಸ್ತ್ರದ ಮೂಲಕ ಪಾಠ ಮಾಡಿ ಮನವನ್ನು ಅರಿವಿನಲ್ಲಿ ಸಂಗಮ ಮಾಡುವ ಉದ್ದೇಶ ಹೊಂದಲಾಗಿತ್ತು. ಆದರೂ ಮನ ಬಲು ಜಾಣ. ಯೋಗವನ್ನು ಒಂದು ಶಾಸ್ತ್ರವಾಗಿ ಅಭ್ಯಾಸ ಮಾಡುತ್ತದೆಯೇ ಹೊರತು ಮನ ಘನದಲ್ಲಿ ಬೆರೆಯುವುದಿಲ್ಲ. ಈ ಯೋಗಭ್ಯಾಸವನ್ನೇ ಒಂದು ವ್ಯವಹಾರ ಮಾಡಿಕೊಂಡು ಮನ ತನುವಿಗೆ ಗುರುವಿನ ವೇಷ ಹಾಕಿ ವೇಶಿಯಂತೆ ಬದುಕುತ್ತದೆ.

ಅಪ್ಪಣ್ಣ ಶರಣರು ನಿಜ ಗುರುಗಳು. ತನುವಿನ ಉಸಿರಾಟದ ಕ್ರಮವನ್ನು ಗಾಢವಾಗಿ ಅರಿತರು. ಮೂಗಿನ ಎಡ ಮತ್ತು ಬಲ ಹೊರಳೆಗಳಿಂದ ಪಶ್ಚಿಮ ದ್ವಾರಕ್ಕೆ ಚಲಿಸಿ ಆನಂದವನ್ನುಂಟು ಮಾಡುವ ಗಾಳಿಯನ್ನು ಗಮನಿಸಿದರು. ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಬೀಸುವ ಗಾಳಿ ನಿಮ್ಮ ದಾನ. ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮಾನಾಥ!

ಇಳೆಯ ಮೇಲೆ ಬೀಸುವ ಗಾಳಿ ನಿಲ್ಲುವುದಿಲ್ಲ. ತನುವೆಂಬ ಇಳೆಯಲ್ಲಿ ಸುಳಿದು ಬೀಸುವ ಗಾಳಿ ನಿಲ್ಲದೆ ಇರುವುದಿಲ್ಲ. ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುದೇವನ ಆಜ್ಞಾನುಸಾರ ಅದು ತನುವಿನಲ್ಲಿ ಸುಳಿದು ಬೀಸುತ್ತದೆ. ತನುವು ತನುವಿನಲ್ಲಿ ಸುಳಿದು ಬೀಸುವ ಗಾಳಿ ತನುವಿನಲ್ಲಿಯೇ ತನ್ಮಯವಾದ ಅರಿವಿನ ಸಂಪತ್ತು . ಅದು ಆತನ ದಾನ. ಇದನ್ನು ತನುವನ್ನು ಆವರಿಸಿದ ಮನದಿಂದಲೇ ಅರಿತಾಗ ಮಹದಾನಂದವಾಗುತ್ತದೆ. ಅರಿಯುವ ಮನ ಭ್ರಮೆ ಕಳೆದುಕೊಂಡು ಬ್ರಹ್ಮರಂಧ್ರದಲ್ಲಿ ಲೀನವಾಗುತ್ತದೆ. ಬಸವಪ್ರಿಯ ಕೂಡಲ ಚೆನ್ನಬಸವಣ್ಣನೆಂಬ ಬ್ರಹ್ಮವೇ ತಾನಾಗುತ್ತದೆ.

68

ಈ ಬಚ್ಚ ಬರಿಯ ಬಯಲ ಕಂಡಿಹನೆಂದರೆ ಕಾಣಬಾರದು.
ಕೇಳಿಹೆನೆಂದರೆ ಕೇಳಬಾರದು,
ಹೇಳಿಹೆನೆಂದರೆ ಹೇಳಬಾರದು.
ಇವ ಮೂರರ ಕಾಳಿಕೆಯ ಕಳೆದು,
ಈ ಹನ್ನೆರಡ ಜಾಣೆಯಲ್ಲಿ ದಾಂಟಿ, ಒಂದರ ಮೇಲೆ ನಿಂದು,
ಅಂದವಳಿಯದೆ, ಬಿಂದು ತುಳುಕದೆ,
ಅಂದಂದಿನ ಹೊಸ ಪೂಜೆಯ ನೋಡಿ ಕಣ್ದೆರೆದು
ಕರಗಿ ಒಂದಾದ ಚರಣ ತೋರಿ ಬದುಕಿಸಯ್ಯಾ ಎನ್ನ
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ತನು ಬಯಲಬೀಜ! ಬಯಲಬೀಜದಿಂದಲೇ ತನು ರೂಪು ಪಡೆದು ನೋಡುವ ಕೇಳುವ ಮುತ್ತಿನಂತೆ ಬೆಳಗಿ ನುಡಿಯುವ ಬೋಧೀ ವೃಕ್ಷ! ತನುವನ್ನು ಆವರಿಸಿದ ಮನಕ್ಕೆ ತನುವಿನಲ್ಲಿ ತನ್ಮಯವಾದ ಅರಿವೇ ನುಡಿದು ಬೆಳಗುವ ಮುತ್ತೆಂದು ತಿಳಿದರೆ ಸಾಕು, ಕಾಣಬಾರದ ಬಯಲು ಕಾಣುತ್ತದೆ. ಕೇಳಬಾರದ ಮಾತು ಕೂಡ ಬೆಳಗಿ ಕೇಳುತ್ತದೆ. ನುಡಿದು ಹೇಳುವ ನುಡಿಗಳೆಲ್ಲ ಬೆಳಗಿಂಗೆ ಬೆಳಗಾಗಿ ಬೆಳಗುತ್ತವೆ. ಇವು ಮೂರಕ್ಕಂಟಿದ ಕಾಳಿಕೆ ಮನ ಕಳೆದುಕೊಂಡು ಘನ ಮನವಾಗುತ್ತದೆ.

ಒಂದು ಮನೆ ಸುಂದರವೆಂದು ಅನ್ನಿಸಿಕೊಳ್ಳಬೇಕಾದರೆ ಹೆಂಡತಿ ಜಾಣೆ ಇರಬೇಕು. ಮನೆಯದು ಸ್ವರ್ಗವಾಗುತ್ತದೆ. ಹಾಗೆಯೇ ಕಾಯ ಕೈಲಾಸವೆನ್ನಿಸಿಕೊಳ್ಳಬೇಕಾದರೆ ಮನವೆಂಬ ಹೆಂಡತಿ ಜಾಣೆಯಾಗಬೇಕು, ಇಲ್ಲದಿದ್ದರೆ ತನುವನ್ನು ಸುರೆಮನೆಗೆ, ಕಳುವಿಗೆ, ಭ್ರಷ್ಟಾಚಾರಕ್ಕೆ, ಹಾದರಕ್ಕೆ, ಅವ್ಯವಹಾರಕ್ಕೆ ಕರೆದುಕೊಂಡು ಹೋಗುತ್ತದೆ. ಮನವೆಂಬ ಹೆಂಡತಿ ಮಾಡಿದ ಮೋಸ ಅರಿವಿನ ಗಂಡ ಕಟ್ಟಿದ ತನುವೆಂಬ ಮನೆಗೆ ತಗಲುತ್ತದೆ. ಜನ ತನುವನ್ನು ಕಳ್ಳ ಹಾದರಿಗ ಕೊಲೆಗಡುಕ ಎಂದು ಗುರುತಿಸುತ್ತಾರೆ; ಮನವೆಂಬ ಈಕೆ ಜಾಣೆಯಾದರೆ ಸಾಕು ಅರಿವಿನ ಗಂಡನೊಬ್ಬನಿಗೆ ಸತಿಯಾಗಿ ನಿಲ್ಲುತ್ತಾಳೆ.

ತನು ಅರಿವಿನ ಆಧಾರದ ಮೇಲೆ ನಿಲ್ಲುತ್ತದೆ. ಅದರ ಅಂದ ಅಳಿಯುವುದಿಲ್ಲ. ಬಿಂದು ತುಳುಕುವುದಿಲ್ಲ. ನೋಡಿದ ನೋಟವೆಲ್ಲ ಪೂಜೆ. ಕೇಳಿದ, ನುಡಿದ ನುಡಿಗಳೆಲ್ಲ ಬೆಳಗುವ ಮುತ್ತುಗಳಾಗುತ್ತವೆ.

ಹೀಗೆ ತನು ಮನ ಘನ ಕರಗಿ ತನುವಿನಲ್ಲಿಯೇ ಒಂದಾದ ಚರಣವ ತೋರಿ ಬದುಕಿಸಯ್ಯಾ ಬಸವಪ್ರಿಯ ಕೂಡಲಚೆನ್ನಬಸವಣ್ಣನೇ ಎಂದು ಪ್ರಾರ್ಥಿಸುವ ಸೂತ್ರವನ್ನು ಅಪ್ಪಣ್ಣ ಶರಣರು ಮನಕ್ಕೆ ಕರುಣಿಸಿದ್ದಾರೆ.

69

ಈ ಮಹಾಘನ ನೆಲೆಗೊಂಡಿಪ್ಪ ಶರಣನ ನೆಲೆ ಎಂತಿಪ್ಪುದೆಂದಡೆ
ಪೃಥ್ವಿ ಪೃಥ್ವಿಯನೆ ಕೂಡಿ, ಅಪ್ಪು ಅಪ್ಪುವನೆ ಕೂಡಿ,
ಅಗ್ನಿ ಅಗ್ನಿಯನೆ ಕೂಡಿ, ವಾಯು ವಾಯುವನೆ ಕೂಡಿ,
ಆಕಾಶ ಆಕಾಶವನೆ ಕೂಡಿ, ಪಂಚತತ್ವವೆಲ್ಲ ಹಂಚು ಹುರಿಯಾಗಿ,

ಹಿಂಚು ಮುಂಚು ಮಾಡುವ ಮನದ ಸಂಚಲವಡಗಿ,
ಕರ್ಮದ ಗೊಂಚಲನಿಂದ ನಿಶ್ಚಿಂತ ನಿಜೈಕ್ಯನಿಗೆ ನಮೋ ನಮೋ ಎನುತಿರ್ದೆ
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ತನುವನ್ನು ಆವರಿಸಿಕೊಂಡ ಮನ ತನುವಿನಲ್ಲಿಯೇ ತನ್ಮಯವಾದ ಮಹಾಘನವೆಂಬ ಜ್ಞಾನದಲ್ಲಿ ಲೀನವಾದ ಮೇಲೆ ಅದು ಹೇಗಿರುತ್ತದೆ ಎಂದು ಅನುಭವಿಸಿ ಹೇಳಿದ ಮಾತಿದು. ತನುವಿನ ಅರಿವನ್ನು ತನುವಿನ ಮನವೇ ತಿಳಿಯಬೇಕೆಂದು ಆಸೆಯಿಂದ ಬಯಸಿದ ಬಯಕೆಯುಳ್ಳ ಮನಕ್ಕೆ ಮಾತ್ರ ತಿಳಿಯುವ ಮಾತಿದು.

ಪೃಥ್ವಿ ಜಲ ಅಗ್ನಿ ವಾಯು ಆಕಾಶದಿಂದಲೇ ಆದ ಕಾಯವೆಂದು ಸರ್ವರಿಗೂ ತಿಳಿದಿದೆ. ಪಂಚ ಭೂತಗಳು ತನುವಿನಲ್ಲಿ ತನ್ಮಯವಾಗಿವೆ. ಇವು ಹೊರಗಡೆ ಆಗಾಗ ವಿಕೃತಗೊಂಡಂತೆ ತನುವಿನಲ್ಲಿಯೂ ವಿಕೃತಗೊಳ್ಳುತ್ತವೆ.

ಗಾಳಿ ವೇಗವಾಗಿ ಬೀಸಿ ವಿಕೃತಗೊಳ್ಳುತ್ತದೆ. ಭೂಮಿ ಬಿರಿದು, ಆಕಾಶ ಗುಡುಗಿ, ಬೆಂಕಿ ತನ್ನ ಕೆನ್ನಾಲಿಗೆಯಿಂದ ಉಗುಳಿ, ಜಲ ಧಾರಕಾರವಾಗಿ ಮಳೆ ಸುರಿದು ಉಕ್ಕಿ ಹರಿದು ವಿಕೃತ ಉಂಟು ಮಾಡುತ್ತವೆ. ಹಾಗೆಯೇ ತನುವನ್ನು ಹಿಡಿದು ವಿಕೃತಗೊಳಿಸುತ್ತವೆ.

ಶಬ್ದ ಕೇಳಿ ತನುವಿನಲ್ಲಿ ರಸಾಯನಿಕ ಕ್ರಿಯೆ ಹುಟ್ಟಿ ವಿಕೃತಗೊಳ್ಳುತ್ತದೆ. ಸ್ಪರ್ಶಿಸಿ, ಮೂಸಿಸಿ, ರುಚಿಸಿ ನೋಡಿ ತನು ವಿಕೃತಗೊಳ್ಳುತ್ತದೆ. ಪಂಚಭೂತಗಳನ್ನು ಗರ್ಭದಲ್ಲಿ ಹಿಡಿದಿಟ್ಟುಕೊಂಡ ಬಯಲು ಸದಾ ಶಾಂತವಾಗಿರುತ್ತದೆ.

ಬಿರುಗಾಳಿ ಬೀಸಿ, ಅಗ್ನಿ ಉರಿದು, ಜಲ ಭೋರ್ಗರೆದು ಹರಿದು, ಭೂಮಿ ಬಿರಿದು, ಆಕಾಶ ಗುಡುಗಿದರೂ ಬಯಲು ಎಂದೂ ವಿಕೃತಗೊಳ್ಳುವುದಿಲ್ಲ. ಏಕೆಂದರೆ ಗರ್ಭ ಧರಿಸಿದ ಮಹಿಳೆ ತನ್ನ ಮಗುವಿನ ತುಂಟಾಟವನ್ನು ಆನಂದದಿಂದ ಅನುಭವಿಸಿದಂತೆ ಪಂಚಭೂತಗಳ ತುಂಟಾಟವನ್ನು ಬಯಲು ತನ್ನ ಗರ್ಭದಿಂದ ದೂರ ಸರಿಯದಂತೆ ಆನಂದದಿಂದಲೇ ಅನುಭವಿಸುತ್ತದೆ. ಸಕಲ ಭೂತಗಳ ಚೇಷ್ಟೆ ಬಯಲಲ್ಲಿಯೇ ಗರ್ಭೀಕರಿಸಿಕೊಂಡಿದೆ; ಬಯಲಿಗೆ ಬಾಧೆಯಿಲ್ಲ. ಬದಲಿಗೆ ಪರಮಾನಂದ!

ಹಾಗೆಯೇ ತನು ಬಯಲ ಬೀಜ. ವಿನೋದದ ಲೀಲೆಯಾಗಿ ರೂಪು ತಾಳಿದೆ. ಬಯಲು, ಪಂಚಭೂತಗಳನ್ನು ತನುವಿನ ಗರ್ಭದಲ್ಲಿ ಧರಿಸಿಕೊಂಡಿದೆ. ತನುವನ್ನು ಆವರಿಸಿಕೊಂಡ ಮನಕ್ಕೆ ಈ ವಿಷಯ ತಿಳಿಯದ್ದರಿಂದ ತನು ಸಂಕಟ ಪಡುತ್ತದೆ. ತಿಳಿದರೆ ಮನ ಬಯಲಿನಲ್ಲಿಯೇ ಲೀನವಾಗಿ ತನು ಸದಾ ಆನಂದದಿಂದ ಇರುತ್ತದೆ. ಬೋಧಿವೃಕ್ಷವಾಗಿ ಸಿಹಿ ಫಲದ ನುಡಿಗಳನ್ನು ಚೆಲ್ಲುತ್ತದೆ. ಹಿಂಚು ಮುಂಚು ಮಾಡುವ ಮನದ ಸಂಚಲವಡಗಿ ಕರ್ಮದ ಗೊಂಚಲದಿಂದ ನಿಶ್ಚಿಂತನಾಗುತ್ತದೆ. ತನುವಿನಲ್ಲಿಯೆ ಬಯಲ ದರ್ಶನ ಪಡೆದು, ತನುವಿನಲ್ಲಿಯೇ ಐಕ್ಯವಾಗಿ, ತನು ಮನ ಘನ ಸಂಗಮವಾಗಿ, ಆ ತನುವೇ ವಿರಾಟ ಸ್ವರೂಪವಾಗಿ ನಿಲ್ಲುತ್ತದೆ. ಜಗದಗಲ ಮುಗಿಲಗಲಕ್ಕೂ ಚಾಚಿ ಗಮನಕ್ಕೆ ನಿಲುಕದ ಅಗಮ್ಯನಾಗುತ್ತದೆ.

70

ಈಯಸುವನರಿದು ಲಿಂಗವ ನೋಡಿ ಕೂಡಿಹೆನೆಂದರೆ,

ಮನವೆಲ್ಲವ ನಿಲಿಸಿ ಇರಬೇಕು.
ಈ ಘನ ಪರಾಕ್ರಮವುಳ್ಳ ಭಕ್ತರ ತನುವೇ ಲಿಂಗ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಮನ ತನುವಿನಲ್ಲಿರುವ ಅರಿವಿನ ಅನುವನು ಅರಿಯದ್ದಕ್ಕಾಗಿ ಸಂಪದ್ಭರಿತ ಶಿವಮಯ ತನುವನ್ನು ಕಳ್ಳ, ಕಿರಾತಕ, ವಿಷಯಲಂಪಟ, ಹಾದರಿಗನ ತನುವನ್ನಾಗಿ ಮಾಡಿದೆ. ಸಂಪತ್ತು ಹೊರಗಿದೆಯೆಂದು ಭಾವಿಸಿ ಅದನ್ನು ಪಡೆಯಲು ಮನ ತನುವನ್ನು ಕಳ್ಳನನ್ನಾಗಿ ಮಾಡುತ್ತದೆ. ಕೊಲೆಗಡುಕ, ದರೋಡೆಕೋರ, ಹಾದರಿಗನನ್ನಾಗಿ ಮಾಡುತ್ತದೆ.

ಸಂಪತ್ತಿನೆಡೆಗೆ ಮುಖ ಮಾಡಿದ ಮನ ಅರಿವಿನೆಡೆಗೆ ಮುಖ ಮಾಡುವುದು ಬಲು ಜಟಿಲ. ತಾನು ಭಾವಿಸಿದ ಸಂಪತ್ತನ್ನು ಅರಿವಿನಿಂದ ನೋಡಿದರೆ ತನಗೆ ತಿಳಿಯುತ್ತದೆ; ಅದು ಸಂಪತ್ತಲ್ಲವೆಂದು!

ಕಾಗದದಿಂದ ಮಾಡಿದ ಕರೆನ್ಸಿ, ಹಳದಿ ಲೋಹದಿಂದ ಮಾಡಿದ ಆಭರಣ, ಜಲಬಿಂದುವಿನಿಂದಾದ ಮಣ್ಣು. ಸಕಲ ಪದಾರ್ಥಗಳೂ ಜಲಬಿಂದುವಿನಿಂದಲೇ ಜನ್ಮ ಪಡೆದಿವೆ. ತನು ಕೂಡಾ ಜಲಬಿಂದುವಿನಿಂದಲೇ ಜನ್ಮ ಪಡೆದಿದೆ. ತನುವಿಗೆ ಅರಿವಿದೆ. ಮನ ತನುವನ್ನು ಆವರಿಸಿಕೊಂಡಿದೆ. ಮನ ಅರಿವಿನಿಂದ ಹಳದಿ ಲೋಹವನ್ನು ಅರಿಯದ ನಿಮಿತ್ತ ಆ ಲೋಹಕ್ಕಾಗಿಯೇ ಮನ ಮತ್ತೊಂದು ತನುವನ್ನು ಕೊಂದು ಪಡೆಯುವುದಕ್ಕಾಗಿ ಹಪಹಪಿಸುತ್ತದೆ. ಮನಕ್ಕೆ ಹಳದಿ ಲೋಹವೇ ಅಧಿಕವಾಗಿ, ಕಾಗದದ ಕರೆನ್ಸಿಯೇ ಶ್ರೇಷ್ಠವಾಗಿ ತನು ಮತ್ತೊಂದು ತನುವಿನೊಂದಿಗೆ ಯುದ್ಧ ಮಾಡಿ ಕೊಂದು ಪಡೆಯುತ್ತದೆ.

ಕರೆನ್ಸಿ ಚಿನ್ನ, ವಿನಿಮಯಕ್ಕಾಗಿ ಇದ್ದ ವಸ್ತು. ಅದು ಹೇಗೆ ಅರಿವಿನ ತನುವಿಗಿಂತ ದೊಡ್ಡದಾಗುತ್ತದೆ. ಎಂದು ಮನಕ್ಕೆ ಅರಿವಿನ ಅನುವಿನಿಂದ ಯೋಚಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಮನ, ಒಂದು ತನುವನ್ನು ಶ್ರೇಷ್ಠವೆಂದು, ಮತ್ತೊಂದು ಅಧಮವೆಂದು, ಭಿಕ್ಷುಕ, ದಾನಿಯೆಂದು, ಪಂಡಿತ ಪಾಮರ ಅಧಿಕಾರಿಯೆಂದು, ರಾಜ ಪ್ರಧಾನಿಯೆಂದು, ಹೆಣ್ಣು ಗಂಡು ಜಾತಿ ಮತ ಪಂಥಗಳಿಂದ ಗುರುತಿಸುತ್ತದೆ.

ಕರೆನ್ಸಿ ಚಿನ್ನ ಅನ್ನ ನೀಡಿ ದಾನಿಯಾಗುತ್ತದೆ. ಬೇಡಿ ಭಿಕ್ಷುಕನಾಗುತ್ತದೆ. ಕರೆನ್ಸಿ ಚಿನ್ನ ಅನ್ನವನ್ನು ಮನ ಅರಿವಿನಿಂದ ನೋಡುವುದಿಲ್ಲ. ಕರೆನ್ಸಿ ಕಾಗದ, ಚಿನ್ನ ಹಳದಿ ಲೋಹ, ಕರೆನ್ಸಿ ಚಿನ್ನ ಅನ್ನ ಉತ್ಪತ್ತಿಯಾದದ್ದು ಭೂಮಿಯಿಂದಲೇ. ಇದನ್ನು ಮನ ನಿರ್ಧರಿಸಿ, ತನುವಿನಿಂದ ಬಳಕೆ ಮಾಡಿದೆ. ತನು ಹುಟ್ಟಿದಂದಿನಿಂದ ಮನ ನಿರ್ಧರಿಸಿ, ತನುವನ್ನು ಇವುಗಳ ವ್ಯವಹಾರದಲ್ಲಿ ತೊಡಗಿಸಿಕೊಂಡಿದೆ. ಸರ್ಕಾರ ಈ ಶಿಕ್ಷಣವನ್ನು ಭದ್ರಪಡಿಸಿ ತನ್ನ ಸುಳ್ಳು ಕಾಯ್ದೆ ನಿರ್ಮಿಸಿ ಸಿಕ್ಕಾ ಹಾಕಿದೆ.

ತನುವನ್ನು ಹಿಡಿದು ಸುಳ್ಳು ಶಿಕ್ಷಣ ಕಲಿತ ಮನ ಪುನಃ ತನುವಿನಲ್ಲಿ ತನ್ಮಯವಾದ ಅರಿವಿನ ಶಿಕ್ಷಣ ಕಲಿತು ಪರಾಕ್ರಮಿಯಾಗಬೇಕಿದೆ. ಅರಿವಿನಿಂದ ಚಿನ್ನವನ್ನು ನೋಡಿದರೆ ಅದು ತನಗಿಂತ ಶ್ರೇಷ್ಠವಾದುದಲ್ಲ. ಕರೆನ್ಸಿ ಹಾಗೂ ಭೂಮಿ ಕೂಡಾ ಶ್ರೇಷ್ಠವಾದುದಲ್ಲ. ತನುವೇ ಶ್ರೇಷ್ಠವಾಗಿ ನಿಲ್ಲುತ್ತದೆ. ಭೂಮಿ ಹೇಮ ವಿಷಯ ವಸ್ತುಗಳು ಮನದಿಂದ ನಿರ್ಮಾಣವಾಗಿವೆ ಎಂದು ಮನಕ್ಕೆ ಅರಿವಿನ ಗೋಚರವಾದರೆ ಸಾಕು, ಮನ ತನ್ನಲ್ಲಿಯೇ ಉಂಟಾದ ಅಜ್ಞಾನದ ವೈರಿಗಳನ್ನು ತಾನೇ ಪರಾಕ್ರಮದಿಂದ ಕತ್ತರಿಸಿ ಹಾಕುತ್ತದೆ. ಘನದಲ್ಲಿ ಬೆರೆತ ಘನ ಚಕ್ರವರ್ತಿಯಾಗಿ

ಅರಿವಿನ ಮಹಾವೀರನಾಗಿ, ಬುದ್ಧನಾಗಿ ಮೆರೆಯುತ್ತದೆ.

71

ಉಟ್ಟರೆ ತೊಟ್ಟರೇನಯ್ಯ? ನಟ್ಟುವರಂತೆ.
ಕೊಟ್ಟರೆ ಕೊಂಡರೇನಯ್ಯ? ವೇಶಿಯರಂತೆ.
ಬಿಟ್ಟರೆ ಕಟ್ಟದರೇನಯ್ಯ? ಬೈರೂಪನಂತೆ.
ಇವಾವಂಗವ ಮಾಡಿದರೇನಯ್ಯಾ
ಮುಟ್ಟಿ ನಮ್ಮ ಶರಣರೊಡನೆ ಒಡವೆರೆಯದಿದ್ದವರು
ಉಟ್ಟಿದ್ದರೇನು, ಬಿಟ್ಟಿದ್ದರೇನು ಹೇಳಾ,
ಬಸವ ಪ್ರಿಯ ಕೂಡಲಚೆನ್ನಬಸವಣ್ಣಾ?

ತನು ವೇಶಿಯೂ ಅಲ್ಲ, ವಿಟನೂ ಅಲ್ಲ, ಬೈರೂಪಿಯೂ ಅಲ್ಲ. ತನುವನ್ನು ಆವರಿಸಿದ ಮನಕ್ಕೆ ತನುವಿನಲ್ಲಿಯೇ ತನ್ಮಯವಾದ ಅರಿವು ತಿಳಿಯದಿದ್ದರೆ ಅದು ವೇಶಿಯೂ ಹೌದು, ವಿಟನೂ ಹೌದು, ಬೈರೂಪಿಯೂ ಹೌದು.

ಮನ, ತನುವಿಗೆ ವೇಶಿಯಂತೆ ಬಟ್ಟೆ ತೊಡಿಸಿ ವಿಟನಿಗೆ ತನು ಕೊಡುತ್ತದೆ, ಧನ ತೆಗೆದುಕೊಳ್ಳುತ್ತದೆ. ತೊಟ್ಟು ಉಟ್ಟು ನಟುವರನಂತೆ ನಾಟ್ಯ ಮಾಡುತ್ತದೆ. ಬೈರೂಪನಂತೆ ವರ್ತಿಸುತ್ತದೆ. ತೊಟ್ಟ ಆಭರಣದಲ್ಲಿ ಒರೆ ಕಾಣುವುದಿಲ್ಲ; ಉಟ್ಟ ಬಟ್ಟೆಯ ನೂಲು ಕಾಣುವುದಿಲ್ಲ. ಇದು ಅಂಗದ ತಪ್ಪಲ್ಲ; ಅಂಗವನ್ನು ಆವರಿಸಿದ ಮನವೆಂಬ ಮಂಗದ ತಪ್ಪು.

ಮನ ಘನಮನವನ್ನಾಗಿ ಮಾಡಿಕೊಂಡ ಶರಣರು ಉಡುವುದನ್ನು ಬಿಡಲಿಲ್ಲ; ತೊಡುವುದನ್ನು ಬಿಡಲಿಲ್ಲ. ಅಂಗ, ಅನ್ಯ ಅಂಗಗಳಿಗೆ ಅಸಹ್ಯವಾಗದಿರಲೆಂದು ಉಟ್ಟರು. ಉಟ್ಟ ಬಟ್ಟೆ ರೇಷ್ಮೆಯಾದರೇನು, ಹತ್ತಿಯದಾದರೇನು? ಅದು ಅಂಗ ಮುಚ್ಚುವ ನೂಲು! ತೊಟ್ಟ ಆಭರಣವದು ಹಳದಿ ಲೋಹದ ಒರೆ! ಇವುಗಳ ಪರಿಚಯವಿಲ್ಲದ ಮನ ಅಂಗವನ್ನು ಮಂಗದಂತೆ ಮಾಡುತ್ತದೆ. ಮರ್ಕಟದಂತೆ ಕುಣಿಸುತ್ತದೆ.

ಅಂಗದಲ್ಲಿ ಸಂಗಮವಾದ ಅರಿವದು ಶ್ರೀರಾಮನಂತೆ. ಮನವೆಂಬ ಮರ್ಕಟಕ್ಕೆ ಅರಿವೆಂಬ ಶ್ರೀರಾಮ ಪರಿಚಯವಾದರೆ ಸಾಕು ಅದು ಆಂಜನೇಯನಾಗುತ್ತದೆ. ಭಕ್ತಿಯಿಂದ ಅರಿವಿನ ಶ್ರೀರಾಮನನ್ನೇ ನೆನೆಯುತ್ತದೆ. ಪ್ರತಿ ಅಂಗಗಳು ಶ್ರೀರಾಮನಾಗಿ ಕಾಣುತ್ತವೆ. ಮನ ನಟುವರ, ವೇಶಿ; ಬೈರೂಪಿಯ ವೇಷ ಕಳಚಿ ಎಸೆಯುತ್ತದೆ. ಬಸವ ಪ್ರಿಯ ಕೂಡಲಚೆನ್ನಬಸವಣ್ಣನಲ್ಲಿ ಬೆರೆತು ಒಂದಾಗುತ್ತದೆ.

72

ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ
ನಾಲ್ಕು ಪಥವನು ಏಕಮಾಡಿ, ಊರ್ಧ್ವಮುಖವ ಮಾಡಿ,
ಈಡಾ ಪಿಂಗಳ ನಾಳಮಂ ಕಟ್ಟಿ, ಸುಷುಮ್ನ ನಾಳವಂ ಎತ್ತಿ,
ಮನ ಪವನ ಬಿಂದು ಒಡಗೂಡಿ,

ಚಂದ್ರ ಸೂರ್ಯ ಶಿಖಿಯರಿಂ ಮುಪ್ಪುರಿಯ ಮಾಡಿ,
ಒಡಗೂಡಿ ಏಕವಾಗಿ ಹುರಿಗೂಡಿ,
ಮರ್ತ್ಯಲೋಕವ ಬಿಟ್ಟು, ದೇವಲೋಕವ ಮೆಟ್ಟನಿಂದು,
ಭಾವ ಬಯಲಾಗಿ ಬಯಕೆ ಸವೆದು,
ಇನ್ನು ಈ ಲೋಕದೊಳಗೆ ಬಂದು ಬದುಕಿದೆನೆಂಬುದಕ್ಕೆ ಹೇಯ ಹುಟ್ಟಿ,
ಇದಾವುದನೂ ಒಲ್ಲದಿರ್ಪರು, ಬಸವಪ್ರಿಯ ಕೂಡಲ ಚೆನ್ನ ಬಸವಣ್ಣಾ.

ಮರ್ತ್ಯಲೋಕವೆನ್ನುವುದೊಂದು ಭಾವ, ದೇವಲೋಕವೆನ್ನುವುದೊಂದು ಭಾವ. ಉತ್ತರ ದಕ್ಷಿಣ ಪೂರ್ವ ಪಶ್ಚಿಮ ದಿಕ್ಕುಗಳನ್ನು ಹೆಸರಿಸುವುದು ಒಂದು ಭಾವ. ವಿರಾಟ ಸ್ವರೂಪವೇ ತಾನಾದ ಮಹಾಜ್ಞಾನದ ತನುವಿನಲ್ಲಿ ಈಡಾ ಪಿಂಗಳ ಸುಷಮ್ನ ನಾಳಗಳನ್ನು ಹೆಸರಿಸಿ ಅವುಗಳನ್ನು ತನುವಿನಲ್ಲಿ ಹುಡುಕುವುದೊಂದು ಭಾವ.

ಗ್ರಹಗಳಿಗೆ ಚಂದ್ರ ಸೂರ್ಯ ಎಂದು ಹೆಸರಿಸಿ ತನುವಿಗೆ ಹೋಲಿಸುವುದೊಂದು ಭಾವ.

ತನುವಿನಲ್ಲಿರುವ ಮನ ತನುವಿನೊಂದಿಗೆ ನಾನಾರೀತಿಯ ಭಾವ ಕಲ್ಪಿಸಿಕೊಂಡು ಬಯಕೆಯ ರುಚಿಯನು ತನುವಿನೊಂದಿಗೆ ಉಂಡು ಸುಖಿಸುತ್ತದೆ, ಭಾವ ಬಲಿಯುತ್ತದೆ ಸವೆಯುವುದಿಲ್ಲ. ತನು ಸೊರಗುತ್ತಾ ಹೋಗುತ್ತದೆ. ಆದರೆ ಮನ ಕಲ್ಪಿಸಿಕೊಂಡ ಭಾವ ಬಯಲಾಗಿ ಬತ್ತಲಾಗುವುದಿಲ್ಲ. ಮನಕ್ಕೆ ಸತ್ಯ ಗೋಚರವಾದರೆ ಮಾತ್ರ ಭಾವ ನಿರ್ಭಾವವಾಗುತ್ತದೆ. ಭಾವಿಸಿದ ಭಾವದ ಮೇಲೆ ಹೇಯ ಹುಟ್ಟುತ್ತದೆ.

ಉದಾ: ಮಣ್ಣು ನೋಡಿದ ಕಣ್ಣು ಮಣ್ಣನ್ನು ಮಣ್ಣೆ ಎಂದು ನಿರ್ಭಾವದಿಂದ ನೋಡುತ್ತದೆ. ತನುವಿನಲ್ಲಿ ಯಾವ ರಸಾಯನಿಕ ಕ್ರಿಯೆ ಉಂಟಾಗುವುದಿಲ್ಲ. ಮನ ಪ್ರವೇಶವಾಗಲಿಲ್ಲ. ಕಲಾವಿದ ಮಣ್ಣು ಹದಮಾಡಿ ಕೃಷ್ಣನನ್ನು ಮಾಡಿ, ಬಣ್ಣ ಬಳೆದರೆ, ಕಣ್ಣು ಕೃಷ್ಣನೆಂದು ನೋಡುತ್ತದೆ, ಕಣ್ಣಿನಲ್ಲಿರುವ ಮಣ್ಣಿನ ಜ್ಞಾನ ಸರಿದು ಮನ ಮತ್ತು ಭಾವ ಸೃಷ್ಟಿಯಾಯಿತು.

ಕ್ರಿಸ್ತನನ್ನು ಮಾಡಿದರೆ, ಕೃಷ್ಣನನ್ನು ನೋಡಿದ ಕಣ್ಣಿನಲ್ಲಿರುವ ಭಾವ ದುರ್ಭಾವವಾಗಿ ಮಾರ್ಪಾಡು ಹೊಂದಿತು. ಭಾವ ಒಳ್ಳೆಯದು; ದುರ್ಭಾವ ಕೆಟ್ಟದ್ದೆಂದು ಮನ ನಿರ್ಧರಿಸಿತು. ಮನಕ್ಕೆ ಹೀಗೆ ಭಾವ ದುರ್ಭಾವಗಳೆಂದು ವಿಂಗಡಿಸಿ ನಿರ್ಧರಿಸಲು ಬರುತ್ತದೆಯೇ ವಿನಹ ಅರಿವಿನಿಂದ ಬೊಂಬೆಯಲ್ಲಿರುವ ಮಣ್ಣು ನೋಡಿ ಮೊದಲಿನಂತೆ ನಿರ್ಭಾವದಿಂದ ಇರಲು ಬರುವುದಿಲ್ಲ.

ಅಪ್ಪಣ್ಣ ಶರಣರು ನಿಜ ಸುಖಿಗಳು. ಮಣ್ಣಿನಿಂದ ಕೃಷ್ಣನನ್ನು ಮಾಡಿದರೇನು? ಕ್ರಿಸ್ತನನ್ನು ಮಾಡಿದರೇನು? ಮಸೀದಿ ಚರ್ಚ್ ದೇವಸ್ಥಾನಗಳನ್ನು ಮಾಡಿದರೇನು ? ಅದು ಮಣ್ಣೇ ಆಗಿದೆ. ಮಣ್ಣನ್ನು ಮಣ್ಣನಂತೆ ನೋಡುವ ಶಕ್ತಿ ಕಣ್ಣಿಗೆ ಕರಗತವಾಗಿರುವುದರಿಂದ ಭಾವ ದುರ್ಭಾವಗಳು ಕಣ್ಣಿನಲ್ಲಿ ಸೃಷ್ಟಿಯಾಗುವುದಿಲ್ಲ. ಭಾವ ಒಳ್ಳೆಯದು. ದುರ್ಭಾವ ಕೆಟ್ಟದ್ದು ಎಂದು ಜನ ಹೇಳಬಹುದು, ಕೋರ್ಟ್ ತೀರ್ಪು ನೀಡಬಹುದು. ಶರಣ ಮಾತ್ರ ಭಾವ ಮತ್ತು ದುರ್ಭಾವಗಳನ್ನು ಒಂದು ನಾಣ್ಯದ ಎರಡು ಮುಖದಂತೆ ತಿಳಿಯುತ್ತಾನೆ. ನಿರ್ಭಾವದಿಂದ ನೋಡುತ್ತಾನೆ.

ಅಂಗದೊಳಗೆ ಜನ್ಮ ತಳೆದ ಭಾವ ದುರ್ಭಾವಗಳನ್ನು ಜ್ಞಾನಿಗಳ ಸಂಗಮಾಡಿ (ಸತ್ಸಂಗದೊಂದಿಗೆ) ಕಳೆದುಕೊಳ್ಳಬಹುದಾಗಿದೆ. ಶರಣರ ಸಂಗ ಮಾಡಲು ಮನಕ್ಕೆ ಬಯಕೆಯಾಗಬೇಕು ಅಷ್ಟೇ.

73

ಉದಯ, ಮಧ್ಯಾಹ್ನ, ಅಸ್ತಮಯ, ಕತ್ತಲೆ ಬೆಳಗು,
ದಿನ ವಾರ ಲಗ್ನ ತಿಥಿ ಮಾಸ ಸಂವತ್ಸರ ಹೋಗುತ್ತ ಬರುತ್ತಲಿವೆ.
ಇವ ನೋಡಿದವರೆಲ್ಲ ಇದರೊಳಗೆ ಹೋಗುತ್ತ ಬರುತ್ತ ಇದ್ದಾರೆ.
ಜಗಕ್ಕೆ ಇವೀಗ ಇಷ್ಟವಾಗಿಪ್ಪವು. ಎನ್ನ ದೇವಂಗೆ ಇವೊಂದೂ ಇಲ್ಲ.
ದಿನ ಕಾಲ ಯುಗಜುಗ ಪ್ರಳಯಕ್ಕೆ ಹೊರಗಾದ ಆ ದೇವನ,
ಅಂಗವಿಸಿ ಮುಟ್ಟಿ ಹಿಡಿದ ಕಾರಣ, ಎಮ್ಮ ಶರಣರು ಪ್ರಳಯಕ್ಕೆ ಹೊರಗಾದರು.
ಇದನರಿದು ಅಂತಪ್ಪ ಶರಣರ ಪಾದವ ನಂಬಿ ಕೆಟ್ಟು ಬಟ್ಟ ಬಯಲಾದೆನಯ್ಯಾ
ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಉದಯ ಮಧ್ಯಾಹ್ನ ಸಂಜೆ ಕತ್ತಲು ಬೆಳಕು ದಿನ ವಾರ ಲಗ್ನ ತಿಥಿ ಮಾಸ ಸಂವತ್ಸರಗಳು ಮನಕ್ಕೆ ಅರಿವಾದರೆ ಎಣಿಕೆಗೆ ಮಾತ್ರ ಸೀಮಿತವಾಗುತ್ತದೆ, ಅರಿವಾಗದಿದ್ದರೆ ತನುವಿಗೆ ಪ್ರಳಯ. ಇಡೀ ಜಗತ್ತಿಗೆ ಎಣಿಕೆಗಳು ಬಲು ಇಷ್ಟ. ಎಣಿಸಿ ಎಣಿಸಿ ಮನ ತನುವಿನ ಆಯುಷ್ಯವನ್ನು ವ್ಯರ್ಥ ಕಳೆಯುತ್ತದೆ.

ಅರಿವೇ ಗುರು. ಮನ ಅರಿವಿಗೆ ಹೋಗಿ ಆ ಅರಿವೇ ತಾನಾದರೆ, ಆ ಅರಿವಿಗೆ ಇವೊಂದೂ ಬೇಕಿಲ್ಲ. ಪ್ರಳಯದಿಂದ ತನು ಹೊರಗುಳಿಯುತ್ತದೆ.

ಅಂಗವನ್ನು ಆವರಿಸಿದ ಮನಕ್ಕೆ ತಿಳಿಯುವುದಿಲ್ಲ. ಅಂಗದಿಂದಲೇ ನಿರ್ಧರಿಸಿ ಬರೆಯಲ್ಪಟ್ಟ ದಿನವಹಿಯನ್ನು ಅಂಗವೇ ಆಚರಿಸಲು ಅಂಗವನ್ನು ಮನ ಪ್ರೇರೇಪಿಸುತ್ತದೆ. ಅಂಗದಲ್ಲಿಯೇ ಅಂಗವಿಸಿದ ಅರಿವಿಗೆ ಇದು ಅಜ್ಞಾನವೆಂದು ಗೊತ್ತು. ಆದರೂ ಅರಿವಿಗೆ ಹೋಗಿ ಆ ಅರಿವಿನಿಂದ ದಿನವಹಿಯನ್ನು ನೋಡಲು ಮನಕ್ಕೆ ಸಾಧ್ಯವಾಗುವುದಿಲ್ಲ.

ಶರಣರು ವಿಜ್ಞಾನಿಗಳು! ಮನವನ್ನು ಅಂಗವಿಸಿದ ಅರಿವಿಗೆ ಕಳುಹಿಸಿ, ಅರಿವಿನ ಸ್ನಾನ ಮಾಡಿಸಿ ಮನವನ್ನು ಘನಮನವನ್ನಾಗಿ ಮಾಡಿ ದಿನವಹಿ ನೋಡಿದಾಗ ದಿನ ಒಂದೇ ಆಗಿ ಕಾಣುತ್ತದೆ. ಹಗಲಿಲ್ಲ ಇರುಳಿಲ್ಲ; ಬರೀ ಬೆಳಕು!

ಸೂರ್ಯನ ಬೆಳಕಿನಿಂದಲೇ ಕತ್ತಲು ಹುಟ್ಟಿದೆ. ಸೂರ್ಯನ ಬೆಳಕಿನಿಂದಲೇ ಕತ್ತಲು ಕಳೆಯುತ್ತದೆ. ಕತ್ತಲು ಬೆಳಕೆಂಬುದು ಸೂರ್ಯ ಬೆಳಗುವ ಬೆಳಕಿನ ಆಟ. ಈ ಕತ್ತಲು ಬೆಳಕುಗಳನ್ನು ಬೆಳಗಿಂಗೆ ಬೆಳಕಾಗಿ ಬೆಳಗುವ ಆಟವೇ ಶರಣರ ಆಟ. ಬುದ್ಧ ಮಹಾವೀರ ಮುಂತಾದ ಸಂತರ ಆಟ. ಇವರು ಪ್ರಳಯಕ್ಕೆ ಹೊರಗಾದವರು. ಇಂತಹ ಜ್ಞಾನಿಗಳನು ಅರಿತು, ಅವರ ಪಾದವ ನಂಬಿ ಬಟ್ಟ ಬಯಲಾಗಬೇಕಿದೆ.

74

ಉದಯ, ಮಧ್ಯಾಹ್ನ, ಅಸ್ತಮಯವೆಂಬ ತ್ರಿಕಾಲದಲ್ಲಿ
ತ್ರಿವಿಧ ಪೂಜೆಯ ಮಾಡಬೇಕೆಂಬರು, ಈ ತ್ರಿವಿಧ ನೆಲೆಯನರಿಯರು.
ಲಿಂಗ ಲಿಂಗವೆಂದು ಲಿಂಗವನೆ ಅರ್ಚಿಸಿ,
ಲಿಂಗವನೆ ಪೂಜಿಸಿ, ಅಂಗ ಭಿನ್ನವಾಯಿತ್ತು .

ಆರಾರಿಗೆಂದರೆ, ಸ್ವರ್ಗ, ಮರ್ತ್ಯ, ಪಾತಾಳದವರೆಗೆ
ಮೂರು ಲೋಕವು ಸೆರೆ ಸೂರೆಹೋಯಿತ್ತು.
ಗುರುಲಿಂಗ ಜಂಗಮ ತ್ರಿವಿಧವು ಏಕವಾದ
ಭೇದವ ನಿಮ್ಮ ಶರಣರೆ ಬಲ್ಲರಲ್ಲದೆ,
ಈ ಮರಣಬಾಧೆಗೊಳಗಾದ ಮರ್ತ್ಯರೆತ್ತ ಬಲ್ಲರು,
ಬಸವ ಪ್ರಿಯ ಕೂಡಲಚೆನ್ನಬಸವಣ್ಣಾ ?

ಅಂಗದ ಮೇಲೆ ಕಟ್ಟಿಕೊಂಡ ಲಿಂಗವನ್ನು ಮುಂಜಾನೆ ಮಧ್ಯಾಹ್ನ ಸಂಜೆ ಮೂರೂ ವೇಳೆಗಳಲ್ಲಿ ಪೂಜೆ ಮಾಡಿ ಮಾಡಿ ಅಂಗ ಭಿನ್ನವಾಯಿತು. ಅಂಗದ ಆಯುಷ್ಯ ತೀರಿತು. ಅಂಗವನ್ನು ಆವರಿಸಿದ ಮನ ಅಂಗವೆಂದರೆ ಏನೆಂದು ಅರಿಯಲಿಲ್ಲ; ಅಂಗದಲ್ಲಿಯೇ ಸಂಗಮವಾದ (ಲಿಂಗ) ಅರಿವೆಂದರೇನೆಂದು ಅರಿಯಲಿಲ್ಲ. ಅಂಗದೊಂದಿಗೆ ಮಂಗದಂತಿರುವ ಮನವೂ ಭಿನ್ನವಾಯಿತು.

ದಿನವನ್ನು ಉದಯ ಮಧ್ನಾಹ್ನ, ಅಸ್ತಮಯವೆಂದು ಭಾಗಿಸಬಹುದು. ಮನಕ್ಕೆ ಈ ಮೂರೂ ಭಾಗದ ಬೆಳಗಿನ ಒಂದು ದಿನವನ್ನು ಅರಿವಿನಿಂದ ನೋಡಲು ಸಾಧ್ಯವಾಗುವುದಿಲ್ಲ. ಉದಯದಲ್ಲಿ ಸಾತ್ವಿಕನಾಗುತ್ತದೆ, ಮಧ್ಯಾಹ್ನದಲ್ಲಿ ರಾಜಸನಾಗುತ್ತದೆ, ಸಂಜೆ ತಾಮಸಿಗನಾಗುತ್ತದೆ, ರಾತ್ರಿ ಮಲಗಿ ಸ್ವಪ್ನ ಸುಷುಪ್ತಿ ಅವಸ್ಥೆಯನ್ನು ಕಂಡು ಇಹಲೋಕದ ಯಾತ್ರೆ ಮುಗಿಸುತ್ತದೆ.

ಬೆಳಗಿನಲ್ಲಿದ್ದ ಹೆಸರು ಆಸ್ತಿ ಶ್ರೀಮಂತಿಕೆ ಪದವಿ ಪಾಂಡಿತ್ಯ ಗಂಡ ಹೆಂಡತಿ ಮಕ್ಕಳು ಅಧಿಕಾರ ಸೇವೆ ಮತ್ತು ಪೀಠಗಳು ರಾತ್ರಿ ಅಂಗ ಮಲಗಿದಾಗ ಇರುವುದಿಲ್ಲ. ಅಷ್ಟೇಕೆ ತಾನು ಹೆಣ್ಣು ಗಂಡೋ ಎನ್ನುವ ಅರಿವು ಕೂಡಾ ಇರುವುದಿಲ್ಲ. ರಾತ್ರಿ ಕಂಡ ಸತ್ಯ ಹಗಲು ಕಾಣುವುದಿಲ್ಲ. ಮೂರು ವೇಳೆ ಲಿಂಗವನ್ನು ಪೂಜಿಸಿದರೂ ರಾತ್ರಿ ಅಂಗಕ್ಕೆ ಸಿಕ್ಕ ಸತ್ಯದ ಸುಖ ಹಗಲು ಸಿಗುವುದಿಲ್ಲ. ದಿನದ ಮೂರೂ ವೇಳೆ ಪೂಜಿಸಿದರೂ ಮನದಿಂದಾಗಿ ಅಂಗ ಕ್ಷಣಕ್ಷಣಕ್ಕೂ ಭಂಗಕ್ಕೊಳಗಾಗುತ್ತದೆ.

ಮನ ಅಂಗವನ್ನು ಪೂಜೆಗೆ ಹಚ್ಚುವುದೂ ಬಿಡುವುದಿಲ್ಲ. ಭಂಗಕ್ಕೆ ಒಳಪಡಿಸುವುದೂ ಬಿಡುವುದಿಲ್ಲ. ಪೂಜೆ ಎಂದರೇನೆಂದು ಮನ ಅರಿಯದೆ ಅಂಗ ಹಿಡಿದು ಅಂಗದ ಮೇಲೆ ಕಟ್ಟಿಕೊಂಡ ಲಿಂಗ ಪೂಜಿಸಿ ಪೂಜಿಸಿ ಅಂಗವನ್ನು ಭಿನ್ನಗೊಳಿಸುತ್ತದೆ.

ಅಜ್ಞಾನದ ಪೂಜೆಗೆ ಸ್ವರ್ಗ ಮರ್ತ್ಯ ಪಾತಾಳ ಲೋಕದ ಜನ ಸೆರೆಯಾದರು ಎಂದು ಅಪ್ಪಣ್ಣ ಶರಣರು ಸಾರಿದ್ದಾರೆ. ಇದು ಸತ್ಯ ಕೂಡಾ.

ಅಂಗದಲ್ಲಿ ಅರಿವು ಸಂಗಮವಾಗಿದೆ. ಆ ಅರಿವೆ ಗುರು. ಆ ಅರಿವೆ ಲಿಂಗ. ಆ ಅರಿವೆ ಜಂಗಮ. ಹಾಗೆಯೇ ಅಂಗವನ್ನು ಮನ ಆವರಿಸಿಕೊಂಡಿದೆ. ಆ ಮನದಿಂದಲೇ ಗುರು ಲಿಂಗ ಜಂಗಮರನ್ನು ಅಂಗ ಹಿಡಿದು ಪೂಜಿಸಬೇಕು.

ಅಂದರೆ ದಿನದ ಮೂರೂ ವೇಳೆ ಮನ ಅಂಗ ಹಿಡಿದು ಅರಿವಿನಿಂದ ನೋಡಬೇಕು, ಅರಿವಿನಿಂದ ಕೇಳಬೇಕು, ಅರಿವಿನಿಂದ ಮುಟ್ಟಬೇಕು, ಅರಿವಿನಿಂದ ಮೂಸಿಸಬೇಕು. ಅರಿವಿನಿಂದ ರುಚಿಸಬೇಕು. ಹೇಗೆ ಭೂಮಿಯ ಮೇಲೆ ಚೆಲ್ಲುವ ಸೂರ್ಯನ ಬೆಳಕಿಗೆ ಸಂಕಟವಿಲ್ಲವೊ ಹಾಗೆಯೆ ಕಣ್ಣಿನಿಂದ ಚೆಲ್ಲುವ ಅರಿವಿನ ಬೆಳಕಿಗೂ ಸಂಕಟವಿಲ್ಲ ಎಂದು ಮನಕ್ಕೆ ಮನವರಿಕೆಯಾಗಬೇಕು. ಇದು ಉದಯ ಮಧ್ಯಾಹ್ನ ಅಸ್ತಮಯ ವೆಂಬ ತ್ರಿಕಾಲದ ಪೂಜೆ.

75

ಉರಗನ ಫಣಾಮಣಿಯ ಬೆಳಗಿನಲ್ಲಿ ನಿಂದ ಪ್ರಸಾದಿ.
ಕರಿಯ ಕೊಂದು ಹರಿಯ ಬೆಳಗಿನೊಳಗೆ ನಿಂದ ಪ್ರಸಾದಿ.
ಶಿರದ ಮೇಲೆ ನಿಂದ ಗಂಗೆಯ ಬೆಳಗಿನಲ್ಲಿ ನಿಂದ ಪ್ರಸಾದಿ.
ಉರಮಧ್ಯದಲ್ಲಿಪ್ಪ ಪರಂಜ್ಯೋತಿಯ ಬೆಳಗಿನಲ್ಲಿ ನಿಂದ ಪ್ರಸಾದಿ.
ಪೂರ್ವ ಪಶ್ಚಿಮ ಏಕವಾದ ಬೆಳಗಿನಲ್ಲಿ ನಿಂದ ಪ್ರಸಾದಿ.
ಇಂತೀ ಘನವನೆಲ್ಲ ಒಳಕೊಂಡ ಮಹಾ ಬೆಳಗಿನಲ್ಲಿ ನಿಂದ ಪ್ರಸಾದಿ.
ಅಯ್ಯಾ ಚೆನ್ನಮಲ್ಲೇಶ್ವರಾ, ಆ ಪ್ರಸಾದಿಯ ಪ್ರಸಾದವ ಕೊಂಡು.
ನಾ ಉರಿಯುಂಡ ಕರ್ಪೂರದಂತಾದೆನಯ್ಯಾ,
ಬಸವ ಪ್ರಿಯ ಕೂಡಲಚೆನ್ನಬಸವಣ್ಣಾ.

ಮನ ಹಾವಿನಷ್ಟೇ ವಿಷಕಾರಿ; ಇಡೀ ಅಂಗವನ್ನು ಆವರಿಸಿಕೊಂಡಿದೆ. ಅದರ ಹಣೆಯಲ್ಲಿ ಬೆಳಕಿನ ಮಣಿಯಿದೆ. ಆ ಬೆಳಕಿನ ಮಣಿಯಿಂದಲೇ ಅಂಗ ಬೆಳಗಿ ಲಿಂಗಾಂಗವಾಗಿದೆ. ಅಂಗಕ್ಕೆ ಹಾವು ಭೂಷಣವಾಗಿ ಅಂಗ ನಾಗಭೂಷಣನಾಗಿದೆ. ನಾಗಾಭರಣವಾಗಿದೆ. ಆ ನಾಗಭೂಷಣನಿಗೆ ಹಾವಿನ ವಿಷವೇ ಪ್ರಸಾದವಾಗಿದೆ.

ಮನದಿಂದಾಗಿಯೇ ಅಂಗಕ್ಕೆ ಆನೆಯ ಮದ ಬಂದಿದೆ. ಆ ಮನದಿಂದಲೇ ಅಂಗದಲ್ಲಿ ಸಂಗಮವಾದ ಘನಲಿಂಗ ಪರಿಚಯವಾಗಬೇಕು. ಆಗ ಭ್ರಮೆ ಕಳೆದುಕೊಂಡ ಮನ ಬ್ರಹ್ಮನಾಗುತ್ತದೆ. ಮದ ತುಂಬಿದ ಕರಿಯಕೊಂದು ಹರಿಯ ಬೆಳಕಿನೊಳಗೆ ನಿಂದ ಅಂಗ ಲಿಂಗಾಂಗವಾಗುತ್ತದೆ, ಅಂಗದ ಮದವೇ ಅಂಗಕ್ಕೆ ಪ್ರಸಾದವಾಗುತ್ತದೆ.

ಶಿರದ ಮೇಲೆ ನಿಂದ ಗಂಗೆಯ ಬೆಳಗಿನಲ್ಲಿ ನಿಂದ ಪ್ರಸಾದಿ:

ಗಂಗೆಯ ಜಲಬಿಂದು ಗರ್ಭ ಹೊಕ್ಕು ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಚರ್ಮದ ಕವಚ ಹೊಂದಿ ಅಂಗವಾಗಿದೆ, ಈ ಅಂಗಕ್ಕೆ ಮನ ಆವರಿಸಿದೆ; ಅಂಗದ ಕಣಕಣದಲ್ಲಿ ಅರಿವೆಂಬ ಗಂಗಾಧರ ಗಂಗೆಯನ್ನು ಧರಿಸಿ ಆಕೆಯ ಬೆಳಗಿನಲ್ಲಿ ಮಹಾಪ್ರಸಾದಿಯಾಗಿ ನಿಂತಿದ್ದಾನೆ.

ಪರಂಜ್ಯೋತಿಯ ಬೆಳಗು ತಾನೆ, ಪೂರ್ವ ಪಶ್ಚಿಮ ಏಕಮಾಡಿದ ಬೆಳಗು ತಾನೆ, ಘನವೆಲ್ಲ ಒಳಕೊಂಡ ಮಹಾ ಬೆಳಗು ತಾನೆ. ಆ ಪ್ರಸಾದಿಯ ಪ್ರಸಾದವ ಕೊಂಡು ಉರಿಯುಂಡ ಕರ್ಪೂರದಂತಾದೆನಯ್ಯಾ ಎಂದಿದ್ದಾರೆ ಅಪ್ಪಣ್ಣ ಶರಣರು.

76

ಉರಿಯೊಳಗೆ ಉರಿ ಹುಟ್ಟಿ, ಶರಧಿಯಾಪೋಷಣವಾಯಿತ್ತು.
ಧರೆ ನಿಬ್ಬೆರಗಾಯಿತ್ತು, ಶರಧಿ ಬತ್ತಿತ್ತು, ಉರಿ ನಿಂದಿತ್ತು.
ವಾಯು ನಾಶವಾಯಿತ್ತು, ಆಕಾಶ ಬಯಲಾಯಿತ್ತು.
ಇದು ಕಾರಣ, ಆತ್ಮ ಕರ್ಪೂರದ ಗಿರಿಯಂತೆ ನಿಂದಿತ್ತು.
ಆತ್ಮ ಪರಂಜ್ಯೋತಿಯಂತೆ ಪ್ರಜ್ವಲಿಸಿತ್ತು.
ಇದರ ಭೇದವನರಿದು ಮೂರು ಮುಟ್ಟದೆ, ಆರು ತಟ್ಟದೆ,
ಬೇರೆ ಒಂದರ ಮೇಲೆ ನಿಂದು, ಸಂದಿಗೊಂದಿಯನೆಲ್ಲವ ಶೋಧಿಸಿ,
ಬೆಂದ ನುಲಿಯ ಹಾಗೆ ಅಂದವಾಗಿಪ್ಪುದನೊಂದು ನೋಡುವರೆ ಸೇವೆಗೆ ಬಾರದು.

ಇದರಂದವ ಲಿಂಗೈಕ್ಯರೆ ಬಲ್ಲರಲ್ಲದೆ.
ಸಂದೇಹ ಭ್ರಮೆಯೊಳು ಸಿಕ್ಕಿ ನೊಂದು ಬೆಂದು ಸಾವ ಹಂದಿಗಳೆತ್ತ ಬಲ್ಲರು.
ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ?

ಜಲಬಿಂದುವಿನಿಂದಾದ ತನು. ಜಲ ಉರಿಯುವುದಿಲ್ಲ; ಆದರೆ ಜಲಜನಕದ ಉರಿಯುವ ಗುಣ, ಆಮ್ಲಜನಕದ ಉರಿಸುವ ಗುಣದ ಕಣಗಳೆರಡು ಬೆರೆತು ತಣ್ಣನೆಯ ಜಲವಾಗಿದೆ. ಜಲಮಯ ತನುವಿಗೆ ಆಪೋಷಣವಾಗಿದೆ. ಇವೆರಡರ ಸಂಗಮದಿಂದಾದ ತನು ನಿಬ್ಬೆರಗಾಗಿದೆ. ಇವೆರಡನ್ನು ಹಿಡಿದಿಟ್ಟು ಜಲಮಾಡಿ ಧರೆಗೆ ಕಳುಹಿಸಿದ ಆಕಾಶ ಬಟ್ಟ ಬಯಲಾಗಿದೆ.

ಉರಿ ಕರ್ಪೂರದೊಳಗೆ ಅಡಗಿ ಉರಿಯುಂಡ ಕರ್ಪೂರದಂತೆ, ಜಲಜನಕ ಕಾಣುವುದಿಲ್ಲ; ವಾಯುವೂ ಕಾಣುವುದಿಲ್ಲ. ಆಕಾಶ ಇವೆರಡನ್ನು ಬಂಧಿಸಿ ಕಾಣುವ ಜಲವನ್ನಾಗಿ ಮಾಡಿದೆ. ಅಂತೆಯೇ ಉರಿ ವಾಯುವು ಅಡಗಿ ಕರ್ಪೂರವಾಯಿತು. ಕರ್ಪೂರಕ್ಕೆ ಉರಿತಾಗಲು ಪರಂಜ್ಯೋತಿಯಂತೆ ಬೆಳಗಿ ಕರ್ಪೂರ ಉರಿಗಳೆರಡೂ ಇಲ್ಲವಾಯಿತ್ತು. ಆತ್ಮ ಕರ್ಪೂರದ ಗಿರಿಯಂತೆ ನಿಂತಿತ್ತು. ಪರಂಜ್ಯೋತಿಯಂತೆ ಪ್ರಜ್ವಲಿಸಿತ್ತು.

ಇದರ ಭೇದವನು ಅರಿದು ಮೂರು ಮುಟ್ಟದೆ ಆರು ತಟ್ಟದೆ ಬಯಲಲಿ ನಿಂದು ಬಯಲಾಗಬೇಕು. ತನು, ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದ ಬಯಲ ಬೀಜವಿದು.

ಬಯಲ ಜಲಬಿಂದುವೇ ಗರ್ಭದಲ್ಲಿ ಹೊಕ್ಕು ಅರಿವಿನ ಬೀಜವಾಗಿ ಅಂಕುರಿಸಿ ಮೊಳಕೆ ಹೊಡೆದು ಜಲಬಿಂದುವೇ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸುಗಳ ರೂಪ ಹೊಂದಿ, ಅದು ಚೆಲ್ಲದಂತೆ ಕಾಂತಿಯುಳ್ಳ ಚರ್ಮದ ಚೀಲ ಹೊಲಿದು; ತನು ರೂಪ ತಾಳಿ, ಬಯಲ ಅರಿವಿನ ಬೀಜ ಅರಿವಿನ ಸಸಿಯಾಗಿ ಹೊರಬಂದಿದೆ. ಜ್ಞಾನದ ವೃಕ್ಷವಾಗಿ ಜ್ಞಾನದ ಸಿಹಿ ಫಲಗಳನ್ನು ಬಿಟ್ಟಿದೆ, ಅರಿವಿನಿಂದ ನೋಡಿದರೆ ತನು ಬಯಲು; ರೂಪವಾಗಿ ಕಾಣುತ್ತದೆ; ಆದರೆ ಬೆಂದ ನುಲಿ! ಹಿಡಿಯಲು ಹೋದರೆ ಬರೀ ಬೂದಿ !

ತನುವನ್ನು ಆವರಿಸಿದ ಮನದಿಂದಾಗಿ ತನು ಭ್ರಮೆಗೆ ಒಳಗಾಗಿದೆ. ಸಂದೇಹಕ್ಕೆ ಒಳಗಾದ ಮನ ತನುವಿನ ಅರಿವಿನ ಅಂದವನು ಅರಿಯಲು ಸಾಧ್ಯವಾಗುತ್ತಿಲ್ಲ. ಹಂದಿಯಂತೆ ನೊಂದು ಬೆಂದು ತನುವಿನೊಂದಿಗೆ ಸಾಯುತ್ತದೆ. ಅರಿತರೆ ಅರಿವಿನ ಬಸವಪ್ರಿಯ ಕೂಡಲ ಚೆನ್ನಬಸವಣ್ಣನನ್ನು ಅಂಗದಲ್ಲಿಯೇ ಕೂಡಿ, ಅಂಗವಿದ್ದಾಗಲೆ ಅರಿವಿನ ಮಹಾಲಿಂಗವಾಗುತ್ತದೆ.

77

ಊರ ಮೇಲೆ ಊರ ಕಂಡೆ, ನೀರ ಮೇಲೆ ನೀರ ಕಂಡೆ,
ಮರನ ಮೇಲೆ ಮರನ ಕಂಡೆ. ಗಿರಿಯ ಮೇಲೆ ಗಿರಿಯ ಕಂಡೆ.
ಉರಿಯ ಮೇಲೆ ಉರಿಯ ಕಂಡೆ. ಈ ಭಾರವ ತಾಳಲಾರದೆ,
ಆ ಉರಿಯೆ ಎದ್ದು ಊರ ಬೆಂದಿತ್ತು, ನೀರು ಬೆಂದಿತ್ತು,
ಮರನು ಬೆಂದಿತ್ತು, ಗಿರಿಯು ಬೆಂದಿತ್ತು.
ಆ ಉರಿ ಉಳಿಯಿತ್ತು, ಆ ಉರಿಯನೆರೆದು ಸಿರಿಯ ಸೆಳೆದು

ಪರಮಸುಖ ಪರಿಣಾಮದೊಳೋಲಾಡುತ್ತ,
ನಿಮ್ಮ ಬರವನೆ ಹಾರುತಿರ್ದೆನ್ಯಯಾ,
ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ.

ಊರು ಹುಟ್ಟಿದ್ದು ಬಯಲ ಬೀಜದಿಂದಲೇ. ನೀರು ಹುಟ್ಟಿದ್ದು ಬಯಲ ಬೀಜದಿಂದಲೇ. ಮರ ಹುಟ್ಟಿದ್ದು ಬಯಲ ಬೀಜದಿಂದಲೇ. ಗಿರಿ ಹುಟ್ಟಿದ್ದು ಬಯಲ ಬೀಜದಿಂದಲೇ. ಉರಿ ಹುಟ್ಟಿದ್ದು ಬಯಲ ಬೀಜದಿಂದಲೇ.

ಆಕಾಶದೆತ್ತರಕ್ಕೆ ಹಾರಿ ಭೂಮಿ ನೋಡಿದಾಗ, ಭೂಮಿ ಬಯಲಲ್ಲಿ ತೇಲುವ ಚೆಂಡಿನಂತೆ ಕಾಣುತ್ತದೆ. ಬಯಲ ಬೀಜದಿಂದ ಹುಟ್ಟಿದ ಊರು; ಆ ಊರ ಮೇಲೊಂದು ಬಯಲೂರು! ಈ ಭಾಗದ ಮೇಲೊಂದು ಭಾರವ ತಾಳಲಾರದೆ ಉರಿಯೆದ್ದು ಊರನು, ನೀರನು, ಮರವನು, ಗಿರಿಯನು ಬೆಂದಿತ್ತು. ಆ ಉರಿಯು ಮಾತ್ರ ಉಳಿದಿತ್ತು; ಆ ಉರಿಯ ಅರಿವಿನ ಸಿರಿ ಬೆಳಕು ಮಾತ್ರ ಉಳಿದಿತ್ತು.

ಅರಿವಿನ ಉರಿಯ ಸಿರಿಯ ಬೆಳಕ ಸೆಳೆದು ಪರಮ ಸುಖ ಪರಿಣಾಮದಲಿ ಓಲಾಡುತ್ತ ಅರಿವಿನ ಬರುವಿಕೆಗಾಗಿ ಹಾರುತ್ತಿದ್ದೆನಯ್ಯಾ ಬಸವ ಪ್ರಿಯ ಕೂಡಲಚೆನ್ನ ಬಸವಣ್ಣಾ ಎಂದು ಸಾರಿ ಅರಿವಿನ ಉರಿಗೆ ಹೆಸರನಿತ್ತಿದ್ದಾರೆ.

78

ಎಡಬಲವೆಂದೇನೊ ನಿಮ್ಮ ಅಡಿಗಳನರಿದವಂಗೆ?
ಕಡೆ ನಡುವೆಂದೇನೊ ಮೃಡನ ಹಾಡುವಂಗೆ?
ಕುಲಛಲವೆಂದೇನೊ ಮನದ ಹೊಲೆಯ ಕಳೆದವಂಗೆ?
ತಲೆಕಾಲೆಂದೇನೂ ಮಾಯೆಯ ಬಲೆಯ ನುಸುಳಿದವಂಗೆ?
ಕಲಿಯುಗದ ಕತ್ತಲೆಯ ದಾಟಿದವಂಗೆ, ನಿಮ್ಮ ನೆಲೆಯನರಿದ ಶರಣಂಗೆ
ಇನ್ನು ಸ್ಥಲ ನೆಲೆ ಆವುದುಂಟು ಹೇಳಾ ?
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ?

ಅಂಗದಲ್ಲಿ ಅರಿವು ಸಂಗಮವಾಗಿದೆ. ಅಂಗವನ್ನು ಮನ ಆವರಿಸಿದೆ. ಅಂಗದಲ್ಲಿಯೇ ಸಂಗಮವಾದ ಅರಿವಿನ ಅಡಿಗಳಿಗೆ ಮನ ಎರಗಿದಾಗ ಆ ಮನ ಬರೀ ಮನವಲ್ಲ; ಅದು ಘನಮನ! ಘನತನು! ಘನವಾದ ಅರಿವು. ಈ ಮೂರೂ ಸಂಗಮಗೊಂಡ ತನು ಮೃಡನ ತನು. ಅದಕ್ಕೆ ಕುಲಛಲವಿಲ್ಲ; ಹೊಲೆ ಇಲ್ಲವೇ ಇಲ್ಲ; ತಲೆ ಕಾಲು ಎನ್ನುವ ಭೇದವೂ ಇಲ್ಲ.

ಮಾಯೆಯ ಬಲೆಯ ಹರಿದು ಕಲಿಯುಗದ ಕತ್ತಲೆಯನು ಅರಿವಿನ ಬೆಳಕಿನಿಂದ ದಾಟಿದೆ. ಮನ ಅರಿವಿನ ನೆಲೆಯನು ಅರಿದು ಆ ಅರಿವಿಗೆ ಶರಣು ಹೋಗಿದೆ, ಅರಿವೇ ಸಂಗಮವಾದ ಅಂಗದಲ್ಲಿ ಸ್ಥಲವನು ಹುಡುಕುವುದಾದರೂ ಎಂತು? ಸ್ಥಲವೆನ್ನೆ ನಿಃಸ್ಥಲವೆನ್ನೆ ಎಂದು ಹಾಡುತ್ತ ಮನ ಘನ ಮನವಾಗಿ ಅರಿವಿನಲ್ಲಿ ಲೀನವಾಗಿದೆ. ಕಮಲದ ಪರಿಮಳವನುಣ್ಣುತ್ತ ದುಂಬಿ ಮೈಮರೆತು ಕಮಲದಲ್ಲಿ ಲೀನವಾದಂತೆ. ಆ ಪಕಳೆಗಳಲ್ಲಿ ಬಂಧಿಯಾಗಿ ಕಮಲ ಅದರ ಪರಿಮಳವೂ

ತಾನೇ ಆದಂತೆ.

ಅರಿವಿನಿಂದ ಹುಡುಕಿದರೆ ಕುಲ ಯಾವುದು ಎಂದು ಅಂಗದಲ್ಲಿ ದೊರೆಯುವುದೇ ಇಲ್ಲ. ಅಂಗ ಯಾವ ದೇಶದ್ದಾದರೇನು, ಯಾವ ಭಾಷೆಯಾದ್ದಾದರೇನು? ಅದು ಹೆಣ್ಣಾದರೇನು, ಗಂಡಾದರೇನು? ಅಂಗದ ಕಣ್ಣುಗಳಿಗೆ ಕುಲವಿಲ್ಲ. ಅದು ಹೆಣ್ಣೂ ಅಲ್ಲ, ಗಂಡೂ ಅಲ್ಲ. ಕಿವಿ ಮೂಗು ನಾಲಿಗೆ ಚರ್ಮಕ್ಕೆ ಕುಲವಿಲ್ಲ. ನೋಟ, ಸ್ಪರ್ಶ, ರುಚಿ, ಶಬ್ದ, ವಾಸನೆಗಳಲ್ಲಿ ವ್ಯತ್ಯಾಸವಿಲ್ಲ. ಅಂದಮೇಲೆ ಅಂಗವನ್ನು ಆವರಿಸಿದ ಮನ ಕುಲಛಲವನ್ನು ಹೇರಿಕೊಂಡು ಅಜ್ಞಾನದ ಬೆಂಕಿಯಲ್ಲಿ ಬೆಂದು ತನುವನ್ನೂ ಸಂಕಟಕ್ಕೆ ಒಡ್ಡಿದೆ. ಆವರಿಸಿದ ಮನ ಸರಿದು, ಅರಿವಿನ ಅಡಿಗಳಿಗೆ ಎರಗಿದಾಗ ಕೂಡಲೇ ಘನಮನವಾಗಿ ಸಕಲ ಅಜ್ಞಾನಗಳನ್ನು ಕಳೆದುಕೊಳ್ಳುತ್ತದೆ.

79

ಎಮ್ಮ ಶರಣರು ಗುರುಸ್ಥಲ ನಾಸ್ತಿಯಾಯಿತ್ತೆಂಬರು,
ಅದೇನು ಕಾರಣವೆಂದರೆ ತಮ್ಮ ಗುಣ ಅವಗುಣವಿಲ್ಲವಾಗಿ.
ಲಿಂಗಸ್ಥಲ ನಾಸ್ತಿಯಾಯಿತ್ತೆಂಬರು, ಅಂಗಗುಣವಳಿಯಿತ್ತಾಗಿ.
ಜಂಗಮಸ್ಥಲ ನಾಸ್ತಿಯಾಯಿತ್ತೆಂಬರು, ಅದೇನು ಕಾರಣ?
ಭಾವ ಬಯಲಾಯಿತ್ತಾಗಿ.
ಪ್ರಸಾದಿ ಸ್ಥಲ ನಾಸ್ತಿಯಾಯಿತ್ತೆಂಬರು, ಪರವು ತಮ್ಮಲ್ಲಿ ನಿಂದಕಾರಣ.
ಇಂತೀ ಸರ್ವಾವಧಾನಿಗಳೆಲ್ಲರು ನಮ್ಮ ಶರಣರು.
ಇಂತು ಸರ್ವಾಚಾರ ಸಂಪನ್ನರಯ್ಯಾ ನಮ್ಮ ಶರಣರು.
ಇಂತು ಸರ್ವಾಂಗಲಿಂಗಿಗಳಯ್ಯ ನಮ್ಮ ಶರಣರು.
ಇಂತಪ್ಪ ಶರಣಸನ್ನಹಿತ ಚೆನ್ನಮಲ್ಲೇಶ್ವರನ ಪಾದವ ನಂಬಿದ ಕಾರಣ,
ನಾ ಹೋದ ಹಾದಿಯನಾರೂ ಅರಿಯರಯ್ಯಾ.
ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ.

ಮನಕ್ಕೆ ಅರಿವಾಗಲೆಂದು, ಶ್ರೀಗುರು ಗುರುಸ್ಥಲ, ಲಿಂಗಸ್ಥಲ, ಜಂಗಮಸ್ಥಲ, ಪ್ರಸಾದಿಸ್ಥಲವನ್ನು ತೋರಿದ. ಮನಕ್ಕೆ ಅರಿವಾದ ಮೇಲೆ ಆ ಅರಿವಿಗೆ ಶರಣು ಹೋಗಿ ಶರಣನಾಯಿತು. ಗುರುವಿನಲ್ಲಿ ಗುಣವನೆಣಿಸಲಿಲ್ಲ. ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರು ದೇವನಿಗೆ ಶರಣು ಹೋಗಿ ಮನದ ಗುಣಾವಗುಣಗಳನ್ನು ಕಳೆದುಕೊಂಡು ನಿರ್ಗುಣಿಯಾಯಿತು. ಸರ್ವಾಂಗವೇ ಅರಿವೆಂಬ ಗುರುವಾಗಿ ಗುರುಸ್ಥಲ ನಾಸ್ತಿಯಾಯಿತು.

ಅರಿವಿನಿಂದ ನೋಡಿದಾಗ ಅಂಗದ ಮೇಲೆ ಕಟ್ಟಿಕೊಂಡ ಲಿಂಗ ಲಿಂಗವಲ್ಲ. ಸರ್ವಾಂಗವೇ ಲಿಂಗಾಂಗವಾಗಿ ಲಿಂಗಸ್ಥಲ ನಾಸ್ತಿಯಾಯಿತು. ಅಂಗದ ಮೇಲೆ ಕಟ್ಟಿಕೊಂಡ ಲಿಂಗದ ಭಾವ ಬಯಲಾಯಿತು.

ಊಟ ಮಾತ್ರ ಪ್ರಸಾದವಲ್ಲ. ನೋಡುವ ದೃಶ್ಯ ಕಣ್ಣಿಗೆ ಪ್ರಸಾದವಾಗಿ, ಕೇಳುವ ಶಬ್ದ ಕಿವಿಗೆ ಪ್ರಸಾದವಾಗಿ, ಸ್ಪರ್ಶಿಸಿದ ವಸ್ತು ಚರ್ಮಕ್ಕೆ ಪ್ರಸಾದವಾಗಿ, ಮೂಸಿಸಿದ ಸುಗಂಧ ದುರ್ಗಂಧಗಳು ಮೂಗಿಗೆ ಅರಿವಿನ ಪರಿಮಳವಾಗಿ, ರುಚಿಸಿದ ಅರುಚಿ-ರುಚಿ ಪದಾರ್ಥವೆಲ್ಲ ನಾಲಗೆಗೆ ಪ್ರಸಾದವಾಗಿ

ಪ್ರಸಾದಿ ಸ್ಥಲವೆನ್ನುವ ಬೋಧೆ ನಾಸ್ತಿಯಾಯಿತು, ಹೀಗೆ ಸರ್ವಾಂಗವೇ ಸರ್ವಾಚಾರ ಸಂಪನ್ನವಾಯಿತು. ಮನ ಅರಿವಿಗೆ ಶರಣು ಹೊಕ್ಕು ಅಂಗವೇ ಸರ್ವಾಂಗ ಲಿಂಗಿಯಾಯಿತು.

ಚೆನ್ನಮಲ್ಲೇಶ್ವರನೆಂಬ ಅರಿವಿನ ಪಾದವನ್ನು ಮನ ನಂಬಿದ ಕಾರಣ ಮನ ಹೋಗಿ ಘನಮನವಾಯಿತು. ನಾನು ಎಂಬ ಅಹಂಕಾರಿ ಮನ ಅರಿವಿಗೆ ಹೋಗುವ ಹಾದಿಯನು ಯಾರೂ ಅರಿಯರಯ್ಯ ಬಸವಪ್ರಿಯ ಕೂಡಲಚೆನ್ನಬಸವಣ್ಣಾ ಎಂದು ಅಪ್ಪಣ್ಣ ಶರಣರು ಅರಿವಿನ ಹಾಡ ಹಾಡಿದ್ದಾರೆ.

80

ಒಂದು ಹುತ್ತಕ್ಕೆ ಒಂಬತ್ತು ಬಾಯಿ,
ಅಲ್ಲಿಪ್ಪ ಸರ್ಪನೊಂದೆ ತಪ್ಪದೆ ಹತ್ತು ಬಾಯಲು ತಲೆಯ ಒಡೆವುದು.
ಅಂಜಿ ನೋಡಿದವರಿಗೆ ಸರ್ಪನಾಗಿಪ್ಪುದು.
ಅಂಜದೆ ನೋಡಿದವರಿಗೆ ಒಂದೆ ಸರ್ಪನಾಗಿರುವುದು.
ಇದು ಕಾರಣವಾಗಿ,
ಸಂಜೆ ಮುಂಜಾನೆ ಎಂಬ ಎರಡಳಿದ ಶರಣಂಗೆ ಒಂದಲ್ಲದೆ ಎರಡುಂಟೆ?
ಮೂರು ಲಿಂಗ, ಆರು ಲಿಂಗ, ಮೂವತ್ತಾರು ಲಿಂಗ,
ಬೇರೆ ಇನ್ನೂರು ಹದಿನಾರು ಲಿಂಗ ಉಂಟೆಂದು
ಸಂತೆಯೊಳಗೆ ಕುಳಿತುಕೊಂಡು ಸಾರುತಿಪ್ಪರು.
ಇದ ನಾನರಿಯೆ, ನಾನರಿಯೆ.
ಹೇಳುವುದಕ್ಕೆ ಎನ್ನ ದೂರ ಕೇಳಯ್ಯಾ,
ಬಸವಪ್ರಿಯ ಕೂಡಲ ಚೆನ್ನ ಬಸವಣ್ಣಾ.

ತನುವೆಂಬುದು ಒಂದು ಹುತ್ತ. ಅದಕ್ಕೆ ಕಣ್ಣುಗಳೆರಡು, ಕಿವಿಗಳೆರಡು, ಮೂಗಿನ ಹೊಳ್ಳೆಗಳೆರಡು, ಬಾಯಿ ಒಂದು, ಗುದದ್ವಾರ ಒಂದು, ಮೂತ್ರದ್ವಾರ ಒಂದು ಹೀಗೆ ತನುವೆಂಬ ಹುತ್ತಕ್ಕೆ ಒಂಬತ್ತು ಬಾಯಿ.

ಒಂಬತ್ತು ಬಾಯಿ ಉಳ್ಳ ತನುವನ್ನು ಮನವೆಂಬ ಸರ್ಪ ಆವರಿಸಿಕೊಂಡಿದೆ. ತನಗೆ ಆನಂದವಾದ ದ್ವಾರಗಳ ಮೂಲಕ ಹರಿದಾಡಿ ಬೇಕಾದ ಆಹಾರವನ್ನು ತನು ಹಿಡಿದು ಕಚ್ಚಿ ತಿನ್ನುತ್ತದೆ. ತನುವಿಗೆ ಮನದ ವಿಷ ಚೆಲ್ಲಿ ಇಡೀ ತನುವನ್ನು ಸಂಕಟಕ್ಕೆ ಒಡ್ಡುತ್ತದೆ.

ಸರ್ಪ ಕಣ್ಣಿನ ಮೂಲಕ ದೋಷದಿಂದ ನೋಡಿ ಅದರ ವಿಷವನ್ನು ತನುವಿಗೆ ಚೆಲ್ಲುತ್ತದೆ. ಕಿವಿಯ ಮೂಲಕ ಕೇಳಿ ಚರ್ಮದ ಮೂಲಕ ಮುಟ್ಟಿ ನಾಲಿಗೆ ಮೂಲಕ ರುಚಿಸಿ ಆಶ್ರಯ ನೀಡಿದ ಇಡೀ ತನುವೆಂಬ ಹುತ್ತವನ್ನೇ ಹಾಳುಗೆಡುವುತ್ತದೆ.

ತಪ್ಪದೆ ಹತ್ತು ಬಾಯಲು ತಲೆಯ ಒಡೆವುದು:

ತನುವೆಂಬ ಹುತ್ತದ ಹತ್ತನೆ ಬಾಯಿಯೇ ಅರಿವಿನ ಬಾಯಿ. ಇಲ್ಲಿ ಅರಿವೆಂಬ ಗುರುದೇವನು ವಾಸಮಾಡಿದ್ದಾನೆ. ಮನವೆಂಬ ಹಾವು ಈ ಬಾಯಲು ಪ್ರವೇಶ ಮಾಡಿದರೆ

ಸಾಕು ಅದರ ನೆತ್ತಿ ಹೊಡೆದು ಸರ್ಪ ತನ್ನ ವಿಷವೆಲ್ಲ ಕಕ್ಕುವುದು. ತನುವಿನ ಬಾಯಲಿರುವ ಅರಿವಿನ ಅಮೃತವನುಂಡು ತನುವಿನ ಕೊರಳಿಗೆ ಭೂಷಣವಾಗುವುದು. ಆಗ ತನು ನಾಗಭೂಷಣ, ನಾಗಾಭರಣನೆಂದು ಸರ್ಪಭೂಷಣನೆಂದು ಕರೆಯಿಸಿಕೊಳ್ಳುವುದು.

ಅಂಜಿ ನೋಡಿದ ಮನದ ತನುವಿಗೆ ಸರ್ಪ. ಅಂಜದೆ ಅರಿವಿನಿಂದ ನೋಡಿದ ತನುವಿಗೆ ಆಭರಣ. ಅರಿವಿನ ತನುವದು ಸದಾ ಸತ್ಯ. ಶಿವಮಯ. ಸುಂದರ. ಅದಕ್ಕೆ ಸಂಜೆ ಮುಂಜಾನೆಗಳಿಲ್ಲ. ಮೂರು ಲಿಂಗ, ಆರುಲಿಂಗ, ಮೂವತ್ತಾರು ಲಿಂಗ, ಇನ್ನೂರಾ ಹದಿನಾರು ಲಿಂಗವೆಂದು ಇರುವ ಅರಿವಿನ ಒಂದೇ ಲಿಂಗವನ್ನು ಗುಣಿಸಿ ಸೀಳಿ ನೋಡುವುದಿಲ್ಲ. ಹೀಗೆಂದು ತನು ಸಂತೆಯಲ್ಲಿ ಕುಳಿತು ಪ್ರವಚನ ಮಾಡಿ ವ್ಯವಹರಿಸವುದಿಲ್ಲ.

ಇಂತಹ ಅವಿವೇಕದ ಮಾತನ್ನು, ಶಾಸ್ತ್ರವನ್ನು ನಾನು ಅರಿಯೆ ತಂದೆ ಎನ್ನ ದೂರನ್ನು ಮನ್ನಿಸಿ ವಿವೇಕವನ್ನು ದಯಪಾಲಿಸು ಎಂದು ಅರಿವೆಂಬ ಗುರುದೇವನಿಗೆ ಮೊರೆ ಹೋಗುವ ಸೂತ್ರವನ್ನು ಅಪ್ಪಣ್ಣ ಶರಣರು ಸಕಲ ತನುಗಳಿಗೆ ಕರುಣಿಸಿದ್ದಾರೆ.

81

ಒಳಗೆ ತೊಳೆದು, ಹೊರಗೆ ಮೆರೆದ ಪ್ರಸಾದಿ.
ಕಳೆ ಮೊಳೆಯನೊಂದು ಮಾಡಿದ ಪ್ರಸಾದಿ.
ಅಳಿಯ ಬಣ್ಣದ ಮೇಲಿದ್ದ ಅಮೃತವನುಂಡ ಪ್ರಸಾದಿ.
ಕಳೆಯ ಬೆಳಗಿನ ಸುಳುಹಿನ ಸೂಕ್ಷ್ಮದಲ್ಲಿನಿಂದ ಪ್ರಸಾದಿ.
ಇಂತಪ್ಪ ಪ್ರಸಾದಿಯ ಒಕ್ಕುಮಿಕ್ಕಿದ ಕೊಂಡ ಕಾರಣದಿಂದ
ನಾನೆತ್ತ ಹೋದೆನೆಂದರಿಯೆನಯ್ಯಾ.
ಬಸವ ಪ್ರಿಯ ಕೂಡಲಚೆನ್ನಬಸವಣ್ಣಾ ನೀವೆ ಬಲ್ಲಿರಿ.

ತನು ಅಜ್ಞಾನಿ ಎಂದು ಕರೆಯಿಸಿಕೊಳ್ಳುವುದು ಮನದಿಂದಲೇ. ತನು ಜ್ಞಾನಿ ಎಂದು ಕರೆಯಿಸಿಕೊಳ್ಳುವುದು ಮನದಿಂದಲೇ. ಇಂತಹ ಮನದಿಂದಾಗಿ ತನು ಕೊಳೆಯಾಗುತ್ತದೆ. ಈ ಮನದಿಂದಲೇ. ತನುವಿನಲ್ಲಿ ತನ್ಮಯವಾದ ಅರಿವಿನ ಅಮೃತ ಕುಂಡದಲ್ಲಿ ಧುಮುಕಿ ಮನದ ಕೊಳೆ ತೊಳೆದುಕೊಂಡು ಹೊರಗೆ ನೋಡಿ ಮೆರೆಯಬೇಕು. ಆಗ ಹಿಂದೆ ತನುವಿಗೆ ಕಂಡ ಕಳೆಯೇ ಅರಿವಿನ ಮೊಳಕೆಯೊಡೆದು ಅಮೃತದ ಫಲ ಬಿಡುವುದು. ಕಳೆ ಪ್ರಸಾದವಾಗಿ, ಕಳೆ ಮೊಳೆ ಒಂದೇಯಾಗಿ ಕಾಣುವುದು.

ಅಳಿಯ ಅಜ್ಞಾನದ ಬಣ್ಣ ಬೆಳಗಿ, ಬೆಳಗಿನ ಅಮೃತವನುಂಡ ಪ್ರಸಾದಿ, ಕಳೆಯ ಕಿತ್ತಿ ಜ್ಞಾನದ ಬೆಳೆಯ ಬೆಳಗಿನ ಸುಳುಹಿನ ಸೂಕ್ಷ್ಮದಲ್ಲಿನಿಂದು ಆ ಪ್ರಸಾದವನೇ ಉಂಡು ಶರಣ ಮಹಾಪ್ರಸಾದಿಯಾದ. ಇಂತ ಪ್ರಸಾದಿಯ ಒಕ್ಕು ಮಿಕ್ಕಿದ ಕೊಂಡ ಕಾರಣದಿಂದ ನಾನೆತ್ತ ಹೋದೆನೆಂದರಿಯೆನಯ್ಯಾ ಎಂದು ಅಪ್ಪಣ್ಣ ಶರಣರು ಹಾಡಿದ್ದಾರೆ.

ಬಸವ ಪ್ರಿಯ ಕೂಡಲಚೆನ್ನಬಸವಣ್ಣಾ ಇದನ್ನು ನಿವೇ ಬಲ್ಲಿರಿ. ಎಂದು ಕೂಡಾ ಹೇಳಿದ್ದಾರೆ.

ಅರಿವಿಗೆ ಹೋಗುವ ಮಾತನ್ನು ಸುಲುಭವಾಗಿ ತಿಳಿಯುವುದಕ್ಕೆ ಮನ ತನುವಿಗೆ ಆಸ್ಪದ ಕೊಡುವುದಿಲ್ಲ. ಬಯಕೆಯಾದ ಮನ ಮಾತ್ರ ತನುವನ್ನು ಶರಣರಿದ್ದ ಜಾಗಕ್ಕೆ ಕರೆದುಕೊಂಡು

ಹೋಗುತ್ತದೆ. ಅವರನ್ನು ಹುಡುಕಿ ಅವರೊಂದಿಗೆ ಸಂಗ ಮಾಡಲು ಹಚ್ಚುತ್ತದೆ. ಸದಾ ಅವರೊಂದಿಗೆ ಇರಲು ತವಕಪಡುತ್ತದೆ. ಶರಣರು ದೊರೆಯದಿದ್ದರೆ ಅವರಿಗಾಗಿ ಹಗಲಿರುಳು ಹಂಬಲಿಸುತ್ತದೆ. ಇಂತಹ ಮನಗಳಿಗೆ ಮಾತ್ರ ಈ ಸೂತ್ರ ವೇದ್ಯವಾಗುತ್ತದೆ. ಉಳಿದ ತನುಗಳಿಗೆ ಶರಣರ ಈ ಸೂತ್ರ ಉದಾಸೀನ. ಅದಕ್ಕಾಗಿ ಅಪ್ಪಣ್ಣ ಶರಣರು ನೀವೇ ಬಲ್ಲಿರಿ ಎಂದು ಹೇಳಿದ್ದಾರೆ.

82

ಒಳಹೊರಗೆಂಬೆರಡು ಬಟ್ಟೆಗಳೊಳು ಸುಳಿದು ಸೂಸುವ ಬೆಳಗನೆ ಕಂಡು,
ತಳುವಿಲ್ಲದೆ ಮನವನೆ ನೋಡಿ, ಆ ಬೆಳಗಿನೊಳ್ಬೆರೆದರೆ,
ಬಸವ ಪ್ರಿಯ ಚೆನ್ನಬಸವಣ್ಣ.

ವಸ್ತುವಿನ ಒಳಗೆ ಹೊರಗೆ ಸತ್ಯ ಅಡಗಿದ್ದರೂ ಮನದಿಂದಾಗಿ, ಅದರ ಅಜ್ಞಾನದಿಂದಾಗಿ ವಸ್ತುವಿನ ಒಳ ಹೊರಗಿರುವ ಸತ್ಯ ಮನದ ಅರಿವಿಗೆ ಬರುವುದಿಲ್ಲ.

ಕೂಡಲೇ ಮನವನೆ ನೋಡಿ ಆ ಮನದಿಂದಲೇ ವಸ್ತುವಿನಲ್ಲಿರುವ ಸತ್ಯವನ್ನು ನೋಡಿದರೆ, ಆ ಸತ್ಯದ ಬೆಳಗಿನಲ್ಲಿ ಬೆರೆತರೆ ತಾನೇ ಬಸವ ಪ್ರಿಯ ಕೂಡಲ ಚೆನ್ನಬಸವಣ್ಣ.

ಉದಾ: ಕಲಾವಿದ ಕಲ್ಲು ಕೆತ್ತಿ ಪರಮೇಶ್ವರನನ್ನು ಮಾಡಿದರೆ, ಮನ ಪರಮೇಶ್ವರ ನೆಂದು ಹೇಳುತ್ತದೆ. ಪಾರ್ವತಿಯನ್ನು ಮಾಡಿದರೆ ಪಾರ್ವತಿ ಎಂದು ಹೇಳುತ್ತದೆ. ಅವರಿಬ್ಬರಿಗೆ ದೇವಾಲಯ ಕಟ್ಟಿಸಿ ನಿತ್ಯ ಅಭಿಷೇಕದೊಂದಿಗೆ ತನು ಇರುವವರೆಗೆ ಪೂಜಿಸುತ್ತದೆ. ಛತ್ರಿ ಚಾಮರಗಳನ್ನು ಬೀಸಿ ಕಲ್ಯಾಣೋತ್ಸವ ಮಾಡಿ ಅವರಿಬ್ಬರನ್ನು ಶಯನಗೃಹಕ್ಕೆ ಕಳಿಸುತ್ತದೆ. ರಥ ಉತ್ಸವ ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಿ ಮನ ತನುವಿನೊಂದಿಗೆ ಸಂಭ್ರಮಿಸುತ್ತದೆ.

ಸಾವಿರಾರು ಕಿಲೋಮೀಟರುಗಳವರೆಗೆ ಕ್ರಮಿಸಿ ಪೂಜಿಸಿ ಆನಂದಪಟ್ಟು ಮನ ತನುವಿನೊಂದಿಗೆ ಕುಣಿಕುಣಿದಾಡುತ್ತದೆ. ಮಕ್ಕಳನ್ನು, ಧನಕನಕವನ್ನು ಬೇಡುತ್ತದೆ. ದೇವಾಲಯಕ್ಕೆ ದತ್ತಿ ದಾನ ಮಾಡಿ ಮೂರ್ತಿಗಳಿಗೆ ಪಾದುಕೆಗಳನ್ನು ಉಡುಗೆ ತೊಡುಗೆಗಳನ್ನು ಅನ್ನ ಆಭರಣ ವಸ್ತ್ರಾದಿಗಳನ್ನು ನೀಡಿ ಸಂಭ್ರಮಿಸುತ್ತದೆ.

ಮನ ಪೂಜಿಸುವ ಮೂರ್ತಿಯನ್ನು ಹೊರಗೆ ನೋಡಿ ಆನಂದ ಪಡುತ್ತದೆ; ಒಳಗೆ ನೋಡುವುದಿಲ್ಲ. ಕೂಡಲೆ ಮನ ಒಳಗೆ ನೋಡಿದರೆ ಕಲ್ಲು! ಹೊರಗೆ ನೋಡಿದರೂ ಕಲ್ಲು! ಅದು ಪರಮೇಶ್ವರನ ಮೂರ್ತಿಯಾದರೇನು? ಅದರ ಸತ್ಯ ಕಲ್ಲು ಅಲ್ಲವೇ? ಅದು ಪಾರ್ವತಿಯ ಮೂರ್ತಿಯಾದರೇನು? ಅದರ ಸತ್ಯ ಕಲ್ಲು ಅಲ್ಲವೇ?

ಕಲ್ಲನ್ನು ಕಲಾವಿದನಿಗೆ ಕೊಟ್ಟು ಆ ಕಲ್ಲಿನ ಎರಡು ತುಂಡುಗಳಲ್ಲಿ ಕಲಾವಿದ ಪಾರ್ವತಿ ಪರಮೇಶ್ವರನನ್ನು ಕೆತ್ತಿದರೆ ಅದು ಕಲ್ಲಲ್ಲದೆ ಬೇರಲ್ಲ. ಎಂದು ಮನ ತಿಳಿಯ ಬೇಡವೇ. ಕಲ್ಲನ್ನು ಕಲ್ಲೆಂದು ತಿಳಿಯಲು ತನು ಅಷ್ಟು ವರ್ಷ ಪೂಜಿಸಬೇಕೆ? ತಾನು ಕಲ್ಲೆಂದು ಪೂಜೆಗೊಳಗಾದ ಕಲ್ಲು ಹೇಳಲು ಸಾಧ್ಯವೇ? ಅದನ್ನು ಪೂಜಿಸುವ ಪೂಜಾರಿಗಳಿಗೆ ವ್ಯವಹಾರ! ಪೀಠಾಧಿಪತಿಗಳಿಗೆ ಅದರಿಂದಲೇ ಗೌರವ. ಪೀಠಾಧಿಪತಿಗಳ, ಪೂಜಾರಿಗಳ ಮಾತೆಂದರೆ ಮನಕ್ಕೆ ಬಲು ಆಪ್ಯಾಯನ. ಶರಣರ ಜ್ಞಾನಿಗಳ ಸಂತರ ಮಾತೆಂದರೆ ಮನಕ್ಕೆ ಬಲು ಕನಿಷ್ಠ.

ತಳುವಿಲ್ಲದೆ ಅಂದರೆ ಕೂಡಲೆ ಮನ ಮನವನೇ ನೋಡಿ ಆ ಬೆಳಗಿನೊಳು ಬೆಳಗುವುದು

ಅಷ್ಟು ಸುಲುಭವೆ? ಅರಿತರೆ ಸುಲಭ. ಅರಿಯದಿದ್ದರೆ ಜಟಿಲ! ಅರಿತರೆ ಕಲ್ಲು. ಅರಿಯದಿದ್ದರೆ ಬಾರಾ ಜ್ಯೋತಿರ್ಲಿಂಗ! ತಿರುಪತಿ, ವೈಷ್ಣೋದೇವಿ. ಅಯ್ಯಪ್ಪ ಸ್ವಾಮಿ ಹೀಗೆ ದೇಶಾದ್ಯಂತ ಪ್ರಯಾಣ. ಆದರೂ ಕಲ್ಲು ಕಾಣುವುದೇ ಇಲ್ಲ. ಕಲ್ಲನ್ನು ಕಲ್ಲೆಂದು ನೋಡಿದರೆ ಸಾಕು ಪೂಜೆಯಿಲ್ಲ; ಪ್ರಯಾಣವೂ ಇಲ್ಲ. ಒಳಹೊರಗೂ ಬೆಳಕೆ. ಬೆಳಗಿಂಗೆ ಬೆಳಕಾಗಿ ಬೆಳಗುವ ಅರಿವಿನ ಬೆಳಕಿನಲ್ಲಿ ಮನ ಮುಳುಗಿ ಕೂಡಲೇ ಬೆಳಕಾಗುವುದು.

83

ಓದಲೇಕೋ ಲಿಂಗದ ಭೇದಾದಿಭೇದವನರಿದವಂಗೆ?
ಹಾಡಲೇಕೊ ಹರನ ಕಂಡಾತಂಗೆ?
ಬೇಡಿ ಕಾಡಲೇಕೊ ನೋಡುವ ಕಂಗಳಿಗೆ ತೃಪ್ತಿ ಯಾದವಂಗೆ?
ನೀಡಿ ಮಾಡಲೇಕೊ ಉಡುವಾತನು ಉಂಬುವಾತನು ಏಕವಾದ ಮೇಲೆ.
ಮುಂದು ನೋಡುವರಾರುಂಟು ಹೇಳಾ,
ಬಸವ ಪ್ರಿಯ ಕೂಡಲಚೆನ್ನಬಸವಣ್ಣಾ ?

ಮನ ತನು ಹಿಡಿದು ಓದುತ್ತದೆ. ಪಂಡಿತ ಶಾಸ್ತ್ರಿ ಎಂದು ಕರೆಯಿಸಿಕೊಳ್ಳುತ್ತದೆ. ಓದುವ ಓದು ಕೂಡಾ ತನು ಹಿಡಿದು ಬರೆಯಲ್ಪಟ್ಟಿದ್ದು ಎಂದು ಮನಕ್ಕೆ ಮನವರಿಕೆಯಾಗುವುದಿಲ್ಲ. ಯಾವ ತನು ಬರೆದರೇನು? ತನುಗಳೆಲ್ಲ ಒಂದೇ. ಯಾವ ಮನ ಓದಿದರೇನು? ಮನಗಳೆಲ್ಲ ಒಂದೇ. ಓದುವ ಓದು ತನುವಿನಿಂದ ಬಂದ ಎಂಜಲು. ತನುವಿನ ಎಂಜಲು ತನುವಿಗೆ ಹೇಗೆ ಮೀಸಲಾಗುತ್ತದೆ?

ಅರಿವು ಅಂಗದಲ್ಲಿ ಸಂಗಮವಾಗಿದೆ. ಅಂಗವನ್ನು ಆವರಿಸಿದ ಮನ, ಓದಿದರೆ ಅಂಗದಲ್ಲಿ ಸಂಗಮವಾದ ಅರಿವನೆ ಓದಬೇಕು. ಏಕೆಂದರೆ ಅದು ಲಿಂಗ! ಅದರ ಭೇದಾದಿ ಭೇದವನು ಅರಿಯಬೇಕು. ಹೀಗೆ ಅರಿತು ಆ ಅರಿವೇ ತಾನಾಗಿ ಗುರುವಾದ ಮಹಾಂತನು ಓದಲೇಕೊ, ಹಾಡಲೇಕೊ, ಬೇಡಿ ಕಾಡಲೇಕೊ, ನೀಡಿ ಮಾಡಲೇಕೊ? ಅರಿವೆಂಬ ಹರನ ಕಂಡು ತೃಪ್ತಿಯಾದಾತ ಓದುವುದಿಲ್ಲ, ಹಾಡುವುದಿಲ್ಲ, ಉಡುವಾತ ಉಂಬುವಾತ ಏಕವಾಗಿ ಬೇಡಿಕಾಡುವುದಿಲ್ಲ.

ಓದುವ ಮನವೇ ಘನಮನವಾಗಿ, ಮನ ಘನವಾಗುವ ಬರಹವನು ಬರೆದು, ಆ ಬರಹವನೇ ಮನ ಓದುವುದೆಂದರೇನು? ಅದು ಓದಲಾರದು, ಬರೆಯಲಾರದು. ಓದಲು ಬಾರದ ಓದನ್ನು, ಬರೆಯಲು ಬಾರದ ಬರಹವನ್ನು ಬರೆದು, ಬಸವಪ್ರಿಯ ಕೂಡಲ ಚೆನ್ನಬಸವಣ್ಣನೇ ತಾನಾದ ಮೇಲೆ ಓದಲೇಕೋ ಹಾಡಲೇಕೋ ಅರಿವಿನ ಹರನ ಕಂಡಾತಂಗೆ!

84

ಓದಲೇತಕ್ಕೆ ಪ್ರಾಣಲಿಂಗಿಗೆ? ಹಾಡಲೇತಕ್ಕೆ ಶರಣಂಗೆ?
ನೋಡಿ ಕೂಡಲೇತಕ್ಕೆ ಐಕ್ಯಂಗೆ?
ಆರೂಢಿಯ ಕೂಟ ಅಜಡತ್ವಂಗೆ ಬಾಹ್ಯಾಂತರಂಗೆ.
ಆಹ್ವಾನ ವಿಸರ್ಜನವೆಂದು ಭೇದಿಸದವನೆ ಪ್ರಾಣಲಿಂಗಿ,

ಪ್ರಣವಸ್ವರೂಪಿ, ಪರಂಜ್ಯೋತಿ,
ಬಸವಪ್ರಿಯ ಕೂಡಲಸಂಗಮದೇವ ಪ್ರಭುವೆ.

ಓದಲೇತಕ್ಕೆ, ಹಾಡಲೇತಕ್ಕೆ, ನೋಡಿ ಕೂಡಲೇತಕ್ಕೆ? ಅರಿವೇ ಗುರುವೆಂದು ತಿಳಿದು ಆ ಅರಿವಿನಲ್ಲಿ ಅಂಗವಿಸಿದ ಶರಣ ಕೂಡದ ಅಗಲದ ಕೂಟದ ಸುಖವನು ಬಲ್ಲಾತ. ಕಲ್ಲನ್ನು ಕಲ್ಲು ಎಂದು ತಿಳಿದು ಆ ಕಲ್ಲನ್ನು ಪೂಜಿಸಲಿಲ್ಲ ಆರಾಧಿಸಲಿಲ್ಲ. ಸಮುದಾಯದ ರೂಢಿಯನ್ನು ಮುರಿದು ಆರೂಢಿಯಾಗಿ ಮೆರೆದ ಶರಣ ಜಡವನ್ನು ಕೂಡಲಿಲ್ಲ. ಕೂಡದೆ ಅಗಲದೆ ಅರಿವಿನ ಕೂಟದ ಸವಿಯನುಂಡು ಪ್ರಣವ ಸ್ವರೂಪಿಯಾದ.

ಓಂ ನಮಃಶಿವಾಯ ಎಂಬ ಷಡಕ್ಷರಿಯೇ ತಾನಾದ. ಪರಂಜ್ಯೋತಿಯೇ ತಾನಾಗಿ ಬೆಳಗಿಂಗೆ ಬೆಳಕಾಗಿ ಬೆಳಗಿದ. ಬಸವಣ್ಣನಿಗೆ ಪ್ರಿಯನಾದ ಕೂಡಲಸಂಗಮದೇವನು ಅಂಗದಲ್ಲಿಯೇ ಸಂಗಮವಾದುದನ್ನು ಕಂಡು ಅರಿವಿನಿಂದ ಕುಣಿಕುಣಿದಾಡಿದ.

85

ಓದಿದರೇನಯ್ಯಾ? ಗಾದೆಯ ಮಾತಾಯಿತ್ತು.
ಹಾಡಿದರೇನಯ್ಯಾ? ಹರಟೆಯ ಕಥೆಯಾಯಿತ್ತು.
ನೋಡಿದರೇನಯ್ಯಾ? ಭೂತದಂತಾಯಿತ್ತು.
ಇದರ ಭೇದಾದಿಭೇದವನರಿದು,
ಲಿಂಗದಲ್ಲಿ ಸಾಧನೆ ಮಾಡುವ ಶರಣರ ಪಾದಕ್ಕೆರಗಿ
ನಾನು ಬದುಕಿದೆನು ಕಾಣಾ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಭಗವದ್ಗೀತೆ, ಬೈಬಲ್, ವೇದ, ಆಗಮ, ಉಪನಿಷತ್ತುಗಳನ್ನು ಓದಿದರೇನು? ರಾಮಾಯಣ ಮಹಾಭಾರತ ಕಾವ್ಯಗಳನ್ನು ಹಾಡಿದರೇನು? ನಾಟಕದಂತೆ ಪಾತ್ರ ಮಾಡಿ ನೋಡಿದರೇನು? ಇದರ ಭೇದಾದಿ ಭೇದಗಳನ್ನು ಅರಿಯದಿದ್ದರೆ ಬರೆದ ಬರಹಗಳೆಲ್ಲ ಸತ್ತವರು ಬರೆದಿಟ್ಟ ಪತ್ರಗಳಾಗುತ್ತವೆಯೇ ಹೊರತು ಮತ್ತೇನೂ ಅಲ್ಲ.

ಮನ, ಗಾದೆಯಂತೆ ಓದಿ ಉಸುರುತ್ತದೆ. ಹರಟೆಯ ಕಥೆಯಂತೆ ತನುವಿನ ಸಮಯ ಹಾಡಿ ಕಳೆಯುತ್ತದೆ. ನೋಡಿ ಭೂತದಂತೇ ಚೇಷ್ಟೆ ಮಾಡುತ್ತದೆ. ಅಂಗದಲ್ಲಿಯೇ ಸಂಗಮವಾದ ಅರಿವಿನ ಭೇದವನು ಅರಿತು ಆ ಲಿಂಗದಲ್ಲಿಯೇ ಸಂಗಮವಾಗಿ ಸಾಧನೆ ಮಾಡುವುದಿಲ್ಲ. ಹಾಗೆ ಅರಿವಿನ ಸಾಧನೆ ಮಾಡಿ ಆ ಅರಿವಿಗೆ ಶರಣು ಹೊಕ್ಕು ಶರಣರಾದವರ ಸಂಗ ಮಾಡಿ ಅವರ ಪಾದಕ್ಕೆ ಮೊರೆಹೋಗಿ, ನಾನು ಎನ್ನುವ ಮನ ಬದುಕಿಬಾಳುವಂತೆ ಪ್ರೇರಣೆ ನೀಡಿದ್ದಾರೆ; ನಿಜ ಸುಖಿ ಅಪ್ಪಣ್ಣ ಶರಣರು.

ಮನದ ಅಜ್ಞಾನವನ್ನು ಕರಕರನೆ ಕೆತ್ತಿ ಬಸವಪ್ರಿಯ ಕೂಡಲ ಚೆನ್ನಬಸವಣ್ಣನ ಪಾದಕ್ಕೆ ಹಾಕಿ ಅರಿವಿನಿಂದ ಬದುಕಲು ಕಲಿಸಿದ್ದಾರೆ.

86

ಕಂಗಳ ಮಣಿಯ ಬೆಳಗಿನೊಳು, ಈರೇಳು ಭುವನದ ಶೃಂಗಾರವಡಗಿತ್ತು.
ಆರೂ ಅರಿಯರಲ್ಲಾ.

ಅತಿ ಶೃಂಗಾರದೊಳಗಣ ಗಂಧವ ನೊಂದು ಘ್ರಾಣ ನುಂಗಿತ್ತು.
ಘ್ರಾಣದೊಳಗಣ ಗಂಧವ ಪ್ರಾಣನುಂಗಿತ್ತು.
ಪ್ರಾಣದೊಳಗಣ ಗಂಧವ ಭಾವ ನುಂಗಿತ್ತು.
ಭಾವದೊಳಗಣ ಗಂಧವ ಬಯಲು ನುಂಗಿತ್ತು.
ಬಯಲೊಳಗಣ ಗಂಧವ ಮಹಾ ಬಯಲ ಕೂಡಿದ ಲಿಂಗೈಕ್ಯಂಗೆ
ಭವ ಬಂಧನವಿಲ್ಲೆಂದಿತ್ತು ಗುರುವಚನ,
ಬಸವ ಪ್ರಿಯ ಕೂಡಲ ಚೆನ್ನಬಸವಣ್ಣಾ.

ಶ್ರೀ ಕೃಷ್ಣ ತನುವನ್ನು ವಿರಾಟ ಸ್ವರೂಪ ಎಂದು ಕರೆದರು. ಕೃಷ್ಣನ ತನುವೊಂದೆ ವಿರಾಟಸ್ವರೂಪ ಎಂದಲ್ಲ; ಭೂಮಿಯ ಮೇಲಿದ್ದ ಸಕಲ ತನುಗಳೂ ವಿರಾಟ ಸ್ವರೂಪವೇ ಆಗಿವೆ. ಆದರೆ ತನುಗಳಿಗೆ ತಾನು ವಿರಾಟಸ್ವರೂಪ ಹೇಗೆಂದು ತಿಳಿಯುತ್ತಿಲ್ಲ; ಮನದ ಕಾರಣದಿಂದ.

ಅಪ್ಪಣ್ಣ ಶರಣರು ತಮ್ಮ ಈ ವಚನದಲ್ಲಿ ಕಂಗಳ ಶಕ್ತಿಯನ್ನು, ಮೂಗಿನ ಸುವಾಸನೆಯ ಪರಿಮಳವನ್ನು, ಪ್ರಾಣ ಮತ್ತು ಭಾವದೊಳಗಣ ಬಯಲ ಸತ್ಯವನ್ನು ಸೂತ್ರ ರೂಪದಲ್ಲಿ ವಿವರಿಸಿದ್ದಾರೆ.

ತನು ಎಂದರೆ ಸಾಮಾನ್ಯವೆ? ಅದರ ಕಂಗಳ ಮಣಿಯ ಬೆಳಗಿನೊಳಗೆ ಹದಿನಾಲ್ಕು ಭುವನಗಳ ಶೃಂಗಾರವೇ ಅಡಗಿದೆ. ಆದರೆ ಕಣ್ಣಿನಲ್ಲಿ ಆವರಿಸಿದ ಮನವೇ ಆ ಶಕ್ತಿಯನ್ನು ಅರಿತು ಕುಣಿಕುಣಿದಾಡಬೇಕು. ಆದರೆ ಹೀಗಾಗುತ್ತಿಲ್ಲ. ಮನಕ್ಕೆ ಯಾರು ಹೇಳಬೇಕು? ಹೊರಗಿನ ಯಾವ ಗುರು ಬೋಧಿಸಿದರೂ ಮನಕ್ಕೆ ನಾಟುವುದಿಲ್ಲ. ಕಂಗಳ ಒಳಗಿನ ಗುರುವಿಗೆ ಯಾವ ಗುರುವಿನ ಬೊಧೆಯೂ ಬೇಕಿಲ್ಲ. ಏಕೆಂದರೆ ಆ ಕಂಗಳಲ್ಲಿ ಹದಿನಾಲ್ಕು ಭುವನಗಳ ಶೃಂಗಾರವೇ ಅಡಗಿದೆ. ಕಂಗಳಿಗೆ ಆವರಿಸಿದ ಮನ ಸರಿದು ಒಳಗೆ ನೋಡಿದರೆ ಸಾಕು ದಿವ್ಯದರ್ಶನದ ಭಾಗ್ಯ ಕಣ್ಣಿಗೆ ಲಭಿಸುತ್ತದೆ. ಇದನ್ನು ಮನ ಅರಿಯದಲ್ಲ ಎಂದು ಚಿಂತಿಸಿದ್ದಾರೆ ಶರಣರು.

ಅತಿ ಶೃಂಗಾರದೊಳಗಣ ಗಂಧವನೊಂದು ಘ್ರಾಣ ನುಂಗಿತ್ತು, ಘ್ರಾಣದೊಳಗಣ ಗಂಧವ ಪ್ರಾಣ ನುಂಗಿತ್ತು :

ತನುವಿನ ಶೃಂಗಾರ ಮೂಗಿನ ಮೇಲೆ ನಿಂತಿದೆ. ಮೂಗು ಹೇಗಿದ್ದರೇನು ಅದರ ಅರಿವಿನ ಪರಿಮಳ ಅಲ್ಲಿಯೇ ಆವರಿಸಿದ ಮನ ಅರಿಯದಿದ್ದರೆ ವ್ಯರ್ಥ! ಮನ ಮೂಗಿನ ಅರಿವಿನ ಪರಿಮಳ ಆಸ್ವಾದಿಸುವುದನು ಅರಿತರೆ ದುರ್ಗಂಧ ಸುಗಂಧವನ್ನು ದೂರ ಸರಿಸಿ ಶೃಂಗಾರದೊಳಗಣ ಅರಿವಿನ ಪರಿಮಳವನ್ನು ಮಾತ್ರ ಹೀರುತ್ತದೆ.

ಕಂಗಳೊಳಗೆ ಇರುವ ಬೆಳಕನು, ಮೂಗಿನೊಳಗೆ ಇರುವ ಶೃಂಗಾರದ ಪರಿಮಳವನು ಹೀರುವ ಭಾವ ಕೂಡ ಅರಿವಿನಲ್ಲಿ ಬೆರೆತು ನಷ್ಟವಾಗಬೇಕು. ಈ ಭಾವವನ್ನು ಬಯಲು ಮಾತ್ರ ನುಂಗಲು ಸಾಧ್ಯ. ಏಕೆಂದರೆ ಬಯಲ ಅರಿವಿನ ಬಿಂದುವಿನಿಂದಲೇ ತನು, ತನುವಿನ ಕಂಗಳು, ಮೂಗು ಹುಟ್ಟಿವೆ. ಭಾವ ಕೂಡಾ ಬಯಲಲ್ಲಿಯೇ ಹುಟ್ಟಿ ಬಯಲ ಬೀಜದಲ್ಲಿ ಬೆರೆತು ಗರ್ಭಸೇರಿ ತನುವಿನಲ್ಲಿ ಸಂಗಮವಾಗಿದೆ. ಈ ಬಯಲ ಜೀವನ, ಬಯಲ ಭಾವನೆಗಳಲ್ಲಿ ಸಂಗಮವಾದ ಮನ ಘನಮನವಾಗಿದೆ. ಬಯಲು ತಾನೇ ಆಗಿದೆ. ಇಂತಹ ಬಯಲು ಕೂಡಾ ಮಹಾಬಯಲಲ್ಲಿ ಕೂಡಿ ಆ ಲಿಂಗದಲ್ಲಿಯೇ ಐಕ್ಯವಾಗಿದೆ.

ಇಂತಹ ಲಿಂಗೈಕ್ಯನಿಗೆ ಭವವಿಲ್ಲ, ಬಂಧನವಿಲ್ಲ, ಜನನ ಮರಣಗಳಿಲ್ಲವೆಂದಿತ್ತು ಗುರುವಚನ.

87

ಕಂಡುದ ಹೇಳಿಹೆನೆ? ಸಮಯಕ್ಕೆ ದೂರ,
ಎನ್ನ ಇರವನರಿಯರು. ಲೆಂಡನೆಂಬರು, ಸುಮ್ಮನಿದ್ದೇನೆ.
ಇವರೆನ್ನ ಆರೈದು ಕಂಡುದ ನುಡಿವರು.
ಎನ್ನ ಮುಟ್ಟಿದವರ ಎನ್ನಂತೆ ಮಾಡಿಕೊಂಬೆ.
ಎನ್ನ ಅರಿಯದವರ ಹಾದಿಯ ಹೋಗೆ.
ಎನ್ನನರಿತ ಜಂಗಮದ ಸಂಗವ ಮಾಡುವೆ.
ಜಗದ ಸಂಗವನೊಲ್ಲೆ, ನಿಗಮಾಗಮ ಶಾಸ್ತ್ರವನೊಲ್ಲೆ.
ಅವೆಲ್ಲವು ಸ್ಥಲ ನೆಲೆ ಇಟ್ಟು ಹೇಳುವವು.
ಎಮ್ಮ ಶರಣರು ನುಡಿದ ಶಾಸ್ತ್ರಕ್ಕೆ ಸ್ಥಲ ನೆಲೆ ಇಲ್ಲ.
ಇಂತಿವೆಲ್ಲ ಬಲ್ಲೆನಾಗಿ, ಎನ್ನಂಗಕ್ಕೆ ಪ್ರಾಣಕ್ಕೆ ಭವವಿಲ್ಲ, ಬಂಧನವಿಲ್ಲ.
ಅದೇಕೆಂದರೆ; ಲಿಂಗವೆಂದ ಕಾರಣ, ನಾನೆಂಬುದಿಲ್ಲ,
ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ.

ತನುವಿನಲ್ಲಿ ತನ್ಮಯವಾದ ಅರಿವಿನ ಅಮೃತದಲ್ಲಿ ಮಿಂದ ಮನ ಸತ್ಯ ಹೇಳಲು ಹೋದರೆ ಸಮಯಕ್ಕೆ ದೂರವಾಗಿ ತನುವಿನ ಇರುವನು ಅರಿಯರು. ಪೂರ್ವಾಶ್ರಯದ ತನುವನ್ನೇ ಗುರುತಿಸಿ ಲೆಂಡನು ಅನ್ನುವರು. ಆದರೂ ಮನ ಘನಮನವಾಗಿದೆ, ಏನು ಕೇಳಿದರೂ ಅದು ಘನವೇ. ಮನಕ್ಕೆ ಮನದ ಉತ್ತರವಿಲ್ಲ. ಮುಟ್ಟಿದವರ ತನ್ನಂತೆ ಮಾಡಿಕೊಳ್ಳುವುದು. ಮನವನರಿತ ಜಂಗಮದ ಸಂಗವ ಮಾಡುವುದು. ಜಗದ ಸಂಗವನು ಒಲ್ಲದು.

ವೇದ ಆಗಮ ಶಾಸ್ತ್ರ ಪುರಾಣಗಳನು ಒಲ್ಲದು. ಏಕೆಂದರೆ ಅವು ಸ್ಥಲದ ಹಾದಿ ತೋರುವವು. ಶರಣರು ತನು ಮುಟ್ಟಿ ನುಡಿದು ಹೇಳುವರು. ತನುವೇ ಒಂದು ಬೃಹದ್ ಅಕ್ಷರೋತ್ತಮನ ಗ್ರಂಥ. ಆ ಗ್ರಂಥದಿಂದಲೇ ಸಕಲ ಗ್ರಂಥಗಳು ಹುಟ್ಟಿರುವಾಗ ಮತ್ತೆ ಗ್ರಂಥ ಓದಲೇಕೆ? ಸ್ಥಲ ನೆಲೆ ಇಲ್ಲದ ತನುವಿನ ಗ್ರಂಥವೇ ಶ್ರೇಷ್ಠ !

ಶರಣರು ಸೂಚಿಸಿದ ತನುವಿನ ಶಾಸ್ತ್ರ ಬಲ್ಲೆನಾಗಿ, ಅಂಗಕ್ಕೆ ಪ್ರಾಣಕ್ಕೆ ಜನನವಿಲ್ಲ, ಮರಣವಿಲ್ಲ, ಭಯವಿಲ್ಲ, ಬಂಧನವಿಲ್ಲ. ಅದೇಕೆಂದರೆ ಅಂಗವೇ ಅರಿವಿನ ಮಹಾಲಿಂಗವಾದ ಕಾರಣ, ನಾನು ಎಂಬುವುದಿಲ್ಲ. ನಾನು ಎನ್ನುವ ಅಹಂಕಾರಿ ಅಂಗದಲ್ಲಿಯೇ ಸಂಗಮವಾದ ಬಸವ ಪ್ರಿಯ ಕೂಡಲ ಚೆನ್ನ ಬಸವಣ್ಣನಿಗೆ ಒಲಿದು ಅಲ್ಲಿಯೇ ಸಂಗಮವಾದ ಕಾರಣ.

88

ಕಟ್ಟಬೇಕು ಮನವ, ಮೆಟ್ಟಬೇಕು ಮದವ,
ಸುಟ್ಟುರುಹಬೇಕು ಸಪ್ತ ವ್ಯಸನಗಳ.
ಆ ತೊಟ್ಟಿಲ ಮುರಿದು, ಕಣ್ಣಿಯ ಹರಿದು,
ಆ ಬಟ್ಟ ಬಯಲಲ್ಲಿ ನಿಂದಿರೆ,
ಬಸವ ಪ್ರಿಯ ಕೂಡಲ ಚೆನ್ನಬಸವಣ್ಣಾ.

ತನುವನ್ನು ಆವರಿಸಿ ತನುವಿನೊಂದಿಗೆ ಮಂಗನಂತೆ ಹರಿದಾಡುವ ಮನವನ್ನು ಮನದ ಸಹಾಯದಿಂದಲೇ ತನುವಿನಲ್ಲೇ ಕಟ್ಟಬೇಕು. ಮನದಿಂದಾಗಿ ಹುಟ್ಟಿದ ಮದವನ್ನು ಮನದ ಸಹಾಯದಿಂದಲೇ ತನುವಿನಲ್ಲಿಯೇ ಮೆಟ್ಟಿ ಅಂಕುಶವನು ಹಾಕಿ ಜಗ್ಗಬೇಕು. ಮನದಿಂದಲೇ ಹುಟ್ಟಿದ ಸಪ್ತ ವ್ಯಸನಗಳನ್ನು ತನುವಿನಲ್ಲಿಯೇ ತನ್ಮಯವಾದ ಅರಿವಿನ ಉರಿಯಿಂದ ಸುಟ್ಟು ಉರುಹಬೇಕು.

ಮನದ ಮಾತು ಪಾಲಿಸಿ ಅತ್ತಿತ್ತ ಓಲಾಡುವ ಮದ ಭರಿತ ತನುವೆಂಬ ತೊಟ್ಟಿಲ ಮುರಿದು, ಕಟ್ಟಿದ ನಾಲ್ಕು ಶಾಸ್ತ್ರಗಳ ಹಗ್ಗ ಹರಿದು, ಅರಿವಿನ ಬಟ್ಟ ಬಯಲಲ್ಲಿ ನಿಲ್ಲಿಸಬೇಕು. ಬಸವ ಪ್ರಿಯ ಕೂಡಲಚೆನ್ನಬಸವಣ್ಣನ ಅರಿವಿನ ಹಾಡ ಕೇಳಬೇಕು.

89

ಕತ್ತಲೆ ಬೆಳಗೆನಬೇಡ, ಸತ್ಯ ತಾನೆನಬೇಡ,
ಚಿತ್ತವ ಸುಯಿಧಾನವ ಮಾಡಿ,
ಮೊತ್ತಾದ ಹೆಣ್ಣು ಹೊನ್ನು ಮಣ್ಣು ಗೆದ್ದರೆ ನಿರ್ಮುಕ್ತ,
ಬಸವ ಪ್ರಿಯ ಕೂಡಲ ಚೆನ್ನ ಬಸವಣ್ಣಾ.

ಕತ್ತಲೆ ಬೆಳಗೆನಬೇಡ, ಸತ್ಯ ತಾನೆನಬೇಡ:

ಕತ್ತಲು ಬೆಳಕಲ್ಲ. ಕತ್ತಲು ಎಂದೂ ಬೆಳಕಾಗಲರಿಯದು; ಬೆಳಕಿನಿಂದಲೇ ಕತ್ತಲು ಹುಟ್ಟಿದೆ; ಬೆಳಕಿನ ನೆರಳೇ ಕತ್ತಲು. ಕತ್ತಲು ನಾನು ಬೆಳಕೆಂದು ನುಡಿದು ಹೇಳಿದರೆ ಬೆಳಕಾಗಲರಿಯದು. ಬೆಳಕಿನ ಸತ್ಯ ತಾನಾಗದು!

ಚಿತ್ತವ ಸುಯಿಧಾನವ ಮಾಡಿ, ಮೊತ್ತಾದ ಹೆಣ್ಣು ಹೊನ್ನು ಮಣ್ಣು ಗೆದ್ದರೆ ನಿರ್ಮುಕ್ತ :

ಮನ ತನುವಿಗೆ ವೇಷ ಹಾಕಿ, ಅರಿವಿನ ಮಾತುಗಳನ್ನು ತನುವಿನ ಮೂಲಕ ಪೀಠಾಧಿ ಪತಿಯಾಗಿ, ಆಶ್ರಮವಾಸಿಯಾಗಿ ನುಡಿದರೆ ಮುಕ್ತ ನಾಗಲಾರದು. ಬದಲಾಗಿ ವ್ಯವಹರಿಸಿ ಹೊನ್ನು ಹೆಣ್ಣು ಮಣ್ಣು ಸಂಗ್ರಹಿಸಿ ವಿಷಯಾಸಕ್ತನಾಗುವುದು. ಅರಿವಿನ ವೇಷಧರಿಸಿ ವಿಷಯಗಳ ರುಚಿ ಮೆಲ್ಲುವುದು. ಇದು ತನುವಿಗೂ, ಇತರ ತನುಗಳಿಗೂ ಮಾಡುವ ಮೋಸವೆಂದೂ ಅರಿಯದು. ಏಕೆಂದರೆ ಕತ್ತಲು ಬೆಳಕಾಗಲರಿಯದು.

ಬೆಳಕು ಹೇಗೆ ಕತ್ತಲನ್ನು ಸೃಷ್ಟಿಸಿದೆಯೋ ಹಾಗೆಯೇ ಪುನಹ ಬೆಳಕು ಕತ್ತಲ ಮೇಲೆ ತನ್ನ ಬೆಳಕು ಚೆಲ್ಲಿ ಬೆಳಕು ಮಾಡಬೇಕು. ತನ್ನಂತೆ ಮಾಡಿಕೊಳ್ಳಬೇಕು.

ಹೆಣ್ಣು ಹೊನ್ನು ಮಣ್ಣು ಗೆದ್ದರೆ ನಿರ್ಮುಕ್ತ. ಭೂಮಿ ನಿನ್ನದಲ್ಲ ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ. ಇವು ಜಗಕ್ಕಿಕ್ಕಿದ ವಿಧಿ. ನಿನ್ನದೆಂಬುದು ಜ್ಞಾನರತ್ನ. ಅದನ್ನು ಕೆಡಗೊಡದೆ ಅಲಂಕರಿಸಿದೆಯಾದಡೆ ನಿನ್ನಂತಹ ಸಿರಿವಂತರು ಯಾರು ಇಲ್ಲ ಎಲೆ ಮನವೇ ಎಂದು ಪ್ರಭುಗಳು ಮನವನ್ನು ಎಚ್ಚರಿಸಿದ್ದಾರೆ.

ಮನದ ಚಿತ್ತವನ್ನು ತನುವಿನ ಅರಿವಿನ ಬೆಳಕಿನಲ್ಲಿ ಹರಿಸಿ, ಆ ಚಿತ್ತದಿಂದ ಹೆಣ್ಣು ಹೊನ್ನು ಮಣ್ಣನ್ನು ನೋಡಿದರೆ ಹೆಣ್ಣು ಹೆಣ್ಣಾಗಿ ಕಾಣುವುದಿಲ್ಲ. ಅದು ತನುವಿನಲ್ಲಿ ಹುಟ್ಟಿದ ಮಾಯೆಯಾಗಿ ಕಾಣುತ್ತದೆ. ಮಾಯೆ ಹೆಣ್ಣಿಗೆ ಗಂಡಾಗಿ ಕಾಡುತ್ತದೆ, ಗಂಡಿಗೆ ಹೆಣ್ಣಾಗಿ ಕಾಡುತ್ತದೆ. ಈ ಮಾಯೆ ಮತ್ತೊಂದು ಅರಿವಿನ ತನುವಿಗೆ ಜನ್ಮ ನೀಡಲು ಸಹಾಯವಾಗುತ್ತದೆ. ಬೇಡವಾದರೆ

ತನುವಿನ ಅರಿವಿನ ವಶದಲ್ಲಿರುತ್ತದೆ. ಅರಿವೇ ಗುರು; ಅದು ಸಾಕ್ಷಾತ್ ಕಪಿಲ ಸಿದ್ಧ ಮಲ್ಲಿಕಾರ್ಜುನ! ಈತನ ಸಹಾಯದಿಂದ ನೋಡಿದರೆ ಹೊನ್ನು ಮತ್ತು ಮಣ್ಣು ಕೂಡಾ ಜಲಬಿಂದುವಿನಿಂದ ಜನಿಸಿದ ಸ್ವ ಸ್ವರೂಪವಾಗಿ ಕಾಣುತ್ತದೆ. ಮನ ಹೆಣ್ಣು ಹೊನ್ನು ಮಣ್ಣಿನಿಂದ ನಿರ್ಮುಕ್ತನಾಗುತ್ತದೆ.

ಜಲಬಿಂದು ಕುದ್ದು ಗಟ್ಟಿಯಾಗಿ ಮಣ್ಣಾಯಿತು. ಆ ಜಲಬಿಂದುವೇ ಕುದ್ದು ಗಟ್ಟಿಯಾಗಿ ಖನಿಜವಾಯಿತು. ಮಣ್ಣ ಗರ್ಭದಲ್ಲಿ ಹಳದಿ ಲೋಹವಾಗಿ ಅರಳಿತು. ತನುವಿನಲ್ಲಿ ತನ್ಮಯವಾದ ಅರಿವಿನ ಬೆಳಕಿನಿಂದ ಸೃಷ್ಟಿಯಾದ ಈ ಮೂರೂ ವಸ್ತುಗಳು ಅರಿವಿನ ತನುವನ್ನು ಹೇಗೆ ಬಂಧಿಸಬಲ್ಲವು ಎಂದು ಮನಕ್ಕೆ ಹೊಳೆದರೆ ಸಾಕು, ಚಿತ್ತ ಅರಿವಿನ ಮೂಲಕ ಹಾದು ನಿಜ ವಸ್ತುವಿನಲ್ಲಿ ನೆಟ್ಟು ಆ ವಸ್ತುಗಳು ತನುವನ್ನು ಬಾಧಿಸಲಾರವು; ಅರಳಿಸಲಾರವು; ಬಂಧಿಸಲಾರವು.

ಅಜ್ಞಾನದಿಂದಾಗಿ, ಮನ ತನುವಿನೊಂದಿಗೆ ತಾನೆ ಬಂಧಿಸಿಕೊಂಡಿತ್ತು; ಅರಿವಿನೊಂದಿಗೆ ಮನ ಬೆರೆತು ತಾನೆ ಅವುಗಳಿಂದ ಮುಕ್ತನಾಯಿತು.

90

ಕರಕನಿಷ್ಟ ಕಬ್ಬಿಣವ ನೆರಹಿರೆ, ಪರುಷ ಮುಟ್ಟಲು ಚಿನ್ನವಾಗದೆ?
ಗುರು ಕಾರುಣ್ಯವ ಪಡೆವರು ಇಂದು ಶರಣರೊಳು ಬೆರೆದರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣ.

''ಆರಾರ ಸಂಗವನೇನ ಮಾಡದಯ್ಯಾ? ಕೀಡೆ ಕುಂಡಲಿಗನಾಗದೆ ಅಯ್ಯಾ? ಚಂದನದ ಸನ್ನಿಧಿಯಲ್ಲಿ ಪರಿಮಳ ತಾಗಿ ಬೇವು, ಬೊಬ್ಬುಲಿ, ತರಿಯ ಗಂಧಗಳಾಗವೆ? ನಮ್ಮ ಕೂಡಲಸಂಗನ ಶರಣರ ಕರ್ಮ ನಿರ್ಮಳವಾಗದಿಹುದೆ?'' ಎಂದು ಹೇಳಿದ ಅಣ್ಣ ಬಸವಣ್ಣನವರ ಸೂತ್ರ, ಅಪ್ಪಣ್ಣ ಶರಣರ ಸೂತ್ರ ಒಂದೇ ಆಗಿದೆ. ಯಾರು ಹೇಳಿದರೇನು? ಸತ್ಯ ಒಂದೇ.

ಕಬ್ಬಿಣಕ್ಕೆ ಪರುಷ ತಾಗಿದರೆ ಸಾಕು ಚಿನ್ನವಾಗುತ್ತದೆ. ತನ್ನ ಮೊದಲ ಗುಣ ಕಳೆದುಕೊಳ್ಳುತ್ತದೆ. ಕಬ್ಬಿಣ ಎಲ್ಲಿ ಕಡಿದರೂ ಕಪ್ಪೇ. ಚಿನ್ನ ಎಲ್ಲಿ ಕಡಿದರೂ ಹಳದಿಯೇ.

ಎರಡೂ ಲೋಹಗಳೇ. ಒಂದು ಕಪ್ಪು ಮತ್ತೊಂದು ಹಳದಿ. ಕಪ್ಪು ಲೋಹವೇ ಹಳದಿಯಾಗುತ್ತದೆ. ಅದಕ್ಕೆ ಪರುಷ ಮಣಿ ತಾಗಬೇಕು. ಅದು ಕೂಡಾ ಲೋಹದ ಗರ್ಭದಲ್ಲಿಯೇ ಇದೆ. ಇದು ಭೂಗರ್ಭದ ಪ್ರಕೃತಿಯಲ್ಲಿ ಘಟಿಸಬೇಕು.

ಕುಂಡಲಿಗ ಕೀಡೆಯನ್ನು ತಂದು, ತನ್ನ ಗೂಡಿನಲ್ಲಿ ಬಂಧಿಸಿ, ಪ್ರತಿ ದಿನ ಹಾಡಿ ಹಾಡಿ ತನ್ನಂತೆ ಮಾಡಿಕೊಳ್ಳುತ್ತದೆ. ಹಾಗೆಯೇ ಚಂದನದ ಸಂಗ ಮಾಡಿದ ಬೇವು ಕೂಡಾ ಗಂಧವಾಗಿ ಮಾರ್ಪಡುತ್ತದೆ.

ಮನ ತನ್ನ ರುಚಿಗಾಗಿ ತನುವನ್ನು ಎಲ್ಲೆಂದರಲ್ಲಿ ಸುಳಿದಾಡಿಸುತ್ತದೆ. ಹಾಗೆಯೆ ಮನಕ್ಕೆ ಗುರು ಕಾರುಣ್ಯದ ಅರಿವಿನ ರುಚಿ ಹಿಡಿಸಿ, ಶರಣರ ಸಂಗ ಮಾಡಿದರೆ ಸಾಕು ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನ ಸಂಗಮಾಡಿ ಆ ಅರಿವಿನೊಳಗೆ ಬೆರೆತು ಬಸವ ಪ್ರಿಯ ಕೂಡಲ ಚೆನ್ನಬಸವಣ್ಣನೇ ತಾನಾಗುತ್ತದೆ. ಕರಕನಿಷ್ಟವಾದ ಕಬ್ಬಿಣ್ಣವು ಹೊನ್ನಾದಂತೆ!

91

ಕರವನರಿದಂಗೆ ಕಮಲದ ಹಂಗೇಕೊ?
ಇರವನರಿದಂಗೆ ಪರದ ಹಂಗೇಕೊ?
ಪರವನರಿದಂಗೆ ಇರವದ ಹಂಗೇಕೊ?
ಇಹ ಪರವೆಂಬ ಉಭಯವಳಿದ ಶರಣಂಗೆ ಮರ್ತ್ಯದ ನರರ ಹಂಗೇಕೊ ಹೇಳಾ,
ಬಸವ ಪ್ರಿಯ ಕೂಡಲ ಚೆನ್ನಬಸವಣ್ಣಾ?

ಕಾಯವೇ ಕೈಲಾಸವಾದ ಮೇಲೆ ಇಹ ಪರಗಳ ಚಿಂತೆಯೇಕೆ? ಕಮಲ ಅರಳುವುದು ಕೆಸರಿನಲ್ಲಿ. ಕೆಸರು ಸುಂದರವಾದ ಕಮಲಕ್ಕೆ ಜನ್ಮ ಕೊಡುವುದು. ಕಮಲ ನೋಡುಗನಿಗೆ ಕೆಸರು ಕಾಣುವುದಿಲ್ಲ. ಕೆಸರು ನೋಡುವವನಿಗೆ ಕಮಲ ಕಾಣುವುದಿಲ್ಲ. ಕಮಲಕ್ಕೆ ಜನ್ಮ ಕೊಡುವುದು ಕೆಸರಿನ ಕಾಯಕ. ಹಾಗೆಯೇ ಕಾಯಕ್ಕೆ ಅರಿವೇ ಪ್ರಧಾನ. ಅರಿವೆಂಬ ಗುರುದೇವನ ರಕ್ಷಣೆ ಗಾಗಿಯೇ ಕಾಯ ಜನ್ಮ ತಳೆದಿದೆ. ಕಾಯ ಹೇಗಿದ್ದರೇನು? ಅದು ಹೆಣ್ಣಾದರೇನು, ಗಂಡಾದರೇನು? ಕಾಯದಲ್ಲಿ ಅರಿವಿನ ಕೈಲಾಸವೇ ಅಡಗಿದೆ. ಕಣ್ಣು ಕಿವಿ ಮೂಗು ನಾಲಿಗೆ ಚರ್ಮ ಸೇರಿದಂತೆ ಐದು ಮಹಾಜ್ಞಾನದ ದ್ವಾರಗಳನ್ನು ಹೊಂದಿದೆ.

ಐದು ಜಗದ್ಗುರುಗಳು ಕಾಯದ ಕೈಲಾಸದಲ್ಲಿ ನೆಲೆಸಿದ್ದಾರೆ. ಕಾಯದ ಇರವನು ಅರಿದವಂಗೆ ಮರ್ತ್ಯದ ನರರ ಹಂಗೇಕೆ?

ಇಹ ಪರವೆಂಬ ಉಭಯವನು ಅಳಿದು ಕಾಯದ ಕೈಲಾಸಕ್ಕೆ ಶರಣು ಹೋಗಿ ಶರಣನೇ ಆದ ಶರಣ ಆತ ಬಸವಪ್ರಿಯ ಕೂಡಲಚೆನ್ನಬಸವಣ್ಣನೆ ಹೌದು. ಆತ ಕರದಲ್ಲಿ ಸ್ಥಲಗಳನ್ನು ಹುಡುಕುವುದಿಲ್ಲ. ಆತನ ಕರಸ್ಥಲದಲ್ಲಿ ಲಿಂಗ ಬಂದು ಚುಳುಕಾದುದನ್ನು ಆ ಲಿಂಗವೇ ಲಿಂಗಾಂಗವಾದುದು ಆತನಿಗೆ ವೇದ್ಯವಾಗುವುದು.

92

ಕರಿದೈದು ಬಿಳಿದೈದು ಭಾಸುರವೈದು ಹದಿನೈದು ಬಗೆಯ
ಕರಣವ ಸುಟ್ಟು, ಸುರತ ಸುಗ್ಗಿ,
ಕಾಲ ಕಾಮಾದಿಗಳೈವರ ಗೆದ್ದರೆ,
ಬಸವ ಪ್ರಿಯ ಕೂಡಲಚೆನ್ನಬಸವಣ್ಣ.

ತನು, ಐದು ಜ್ಞಾನದ ಮಹಾ ಜ್ಞಾನೇಂದ್ರಿಯಗಳ ಅರಿವಿನ ಗಣಿ. ಇದನ್ನು ಅರಿಯಬೇಕಾದ ಮನ ಮಹಾಜ್ಞಾನೇಂದ್ರಿಯಗಳನ್ನು ಆವರಿಸಿಕೊಂಡು ಕಪ್ಪನೆಯ ಕತ್ತಲಾಗಿದೆ. ಈ ಕತ್ತಲೆಯ ಮನವೇ ಬೆಳಕಿನ ಮಾತುಗಳನ್ನು ಸಂಗ್ರಹಿಸಿಕೊಂಡು, ಬೆಳಕಿನ ವೇಷ ಧರಿಸಿ, ಕತ್ತಲನ್ನು ಹಿಡಿದು ಬೆಳಕಿನ ಮಾತುಗಳನ್ನು ಆಡುತ್ತದೆ. ಇದು ಕರಿದೈದು.

ತನುವಿನ ಜ್ಞಾನ ಪಡೆಯಲು ಮನಕ್ಕೆ ಸುಲುಭವಾಗಲೆಂದು ಜ್ಞಾನಿಗಳು ಭಗವದ್ಗೀತೆ, ಬೈಬಲ್, ಉಪನಿಷತ್ ವೇದ ಆಗಮ ಭಾಗವತಗಳನ್ನು ರಚಿಸಿದರು. ಆದರೆ ಮನ ಓದಿ ಪಂಡಿತನಾಯಿತು, ಶಾಸ್ತ್ರಿಯಾಯಿತು; ಜ್ಞಾನಿ ಮಾತ್ರ ಆಗಲು ಸಾಧ್ಯವಾಗಲಿಲ್ಲ. ಆಡುವ ಮಾತಿನಲ್ಲಿ ದೋಷವಿಲ್ಲ; ಮಾತುಗಳು ಬೆಳ್ಳನೆಯ ಹಾಲಿನಂತೆ ಹೊಳೆಯುತ್ತವೆ. ಆದರೆ ನಡೆಯಲು ಸಾಧ್ಯವಾಗುತ್ತಿಲ್ಲ.

ಪಂಡಿತನ ಮಾತಿನಲ್ಲಿ ಜ್ಞಾನ ಕಂಡರೆ, ಆತನ ನಡತೆಯಲ್ಲಿ ಅಜ್ಞಾನ ಕಾಣುತ್ತದೆ. ಕಣ್ಣು, ಕಿವಿ ಮೂಗು ಚರ್ಮ ನಾಲಿಗೆ ಇವು ಯಾವು ತನ್ನ ಸ್ವಭಾವ ಕಳೆದುಕೊಂಡಿಲ್ಲ. ಇದು ಬಿಳಿದೈದು.

ತನುವಿನಲ್ಲಿ ತನ್ಮಯವಾದ ಜ್ಞಾನವನ್ನು ಮಹಾವೀರ ಶೂರ ಕಲಿ ಎಂದು ಕರೆದಿದ್ದಾರೆ. ಇಂತಹ ಶೂರ ಪರಮವೀರ ಅಂಗದಲ್ಲಿ ಸಂಗಮವಾಗಿದ್ದರೂ ಕಾಯದ ಕೆಲಸಕ್ಕೆ ಬಂದು ಅದನ್ನು ಕೈಲಾಸ ಮಾಡದ ಹೆಳವನಾಗಿದ್ದಾನೆ. ಮನಕ್ಕೆ ಉಪದೇಶ ನೀಡುತ್ತಾನೆ; ಅಜ್ಞಾನದ ಕೆಲಸಗಳಿಗೆ ತಡೆ ಒಡ್ಡುತ್ತಾನೆ. ಆದರೂ ಈ ಶೂರನ ಮಾತು ಮನ ಕೇಳುವುದಿಲ್ಲ. ಈತನೇ ಶೂರ, ಪರಮವೀರ, ತನು ಈತನ ಸಂಪತ್ತು ಎಂದು ಮನ ತಿಳಿದೇ ಇಲ್ಲ. ಇದು ಭಾಸುರವೈದು.

ಈ ಹದಿನೈದು ಬಗೆಯ ಇಂದ್ರಿಯಗಳನ್ನು ಸುಟ್ಟು ಕಣ ಮಾಡಿ ಹೊಟ್ಟು ತೂರಿ ಜ್ಞಾನದ ಸುಗ್ಗಿ ಮಾಡಲೇಬೇಕಾಗಿದೆ. ಅಂಗವನ್ನು ಆವರಿಸಿದ ಕಾಲ ಕಾಮಾದಿಗಳೈವರೊಂದಿಗೆ ಜ್ಞಾನ ಯುದ್ಧಮಾಡಿ ಗೆದ್ದು ಮಹಾವೀರ ನಾಗಲೇಬೇಕಿದೆ. ಬಸವ ಪ್ರಿಯ ಕೂಡಲ ಚೆನ್ನ ಬಸವಣ್ಣನಾಗಲೇಬೇಕಿದೆ.

93

ಕಲ್ಲುದೇವರ ನಂಬಿದವರೆಲ್ಲ
ಕಲಿಯುಗದ ಕತ್ತಲೆಯೊಳಗಾಗಿ ಕತ್ತೆಗಳಾಗಿ ಹೋದರು.
ಅದೇನು ಕಾರಣವೆಂದರೆ:
ತಮ್ಮ ದೇವರು ಇಕ್ಕಿದ ಓಗರವನುಣ್ಣಲೊಲ್ಲದೆ, ಒಡನೆ ಮಾತಾಡದು.
ಗುಡಿಯ ಕಲ್ಲು ಮೇಲೆ ಬಿದ್ದಡೆ ಒಡೆದು ಹಾಳಾಗಿ ಹೋಗುತ್ತದೆ.
ಇಂತಪ್ಪ ಕಲ್ಲ ಪೂಜಿಸಿ, ಸಲ್ಲದೆ ಹೋದರು. ಅದಂತಿರಲಿ.
ಮಣ್ಣ ದೇವರು ಎಂದು ಪೂಜಿಸಿ,
ಮಜ್ಜನಕ್ಕೆ ನೀಡಲಮ್ಮದೆ, ಲಜ್ಜೆಗೆಟ್ಟು ನಾಯಾಗಿ ಬೊಗಳಿ ಹೋದರು.
ಅದಂತಿರಲಿ.
ಮರನ ದೇವರೆಂದು ಪೂಜಿಸಿ ಧೂಪ ದೀಪವ ಮುಂದಿಡಲಮ್ಮರು.
ಅದೊಂದು ವ್ಯಾಪಾರಕ್ಕೊಳಗಾಗಿ,
ತಾಪತ್ರಯಕ್ಕೆ ಸಿಲ್ಕಿ ಪಾಪಿಗಳಾಗಿ ಸತ್ತು ಹೋದರು.
ಸಲ್ಲದು ಶಿವನಲ್ಲ. ಎಮ್ಮ ಭಕ್ತರಿಗೆ ಈ ಪರಿಯಲ್ಲ ಕೇಳಿರಣ್ಣಾ.
ಇದೆಲ್ಲ ಪಾಪಿಗಳ ಹಾಗೆ. ಎನ್ನ ದೇವ ನಡೆವ, ನುಡಿವ,
ಇಕ್ಕಿದರುಂಬ, ಕೊಟ್ಟರೆ ತಕ್ಕೊಂಬ,
ಪೂಜಿಸಿದರೆ ಪೂಜೆಗೊಂಬ, ಅನೇಕ ಪೂಜೆಯಲ್ಲಿ.
ತನ್ನ ನಂಬಿದ ಭಕ್ತರಿಗೆ ಬುದ್ಧಿಯ ಹೇಳುವ, ಶುದ್ಧಾತ್ಮನ ತೋರುವ.
ತಾ ಮುದ್ದಿನಲ್ಲಿ ಸಜ್ಜನ ಸದ್ಭಕ್ತರಲ್ಲಿ ಇದ್ದೂ ಇಲ್ಲದಂತಿಪ್ಪ.
ಪ್ರಸಿದ್ಧ ಜಂಗಮಲಿಂಗವ ಪೂಜಿಸಿ,
ಸ್ವಯಲಿಂಗಿಗಳಾದರು ಎಮ್ಮ ಶರಣರು.
ಅವರು ಹೋದ ಹಾದಿಯ ನೋಡಿದರೆ, ಎನಗೊಂದು ಹಾದಿ ಸಿಕ್ಕಿತ್ತು.

ಆ ಹಾದಿಗೊಂಡು ಹೋಗಿ ಅವರ ಪಾದವ್ಯ ಕಂಡು,
ಕೆಟ್ಟು ಬಟ್ಟ ಬಯಲಾದೆನಯ್ಯಾ
ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ,

ತನುವಿನ ಮೂಲಕ ಸುಖ ಪಡಲು ಬಂದ ಮನ, ತನುವನ್ನು ಆಶ್ರಯಿಸಿಕೊಂಡು ತನುವಿಗೆ ಸಂಕಟವನ್ನು ಒಡ್ಡುತ್ತದೆ. ಕ್ಷಣ ಕ್ಷಣಕ್ಕೂ ತನುವನ್ನು ಕುದಿಸುತ್ತದೆ, ತನುವನ್ನು ಸುಖಕ್ಕೆ ಈಡು ಮಾಡುತ್ತದೆ. ಇವೆರಡೂ ತೊಂದರೆಗಳೇ ಎಂದು ತನುವಿಗೆ ತಿಳಿಯುವ ಶಕ್ತಿ ಇಲ್ಲ. ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುದೇವನು ಇದನ್ನು ಹೇಳಿದರೂ ಕೂಡಾ ಮನಕ್ಕೆ ತಿಳಿಯುವ ಶಕ್ತಿ ಇಲ್ಲ. ಹೀಗೆ ಅರಿವಿನ ತನು ಆದರೂ ಕೂಡಾ ತನುವಿನ ಮೂಲಕವೇ ಅಜ್ಞಾನದ ಕೆಲಸ; ತನುವಿನ ಮೂಲಕವೇ ಜ್ಞಾನದ ಕೆಲಸಗಳು ನಡೆಯುತ್ತವೆ. ಇದು ಅಜ್ಞಾನ, ಇದು ಜ್ಞಾನ ಎಂದು ಪ್ರತಿ ತನುವಿಗೆ ತಿಳಿಯುತ್ತದೆ. ಆದರೆ ಜ್ಞಾನದಿಂದ ಇದ್ದು ಜ್ಞಾನದಲ್ಲಿ ಸುಖಿಸಲು ಬರುವುದಿಲ್ಲ. ಏಕೆಂದರೆ ಅರಿವಿನ ತನುವನ್ನು ಅಜ್ಞಾನದ ಮನ ಆವರಿಸಿದೆ.

ಕಲ್ಲು ನೋಡಿ, ಕಲ್ಲು ಎಂದು ಹೇಳುತ್ತದೆ. ಅದೇ ಕಲ್ಲನ್ನು ಮೂರ್ತಿ ಮಾಡಿ ದೇವರೆಂದು ಹೇಳುತ್ತದೆ. ಕಲ್ಲಿನಿಂದಲೇ ಆಲಯ ನಿರ್ಮಿಸಿ, ಕಲಶಾರೋಹಣ ಮಾಡಿ, ಆ ಕಲ್ಲನ್ನು ಆಲಯದಲ್ಲಿಟ್ಟು, ದೇವರೆಂದು ನಿತ್ಯ ನಿತ್ಯ ಪೂಜಿಸುತ್ತದೆ. ಹೆಣ್ಣು ದೇವರು ಗಂಡು ದೇವರೆಂದು ಕಲ್ಲಿನಲ್ಲಿಯೇ ನಿರ್ಮಿಸಿ, ಕಲ್ಯಾಣೋತ್ಸವ ಮಾಡಿ, ಶಯನ ಗೃಹಕ್ಕೆ ಕಳಿಸುತ್ತದೆ.

ಕಲ್ಲನ್ನು ಕಲ್ಲೆಂದು ನೋಡಲು ಭಗವದ್ಗೀತೆ, ವೇದ, ಉಪನಿಷತ್ತುಗಳನ್ನು ಓದಬೇಕೆ? ಕೆತ್ತಿದ ಕಲ್ಲು ಕಲ್ಲೇ, ಕೆತ್ತದ ಕಲ್ಲು ಕಲ್ಲೆ ಎಂದು ತಿಳಿಯುವ ಕಣ್ಣು ಕಣ್ಣಿನಲ್ಲಿಯೇ ಇದೆ. ಅದನ್ನೇ ದೇವರೆಂದು ತಿಳಿಯುವ ಅಜ್ಞಾನದ ಕಣ್ಣು ಕಣ್ಣಿನಲ್ಲಿಯೇ ಇದೆ. ಇಂತಹ ಅಜ್ಞಾನದ ತನುಗಳನ್ನು ಅಪ್ಪಣ್ಣ ಶರಣರು, ವ್ಯಾಪಾರಕ್ಕೊಳಗಾದ ಪಾಪಿಗಳ ತನುವೆಂದು ಕರೆದಿದ್ದಾರೆ. ಹಲವಾರು ತಾಪತ್ರಯಳಿಗೆ ಸಿಲ್ಕಿ ಪಾಪಿಗಳಾಗಿ ಅಜ್ಞಾನದಿಂದ ಸತ್ತು ಹೋದರು. ಸಲ್ಲದು ಶಿವನಲ್ಲಿ ಅರಿವಿನ ಕಾಯಕಕ್ಕೆ ಈ ಕಾಯಗಳು ಎಂದು ಕನಿಕರಿಸಿದ್ದಾರೆ.

'ತನ್ನ ತಾನರಿಯದ ಮುನ್ನ ತನ್ಮಯವಾದ ಅರಿವು. ತನ್ನ ತಾನರಿತ ಬಳಿಕ ಅರಿವು ತನ್ಮಯ ವೆಂದರಿತ ಅರಿವು. ತನ್ನಲ್ಲಿರುವ ಆ ಅರಿವೇ ಕರಿಗೊಂಡ ಬಳಿಕ ತಾನೇ ಸೌರಾಷ್ಟ್ರ ಸೋಮೇಶ್ವರ' ಎಂದು ಆದ್ಯಯ್ಯ ಶರಣರು ಹೇಳಿದ್ದಾರೆ.

ಅರಿವಿನಿಂದ ನೋಡಿದರೆ ಕಲ್ಲು. ಮರೆವಿನಿಂದ ನೋಡಿದರೆ ದೇವರು. ಮನವೆಂಬ ಮರೆವನ್ನು ಅರಿವಿನಲ್ಲಿ ಅದ್ದಿ, ಆ ಅರಿವಿನಿಂದ ನೋಡಿದರೆ ಬರೀ ಕಲ್ಲು. ಕೆತ್ತಿದ್ದು ತನುವೇ. ಅಜ್ಞಾನದಿಂದ ಆರಾಧಿಸಿ ವ್ಯವಹಾರ ಮಾಡಿದ್ದು ಕೂಡಾ ತನುವೇ. ತನುವಿನ ಜ್ಞಾನ ತನುವಿಗೆ ಬಳಕೆಯಾದರೆ ತನುವೇ ದೇವರು. ತನುಗಳೆಲ್ಲ ದೇವರೆ.

ದೇವ ತನು ನುಡಿಯುತ್ತದೆ. ನಡೆಯುತ್ತದೆ. ಪರಿಮಳ ಆಸ್ವಾದಿಸುತ್ತದೆ. ರುಚಿಸಿ, ಮುಟ್ಟಿ ಆನಂದದಿಂದ ಕುಣಿ ಕುಣಿದಾಡುತ್ತದೆ. ಅರಿತು ಕೇಳಿದರೆ ಕೇಳಿದ ನುಡಿಗಳೆಲ್ಲ ಬೆಳಗುವ ಮುತ್ತುಗಳು. ನುಡಿಯುವ ನುಡಿಗಳೆಲ್ಲ ಮುತ್ತಿನ ಹಾರಗಳು! ರುಚಿಸುವ ಪದಾರ್ಥವೆಲ್ಲ ಪ್ರಸಾದ. ನೋಡುವ ನೋಟವೆಲ್ಲ ಬರೀ ಬೆಳಗು. ಮೂಸಿಸುವ ಸುಂಗಧ ದುರ್ಗಂಧಗಳೆಲ್ಲ ಅರಿವಿನ ಪರಿಮಳ.

ತನು ಒಂದು ನಡೆದಾಡುವ ದೇವರು. ನಡೆಯುತ್ತಾ ನುಡಿಯುವ ಬೋಧೀವೃಕ್ಷ! ಬುದ್ಧ ಜಗದ ತನುಗಳನ್ನು ಬೋಧೀವೃಕ್ಷ ಎಂದು ಕರೆದ.

ಅರಿವಿನ ಹಾದಿಯಲ್ಲಿ ನಡೆಯುವ ಶರಣರನ್ನು ಗಮನಿಸಬೇಕು. ಅವರು ನಡೆದಂತೆ ಅರಿವಿನ ಹಾದಿಯಲ್ಲಿ ನಡೆಯಬೇಕು. ತನುವನ್ನು ಆವರಿಸಿದ ಮನ ತನುವಿನಲ್ಲಿಯೇ ತನ್ಮಯವಾದ ಅರಿವಿನ ಮೇವನ್ನು ಮೇಯಬೇಕು. ಶರಣರ ಹಾದಿ ಹಿಡಿದು ಅರಿವಿಗೆ ಶರಣು ಹೋಗಿ ಶರಣನಾಗಬೇಕು. ನೋಡಿದ ನೋಟವೆಲ್ಲ ಬೆಳಕು. ನುಡಿದ ನುಡಿಯೆಲ್ಲ ಬೆಳಕು. ಕೇಳಿದ ಪದಗಳೆಲ್ಲ ಬೆಳಕು. ಬರೀ ಬಯಲ ಬೆಳಕಿನಲ್ಲಿ ಮಿಂದು ಬೆಳಕೇ ಆಗಿ ತನು ಪ್ರಜ್ವಲಿಸುವುದು. ಇದು ಅಪ್ಪಣ್ಣ ಶರಣರ ಆಶಯ.

94

ಕಾಡಬೇಡ ಕಂಡವರ, ಬೇಡಬೇಡ ನರರುಗಳ,
ಆಡಬೇಡ ಅಮೃತವ, ನೋಡಬೇಡ ಪರಸ್ತ್ರೀಯರ.
ಗಾಢಗಂಭೀರ ಲಿಂಗಾರೂಢವಾದ ಬಸವ ಪ್ರಿಯ ಕೂಡಲ ಚೆನ್ನಬಸವಣ್ಣ.

ಕಾಡಬೇಡ ಕಂಡವರ, ಬೇಡಬೇಡ ನರರುಗಳ:

ಅಂಗದಲ್ಲಿ ಸಂಪತ್ತು ಸಂಗಮವಾಗಿದೆ. ಅಂಗವನ್ನು ಆವರಿಸಿದ ಮನ ಅರಿಯದ್ದಕ್ಕಾಗಿ ಕಂಡವರನ್ನು ಕಾಡುತ್ತದೆ; ಅಂಗಲಾಚುತ್ತದೆ. ಅವರು ತನ್ನಂತೆ ಇರುವ ನರರೆಂದು ಈ ಮನವೆಂಬ ಮಂಗಕ್ಕೆ ಮನವರಿಕೆಯಾಗುತ್ತಿಲ್ಲ. ಬೇಡಿದರೆ ಎನ್ನೊಡೆಯನನ್ನು ಬೇಡಬೇಕು, ಕಾಡಿದರೆ ಎನ್ನೊಡೆಯನನ್ನೇ ಕಾಡಬೇಕು ಎಂದು ಹೇಳಿಕೊಡುವ ಗುರುದರ್ಶನ ಮನಕ್ಕೆ ಆಗಿಲ್ಲ. ಹೀಗಾಗಿ ಕಂಡವರನ್ನು ಬೇಡುತ್ತದೆ; ಕಾಡುತ್ತದೆ.

ಮನ ತನುವಿಗೆ ಅರಿವಿನ ಕಾವಿ ವೇಷ ಧರಿಸಿ ಕಂಡವರ ಕಾಡಿ ಬೇಡುತ್ತದೆ. ಖಾಕಿ, ಖಾದಿ ಧರಿಸಿ ಸೇವೆಯ ನೆಪದಲ್ಲಿ ಕಾಡಿಬೇಡುತ್ತದೆ. ತನುವಿಗೆ ವೇಷ ಯಾವುದು ಹಾಕಿದರೇನು? ಕಾಡುವುದು ಬೇಡುವುದು ನಿಲ್ಲುವುದಿಲ್ಲ.

ಮನ ತನುವನ್ನು ಹಿಡಿದು ಕಾಡಿ ಬೇಡುವುದಾದರೂ ಏನನ್ನು? ತನ್ನಂತೆ ಇರುವ ತನು, ಕಾಗದದಲ್ಲಿ ಮುದ್ರಿಸಿದ ಕರೆನ್ಸಿ, ಭೂಮಿಯಲ್ಲಿ ಅಗೆದು ತೆಗೆದ ಹಳದಿ ಲೋಹ. ಇದು ವಿನಿಮಯಕ್ಕಾಗಿ ತಾನೇ ಮಾಡಿಕೊಂಡ ಎರಡು ವಸ್ತುಗಳು! ಇವೆರಡೂ ತನುವಿಗಿಂತ ದೊಡ್ಡವಲ್ಲ. ತನುವನ್ನು ಬೇಡಿ, ಕಾಡಿ, ಕೊಂದು, ಹೀಯಾಳಿಸಿ, ಭ್ರಷ್ಟಾಚಾರ, ಸುಳ್ಳು ಹೇಳಿ, ನಿಂದೆ ಮಾಡಿ ಮತ್ತೊಂದು ತನು ಪಡೆಯಬೇಕಿಲ್ಲ.

ಬೇಡಿ ಕಾಡುವ ತನುವಿನಲ್ಲಿ, ನೀಡಿ ಧನ್ಯನಾದೆನೆಂದು ಅಹಂಕಾರ ಪಡುವ ತನುಗಳಲ್ಲಿ ಅರಿವಿನ ಸದ್‌ವಿಚಾರಯಿಲ್ಲದ್ದರಿಂದ ಬೇಡುವ ನೀಡುವ ಕ್ರಿಯೆಯಲ್ಲಿ ಮುಂದುವರೆದಿವೆ. ಕಾಡಿ ಬೇಡುವ ತನು ಭಿಕ್ಷುಕನಾಗಿದೆ. ನೀಡುವ ತನು ದಾನಿಯಾಗಿದೆ. ಬೇಡುವ, ನೀಡುವ ವಸ್ತುಗಳು ತನುಗಳವಲ್ಲ. ತನು ಆ ವಸ್ತುಗಳನ್ನು ಪ್ರೊಡೆಕ್ಟ್ ಮಾಡಿಲ್ಲ. ಹಸು ಹಾಲು ಉತ್ಪಾದಿಸಿದಂತೆ ತನು ಕರೆನ್ಸಿಯನ್ನು, ಹಳದಿ ಲೋಹವನ್ನು, ಅನ್ನವನ್ನು ಉತ್ಪಾದಿಸುವುದಿಲ್ಲ. ಅಂದ ಮೇಲೆ ತನು ಮತ್ತೊಂದು ತನ್ನುವನ್ನು ಬೇಡುವುದಾದರೂ ಏನು, ಕೊಡುವುದಾದರೂ ಏನು?

'ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ. ಇವು ಜಗಕ್ಕಿಕ್ಕಿದವಿ. ನಿನ್ನದೆಂಬುದು ಜ್ಞಾನರತ್ನ ಕಾಣಾ. ಅದನ್ನು ಕೆಡಗೊಡದೆ ಅಲಂಕರಿಸಿದೆಯಾದಡೆ ನಿನ್ನಂತ ಸಿರಿವಂತರು ಯಾರೂ ಇಲ್ಲ ಎಲೆ ಮನವೆ'. ಎಂದು ಪ್ರಭುಗಳು ಹೇಳಿದ್ದಾರೆ.

ಜಲ ಕುದ್ದು ಗಟ್ಟಿಯಾಗಿ ಭೂಮಿಯಾಗಿದೆ. ಆ ಜಲವೇ ಕುದ್ದು ಭೂಮಿಯೊಳಗೆ ಖನಿಜವಾಗಿದೆ. ಜಲಜನಕದಲ್ಲಿ ಆಮ್ಲಜನಕ ಬೆರೆತು ಜಲವಾಗಿದೆ. ಆ ಜಲದ ಅರಿವಿನ ಬಿಂದುವೇ ಗರ್ಭಹೊಕ್ಕು ತನುವಾಗಿದೆ. ಜಲ, ಭೂಮಿಯ ಮೇಲೆ ಹರಿದು ಗಿಡ ಮರ ಬಳ್ಳಿ ಪಶು ಪಕ್ಷಿ ಪ್ರಾಣಿ ಕೀಟ ಜಲಚರಗಳು ಹುಟ್ಟಿವೆ. ಸಕಲ ಸೃಷ್ಟಿಗೆ ಬಯಲು ಕಾರಣವಾಗಿ, ಸಕಲವನ್ನು ಸೃಷ್ಟಿಸಿ ತನ್ನ ಗರ್ಭದಲ್ಲಿ ಬಂಧಿಸಿಕೊಂಡಿದೆ. ತನುವಿಗೆ ಮಾತ್ರ ಇದೆಲ್ಲವನ್ನು ತಿಳಿಯುವ ಅರಿವಿದೆ. ಉಳಿದವುಗಳು ಜಲಬಿಂದುವುಳ್ಳ ಸ್ವ ಸ್ವರೂಪವೇ ಆಗಿವೆ. ಅಂದ ಮೇಲೆ ಅರಿವಿನ ಜಲಬಿಂದುವಿನಿಂದಾದ ಒಂದು ತನು, ಮತ್ತೊಂದು ತನುವನ್ನು ಕಾಡಿ ಬೇಡುವುದು ಹೇಯವಲ್ಲವೆ? ಅಹಂಕಾರದಿಂದ ದಾನಿಯೆಂದು ತಿಳಿದು ನೀಡುವುದು ಕೂಡಾ ಹೇಯವಲ್ಲವೆ?

ಇಲ್ಲಿ ಉಂಡರೆ ಸಂಗ, ಅಲ್ಲಿ ಉಂಡರೆ ಸಂಗ ಎಂದು ಹೇಳಿದ ಜ್ಞಾನಭಂಡಾರಿ ಬಸವಣ್ಣನವರ ಮಾತು ಹೇಯ ಮನಕ್ಕೆ ಹೊಳೆಯ ಬೇಡವೆ? ಕಾಡಿದರೆ ಅಂಗದಲ್ಲಿಯೆ ಸಂಗಮವಾದ ಅರಿವೆಂಬ ಗುರುದೇವನನ್ನೇ ಕಾಡುವೆ. ಬೇಡಿದರೆ ಅವನನ್ನೇ ಬೇಡುವೆ ಎಂದು ಮನಕ್ಕೆ ದೃಢವಾದರೆ ಸಾಕು ಆ ಮನವೇ ಘನಮನವಾಗುವುದು.

ಆಡಬೇಡ ಅನೃತವ, ನೋಡಬೇಡ ಪರಸ್ತ್ರೀಯರ:

ಆಡಿದರೆ ಹಾಡಿದರೆ ಅರಿವಿನಿಂದ ಹಾಡು, ಅರಿವಿನಿಂದ ನೋಡು, ಅರಿವಿನಿಂದ ಆಡು. ತನು ಅರಿವಿನ ಸಂಪತ್ತು. ತನುವನ್ನು ಆವರಿಸಿದ ಮನ, ತನುವಿನಲ್ಲಿ ತನ್ಮಯವಾದ ಅರಿವನ್ನ ಬಳಕೆ ಮಾಡಿಕೊಂಡು ಆಡಿದರೆ ಆಡಿದ ನುಡಿಗಳೆಲ್ಲ ಬೆಳಗುವ ಮುತ್ತುಗಳು. ನುಡಿದರೆ ಮುತ್ತಿನಹಾರದಂತಿರಬೇಕು. ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು ಎಂದು ಅಣ್ಣನವರು ನುಡಿದಿದ್ದಾರೆ. ಮುತ್ತು, ಸ್ಫಟಿಕ, ಮಾಣಿಕ್ಯ ನುಡಿಯುವುದಿಲ್ಲ. ಇವು ಮೂರೂ ವಸ್ತುಗಳು ಜಲಬಿಂದುವಿನಿಂದಲೇ ಸೃಷ್ಟಿಯಾಗಿವೆ. ಬೆಳಗುವ ಮೂಲಕ ನುಡಿಯುತ್ತವೆ. ತನು ಕೂಡಾ ಅರಿವಿನ ಜಲ ಬಿಂದುವಿನಿಂದಲೆ ಜನ್ಮ ತಳೆದಿದೆ. ನಡೆದಾಡುತ್ತ ಅರಿವಿನ ನುಡಿ ನುಡಿಯುವ ಮೂಲಕ ಬೆಳಗಬೇಕು. ಅನೃತವ ನುಡಿದು ಹಾಳಾಗಬಾರದು ಎಂದು ಅಪ್ಪಣ್ಣ ಶರಣರು ಮನಕ್ಕೆ ಅಪ್ಪಣೆ ಮಾಡಿದ್ದಾರೆ.

ನೋಡಬೇಡ ಪರಸ್ತ್ರೀಯರ:

ಇದು ಅಪ್ಪಣ್ಣ ಶರಣರ ಅದ್ಭುತ ಸೂತ್ರ! ಮನ ಈ ಒಂದು ಸೂತ್ರವನ್ನು ಪಾಲಿಸಿದರೆ ಸಾಕು ಜಗದ ತನುಗಳೆಲ್ಲ ಸುಂದರವಾಗಿ ಬೆಳಗುತ್ತವೆ.

ತನು ಹೆಣ್ಣು ಅಲ್ಲ ಗಂಡೂ ಅಲ್ಲ, ಏಕೆಂದರೆ ಕಣ್ಣಿನ ಬೆಳಕು, ಕಿವಿಯಲ್ಲಿರುವ ಶಬ್ದ, ಮೂಗಿನ ಪರಿಮಳ, ಚರ್ಮದ ಸ್ಪರ್ಶ, ನಾಲಿಗೆಯ ರುಚಿ, ತನುವಿನಲ್ಲಿ ಹರಿಯುವ ರಕ್ತ, ಮೂಳೆ, ಮಾಂಸ, ರೋಮ, ಉಗುರು, ಹಲ್ಲು, ಒಸರುವ ಜೊಲ್ಲು, ಮಲ, ಮೂತ್ರ, ಜನನಕ್ಕೆ ಕಾರಣವಾಗುವ ಬಿಂದು ಇವು ಯಾವು ಹೆಣ್ಣು ಅಲ್ಲ, ಗಂಡೂ ಅಲ್ಲ. ಹೆಣ್ಣು, ಗಂಡು ಎಂದು ಹೇಳುವ ಎರಡೂ ತನುಗಳಲ್ಲಿ ಸಮಾನವಾಗಿವೆ. ಅಂದಮೇಲೆ ಯಾವುದು ಹೆಣ್ಣು ಯಾವುದು ಗಂಡು?

ಮೊಲೆ ಮುಡಿ ಬಂದರೆ ಹೆಣ್ಣೆಂಬರಯ್ಯಾ, ಮೀಸೆಕಾಸೆ ಬಂದರೆ ಗಂಡೆಂಬರಯ್ಯಾ. ನಡುವೆ ಸುಳಿವ ಆತ್ಮ ಹೆಣ್ಣು ಅಲ್ಲ ಗಂಡೂ ಅಲ್ಲ. ಅಂದ ಮೇಲೆ ಹೆಣ್ಣೆಂದರೆ ಯಾವುದು, ಗಂಡೆಂದರೆ ಯಾವುದು? ಎಂದು ಮನವನ್ನು ಪ್ರಶ್ನಿಸಿಕೊಂಡರೆ ಉತ್ತರ ಹೊಳೆಯಬಹುದು.

ತನುವನ್ನು ಆವರಿಸಿದ ಮನ ತಾನು ಗಂಡೆಂದು, ತಾನು ಹೆಣ್ಣೆಂದು ಸುಳ್ಳು

ನಿರ್ಧರಿಸಿಕೊಂಡಿದೆ. ನಿರ್ಧರಿಸಿಕೊಂಡ ಮನವೇ ತನಗೆ ತಾನೇ ಪ್ರಶ್ನಿಸಿಕೊಂಡರೆ ತನುವನ್ನು ಆವರಿಸಿದ ತಾನು ಹೆಣ್ಣೆಂದು ಅದಕ್ಕೆ ಖಚಿತವಾಗಿ ಹೊಳೆಯುತ್ತದೆ. ತನುವಿನಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನನೆ ಗಂಡೆಂದು, ಮಹಾಪುರುಷನೆಂದು ಮನಕ್ಕೆ ಅರಿವಾಗುತ್ತದೆ.

ಆಗ ಮನ ಸಖಿಯಾಗಿ ಅರಿವೆಂಬ ಸಖನೊಂದಿಗೆ ಬೆರೆತು ತನುವಿನಲ್ಲಿಯೇ ಸಂಗಮವಾಗುತ್ತದೆ. ಮನ ಶಿಷ್ಯನಾಗಿ ಅರಿವೆಂಬ ಗುರುದೇವನೊಂದಿಗೆ ಬೆರೆತು ತನುವಿನ ಸಂಗಮದಲ್ಲಿ ಒಂದಾಗುತ್ತದೆ. ಮನ ಭಕ್ತನಾಗಿ ಅರಿವೆಂಬ ದೇವನೊಂದಿಗೆ ಬೆರೆತು ತನುವಿನ ಸಂಗಮದಲ್ಲಿ ಒಂದಾಗುತ್ತದೆ. ಮನ ಸ್ತ್ರೀಯಾಗಿ ಅರಿವೆಂಬ ಪರಮಪುರುಷನೊಂದಿಗೆ ಬೆರೆತು ತನುವಿನ ಸಂಗಮದಲ್ಲಿ ಒಂದಾಗುತ್ತದೆ.

ಹೀಗೆ ಸ್ತ್ರೀಯಾದ ಮನ,ತಾನು ಸ್ತ್ರೀ ತನುವಿನಲ್ಲಿ ಸಂಗಮವಾದ ಪರಮಪುರುಷನೇ ಎನ್ನ ಗಂಡನೆಂದು ಕುಲುಜಳಾದ ಮನ ಇನ್ನೆಂದಿಗೂ ಕುಲ ಕೆಡುವುದಿಲ್ಲ. ತನ್ನ ಪಾತಿವ್ರತ್ಯಕ್ಕೆ ಭಂಗ ತಂದುಕೊಳ್ಳುವುದಿಲ್ಲ.

ಮನವುಳ್ಳ ತನುವಿಗೆ ತನು ಸ್ತ್ರೀಯಾಗಿ, ಪುರುಷನಾಗಿ ಕಾಣುತ್ತದೆ; ಕಾಡುತ್ತದೆ. ಆ ಮನವೇ ಅರಿವಿನಿಂದ ನೋಡಿ ಅರಿವಿನಲ್ಲಿಯೇ ಬೆರೆತು ಆ ಅರಿವನ್ನೇ ಪರಮಪುರುಷನನ್ನಾಗಿ ಮಾಡಿಕೊಂಡು ಘನಮನವಾದಾಗ ಆ ಮನ ಕೇವಲ ಹೆಣ್ಣು. ಅರಿವೇ ಗಂಡು!

ಮನ ಅರಿತು ಸ್ವತಹ ಸ್ತ್ರೀಯೆಂದು ಅರಿವಿನಿಂದ ತಿಳಿದು ದೃಢಪಡಿಸಿಕೊಂಡ ಮೇಲೆ, ಮನ ತಾನು ಸ್ವತಹ ಸ್ತ್ರೀಯಾಗಿ ಪರಸ್ತ್ರೀಯರನ್ನು. ಸ್ತ್ರೀ ಎಂದು ನೋಡುವುದೆಂದರೇನು? ತಾನು ಸ್ತ್ರೀ; ಪರಸ್ತ್ರೀಯರು ಕೂಡ ಸ್ತ್ರೀಯರೆ ಆಗಿದ್ದಾರೆ. ಸ್ತ್ರೀ ಸ್ತ್ರೀಯೊಂದಿಗೆ ಕೂಡುವುದಿಲ್ಲ. ಕೂಡಿದರೆ ಯಾವ ಸುಖವೂ ಇಲ್ಲ. ಹೆಣ್ಣು ಹೆಣ್ಣು ಕೂಡಿದ ಕೂಟ ಸಮಾಜ ಬಾಹಿರ ಕೂಟ. ಕೂಡಿ ಅಗಲುವ ಕೂಟ. ಅಜ್ಞಾನದ ಕೂಟ!

ಮನ ಮತ್ತು ಅರಿವೆಂಬ ಹೆಣ್ಣು ಗಂಡು ಕೂಡುವ ಕೂಟ ಕೂಡದ ಅಗಲದ ಕೂಟ. ಜ್ಞಾನದ ಕೂಟ ಗಾಢ ಗಂಭೀರ ಲಿಂಗಾರೂಢವಾದ ಕೂಟ. ಮಹಾಜ್ಞಾನಿ ಬಸವ ಪ್ರಿಯ ಕೂಡಲ ಚೆನ್ನ ಬಸವಣ್ಣನನ್ನು ಕೂಡಿದ ಮಹಾಕೂಟ!

95

ಕಾಣಬಾರದ ಘನವೆಂದು, ಜಗವೆಲ್ಲ ಹೇಳುತ್ತಿದೆ.
ಈ ಕಾಣಬಾರದ ಘನವ ನಾನಾರ ಕೇಳಲಯ್ಯ!
ಗುರು ಹೇಳಲಿಲ್ಲ, ಲಿಂಗ ಹೇಳಲಿಲ್ಲ, ಜಂಗಮ ಹೇಳಲಿಲ್ಲ.
ಅದು ಹೇಗೆ ಎಂದರೆ: ಗುರು ಒಂದು ಲಿಂಗವ ಕೊಟ್ಟು,
ತನ್ನ ಅಂಗವ ಕುರಿತು, ಆ ಲಿಂಗಕ್ಕೆ ಬೆಲೆಯ ತಕ್ಕೊಂಡು ಹೋದನಲ್ಲದೆ,
ಆ ಕಾಣಬಾರದ ಘನವ ಹೇಳಿದುದು ಇಲ್ಲ.
ಇದ ಲಿಂಗವೆಂದು ಪೂಜಿಸಿದರೆ, ಕಂಗಳ ಕಾಮ ಘನವಾಯಿತ್ತಲ್ಲ!
ಎರಡರ ಸಂಗಸುಖವ ಹೇಳಲರಿಯದೆ, ಜಂಗಮವೆಂದು ಪೂಜೆಯ ಮಾಡಿದರೆ,
ಈ ಜಗದೊಳಗೆ ಹುಟ್ಟಿದ ಪದಾರ್ಥಕ್ಕೆ ಒಡೆಯನಾದನಲ್ಲದೆ,
ಈ ಕಾಣಬಾರದ ಘನವ ಹೇಳಿದುದಿಲ್ಲ.

ಅದೇನು ಕಾರಣವೆಂದರೆ: ಆ ಕಾಣಬಾರದ ಘನವ,
ತಾನೊಬ್ಬರ ಕೇಳಲು ಬಾರದು,
ತಾನೊಬ್ಬರಿಗೆ ಹೇಳಲುಬಾರದು.
ಇಂತಪ್ಪ ಘನ ತಾನೆ, ಒಂದು ರೂಪ ತೊಟ್ಟು,
ತನ್ನ ಲೀಲೆಯ ಎಲ್ಲ ಶರಣರೊಳು ನಟಿಸಿ,
ತನ್ನ ತಾನೇ ಸಾಕಾರ ನಿರಾಕಾರವಾಗಿ,
ಏಕವಾದ ಭೇದವನರಿಯದೆ ಈ ಲೋಕದಲ್ಲಿ ಇದ್ದರೇನು?
ಆ ಲೋಕದಲ್ಲಿ ಹೋದರೇನು?
ಹದಿನಾಲ್ಕು ಲೋಕವು ತಾನೆಯಾದ ಚಿನ್ಮಯನ ಹೇಳಿಹೆನೆಂದರೆ ಎನ್ನಳವಲ್ಲ.
ಬಸವಪ್ರಿಯ ಕೂಡಲ ಚೆನ್ನ ಬಸವಣ್ಣಾ ನಿವೇ ಬಲ್ಲಿರಿ.

ಮನುಷ್ಯ ಜನ್ಮ ಅರಿವಿನ ಜನ್ಮವೆಂದು ಜಗವೆಲ್ಲ ಹೇಳುತ್ತಿದೆ. ತನುವಿನ ಅರಿವನು ತನು ತಿಳಿಯುವುದು ಅಷ್ಟು ಸುಲಭವಲ್ಲ. ಅರಿವನ್ನು ಪುರಾತನರು ಘನವೆಂದು, ಗುರುಘನನೆಂದು, ಲಿಂಗವೆಂದು, ಜಂಗಮವೆಂದು, ವಿರಾಟ ಸ್ವರೂಪವೆಂದು, ಸ್ವ ಸ್ವರೂಪವೆಂದು ಕರೆದಿದ್ದಾರೆ.

ತನುವಿನಲ್ಲಿಯೆ ತನ್ಮಯವಾದ, ತನು ಸರಳವಾಗಿ ಕಾಣಬಾರದ ಘನವನು ಗುರು ಹೇಳಲಿಲ್ಲ, ಲಿಂಗ ಹೇಳಲಿಲ್ಲ, ಜಂಗಮ ಹೇಳಲಿಲ್ಲ. ಮನೆತನದ ಗುರುವೆಂದು ಕರೆಯಿಸಿಕೊಂಡಾತ ಒಂದು ಪಾಷಾಣವನು ತಂದು ಅದಕ್ಕೆ ಲಿಂಗವೆಂದು ಹೆಸರಿಟ್ಟು ಅಂಗದ ಮೇಲೆ ಕಟ್ಟಿ, ಅದಕ್ಕೆ ಬೆಲೆ ಇಷ್ಟೆಂದು ತೆಗೆದುಕೊಂಡು ಹೋದನಲ್ಲದೆ ಕಾಣಬಾರದ ಘನವನು ಹೇಳಲಿಲ್ಲ.

ಗುರು ಕಟ್ಟಿದ ಲಿಂಗವನ್ನು ಪೂಜಿಸಿದರೆ ಕಂಗಳ ಕಾಮ ಅಧಿಕವಾಯಿತ್ತು. ಎರಡರ ಸಂಗ ಸುಖವನು ಹೇಳಲು ಅರಿಯಲಿಲ್ಲ. ಇನ್ನು ಜಂಗಮವೆಂದು ಪೂಜೆಯ ಮಾಡಿದರೆ ಜಗದೊಳಗೆ ಹುಟ್ಟಿದ ಹೊನ್ನು ಮಣ್ಣು ಅನ್ನಕ್ಕೆ ಒಡೆಯನಾದನಲ್ಲದೆ ಕಾಣಬಾರದ ಘನವನು ಹೇಳಲಿಲ್ಲ.

ಕಾಣಬಾರದ ಘನವನ್ನು ಮತ್ತೊಬ್ಬರಿಂದ ಕೇಳಲು ಬಾರದು, ಅರಿತರೆ ತಾನೊಬ್ಬರಿಗೆ ಹೇಳಲು ಬಾರದು. ಏಕೆಂದರೆ ಕಾಣಲು ಹೋದರೆ ಗುರು ಘನನಿಗೆ ನಾಮವಿಲ್ಲ; ರೂಪಿಲ್ಲ; ನುಡಿಯಿಲ್ಲ. ಇಂತಹ ಗುರುಘನನು ತಾನೆ. ಒಂದು ರೂಪ ತೊಟ್ಟು. ತನ್ನ ಲೀಲೆಯ ಎಲ್ಲ ಶರಣರೊಳು ನಟಿಸಿ, ತಾನೇ ಸಾಕಾರವಾಗಿ, ತಾನೇ ನಿರಾಕಾರವಾಗಿ, ಇವೆರಡರಲ್ಲಿ ತಾನೇ ಏಕವಾಗಿ ಅದರ ಭೇದವನು ಅರಿಯದೆ ಈ ಲೋಕದಲ್ಲಿ ಇದ್ದರೇನು? ಆ ಲೋಕದಲ್ಲಿ ಹೋದರೇನು? ಹದಿನಾಲ್ಕು ಲೋಕವೂ ತಾನೆಯಾದ ಚಿನ್ಮಯನ, ಚಿದ್ಘನನ ಹೇಳಿಹೆನೆಂದರೆ ಎನ್ನಳವಲ್ಲ.

ಜಗದಲ್ಲಿರುವ ತನುವುಳ್ಳ ಮನಗಳೆಲ್ಲ ತನುವಿನಲ್ಲಿ ತನ್ಮಯವಾದ ಮಂಗಳ ಮೂರ್ತಿಯನು ತನಗೆ ತಾನೆ ಕಂಡು ನಿಶ್ಚಯಿಸಿ ಬಸವ ಪ್ರಿಯ ಕೂಡಲ ಚೆನ್ನಬಸವಣ್ಣ ತನಗೆ ತಾನೇ ಆಗಬೇಕು. ಇದನ್ನು ಕೂಡಾ ನೀವೆ ಬಲ್ಲಿರಿ.

96

ಕಾಯ ಕರಣಾದಿಗಳ ಏಕವ ಮಾಡಿದ ಪ್ರಸಾದಿ.
ಪ್ರಾಣ ನಿಃ ಪ್ರಾಣವನೇಕವ ಮಾಡಿದ ಪ್ರಸಾದಿ.

ಭಾವ ನಿರ್ಭಾವ ನೇಕವ ಮಾಡಿದ ಪ್ರಸಾದಿ.
ಮನ ಬುದ್ಧಿ ಚಿತ್ತಹಂಕಾರವನೇಕವ ಮಾಡಿದ ಪ್ರಸಾದಿ.
ಸಪ್ತಧಾತು ಷಡುವರ್ಣವನೇಕವ ಮಾಡಿದ ಪ್ರಸಾದಿ.
ಇಂತಿವೆಲ್ಲವ ನೇಕವ ಮಾಡಿದ ಪ್ರಸಾದಿ.
ಈ ಪ್ರಸಾದವ ಕಂಡು ಎನ್ನ ಭವಂ ನಾಸ್ತಿಯಾಯಿತ್ತು ಕಾಣಾ,
ಬಸವ ಪ್ರಿಯ ಕೂಡಲ ಚೆನ್ನ ಬಸವಣ್ಣಾ.

ಪ್ರಸಾದ ಅಂದರೆ ಅನ್ನವಲ್ಲ; ಪ್ರಸಾದಿ ಅಂದರೆ ಅನ್ನವನ್ನು ಚೆಲ್ಲದಂತೆ ತೆಗೆದುಕೊಳ್ಳವವನೂ ಅಲ್ಲ. ಕಾಯದ ಕರಣಾದಿಗಳ ಅಜ್ಞಾನವನ್ನು ಕಾಯ ವಿಕಾರವಾಗದಂತೆ ಉಂಡಾತನೇ ಪ್ರಸಾದಿ. ಕಾಯದ ಕರಣಾದಿಗಳು ಕಾಯವನ್ನು ಕರ್‍ರನೆ ಕಂದಿಸಿದರೆ ಅಥವಾ ಕರಣಾದಿಗಳಂತೆ ಕಾಯ ಮಣಿದರೆ ಆತ ಪ್ರಸಾದಿಯೆಂದು ಕರೆಯಿಸಿಕೊಳ್ಳಲಾರ.

ಕಲ್ಲು ನೋಡಿದರೆ ಕಾಯದಲ್ಲಿ, ಕಣ್ಣಿನಲ್ಲಿ ಯಾವ ಭಾವವೂ ಹುಟ್ಟಲಿಲ್ಲ. ಕಲ್ಲನೇ ಲಿಂಗ ಮಾಡಿದರೆ ಅದನ್ನು ಕಾಯದ ಮೇಲೆ ಧರಿಸಿ ಪೂಜಿಸಿ ಆರಾಧಿಸುವ ಭಾವ ಹುಟ್ಟುತ್ತದೆ. ಲಿಂಗ ನೋಡಿದರೆ ನಾರಾಯಣನನ್ನು ಪೂಜಿಸುವ ಕಣ್ಣಿನಲ್ಲಿ ದುರ್ಭಾವ ಹುಟ್ಟುತ್ತದೆ. ಕಲ್ಲು ನೋಡಿದರೆ ಎರಡೂ ಕಣ್ಣುಗಳಲ್ಲಿ ನಿರ್ಭಾವ. ಲಿಂಗ ನೋಡಿದರೆ ಭಾವ ದುರ್ಭಾವ! ಕಲ್ಲು ಕಲ್ಲೇ ಆಗಿದೆ; ಲಿಂಗವೂ ಕಲ್ಲೇ ಆಗಿದೆ. ಕಲ್ಲು ಲಿಂಗ ಇವೆರಡೂ ಕಣ್ಣಿಗೆ ಏಕವಾಗಲಿಲ್ಲ. ಕಲ್ಲನ್ನು ಆವರಿಸಿದ ಲಿಂಗ ಕಣ್ಣಿಗೆ ಪ್ರಸಾದವಾಗಲಿಲ್ಲ. ಆದರೆ ಲಿಂಗದೇವರು ಎನ್ನುವ ಭಾವ ಸೃಷ್ಟಿ ಮಾಡಿತು. ಲಿಂಗ ನೋಡಿದ ಮತ್ತೊಂದು (ಪೂಜಿಸದ) ಕಣ್ಣಿಗೆ ದುರ್ಭಾವ ಸೃಷ್ಟಿ ಮಾಡಿತು. ಭಾವ ದುರ್ಭಾವಗಳು ಕಣ್ಣಿಗೆ ಪ್ರಸಾದವಾದುದೇ ನಿರ್ಭಾವ. ಲಿಂಗದಲ್ಲಿರುವ ಸತ್ಯ ಕಲ್ಲು. ಭಾವ ದುರ್ಭಾವಗಳಿಂದ ಕೂಡಿದ ಕಣ್ಣು ಸತ್ಯ ನೋಡುವುದಿಲ್ಲ. ನಿರ್ಭಾವದ ಕಣ್ಣು ಬರೀ ಕಲ್ಲು ನೋಡುತ್ತದೆ; ಅದಕ್ಕೆ ಲಿಂಗ ಕಾಣುವುದೇ ಇಲ್ಲ.

ಹೀಗೆ ನಿರ್ಭಾವದ ಕಣ್ಣು ಕಾಯ ಕರಣಾದಿಗಳನ್ನು ಏಕಮಾಡಿ ಅಕಾಯವನ್ನು ಮಾತ್ರ ನೋಡುತ್ತದೆ. ಪ್ರಾಣ ನಿಃ ಪ್ರಾಣವನ್ನು ಏಕವ ಮಾಡಿ ಪ್ರಾಣ ಲಿಂಗವನ್ನು ಮಾತ್ರ ನೋಡುತ್ತದೆ. ಭಾವ ನಿರ್ಭಾವವನೇಕವ ಮಾಡಿ ದುರ್ಭಾವವನ್ನು ಪ್ರಸಾದ ಮಾಡಿಕೊಳ್ಳುತ್ತದೆ. ಮನ ಬುದ್ಧಿ ಅಹಂಕಾರ ಚಿತ್ತವನ್ನು ಪ್ರಸಾದವನ್ನಾಗಿ ಸ್ವೀಕರಿಸುತ್ತದೆ. ಸಪ್ತ ಧಾತು ಷಡುವರ್ಣವನ್ನು ಪ್ರಸಾದವನ್ನಾಗಿ ಸ್ವೀಕರಿಸುತ್ತದೆ. ಇಂತಹ ಪ್ರಸಾದವನ್ನು ಕಂಡು ತನು ಜನನ ಮರಣಗಳಿಂದ ದೂರವಾಯಿತು. ಮನ ಬಸವ ಪ್ರಿಯ ಕೂಡಲ ಚೆನ್ನಬಸವಣ್ಣನಲ್ಲಿ ಕೂಡಿಕೊಂಡು ಆ ಚೆನ್ನ ಬಸವಣ್ಣನೇ ತಾನಾಯಿತು.

97

ಕಾಯ ಸ್ಥಲ, ಕರಸ್ಥಲ, ಉರಸ್ಥಲ,
ಶಿರಸ್ಥಲ, ಪ್ರಾಣಸ್ಥಲ, ಭಾವಸ್ಥಲವೆಂದು ನುಡಿದಾಡುವರು.
ಆ ಸ್ಥಲದೊಳಗಣ ಸ್ವಯಸ್ಥಲವನರಿಯರು ಕಾಣಿರೆ.
ಸ್ವಯಸ್ಥಲವೆಂತಿಪ್ಪುದೆಂದರೆ, ಕಾಯಸ್ಥಲವನರಿದರೆ,
ಅದು ತಾನೇ ಲಿಂಗವಾಯಿತ್ತು.

ಕರಸ್ಥಲವನರಿದರೆ, ಕೈಲಾಸ ಮರ್ತ್ಯ ತನ್ನೊಳಗಾಯಿತ್ತು.
ಉರಸ್ಥಲವನರಿದರೆ, ಪರವು ತನ್ನೊಳಗಾಯಿತ್ತು.
ಶಿರಸ್ಥಲವನರಿದರೆ ಶಿವನೆಂಬುದಕ್ಕೆ ಇಲ್ಲ.
ಪ್ರಾಣಸ್ಥಲವನರಿದರೆ, ಭಯ ಮರಣಾದಿಗಳಿಲ್ಲ.
ಭಾವಸ್ಥಲವನರಿದರೆ, ಇನ್ನಾವುದೂ ನೆನಹಿಲ್ಲ.
ಇದರ ಭೇದವನರಿಯದೆ, ಸ್ಥಲನೆಲೆಯುಂಟೆಂಬಿರಿ.
ಅದರ ಭೇದವ ನೀವು ಅರಿಯಿರಿ ಕಾಣಿರೊ.
ಸ್ಥಲವೆಂದರೆ ಅಂಗ, ನೆಲೆಯೆಂದರೆ ಪ್ರಾಣ.
ಇದನರಿಯದೆ ತಲೆ ಕೆಳಗಾಗಿ ಹೋದರು. ಆರು? ದೇವದಾನವರು.
ನಿಮ್ಮ ಪಾಡೇನೋ ನರಗುರಿಗಳಿರಾ?
ಇದನರಿದು, ಇನ್ನಾದರೂ ನಮ್ಮ ಶರಣರಿಗೆರಗಿ ಬದುಕಿರೊ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಕಾಯಸ್ಥಲ, ಕರಸ್ಥಲ, ಉರಸ್ಥಲ, ಶಿರಸ್ಥಲ, ಪ್ರಾಣಸ್ಥಲ, ಭಾವಸ್ಥಲವೆಂದು ಕಾಯವನ್ನು ವಿಂಗಡಿಸಿ ಮನ ನುಡಿಯುವುದು. ಆದರೆ ಆ ಸ್ಥಲದೊಳಗಣ ಸ್ವಯ ಸ್ಥಲವನು ಅರಿಯದು. ಕಾಯವೇ ಲಿಂಗ. ಅಂಗದಲ್ಲಿ ಅರಿವೆಂಬ ಲಿಂಗ ಸಮರಸವಾಗಿ ಬೇರಾಗದಂತೆ ಬೆರೆತಿದೆ. ಅರಿತರೆ ಅದು ತಾನೇ ಲಿಂಗ. ಕೈಲಾಸವೂ ಮರ್ತ್ಯವೂ ಕಾಯದೊಳಗೆ ಇದೆ ಎನ್ನುವುದು ಮನದ ಗಮನಕ್ಕೆ ಬರುತ್ತದೆ.

ಉರಸ್ಥಲವನರಿದರೆ ಪರವು ತನ್ನೊಳಗೆ. ಶಿರಸ್ಥಲವನು ಅರಿದರೆ ಶಿವನೆಂಬುದಕ್ಕೆ ಇಂಬಿಲ್ಲ. ಪ್ರಾಣಸ್ಥಲ, ಭಾವಸ್ಥಲವನರಿದರೆ ಭಯ ಮರಣಾದಿಗಳಿಲ್ಲ. ಕಾಯದಲ್ಲಿ ಮನದಿಂದ ಉಂಟಾದ ಭೇದವನು ಮನದಿಂದಲೇ ಅರಿಯದೆ, ಸ್ಥಲವನ್ನು ಹುಡುಕುತ್ತ ಹೋದರೆ ಮನ ಬೇರೆ, ತನು ಬೇರೆ, ಭಾವ ಬೇರೆ, ಗುರು, ಲಿಂಗ, ಜಂಗಮ ಬೇರೆ, ಪ್ರಸಾದ ಬೇರೆಯಾಗಿ ಕಂಡು ಮನ ಇವುಗಳನ್ನು ಕಾಯದ ಹೊರಗೆ ಹುಡುಕಿ, ಕಾಯವನ್ನು ದಣಿಸುತ್ತದೆ. ಇದನ್ನು ಅರಿಯದೆ ದೇವದಾನವರು ಕೂಡಾ ತಲೆಕೆಳಗಾಗಿ ಸತ್ತು ಹೋದರು. ಇನ್ನು ಸಾಮಾನ್ಯರ ಪಾಡೇನು?

ಕಾಯದಲ್ಲಿ ತನ್ಮಯವಾದ ಕೈಲಾಸವನ್ನು ಕಾಯಕ್ಕೆ ಆವರಿಸಿದ ಮಾಯವನ್ನು ಮನದಿಂದಲೇ ಅರಿತು, ಆ ಮನವನ್ನು ಘನ ಮನವನ್ನಾಗಿಸಿ, ಕಾಯದಲ್ಲಿಯೇ ಅಡಗಿದ ಕೈಲಾಸಪತಿಗೆ ಶರಣು ಹೋಗಿ ಶರಣರೇ ತಾವಾದ ಶರಣರಿಗೆರಗಿ ಬದುಕೆಲೆ ಮನವೆ ಎಂದು ಅಪ್ಪಣ್ಣ ಶರಣರು ಮನಕ್ಕೆ ಆದೇಶ ನೀಡಿದ್ದಾರೆ. ಬಸವಣ್ಣನಿಗೆ ಪ್ರಿಯನಾದ ಜ್ಞಾನಿ ಕೂಡಲ ಚೆನ್ನ ಬಸವಣ್ಣನ ಪಾದಕ್ಕೆ ಹಾಕಿ ಆತನ ಆಳನ್ನಾಗಿ ಮಾಡಿದ್ದಾರೆ.

98

ಕೀಡೆ ತುಂಬಿಯ ಬಿಡದೆ ನೆನೆಯೆ,
ನೋಡಲಾಕ್ಷಣ ತುಂಬಿಯಾಗಿಹುದು.
ರೂಢಿಯೊಳು ಅಗಮ್ಯ ಶರಣರ ಪಾದವೆ ಗೂಡಾಗಿ ನಿಂದಿರೆ,
ಬಸವ ಪ್ರಿಯ ಕೂಡಲ ಚೆನ್ನ ಬಸವಣ್ಣಾ.

ಕೀಡೆ ತುಂಬಿಗಳೆರಡೂ ಸಜಾತಿಯವಲ್ಲ. ಆದರೂ ತುಂಬಿ ಕೀಡೆಯನ್ನು ತಂದು ತನ್ನ ಗೂಡಿನಲ್ಲಿಟ್ಟುಕೊಂಡು ತನ್ನ ಹಾಡು ಅದಕ್ಕೆ ಕಲಿಸಿ ತನ್ನಂತೆ ಮಾಡಿಕೊಳ್ಳುತ್ತದೆ. ಇವೆರಡೂ ಅರಿವುಳ್ಳ ಕೀಟಗಳಲ್ಲ. ಆದರೂ ಕೀಡೆಯನ್ನು ತನ್ನಂತೆ ತುಂಬಿಯನ್ನಾಗಿ ಮಾಡಬೇಕೆಂಬ ಛಲ ತುಂಬಿಗಿರುವುದರಿಂದ ಹಗಲಿರುಳೆನ್ನದೆ ಶ್ರಮಿಸಿ ತುಂಬಿಯನ್ನಾಗಿ ಮಾಡುತ್ತದೆ.

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನು ಅಂಗವನ್ನು ಆವರಿಸಿದ ಮನವೆಂಬ ಕೀಟವನ್ನು ಘನ ಮನವನ್ನಾಗಿ ಮಾಡಿಕೊಳ್ಳಬೇಕೆಂದು ಹಗಲಿರುಳು ಶ್ರಮಿಸುತ್ತಾನೆ. ಮನ ಆಲಿಸಿದರೆ ಘನಮನವಾಗುತ್ತದೆ.

ಕೀಟ ತುಂಬಿಯ ಗೂಡು ಸೇರಿ ತುಂಬಿಯೇ ಆಗುತ್ತದೆ. ಅರಿವೆಂಬ ಗುರುದೇವನಿಗೆ ಶರಣು ಹೋಗಿ, ಶರಣರೇ ತಾವಾದ ಶರಣರ ಗಣ ತಿಂಥಿಣಿಯೇ ಇದೆ. ಅವರ ಪಾದವೇ ಅರಿವಿನ ಗೂಡಾಗಿ ನಿಂತಿದೆ. ಅಂತಹ ಶರಣರನ್ನು ಹುಡುಕಿ, ಆ ಶರಣರಿಗೆ ಶರಣು ಹೋಗಿ ಮನ ಘನಮನವಾಗುವ ದಾರಿಯನ್ನು ಕಂಡುಕೊಳ್ಳಬೇಕಿದೆ. ಬಸವ ಪ್ರಿಯ ಕೂಡಲ ಚೆನ್ನ ಬಸವಣ್ಣ ತಾನೇ ಆಗಬೇಕಿದೆ.

99

ಕುದುರೆಯ ಕುಪ್ಪಟ ಘನವಾಯಿತ್ತು. ಆನೆಯ ಹರಿದಾಟ ನಿಲಬಾರದು.
ಒಂಟೆಯ ಕತ್ತು ನೆಟ್ಟಗಾಯಿತ್ತು. ಬಂಟರ ಹರಿದಾಟ ಉಂಟು.
ಕಟ್ಟಿಗೆಯವರು ಉಗ್ಗಡಿಸುತ್ತ, ಭಟರುಗಳು ಪೊಗಳುತ್ತ,
ಸಕಲವಾದ್ಯ ರಭಸದೊಳಗೆ ಸಂದಳಿಯೆಂಬ ಅಂದಳದ ಮೇಲೆ
ಚೆಂದವಾಗಿ ಮನೋರಾಜ್ಯಂಗೆಯ್ಯುತ್ತಿರಲು,
ಈ ಸುಖವನೊಲ್ಲದೆ ಮುಂದೆ ದುಃಖವುಂಟೆಂದು ಶರಣನರಿದು,
ತಲೆ ಎತ್ತಿ ನೋಡಿ, ಘನ ಗುರುವಿನ ಹಸ್ತದಿಂದ ಅನುಜ್ಞೆಯಂ ಪಡೆದು,
ಧ್ಯಾನ ಧಾರಣ ಸಮಾಧಿಯಿಂದ ತಿಳಿದು ನೋಡಲಾಗಿ,
ಇತ್ತ ಶೂನ್ಯವೆಂಬ ಪಟ್ಟಣದೊಳಗೆ ಅನಾಮಿಕ ಎಂಬ ಅರಸು,
ಆ ಅರಸಿನ ಗೊತ್ತುವಿಡಿದು ಇತ್ತಲೆ
ಮನವೆಂಬ ಅರಸನು ಹಿಡಿಯಲಾಗಿ ಹಿಡಿದು,
ಆನೆ,ಕುದುರೆ,ಸೇನೆಯನೆಲ್ಲ ಸೂರೆಗೊಂಡು,
ಭಂಡಾರ ಬೊಕ್ಕಸ ಅರಮನೆಯನೆಲ್ಲ ಸುಟ್ಟು ಬಟ್ಟ ಬಯಲ ಮಾಡಿದ,
ನಮ್ಮ ಬಸವ ಪ್ರಿಯ ಕೂಡಲಚೆನ್ನ ಬಸವಣ್ಣ.

ಅರಸ ತನ್ನ ಅರಸೊತ್ತಿಗೆಯ ಆನಂದವನು ಮೈಮರೆತು ಸವಿಯುತ್ತಾನೆ. ಕುದುರೆ ಕುಣಿತ, ಆನೆಯ ಹರಿದಾಟ, ಒಂಟೆಯ ಗತ್ತು, ಬಂಟರ ಹರಿದಾಟ, ಉಗ್ಗಡಿಕೆ, ಸಕಲವಾದ್ಯಗಳೊಂದಿಗೆ ಹೊಗಳು ಭಟ್ಟರ ಹೊಗಳುವಿಕೆಯೊಂದಿಗೆ ಅರಸ ಸಂದಳಿಯೆಂಬ ಅಂದಳದ ಮೇಲೆ ಆನಂದದಿಂದ ರಾಜ್ಯವನಾಳುತ್ತಿರಲು ಈ ಸುಖದೊಂದಿಗೆ ಮುಂದೆ ದುಃಖ ಉಂಟೆಂಬುದನು ಶರಣ ಮಾತ್ರ ಅರಿಯುತ್ತಾನೆ.

ಸುಖದ ಮೋಜಿಗಾಗಿ ರಾಜ ಯುದ್ಧ ಮಾಡುತ್ತಾನೆ; ಸೋತರೆ ದುಃಖ ಅನುಭವಿಸುತ್ತಾನೆ. ಸುಖದಿಂದ ದೇಹ ಅರಳುತ್ತದೆ; ದುಃಖದಿಂದ ದೇಹ ಕಂಪಿಸುತ್ತದೆ. ರಸಾಯನಿಕ ಕ್ರಿಯೆಯಿಂದಲೆ ದೇಹದಲ್ಲಿ ಸುಖ ದುಃಖಗಳು ಉಂಟಾಗುತ್ತವೆ.

ಹೀಗೇಕೆ ಎಂದು ಮನದಿಂದ ಆಲಿಸಿ ನೋಡಿದರೆ ಅರಿವಿಗೆ ಬರುತ್ತದೆ. ಘನ ಗುರುವಿಗೆ ಶರಣು ಹೋಗಿ ತನುವಿನಲ್ಲಿ ಉಂಟಾಗುವ ಸುಖ ದುಃಖಗಳ ಬಗ್ಗೆ ವಿವರಿಸಿದಾಗ ಆತನ ಸೂತ್ರದ ನೆರವಿನಿಂದ ಧ್ಯಾನ ಧಾರಣ ಸಮಾಧಿಯಿಂದ ತಿಳಿದು ನೋಡಿದರೆ ಅಜ್ಞಾನವೆಂಬ ಮನದ ಅರಸನ ಅರಿವು ಮನದಿಂದಲೇ ಆಗುತ್ತದೆ. ಆ ಅರಸನ ಗೊತ್ತು ಹಿಡಿದು, ಆನೆ ಕುದುರೆ ಸೇನೆಯನೆಲ್ಲ ಸೂರೆಗೊಂಡು, ಭಂಡಾರ ಬೊಕ್ಕಸ ಅರಮನೆಯನೆಲ್ಲ ಅರಿವೆಂಬ ಗುರುದೇವನ ಸಹಾಯದಿಂದ ಸುಟ್ಟು, ಬಟ್ಟ ಬಯಲ ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ.

100

ಕೂಟವಿಲ್ಲದ ಮಾಟ, ಬೇಟವಿಲ್ಲದ ನೋಟ,
ಅರಿವಿಲ್ಲದ ಕೂಟ, ಓಟವಿಲ್ಲದ ಆಟ.
ನಾಲ್ಕರ ಅನುವನರಿಯದೆ ನುಡಿವುದೆ ಜಗದಾಟ,
ಬಸವ ಪ್ರಿಯ ಕೂಡಲ ಚೆನ್ನ ಬಸವಣ್ಣಾ.

ತನುವನ್ನು ಆವರಿಸಿದ ಮನ, ತನುವನ್ನು ಸುಳ್ಳು ಪ್ರೀತಿಯಲ್ಲಿ ತೊಡಗಿಸಿ, ಮತ್ತೊಂದು ತನುವನ್ನು ಪ್ರೀತಿಸುತ್ತದೆ; ಆನಂದ ಪಡುತ್ತದೆ. ಪ್ರೀತಿ ಯಾವ ಉದ್ದೇಶಕ್ಕಾಗಿ ಎಂದು ಅರಿಯದು.

ಮನ, ಉದ್ದೇಶವನು ಅರಿಯದೆ, ಮತ್ತೊಂದು ತನುವನ್ನು ನೋಡುತ್ತದೆ. ನೋಟದ ವಿಕೃತ ಸುಖವನು ಸವಿಯುತ್ತದೆ. ಅರಿವಿಲ್ಲದೆ ಮತ್ತೊಂದು ತನುವಿನೊಂದಿಗೆ ಕೂಟದ ಬಯಕೆಯನು ಒಡ್ಡುತ್ತದೆ. ಅರ್ಥವಿಲ್ಲದ ಆಟದಲ್ಲಿ ಮನ ತನುವನ್ನು ತೊಡಗಿಸಿ ಆಡುತ್ತದೆ.

ಇದು ಜಗದ ತನುಗಳ ಆಟ. ಅನುವನು ಅರಿಯದೆ ಅರ್ಥವಿಲ್ಲದ ಆಟದಲ್ಲಿ ಮೈ ಮರೆತು ಮನ ತನುವನ್ನು ಹಾಳು ಮಾಡುತ್ತದೆ.

ತನು ಮತ್ತೊಂದು ತನುವಿನೊಂದಿಗೆ ಕೂಡುವ ಸದುದ್ದೇಶ ಹೊಂದಿದ್ದರೆ, ಅರಿವಿನ, ಮತ್ತೊಂದು ತನುವನ್ನು ಪಡೆಯುವುದಕ್ಕಾಗಿಯೇ ಕೂಡಬೇಕು. ತನು ತನು ಕೂಡುವ ಕೂಟಕ್ಕೆ ಒಂದು ಅರ್ಥವಿರುತ್ತದೆ. ತನು ಬೇಕೆಂದು ಕೂಡುವ ಬಯಕೆ ಎರಡು ತನುಗಳಿಗೂ ಉಂಟಾಗದಿದ್ದರೆ, ತನುಗಳು ಕೂಡುವ ಕೂಟ ವ್ಯರ್ಥ. ಅದರ ಮಾಟ ವ್ಯರ್ಥ ಅದರ ಬೇಟ ವ್ಯರ್ಥ ಇದು ಅರಿವಿಲ್ಲದ ಕೂಟ. ಅನುವನು ಅರಿಯದ ಅಜ್ಞಾನದ ಕೂಟ.

ಈ ಸೂತ್ರ ಬಸವಣ್ಣನಿಗೆ ಗೊತ್ತು. ಆತನಿಗೆ ಪ್ರಿಯವಾದ ಚೆನ್ನ ಬಸವಣ್ಣನಿಗೆ ಗೊತ್ತು. ಈತನಿಗೆ ಪ್ರಿಯನಾದ ಹಡಪದ ಅಪ್ಪಣ್ಣ ಶರಣರಿಗೂ ಗೊತ್ತು.

ತನುವಿನಲ್ಲಿ ಸುಳಿಯುವ ಮಂಗದಂತಹ ಮನವನ್ನು ತನ್ನ ಅರಿವಿನ ಕತ್ತಿಯಿಂದ ಕೆತ್ತಿ ಹೆಳವನನ್ನಾಗಿಸಿದ ಬಗೆಯನ್ನು ಅಪ್ಪಣ್ಣ ಶರಣರು ಸರ್ವರಿಗೂ ಸಾರಿದ್ದಾರೆ. ಜಗದ ಈ ಅಜ್ಞಾನ ನಿಲ್ಲಲೇಬೇಕೆಂಬ ಸದಿಚ್ಛೆಯಿಂದ ಈ ಸೂತ್ರ ದಾಖಲಿಸಿದ್ದಾರೆ. ಸಾಧ್ಯವಾದರೆ ಅರಿತ ಮನಗಳು ಬಳಸಿಕೊಂಡು ಘನಮನವಾಗಲಿ.

101

ಕೇಳು ಕೇಳಾ, ಭಕ್ತ , ಮಹೇಶ, ಪ್ರಸಾದಿ,
ಪ್ರಾಣಲಿಂಗಿ, ಶರಣ, ಐಕ್ಯರೆಂದು ನುಡಿದಾಡುತಿಪ್ಪಿರಿ.
ಇಂತೀ ಷಟ್‌ಸ್ಥಲ ಸಂಪನ್ನತೆ ಎಲ್ಲರಿಗೆ ಎಂತಾಯಿತ್ತಯ್ಯ ಹೇಳಿರಣ್ಣಾ !
ಭಾಗ್ಯವುಳ್ಳಾತಂಗೆ ಭಕ್ತಿಸ್ಥಲವಾಗದು.
ಮಕ್ಕಳುಳ್ಳಾತಂಗೆ ಮಹೇಶ್ವರಸ್ಥಲವಾಗದು.
ಪರಧನ ಚೋರಂಗೆ ಪ್ರಸಾದಿಸ್ಥಲವಾಗದು.
ಇಹಪರವೆಂದು ಕಾಮಿಸುವಾತಂಗೆ ,ಪ್ರಾಣಲಿಂಗಿ ಸ್ಥಲವಾಗದು.
ಪರದಲ್ಲಿ ಪರಿಣಾಮುವನರಿಯದಾತಂಗೆ. ಶರಣಸ್ಥಲವಾಗದು.
ಹರುಷವೇ ಹರನಲ್ಲಿ ಲೀಯವಾದಾತಂಗೆ ಐಕ್ಯಸ್ಥಲವಾಗದು.
ನೆರೆದ ದೇಹವು ಕರ್ಪೂರ ಉರಿಗೊಂಡಂತೆ ಅಲ್ಲದೆ ನಿರವಯಸ್ಥಲವಾಗದು.
ಇದು ನಮ್ಮ ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ.

ಭಕ್ತ , ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಇವು ಸ್ವಯಂ ಅಂಗದಲ್ಲಿಯೇ ಸಂಗಮವಾಗಿವೆ. ತಂತ್ರಗಾರಿಕೆಯಿಂದ ತಾನೇ ಪಡೆದುಕೊಂಡು ತಾನೇ ಸ್ವಯಂ ಜ್ಞಾನಿಯಾಗಬೇಕು. ತನುವಿಗೆ ಭಕ್ತ , ಮಹೇಶನ ವೇಷ ಧರಿಸಿದರೆ ಸಾಧ್ಯವಾಗುವುದಿಲ್ಲ. ಪ್ರಸಾದಿ, ಮಹೇಶನ ವೇಷ ಧರಿಸಿದರೆ ಸಾಧ್ಯವಾಗುವುದಿಲ್ಲ. ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯನ ವೇಷ ಧರಿಸಿದರೂ ಸಾಧ್ಯವಾಗುವುದಿಲ್ಲ. ಹೀಗೆ ಜ್ಞಾನಿಗಳಾದವರನ್ನು, ಅವರ ಸಮಾಧಿಯನ್ನು ಆರಾಧಿಸಿದರೂ ಸಾಧ್ಯವಾಗುವುದಿಲ್ಲ. ಏಕೆಂದರೆ ಯಾವ ಜ್ಞಾನಿಯೇ ಆಗಲಿ ಅಂತಹ ಶಕ್ತಿಯನ್ನು ಆತ ಸ್ವಯಂ ತನ್ನ ಅಂಗದಿಂದಲೇ ತಂತ್ರಜ್ಞಾನದಿಂದ (ಟೆಕ್ನಿಕ್) ಪಡೆದುಕೊಂಡಿದ್ದಾನೆಯೇ ಹೊರತು ಜ್ಞಾನ ಮತ್ತೊಬ್ಬರ ಆಶೀರ್ವಾದದಿಂದ ಬಂದುದಲ್ಲ.

ಒಂದು ಜ್ಞಾನತನುವಿಗೆ ಇರುವ ಶಕ್ತಿ ಜಗದ ಸಕಲ ತನುಗಳಲ್ಲಿಯೂ ಇದೆ. ಜಗದ ಸಕಲ ತನುಗಳು ಬುದ್ಧನಂತೆ, ಮಹಾವೀರ, ಕ್ರಿಸ್ತ , ಕೃಷ್ಣನಂತೆ, ದಾಸವರೇಣ್ಯರಂತೆ, ಶರಣರಂತೆ ಆಗಬಹುದು. ಆದರೆ ಮನಕ್ಕೆ ಬಯಕೆಯಾಗಬೇಕು ಅಷ್ಟೆ.

ಮನಕ್ಕೆ ಮದುವೆಯಾಗಿ ಮಕ್ಕಳು ಬೇಕೆಂಬ ಆಸೆಯುಂಟಾಗುತ್ತದೆ. ಭೂಮಿ, ಹೇಮ, ಸಕಲ ಸಂಪತ್ತಿನ ಭಾಗ್ಯಬೇಕೆಂಬ ಬಯಕೆಯಾಗುತ್ತದೆ. ಮಠ ಮಂದಿರ ಶಾಲೆ ಕಾಲೇಜುಗಳನ್ನು ಕಟ್ಟಿ ದಾನಿ ಎನ್ನಿಸಿಕೊಳ್ಳಬೇಕೆಂಬ ಬಯಕೆಯಾಗುತ್ತದೆ. ಆಭರಣ ವಜ್ರ ವೈಢೂರ್ಯ ನೋಡಿ ಖರೀದಿಸಬೇಕು ಇಲ್ಲ ಕದಿಯಬೇಕೆಂಬ ಬಯಕೆಯಾಗುತ್ತದೆ. ಸ್ವಾಮಿ, ಮಠಾಧೀಶ, ರಾಜ, ಪ್ರಧಾನಿ, ಸಚಿವ, ಶಾಸಕ, ಅಧಿಕಾರಿಯಾಗಬೇಕೆಂಬ ಬಯಕೆಯಾಗುತ್ತದೆ. ಆದರೆ ಮನಕ್ಕೆ ಸ್ವತಃ ನಾನು ಜ್ಞಾನಿಯಾಗಬೇಕೆಂಬ ಬಯಕೆ ಆಗುವುದಿಲ್ಲ.

ಪಂಡಿತ, ಶಾಸ್ತ್ರಿ, ಉಪನ್ಯಾಸಕ, ಭಾಷಣಕಾರನಾಗಬೇಕೆಂಬ ಬಯಕೆಯಾಗಿ ಮನ ತನುವಿಗೆ ಸಕಲ ಪುಸ್ತಕಗಳನ್ನು ಓದಿಸುತ್ತದೆ. ಪಂಡಿತ ಶಾಸ್ತ್ರಿ ಉಪನ್ಯಾಸಕನಾಗುತ್ತದೆ. ಆದರೆ ಜ್ಞಾನಿಯಾಗುವುದಿಲ್ಲ. ಮನಕ್ಕೆ ಬಯಕೆಯಾದರೆ ಮಾತ್ರ ಜ್ಞಾನಿಯಾಗುವುದು ಸಾಧ್ಯ !

ಮನಕ್ಕೆ ಸಕಲ ಸಂಪತ್ತಿನಿಂದ ಹರುಷವಾಗಬಹುದು. ಅದನ್ನು ಇತರ ತನುಗಳಿಗೆ

ನೀಡುವುದರಿಂದ ಜನ ಹೌದೌದು ಎನ್ನಬಹುದು. ಆದರೆ ಭಕ್ತ ಮಹೇಶ ಪ್ರಸಾದಿಯಾಗಲಾರ!

ಭಕ್ತ: ಅಂಗವನ್ನು ಮನ ಆವರಿಸಿದೆ. ಅಂಗದಲ್ಲಿ ಜ್ಞಾನ ಸಂಗಮವಾಗಿದೆ. ಭೌತಿಕ ಸಂಪತ್ತುಗಳಾದ ಭೂಮಿ, ಹೇಮ, ವಿಷಯ ಸುಖ ಪಡೆಯಲು ಮನ ಅಂಗವನ್ನು ಬಳಕೆ ಮಾಡುತ್ತದೆ. ಅಂಗಕ್ಕೆ ಶ್ರೀಮಂತನ ವೇಷ ಹಾಕಿ ಖರೀದಿಸುತ್ತದೆ ಇಲ್ಲ ಕಳ್ಳನ ವೇಷಧರಿಸಿ ಕಳುವು ಮಾಡಿ ಭೋಗಿಸುತ್ತದೆ. ಆಗ ಅಂಗ ಶ್ರೀಮಂತ ಅಥವಾ ಕಳ್ಳ ಎಂದು ಕರೆಯಿಸಿಕೊಳ್ಳುತ್ತದೆ. ಇಂತಹ ಮನವನ್ನು ಶರಣರು ಭವಿ ಎಂದು ಕರೆದಿದ್ದಾರೆ.ಅಂಗವನ್ನು ಆವರಿಸಿದ ಮನ ಭವಿಯಾಯಿತು. ಅಂಗದಲ್ಲಿ ಸಂಗಮವಾದ ಜ್ಞಾನ ಮನಕ್ಕೆ ಬಳಕೆ ಯಾಗದೆ ಹಾಗೇ ಉಳಿಯಿತು.

ಅಂಗವನ್ನು ಆವರಿಸಿದ ಮನ ಅಂಗದಲ್ಲಿಯೇ ಸಂಗಮವಾದ ಜ್ಞಾನವನ್ನು ತಿಳಿಯಲು ಹೋದರೆ, ಆ ಜ್ಞಾನಕ್ಕೆ ಸೆರೆಯಾಳಾಗಿ ಭಕ್ತನಾಗುತ್ತದೆ. ಆ ಸುಜ್ಞಾನಿಯೆಂಬ ಮಹೇಶನ ಮಾತು ಕೇಳಿ ಮೈಮರೆಯುತ್ತದೆ. ಜ್ಞಾನದ ಕಣ್ಣಿನಿಂದ ಆಭರಣ ನೋಡಲು ಅದೊಂದು ಹಳದಿ ಲೋಹ! ಅವಲೋಹವಾದರೇನು ಲೋಹವಾದರೇನು ಎರಡೂ ಲೋಹಗಳಲ್ಲವೇ? ಮನಕ್ಕೆ ಅರಿವಾಯಿತು. ಸಂಗ್ರಹಿಸಿ ಶ್ರೀಮಂತನಾಗಲಿಲ್ಲ. ಕದ್ದು ಕಳ್ಳನಾಗಲಿಲ್ಲ. ಯುದ್ಧ ಮಾಡಿ ಕೊಂದು ಪಡೆದು ರಾಜನಾಗಲಿಲ್ಲ. ಭ್ರಷ್ಟಾಚಾರದಿಂದಲೂ ಪಡೆಯಲಿಲ್ಲ. ಲೋಹವನ್ನು ಲೋಹವೆಂದೇ ನೋಡಿ ಮನ ತನ್ನ ಅರಿವಿಗೆ ತಾನೇ ಭಕ್ತನಾಯಿತು. ಮಹೇಶನಾಯಿತು. ಆಭರಣವೆಂಬ ಅಜ್ಞಾನ ಅರಿವಿಗೆ ಪ್ರಸಾದವಾಗಿ, ಮನ ಪ್ರಸಾದಿಯಾಯಿತು.

ಪ್ರಾಣಕ್ಕೆ ಅರಿವೇ ಪ್ರಾಣವಾಗಿ ಮನ ಪ್ರಾಣಲಿಂಗಿಯಾಯಿತು. ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಸಂಗಮನಾಥನಿಗೆ ಮನ ಶರಣುಹೋಗಿ ಶರಣನಾಯಿತು. ಜ್ಞಾನದ ತಂತ್ರ ಜ್ಞಾನವನ್ನು ತಿಳಿದು ಮಹಾಜ್ಞಾನಿಯಾಯಿತು.

ಅಂಗವೆಂಬುದು ಅರಿವಿನ ಮಹಾಲಿಂಗ. ಅರಿವು ಅಂಗದ ಕಣಕಣದಲ್ಲಿ ಸಂಗಮವಾಗಿದೆ.ಕಣ್ಣಿನಲ್ಲಿ ಅರಿವಿನ ಬೆಳಕು ನೋಡುವುದಕ್ಕಾಗಿ ಸಂಗಮವಾಗಿದೆ. ಪ್ರತಿ ಶಬ್ದವನ್ನು ಅರಿವಿನಿಂದ ಕೇಳುವ ಶಕ್ತಿ ಕಿವಿಯಲ್ಲಿ ಸಂಗಮವಾಗಿದೆ. ಸುಗಂಧ ದುರ್ಗಂಧವನ್ನು ಅರಿವಿನ ಪರಿಮಳವಾಗಿ ಮೂಸಿಸುವ ಶಕ್ತಿ ಮೂಗಿನಲ್ಲಿ ಸಂಗಮವಾಗಿದೆ. ತನುವಿನಲ್ಲಿ ಅಜ್ಞಾನದ ರಸಾಯನಿಕ ಕ್ರಿಯೆ ಉಂಟಾಗದಂತೆ ಚರ್ಮದಲ್ಲಿ ಅರಿವಿನ ಸ್ಪರ್ಶ ಸಂಗಮವಾಗಿದೆ. ರುಚಿ ಅರುಚಿ ಎಂದು ಹೇಳದೆ ಸಕಲ ಪದಾರ್ಥವನ್ನು ಪ್ರಸಾದವಾಗಿ ಸ್ವೀಕರಿಸುವ ಅರಿವು ನಾಲಗೆಯಲ್ಲಿ ಸಂಗಮವಾಗಿದೆ.

ಮಂಗನಂತೆ ಅಂಗವನ್ನು ಕುಣಿಸ್ಯಾಡುವ ಮನಕ್ಕೆ ಅಂಗದಲ್ಲಿಯೇ ಸಂಗಮವಾದ ಅರಿವಿನ ಭಾಗ್ಯ ಲಭ್ಯವಾದರೆ ಆ ಅರಿವನ್ನೇ ಗುರುದೇವನೆಂದು ಭಾವಿಸಿ ಆ ಅರಿವಿಗೆ ಭಕ್ತನಾಗುತ್ತದೆ, ಆ ಅರಿವಿಗೆ ಶರಣು ಹೋಗಿ ಶರಣನಾಗುತ್ತದೆ. ಅಂಗಕ್ಕೆ ತಾಗುವ ಸಕಲ ಅಜ್ಞಾನವನ್ನು ಆ ಅರಿವಿನಿಂದಲೇ ಪ್ರಸಾದ ಮಾಡಿಕೊಳ್ಳುತ್ತದೆ.

ಮನ, ಅರಿವನ್ನೇ ಪ್ರಾಣ ಲಿಂಗವಾಗಿಸಿಕೊಂಡು ಅಂಗದಲ್ಲಿಯೇ ಅಂಗವಿಸುತ್ತದೆ. ಅರಿವನ್ನೇ ಮಹೇಶ್ವರನನ್ನಾಗಿಸಿಕೊಂಡು ಆತನಲ್ಲಿಯೇ ಐಕ್ಯನಾಗಿ, ಮಹೇಶ್ವರನೇ ತಾನಾಗುತ್ತದೆ.

'ತನ್ನ ತಾನರಿಯದ ಮುನ್ನ ತನ್ಮಯವಾದ ಅರಿವು, ತನ್ನ ತಾನರಿದ ಬಳಿಕ ಅರಿವು ತನ್ಮಯವೆಂದು ಅರಿತ ಅರಿವು, ತನ್ನಲ್ಲಿರುವ ಆ ಅರಿವೇ ಕರಿಗೊಂಡ ಬಳಿಕ ತಾನೇ ಸೌರಾಷ್ಟ್ರ ಸೋಮೇಶ್ವರಾ'. ಎಂದು ಆದಯ್ಯ ಶರಣರು ಹೇಳಿದಂತೆ ಮನ ತಾನೇ ಸೌರಾಷ್ಟ್ರ

ಸೋಮೇಶ್ವರನಾಗುತ್ತದೆ. ಇದು ಅಪ್ಪಣ್ಣ ಶರಣರ ಅರಿವಿನ ಸರಳ ಸೂತ್ರ !

102

ಗುರು ಗುರು ಎಂದು ನುಡಿದಾಡುತಿಪ್ಪರು,
ಆ ಗುರು ನೆಲೆ ಎಂತಿಪ್ಪುದೆಂದರಿಯರು.
ಆ ಗುರು ನೆಲೆ ಎಂತೆಂದರೆ,
ಪರಮ ಸುಖ ಪರಿಣಾಮ ತಲೆಗೇರಿ ನೆಲೆಗೊಂಬುದೆ ಗುರು ನೆಲೆ.
ವರ ಸಮಾಧಿಯೊಳಗೆ ಚರಿಸುವ
ಗುರುಲಿಂಗ ಜಂಗಮ ಪಾದೋದಕ ಪ್ರಸಾದವನರಿದಿಪ್ಪುದೆ ಗುರುನೆಲೆ.
ಇದನರಿಯದೆ ಮನಕೆ ಬಂದಂತೆ
ಕಾಯವೆ ಗುರು, ಪ್ರಾಣವೆ ಲಿಂಗ, ಭಾವವೆ ಜಂಗಮವೆಂದು ನುಡಿದಾಡುವ
ಗಾವಿಲರ ಮಾತು ಕೇಳಲಾಗದು ಎಂದಾತ,
ನಮ್ಮ ಬಸವಪ್ರಿಯ ಕೂಡಲಚೆನ್ನ ಬಸವಣ್ಣ.

ಕಾಯದಿಂದ ಗುರುವಾದಾತ ವ್ಯವಹಾರಿಕ ಗುರು, ವೇಷದ ಗುರು. ಕಾಯದಲ್ಲಿ ಸಂಗಮವಾದ ಅರಿವೇ ಗುರು. ಆ ಗುರುದೇವನನ್ನು ತಿಳಿಯುವ ಬಯಕೆಯುಳ್ಳ ಮನವೇ ಶಿಷ್ಯ. ಗುರು ಶಿಷ್ಯರಿಬ್ಬರೂ ಕಾಯದಲ್ಲಿಯೇ ಸಂಗಮವಾಗಿದ್ದಾರೆ. ಇಂತಹ ಕಾಯವೇ ಕೈಲಾಸ.

ಗುರು ಗುರು ಎಂದು ನುಡಿ ನುಡಿದಾಡುವ ಗಾವುಲ ಮನಕ್ಕೆ ಇದು ತಿಳಿಯದು. ಪರಮ ಸುಖ ಪರಿಣಾಮ ನೆಲೆಗೊಂಬದು. ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನ ನೆಲೆ ದೊರಕದು. ಆ ಅರಿವೆಂಬ ಗುರುದೇವನ ನೆಲೆ ಹೇಗಿಪ್ಪುದೆಂದರೆ, ಪರಮ ಸುಖದ ಪರಿಣಾಮ. ತಲೆಗೇರಿ ಅಲ್ಲಿಯೇ ನೆಲೆಗೊಂಡು ವರಸಮಾಧಿಯೊಳಗೆ ಚಲಿಸುವ ಆನಂದದ ಅನುಭವವನು ಹೊಂದಿ ಮನ ಘನಮನವಾಗುವುದು.

ಗುರುಲಿಂಗ ಜಂಗಮ ಪಾದೋದಕ ಪ್ರಸಾದವನ್ನು ಅಂಗದಲ್ಲಿಯೆ ಅರಿತು ಅರಿವೆ ತಾನಾಗುವುದು. ಮನ ಬಸವಪ್ರಿಯ ಕೂಡಲ ಚೆನ್ನಬಸವಣ್ಣನನ್ನು ಕೂಡಿ, ಕೂಡದ ಅಗಲದ ಕೂಟದ ಸುಖವನು ಅನುಭವಿಸುವುದು.

103

ಗುರು ಗುರು ಎಂದು ಪೂಜೆಯ ಮಾಡುವರು.
ಮತ್ತೆಯಾ ಗುರುವ ನರನೆಂದೆಂಬರು, ಅವರು ಗುರುದ್ರೋಹಿಗಳು.
ಲಿಂಗ ಲಿಂಗ ಎಂದು ಪೂಜೆಯ ಮಾಡುವರು,
ಆ ಲಿಂಗವ ಶಿಲೆ ಎಂಬರು, ಅವರು ಲಿಂಗದ್ರೋಹಿಗಳು.
ಜಂಗಮ ಜಂಗಮ ಎಂದು ಪೂಜೆಯ ಮಾಡುವರು,
ಆ ಜಂಗಮನ ಜಗದ ಹಂಗಿಗರೆಂಬರು,
ಅವರು ಜಂಗಮ ದ್ರೋಹಿಗಳು.
ಈ ಮೂರು ಕರ್ತರೆಂದು ಅರಿಯದವಂಗೆ ಕುಂಭೀ ಪಾತಕ ನಾಯಕ ನರಕ ತಪ್ಪದು,

ಬಸವ ಪ್ರಿಯ ಕೂಡಲಚೆನ್ನ ಬಸವಣ್ಣಾ.

ಗುರು ಎಂದು ಕಾಯವನ್ನು ಗುರುತಿಸಿ ಪೂಜೆಯ ಮಾಡಿ ಮತ್ತೆ ನರನೆಂದು ಹೇಳುವುದು ಗುರುದ್ರೋಹ. ಲಿಂಗ ಲಿಂಗ ಎಂದು ಪೂಜಿಸಿ ಪೂಜಿಸುವ ಲಿಂಗವನ್ನು ಶಿಲೆ ಎನ್ನುವುದೂ ಲಿಂಗ ದ್ರೋಹ. ಜಂಗಮ ಜಂಗಮ ಎಂದು ಪೂಜಿಸಿ ಪೂಜಿಸಿದ ಆ ಜಂಗಮನನ್ನೆ ಜಗದ ಹಂಗಿಗನೆಂದು ಹಂಗಿಸುವುದು ಜಂಗಮದ್ರೋಹ. ಈ ಮೂರನ್ನು ಅಂದರೆ ಗುರು ಲಿಂಗ ಜಂಗಮವೆಂದರೆ ಏನೆಂದು ಅರಿಯದ ಮನಕ್ಕೆ ಕುಂಭೀಪಾತಕ ನಾಯಕ ನರಕ ತಪ್ಪದು.

ಅರಿವು ಬೇರಲ್ಲ, ಅದನ್ನು ತಿಳಿಹೇಳುವ ಗುರು ಬೇರಲ್ಲ, ಅರಿವು ಬೇರಲ್ಲ ಅಂಗದಲ್ಲಿ ಸಂಗಮವಾದ ಲಿಂಗ ಬೇರಲ್ಲ ಎಂದು ಮನಕ್ಕೆ ಅರಿವಾಗದಿದ್ದರೆ, ಅರಿವನ್ನು ಹೇಳುವ ಕಾಯವನ್ನು ಮನ ಗುರುವಾಗಿ ಭಾವಿಸುತ್ತದೆ; ಪುನಃ ಮನ ದುರ್ಭಾವಕ್ಕೆ ಒಳಗಾಗಿ ನರರೆಂದು ಬೊಗುಳುತ್ತದೆ.

ಗುರು ಕೊಟ್ಟ ಕುರುಹನ್ನು ಲಿಂಗವೆಂದು ಪೂಜಿಸುತ್ತದೆ; ಫಲ ದೊರೆಯದಿದ್ದಾಗ ಕಲ್ಲು ಎಂದು ಬೊಗಳುತ್ತದೆ. ಜಂಗಮನಿಗೆ ಆಮಂತ್ರಣ ಕೊಟ್ಟು ಪಾದ ಪೂಜೆ ಮಾಡುತ್ತದೆ; ಫಲಪದ ದೊರೆಯದಿದ್ದಾಗ ಜಗದ ಹಂಗಿಗನೆಂದು ಬೊಗಳುತ್ತದೆ. ಇಂತಹ ಮನಕ್ಕೂ, ಮನದ ತನುವಿಗೂ ನರಕ ತಪ್ಪದು.; ಅರಿವೆಂಬ ಗುರುದೇವನಾದ ಬಸವ ಪ್ರಿಯ ಕೂಡಲಚೆನ್ನಬಸವಣ್ಣನ ದರುಷನವಾಗದನ್ನಕ್ಕ.

104

ಗುರುಪಾದೋದಕಕ್ಕೆ ಹರಿವ ನದಿಯೆಲ್ಲ ಸರಿಯೆಂದು ನುಡಿದರೆ,
ಸುರಿಯವೆ ಬಾಲಹುಳು ?
ಇಷ್ಟಲಿಂಗದ ಪಾದೋದಕಕ್ಕೆ ಅಷ್ಟಾ ಷಷ್ಟಿತೀರ್ಥಂಗಳು ಸರಿಯಿಲ್ಲ.
ಜಂಗಮದ ಪಾದೋದಕಕ್ಕೆ ಜಗದ ತೀರ್ಥ ಜಾತ್ರೆ ಸರಿಯೆಂದು ನುಡಿದರೆ,
ಜಗದ ಜಂಗುಳಿಗಳೆಂಬೆ.
ಇಂತೀ ತ್ರಿವಿಧ ಪಾದೋದಕ ತ್ರಿವಿಧ ಅಂಗಕ್ಕೆ ಪ್ರಾಣ.
ಇಂತು ಮಂತ್ರೋದಕ ಮಜ್ಜನೋದಕ ಪ್ರಸಾದೋದಕ
ಈ ತ್ರಿವಿಧವು ತ್ರಿವಿಧ ಲಿಂಗಕ್ಕೆ ಪ್ರಾಣವು.
ಈ ಷಡ್ವಿಧ ಪಾದೋದಕವೆ ಷಡ್ವಿಧ ಅಂಗ ಲಿಂಗದ ಕಳೆ.
ಆ ಕಳೆಯೆ ಕಾರಣ. ಆ ಕಾರಣವೆ ಎಲ್ಲರಿಗೆಯೂ ಪ್ರಾಣದ ಕಳೆ.
ಪ್ರಾಣದ ಕಳೆಯೆ ಪಾದೋದಕ. ಅದಕ್ಕೆ ದೃಷ್ಟ ರಹಸ್ಯೇ :
ಸರ್ವತೀರ್ಥಾಭಿಷೇಕಾದಿ ಶುದ್ಧ ಮಾನಸ ಜಾಯತೇ ।
ಗುರೋರಂಘ್ರಿ ಸ್ಪರ್ಶಜಲಂ ತಸ್ಮಾತ್ ಶಿರಸಾ ಧಾರಯೇತ್ ॥
ಎಂದುದಾಗಿ, ಆ ಪದೋದಕವ ಕೊಂಡವನೆ ಪರಬ್ರಹ್ಮ ಸ್ವರೂಪು.
ಬಸವಪ್ರಿಯ ಕೂಡಲಸಂಗಮದೇವಾ,
ಮಾಂ ತ್ರಾಹಿ, ತ್ರಾಹಿ ಕರುಣಾಕರನೆ.

ಭೂಮಿಯ ಮೇಲೆ ಹರಿಯುವ ಪವಿತ್ರ ನದಿಗಳೆಲ್ಲ ಗುರುಪಾದೋದಕಕ್ಕೆ ಸಮವಲ್ಲ.

ಭೂಮಿಯ ಮೇಲೆ ಇರುವ ಅಷ್ಟಾಷಷ್ಟಿ ತೀರ್ಥಂಗಳೆಲ್ಲ ಇಷ್ಟಲಿಂಗದ ಪಾದೋದಕಕ್ಕೆ ಸಮವಲ್ಲ. ಜಗದ ತೀರ್ಥ ಜಾತ್ರೆಗಳೆಲ್ಲ ಜಂಗಮ ಪಾದೋದಕಕ್ಕೆ ಸಮವಲ್ಲ. ಜಗದ ಜಂಗುಳಿಗಳಿಗೆ ಶ್ರೇಷ್ಠವಾಗಬಹುದು; ಆದರೆ ಅರಿತರಿತು ನೋಡುವ ಜ್ಞಾನಿಗೆ ಸರಿ ಎನ್ನಿಸುವುದಿಲ್ಲ.

ಸಕಲ ನದಿಗಳು, ತೀರ್ಥಂಗಳು ತನುವಿನ ಕೊಳೆಯ ತೊಳೆಯಬಹುದು. ಮನದ ಕೊಳೆಯನು ತೊಳೆಯಲು ತೀರ್ಥಂಗಳಿಗೆ ಸಾಧ್ಯವಾಗುವುದಿಲ್ಲ. ಪಾದೋದಕದಿಂದ ಮಾತ್ರ ಮನದ ಕೊಳೆ ತೊಳೆಯಲು ಸಾಧ್ಯ.

ತನು ಒಂದು ಜ್ಞಾನೋದಕದ ಅಕ್ಷಯ ಪಾತ್ರೆ. ಈ ಪಾತ್ರೆಯ ಪರಿಚಯ ಮನಕ್ಕೆ ಆದರೆ ಸಕಲ ಸಂಪತ್ತು ತನುವಿನ ಅಕ್ಷಯ ಪಾತ್ರೆಯಲ್ಲಿಯೆ ದೊರೆಯುತ್ತದೆ. ಬಯಲು, ಜಲಜನಕ, ಆಮ್ಲಜನಕ ಹಿಡಿದು ಜಲಬಿಂದುವನ್ನಾಗಿಸಿ ಒಂದು ಮಾಡಿ ಅದರಲ್ಲಿ ತಾನು ಬೆರೆತು ಅರಿವಿನ ಬಿಂದುವಾಗಿ ತನ್ನ ಲೀಲಾ ವಿನೋದಕ್ಕಾಗಿ ತನುವಿನ ಗರ್ಭ ಹೊಕ್ಕು ಜ್ಞಾನೋದಕವಾಗಿದೆ. ಇದನ್ನು ಧರಿಸಿದ ಶಿವನನ್ನು ಗಂಗಾಧರನೆಂದು ಕರೆದರು. ಗಂಗಾಜಲ, ಅರಿವಿನ ಬಿಂದುವಾಗಿ ತಂದೆಯ ಗರ್ಭದಿಂದ ತಾಯಿ ಗರ್ಭ ಪ್ರವೇಶ ಮಾಡಿ, ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಆಗಿ ಚರ್ಮದ ಕವಚದಲ್ಲಿ ಬಂಧಿಯಾಗಿ ಅರಿವಿನ ಶಿವತನುವಾಗಿದೆ.

ಅರಿವಿನ ಬೀಜದ ಬೆಳಕಿನ ನೆರಳಾಗಿ ಹಿಂಬಾಲಿಸಿದ ಮನ ತನುವನ್ನು ಆವರಿಸಿರುವುದರಿಂದ ಆ ಮನದಿಂದಲೇ ಮಹಾಜ್ಞಾನದ ಈ ಪಾದೋದಕವನ್ನು ತಿಳಿಯಬೇಕಾಗಿದೆ.

ಜಾಗ್ರತ ಸ್ವಪ್ನ ಸುಷುಪ್ತಿಯಿಂದ ಬಂಧಿಯಾದ ಅರಿವಿನ ತನು ಜ್ಞಾನದ ಪಾದೋದಕದಿಂದಲೇ ಮುಕ್ತನಾಗಬೇಕಿದೆ. ಸಾತ್ವಿಕ ರಾಜಸ ತಮೊ ಗುಣಗಳಿಂದ ಬಂಧಿಯಾದ ತನು ಈ ಪಾದೋದಕದಿಂದಲೇ ಮುಕ್ತನಾಗಬೇಕಿದೆ.

ಜಲ ಸಮುದ್ರವಾದರೇನು, ನದಿಯಾದರೇನು, ತೀರ್ಥಂಗಳಾದರೇನು? ಅದನ್ನು ಜಲವೆಂದೇ ಕರೆಯುತ್ತಾರೆ. ಜಲ ಜಡ. ಇದಕ್ಕೆ ರುಚಿಯಿಲ್ಲ, ಬಣ್ಣವಿಲ್ಲ, ವಾಸನೆಯಿಲ್ಲ.

ಈ ಜಲಬಿಂದುವಿನಲ್ಲಿ ಬಯಲು ಬೆರೆತು ಅರಿವಿನ ಜೀವ ಜಲಬಿಂದುವಾಗಿ ಗರ್ಭಸೇರಿ ಅಂಗವಾಗಿ ಹೊರಬಂದಾಗ ಜ್ಞಾನದ ಲಿಂಗವಾಗಿ ನೋಡುತ್ತದೆ. ಜ್ಞಾನದ ಲಿಂಗವಾಗಿ ಕೇಳುತ್ತದೆ. ಜ್ಞಾನದ ಲಿಂಗವಾಗಿ ರುಚಿಸಿ, ಮೂಸಿಸಿ, ಮುಟ್ಟುತ್ತದೆ. ಜ್ಞಾನದ ಲಿಂಗವಾಗಿ ಸರ್ವವನ್ನೂ ತಿಳಿಯುತ್ತದೆ. ಆರು ವಿಧಗಳಲ್ಲಿ ಅರಿವಿನ ಕಳೆಯಿಂದ ಕಂಗೊಳಿಸುವ ಈ ಮಹಾಜ್ಞಾನ ತನುವಿನಲ್ಲಿ ತನ್ಮಯವಾದದ್ದು ಪಾದೋದಕದಿಂದಲೇ! ಮನ ತನ್ನ ಭ್ರಮೆ ಕಳೆದುಕೊಂಡು ಈ ಪಾದೋದಕವನ್ನು ಪಡೆದರೆ ಅದು ಬ್ರಹ್ಮಸ್ವರೂಪಿಯಾಗುವುದು. ಭ್ರಮೆ ಕಳೆದುಕೊಂಡು ಸಕಲವನ್ನು ನೋಡಿ ಕೇಳಿ ಮುಟ್ಟಿ ರುಚಿಸಿ ಮೂಸಿಸಿ ತಿಳಿದು ಆನಂದಿಸುವುದು. ಮಾಂ ತ್ರಾಹಿ ತ್ರಾಹಿ ಕರುಣಾಕರನೆ ಕರುಣಿಸಿದೆಯಾ ತಂದೆ ಎಂದು ನಿಟ್ಟುಸಿರು ಬಿಡುವುದು.

105

ಗುರುಪ್ರಸಾದ, ಲಿಂಗ ಪ್ರಸಾದ, ಜಂಗಮ ಪ್ರಸಾದ,
ಅಚ್ಚ ಪ್ರಸಾದ, ಅರ್ಪಿತ ಪ್ರಸಾದ, ಸಹಬೋಜನ,
ಆರರಲ್ಲಿ ಅರ್ಪಿತ, ಮೂರರಲ್ಲಿ ಮುಕ್ತ ವೆಂದು
ಊರೆಲ್ಲರ ಮುಂದೆ ದೂರಿಯಾಡುವ ನಾಯಿ ಮನುಜರಿರಾ,

ಹೀಗೇಕೆ ದೂರುವಿರಿ ?
ಗುರುವೆಷ್ಟು, ಲಿಂಗವೆಷ್ಟು, ಜಂಗಮವೆಷ್ಟು, ಪ್ರಸಾದವೆಷ್ಟು, ಅರ್ಪಿತವೆಷ್ಟು ?
ಇದರ ಅವಧಾನವರಿದ ಶರಣಂಗೆ, ಒಂದಲ್ಲದೆ ಎರಡುಂಟೆ ?
ಅವು ಒಂದೆಂಬುವನಕ ಬಂಧನವು.
ತತ್ವಾರ್ಥಕ್ಕೆ ಇದಿರಟ್ಟುಕೊಂಡಿಪ್ಪನಲ್ಲದೆ,
ಅರಿದ ಶರಣಂಗೆ ಒಂದೆಂಬುದು ಸಂದೇಹ.
ಈ ರೀತಿಯ ನರಿಯದೆ ತೂತು ಬಾಯೊಳಗೆ ಮಾತಿಗೆ ತಂದು
ನುಡಿದಾಡುವ ಪಾತಕರ ಮೆಚ್ಚುವನೆ,
ನಮ್ಮ ಶರಣ ಬಸವಪ್ರಿಯ ಕೂಡಲಚೆನ್ನಬಸವಣ್ಣ ?

ಅಂಗವೆಂಬುದು ಅರಿವಿನ ಲಿಂಗವಾದರೂ, ಆವರಿಸಿದ ಮನದ ಕಾರಣದಿಂದಾಗಿ ಒಂದಂಗವನ್ನೇ ಗುರುಲಿಂಗ ಜಂಗಮವೆಂದು ಮೂರು ಭಾಗಗಳಲ್ಲಿ ವಿಂಗಡಿಸಿದೆ. ಮನಕ್ಕೆ ಭ್ರಮೆ ಆವರಿಸಿ, ಗುರುವನ್ನು ಲಿಂಗವನ್ನು ಜಂಗಮವನ್ನು ಪುನಃ ಹೊರಗೆ ನೋಡುತ್ತದೆ. ಶಿಲೆಯೇ ಲಿಂಗದ ಕುರುಹು ಎಂದು ಭಾವಿಸಿ ಅಂಗದ ಮೇಲೆ ಧರಿಸುತ್ತದೆ. ಲಿಂಗಕೊಟ್ಟಾತ ಗುರುವೆಂದು, ಶಿಷ್ಟಾಚಾರ ಬೋಧಿಸಿದಾತನನ್ನು ಜಂಗಮನೆಂದು ಕರೆದು ಪೂಜಿಸಿ ಭಕ್ತ ನೆನ್ನಿಸಿಕೊಳ್ಳುತ್ತದೆ. ಅಂಗಕ್ಕೆ ಆವರಿಸಿದ ಇಂತಹ ಅಜ್ಞಾನಿ ಮನಕ್ಕೆ ಅಪ್ಪಣ್ಣ ಶರಣರು: ಊರೆಲ್ಲರ ಮುಂದೆ ದೂರಿಯಾಡುವ ನಾಯಿ ಎಂದು ಕರೆದಿದ್ದಾರೆ.

ಎಲೆ ಮನವೆ, ಗುರುವೆಂದರೇನು? ಲಿಂಗ ಜಂಗಮ ಪ್ರಸಾದವೆಂದರೇನೆಂದು ನಿನಗೇನಾದರೂ ತಿಳಿದಿದೆಯಾ? ಅವು ಎಲ್ಲಿವೆ? ವೇಷ ಧರಸಿದ ತನು ಗುರು ಲಿಂಗ ಜಂಗಮವಾಗಲು ಬರುತ್ತದೆಯೆ? ಅವುಗಳಿಗೆ ನಿನಗೆ ಅರ್ಪಿಸಲಾದರೂ ಬರುತ್ತದೆಯೆ? ಒಂದಂಗದಲ್ಲಿಯೇ ಆರು ಇವೆ, ಮೂರು ಇವೆ, ಅರಿವಿನಿಂದ ನೋಡಲು ಹೋದರೆ ಒಂದೇ ಇದೆ. ತತ್ವಾರ್ಥ ತಿಳಿಯುವುದಕ್ಕಾಗಿ ಇದಿರಿಟ್ಟು ಕೊಂಡ ನಲ್ಲದೆ ಅರಿದರಿದು ನೋಡಿ ಸತ್ಯಕ್ಕೆ ಶರಣು ಹೋಗಿ ಶರಣನೇ ತಾನಾದ ಶರಣನಿಗೆ ಒಂದೇ ಆಗಿದೆ.

ಮನ, ತನ್ನ ಅಜ್ಞಾನವನ್ನು ಕಿತ್ತಿ ಗುರು ಲಿಂಗ ಜಂಗಮನಿಗೆ ಪ್ರಸಾದ ಮಾಡಿ ಉಣಬಡಿಸಲು ಬಂದವನೇ ಶರಣ. ಆತ ಮಾತ್ರ ಸಹಭೋಜನದ ನಿಸ್ಸೀಮ. ಆರು ಅರ್ಪಿಸಿ ಮೂರರಲ್ಲಿ ಮುಕ್ತಿ ಹೊಂದಿದಾತ. ಉಳಿದ ತನುಗಳು. ಆ ತನುಗಳನ್ನು ಹೊತ್ತ ಮನಗಳೆಲ್ಲ ಊರೆಲ್ಲರ ಮುಂದೆ ದೂರಿಯಾಡುವ ನಾಯಿಗಳು ಎಂದು ದೂರಿದ್ದಾರೆ.

ಈ ರೀತಿಯನರಿಯದೆ ತೂತುಬಾಯೊಳಗೆ ಮಾತಿಗೆ ತಂದು ನುಡಿದಾಡುವ ಪಾತಕ ಮನಗಳನು ಮೆಚ್ಚುವನೆ ನಮ್ಮ ಶರಣ ಬಸವಪ್ರಿಯ ಕೂಡಲಚೆನ್ನ ಬಸವಣ್ಣ ಎಂದು ಪ್ರಶ್ನಿಸಿದ್ದಾರೆ ಅಪ್ಪಣ್ಣ.

106

ಗುರು ಭಕ್ತಿಯ ಮಾಡಿಹೆವೆಂದು ಅಂಗಸೂತಕವ ಮಾಡಿದರು.
ಲಿಂಗ ಭಕ್ತಿಯ ಮಾಡಿಹೆವೆಂದು ಮನ ಸೂತಕವ ಮಾಡಿದರು.
ಜಂಗಮಭಕ್ತಿಯ ಮಾಡಿಹೆವೆಂದು ಜಗದ ಹಂಗಿಗರಾದರು.

ಈ ತ್ರಿವಿಧ ಭಕ್ತಿಯ ಮಾಡಿಹೆವೆಂದು ತ್ರಿವಿಧವ ಹಿಡಿದು,
ತ್ರಿವಿಧ ಮಲ ಸಂಬಂಧಿಗಳಾಗಿ ಹೋದರಲ್ಲದೆ
ತ್ರಿವಿಧವನು ತ್ರಿವಿಧಕ್ಕಿತ್ತು ತ್ರಿವಿಧದ ನೆಲೆಯರಿದು,
ಈ ಕಲಿಯುಗದ ಭವವ ದಾಂಟಿ,
ಬಯಕೆಯ ಸವಿದು, ಭಾವ ಬಯಲಾಗಿ,
ಆ ಬಯಲನೆಯ್ದಿ ಹೋಗುವ ಶರಣರ
ಪಾದವ ನಂಬಿ ಕೆಟ್ಟು ಬಟ್ಟ ಬಯಲಾದೆನಯ್ಯಾ
ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ.

ಅಂಗವೆಲ್ಲ ಅರಿವಿನ ಅಂಗಗಳೇ ಆಗಿವೆ. ಹೀಗಿದ್ದೂ ಒಂದು ಅಂಗ ಮತ್ತೊಂದು ಅಂಗವನ್ನು ಗುರುವೆಂದು ತಿಳಿದು, ತಾನು ಕನಿಷ್ಠವೆಂದು ಭಾವಿಸಿದರೆ, ಮನ ತಾನು ವಾಸಮಾಡಿದ ಅಂಗಕ್ಕೆ ಸೂತಕವೆಸಗಿದಂತೆ. ಜಗದ ಎಲ್ಲ ಅಂಗಗಳ ಕಣ್ಣು ಕಿವಿ ಮೂಗು ನಾಲಿಗೆ ಚರ್ಮವೆಂಬ ಜ್ಞಾನೇಂದ್ರಿಯಗಳನ್ನು ಹೊಂದಿವೆ. ಮನಕ್ಕೆ ಅರಿವಾದರೆ ಜ್ಞಾನ ಸದ್ಬಳಕೆಯಾಗುತ್ತದೆ. ಇಲ್ಲ ಮನವೇ ಅಂಗವನ್ನು ತನಗೆ ತೋಚಿದಂತೆ ತನ್ನ ಸುಖಕ್ಕಾಗಿ ಬಳಕೆ ಮಾಡಿಕೊಂಡು ಸೂತಕದ ಅಂಗವನ್ನಾಗಿ ಮಾಡುತ್ತದೆ.

ಅಂಗದಲ್ಲಿ ಸಂಗಮವಾದ ಜ್ಞಾನವನ್ನು ಮನ ಅರಿತರೆ ಆ ಅಂಗವೇ ಲಿಂಗ; ಅರಿಯದಿದ್ದರೆ ಶಿಲೆಯನ್ನು ಕತ್ತರಿಸಿ ಅದಕ್ಕೆ ಲಿಂಗವೆಂದು ನಾಮಕರಣ ಮಾಡಿ, ಎದೆಯ ಮೇಲೆ ಧರಿಸಿ, ಹಗಲಿರುಳು ಪೂಜಿಸಿದರೆ ಲಿಂಗ ಒಲಿದು ಮಾತಾಡುವುದಿಲ್ಲ. ಬದಲಾಗಿ ಅದನ್ನು ತಿಳಿಯುವ ಮನವನ್ನು ಸೂತಕಕ್ಕೀಡು ಮಾಡಿದಂತೆ ಆಗುವುದು.

ಲಿಂಗ ಪೂಜಾ ಕ್ರಿಯೆಗಳನ್ನು ಹೇಳಿದನೆಂದು ಮನ ಜಂಗಮನನ್ನು ಪೂಜಿಸಿ, ಜಗದ ಹಂಗಿಗನನ್ನಾಗಿ ಮಾಡಿತು. ಏಕೆಂದರೆ ಗುರು ಲಿಂಗ ಜಂಗಮರು ಅಂಗದಲ್ಲಿಯೇ ಸಂಗಮರಾಗಿದ್ದಾರೆಂದು ಮನಕ್ಕೆ ತಿಳಿಯಲು ಸಾಧ್ಯವಾಗಲಿಲ್ಲ. ಹೀಗಾಗಿ ಅಂಗದಲ್ಲಿದ್ದವರು ಸೂತಕಕ್ಕೆ ಒಳಗಾದರು. ಹೊರಗಿನವರು ಮನಕ್ಕೆ ಬಳಕೆಗೆ ಬಂದರು.

ಮನ, ಗುರು ಲಿಂಗ ಜಂಗಮಕ್ಕೆ ಹೊರಗೆ ಭಕ್ತಿ ಮಾಡಿ ತ್ರಿವಿಧ ಮನಸಂಬಂಧಿಯಾಯಿತು. ತ್ರಿವಿಧದ ಅಜ್ಞಾನವನು, ಆ ತ್ರಿವಿಧಕ್ಕೆ ಇಕ್ಕಿ ಕಲಿಯುಗದ ಜನನ ಮರಣಗಳ ಬಾಧೆಯನ್ನು ದಾಟಲಿಲ್ಲ. ಅರಿವೆಂಬ ಗುರುದೇವನ ಬಯಕೆ ಸವಿಯಲಿಲ್ಲ. ಮನದ ಭಾವ ಬಯಲಾಗಲಿಲ್ಲ. ಆ ಬಯಲ ಸುಖವನು ಸವಿದ ಶರಣರ ಪಾದ ಹಿಡಿದು ಅವರನ್ನು ನಂಬಿ ಮನದ ಅಜ್ಞಾನ ಕೆಟ್ಟು ಬಟ್ಟ ಬಯಲಾದೆನಯ್ಯಾ ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ ಎಂದು ಅಪ್ಪಣ್ಣ ಶರಣರು ಅಜ್ಞಾನದಿಂದ ಬಯಲಾಗುವ ಸೂತ್ರವನ್ನು ಅರುಹಿದ್ದಾರೆ.

107

ಗುರುವ ಮುಟ್ಟಿ ಗುರುವಿನಂತಾಗಬೇಡವೆ ?
ಲಿಂಗವ ಮುಟ್ಟಿ ಪೂಜಿಸಿ ಲಿಂಗದಂತಾಗಬೇಡವೆ ?
ಜಂಗಮವ ಮುಟ್ಟಿ ಪೂಜಿಸಿ ಪಾದೋದಕ ಪ್ರಸಾದವಕೊಂಡು.

ಜಂಗಮದಂತಾಗ ಬೇಡವೆ.
ಈ ತ್ರಿವಿಧವಿಡಿದು, ತ್ರಿವಿಧವ ಬಿಟ್ಟು, ತ್ರಿವಿಧವ ಮುಟ್ಟಿ,
ತ್ರಿವಿಧವನೇಕವ ಮಾಡಿ, ಈ ಭವವ ದಾಂಟಿ ಹೋದವರ ಭಕ್ತರೆಂಬೆ,
ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯರೆಂಬೆ.
ಇವನರಿಯದೆ ಮದ ಮತ್ಸರವ ಬಿಡದೆ,
ಕುದಿದು ಕೋಟಲೆಗೊಂಬ ಬಿನುಗರ ನೊಲ್ಲ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಅಂಗದಲ್ಲಿ ಸಂಗಮವಾದ ಅರಿವೆಂಬ ಗುರುದೇವನನ್ನು ಮನವೆಂಬ ಶಿಷ್ಯನಿಗೆ ದರ್ಶನ ಮಾಡಿಸಿ; ಅವನನ್ನು ತನ್ನಂತೆ ಮಾಡಿಕೊಳ್ಳುವವನೇ ನಿಜ ಗುರು. ಮನ, ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನಲ್ಲಿ ಲೀನವಾಗಿ ಘನಮನವಾಗುವುದೇ ಗುರು ಮುಟ್ಟಿ ಗುರುವಾಗುವ ವಿಧಾನ.

ಅಂಗದಲ್ಲಿ ಸಂಗಮವಾದ ಅರಿವೇ ಲಿಂಗ. ಅಂಗವನ್ನು ಆವರಿಸಿದ ಮನಕ್ಕೆ ಗುರುದೇವ ತಿಳಿಹೇಳಿ, ಅದನ್ನು ಧರಿಸುವ ಬಗೆ ವಿವರಿಸುತ್ತಾನೆ. ಮನ ಅದನ್ನು ಧರಿಸಿ ಲಿಂಗದಂತಾಗುತ್ತದೆ. ಲಿಂಗಾಂಗವೇ ತಾನಾಗುತ್ತದೆ.

ಅಂಗದಲ್ಲಿ ಸಂಗಮವಾದ ಅರಿವು ಪಾಲಿಸುವ ಅವ್ಯಕ್ತನೆ ಜಂಗಮ ಗುರುದೇವ ಇದನ್ನು ಮನಕ್ಕೆ ಬೋಧಿಸುತ್ತಾನೆ.

ಉದಾ: ಗುರುದೇವ ಮಂತ್ರೋಪದೇಶ ಮಾಡಿ, ಅಂಗದಲ್ಲಿ ಲಿಂಗ ಧರಿಸಿ ಅದನ್ನು ನಿತ್ಯ ಪೂಜಿಸಲು ಹೇಳುತ್ತಾನೆ. ಇದನ್ನು ಶಿಷ್ಯನಾದಾತ ತ್ರಿಕಾಲ ಲಿಂಗ ಪೂಜಿಸಿ, ಗುರು ಲಿಂಗ ಜಂಗಮರನ್ನು ಆರಾಧಿಸುತ್ತಾನೆ. ಆದರೂ ಪೂಜೆಗೊಳಗಾದ ಲಿಂಗದಿಂದ, ಗುರುವಿನಿಂದ, ಜಂಗಮನಿಂದ ತನ್ನ ದೋಷ ನಿವಾರಣೆಯಾಗಲಿಲ್ಲ.

ಕಣ್ಣಿನಲ್ಲಿ ಬೆರೆತ ಕಾಮದ ಅಜ್ಞಾನ, ಜಾತಿ ಮತ ಪಂಥಗಳ ಭೇದದ ಅಜ್ಞಾನ ಅಳಿಯಲಿಲ್ಲ. ಹೆಣ್ಣು ಗಂಡು, ಶ್ರೀಮಂತ ಬಡವ ಎನ್ನುವ ಭೇದವೂ ಅಳಿಯಲಿಲ್ಲ. ಆಭರಣದೊಳಗಿದ್ದ ಸತ್ಯ ಹೊಳೆಯಲಿಲ್ಲ. ಪರಸತಿಯರನ್ನು ನೋಡಿ ಬಯಸುವ ಬಯಕೆ ಹಿಂಗಲಿಲ್ಲ. ಅಂದ ಮೇಲೆ ಈ ತ್ರಿವಿಧ ಬಿಡಬೇಕಲ್ಲ. ಅಂದರೆ ತೋರಿಕೆಯ ಗುರುಲಿಂಗ ಜಂಗಮರನ್ನು ಪೂಜಿಸುವುದು ಬಿಡಬೇಕಲ್ಲ.

ಈ ತ್ರಿವಿಧವಿಡಿದು ಪೂಜಿಸುವ ಲಿಂಗವನ್ನು ಮನ ಅರಿವಿನಿಂದ ನೋಡಿದರೆ ಅದು ಕಲ್ಲು ; ಕಣ್ಣು ಅರಿವಿನಿಂದ ಭರಿತವಾಗಿರುತ್ತದೆ. ಕಲ್ಲನ್ನು ಕೆತ್ತಿದ ಮೇಲೆ ಅರಿವಿನಿಂದ ಭರಿತವಾದ ಕಣ್ಣಿನಲ್ಲಿ ಮನ ಬೆರೆತು, ಕಣ್ಣನ್ನು ತನ್ನ ಸ್ವಾಧೀನಕ್ಕೆ ಪಡೆದು, ಅದನ್ನು ಲಿಂಗವೆಂದು ನೋಡುತ್ತದೆ. ಗುರು ಹೇಳಿದಂತೆ ಲಿಂಗ ಪೂಜಿಸಲು ಮನ ತನುವಿಗೆ ಆದೇಶ ಕೊಡುತ್ತದೆ.

ಕಲ್ಲನ್ನು ನೋಡಿ ಕಲ್ಲಿಗೆ ಕಲ್ಲೆಂದು ಆದೇಶ ಕಳಿಸಿದ ಅರಿವು ಕಣ್ಣಿನಲ್ಲಿ ಭರಿತವಾಗಿದೆ. ಕಟೆದು ಕಲ್ಲನ್ನು ಲಿಂಗವೆಂದು ಪೂಜಿಸಿ ಆರಾಧಿಸುವ ಮನದ ಮರೆವು ಕಣ್ಣನ್ನು ಆವರಿಸಿಕೊಂಡಿದೆ. ಕಣ್ಣಿನಲ್ಲಿ ಆವರಿಸಿದ ಮನ, ಕಣ್ಣಿನಲ್ಲಿ ಭರಿತವಾದ ಅರಿವೆಂಬ ಗುರುದೇವನನ್ನು ಪೂಜಿಸುವುದೇ ಗುರು ಪೂಜೆ, ಲಿಂಗ ಪೂಜೆ, ಜಂಗಮ ಪೂಜೆ. ಮನ ಗುರು ಮುಟ್ಟಿ ಗುರುವಾಯಿತು. ಲಿಂಗ ಮುಟ್ಟಿ ಲಿಂಗವಾಗಿ. ಜಂಗಮ ಮುಟ್ಟಿ ಜಂಗಮವಾಯಿತು.

ತೋರಿಕೆಯ ಅಜ್ಞಾನದ ಗುರು ಲಿಂಗ ಜಂಗಮ ಪೂಜೆಯನು ಮನ ಬಿಟ್ಟಿತು. ತೋರಬಾರದ ಅರಿವೆಂಬ ಗುರು ಲಿಂಗ ಜಂಗಮ ಪೂಜೆಯನು ಹಿಡಿಯಿತು. ಮನ ಗುರುಲಿಂಗ ಜಂಗಮರನ್ನು ಮುಟ್ಟಿ ತ್ರಿವಿಧವನು ಅಂದರೆ ಗುರುಲಿಂಗ ಜಂಗಮವನು ಏಕಮಾಡಿ ಜನನ ಮರಣಗಳನ್ನು ದಾಟಿತು. ತಾನೇ ಭಕ್ತನಾಯಿತು. ತಾನೇ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿಯಾಯಿತು. ಸತ್ಯಕ್ಕೆ ಮನ ಶರಣು ಹೋಗಿ ಶರಣನೇ ತಾನಾಯಿತು. ಆ ಪರಮಸತ್ಯದಲ್ಲಿಯೇ ಮನ ಐಕ್ಯವಾಗಿ ಘನಮನವಾಯಿತು.

ಇವನರಿಯದೆ ಮದಮತ್ಸರವ ಬಿಡದೆ, ಕುಡಿದು ಕೋಟಲೆಗೊಂಬ ಬಿನುಗರನೊಲ್ಲ ನಮ್ಮ ಬಸವ ಪ್ರಿಯ ಕೂಡಲ ಚೆನ್ನಬಸವಣ್ಣ ಎಂದಿದ್ದಾರೆ ಅಪ್ಪಣ್ಣ ಶರಣರು.

ತನುವಿನ ಅರಿವಿನ ಶಕ್ತಿಯನ್ನು ತನುವೇ ಬಳಕೆ ಮಾಡಿಕೊಳ್ಳುವ ಅಪ್ಪಣ್ಣ ಶರಣರ ಅರಿವಿನ ಸೂತ್ರವಿದು.

108

ಗುರುವಿಂದಾದ ಲಿಂಗ, ಲಿಂಗದಿಂದಾದ ಜಂಗಮ,
ಜಂಗಮದಿಂದಾದುದು ಜಗ,
ಜಗ ಹಿತಾರ್ಥವಾಗಿ ಪಾದೋದಕ ಪ್ರಸಾದವಾಯಿತ್ತು .
ಪಾದೋದಕ ಪ್ರಸಾದದಿಂದ ಪರವನೆಯ್ದಿದರು.
ಜಗದೊಳು ಭಕ್ತ ಗಣಂಗಳು,
ಬಸವ ಪ್ರಿಯ ಕೂಡಲಸಂಗಮದೇವ ಪ್ರಭುವೆ.

ಜಗದ ತನುಗಳೆಲ್ಲ ಅರುಹೃದಯವುಳ್ಳ ಗುರು ಸಮಾನವಾದವು. ಅರಿವು ತನುವಿನಲ್ಲಿ ತನ್ಮಯವಾಗಿದೆ. ಮನ ಅರಿತರೂ, ಅರಿಯದಿದ್ದರೂ ತನು ಅರುವೆಂಬ ಗುರುಸ್ವರೂಪವಾಗಿದೆ. ಈ ಅರುಸ್ವರೂಪವೇ ಅಂಗದಲ್ಲಿ ಲಿಂಗವಾಗಿ, ಲಿಂಗಾಂಗವಾಗಿ ಸಂಗಮವಾಗಿದೆ.

ಅರಿವಿನ ಜಲಬಿಂದುವಿನಿಂದಲೆ ಅಂಗ ಲಿಂಗಾಂಗವಾಗಿರುವುದರಿಂದ ಗುರುವಿಂದಾದ ಲಿಂಗವೆಂದು ಅಪ್ಪಣ್ಣ ಶರಣರು ಹೇಳಿದ್ದಾರೆ.

ಅಂಗದಲ್ಲಿ ಸಂಗಮವಾದ ಅರಿವೇ ಜಂಗಮ. ಅಂಗವೇ ಲಿಂಗ. ನೋಡುವ ಕಣ್ಣಿನಲ್ಲಿ ಅರಿವೆಂಬ ಲಿಂಗ ಸಂಗಮವಾಗಿದೆ. ವಸ್ತುವಿನಲ್ಲಿರುವ ಸತ್ಯವನ್ನು ಕಣ್ಣು ಅರಿವಿನ ಮೂಲಕ ನೋಡಿದರೆ, ಕಣ್ಣಿನಲ್ಲಿಯೇ ಇರುವ ಜಂಗಮ ವಸ್ತುವಿನಲ್ಲಿ ಗೋಚರವಾದ ಅಜ್ಞಾನವನ್ನು ಪ್ರಸಾದ ಮಾಡಿಕೊಂಡು ಸತ್ಯವನ್ನು ಪಾಲಿಸುತ್ತಾನೆ.

ಲಿಂಗದಲ್ಲಿರುವ ಕಲ್ಲು ಸತ್ಯ . ಲಿಂಗ ಅಸತ್ಯ. ಆದರೆ ಮನ ಕಟೆದ ಕಲ್ಲಿಗೆ ಲಿಂಗವೆನ್ನುತ್ತದೆ. ಅರಿವು ಕಲ್ಲೆನ್ನುತ್ತದೆ.ಜಂಗಮ ಲಿಂಗವೆಂಬ ಅಜ್ಞಾನವನ್ನು ಪ್ರಸಾದ ಮಾಡಿಕೊಂಡು ತನುವಿಗೆ ಪೂಜಿಸದಿರಲು ಆಜ್ಞಾಪಿಸುತ್ತದೆ. ಜಗದ ಅಂಗಗಳಲ್ಲಿ ಜಂಗಮವೇ ಸಂಗಮವಾಗಿದೆ. ಜಗದ ಹಿತಾರ್ಥವಾಗಿ ಪಾದೋದಕವಾಗಿದೆ; ಜ್ಞಾನೋದಕವಾಗಿದೆ; ಪ್ರಸಾದವಾಗಿದೆ.

ಇಂತಹ ಪಾದೋದಕ ಪ್ರಸಾದದಿಂದಲೆ ಕಾಯದ ಗುಣವನು ಅಳಿದು ನಿರ್ಗುಣಿಯಾದರು. ಕಾಯದಲ್ಲಿಯೇ ಶರಣರು ಕೈಲಾಸವನು ಕಂಡರು. ಬಸವ ಪ್ರಿಯ ಕೂಡಲ ಚನ್ನ ಸಂಗಮದೇವ ಪ್ರಭುವೆ ಎಂದು ಹೇಳಿದ್ದಾರೆ ಅಪ್ಪಣ್ಣ ಶರಣರು.

109

ಗುರುಶಿಷ್ಯ ಸಂಬಂದವೆಂತಿಪ್ಪುದೆಂದಡೆ, ಹೇಳಿಹೆ ಕೇಳಿರೊ, ಅರಿಮರುಳುಗಳಿರಾ.
ಕಾಯಗುಣವಳಿದುದೇ ಗುರು, ಜೀವಗುಣವಳಿದುದೇ ಲಿಂಗ,
ಪ್ರಾಣಗುಣವಳಿದುದೇ ಜಂಗಮ.
ಈ ತ್ರಿವಿಧವನರಿದು ಆ ತ್ರಿವುಧ ನಿಕ್ಷೇಪವನರುಹಿಸಿಕೊಟ್ಟವನೀಗ ಗುರು.
ಅಲ್ಲಿ ಉಪದೇಶವ ಕೊಂಡವನೀಗ ಶಿಷ್ಯ .
ಹೀಗಿರುವುದೀಗ ಗುರು ಶಿಷ್ಯ ಸಂಬಂಧ,
ಅದಕ್ಕೆ ನಮೋ ನಮೋ ಎಂಬೆ,
ಬಸವ ಪ್ರಿಯ ಕೂಡಲಚೆನ್ನ ಬಸವಣ್ಣಾ.

ನಾನು ಶ್ರೀಮಂತ, ನಾನು ಅಧಿಕಾರಿ, ನಾನು ಶಾಸಕ, ಸಚಿವ, ಹೆಣ್ಣು, ಗಂಡು ಎಂದು ಮನ ಕಾಯವಿಡಿದು ಅಹಂಕಾರದಿಂದ ನುಡಿಯುತ್ತದೆ. ಕಾಯವನ್ನು ಮನ ಆವರಿಸಿದೆ; ಕಾಯದಲ್ಲಿ ಅರಿವೆಂಬ ಗುರುದೇವನ ಕೈಲಾಸವೇ ಅಡಗಿದೆ. ಹೀಗಾಗಿ ಕಾಯ ಗುರುವಿನದು, ಜೀವ ಲಿಂಗದ್ದು , ಪ್ರಾಣ ಜಂಗಮನದು.

ಈ ತ್ರಿವಿಧವನು ಅರಿತು, ತ್ರಿವಿಧ ನಿಕ್ಷೇಪವನು ಕಾಯದಲ್ಲಿಯೇ ಸೂಚಿಸಿ ಮನಕ್ಕೆ ಮನವರಿಕೆ ಮಾಡಿಕೊಟ್ಟಾತನೆ ಗುರು. ಉಪದೇಶವನ್ನು ಪಡೆದ ಮನವೇ ಶಿಷ್ಯ. ಹೀಗಿದ್ದ ಗುರು ಶಿಷ್ಯ ಸಂಬಂಧಕ್ಕೆ ನಮೋ ನಮೋ ಎಂಬೆ, ಬಸವ ಪ್ರಿಯ ಕೂಡಲಚೆನ್ನಬಸವಣ್ಣಾ ಎಂದಿದ್ದಾರೆ ಅಪ್ಪಣ್ಣ ಶರಣರು.

110

ಘನವೆಂದರೆ ತನುವಿನೊಳಗಾಯಿತ್ತು ,
ತನುವೆಂದರೆ ಮನದೊಳಗಾಯಿತ್ತು .
ಮನವೆಂದರೆ ಮಾಯೆಯೊಳಗಾಯಿತ್ತು .
ಮಾಯೆಯೆಂದರೆ ಭಾವದೊಳಗಾಯಿತ್ತು .
ಭಾವವೆಂದಡೆ ನಿರ್ಭಾವವಾಯಿತ್ತು ,
ನಿರ್ಭಾವವೆಂದಡೆ ಭಕ್ತನಾಯಿತ್ತು .
ಭಕ್ತ ನೆಂದರೆ ವಿರಕ್ತನಾದ, ವಿರಕ್ತನೆಂದರೆ ಭಕ್ತನಾದ.
ಗುರುವೆಂದರೆ ಶಿಷ್ಯನಾದ, ಶಿಷ್ಯನೆಂದರೆ ಗುರುವಾದ.
ಇಂತಿದೀಗ ಐಕ್ಯಸ್ಥಲವು.
ಇದನರಿಯದೆ ತಮ್ಮ ಪುದಿದ ಸಂಸಾರಕ್ಕೊಳಗಾಗಿ, ತುದಿ ಮೊದಲ ಕಾಣದೆ,
ಸದಮದವಹ ವಿಷಯ ಸಂಸಾರದೊಳಗೆ ಮುಳುಗಿದವರೆತ್ತ ಬಲ್ಲರೊ;
ನಿಮ್ಮ ಶರಣರ ಸುದ್ದಿಯ, ಬಸವ ಪ್ರಿಯ ಕೂಡಲ ಚೆನ್ನ ಬಸವಣ್ಣಾ ?

ಘನವೆಂದರೆ ಅರಿವು, ಮಹಾಜ್ಞಾನ, ನುಡಿದು ಹೇಳುವ ಗುರು. ಅದು ತನುವಿನೊಳಗೆ ತನ್ಮಯವಾಗಿದೆ. ತನುವನ್ನು ಮನ ಆವರಿಸಿ ಅರಿವಿನ ತನುವನ್ನು ತನ್ನೊಳಗೆ ಮಾಡಿಕೊಂಡಿದೆ.

ಮನವೆಂದರೆ ಮಾಯೆ. ಮನದಿಂದಲೇ ತನುವನ್ನು, ತನುವಿನಲ್ಲಿ ತನ್ಮಯವಾದ ಅರಿವನ್ನು ಅರಿತು ಮನ ಘನಮನವಾಗಬೇಕಿತ್ತು. ಆದರೆ ಮಾಯೆಯೊಳಗೆ ಬಂಧಿಯಾಗಿದೆ.

ಮಾಯೆಯಿಂದಲೇ ಭಾವ ಸೃಷ್ಟಿಯಾಗಿದೆ. ಭಾವ ತನಗರಿಯದಂತೆ ಮಾಯೆಯೊಳಗೆ ಬಂಧಿಯಾಗಿದೆ. ಭಾವವೆನ್ನುವುದು ನಿರ್ಭಾವ; ಅದು ನಿಜಭಾವ. ಭಾವಿಸಿ ಭಾವವಾಗುತ್ತದೆ; ಅದೇ ಭಾವ ದುರ್ಭಾವಕ್ಕೆ ಒಳಗಾಗುತ್ತದೆ. ನಿರ್ಭಾವವೆನ್ನುವುದು ನಿರ್ಮೋಹ. ವಸ್ತುವಿನ ಸತ್ಯವನ್ನು ಮಾತ್ರ ಆರಾಧಿಸುತ್ತದೆ.

ನಿರ್ಭಾವದ ಮೇಲೆ ಮೋಹಗೊಂಡ ಮನವೇ ಭಕ್ತನಾಗುತ್ತದೆ. ಭಕ್ತನೆಂದರೆ ವಿರಕ್ತ: ಮರದಲ್ಲಿ ಬಿಳಿ ರಕ್ತ ಹರಿಯುತ್ತದೆ. ಅದಕ್ಕಾಗಿ ಮರ ಹೂ ಹಣ್ಣು ಕಾಯಿ ಕೊಡುತ್ತದೆ; ಬೇಡುವುದಿಲ್ಲ. ಬೇಕೆನ್ನುವುದು ಮರದ ಜಾಯಮಾನವಲ್ಲ . ತನು ಕೂಡ ಜ್ಞಾನದ ಮರ. ಮರಕ್ಕೆ ಬೇರಿದೆ; ತನುವಿಗೆ ಬೇರಿಲ್ಲ. ಜಲಬಿಂದುವೇ ಗರ್ಭ ಹೊಕ್ಕು ತನುವಾಗಿ ಆ ತನುವಿನಲ್ಲಿ ರಕ್ತವಾಗಿ ಹರಿಯುತ್ತದೆ. ಜಲಬಿಂದುವೇ ಮರವಾಗಿ, ಮರದಲ್ಲಿ ವಿರಕ್ತವಾಗಿ ಹರಿಯುತ್ತದೆ. ಹೀಗಾಗಿ ಮರಕ್ಕೆ ಬಯಕೆಯಿಲ್ಲ.

ನಿರ್ಭಾವ ತತ್ವ ತಿಳಿದ ಮನ ಘನಮನವಾಗಿ ತನುವಿನಲ್ಲಿ ವಿರಕ್ತನಾಗಿ ಹರಿಯುತ್ತದೆ. ಭಕ್ತನಾಗಿ ಕೊಡುತ್ತದೆಯೇ ಹೊರತು ಮೋಹಮಾಡಿ ಬೇಡುವುದಿಲ್ಲ. ರಕ್ತಕ್ಕೆ ಬಯಕೆಯುಂಟು. ವಿರಕ್ತನಿಗೆ ಬಯಕೆಯಿಲ್ಲ. ತನುವಿಗೆ ವಿರಕ್ತನ ವೇಷ ಹಾಕಿದರೆ ಸಿದ್ಧಿಸುವುದಿಲ್ಲ. ಮನಕ್ಕೆ ಅರಿವಿನ ಶಿಕ್ಷಣ ದೊರೆತು, ಆ ಮನವೇ ಘನಮನವಾಗಿ ವಿರಕ್ತನಾಗಬೇಕು; ಭಕ್ತನಾಗಬೇಕು. ನಿಪುಣ ಜ್ಞಾನಿಯಿಂದ ವಿರಕ್ತನ ವೇಷದಲ್ಲಿದ್ದ ಸಕಲ ವಿರಕ್ತರೂ ಈ ಶಿಕ್ಷಣ ಪಡೆದು ವಿರಕ್ತ ಕುಲಕ್ಕೆ ನ್ಯಾಯ ಒದಗಿಸಬೇಕು. ಇದು ಅಪ್ಪಣ್ಣ ಶರಣರ ಆಶಯ!

ಗುರುವೆಂದರೆ ಶಿಷ್ಯನಾದ, ಶಿಷ್ಯನೆಂದರೆ ಗುರುವಾದ ಇಂತಿದೀಗ ಐಕ್ಯಸ್ಥಲವು! ಗುರುವೆಂದರೆ ತಾನೆ. ಶಿಷ್ಯನೆಂದರೂ ತಾನೆ. ತನುವಿನಲ್ಲಿ ತನ್ಮಯವಾದ ಅರಿವೇ ಗುರು! ತನುವನ್ನು ಆವರಿಸಿದ ಮನವೇ ಶಿಷ್ಯ! ತನ್ನ ವಿನೋದಕ್ಕೆ ತನುವೇ ಗುರುವಾಯಿತು. ತನ್ನ ವಿನೋದಕ್ಕೆ ತನುವೇ ಶಿಷ್ಯನಾಯಿತು.

ತನುವಿನಲ್ಲಿ ತನ್ಮಯವಾದ ಅರಿವು ಯಾವ ತನು ತಿಳಿಸಿದರೇನು? ಆ ತನು ತನುವಿನಲ್ಲಿ ತನ್ಮಯವಾದ ಅರಿವಿಗೆ ಗುರು ಆಗಲು ಸಾದ್ಯವೆ? ತನುವನ್ನು ಆವರಿಸಿದ ಮನಕ್ಕೆ ಅರಿವು ತನುವಿನಲ್ಲಿಯೇ ಇದೆ. ಆ ಅರಿವೇ ನಿನಗೆ ಗುರು ಎಂದು ಹೇಳಬಹುದೇ ವಿನಹ ಗುರುವಾಗಲು ಬರುವುದಿಲ್ಲ. ಹೀಗಾಗಿ ಗುರುವೇ ಶಿಷ್ಯನಾದ; ಶಿಷ್ಯನೇ ಗುರುವಾದ. ಶಿಷ್ಯ ಗುರುವಿನ ಅರಿವಿನಲ್ಲಿ ಐಕ್ಯನಾಗಿ ಐಕ್ಯಸ್ಥಲವನು ಹೊಂದಿದ.

ತುದಿ ಮೊದಲಿಲ್ಲದೆ ಸಂಸಾರದ ವಿಷಯದಲ್ಲಿ ಮದದಿಂದ ಮುಳುಗಿದ ಜನ ಇದನರಿತು ಸದಮಲಾನಂದ ಹೊಂದಬೇಕು. ಬಸವ ಪ್ರಿಯ ಕೂಡಲ ಚೆನ್ನ ಬಸವಣ್ಣನನ್ನು ಕೂಡಬೇಕು ಎಂದು ಅಪ್ಪಣ್ಣ ಶರಣರು ಅಪ್ಪಣೆ ಕೊಡಿಸಿದ್ದಾರೆ.

111

ಚೌದಳ ಷಡುದಳ ದಶದಳ ದ್ವಾದಶದಳ ಷೋಡಶದಳ ದ್ವಿದಳ,

ಒಳ ಹೊರಗಣ ಸ್ಥಳಕುಳವನರಿದು,
ಬೆಳಗುವ ಬೆಳಗ, ಹೊಳೆವ ಪ್ರಭೆ ಪ್ರಜ್ವಲಿಸಿ ಕಳವಳವಳಿದು,
ಕಾಯದ ಕದಳಿಯುಗೆಲಿದು, ಕರಗಿ ಒಂದಾದ ಶರಣನೆ ಹರನು,
ಬಸವ ಪ್ರಿಯ ಕೂಡಲ ಸಂಗಮದೇವ ಪ್ರಭುವೆ.

ಕಾಯವೇ ಒಂದು ಕದಳಿ ! ಅದಕ್ಕೆ ಎಷ್ಟು ದಳಗಳು ಬಿಟ್ಟರೇನು? ಅದನ್ನು ಕದಳಿ ಎಂದು ಗುರುತಿಸುವರು. ಹಾಗೆಯೇ ಕಾಯ ಹೆಣ್ಣಾದರೇನು. ಗಂಡಾದರೇನು, ಶ್ರೀಮಂತ-ಬಡವನಾದರೇನು? ಈ ದೇಶದ್ದಾದರೇನು, ಪರದೇಶದ್ದಾದರೇನು? ಅದು ಕಾಯವೇ ಆಗಿದೆ.

ಕಾಯ ಚೌದಳವೂ ಹೌದು, ಷಡುದಳವೂ ಹೌದು, ದಶ, ದ್ವಾದದ, ಷೋಡಶ ದಳವೂ ಹೌದು. ದ್ವಿದಳವೂ ಹೌದು. ಕೂದಲು ಸೀಳುವ ಕೆಲಸಮಾಡಿ ಕೂದಲು ಎಂದಂತೆ. ಕಾಯ ಸೀಳಿ ಪಂಡಿತನಾಗಬಹುದೇ ವಿನಹ ಕಾಯದ ಗುಣ ಕಳೆದುಕೊಂಡು ಕದಳಿಯಾಗಲಾರ.

ಕಾಯ ಒಂದು ಕದಳಿ. ಅದರಲ್ಲಿ ಅರಿವಿನ ಸಿಹಿಬಾಳೆಯೊಂದು ದಳ, ಅದನ್ನು ತಿನ್ನುವ ಮನ ಒಂದು ದಳ, ಕದಳಿಯಲ್ಲಿಯೇ ಕರಗಿ, ಕದಳಿ ಎನ್ನುವ ಕಾಯವೊಂದೇ ಕಾಣುತ್ತದೆ.

ಕದಳಿ, ಫಲಭರಿತ ಬಾಗಿದ ತಲೆಯ ಗೊನೆಯಲ್ಲಿ ಅರಿವಿನ ಸಿಹಿಬಾಳೆಯ ಬೀಜವಿಲ್ಲದ ಫಲ ಬಿಡುತ್ತದೆ. ನೋಡಲು ಕದಳಿ ದಳ ದಿಂಡು ಗೊನೆ ಫಲ ಭರಿತ ಸಿಹಿ ಬಾಳೆಯನ್ನು ಹೊಂದಿದ್ದರೂ ಅವುಗಳಿಗೆ ಇಂಬೇ ಇಲ್ಲ, ದಳಗಳಿಗೂ ಇಂಬಿಲ್ಲ, ಗೊನೆಗೂ ಇಂಬಿಲ್ಲ, ಬಾಳೆಗೂ ಬೀಜವಿಲ್ಲ, ಇವೆಲ್ಲವುಗಳನ್ನು ಹೊತ್ತ ಕದಳಿಯ ದಿಂಡು ಸುಲಿದಂತೆಲ್ಲ ಇಂಬಿಲ್ಲದಂತೆ ಕರಗಿ ಇಲ್ಲವಾಗುತ್ತದೆ. ಬಯಲಲ್ಲಿ ಬೆರೆತು ಬಯಲಾಗುತ್ತದೆ. ರುಚಿಸಿದ ಅರಿವಿನ ಸಿಹಿ ನೆನಪು ಮಾತ್ರ ಉಳಿಯುತ್ತದೆ.

ಕಾಯದಲ್ಲಿಯೂ ಕದಳಿಯಂತೆ ಕಳವಳವಿಲ್ಲ. ಮನ ಕಾಯದ ಅರಿವಿನ ಸಿಹಿಗೆ ಒಲಿದು, ಅದಕ್ಕೆ ಶರಣು ಹೋಗಿ ಶರಣನಾದ ಶರಣನೆ ಹರನು. ಆತನೇ ಬಸವಪ್ರಿಯ ಕೂಡಲಚೆನ್ನ ಸಂಗಮದೇವ ಪ್ರಭುವು.

112

ಜಂಗಮ ಜಂಗಮ ಎಂದು ನುಡಿದು ಜಗದ ಹಂಗಿಗರಾಗಿ ಇರಲಾಗದು.
ಜಗದ ಕರ್ತನ ಕೈಯಲ್ಲಿ ಹಿಡಿದುಕೊಂಡು ಜಂಗುಳಿಗಳ ಬಾಗಿಲ ಕಾಯಲಾಗದು.
ಜಂಗಮದ ಸುಳುಹು ಎಂತಿರಬೇಕೆಂದರೆ,
ತನ್ನ ನಂಬಿದ ಸಜ್ಜನರ ಸದ್ಭಕ್ತರಲ್ಲಿಗೆ ಲಿಂಗವಾಗಿ ಗಮಿಸಿ,
ತಾ ಕಂಡ ಲಿಂಗಾಂಗವನು ಅಲ್ಲಿಯೇ ನಿಕ್ಷೇಪಿಸಿ,
ತಾ ನಿರ್ಗಮನಿಯಾಗಿ ಸುಳಿಯ ಬಲ್ಲರೆ, ಜಂಗಮ ಲಿಂಗವದು.
ಇಂತಲ್ಲದೆ ಕಂಡವರ ಕಾಡಿ ಬೇಡಿ, ಕೊಟ್ಟರೆ ಕೊಂಡಾಡಿ, ಕೊಡದಿದ್ದರೆ ಜರಿದು,
ತಾಗು ನಿರೋಧಕ್ಕೆ ಗುರಿಯಾಗಿ ನೋವುತ್ತ , ಬೇವುತ್ತ ಧಾವತಿಗೊಂಬ ಗಾವಿಲರ
ಎಂತು ಜಂಗಮವೆಂಬೆ, ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ ?

ಜಂಗಮ ಎಂದರೆ ಜ್ಞಾನ ಭರಿತವಾದ ತನು. ತನುವಿನಲ್ಲಿ ಜ್ಞಾನ ಭರಿತವಾಗಿದೆ ಎಂದು ತಿಳಿದ ತನು. ಮನ ನಷ್ಟವಾದ ತನು. ತನುಗುಣಾದಿಗಳು ನಷ್ಟವಾದ ತನು. ತನುಗಳೆಲ್ಲ ಜಂಗಮ ತನುಗಳನ್ನಾಗಿ ಕಾಣುವ ತನು. ಜಂಗಮ ತನು ಮತ್ತೊಂದು ತನುವಿಗೆ ಹಂಗಿಗನಾಗದ ತನು. ಜನ ಜಂಗುಳಿಗಳ ಬಾಗಿಲ ಕಾಯದ ತನು. ತನುಗಳಲ್ಲಿ ತನ್ಮಯವಾದ ಜಂಗಮನನ್ನು ಮನಕ್ಕೆ ಪರಿಚಯಿಸುವ ಕಾಯಕದ ತನು.

ಜಾತಿ ಮತ ಪಂಥಗಳನ್ನು ಕಳೆದುಕೊಂಡ ಮಹಾಜ್ಞಾನಿ ತನು. ಜಾತಿ ಜಂಗಮನಂತೆ ಕಂಡವರ ಕಾಡಿ ಬೇಡದ ತನು. ಕೊಟ್ಟರೆ ಕೊಂಡಾಡಿ, ಕೊಡದಿದ್ದರೆ ತೆಗಳದ ತನು. ಜನನ ಮರಣಗಳನ್ನು ಗೆದ್ದ ತನು. ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವ ತನು. ಅಜ್ಞಾನದೊಂದಿಗೆ ಯುದ್ಧ ಮಾಡಿ ಭಯ ಗೆದ್ದ ನಿರ್ಭಯಿ ತನು. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ಪ್ರಸಾದ ಮಾಡಿಕೊಂಡ ಲಿಂಗಾಂಗ ತನು.

ನಿರ್ಗಮಾನಿಯಾಗಿ ಸುಳಿಯಬಲ್ಲ ಸಶಕ್ತ ತನು. ಅಂಗದಲ್ಲಿಯೇ ಸಂಗಮವಾದ ಬಸವಪ್ರಿಯ ಕೂಡಲಚೆನ್ನ ಬಸವಣ್ಣ ನನ್ನು ಕೂಡಿಕೊಂಡು ಜಗಭರಿತ ಜಂಗಮನೇ ತಾನಾದ ಅರಿವಿನ ತನು. ತನು ಇದ್ದಾಗಲೇ ಬಯಲಾದ ಜ್ಞಾನಿ ತನುವೇ ಜಂಗಮ ತನು !

113

ಜಂಗಮಲಿಂಗ ಎಂತಿಹನು ಎಂದರೆ,
ಅಂತರಂಗದಲ್ಲಿ ಅರಿವು, ಬಹಿರಂಗದಲ್ಲಿ ಶಮೆ, ದಮೆ,
ಸರ್ವಶಾಂತಿ ಎಡೆಗೊಂಡು,
ತನ್ನ ನಂಬಿದ ಸಜ್ಜನ ಸದ್ಭಕ್ತರಿಗೆ,
ಭಾವಕ್ಕೆ ಜಂಗಮವಾಗಿ, ಪ್ರಾಣಕ್ಕೆ ಲಿಂಗವಾಗಿ,
ಕಾಯಕ್ಕೆ ಗುರುವಾಗಿ, ಪ್ರಾಣಕ್ಕೆ ಬಂದ
ಪದಾರ್ಥವ ಲಿಂಗಾರ್ಪಿತವ ಮಾಡುತ್ತ ,
ಬಾರದ ಪದಾರ್ಥವ ಮನದಲ್ಲಿ ನೆನೆಯದೆ,
ಮಾನವರ ಬೇಡದೆ, ಬಡ ಭಕ್ತರ ಕಾಡದೆ,
ಒಡನೆ ಇಹ ಘನವವನರಿದು, ದೃಢ ಭಕ್ತರೊಳು ಲಿಂಗವಾಗಿ,
ಏನು ನುಡಿದರೂ ನಿಕ್ಷೇಪಿಸಿ, ನಿರ್ಗಮನಿಯಾಗಿ ಸುಳಿಯಬಲ್ಲರೆ,
ಆತ ಲಿಂಗ ಜಂಗಮ.
ಅದಕ್ಕೆ ನಮೋ ನಮೋ ಎಂದು ಭವಂ ನಾಸ್ತಿಯಾಯಿತ್ತು ಕಾಣಾ,
ಬಸವ ಪ್ರಿಯ ಕೂಡಲಚೆನ್ನಬಸವಣ್ಣಾ.

ಅಂಗದಲ್ಲಿರುವ ಸಂಪತ್ತು ಅಂಗಕ್ಕೆ ಬಳಕೆಯಾಗದಿರುವುದು ಅಂಗದ ದುರದೃಷ್ಟವೇ ಸರಿ. ಅಂಗದಲ್ಲಿ ಜಂಗಮನೆನ್ನುವ ಅವ್ಯಕ್ತ ಮಹಾ ಮಹಿಮ ಹೇಗೆ ಅಡಗಿದ್ದಾನೆ, ಆತನನ್ನು ಅಂಗವನ್ನು ಆವರಿಸಿದ ಮನ ಹೇಗೆ ತಿಳಿದು ಬಳಕೆ ಮಾಡಬಹುದು; ಆತನ ಸೇವೆಯನ್ನು ಅಂಗದ ಮೂಲಕ ಹೇಗೆ ತಡೆಯಬಹುದು ಎನ್ನುವುದನ್ನು ಅಪ್ಪಣ್ಣ ಶರಣರು ವಿವರವಾಗಿ ತಮ್ಮ ಈ ವಚನದಲ್ಲಿ ವಿವರಿಸಿದ್ದಾರೆ.

ಜಂಗಮ ಅಂತರಂಗದಲ್ಲಿ ಅರಿವಿನ ಮೂಲಕ, ಬಹಿರಂಗದಲ್ಲಿ ಶಮೆ, ದಮೆ, ಸರ್ವಶಾಂತಿ

ಮೂಲಕ ಎಡೆಗೊಂಡು, ತನ್ನ ನಂಬಿದ ಸಜ್ಜನ ಸದ್ಭಕ್ತರ ಭಾವಕ್ಕೆ ಜಂಗಮವಾಗಿದ್ದಾನೆ. ಪ್ರಾಣಕ್ಕೆ ಲಿಂಗವಾಗಿ, ಕಾಯಕ್ಕೆ ಗುರುವಾಗಿದ್ದಾನೆ.

ಬಾರದ ಪದಾರ್ಥವನು ಮನದಲ್ಲಿ ನೆನೆಯದೆ, ಬಂದ ಪದಾರ್ಥವನ್ನು ಲಿಂಗಾರ್ಪಿತವ ಮಾಡುತ್ತ, ಮಾನವರ ಬೇಡದೆ, ಬಡ ಭಕ್ತರ ಕಾಡದೆ, ಒಡನೆ ಇಹ ಘನವನು ಅರಿದು ದೃಢ ಭಕ್ತರೊಳು ಲಿಂಗವಾಗಿ, ಏನು ನುಡಿದರೂ ನಿಕ್ಷೇಪಿಸಿ, ನಿರ್ಗಮನಿಯಾಗಿ ನುಡಿಗೆಡೆಗೊಡದೆ ಸುಳಿಯುವಾತನೆ ಲಿಂಗ ಜಂಗಮ.

ಹೀಗಿರುವ ಅಂಗದಲ್ಲಿಯೇ ಸಂಗಮವಾದ ಜಂಗಮನನ್ನು ನೋಡಿ ಜನನ ಮರಣಗಳ ಬಾಧೆ ನಷ್ಟವಾಯಿತು. ಮನ, ಬಸವಪ್ರಿಯ ಕೂಡಲ ಚೆನ್ನಬಸವಣ್ಣನನ್ನು ಕೂಡಿ ಘನಮನವಾಯಿತು.

114

ಜಂಗಮಲಿಂಗ ವೆಂತಹನೆಂದರೆ:
ಇಂತೀ ವಿಶ್ವ ಬ್ರಹ್ಮಾಂಡವು ತನ್ನ ಕುಕ್ಷಿಯೊಳು ನಿಕ್ಷೇಪವಾಗಿ,
ತಾ ನಿರ್ಗಮನಿಯಾಗಿ, ಲಿಂಗರೂಪಾಗಿ ಸುಳಿಯ ಬಲ್ಲರೆ,
ಜಂಗಮಲಿಂಗವೆಂಬೆ, ಅದಕ್ಕೆ ನಮೋನಮೋ.
ಆ ನಿಲವಿಂಗೆ ಭವವಿಲ್ಲ, ಬಂಧನವಿಲ್ಲ.
ಇಂತಲ್ಲದೆ ವೇಷವ ಹೊತ್ತು, ಹೊರ ವೇಷದ ವಿಭೂತಿ ರುದ್ರಾಕ್ಷಿಯಂ ತೊಟ್ಟು,
ಕಾಸು ಹುಲುಸಾಕ್ಕೆ ಕೈಯಾಂತು, ವೇಶಿ ದಾಸಿಯರ ಬಾಗಿಲ ಕಾಯ್ದು,
ಲೋಕದೊಳಗೆ ಘಾಸಿಯಾಗಿ, ಜಂಗಮವೇಷಕ್ಕೆಲ್ಲ ಭಂಗವ ಹೊರಿಸಿ,
ಕಣ್ಣು ಗಾಣದೆ ಜಾರಿ ಜರಿಯಬಿದ್ದು, ತಾ ದೂರಿಗೆ ಬಂದು,
ಈ ಮೂರಕ್ಕೊಳಗಾಗಿ ಗಾರಾಗಿ ಹೋಗುವರ ವೇಷಕ್ಕೆ ಶರಣಾರ್ಥಿ.
ಅವರ ಸುತ್ತಿರ್ದ ಪಾಶವ ಕಂಡು ಹೇಸಿತ್ತೆನ್ನ ಮನ,
ನಿಮ್ಮಾಣೆ ಬಸವ ಪ್ರಿಯ ಕೂಡಲಸಂಗಮದೇವಾ.

ಜಂಗಮ ಒಂದು ಜಾತಿಯಲ್ಲ. ಮಠ ಪೀಠಾದಿಗಳ ಮೇಲೆ ಕೂಡುವ ಒಂದು ಅಂಗವಲ್ಲ. ಕಾವಿ ಧರಿಸಿದ ವಿರಕ್ತನೂ ಅಲ್ಲ. ಜಗದ ಪ್ರತಿ ಅಂಗಗಳ ಅಂತರಂಗದಲ್ಲಿ ಸಂಗಮವಾದ ಅರಿವು. ಅವ್ಯಕ್ತ ಜಂಗಮನಾಗಿ ಅಂಗಕ್ಕೆ ಭೋದಿಸುತ್ತ ಅಜ್ಞಾನವನ್ನು ಪ್ರಸಾದ ಮಾಡಿಕೊಂಡು, ಅಂಗ ಅಜ್ಞಾನದಲ್ಲಿ ತೊಡಗದಂತೆ ತಡೆಯುವ ವೀರ. ಅಂಗಕ್ಕೆ ಬಂದ ವಿಪತ್ತುಗಳೊಂದಿಗೆ ಕಾದಿ ಗೆಲುವು ಸಾಧಿಸುವ ಮಹಾವೀರ.

ಜಂಗಮ ಕಾಣುವುದಿಲ್ಲ, ಅಂಗ ಕಾಣುತ್ತದೆ; ಅಂಗಕ್ಕೆ ಆವರಿಸಿದ ಅಜ್ಞಾನಿ ಮನವೂ ಕಾಣುವುದಿಲ್ಲ. ಕಾಣದ ಮನ ಕಾಣದಿರುವ ಕಾಣಲು ಬಾರದ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ಸೃಷ್ಟಿ ಮಾಡಿದೆ. ಸಪ್ತ ವ್ಯಸನಗಳನ್ನು, ಅಷ್ಟಮದಗಳನ್ನು ಸೃಷ್ಟಿ ಮಾಡಿದೆ.

ಜಗದ ತನುಗಳಲ್ಲಿ ಮನ ಸೃಷ್ಟಿ ಮಾಡಿದ ವೈರಿಗಳೂ ಇದ್ದಾರೆ, ಜಗದೀಶ ಸೃಷ್ಟಿ ಮಾಡಿದ ಜಂಗಮನೂ ಇದ್ದಾನೆ. ವೈರಿಗಳನ್ನು ಸೃಷ್ಟಿ ಮಾಡಿದ ಮನದಿಂದಲೇ ಜಂಗಮನನ್ನು ಅಂಗದಲ್ಲಿಯೇ ಕಂಡುಕೊಳ್ಳಬೇಕು. ವೈರಿಗಳೊಂದಿಗೆ ಯುದ್ಧ ಮಾಡಿದ ಜಂಗಮ ಮಾತ್ರ ಅಂಗದಲ್ಲಿ

ಉಳಿಯುತ್ತಾನೆ. ಜಂಗಮನೊಂದಿಗಿದ್ದ ಅಂಗವೇ ಲಿಂಗಾಂಗ !

ಇಡೀ ವಿಶ್ವ ಬ್ರಹ್ಮಾಂಡವೇ ತನ್ನ ಕುಕ್ಷಿಯೊಳಗೆ ನಿಕ್ಷೇಪವಾಗುತ್ತದೆ. ಈತನಿಗೆ ಭವವಿಲ್ಲ; ಬಂಧನವಿಲ್ಲ.

ಕಾಸು ಹೊಲಸಿಗೆ ಕೈಯೊಡ್ಡಿ, ವೇಶಿ ದಾಸಿಯರ ಬಾಗಿಲ ಕಾಯುವ ವೇಷದ ಜಂಗಮನೆಂತು ಜಂಗಮನಾಗುವನು? ಜಂಗಮ ವೇಷಕ್ಕೆಲ್ಲ ಭಂಗವ ಹೊರಿಸುವ ಪಾತಕಿಯವನು. ಅವರ ಸುತ್ತಿರ್ದ ಪಾಶವ ಕಂಡು ಹೇಸಿತ್ತೆನ್ನ ಮನ ನಿಮ್ಮಾಣೆ ಎಂದು ಅಪ್ಪಣ್ಣ ಶರಣರು ಮಮ್ಮಲ ಮರುಗಿದ್ದಾರೆ.

115

ಜಗದಗಲ ಮುಗಿಲಗಲ ಪಾದ ಪಾತಾಳದಿಂದತ್ತತ್ತ ,
ಮುಕುಟ ಬ್ರಹ್ಮಾಂಡದಿಂದತ್ತತ್ತ .
ವಿಶ್ವ ಬ್ರಹ್ಮಾಂಡವನು, ತನ್ನ ಕುಕ್ಷಿಯೊಳು
ನಿಕ್ಷೇಪವ ಮಾಡಿಕೊಂಡಿಪ್ಪ ದೇವನೀಗ ಎನ್ನದೇವ.
ಆ ದೇವನೊಳಗೆ ನಾನಡಕ, ನನ್ನೊಳಗೆ ಆ ದೇವನಡಕ.
ಇಂತಪ್ಪ ದೇವನ ನಂಬಿ, ನಾ ಕೆಟ್ಟು ಬಟ್ಟ ಬಯಲಾದೆ.
ಈ ದೇವನರಿಯದೆ ಜಗವೆಲ್ಲ ಕಲ್ಲದೇವರು, ಮಣ್ಣದೇವರು,
ಮರದೇವರು ಎಂದು ಇವನಾರಾಧಿಸಿ,
ಕೆಟ್ಟರಲ್ಲಾ ಸ್ವರ್ಗ ಮರ್ತ್ಯ ಪಾತಾಳದವರೆಲ್ಲರು.
ಎನ್ನ ದೇವನನರಿದು ಅರ್ಚಿಸಲಿಲ್ಲ, ಪೂಜಿಸಲಿಲ್ಲ, ಭಾವಿಸಲಿಲ್ಲ.
ಇದು ಕಾರಣ, ಆವ ಲೋಕದವರಾದರೂ ಆಗಲಿ,
ಎನ್ನ ದೇವನನರಿದರೆ, ಭವವಿಲ್ಲ ಬಂಧನವಿಲ್ಲ.
ನೆರೆನಂಬಿದರೆ, ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ವಿರಾಟಸ್ವರೂಪನೇ ತಾನಾಗಿ ತನ್ನಲ್ಲಿ ಜಗತ್ತು , ಮುಗಿಲು. ಚುಳುಕಾದುದನ್ನು, ಬ್ರಹ್ಮಾಂಡವೇ ತನ್ನಲ್ಲಿ ಅಡಕವಾದುದನ್ನು ಹೇಳಿದಂತೆ ಅಪ್ಪಣ್ಣ ಶರಣರು ಖಚಿತವಾಗಿ ತಮ್ಮ ವಚನದ ಮೂಲಕ ಪ್ರಸ್ತಾಪಿಸಿದ್ದಾರೆ. ಇದು ಎಲ್ಲರಿಗೂ ಸಾಧ್ಯವಿಲ್ಲ. ಶರಣರಿಗೆ ಸಾಧ್ಯವಾಗದ್ದು ಯಾವುದೂ ಇಲ್ಲ.

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ. ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ, ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ. ಅಗಮ್ಯ ಅಗೋಚರ, ಅಪ್ರಮಾಣ, ಅಪ್ರತಿಮ ಲಿಂಗವೇ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ ಕೂಡಲ ಸಂಗಮದೇವಾ ಎಂದು ಬಸವಣ್ಣನವರು ಕೂಡಾ ಖಚಿತವಾಗಿ ಹೇಳಿದ್ದಾರೆ.

ಬಯಲು ಜಲಜನಕಕ್ಕೆ, ಆಮ್ಲಜನಕಕ್ಕೆ ಜನ್ಮ ನೀಡಿ, ಅವೆರಡನ್ನು ಒಂದು ಮಾಡಿ, ಜಲಕ್ಕೆ ಜನ್ಮ ನೀಡಿತು. ಜಲವೇ ಗಟ್ಟಿಯಾಗಿ ಮಣ್ಣಿಗೆ ಜನ್ಮ ನೀಡಿತು. ಜಲಜನಕವೇ ಅಗ್ನಿಗೆ ಜನ್ಮ ನೀಡಿತು. ಹೀಗೆ ಬಯಲೇ ನಾಲ್ಕು ಭೂತಗಳಿಗೆ ಜನ್ಮ ನೀಡಿತು; ಬ್ರಹ್ಮಾಂಡದ ತುಂಬಾ ಬಯಲು ವ್ಯಾಪಿಸಿದೆ. ಬಯಲು ಇಲ್ಲದ ಜಾಗವೇ ಇಲ್ಲ.

ಜೀವ ಜಲ ಬಿಂದು ಗರ್ಭ ಹೊಕ್ಕು ತನುವಿಗೆ ಜನ್ಮ ನೀಡಿತು. ಜೀವ ಜಲಬಿಂದುವಿನ

ನೆರಳೆ ಮನವಾಗಿ ಬಯಲ ಬೆಳಕನ್ನು ತಿಳಿಯುವಂತಾಯಿತು. ಬೆಳಕು ಮನದಲ್ಲಿ ಅಡಕವಾಯಿತು. ಮನ ಬೆಳಕಲ್ಲಿ ಅಡಕವಾಯಿತು. ಈ ಮನದಿಂದಲೇ ಬಯಲು ಚುಳುಕಾಗಿ ತನುವಿನಲ್ಲಿ ತನ್ಮಯವಾದದ್ದು ತಿಳಿಯಿತು. ಬಯಲನ್ನೆ ದೇವರೆಂದು ತಿಳಿದು ಮನ ಆರಾಧಿಸಿ ಅಲ್ಲಿಯೇ ಅಡಕವಾಯಿತು. ಆರಾಧಿಸುವ ಮನವನ್ನೇ ಭಕ್ತನೆಂದು ತಿಳಿದು ಆ ಬಯಲುದೇವ ತನುವಿನಲ್ಲಿ ಚುಳುಕಾದ.

ಕರಸ್ಥಲದಲ್ಲಿ ಬಂದು ಚುಳುಕಾದಿರಯ್ಯಾ ಕೂಡಲಸಂಗಮದೇವಾ: ಕರ ಎಂದರೆ ಕೈ; ಅಂಗ; ಅಂಗೈ . ಅಂಗದಲ್ಲಿ ಕಣ್ಣು , ಕಿವಿ, ಮೂಗು, ನಾಲಿಗೆ, ಚರ್ಮ ಎಂದು ಐದು ಭಾಗಗಳಿವೆ. ಬಯಲುದೇವ ಅಂಗದಲ್ಲಿ ಚುಳುಕಾಗಿದ್ದಾನೆ. ಮನ ಭಕ್ತನಾಗಿ ಕಣ್ಣಿನ ಮೂಲಕ ಇಡೀ ಬ್ರಹ್ಮಾಂಡವನ್ನು ನೋಡುತ್ತಾನೆ. ಕಿವಿಯ ಮೂಲಕ ಕೇಳುತ್ತಾನೆ. ನಾಲಗೆಯ ಮೂಲಕ ರುಚಿಸುತ್ತಾನೆ, ಮೂಗಿನ ಮೂಲಕ ಅರಿವಿನ ಪರಿಮಳವನ್ನು ಆಸ್ವಾದಿಸುತ್ತಾನೆ. ಚರ್ಮದ ಮೂಲಕ ಸ್ಪರ್ಶಿಸಿ ಆನಂದ ಪಡುತ್ತಾನೆ.

ಮನ ಬಯಲು. ದೇವನಿಗೆ ಭಕ್ತನಾದರೆ ಅರಿವಿನಿಂದ ಬಯಲನ್ನು ಬಯಲಿನಂತೆಯೇ ನೋಡಿ ಬಯಲಾಗಲು ಬರುತ್ತದೆ. ಭೂಮಿ, ಜಲ, ಗಾಳಿ, ಬೆಂಕಿ, ಸೂರ್ಯ, ಚಂದ್ರ , ನಕ್ಷತ್ರಗಳು ಸಕಲ ಗ್ರಹಗಳು ಬಯಲ ಗರ್ಭದಲ್ಲಿಯೇ ವಾಸಮಾಡಿವೆ. ಗಾಳಿ, ಜಲ, ಭೂಮಿ, ಬೆಂಕಿ ವಿಕೃತ ಹೊಂದುತ್ತವೆ. ಆದರೂ ಬಯಲಿಗೆ ಯಾವ ಬಾಧೆಯೂ ಇಲ್ಲ. ನಾಲ್ಕು ಭೂತಗಳ ಗಾತ್ರವೂ ಬಹಳ ವಿಸ್ತಾರವಾಗಿದೆ. ಆದರೂ ಅವುಗಳಿಗೆ ಜನ್ಮ ನೀಡಿ ಬಯಲು ಅವುಗಳನ್ನು ತನ್ನ ಗರ್ಭದಲ್ಲಿಯೇ ಬಂಧಿಸಿಕೊಂಡಿದೆ. ಭೂಮಿ ಬಿರಿದು ಲಾವಾರಸ ಉಗುಳಿದರೂ ಬಯಲಿಗೆ ಬಾಧೆಯಿಲ್ಲ. ಏಕೆಂದರೆ ಭೂಮಿ ಬಯಲ ಗರ್ಭದಲ್ಲಿಯೇ ಇದೆ. ಗಾಳಿ ಬೀಸಿ ತೊಂದರೆ ನೀಡಿದರೂ ಬಯಲಿಗೆ ಬಾಧೆ ಇಲ್ಲ. ಗುಡುಗು ಮಿಂಚುಗಳಿಂದ ಆರ್ಭಟಿಸಿ ಮಳೆ ರಂಪ ಮಾಡಿ ಸುರಿದರೂ ಬಯಲಿಗೆ ಬಾಧೆಯಿಲ್ಲ. ಬೆಂಕಿ ಹೊತ್ತಿ ತನ್ನ ಕೆನ್ನಾಲಿಗೆಯನ್ನು ಚೆಲ್ಲಿ ಉರಿದರೂ ಬಯಲಿಗೆ ಬಾಧೆಯಿಲ್ಲ. ಇವೆಲ್ಲ ಬಯಲ ಗರ್ಭದಲ್ಲಿಯೇ ಬಂಧಿಯಾಗಿವೆ.

ಗರ್ಭಿಣಿ ಸ್ತ್ರೀಗೆ ತನ್ನ ಮಗು ಗರ್ಭದಲ್ಲಿ ಸುತ್ತಾಡಿ ತುಂಟಾಟ ನಡೆಸಿ ಒದ್ದರೆ ತಾಯಿ ಬಾಧೆ ಪಡುವುದಿಲ್ಲ; ಬದಲಾಗಿ ಆನಂದದಿಂದ ಪುಳಕಿತಳಾಗುತ್ತಾಳೆ.

ಹಾಗೆಯೇ ಅಂಗವನ್ನು ಆವರಿಸಿದ ಮನಕ್ಕೆ ಅಂಗದಲ್ಲಿಯೇ ಸಂಗಮವಾದ ಬಯಲು ದೇವನ ಪರಿಚಯವಾದರೆ ಆ ದೇವನೊಳಗೆ ಅಡಕವಾಗಿ ಆ ದೇವನನ್ನೇ ನಂಬುತ್ತಾನೆ. ನಾನು ಎಂಬ ಮನದ ಅಹಂಕಾರ ಕೆಟ್ಟು ಆ ದೇವನೊಳಗೆ ಬಯಲಾಗುತ್ತಾನೆ.

ಈ ದೇವನನ್ನು ಅರಿಯದೆ ಸ್ವರ್ಗ ಮರ್ತ್ಯ ಪಾತಾಳದವರೆಲ್ಲ ಕೆಟ್ಟು ಹೋದರು. ಬಯಲು ದೇವನನು ಅರಿತು ಅರ್ಚಿಸಲಿಲ್ಲ, ಪೂಜಿಸಲಿಲ್ಲ, ಭಾವಿಸಲಿಲ್ಲ, ಯಾವ ದೇಶದವರಾದರೂ ಆಗಲಿ ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರು ದೇವನನ್ನು ಅರಿತರೆ ಅವರಿಗೆ ಜನನವಿಲ್ಲ; ಮರಣವಿಲ್ಲ. ಸುಖ ದುಃಖಗಳೆರಡನ್ನೂ ಕಳೆದುಕೊಂಡು ಶಾಶ್ವತ ಸುಖದ ನಿಜಸುಖಿಗಳಾಗುತ್ತಾರೆ. ಬಸವಪ್ರಿಯ ಕೂಡಲಚೆನ್ನಬಸವಣ್ಣ ತಾವೇ ಆಗುತ್ತಾರೆ. ಎಂದಿದ್ದಾರೆ ಅಪ್ಪಣ್ಣ ಶರಣರು.

116

ಜಗದೊಳಗೆ ಹುಟ್ಟಿ ಜಗದ ಹಂಗಿಗರಾಗಿ,

ನಾವು ಜಂಗಮ, ನಾವು ಭಕ್ತರೆಂಬ ನುಡಿಗೆ ನಾಚರು ನೋಡಾ.
ಅಪ್ಪುವಿನ ಘಟನೆ ಹೊತ್ತುಕೊಂಡು ಅನ್ನಪಾನಂಗಳಿಗೆ ಅನುಸರಿಸಿ ನಡೆವುತ್ತ,
ಹೊನ್ನು, ಹೆಣ್ಣು, ಮಣ್ಣನೀವವರ
ಬಾಗಿಲ ಕಾಯ್ವ ಅಣ್ಣಗಳ ವೇಷಕ್ಕೆ ಶರಣಾರ್ಥಿ.
ಅವರ ಆಶ ಪಾಶವ ಕಂಡು, ಹೇಸಿತ್ತೆನ್ನ ಮನವು. ಅದಂತಿರಲಿ,
ಅದು ಬ್ರಹ್ಮನ ಹುಟ್ಟು, ವಿಷ್ಣುವಿನ ಸ್ಥಿತಿ,
ರುದ್ರನ ಲಯಕ್ಕೊಳಗಾಗಿ ಹೋಯಿತ್ತು. ಅಂತಲ್ಲ ಕೇಳಿರಣ್ಣ,
ಜಂಗಮವಾದರೆ ಜಗದೊಳಗೆ ಹುಟ್ಟಿ, ಜಗದ ಹಂಗ ಹರಿದು,
ಹೊನ್ನು, ಹೆಣ್ಣು, ಮಣ್ಣು, ಕಣ್ಣಿಲೆ ನೋಡಿ ಕಾಮಿಸದೆ,
ಮನದಲ್ಲಿ ನೆನಯದೆ, ಮಾಯವನುಣ್ಣದೆ, ಆಶೆಗೊಳಗಾಗದೆ,
ವೇಷವ ಹೊರದೆ, ದೇಶದ ಮನುಜರ ಸುತ್ತಿದ ಪಾಶಕ್ಕೆ ಹೊರಗಾಗಿ
ಸುಳಿವ ಜಂಗಮವ ಈಶನೆಂದೆ ಕಾಂಬೆ.
ಆ ಜಂಗಮಕ್ಕೆ ಅರ್ಥ ಪ್ರಾಣ ಅಭಿಮಾನವನೊಪ್ಪಿಸಿ,
ತಪ್ಪದೆ ಒಡೆಯನೆಂದರಿದು ಮಾಡುವ ಭಕ್ತನ ಎಂತಿಪ್ಪನೆಂದು ಕಾಂಬೆ.
ಇದನೆಂತಾದರೂ ಒಪ್ಪುಗೊಳ್ಳ ಎನ್ನ,
ಬಸವ ಪ್ರಿಯ ಕೂಡಲ ಚೆನ್ನಸಂಗನಬಸವಣ್ಣನಲ್ಲಿ ಶರಣಗಣಂಗಳು.

ಜಗದಲ್ಲಿ ಹುಟ್ಟಿದ ತನುಗಳೆಲ್ಲ ಒಂದೇ. ಆದರೆ ತನುವೇ ತನುವಿನ ಹಂಗಿಗನಾಗಿ ಬದುಕುತ್ತಿದೆ. ಒಂದು ತನು ವೇಷಹಾಕಿ ಜಂಗಮನೆಂದು ಹೇಳಿಕೊಳ್ಳುತ್ತದೆ; ಮತ್ತೊಂದು ತನು ವೇಷಕ್ಕೆ ನಮಿಸಿ ಭಕ್ತನೆಂದು ಹೇಳಿಕೊಳ್ಳುತ್ತದೆ. ತನುಗಳೆಲ್ಲಾ ಒಂದೇ ಆದರೂ ಜಂಗಮ ಭಕ್ತ ಎನ್ನುವ ನುಡಿ ನುಡಿಯಲು ಎರಡು ತನುಗಳಿಗೂ ನಾಚಿಕೆಯಾಗುತ್ತಿಲ್ಲ !

ಜಲಬಿಂದುವಿನಿಂದ ಹುಟ್ಟಿದ ತನುಗಳು. ಜಲಬಿಂದು ಹೊತ್ತುಕೊಂಡು ಅಹಾರಕ್ಕಾಗಿ ಹಪಹಪಿಸಿ, ಜಲಬಿಂದುವೇ ಗಟ್ಟಿಗೊಂಡು ಸೃಷ್ಟಿಯಾದ ಹೊನ್ನು ಹೆಣ್ಣು ಮಣ್ಣು ಕೊಡುವವರ ಬಾಗಿಲ ಕಾಯುವ ವೇಷದ ತನುಗಳಿಗೆ ಧಿಕ್ಕಾರ, ಜಂಗಮ ತನುಗಳಿಗೆ ಧಿಕ್ಕಾರ! ವೇಷದ ಆ ತನುಗಳ ಆಸೆ ಪಾಶವ ಕಂಡು ಹೇಸಿಗೆಯಾಗುತ್ತದೆ.

ಅಂಗ ಯಾವುದಾದರೇನು? ಬ್ರಹ್ಮನ ಹುಟ್ಟಿಗೆ, ವಿಷ್ಣುವಿನ ಸ್ಥಿತಿಗೆ, ರುದ್ರನ ಲಯಕ್ಕೆ ಒಳಗಾಗುತ್ತದೆ ಎನ್ನುವ ಶಾಸ್ತ್ರ ಬೇರೆ! ಅದು ಹಾಗಲ್ಲ ಕೇಳಿರಣ್ಣಾ: ಜಂಗಮ ತನುವಾದರೆ ಜಗದೊಳಗೆ ಹುಟ್ಟಿ, ಜಗದ ಹಂಗ ಹರಿದು, ಹೊನ್ನು ಹೆಣ್ಣು ಮಣ್ಣು ಕಣ್ಣಿಲೆ ನೋಡಿ ಕಾಮಿಸದೆ, ಮನದಲ್ಲಿ ನೆನೆಯದೆ, ಮಾಯವನುಣ್ಣದೆ, ಆಶೆಗೊಳಗಾಗದೆ, ವೇಷವ ಹೊರದೆ, ದೇಶದ ತನುಗಳನ್ನು ಸುತ್ತಿದ ಪಾಶದ ಮೋಸಕ್ಕೆ ಹೊರಗಾಗಿ, ಸುಳಿದಾಡುವ ತನುವನ್ನು ಜಂಗಮ ತನುವೆನ್ನುವೆ. ಆ ತನುವನ್ನು ಈಶನ ತನುವೆಂದು ಕಾಣುವೆ. ಆ ಜಂಗಮ ತನುವಿಗೆ ಅರ್ಥ ಪ್ರಾಣ ಅಭಿಮಾನವನೊಪ್ಪಿಸುವೆ. ತನುವಿನ ಅಜ್ಞಾನ ಕಳೆವ ಜ್ಞಾನಿ ಒಡೆಯನ ತನುವೆಂದು ಮಾಡುವ ಸೇವೆಯ ತನುವನ್ನು ಭಕ್ತನ ತನುವೆಂದು ಹೆಸರಿಸುವೆ.

ಅರಿವು ಪಡೆಯಲೇ ಬೇಕು ಎಂದು ಬಯಕೆಯುಳ್ಳ ತನುಗಳು ಅಪ್ಪಣ್ಣನ ಈ ಸೂತ್ರವನ್ನು

ಹೇಗಾದರೂ ಒಪ್ಪಿಕೊಳ್ಳಿ ಎಂದು ಅಪ್ಪಣ್ಣ ಶರಣರೆ ಜಗದ ತನುಗಳಿಗೆ ಮನವಿ ಮಾಡಿದ್ದಾರೆ. ಬಸವ ಪ್ರಿಯ ಕೂಡಲ ಚೆನ್ನಸಂಗನ ಬಸವಣ್ಣನಲ್ಲಿ ಒಂದಾಗುವ ಬಯಕೆ ಉಳ್ಳ ತನುಗಳಿಗೆ ಮಾತ್ರ ಶರಣರ ಈ ಸೂತ್ರ ಅರ್ಥವಾಗುತ್ತದೆ.

117

ಜಗದೊಳಗೆ ಹುಟ್ಟಿದವರೆಲ್ಲ ಹಗರಣಿಗರಾಗಿ ಹುಟ್ಟಿದರಲ್ಲದೇ,
ಜಗವ ಗೆಲ್ಲಲರಿಯದೆ, ನಗೆಗೆಡೆಯಾಗಿ ಹೋದರು.
ಎಮ್ಮ ಶರಣರು ಅಂತಲ್ಲ ಕೇಳಿರಣ್ಣಾ.
ಜಗದಲ್ಲಿಯೇ ಹುಟ್ಟಿ, ಜಗದಲ್ಲಿಯೇ ಬೆಳೆದು,
ಜಗದಂತೆ ಇದ್ದು, ಈ ಜಗವ ಗೆದ್ದು ಹೋಗುವರು.
ನಿಗಮ ಶಾಸ್ತ್ರ ಸಾಕ್ಷಿಯಾಗಿ, ಚೆನ್ನಮಲ್ಲೇಶ್ವರ ನಿನಗಾಯಿತ್ತಯ್ಯಾ.
ಅಂತಪ್ಪ ಚೆನ್ನಮಲ್ಲೇಶ್ವರನ ಪಾದವಿಡಿದು,
ಅವರು ಹೋದ ಹಾದಿಗೊಂಡು ಹೋಗುವನಲ್ಲದೆ,
ಈ ಮೇದಿನಿಯೊಳಗೆ ಕಾಮಕಾಲಾದಿಗಳ ಬಲೆಯೊಳಗೆ ಸಿಕ್ಕಿಬಿದ್ದು ಹೋದೆನಾದರೆ,
ನಿಮ್ಮ ಪಾದಕ್ಕೆ ಅದೇ ದೂರವಯ್ಯಾ.
ಬಸವ ಪ್ರಿಯ ಕೂಡಲಚೆನ್ನ ಬಸವಣ್ಣಾ.

ಭೌತಿಕ ಜಗತ್ತನ್ನು ಗೆದಿಯ ಬೇಕೆಂದು ಬಯಸಿ ಸಾಮ್ರಾಟ, ಚಕ್ರವರ್ತಿ, ಮಹಾರಾಜ ಎನ್ನಿಸಿಕೊಂಡವರುಂಟು. ಆಂತರಿಕ ಅರಿವನ್ನು ಜಯಿಸಿ ಮಹಾವೀರ ಅನ್ನಿಸಿಕೊಂಡವರು ವಿರಳ. ಇವರು ಜಗದಲ್ಲಿಯೇ ಹುಟ್ಟಿ, ಜಗದಲ್ಲಿಯೇ ಬೆಳೆದು, ಜಗದಂತೆ ಇದ್ದು, ಈ ಜಗವ ಗೆದ್ದವರು. ತನುವಿನ ಅಜ್ಞಾನದೊಂದಿಗೆ ಯುದ್ಧ ಮಾಡಿ, ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ, ಸಪ್ತ ವ್ಯಸನಗಳು ಅಷ್ಟ ಮದಗಳನ್ನು ಗೆದ್ದವರೇ ತನ್ನ ಗೆದ್ದವರು.

ತನ್ನ ತಾನು ಗೆದ್ದವನು ಮಾತ್ರ ಜಗವ ಗೆದಿಯಬಲ್ಲ. ಜಗತ್ತು ತನ್ನಂತೆ ಅರಿವಿನಿಂದ ಭರಿತವಾಗಿದೆ. ಜಗತ್ತು ಸಮಾಧಾನಿಯೇ ಆಗಿದೆ. ತಾನು ಸಮಾಧಾನಿಯಲ್ಲದ ನಿಮಿತ್ತ ಜಗತ್ತು ಸಮಾಧಾನಿಯಲ್ಲ, ಅದು ಕೆಟ್ಟಿದೆ ಎಂದು ಭಾಸವಾಗುತ್ತದೆ.

ತನು, ಮನ ಮತ್ತು ಅರಿವಿನಿಂದ ಸಂಗಮವಾಗಿದೆ. ಅರಿವು ಸದಾ ಸತ್ಯವೂ ಶಿವಮಯವೂ ಸುಂದರವೂ ಆಗಿದೆ. ಅದು ಜಗದಗಲ, ಮುಗಿಲಗಲ, ಬ್ರಹ್ಮಾಂಡದಿಂದತ್ತತ್ತ, ಪಾತಾಳದಿಂದಲೂ ಅತ್ತತ್ತ ವ್ಯಾಪಿಸಿಕೊಂಡಿದೆ. ಎಲ್ಲವೂ ತಾನೇ ಆಗಿರುವಾಗ ಗೆಲ್ಲುವುದು ಸೋಲುವುದು ಯಾವುದೂ ಇಲ್ಲ.

ಮನ ಹಾಗಲ್ಲ. ಅದಕ್ಕೆ ಸೋಲು ಗೆಲವುಗಳಿವೆ. ಗೆಲ್ಲುವುದಕ್ಕಾಗಿ ಮನ ತನುವಿನೊಂದಿಗೆ ಯುದ್ಧ ಮಾಡುತ್ತದೆ. ತನ್ನಂತೆ ಇರುವ ಹಲವಾರು ತನುಗಳಿಗೆ ಸಾವು ನೋವುಂಟು ಮಾಡಿ ಗೆಲುವಿನ ಕೃತಕ ಸುಖ ಹೊಂದುತ್ತದೆ. ಸೋತು ಸೋಲಿನ ದುಃಖ ಅನುಭವಿಸಿ ಗೆಲುವಿನ ಮಸಣ ಸೇರುತ್ತದೆ.

ತನು ತನುವಿನೊಂದಿಗೆ ಕಾದುವುದೊಂದು ಸುಖವಲ್ಲ. ತನು ತನುವಿನೊಂದಿಗೆ ಗೆಲ್ಲ ಸೋಲನು ಅನುಭವಿಸುವುದೊಂದು ಸುಖ ಸುಖವಲ್ಲ ಇದು ತನುವಿನಲ್ಲಿ ಉಂಟಾಗುವ ವಿಕೃತ ಸುಖದುಃಖಗಳ ರಸಾಯನ.

ಮನ ಅರಿವಿನೊಂದಿಗೆ ಸಂಗಮವಾಗಿ ನೋಡಿದರೆ ಯುದ್ಧವೇ ಬೇಡ. ತನ್ನಂತೆಯೇ ಅರಿವಿನ ಸುಖಬಯಸಿ ಭೂಮಿಗೆ ಬಂದ ತನುಗಳು. ಮನದ ಅಜ್ಞಾನದಿಂದಾಗಿ ಗೆಲುವು ಸೋಲಿನ ವಿಕೃತ ಕ್ರಿಯೆಯಲ್ಲಿ ಭಾಗವಹಿಸಿವೆ. ಮನಕ್ಕೆ ಅರಿವಾಗಲು ಮನವೇ ಮಹಾವೀರ. ಮನಕ್ಕೆ ಅರಿವಾಗದಿದ್ದರೇನಂತೆ ಪ್ರತಿ ತನುವಿನ ಅರಿವಿನ ಕ್ರಿಯೆಗಳೆಲ್ಲ ಒಂದೇ ಆಗಿವೆ. ಮನಕ್ಕೆ ಪಾಠ ನಿಲ್ಲುವುದಿಲ್ಲ; ಅರಿವಿಗೆ ಪಾಠಬೇಡ! ಇದನ್ನು ತಿಳಿದ ಜ್ಞಾನಿ ಸದಾ ಸುಖಿ. ಜಗವೂ ಸುಖಿ! ತಿಳಿಯದ ಮನಕ್ಕೆ ಸುಖ ಉಂಟು ದುಃಖ ಉಂಟು. ಇಂತಹ ಕೃತಕ ಸುಖ ದುಃಖಗಳಿಂದ ಜ್ಞಾನಿ ಸದಾ ದೂರವಾಗಿರುತ್ತಾನೆ.

118

ಜಪ ತಪ ನೇಮ ನಿತ್ಯದಿಂದ ನಿಶ್ಚಿಂತ ರೂಪನ ಕಂಡೆ, ಏನೆಂಬಿರಿ ?
ಆ ಪರಾತ್ಪರ ದೊಳಗಾಡುವ ಶರಣರ ಪಾದ ನಖದೊಳ್ಬರೆಯೆ
ಬಸವಪ್ರಿಯ ಕೂಡಲಚೆನ್ನ ಬಸವಣ್ಣ.

ಶರಣರ ಮಹಾಜ್ಞಾನದ ಅರಿವಿನ ಪಾದವನ್ನು ಜಪ ಮಾಡುವುದರ ಮೂಲಕ ಒಲಿಸಿಕೊಳ್ಳಬಹುದೆ ? ನಿತ್ಯನೇಮ ತಪಗಳನ್ನು ಮಾಡುವದರ ಮೂಲಕ ಒಲಿಸಿಕೊಳ್ಳಬಹುದೆ? ಶರಣರು ಪ್ರಸನ್ನರಾಗಿ ನಿಶ್ಚಿಂತ ಸ್ವ ಸ್ವರೂಪ ಜ್ಞಾನವನು ಕರುಣಿಸಬಹುದೆ? ಸಾಧ್ಯವಾಗುವುದಿಲ್ಲ,

ಶರಣರು ಕರುಣಾಮಯಿಗಳು. ಜಪತಪನೇಮ ನಿತ್ಯದಿಂದ ಪೂಜಿಸಿದವರಿಗೂ ಪೂಜಿಸದವರಿಗೂ ಗುರುಕರುಣೆಯಾಗಲಿ ಎನ್ನುವ ಮಹತ್ವಾಕಾಂಕ್ಷೆ ಉಳ್ಳವರಾಗಿದ್ದಾರೆ. ಆದರೂ ಜಪತಪಗಳಿಂದ ಪೂಜಿಸಿ ಫಲಪಡೆಯಬೇಕೆಂಬ ಆಪೇಕ್ಷೆ ಉಳ್ಳವರಿಗೆ ಗುರುಕರುಣೆ ದಕ್ಕುವುದು ದುರ್ಲಭ.

ಗುರುಕರುಣೆಯೆಂದರೆ ತನ್ನ ತನುವಿನಲ್ಲಿಯೇ ಸಂಗಮವಾದ ಅರುವಿನ ಕರುಣೆ. ಅದು ಅರುವಿಗೆ ಶರಣು ಹೋದ ಶರಣರ ಶ್ರೀ ಪಾದವೂ ಹೌದು. ಅಂತಹ ಮಹಾಜ್ಞಾನವನ್ನು ಮನ ಬಯಕೆಯ ಉತ್ಕಟ ಇಚ್ಛೆಯಿಂದ ಶರಣರ ಸತ್ಸಂಗದ ಮೂಲಕ ಅರಿದರಿದು ಪಡೆಯಬೇಕೆ ವಿನಹ, ಜಪದಿಂದ ತಪದಿಂದ, ನಿತ್ಯ ನೇಮಗಳಿಂದ ನಿಶ್ಚಿಂತ ತತ್ವವನು ಪಡೆಯಲು ಸಾಧ್ಯವಾಗುವುದಿಲ್ಲ.

ಒಮ್ಮೆ ಬುದ್ಧನ ಅನುಯಾಯಿಗೆ ಬುದ್ಧನ ಬೃಹತ್ ಚಿನ್ನದ ಮೂರ್ತಿ ಮಾಡುವ ಬಯಕೆಯಾಯಿತು. ಚಿನ್ನದ ನಾಣ್ಯಗಳನ್ನು ಸಂಗ್ರಹಿಸಿ ಬುದ್ದನ ಬೃಹತ್ ಮೂರ್ತಿಯನ್ನು ಮಾಡಿದ. ಅದರ ಉದ್ಘಾಟನೆಗೆ ಬುದ್ಧನಿಗೆ ಆಮಂತ್ರಣ ಕೊಟ್ಟ. ಆಗ ಬುದ್ಧನೆಂದ ನಿನ್ನ ಮನದ ಬಾಹ್ಯದ ಆಸೆ ಈಡೇರಿತು. ಚಿಗುರೊಡೆದು ಹೆಮ್ಮರವಾಯಿತು. ಆದರೆ ಮನದ ಅಂತರಾಳದ ಬುದ್ಧತ್ವ ಹೊಂದುವ ಆಸೆ ದೂರವಾಯಿತು. ಮನ ಬುದ್ಧನಾಗಲು ಆಸೆ ಪಡಬೇಕೆ ವಿನಹ ಬುದ್ಧನ ಸ್ತೂಪ ರಚಿಸಲು ಅಲ್ಲ. ಸಾವಿರಾರು ಮೂರ್ತಿಗಳನ್ನು ರಚಿಸಿದರೂ ಮನ ಬುದ್ಧನಾಗಲು ಸಾಧ್ಯವಿಲ್ಲ.

ತನುವಿನ ಅಲ್ಪ ಸಮಯವನ್ನು ಮನ ಜಪತಪ ನಿತ್ಯ ನೇಮಗಳಿಗಾಗಿ ವ್ಯಯಿಸಿದರೆ ಅದರ ಆಯುಷ್ಯ ವೃದ್ಧಿಯಾಗುವುದಿಲ್ಲ. ಮನ ಅರಿವಿಗೆ ಶರಣು ಹೋಗಿ ಶರಣನಾಗದೆ ತನುವಿಗೆ

ಸಾವು ಬರಿಸುತ್ತದೆ.

119

ತನ್ನ ತಾನರಿದವರು ಎಂತಿಪ್ಪರೆಂದರೆ, ಕನ್ನಡಿಗೆ ಕನ್ನಡಿಯ ತೋರಿದಂತಿಪ್ಪರು.
ಕಣ್ಣಲಿ ನೋಡಿದರೆ ಮನದಲ್ಲಿ ಹಳಚದಂತಿಪ್ಪರು.
ಕುಂದಣದ ಚಿನ್ನವ ಪುಟಕೆ ಹಾಕಿದಂತಿಪ್ಪರು.
ಅದಂತಿರಲಿ, ಮುಂದೆ ಮೀರಿದ ಘನವು ಅಗಮ್ಯವಾಯಿತ್ತು .
ಇದನರಿಯ ಬಾರದು.
ಇನ್ನು ತನ್ನ ತಾನರಿಯದವರು ಎಂತಿಪ್ಪರೆಂದರೆ ಕೇಳಿ,
ಚಿನ್ನ ಬಣ್ಣವಿಟ್ಟಂತಿಪ್ಪರು ಕಾಣಾ,
ಬಸವ ಪ್ರಿಯ ಕೂಡಲ ಚೆನ್ನ ಬಸವಣ್ಣಾ.

ದೇಹಕ್ಕೆ ಮತ್ತೊಂದು ದೇಹ ಜ್ಞಾನ ಕಲಿಸುವ ಅವಶ್ಯಕತೆಯಿಲ್ಲ. ದೇಹದಲ್ಲಿಯೇ ಜ್ಞಾನವಿದೆ. ಅದು ಪುಸ್ತಕಗಳಲ್ಲಿ ಸೂತ್ರದ ಮೂಲಕ ಹೊರಬಂದಿದೆ. ಮನ ಸಾಧ್ಯವಾದರೆ ಸೂತ್ರ ಹಿಡಿದು ತನ್ನ ದೇಹದ ಜ್ಞಾನ ತಾನೇ ಪಡೆದುಕೊಂಡು ತನ್ನನ್ನು ತಾನು ತಿಳಿಯಬೇಕು.

ಕಾಯದಲ್ಲಿ ಜ್ಞಾನದ ಕೈಲಾಸವೇ ಅಡಗಿದೆ. ಅದಕ್ಕೆ ಮತ್ತೊಂದು ಕನ್ನಡಿಯ ಅವಶ್ಯಕತೆಯಿಲ್ಲ. ಚಿನ್ನ ಎಲ್ಲಿ ಕಡಿದರೂ ಹಳದಿ ಬಣ್ಣದಿಂದ ಭರಿತವಾಗಿದೆ. ಕಾಯ ಕೂಡಾ ಅಷ್ಟೆ. ಎಲ್ಲಿ ಮುಟ್ಟಿದರೂ ಅರಿವು ಭರಿತವಾಗಿದೆ. ಮುಳ್ಳು ಗುತ್ತವುಡೆ ತೆರಹಿಲ್ಲದ ಘನ. ಮುಳ್ಳಿನ ಮೊನೆ ಇಡಲೂ ಸಂದಿಲ್ಲದಂತೆ ಜ್ಞಾನ ತನುವಿನ ತುಂಬಾ ತನ್ಮಯವಾಗಿದೆ.

ಕಾಯದಲ್ಲಿ ಗಮನಕ್ಕೆ ನಿಲುಕದ ಅಗಮ್ಯವಾದ ಜ್ಞಾನ ಭರಿತವಾಗಿದೆ. ಅರಿವಿನಿಂದ ಅರಿದರಿದು ನೋಡಲು ಹೋದರೆ ಕಾಯ ಜಗದಗಲ ಮುಗಿಲಗಲ; ಅದರ ವಿಸ್ತಾರ ಪಾತಾಳದಿಂದಲೂ ಅತ್ತತ್ತ, ಬ್ರಹ್ಮಾಂಡದಿಂದಲೂ ಅತ್ತತ್ತ. ಪ್ರಮಾಣಿಸಲು ಬಾರದ ಅಪ್ರಮಾಣ ಮಹಾಜ್ಞಾನವೇ ಅಪ್ರತಿಮ ಲಿಂಗವೆಂದು ಹೆಸರು ಪಡೆದು ಅಂಗದಲ್ಲಿ ಚುಳುಕಾಗಿದೆ; ನ್ಯಾನೊ ಆಗಿದೆ; ಡಿಜಿಟಲ್ ಆಗಿದೆ.

ಕಾಯವೇ ಕೈಲಾಸವೆಂದು ಅರಿತವರು ಕುಂದಣದ ಚಿನ್ನವನ್ನು ಪುಟಕ್ಕೆ ಹಾಕಿದಂತಿರುವರು. ಕಾಯದೊಂದಿಗೆ ಅಲೆದು ಕೈಲಾಸವನ್ನು ಹುಡುಕುವವರು ಚಿನ್ನ ಬಣ್ಣವಿಟ್ಟಂತಿಪ್ಪರು. ಲೋಹಕ್ಕೆ ಬಣ್ಣ ಬಳೆದಂತಿರುವರು. ಎರಡೂ ಕಾಯಗಳೇ. ಒಂದು ತನ್ನನ್ನು ತಾನು ತಿಳಿದ ಕಾಯ. ಮತ್ತೊಂದು ತನ್ನನ್ನು ತಾನು ತಿಳಿಯದೆ ಎಲ್ಲವನ್ನೂ ತಿಳಿಯುವ ಬಯಕೆಯುಳ್ಳ ಅಜ್ಞಾನದ ಕಾಯ.

120

ತನ್ನ ತಾನರಿಯದೆ, ತನ್ನ ತಾನೋಡದೆ,
ತನ್ನ ತಾ ನುಡಿಯದೆ, ಅನ್ಯರ ಸುದ್ದಿಯ
ನುಡಿದಾಡುವ ಕುನ್ನಿಗಳಿಗೆ ಗುರುವಿಲ್ಲ,
ಲಿಂಗವಿಲ್ಲ, ಜಂಗಮವಿಲ್ಲ,

ಪಾದೋದಕವಿಲ್ಲ, ಪ್ರಸಾದವಿಲ್ಲ.
ಅವನು ಸರ್ವಾಪರಾಧಿ, ಅವನ ಮುಖವ ನೋಡಲಾಗದು,
ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ.

ತನುವನ್ನು ಆವರಿಸಿದ ಮನದ ದುರ್ಗುಣ, ಇದು ತನ್ನನ್ನು ತಾನು ತಿಳಿಯುವುದಿಲ್ಲ, ತನ್ನನ್ನು ತಾನು ನೋಡುವುದಿಲ್ಲ, ತನ್ನೊಂದಿಗೆ ತಾನು ನುಡಿಯುವುದಿಲ್ಲ. ಅನ್ಯ ತನುಗಳ ಸುದ್ದಿ ಎಂದರೆ ಮನಕ್ಕೆ ಬಲು ಹಿತ. ಹಾಲು ಕುಡಿದಷ್ಟು ಸುಖ! ಅದಕ್ಕಾಗಿಯೇ ಮನಕ್ಕೆ ತನ್ನ ತನುವಿನ ಸಂಪತ್ತಿನ ಲೆಕ್ಕ ಸಿಕ್ಕುವುದಿಲ್ಲ. ಅದು ತನುವಿನಲ್ಲಿ ತನ್ಮಯವಾಗಿದ್ದರೂ ಬಳಕೆಗೆ ಬಾರದೆ ಹಾಗೆ ಉಳಿಯುತ್ತದೆ.

ಹನ್ನೆರಡು ಜನ ಬುದ್ಧಿವಂತರ ಕತೆ ಇಡೀ ಲೋಕಕ್ಕೆ ಗೊತ್ತಿದೆ. ಇದೊಂದು ಆಧ್ಯಾತ್ಮದ ಅರಿವಿನ ಕತೆಯಾದರೂ ಕತೆ ಎಂದು ಬಳಕೆಯಾಗಿದೆಯೇ ಹೊರತು ಕತೆಯ ತಿರುಳು ತಿಳಿದು ಮನ ತನ್ನನ್ನು ನೋಡಿಕೊಳ್ಳಲು ಸಾಧ್ಯವಾಗಿಲ್ಲ.

ಒಬ್ಬ ಶ್ರೇಷ್ಠ ಗುರುವಿನ ಹನ್ನೆರಡು ಜನ ಶಿಷ್ಯರಿಗೆ ನದಿದಾಟುವ ಪ್ರಸಂಗ ಬಂತು. ಹನ್ನೆರಡು ಜನ ನದಿ ದಾಟಿ ದಡ ಸೇರಿದರು. ತಾವು ಹನ್ನೆರಡು ಜನ ಸರಿಯಾಗಿದ್ದೀವೊ ಇಲ್ಲವೊ ಎಂದು ತನ್ನನ್ನು ಬಿಟ್ಟು ಎಣಿಕೆ ಆರಂಭಿಸಿದರು. ಹನ್ನೊಂದು ಜನ ಮಾತ್ರ ಲೆಕ್ಕಕ್ಕೆ ಸಿಕ್ಕರು, ಎಣಿಕೆ ಮಾಡಿದವನು ಲೆಕ್ಕಕ್ಕೆ ಸಿಗಲಿಲ್ಲ . ಯಾರು ಎಣಿಸಿದರೂ ತನ್ನನ್ನು ಬಿಟ್ಟೇ ಎಣಿಸಿದರು. ಜಗತ್ತಿನ ತನುಗಳಿಗೆ ಆವರಿಸಿದ ಮನದ ಸ್ಥಿತಿಯೂ ಹೀಗೇ ಇದೆ. ತನ್ನನ್ನು ಬಿಟ್ಟು ಅನ್ಯರನ್ನು ಎಣಿಕೆ ಮಾಡಿ ನುಡಿದಾಡುವ ಕುನ್ನಿಗಳ ತನುವಿಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದೋದಕವಿಲ್ಲ, ಪ್ರಸಾದವಿಲ್ಲ . ಇದು ಸರ್ವಾಪರಾಧಿ. ಆ ತನುವಿನ ಮುಖ ನೋಡಲಾಗದು ಎಂದಿದ್ದಾರೆ ಅಪ್ಪಣ್ಣ ಶರಣರು.

ಗುರು ಲಿಂಗ ಜಂಗಮ ಪಾದೋದಕ ಪ್ರಸಾದವನ್ನು ಮನ ಅನ್ಯ ತನುಗಳಲ್ಲಿ ನೋಡುತ್ತದೆ. ಹೀಗಾಗಿ ಅನ್ಯ ತನುಗಳನ್ನು ಗುರುವೆಂದು, ಲಿಂಗ ಜಂಗಮನೆಂದು ತಿಳಿದು ಪಾದ ತೊಳೆದು ಪಾದೋದಕ ಪ್ರಸಾದ ಸ್ವೀಕರಿಸುತ್ತದೆ. ಸುಖವಾದರೆ ಎಣಿಕೆ ಮಾಡಿ ಹೊಗಳುತ್ತದೆ, ದುಃಖವಾದರೆ ಎಣಿಕೆ ಮಾಡಿ ತೆಗಳುತ್ತದೆ. ಗುರುಲಿಂಗ ಜಂಗಮ ಪಾದೋದಕ ಪ್ರಸಾದ ಇವು ತನ್ನ ತನುವಿನಲ್ಲಿಯೇ ತನ್ಮಯವಾಗಿವೆ. ಎಂದು ಮನಕ್ಕೆ ಅರಿವಾಗುವುದಿಲ್ಲ. ಪೂಜೆಗೆ ಒಳಗಾದ ಗುರುವಿಗೂ ಅರಿವಾಗುವುದಿಲ್ಲ. ಹೀಗಾಗಿ ಇವರಿಬ್ಬರೂ ತಮ್ಮನ್ನು ಬಿಟ್ಟು ಇತರರನ್ನು ಎಣಿಸಿದವರು; ಸರ್ವಾಪರಾಧಿಗಳು.

ತನ್ನ ತಾನರಿತು, ತನ್ನ ತಾ ನುಡಿದವನು, ತನ್ನ ತಾ ನೋಡಿದವನೇ ನಿಜಗುರು. ಆತ ಮತ್ತೊಬ್ಬರನ್ನು ಎಣಿಸುವುದಿಲ್ಲ. ತನ್ನನ್ನು ತಾನು ನೋಡಿಕೊಂಡು ತಾನೇ ಗುರುವಾದಾತ. ಈತನಿಗೆ ಯಾರೂ ಎಣಿಕೆಗೆ ಸಿಕ್ಕುವುದಿಲ್ಲ ಎಣಿಕೆಗೆ ಒಳಗಾಗುವವರೆಲ್ಲ ಗುರುಗಳಾಗಿಯೇ ಕಾಣುತ್ತಾರೆ. ಸಾಧ್ಯವಾದರೆ ನಿನ್ನನ್ನು ನೀನು ಎಣಿಕೆ ಮಾಡಿಕೊಂಡು ಗುರುವಾಗು ಎಂದು ಹೇಳಬಲ್ಲರು. ತನ್ನನ್ನು ತಾನು ತಿಳಿಯುವ ವಿಧಾನವನ್ನು ಹೇಳಬಲ್ಲರು. ತನ್ನ ತಾನರಿಯುವ ಬಯಕೆಯಾದ ತನುಗಳು ಸಾಧ್ಯವಾದರೆ ಇಂತಹವರನ್ನು ಹುಡುಕಲೇಬೇಕು. ಏಕೆಂದರೆ ಇವರು ನಿಜ ಸುಖಿ. ಅಪ್ಪಣ್ಣ ಶರಣರಂತೆ ಯಾರಿಗೂ ಗುರುವಾಗದವರು.

121

ತನ್ನ ಮನೆಯನರಿಯದೆ ತವರು ಮನೆಗೆ ಹಾರುವ ಹೆಣ್ಣಿನಂತೆ,
ಭಿನ್ನವಿಟ್ಟು ನೋಡಿಹೆನೆಂದು, ನಿಮ್ಮನರಿಯದೆ ಕೆಟ್ಟಿತು ಜಗವೆಲ್ಲ.
ಅದಂತಿರಲಿ. ಇನ್ನು ತನ್ನ ತಾನರಿದವಂಗೆ ತನುವೇ ಲಿಂಗ, ಮನವೇ ಪುಷ್ಪ.
ಈ ಅನುವರಿದು, ಘನವ ನೆಮ್ಮಿದ ಶರಣರ ಎನಗೊಮ್ಮೆ ತೋರಯ್ಯಾ,
ನಿಮ್ಮ ಧರ್ಮ ನಿಮ್ಮ ಧರ್ಮ, ಬಸವ ಪ್ರಿಯ ಕೂಡಲಚೆನ್ನಬಸವಣ್ಣಾ.

ಮದುವೆಯಾದ ಹೆಣ್ಣಿಗೆ ಗಂಡನ ಮನೆಯೇ ತನ್ನ ಮನೆ. ತವರು ಮನೆಯಲ್ಲಿ ಬಾಲ್ಯ ಕಳೆದು, ಪ್ರೌಢಾವಸ್ಥೆಯಿಂದ ಅಂತ್ಯದವರೆಗೆ ಗಂಡನ ಮನೆಯಲ್ಲಿಯೇ ಕಳೆಯಬೇಕು. ಅದು ತನ್ನ ಮನೆ. ತವರು ಮನೆಯೆ ತನ್ನ ಮನೆಯೆಂದು ಮತ್ತೆ ಮತ್ತೆ ಬರುವ, ತವರಿನಲ್ಲಿಯೇ ತಳವೂರಿದ ಹೆಣ್ಣು ಗೌರವಕ್ಕೆ ಪಾತ್ರಳಾಗುವುದಿಲ್ಲ.

ಹಾಗೆಯೇ ಗರ್ಭಗುಡಿಯಲ್ಲಿದ್ದ ದೇವರನ್ನೇ ದೇವರೆಂದು ಬಾಲ್ಯದಲ್ಲಿ ಹಿರಿಯರು ತೋರುತ್ತಾರೆ. ಪ್ರೌಢಾವಸ್ಥೆಗೆ ಬಂದ ಮೇಲೆ ತೋರಿದ ದೇವರನ್ನು ಅರಿವಿನಿಂದ ನೋಡುವುದು ಕಲಿಯಬೇಕು. ಮೂರ್ತಿಯಲ್ಲಿರುವುದನ್ನು ಅರಿತರಿತು ನೋಡಬೇಕು. ಅಲ್ಲಿರುವ ಕಲ್ಲು ಕಣ್ಣಿಗೆ ಕಂಡರೆ ಆ ಅರಿವೇ ದೇವರೆಂದು ನಿರ್ಧರಿಸಬೇಕು. ಕಲ್ಲೊಳಗೆ ಕಂಡ ಅರಿವಿನ ಬೆಲ್ಲವನ್ನು ಸವಿಯುತ್ತ ಮೂಕನಂತೆ ಮಹದಾನಂದವನ್ನು ಹೊಂದಬೇಕು.

ಗಂಡನ ಮನೆಗೆ ನಡೆಯಲು ಬಂದ ಹೆಣ್ಣು ತವರನ್ನು ಹೊಗಳುವಂತಿಲ್ಲ. ಹಾಗೆಯೇ ದೇವರ ಮೂರ್ತಿಯೊಳಗೆ ಪ್ರತ್ಯಕ್ಷವಾದ ಕಲ್ಲುಕಂಡಾತ ಮೂಕನಂತಿರಬೇಕು.

ತನುವಿನಲ್ಲಿ ತನ್ಮಯವಾದ ಅರಿವು ಅರಿತ ತನುವೇ ಲಿಂಗ, ಮನವೇ ಪುಷ್ಪ. ಈ ಅನುವನು ಅರಿದು ಘನಮನವಾದ ಶರಣರನ್ನು ಎನಗೊಮ್ಮೆ ತೋರಯ್ಯಾ ಎಂದು ಮನ ಹಗಲಿರುಳು ಪರಿತಪಿಸಬೇಕು. ಬಸವ ಪ್ರಿಯ ಕೂಡಲ ಚೆನ್ನ ಬಸವಣ್ಣ ತಾನೇ ಆಗುವ ಉತ್ಕಟೇಚ್ಛೆಯ ಬಯಕೆ ಮನ ಹೊಂದಬೇಕು.

122

ತನುವ ಕೊಟ್ಟು ಭಕ್ತರಾದೆವೆಂಬರು,
ಮನವ ಕೊಟ್ಟು ಭಕ್ತರಾದೆವೆಂಬರು,
ಧನವ ಕೊಟ್ಟು ಭಕ್ತರಾದೆವೆಂಬರು.
ತನು, ಮನ, ಧನವನೆಂತು ಕೊಟ್ಟಿರಿ ಹೇಳಿರಣ್ಣಾ?
ನಿಮ್ಮ ಒಡವೆ ನಿಮ್ಮಲ್ಲಿ ಇದೆ.
ಅದು ಹೇಗೆಂದರೆ ಬಲ್ಲವರು ನೀವು ಕೇಳಿ,
ತನುವ ನೀವು ಕೊಟ್ಟರೆ ನೀವು ರೂಪಾಗಿ ಇರುವುದಕ್ಕೇನು?
ಮನವ ನೀವು ಕೊಟ್ಟರೆ ನೀವು ನಿಮಗೆ ನಡೆ ನುಡಿ ಚೈತನ್ಯವೇನು?
ಧನವ ನೀವು ಕೊಟ್ಟರೆ ಕ್ಷುತ್ತಿಂಗೆ ಭಿಕ್ಷ, ಸೀತಕ್ಕೆ ರಗಟೆ ಏನು?
ಅಂತಲ್ಲ, ಕೇಳಿರಣ್ಣಾ!

ತನುವ ಕೊಟ್ಟುದಾವುದೆಂದರೆ, ಹುಸಿಮನವ ಕೊಟ್ಟುದಾವುದೆಂದರೆ,
ವ್ಯಾಕುಳವನೆಲ್ಲ ಅಳಿದು ನಿರಾಕುಳವಾಗಿ ನಿಂದ, ಮನವೇ ಲಿಂಗವಾಯಿತ್ತು
ಧನವ ಕೊಟ್ಟೆಹೆನೆಂಬುದಾವುದೆಂದರೆ,
ಇಂದಿಗೆ ನಾಳಿಗೆ ಎಂಬ ಸಂದೇಹದ ಭಾವಕ್ಕೆ,
ಭಯಕ್ಕೆ ಭವವಳಿದುದೆ ಜಂಗಮವಾಯಿತ್ತು .
ಇಂತಿದೀಗ ನಮ್ಮ ಮುನ್ನಿನ ಆದ್ಯರ ನಡೆನುಡಿ, ಮಾಟಕೂಟ.
ಇದನರಿಯದೆ ಏನೊಂದು ಮಾಡಿದರೂ ನೀಡಿದರೂ
ಕೊಟ್ಟರೂ ಕೊಂಡರೆಯೂ,
ವಾಯಕ್ಕೆ ವಾಯ ಬಸವ ಪ್ರಿಯ ಕೂಡಲಚೆನ್ನ ಬಸವಣ್ಣಾ.

ತನು ಮನ ಧನ ಈ ಮೂರೂ ಶಬ್ದಗಳು ಭಾರತದ ಎಲ್ಲ ಭಾಷೆಗಳಲ್ಲಿಯೂ ಬಳಕೆಯಾಗುತ್ತದೆ. ಭಕ್ತನಾದವನು ತನು ಮನ ಧನ ಅರ್ಪಿಸಿ ಗುರು ಸೇವೆ ಮಾಡುತ್ತಾನೆ, ದೇವರ ಸೇವೆ ಮಾಡುತ್ತಾನೆ ಎನ್ನುವ ಮೂಲಕ ಬಳಕೆಯಾಗುವ ಪದಗಳಿವು.

ಒಂದು ವ್ಯಕ್ತಿಗೆ, ಒಂದು ವಸ್ತುವಿಗೆ ತನು ಮನ ಧನವನ್ನು ಅರ್ಪಿಸಲು ಬರುತ್ತದೆಯೆ? ತನು ಮನವನ್ನು ತನುವಿಗೆ ಅರ್ಪಿಸುವುದು ಹೇಗೆ? ಧನವನ್ನು ಮತ್ತೊಂದು ತನುವಿಗೆ ಅರ್ಪಿಸುವುದು ಹೇಗೆ ಎಂದು ತಿಳಿಯಲು ಹೋದರೆ ಅರ್ಥವಾಗುತ್ತದೆ.

ತನು ಗುರುವಿಗೆ ಅರ್ಪಿಸಿದರೆ, ತಾನು ತನುವಿನ ಮೂಲಕ ಪುನಃ ಗೋಚರಿಸಲು ಬರುವುದಿಲ್ಲ. ತನು ರೂಪದಿಂದ ಕೂಡಿದೆ.

ಮನವನು ಗುರುವಿಗೆ ಅರ್ಪಿಸಿದರೆ ತನು ಚೈತನ್ಯದಿಂದ ಇರಲು ಸಾಧ್ಯವಾಗುವುದಿಲ್ಲ. ತನುವಿನ ಚೈತನ್ಯಕ್ಕೆ ಮನವೇ ಕಾರಣ.

ಧನವನು ಗುರುವಿಗೆ ಕೊಟ್ಟರೆ ತನು ಸಂಪೂರ್ಣ ಮರೆವಿನಿಂದ ಅಜ್ಞಾನದಿಂದ ನಿಸ್ತೇಜಗೊಳ್ಳುತ್ತದೆ. ಧನವೆಂದರೆ ಹಣವಲ್ಲ; ವಡವೆ ವಸ್ತ್ರಗಳೂ ಅಲ್ಲ; ಶುದ್ಧವಾದ ಅರಿವು. ತನು ಮನ ಅರಿವು ಇಂತಹ ಧನವನು ಗುರುವಿಗೆ ಕೊಡಲು ಬರುವುದಿಲ್ಲ. ಅವರಿಗೆ ತೆಗೆದುಕೊಳ್ಳಲೂ ಬರುವುದಿಲ್ಲ.

ತನು ಗುಣಾದಿಗಳಾದ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನಿಗೆ ಅರ್ಪಿಸಬಹುದು. ಮನ ಇಲ್ಲದ್ದು ಆದರೂ ತನುವನ್ನು ಆವರಿಸಿಕೊಂಡಿದೆ. ತನುವಿನ ಮೂಲಕ ಕಾಮದ ಸವಿಯನ್ನು ಸವಿಯುತ್ತದೆ. ದಕ್ಕದಿದ್ದರೆ ತನುವಿನ ಮೂಲಕ ಕ್ರೋಧ ವ್ಯಕ್ತಪಡಿಸುತ್ತದೆ. ಲೋಭ ಮೋಹ ಮದ ಮತ್ಸರಗಳಿಂದ ತನುವಿನ ಮೂಲಕ ಮೆರೆಯುತ್ತದೆ. ಇಂತಹ ಮನವನ್ನು ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನಿಗೆ ಅರ್ಪಿಸಬಹುದು.

ವಿನಿಮಯಕ್ಕಾಗಿ ಧನವನ್ನು ಮನ ಸೃಷ್ಟಿ ಮಾಡಿದೆ. ಸಹಜ ಅರಿವಿನಿಂದ ನೋಡಿದರೆ ಕರೆನ್ಸಿ ಎನ್ನುವುದು ಕಾಗದ. ಚಿನ್ನ ಎನ್ನುವುದು ಹಳದಿ ಲೋಹ. ತನುವಿನ ಮನದಿಂದಾಗಿ ಸೃಷ್ಟಿಯಾದ ಧನ ತನುವನ್ನೆ ಸಂಕಟಕ್ಕೀಡು ಮಾಡಿದೆ. ಧನದಾಸೆಗಾಗಿ ರಾಜ ಮತ್ತೊಬ್ಬ ರಾಜನನ್ನು ಕೊಲ್ಲುತ್ತಾನೆ. ಒಂದು ತನು ಮತ್ತೊಂದು ತನುವನ್ನು ಕೊಂದು ಧನ ಪಡೆಯುತ್ತದೆ. ಧನಕ್ಕಾಗಿ ತನು ಅರಿವಿನ ವ್ಯವಹಾರ ಮರೆತು ಹಗಲಿರುಳೂ ದುಡಿಯುತ್ತದೆ.

ಧನ ಕೊಟ್ಟು ತನು ದಾನಿ ಎನ್ನಿಸಿಕೊಳ್ಳುತ್ತದೆ. ಬೇಡಿ ಭಿಕ್ಷುಕ ನೆನ್ನಿಸಿಕೊಳ್ಳುತ್ತದೆ. ಕದ್ದು ಕಳ್ಳನೆನ್ನಿಸಿಕೊಳ್ಳುತ್ತದೆ. ಕೊಡದೆ ಜಿಪುಣನೆನ್ನಿಸಿಕೊಳ್ಳುತ್ತದೆ. ತನುವಿನ ಸಹಜ ಅರಿವನ್ನೇ ಮರೆ ಮಾಡಿದ ಇಂತಹ ಅಜ್ಞಾನಿ ಧನ (ಅರಿವು) ವನ್ನು ಅರಿವೆಂದು ಸಂಗ್ರಹ ಮಾಡಿಕೊಂಡ ಜ್ಞಾನವನ್ನು ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನಿಗೆ ಕೊಡಬೇಕು.

ಇದನರಿಯದೆ ಏನೊಂದು ಮಾಡಿದರೂ ನೀಡಿದರೂ ಕೊಟ್ಟರೂ ಕೊಂಡರೆಯೂ ಗಾಳಿಯೊಂದಿಗೆ ಗುದ್ದಾಡಿ ಗಾಳಿಯಲ್ಲಿಯೇ ಮರೆಯಾದಂತೆ. ಅರಿವೆಂಬ ಗುರುದೇವನಾದ ಬಸವಪ್ರಿಯ ಕೂಡಲ ಚೆನ್ನಬಸವಣ್ಣನನ್ನು ಅರಿಯಲು ಸಾಧ್ಯವಾಗುವುದಿಲ್ಲ.

123

ತನುವಿನಿಚ್ಛೆಗೆ ಶೀಲವ ಕಟ್ಟಿಕೊಂಬವರು ಲಕ್ಷೋಪಲಕ್ಷವುಂಟು.
ಮನದಿಚ್ಛೆಗೆ ಶೀಲವ ಕಟ್ಟಿಕೊಂಬವರು ಅಪೂರ್ವ ನೋಡಾ.
ತನುಮನವೆರಡು ಏಕವಾಗಿ, ಧನದಾಸೆಯಂ ಬಿಟ್ಟು,
ಮನ ಮಹದಲ್ಲಿ ನಿಂದುದೇ ಶೀಲ ಸಂಬಂಧ.
ಇನಿತಲ್ಲದ ದುಶ್ಶೀಲರ ಎನಗೊಮ್ಮೆ ತೋರದಿರು,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ತನುವಿಗೆ ಸಚ್ಚಾರಿತ್ರದ ವೇಷ ಹಾಕಿ ಸ್ವಾಮಿ, ಸನ್ಯಾಸಿ, ಮಠಾಧೀಶ, ಬ್ರಹ್ಮಾಚಾರಿ, ವೈರಾಗ್ಯವಂತ, ಏಕಪತ್ನೀವ್ರತಸ್ಥ, ಸಾಧ್ವಿ, ಶೀಲವಂತ ಎನ್ನಿಸಿಕೊಳ್ಳುವ ತನುಗಳು ಲಕ್ಷೋಪ ಲಕ್ಷ ಉಂಟು. ತನು ಶೀಲವಂತ ಎಂದು ಕರೆಯಿಸಿಕೊಳ್ಳಲು ಮಾತ್ರ ಸಾದ್ಯವಾಗುತ್ತದೆ; ಇರಲು ಸಾಧ್ಯವಾಗುವುದಿಲ್ಲ. ತನು ನೋಡುವ ಮೂಲಕ ಹಾದರ ಮಾಡುತ್ತದೆ. ನೆನೆಯುವ ಮೂಲಕ, ಮುಟ್ಟುವ ಮೂಲಕ ಹಾದರ ಮಾಡುತ್ತದೆ. ಮನದ ಈ ಹಾದರ ನಿಲ್ಲುವುದಿಲ್ಲ. ಏಕೆಂದರೆ ಮನ ತನುವಿನಿಚ್ಛೆಗೆ ಶೀಲದ ವೇಷ ಧರಿಸಿದೆ.

ಮನದಿಚ್ಛೆಯಿಂದ ಶೀಲದ ಬಗ್ಗೆ ಯೋಚಿಸಿದರೆ ಅದು ತನುವಿನಲ್ಲಿ ಉಂಟಾಗುವ ರಸಾಯನಿಕ ಕ್ರಿಯೆಗಳನ್ನು ಗಮನಿಸುತ್ತದೆ. ನೋಡಿದರೆ, ಮುಟ್ಟಿದರೆ, ಕೇಳಿದರೆ ಭೋಗಿಸಬೇಕೆಂಬ ಆಸೆ ಏಕೆ ಉಂಟಾಗುತ್ತದೆ? ಈ ಆಸೆಗೆ ಕಾರಣವೇನು? ಸುಖ ತನುವಿನಲ್ಲಿದೆಯೋ ಅನ್ಯ ತನುವಿನಲ್ಲಿದೆಯೊ? ತನುವಿನಲ್ಲಿದ್ದ ಸುಖದ ದ್ರವ್ಯ ತನುವಿನಿಂದಲೇ ಹೊರಬಂದು ತನುವಿಗೆ ಸುಖವಾಗಬೇಕಾದರೆ ಅನ್ಯ ತನುಗಳಿಂದ ತನುವಿಗೆ ಈ ಸುಖವಿಲ್ಲ. ಅಂದ ಮೇಲೆ ತನುವಿನಲ್ಲಿ ಉಂಟಾಗುವ ರಸಾಯನಿಕ ಕ್ರಿಯೆಗೆ ಕಾರಣವೇನು? ಎಂದು ಮನ ಯೋಚಿಸುತ್ತಾ ಜ್ಞಾನಿಗಳನ್ನು ಹುಡುಕುತ್ತದೆ.

ಶರಣರು ಈ ವಿಷಯದಲ್ಲಿ ನಿಪುಣರು. ಮನದ ಈ ವ್ಯಾಧಿಯನ್ನು ತನುವಿನಲ್ಲಿ ತನ್ಮಯವಾದ ಅರಿವಿನಿಂದಲೇ ಕಳೆದು, ಮನಕ್ಕೆ ಅರಿವಿನ ಶೀಲ ಕಟ್ಟುತ್ತಾರೆ. ಆಗ ತನು ಮನಗಳೆರಡು ಏಕವಾಗುತ್ತವೆ. ಅಜ್ಞಾನದ ಸುಖದಾಸೆ ಬಿಟ್ಟು ಮನ ಘನದಲ್ಲಿ ಬೆರೆಯುತ್ತದೆ, ಘನಮನಗಳೆರಡು ಕೂಡದಗಲದ ಕೂಟದ ಸವಿಯನುಂಡು ಏಕವಾಗುತ್ತದೆ. ನಿಜ ಶೀಲ ಸಂಬಂಧಿಯಾಗುತ್ತದೆ.

ಅರಿವಿನ ಘನ ಸಂಬಂಧವನ್ನು ಅರಿಯದ ಮನವನ್ನು ಎನಗೆ ತೋರದಿರು. ಏಕೆಂದರೆ ಅದು ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ಸಪ್ತ ವ್ಯಸನಗಳ ಅಷ್ಟ ಮದಗಳ ಸಂಬಂಧವನ್ನು ಹೊಂದಿದ ದುಶ್ಶೀಲ ಮನ. ಅದನ್ನು ಎನಗೆಂದೂ ತೋರದಿರು ಎಂದು

ಮನದಿಂದಲೇ ಹೇಳುತ್ತಾ ಅರಿವಿನ ಸಂಬಂಧದ ಸೂತ್ರವನ್ನು ರಚಿಸಿದ್ದಾರೆ ಅಪ್ಪಣ್ಣ ಶರಣರು.

124

ತಲೆ ಇಲ್ಲದ ಮುಂಡ, ಮೊಲೆ ಇಲ್ಲದಾವು.
ಜಲವಿಲ್ಲದ ಕೆರೆ, ನೆಲೆ ಇಲ್ಲದ ನಂಟ, ಕಲಿ ಇಲ್ಲದ ಭಂಟ.
ಇವು ಅಯ್ದರ ಕಲೆಯನರಿಯದೆ ನುಡಿವ ಮನುಜನೆಂತುಟು,
ಬಸವ ಪ್ರಿಯ ಕೂಡಲಚೆನ್ನ ಬಸವಣ್ಣಾ?

ಅಪ್ಪಣ್ಣ ಶರಣರು ಬಲು ಜಾಣರು. ಮನದ ಜಾಡನು ಹಿಡಿದು ಅದರ ನೆಲೆಯನ್ನು ಬಲ್ಲವರು. ಮನವನ್ನು ಹಿಡಿದು ಅದರ ಕಲಿತನವನ್ನು ನಷ್ಟ ಮಾಡುವ ಕಲೆಯನ್ನು ಬಲ್ಲ ಮಹಾ ಜ್ಞಾನಿಗಳು!

ಮನ ತಲೆ ಇಲ್ಲದ ಮುಂಡವು ಹೌದು, ಮೊಲೆಯಿಲ್ಲದ ಹಸುವು ಹೌದು, ಜಲವಿಲ್ಲದ ಕೆರೆಯೂ ಹೌದು, ನೆಲೆಯಿಲ್ಲದ ನಂಟನೂ ಹೌದು, ಕಲಿತನವೇ ಇಲ್ಲದ ಬಂಟನೂ ಹೌದು. ಇದನ್ನು ಹಿಡಿದು ಕಟ್ಟುವ ಕಲೆ ಶರಣ ಮಾತ್ರ ಬಲ್ಲ. ಉಳಿದ ತನುಗಳೆಲ್ಲ ಮನಕ್ಕೆ ದಾಸನಾದ ತನುಗಳು ಅದರ ವಿಷಯದ ಎಂಜಲುಣ್ಣುವ ಹೇಡಿ ತನುಗಳು.

ಮನ ತನುವನ್ನು ಆವರಿಸಿಕೊಂಡು ತನುವಿನ ಆಶ್ರಯಪಡೆದು ತನುವಿನೊಂದಿಗೆ ವಿಷಯ ಸುಖವನುಂಡು, ಆ ತನುವಿಗೆ ಹಾದರದ ಪಟ್ಟ ಕಟ್ಟುವ ಮನಕ್ಕೆ ತಲೆಯಿಲ್ಲ. ಏಕೆಂದರೆ ತನುವಿನ ತಲೆಯನ್ನೇ ಬಳಸಿಕೊಂಡು ಮತ್ತೊಂದು ತನುವಿನೊಂದಿಗೆ ವಿಷಯ ಸುಖ ಉಂಡು, ತಾನಿದ್ದ ತನುವಿಗೆ ಹಾದರದ ಪಟ್ಟ ಕಟ್ಟುತ್ತದೆ. ತಾನು ಅಲ್ಲಿ ಪುಕ್ಕಟೆ ವಾಸ ಮಾಡಲು ಬಂದವನೆನ್ನುವ ತಲೆಯೂ ಅದಕ್ಕಿಲ್ಲ.

ಮೊಲೆ ಇಲ್ಲದಾವು: ಮನವನ್ನು ಹೆಣ್ಣಿಗೆ ಹೋಲಿಸುತ್ತಾರೆ. ಆದರೆ ಇದು ಹೆಣ್ಣಲ್ಲ; ಮಹಾಮಾರಿ. ಹೆಣ್ಣು ಎಂದು ಹೇಳಲು ಹೋದರೆ ಮನಕ್ಕೆ ಮೊಲೆಯಿಲ್ಲ; ಮುಂಡವೂ ಇಲ್ಲ!

ಜಲವಿಲ್ಲದ ಕೆರೆ: ಜಲಬಿಂದುವಿನಿಂದ ಹುಟ್ಟಿದ ತನು ಒಂದು ಜಲದ ತಾಣವೂ ಹೌದು. ಅರಿವಿನ ಜಲಬಿಂದು ಗರ್ಭ ಹೊಕ್ಕು ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಆಗಿ, ಚರ್ಮದಿಂದ ಬಂಧಿಸಲ್ಪಟ್ಟು ಹೊರ ಬಂದಿದೆ. ಜಲಬಿಂದುವಿನ ನೆರಳಾಗಿ ಗರ್ಭ ಪ್ರವೇಶಿಸಿದ ಮನ ತನುವನ್ನು ಆವರಿಸಿಕೊಂಡು ಹೊರಬಂದಿದೆ. ಹೀಗಾಗಿ ತನುವನ್ನು ಜಲವೆನ್ನಲು ಬರುವುದಿಲ್ಲ. ಮನವನ್ನು ಜಲಚರವೆನ್ನಲೂ ಬರುವುದಿಲ್ಲ. ಇಂತಹ ಮನಕ್ಕೆ ಅಪ್ಪಣ್ಣ ಶರಣರು ಜಲವಿಲ್ಲದ ಕೆರೆ ಎಂದು ಕರೆದಿದ್ದಾರೆ.

ನೆಲೆ ಇಲ್ಲದ ನಂಟ, ಕಲಿ ಇಲ್ಲದ ಬಂಟ:

ಮನಕ್ಕೆ ನೆಲೆ ಇಲ್ಲ. ಏಕೆಂದರೆ ಅದು ತನುವನ್ನು ಆವರಿಸಿದೆ. ತನು ಅರಿವೆಂಬ ಗುರುದೇವನದು. ಆತನನ್ನು ತಿಳಿಯುವವರೆಗೆ ಮನದ ಆವರಣ ಕಳಚುವುದಿಲ್ಲ. ಆತನನ್ನು ತಿಳಿಯುವ ಹಂಬಲ ಹೊಂದಿ ತನ್ನ ಅಜ್ಞಾನದೊಂದಿಗೆ ತಾನೇ ಕಲಿಯಾಗಿ ಹೋರಾಟ ಮಾಡುವವರೆಗೂ ಬಂಟತನ ಪ್ರಾಪ್ತಿಯಾಗುವುದಿಲ್ಲ. ಹೀಗಾಗಿ ನಲೆ ಇಲ್ಲದ ನಂಟ, ಕಲಿತನವಿಲ್ಲದ ಬಂಟನೆಂದು ಅಪ್ಪಣ್ಣ ಶರಣರು ಮನಕ್ಕೆ ಈ ಐದು ಹೆಸರಿಟ್ಟು ಕರೆದಿದ್ದಾರೆ.

ಮನ ಕಣ್ಣು ಕಿವಿ ಮೂಗು ನಾಲಿಗೆ ಚರ್ಮಕ್ಕೆ ಆವರಿಸಿ ನೋಡದಂತೆ, ಕೇಳದಂತೆ, ಮೂಸಿಸದಂತೆ, ರುಚಿಸದಂತೆ, ಮುಟ್ಟದಂತೆ ಮಾಡಿದೆ. ಮನ ಆವರಿಸಿದ ಈ ಐದರ ಕಲೆಯನರಿಯದೆ ನುಡಿಯುವ ನುಡಿ ನುಡಿಯೇ ಅಲ್ಲ. ಹೀಗೆ ನುಡಿಯುವ ತನು ತನುವೇ ಅಲ್ಲ ಎಂದಿದ್ದಾರೆ ಅಪ್ಪಣ್ಣ ಶರಣರು.

125

ತಾನೆನಬೇಡ, ಮನ ಮುಗ್ಧನೆನ ಬೇಡ,
ಮುನ್ನವರ ಬೇಡ ಬೇಡ, ತನುಜರೊಳ್ನುಡಿ ಬೇಡ.
ಕಂಡೆವೆಂದು ಉಲಿಯ ಬೇಡ, ಉಣ್ಣೆವೆಂದು ಸುಮ್ಮನಿರಬೇಡ,
ಬಂಡುಮಾಡಿ ಕೊಳಬೇಡ, ಚಂಡವಿಕ್ರಮ
ಬಸವ ಪ್ರಿಯ ಕೂಡಲ ಚೆನ್ನ ಬಸವಣ್ಣ.

'ಕಳಬೇಡ, ಕೊಲ್ಲಬೇಡ, ಹುಸಿಯ ನುಡಿಯಲು ಬೇಡ, ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ. ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲಸಂಗಮದೇವರ ಒಲಿಸುವ ಪರಿ' ಎಂದು ಮನಕ್ಕೆ ಬಸವಣ್ಣನವರು ಸಪ್ತ ಸೂತ್ರಗಳನ್ನು ಭೋದಿಸಿದರು. ಹಾಗೆಯೇ ಅಪ್ಪಣ್ಣ ಶರಣರು ಮನಕ್ಕೆ ಮೇಲಿನಂತೆ ಸಪ್ತ ಸೂತ್ರಗಳನ್ನು ಭೋದಿಸಿದ್ದಾರೆ.

ಎಲೆ ಮನವೆ ನೀನು ಸಾಮಾನ್ಯನಲ್ಲ; ಅಸಾಮಾನ್ಯ. ಚಂಡವಿಕ್ರಮನೂ ಹೌದು. ಬಸವಣ್ಣನಿಗೆ ಪ್ರಿಯನಾದ ಕೂಡಲಚೆನ್ನಬಸವಣ್ಣನನ್ನು ಕೂಡಿ ಆತನೊಂದಿಗೆ ಸಂಗಮವಾಗಬೇಕಾದರೆ ಸಪ್ತ ಸೂತ್ರಗಳನ್ನು ಪಾಲಿಸು. ಧನ್ಯನಾಗುವಿ!

126

ತೀರ್ಥಯಾತ್ರ, ಲಿಂಗದರುಶನಕ್ಕೆ ಹೋಗಿ,
ಕರ್ಮವ ಹಿಂಗಿಸಿಕೊಂಡೆನೆಂಬ ಭಂಗಿತರ ಮಾತ ಕೇಳಲಾಗದು.
ಅದೇನು ಕಾರಣವೆಂದರೆ,
ತೀರ್ಥವಾವುದು, ಯಾತ್ರೆ ಯಾವುದು, ಲಿಂಗವಾವುದು, ಬಲ್ಲರೆ ನೀವು ಹೇಳಿರಿ,
ಮಹಾಘನ ಗುರುಪಾದ ತೀರ್ಥದಿಂದ ವೆಗ್ಗಳ ತೀರ್ಥ ಉಂಟೆ?
ಜಗತ್ಪಾವನ ಜಂಗಮ ದರುಶನದಿಂದ ಬೇರೆ ಯಾತ್ರೆ ಉಂಟೆ?
ಇಂಗಿತವನರಿದ ಬಳಿಕ ತನ್ನ ಅಂಗದ ಮೇಲಿರ್ಪ ಲಿಂಗವಲ್ಲದೆ ಬೇರೆ ಲಿಂಗ ಉಂಟೆ?
ಇದನರಿಯದೆ ಇನ್ನು ತೀರ್ಥಯಾತ್ರೆ, ಲಿಂಗದರುಶನ ಉಂಟೆಂಬ
ಅಂಗಹೀನರ ಮುಖವ ನೋಡಲಾಗದು,
ಬಸವ ಪ್ರಿಯ ಕೂಡಲಚೆನ್ನ ಬಸವಣ್ಣ.

ಲಿಂಗದರುಶನಕ್ಕೆಂದು ತೀರ್ಥ ಯಾತ್ರಗೆ ಹೋದರೆ ಮಾಡಿದ ಕರ್ಮಗಳು ಕಳೆಯುವುದಿಲ್ಲ.

ತೀರ್ಥ ಎಂದರೆ ಯಾವುದು, ಯಾತ್ರೆ ಎಂದರೆ ಯಾವುದು, ಲಿಂಗ ಎಂದರೆ ಯಾವುದು ಎಂದು ಶರಣರಿಂದ ತಿಳಿದುಕೊಂಡರೆ ಮಾತ್ರ ಮಾಡಿದ ಕರ್ಮಗಳೆಲ್ಲ ಕೂಡಲೆ ಕಳೆಯುವವು.

ಅಂಗದಲ್ಲಿ ಅರಿವು ಸಂಗಮವಾಗಿದೆ. ಆ ಅರಿವೇ ಗುರು. ಆ ಗುರುದೇವನ ವಾಣಿಯೇ ತೀರ್ಥ. ಅಂಗದಲ್ಲಿ ಸಂಗಮವಾದ ಅರಿವೇ ಲಿಂಗ. ಅರಿವೆಂಬ ಗುರುದೇವನ ವಾಣಿಯ ಆದೇಶ ಪಾಲಿಸುವವನೆ ಜಂಗಮ. ಈತ ಕೂಡ ಅಂಗದಲ್ಲಿಯೇ ಸಂಗಮವಾಗಿದ್ದಾನೆ. ಹೀಗೆ ಮನ ಶ್ರೀಗುರುವಿನಿಂದ ಉಪದೇಶ ಪಡೆದು ಅಂಗದಲ್ಲಿ ಸಂಗಮವಾದ ಲಿಂಗ ದರುಶನಕ್ಕೆ ಯಾತ್ರೆ ಮಾಡಬೇಕು. ಈ ಯಾತ್ರೆ ಸಫಲವಾದ ಮೇಲೆ ಗುರುದರ್ಶನವಾಗುವುದು. ಆತನ ಸೇವೆ ಮಾಡಿ ಪಾದತೀರ್ಥ ಸೇವಿಸಬೇಕು, ನಂತರ ಜಂಗಮನ ದರುಶನಕ್ಕಾಗಿ ಪುನಃ ಮನ ಅಂಗದಲ್ಲಿಯೇ ಯಾತ್ರೆ ಮಾಡಬೇಕು.

ತೀರ್ಥಯಾತ್ರೆ, ಲಿಂಗದರುಶನ, ಗುರುಪಾದ ತೀರ್ಥ, ಜಂಗಮದರುಶನವೆಂದರೇನೆಂದು ಮನಕ್ಕೆ ತಿಳಿಯುತ್ತದೆ. ಆಗ ಮನವೇ ಘನಮನವಾಗುತ್ತದೆ. ಅಂಗವೇ ಲಿಂಗಾಂಗವಾಗುತ್ತದೆ. ಆ ಅಂಗದಲ್ಲಿಯೇ ಗುರು ಲಿಂಗ ಜಂಗಮರು ಕಾಣುತ್ತಾರೆ. ಅಂಗ ಅವರ ಸ್ವಾಧೀನವಾಗುತ್ತದೆ. ಅನುಭವ ಮಂಟಪವಾಗುತ್ತದೆ. ಕಲ್ಯಾಣ ಕ್ಷೇತ್ರವಾಗುತ್ತದೆ.

127

ದಾಸಿಯ ಸಂಗ ಎರಡನೆಯ ಪಾತಕ,
ವೇಶಿಯ ಸಂಗ ಮೂರನೆಯ ಪಾತಕ.
ಮೀಸಲಳಿದ ಪರಸ್ತ್ರೀಯರ ಸಂಗ ಪಂಚಮಹಾಪಾತಕ.
ಇನಿಸು ಶಿವಭಕ್ತರಿಗೆ ಸಲ್ಲವು.
ಇವನರಿದರಿದು ಮಾಡಿದನಾದರೆ,
ಯಮ ಪಟ್ಟಣವೆ ವಾಸವಾಗಿಪ್ಪರಲ್ಲದೆ,
ಈ ದೇಶಕ್ಕೆ ಮರಳಿ ಬರಲಿಲ್ಲ ನೋಡಾ,
ಬಸವ ಪ್ರಿಯ ಕೂಡಲ ಚೆನ್ನಬಸವಣ್ಣ.

ಮನ ಬೆಳಕಿನಿಂದ ಹುಟ್ಟಿದ ಕತ್ತಲು. ಅರಿವೆಂಬ ಬೆಳಕನ್ನೇ ತನ್ನ ಗರ್ಭದಲ್ಲಿಟ್ಟುಕೊಂಡು ತಾನು ವಾಸ ಮಾಡಿದ ಅಂಗದೊಂದಿಗೆ ದಾಸಿಯ ಸಂಗ ಮಾಡುತ್ತದೆ. ವೇಶಿಯ ಸಂಗ ಮಾಡುತ್ತದೆ. ಪರಸ್ತ್ರೀಯರ ಸಂಗ ಮಾಡುತ್ತದೆ.

ಮನ ಸತಿಯಾಗಿದ್ದುಕೊಂಡು, ತಾನು ಕೂಡಾ ಒಂದು ಸ್ತ್ರೀ ಎಂದು ತಿಳಿಯದೆ ಪರಸ್ತ್ರೀಯರ ಸಂಗಮಾಡಿ ಪಂಚಮಹಾಪಾತಕಕ್ಕೆ ಗುರಿಯಾಗುತ್ತದೆ. ಗುರುದ್ರೋಹ, ಲಿಂಗದ್ರೋಹ, ಜಂಗಮದ್ರೋಹ, ಆಚಾರದ್ರೋಹ, ಪ್ರಸಾದದ್ರೋಹವೆಂಬ ಪಂಚ ಮಹಾಪಾತಕವನ್ನು ಎಸಗುತ್ತದೆ.

ಅಂಗದಲ್ಲಿ ಗುರುಲಿಂಗ ಜಂಗಮ ಸಂಗಮವಾಗಿದ್ದಾರೆ. ಮನ ಇವರು ನುಡಿದು ಹೇಳುವ ಆಚಾರವನ್ನು ಪಾಲಿಸಿದರೆ ಅಜ್ಞಾನದ ಹೊರನೋಟವೆಲ್ಲ ಮನಕ್ಕೆ ಪ್ರಸಾದವಾಗುತ್ತದೆ. ಇದನ್ನು

ಅರಿಯದಿದ್ದರೆ ಮನಕ್ಕೆ ಪಂಚಮಹಾಪಾತಕ ಕಟ್ಟಿಟ್ಟ ಬುತ್ತಿ.

ಶ್ರೀ ಗುರುವಿನಿಂದ ಇದೆಲ್ಲವನರಿದರಿದು ಮಾಡಿದನಾದರೆ ಯಮನ ಪಟ್ಟಣವೆ ಗತಿ. ಕಾಯ ಕೈಲಾಸವನರಿಯದು. ಕಾಯವೇ ಕೈಲಾಸವೆಂದು ಕಾಯಕ್ಕೆ ಆವರಿಸಿದ ಮನ ತಿಳಿಯದೆ ಕೈಲಾಸದಂತಿರುವ ಕಾಯವನ್ನೇ ಯಮನ ಪಟ್ಟಣಕ್ಕೆ ಅಟ್ಟುವುದು.

128

ದಿನದಿನಕ್ಕೆ ದೀನಮಾನವನಂತೆ, ಹೀನಾಶ್ರಯದಲ್ಲಿ ಹುಟ್ಟಿ,
ಏನನೂ ಅರಿಯದೆ, ಜ್ಞಾನವು ಇಲ್ಲದೆ,
ನಾನು ನೀನೆಂಬ ಉಭಯವು ಅಳಿಯದೆ,
ನಾನು ಭಕ್ತ, ನಾನು ಜಂಗಮವೆಂಬವರ ನೋಡಿ, ನಾಚಿತ್ತೆನ್ನ ಮನವು.
ಅಂಗಕ್ಕೆ ಆಚಾರವಿಲ್ಲ, ಮನಸ್ಸಿಂಗೆ ಅರುಹಿಲ್ಲ, ಪ್ರಾಣಕ್ಕೆ ಗೊತ್ತು ಇಲ್ಲ.
ಭಾವಕ್ಕೆ ಹೇಯವಿಲ್ಲದೆ ಇನ್ನಾವ ಬಗೆಯಲ್ಲಿ ಭಕ್ತ ಜಂಗಮವಾದಿರೆ ಹೇಳಿರಣ್ಣಾ?
ಭಕ್ತನಾದರೆ ಎಂತಿರಬೇಕೆಂದರೆ,
ಮಾಡಿಹೆನೆಂಬುದು ಮನದೊಳಗೆ ಹೊಳೆಯದೆ, ನೀಡಿಹೆನೆಂಬ ಅರಿಕೆ ಇಲ್ಲದೆ,
ಬೇಡುವುದಕ್ಕೆ ಮುನ್ನವೆ ಆ ಜಂಗಮದ ನಿಲುಕಡೆಯನರಿದು ಮಾಡಬಲ್ಲರೆ ಭಕ್ತ.
ಮಾಡಿದ ಭಕ್ತಿಯ ಕೈ ಕೊಂಡು,
ಆ ಭಕ್ತನ ಕರಸ್ಥಲಕ್ಕೆ ಲಿಂಗವಾಗಿ, ಮನಸ್ಥಲಕ್ಕೆ ಅರಿವಾಗಿ,
ಭಾವಸ್ಥಲಕ್ಕೆ ಜಂಗಮವಾಗಿ ಅಡಗಿದಡೆ,
ಐಕ್ಯನೆಂಬೆ, ಜಂಗಮವೆಂಬೆ, ಲಿಂಗವೆಂಬೆ, ಗುರುವೆಂಬೆ.
ಆ ಭಕ್ತ ಜಂಗಮ ಎರಡಕ್ಕೂ ಫಲಂ ನಾಸ್ತಿ, ಪದಂನಾಸ್ತಿ, ಭವಂ ನಾಸ್ತಿ.
ಆ ನಿಲುವಿಂಗೆ ನಮೋ ನಮೋ ಎಂದು ಬದುಕಿದೆ,
ನೀವು ಸಾಕ್ಷಿಯಾಗಿ, ಬಸವಪ್ರಿಯ ಕೂಡಲ ಚೆನ್ನ ಬಸವಣ್ಣ.

ವಚನದ ಸಾಲು ಸಾಲುಗಳಲ್ಲಿ ಅಪ್ಪಣ್ಣ ಶರಣರು ಜ್ಞಾನದ ತಂತ್ರಗಾರಿಕೆಯನ್ನು ತುಂಬಿದ್ದಾರೆ. ದಿನ ದಿನಕ್ಕೆ ಮಾನವ ಮಹಾ ಮಾನವನಾಗಬೇಕು, ಏಕೆಂದರೆ ತನುವಿನಲ್ಲಿ ಮಹಾಜ್ಞಾನವೇ ಭರಿತವಾಗಿದೆ. ಅದನ್ನು ತನು ಬಳಸುವ ತಂತ್ರಗಾರಿಕೆಯ ಮನವನ್ನೂ ಹೊಂದಿದೆ. ಆದರೆ ಮನ ತನ್ನ ಕ್ಷಣಿಕ ಸುಖಕ್ಕಾಗಿ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರದಲ್ಲಿ ಸಪ್ತ ವ್ಯಸನದಲ್ಲಿ ಅಷ್ಟ ಮದಗಳಲ್ಲಿ ತನುವಿನ ಜೊತೆಗೆ ತನ್ನನ್ನು ತೊಡಗಿಸಿಕೊಂಡಿದೆ. ಅದು ಮನಕ್ಕೆ ಸುಖವೆನ್ನಿಸುತ್ತದೆ; ಅದನ್ನು ಹುಡುಕಲು ಹೋಗಿ ದುಃಖದ ಮಡುವಿನಲ್ಲಿ ಬೀಳುತ್ತದೆ. ನಾನು ಭಕ್ತ ನೀನು ಜಂಗಮ ಎಂಬ ಭೇದವನ್ನು ಸೃಷ್ಟಿ ಮಾಡಿದೆ.

ಅಂಗ ಆಚಾರವನ್ನು , ಮನ ಅರುಹನ್ನು , ಪ್ರಾಣ ತನ್ನ ಗೊತ್ತು ಗುರಿಯನ್ನು ಸಂಪೂರ್ಣ ಮರೆತು ಹೋಗಿದೆ. ಮನದಿಂದಲೇ ಹುಟ್ಟಿದ ಭಾವ ಒಮ್ಮೆ ಭಾವ ಮತ್ತೊಮ್ಮೆ ದುರ್ಭಾವ ಹೊಂದಿ ತನುವನ್ನು ವಿಕಾಸದ ರಸಾಯನಕ್ಕೆ ಒಳಗೆ ಮಾಡಿದೆ.

ತನು ಪ್ರೌಢತ್ವಕ್ಕೆ ಬಂದ ಮೇಲೆ ಮನ ತನ್ನನ್ನು ತಾನು ತಿಳಿಯುವುದಕ್ಕೆ ಕಾತುರನಾಗಬೇಕು. ತನುವಿನಲ್ಲಿ ಭವಿ ಭಕ್ತ ಜಂಗಮ ಗುರು ಎಂದು ವಿಭಾಗಿಸಲು ಬರುವುದಿಲ್ಲ. ಭವಿ ಭಕ್ತ ಗುರು

ಲಿಂಗ ಜಂಗಮರನ್ನು ವೇಷದ ಮೂಲಕ ಗುರುತಿಸುವುದು ಮೂರ್ಖತನವೆಂದು ಮನಕ್ಕೆ ಹೊಳೆಯಬೇಕು. ತನು ಮತ್ತೊಂದು ತನುವಿಗೆ ಮಾಡಿಹೆನೆಂಬುದು ಮನದೊಳಗೆ ಹೊಳೆಯಬಾರದು. ನೀಡುವೆ, ಬೇಡುವೆನೆಂಬುದು ಹೊಳೆಯಬಾರದು.

ಅರಿವಿನಿಂದ ನೋಡಿದರೆ ತನು ಮತ್ತೊಂದು ತನುವಿಗೆ ನೀಡಲು ಬೇಡಲು ಮಾಡಲು ಬರುವುದಿಲ್ಲ. ಏಕೆಂದರೆ ತನುವಿನ ಪ್ರೊಡೆಕ್ಟ್ ಈ ಭೂಮಿಯ ಮೇಲೆ ಯಾವುದೂ ಇಲ್ಲ. ಆದರೂ ಅಜ್ಞಾನದಿಂದಾಗಿ ಭೂಮಿಯಲ್ಲಿ ಬೆಳೆದ ಬೆಳೆ ಚಿನ್ನವನ್ನು ತನ್ನದೆಂದು ತಿಳಿದು ನೀಡುತ್ತದೆ; ಬೇಡುತ್ತದೆ. ಅರಿವಿನಿಂದ ಅರಿತರೆ ನೀಡಿಹೆನೆಂಬ ಅರಿಕೆ ಇಲ್ಲ. ಬೇಡುವುದಕ್ಕೆ ಮೊದಲೆ ತನುವಿನ ಬಯಕೆಯನರಿತು ನೀಡುವುದೆ ಸಹಜಜ್ಞಾನ.

ಈ ಸಹಜ ಜ್ಞಾನಿಯನ್ನು ಶರಣರು ಭಕ್ತ ಎಂದು ಕರೆದಿದ್ದಾರೆ. ಈತನ ಅಂಗವೇ ಲಿಂಗ. ಮನವೇ ಅರಿವು. ಭಾವವೇ ಜಂಗಮ. ಈತನನ್ನು ಐಕ್ಯನೆಂದು, ಜಂಗಮವೆಂದು ಲಿಂಗವೆಂದು, ಗುರುವೆಂದು ಕರೆಯಬೇಕು. ಏಕೆಂದರೆ ಈತ ಫಲ ಪದಗಳ ಆಸೆಯಿಂದ ನೀಡುವ ಮಾಡುವ ಬೇಡುವ ಕಾಯಕದಲ್ಲಿ ತೊಡಗುವುದಿಲ್ಲ. ಈತನ ಕಾಯವೇ ಕೈಲಾಸ; ಅನುಭವ ಮಂಟಪ. ಫಲ ಪದ ನಾಸ್ತಿ, ಜನನ ಮರಣಗಳೂ ನಾಸ್ತಿ! ಇಂತಹ ನಿಲುವಿನ ಅರಿವಿನ ಕಾಯಕ್ಕೆ ನಮೋ ನಮೋ ಎಂದು ಸಕಲ ಕಾಯಗಳೂ ಬದುಕಬೇಕು. ಏಕೆಂದರೆ ಬಸವ ಪ್ರಿಯ ಕೂಡಲ ಚೆನ್ನಬಸವಣ್ಣನ ಸಾಕ್ಷಿಯಾಗಿ ಈ ಕಾಯ ಮಹಾ ಜ್ಞಾನಕಾಯ. ಸಕಲ ಕಾಯಗಳಿಗೂ ಕಾಯದಲ್ಲಿಯೇ ಕೈಲಾಸವನು ತೋರಿಸುವ ಮಹಾಕಾಯ!

129

ದಿವ್ಯಾನಂದ ಗುರುವೆ, ದೇದೀಪ್ಯಮಯ ಗುರುವೆ,
ಆನಂದ ಪ್ರಸಾದಮಯ ಗುರುವೆ, ದೀಕ್ಷಾನಂದ ಗುರುವೆ,
ಶಿಕ್ಷಾ ಸಾಮರ್ಥ್ಯ ಗುರುವೆ, ಮೋಕ್ಷ ಸಾಧನ ಗುರುವೆ,
ಈಕ್ಷಿಸಿದಕ್ಷಿಯಲ್ಲಿ ನಿಕ್ಷೇಪಿಸಿದ ಗುರುವೆ, ಅವಧಾನಿ ಗುರುವೆ,
ಆನಂದ ಪ್ರಸಾದ ಮಯ ಗುರುವೆ, ಪರಂಜ್ಯೋತಿ
ಬಸವ ಪ್ರಿಯ ಕೂಡಲ ಸಂಗಮದೇವ ಪ್ರಭುವೆ.

ಅಂಗದಲ್ಲಿಯೇ ಪ್ರತ್ಯಕ್ಷವಾದ ಅರಿವೆಂಬ ಗುರುದೇವನನ್ನು ಕುರಿತು ಅಪ್ಪಣ್ಣ ಶರಣರು ದಿವ್ಯ ಆನಂದ ಗುರುವೆ, ದೇದೀಪ್ಯಮಯ ಗುರುವೆ, ಆನಂದ ಪ್ರಸಾದಮಯ ಗುರುವೇ ಎಂದು ಸಂತೋಷದಿಂದ ಬಣ್ಣಿಸಿದ್ದಾರೆ.

ದೀಕ್ಷಾನಂದ ಗುರುವೆ, ಶಿಕ್ಷಾ ಸಾಮರ್ಥ್ಯ ಗುರುವೆ, ಮೋಕ್ಷ ಸಾಧನ ಗುರುವೆ, ಈಕ್ಷಿಸಿದ ಅಕ್ಷಿಯಲ್ಲಿ ನಿಕ್ಷೇಪಿಸಿದ ಗುರುವೆ, ಅವಧಾನಿ ಗುರುವೆ, ಆನಂದ ಪ್ರಸಾದಮಯ ಗುರುವೆ, ಪರಂಜ್ಯೋತಿ ಬಸವ ಪ್ರಿಯ ಕೂಡಲ ಸಂಗಮ ದೇವ ಪ್ರಭುವೆ.

ಗುರುದೇವ ವಿರಾಟ ಸ್ವರೂಪಿ. ಆತ ಜಗದಗಲ ಮುಗಿಲಗಲ. ಬಣ್ಣನೆಗೆ ನಿಲುಕದ ಅಗಮ್ಯ ; ಅಗೋಚರ; ಅಪ್ರಮಾಣ; ಅಪ್ರತಿಮವಾದಾತನೇ ಅಂಗದಲ್ಲಿ ಬಂದು ಚುಳುಕಾಗಿ ಲಿಂಗವಾದಾಗ ಆತನನ್ನು ಏನೆಂದು ಬಣ್ಣಿಸುವುದು. ಪರಂಜ್ಯೋತಿಯನ್ನು ಏನೆಂದು ಬಣ್ಣಿಸುವುದು ಜ್ಯೋತಿಯನ್ನು

ಬಣ್ಣಿಸಬೇಕೆ, ಅದರ ಬೆಳಕನ್ನು ಬಣ್ಣಿಸಬೇಕೆ? ಇವೆರಡೂ ಹೊತ್ತ ಅಂಗವನ್ನು ಬಣ್ಣಿಸಬೇಕೆ?

ಅಂಗಗಳನ್ನು ಅಂಗಗಳೆಂದು ಕರೆಯಲು ಬಾರದಂತೆ ಸರ್ವಾಂಗಗಳು ಲಿಂಗಗಳಾಗಿಯೇ ಗೋಚರಿಸುತ್ತವೆ. ಅಂಗದಲ್ಲಿ ಅರಿವು ಬೇರಾಗದಂತೆ ಕೂಡಿದೆ. ಸಂಗಮವಾಗಿದೆ. ಸಾಕ್ಷಾತ್ ಬಸವ ಪ್ರಿಯ ಕೂಡಲ ಸಂಗಮದೇವ ಪ್ರಭುವೇ ಆಗಿದ್ದಾನೆ. ಆ ದಿವ್ಯಾನಂದದ ದೇದೀಪ್ಯಮಯ ಗುರುದೇವನನ್ನು ಕಂಡು ಅಪ್ಪಣ್ಣ ಶರಣರು ಮಾತಲ್ಲದ ಮಾತಿನಿಂದ ಬಣ್ಣಿಸಿದ್ದಾರೆ.

130

ದೀಕ್ಷಾಗುರು, ಶಿಕ್ಷಾಗುರು,ಮೋಕ್ಷಗುರುವೆಂದು ಹೆಸರಿಟ್ಟುಕೊಂಡು ನುಡಿವಿರಿ,
ದೀಕ್ಷಾಗುರುವಾದಡೆ, ಮಲತ್ರಯಂಗಳ ತಾ ಮುಟ್ಟದೆ,
ಆ ಶಿಷ್ಯನ ತಟ್ಟಲೀಯದೆ, ಅಂಗಕ್ಕೆ ಆಚಾರವನಳವಡಿಸಿಕೊಟ್ಟು,
ಪ್ರಾಣಕ್ಕೆ ಅರಿವ ತೋರಿ ಪ್ರಸಾದಕಾಯವ ಮಾಡಿದರೆ,
ಆತನೇ ದೀಕ್ಷಾ ಗುರುವೆಂಬೆ.
ಶಿಕ್ಷಾ ಗುರುವಾದಾತ ಶೂರಧೀರನಾಗಿ ಪಟುಭಟನಾಗಿ,
ಪರಸಮಯಕ್ಕೆ ಪರಂಜ್ಯೋತಿಯಂತಾಗಿ,
ಅರಗಳಿಗೆ ಅರ್ಭಟಿಸುವ ಸಿಂಹದಂತಾಗಿ,
ತನ್ನ ಸ್ವಯಂಮಕ್ಕೆ ಸ್ವಯಂಜ್ಯೋತಿಯಂತೆ ಇರಬಲ್ಲರೆ,
ಶಿಕ್ಷಾ ಗುರುವೆಂಬೆ. ಮೋಕ್ಷ ಗುರುವೆಂತಿರ ಬೇಕೆಂದಡೆ,
ತನ್ನ ನಂಬಿದ ಸಜ್ಜನ ಭಕ್ತರ, ವಿರಕ್ತರ ತನ್ನಂತೆ ಮಾಡಿಕೊಂಬುದು.
ಅವರ ತನುತ್ರಯ, ಮನತ್ರಯ, ಧನ ತ್ರಯದ ನೆಲೆಯನರುಹಿ,
ಇಂತೀ ತ್ರಿವಿಧವನು ತ್ರಿವಿಧಕ್ಕೆ ಮುಖವ ಮಾಡಿ,
ತ್ರಿವಿಧದಲ್ಲಿ ತಾನಡಗಿ, ತನ್ನೊಳಗವರಡಗಿದಡೆ ಮೋಕ್ಷಾಗುರುವೆಂಬೆ.
ಇಂತಾದರೆ ತ್ರಿವಿಧವು ಒಂದಂಗ. ಇಂತೀ ಸ್ಥಲದ ನಿರ್ಣಯವನರಿಯದಿದ್ದರೆ
ಆ ಮೂವರನು ಮುಂದುಗೆಡಿಸಿ ಮೂಗ ಕೊಯ್ದು,
ಇಟ್ಟಿಗೆಯಲದ್ದಿ, ದರ್ಪಣವ ತೋರಿ,
ಅವರ ದರ್ಪವ ಕೆಡಿಸುವನಲ್ಲದೆ ಅವರ ಮೆರೆವನಲ್ಲ,
ನಮ್ಮ ಬಸವಪ್ರಿಯ ಕೂಡಲಚೆನ್ನ ಬಸವಣ್ಣ.

ಅಪ್ಪಣ್ಣ ಶರಣರು ತಮ್ಮ ಈ ವಚನದಲ್ಲಿ ದೀಕ್ಷಾಗುರು. ಶಿಕ್ಷಾ ಗುರು, ಮೋಕ್ಷ ಗುರುಗಳು ಹೇಗಿರಬೇಕೆಂದು ವಿವರಿಸಿದ್ದಾರೆ. ತಂತ್ರಗಾರಿಕೆಯನ್ನು ಪರೀಕ್ಷಿಸಿ ಅವರಿಂದ ದೀಕ್ಷೆ ಪಡೆಯುವ ನಿರ್ಧಾರ ಮಾಡಬಹುದಾಗಿದೆ.

ದೀಕ್ಷಾ ಗುರು : ಮಲತ್ರಯಗಳನ್ನು ತಾ ಮುಟ್ಟದೆ ಆತನ ಶಿಷ್ಯನಿಗೆ ತಟ್ಟಲೀಯದೆ ಆಚಾರವನು ಹೇಳಿ, ಪ್ರಾಣಕ್ಕೆ ಅರಿವು ತೋರಿ ಪ್ರಸಾದ ಕಾಯವನು ಮಾಡಿದಾತನೆ ದೀಕ್ಷಾ ಗುರು. **ಆಣವ ಮಲ:** ತಂದೆಯ ಗರ್ಭದಿಂದ ಬಂದ ವೀರ್ಯಾಣು. **ಮಾಯಾಮಲ:** ತಾಯಿಯ ಗರ್ಭದಿಂದ ಬಂದ ಅಂಡಾಣು.

ಕಾರ್ಮಿಕ ಮಲ: ಇವೆರಡರ ಸಂಯೋಗದಿಂದ ಸಿದ್ಧವಾದ ನಾನು ಎನ್ನುವ ಕರ್ಮಫಲ.

ಇವು ಮೂರೂ ಮಲತ್ರಯಗಳು. ಹುಟ್ಟಿದಂದಿನಿಂದ ಸಾಯುವ ಪರ್ಯಂತ ಹುಟ್ಟಿನೊಂದಿಗೆ ಬಂದ ಕರ್ಮಫಲ. ಈ ಅಜ್ಞಾನವನ್ನು ಸಮರ್ಥ ದೀಕ್ಷಾಗುರು ಮಾತ್ರ ಹೇಳಿಕೊಡಬಲ್ಲ. ಆತ ಈ ದುರ್ಗಮವಾದ ದಾರಿಯನ್ನು ಕಂಡುಕೊಂಡ ಅನುಪಮ ಬಯಕೆಯುಳ್ಳ ಭೇದಿಸಬಲ್ಲ ಸಮರ್ಥ ಶಿಷ್ಯನಿಗೆ ಮಾತ್ರ ಹೇಳಿಕೊಡುತ್ತಾನೆ. ಆಗ ಶಿಷ್ಯನ ಮಾಂಸಮಯ ಪಿಂಡ ಮಂತ್ರಮಯ ಕಾಯವಾಗುತ್ತದೆ; ಪ್ರಸಾದ ಕಾಯವಾಗುತ್ತದೆ.

ಪ್ರಸಾದಕಾಯ: ನೋಡುವ ನೋಟದಲ್ಲಿ ಅಜ್ಞಾನ ಸುಳಿಯುವುದಿಲ್ಲ, ಕೇಳುವ ಕಿವಿಯಲ್ಲಿ ಅಜ್ಞಾನ ಸುಳಿಯುವುದಿಲ್ಲ, ಮುಟ್ಟುವ ಚರ್ಮದಲ್ಲಿ , ರುಚಿಸುವ ನಾಲಗೆಯಲ್ಲಿ, ಮೂಸಿಸುವ ಮೂಗಿನಲ್ಲಿ ಅಜ್ಞಾನ ಸುಳಿಯುವುದಿಲ್ಲ. ಹೊರಗಿನಿಂದ ಬಡಿಯುವ ಅಜ್ಞಾನ, ಕಾಯದಲ್ಲಿ ಪ್ರಸಾದವಾಗಿ ಕಾಯವೇ ಪ್ರಸಾದ ಕಾಯವಾಗುತ್ತದೆ.

ಶಿಕ್ಷಾ ಗುರು: ತನುವಿಗೆ ಬಂದ ಆಪತ್ಕಾಲವನ್ನು ಕೂಡಲೆ ಭೇದಿಸಿ ಪರಂಜ್ಯೋತಿಯಂತೆ ಬೆಳಗಿ, ಸಿಂಹದಂತೆ ಘರ್ಜಿಸಿ, ಕಾಯದ ಕತ್ತಲೆಯನ್ನು ಕಾಯದ ಜ್ಞಾನದ ಬೆಳಗಿನಿಂದ ಬೆಳಗಿ ಸದಾ ಆ ಬೆಳಗಿನಲ್ಲಿ ಇರಬಲ್ಲಾತನೆ ಶಿಕ್ಷಾಗುರು! ಶಿಷ್ಯನಿಗೆ ಈ ರಹಸ್ಯವನ್ನು ಸಮರ್ಥವಾಗಿ ಹೇಳಿ ತನ್ನಂತೆ ಬೆಳಗಿಸಿಕೊಳ್ಳುವ ಉಪದೇಶ ನೀಡುತ್ತಾನೆ.

ಮೋಕ್ಷ ಗುರು: ತನ್ನ ನಂಬಿದ ಸಜ್ಜನ ಭಕ್ತರನ್ನು, ವಿರಕ್ತರನ್ನು ತನ್ನಂತೆ ಮಾಡಿಕೊಳ್ಳುತ್ತಾನೆ. ಅವರ ತನುವಿನಲ್ಲಿರುವ ತನು ಗುಣಾದಿಗಳನ್ನು, ಮನದಲ್ಲಿರುವ ಮನ ಗುಣಾದಿಗಳನ್ನು, ಅವರ ತನುವಿನಲ್ಲಿಯೇ ತನ್ಮಯವಾಗಿರುವ ಅರಿವೆಂಬ ಗುರುದೇವನನ್ನು ಅವರಿಗೇ ಅರಿಕೆ ಮಾಡಿಸುತ್ತಾನೆ. ಅವರಲ್ಲಿರುವ ತನ್ನಲ್ಲಿರುವ ಅರಿವಿನ ವಸ್ತು ಒಂದೇ ಎಂದು ಪರಿಚಯಿಸಿ, ಆ ವಸ್ತುವಿನಲ್ಲಿ ಅವರನ್ನಡಗಿಸಿ, ಅದರಲ್ಲಿ ತಾನಡಗುತ್ತಾನೆ.

ಬಯಲು ಬೀಜ ಹಿಡಿದು ಆ ಬಯಲನೇ ಬಿತ್ತಿ, ಬಯಲನ್ನೇ ಬೆಳೆದು, ಆ ಬಯಲಲ್ಲಿಯೇ ಲೀನವಾಗುವ ಅದ್ಭುತವಾದ ಬಯಲ ಬೆಳಕಿನ ಜೀವನವನ್ನು ದರ್ಶಿಸಿ ಆ ಬಯಲ ಬೆಳಕಿನಲ್ಲಿ ಬೆಳಗಿ, ಬೆಳಗಿಂಗೆ ಬೆಳಕಾಗುವುದನ್ನು ಬೆಳಕಿನಿಂದ ಪರಿಚಯಿಸುತ್ತಾನೆ.

ಇಂತಾದರೆ ತ್ರಿವಿಧವು ಒಂದಂಗ! ದೀಕ್ಷಾ ಗುರು, ಶಿಕ್ಷಾಗುರು, ಮೋಕ್ಷ ಗುರುವೆಂದು ಕರೆಯಬಹುದು. ಇಂತೀ ಸ್ಥಲದ ನಿರ್ಣಯವನರಿಯದಿದ್ದರೆ ಆ ಮೂವರನು ಮುಂದುಗೆಡಿಸಿ ಮೂಗು ಕೊಯ್ದು, ಇಟ್ಟಿಗೆಯಲಿ ಅದ್ದಿ ದರ್ಪಣವ ತೋರಿ, ಅವರ ಸರ್ಪವ ಕಡಿಸುವನಲ್ಲದೆ ಅವರ ಮರೆವನಲ್ಲ ಎಂದು ಅಪ್ಪಣ್ಣ ಶರಣರು ಆದೇಶ ಹೊರಡಿಸಿ ಅಪ್ಪಣೆ ಮಾಡಿದ್ದಾರೆ.

131

ಧರೆಯ ಹೊತ್ತಿರ್ಪ ಸರ್ಪ ಹರಿಯಿತ್ತಾಕಾಶಕ್ಕೆ.
ನೆರೆದ ಜನವೆಲ್ಲಾ ಹೆದರಿ ನೆರೆಯಿತ್ತು ನೀರಲ್ಲಿ.
ಧರೆ ಜಲ ಅಗ್ನಿಯೊಳು ಬೆರೆದು ಬೆಂದು ಉರಿದವು.
ಹರನ ಮಂಥಣಿಯ ಶೂಲವನೇರಿ, ಸರ್ಪನನಡಗಿಸಿ,
ಉರಿಯ ಉಗುಳಿದರೆ, ಧರೆಯನುಗುಳಿಸಿತ್ತು ,
ಬಸವ ಪ್ರಿಯ ಕೂಡಲ ಸಂಗಮದೇವ ಪ್ರಭುವೆ.

ಇದು ಸಂಪೂರ್ಣ ಬೆಡಗು ತುಂಬಿದ ಜ್ಞಾನ ಪ್ರಧಾನ ವಚನ. ಧರೆಯನ್ನು ಸರ್ಪ ಹೊತ್ತಿದೆ. ಸರ್ಪ ಜಲದ ಆಶ್ರಯದಲ್ಲಿ ನಿಂತಿದೆ. ದರೆಯ ಮೇಲೆ ಸಕಲ ಪ್ರಾಣಿ ಪಶು ಪಕ್ಷಿ ಕೀಟ ಗಿಡ ಮರ ಬಳ್ಳಿ ಜಲಚರಗಳು ನಿಂತಿದೆ. ಇದೊಂದು ಪೌರಾಣಿಕ ಕಥೆ. ಆದರೆ ಜ್ಞಾನ ಪ್ರಧಾನವಾದ ಕತೆ. ಆಳವಾಗಿ ಅರಿತು ಸಮಾಧಾನದಿಂದ ನೋಡಿದರೆ ಸಕಲರ ಗಮನಕ್ಕೂ ಬರುತ್ತದೆ. ಯತಾರ್ಥವಾಗಿ ತಿಳಿದರೆ ಇದೊಂದು ಮೌಢ್ಯನಂಬಿಕೆಯ ಕಥೆ.

ಹಾವು ತನ್ನ ಹೆಡೆಯ ಮೇಲೆ ಭೂಮಿಯನ್ನು ಹೊರಲು ಸಾಧ್ಯವೇ? ಇದು ಊಹಿಸಲು ಸಾಧ್ಯವಿಲ್ಲ. ಆದರೆ ಭಾರತೀಯರು ಬಲವಾಗಿ ನಂಬುತ್ತಾರೆ. ಜಲದ ಮೇಲೆ ಹಾವು ತನ್ನ ಐದೆಡೆಯನ್ನು ಎತ್ತಿ ನೆರಳುಮಾಡಿ ಆ ನೆರಳ ಕೆಳಗಡೆ ಹಾವಿನ ಹಾಸಿಗೆಯ ಮೇಲೆ ವಿಷ್ಣು ಮಲಗಿ ವಿರಮಿಸಿದ ಚಿತ್ರವಿದೆ. ಪೌರಾಣಿಕ ಕತೆಯೂ ಇದೆ.

ಹಾವನ್ನೇ ಆಭರಣ ಮಾಡಿಕೊಂಡ ನಾಗಭೂಷಣ-ಶಿವನ ಚಿತ್ರವೂ ಇದೆ. ಕತೆಯೂ ಇದೆ. ಹಿಮಾಲಯವನ್ನೇ ಕಡಗೋಲು ಮಾಡಿ, ಹಾವನ್ನೇ ಹಗ್ಗ ಮಾಡಿ. ಸಮುದ್ರವನ್ನೇ ಕ್ಷೀರ ಮಾಡಿ, ಹೆಡೆಯೆಡೆಗೆ ರಕ್ಕಸರು, ಬಾಲದೆಡೆಗೆ ದೇವತರು ನಿಂತು ಕಡೆಯುವ ಚಿತ್ರವೂ ಇದೆ. ಇದರ ಶ್ರಮದಿಂದಾಗಿ ಸಮುದ್ರ ಉಗುಳಿದ ಅಮೃತ ಹಾಗೂ ವಿಷದ ಚಿತ್ರವೂ ಇದೆ; ಕತೆಯೂ ಇದೆ. ವಿಷವನ್ನು ಶಿವ ಕಂಠದಲ್ಲಿ ಧರಿಸಿ ನೀಲಕಂಠನಾದ ಕತೆಯೂ ಇದೆ.

ನಾಗ ಪಂಚಮಿಯನ್ನು ಭಾರತ ಸಡಗರದಿಂದ ಐದು ದಿನಗಳವರೆಗೆ ನಾಗಕ್ಕೆ ಹಾಲೆರೆದು ಮಹಿಳೆಯರು ಬಾಲೆಯರು ಜೋಕಾಲಿ ಹಾಡಿ ಆಚರಿಸುತ್ತಾರೆ. ಅಂಡದಿಂದ ಹೊರಬಂದ ಉರುಗ ಹಾಲು ಕುಡಿಯುವುದಿಲ್ಲವೆಂದು ಈ ದೇಶದ ಜನಕ್ಕೆ ಗೊತ್ತಿದೆ. ಆದರೂ ಹಾವಿಗೆ ಹಾಲೆರೆಯುತ್ತಾರೆ. ಹಾಲಿನೊಂದಿಗೆ ಪೂಜಿಸುತ್ತಾರೆ.

ಹಾವಿಗೂ ಈ ದೇಶದ ಜನಕ್ಕೂ ಅವಿನಾಭಾವ ಸಂಬಂಧ. ಹೊರ ದೇಶದ ಜನ ಭಾರತವನ್ನು ಹಾವಾಡಿಗರ ದೇಶವೆಂದು ಹೀಯಾಳಿಸುತ್ತಾರೆ. ಅದಕ್ಕೆ ಕಡಿವಾಣ ಹಾಕುವೆ ಅಭಿವೃದ್ದಿಗೊಳಿಸುವೆ ಎಂದು ಈ ದೇಶದ ಪ್ರಧಾನಿ ನರೇಂದ್ರ ಮೋದಿ ಜಪಾನಿಗೆ ಭೇಟಿ ಕೊಟ್ಟಾಗ ಮಾಧ್ಯಮಗಳೊಂದಿಗೆ ಈ ಮಾತು ಹಂಚಿಕೊಂಡಿದ್ದಾರೆ.

ಹಿಂದಿನ ಜನ ಹಾವು ಮತ್ತು ಮನಷ್ಯನನ್ನು ಅರಿವು ಮತ್ತು ಮನಸ್ಸಿಗೆ ಹೋಲಿಸಿದ್ದಾರೆ. ಅಂಗದಲ್ಲಿ ಅರಿವಿನಂತಹ ಅಮೃತವೂ ಇದೆ. ಹಾವಿನಂತಹ ವಿಷವೂ ಇದೆ. ಹಾವಿಗೆ ಅರಿವಿನ ಹಾಲೆರೆದು ಆರೈಸಿದರೆ ಮಾತ್ರ ಮನ ಕಲಕುವುದಿಲ್ಲ. ಹಾವಿನಂತೆ ಹರಿದಾಡುವುದಿಲ್ಲ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ತನುವಿನಿಂದ ಹೊರಚೆಲ್ಲುವುದಿಲ್ಲ. ದೇಹಕ್ಕೆ ಹಿಂಸೆ ಕೊಡುವುದಿಲ್ಲ. ಮನವೆಂಬ ಹಾವಿಗೆ ಅರಿವಿನ ಹಾಲೆರೆದು ಪಳಗಿಸಿ ಅದನ್ನು ಕೊರಳಿಗೆ ಧರಿಸಿದ ಮಹಾಜ್ಞಾನಿಯೇ ನಾಗಭೂಷಣ ಎನ್ನಿಸಿಕೊಂಡ. ಅದರ ವಿಷ ದಶದಿಕ್ಕುಗಳಿಗೆ ಪಸರಿಸದಂತೆ ಕಂಠದಲ್ಲಿ ಧರಿಸಿಕೊಂಡ ಮಹಾಜ್ಞಾನಿಯೇ ನೀಲಕಂಠನೆಂದು ಕರೆಯಿಸಿಕೊಂಡ.

ಮನವೆಂಬ ಹಾವು ಹಿಡಿದು ಅದರ ಐದೆಡೆಯ ನೆರಳಲ್ಲಿ ಮಲಗಿದ ಜ್ಞಾನಿ ವಿಷ್ಣುವೆನ್ನಿಸಿಕೊಂಡ. ಮನದ ವಿಷ ಕಣ್ಣಿನಲ್ಲಿ ಬೆರೆತು ನೋಡದಂತೆ ಮಾಡಿದೆ. ಚರ್ಮದಲ್ಲಿ ಬೆರೆತು ಮುಟ್ಟದಂತೆ ಮಾಡಿದೆ. ನಾಲಗೆಯಲ್ಲಿ ಬೆರೆತು ರುಚಿಸದಂತೆ, ಕಿವಿಯಲ್ಲಿ ಬೆರೆತು ಕೇಳದಂತೆ, ಮೂಗಿನಲ್ಲಿ ಬೆರೆತು ಮೂಸಿಸದಂತೆ ಮಾಡಿದೆ, ಈ ಐದೂ ವಿಧದ ವಿಷ ಉಗುಳುವ ಹಾವಿನ ನೆರಳಲ್ಲಿ ಅರಿವು ನಿಶ್ಚಿಂತವಾಗಿ ಮಲಗಿದೆ. ಮನದ ಭ್ರಮೆ ಕಳೆದು ಕೊಂಡವನೆ ಬ್ರಹ್ಮ. ಹಾವಿನ

ವಿಷದ ಹಲ್ಲು ಕಿತ್ತಿ ಪಳಗಿಸಿ ಕೊರಳಿಗೆ ಆಭರಣದಂತೆ ಧರಿಸಿಕೊಂಡವನೆ ಶಿವ. ಮನದ ಅಜ್ಞಾನ ಅತ್ತಿತ್ತ ಅಲೆಯದಂತೆ ಹಾವನ್ನೇ ಹಾಸಿಗೆ ಮಾಡಿ ಅದರ ಮೇಲೆ ಪವಡಿಸಿದಾತನೆ ವಿಷ್ಣು.

ಈ ಮೂರು ಜನ ದೇಶದ ಮನುಜರಿಗೆಲ್ಲ ಮನವೆಂಬ ಹಾವು ಹಿಡಿದು ಪಳಗಿಸಿ ಹಾವಾಡಿಸುವ ಜ್ಞಾನ ಶಿಕ್ಷಣವನ್ನು ಭೋದಿಸಿದರು. ಕಲಿತವರು ಜ್ಞಾನಿಗಳಾದರು. ಕಲಿಯದವರು ಹಾವ ಪೂಜಿಸಿದರು; ಹಾವಾಡಿಗರಾದರು. ಬ್ರಹ್ಮ ವಿಷ್ಣು ಮಹೇಶ್ವರನ ಚಿತ್ರ ಬರೆದು ಮಂದಿರ ಕಟ್ಟಿದರು. ಹೊಟ್ಟೆ ಹೊರೆಯಲು ಹಾವು ಹಿಡಿದು ಹಾವಾಡಿಗರಾದರು. ಅಂಗದ ಐದು ಜ್ಞಾನೇಂದ್ರಿಯಗಳಲ್ಲಿ ವಾಸಮಾಡಿದ ಐದೆಡೆಯ ಮನವೆಂಬ ಹಾವನ್ನು ಪಳಗಿಸಲರಿಯದೆ ನಾಗ ಪಂಚಮಿಯಂದು ಕಲ್ಲ ನಾಗಕ್ಕೆ ಐದು ದಿನ ಹಾಲನೆರೆದು ಮೌಢ್ಯ ಮೆರೆದರು. ಈ ದೇಶದ ಮಹಾಜ್ಞಾನದ ಬೆಡಗಿನ ಮಾತನರಿಯದ ಪ್ರಧಾನಿ ಹಾವಾಡಿಗರ ದೇಶವನ್ನು ಅಭಿವೃದ್ಧಿ ಪಡಿಸುತ್ತೇನೆಂದು ಜಪಾನಿನಲ್ಲಿ ಜಂಬಕೊಚ್ಚಿಕೊಂಡ.

ಅಂಗವನ್ನು ಆವರಿಸಿದ ಮನವನ್ನು ಅರಿವಿನತ್ತ ಕೊಂಡೊಯ್ಯುವುದೆ ಅಭ್ಯುದಯವೆಂದು ಈ ದೇಶದ ಶರಣರು, ದಾಸರು, ಸಂತರು ಮಾತ್ರ ತಿಳಿದರು. ಆಯಾಕಾಲದ ಕಾಲಘಟ್ಟದನು ಗುಣವಾಗಿ ಬೆಡಗಿನ ಭಾಷೆಯನ್ನು ಜ್ಞಾನದ ಸೂತ್ರಗಳಿಗಾಗಿ ಬಳಕೆ ಮಾಡಿದ್ದಾರೆ. ಈ ಶಿಕ್ಷಣ ತಿಳಿದರೆ ಇಡೀ ದೇಶವೇ ಜ್ಞಾನ ಪ್ರಧಾನವಾದ ರಾಷ್ಟ್ರ. ತಿಳಿದ ಮನ ಜ್ಞಾನಿಯಾಗಿ ತನುವಿನೊಂದಿಗೆ ಆಕಾಶಕ್ಕೆ ಹಾರುತ್ತದೆ.

ತನು ಜಲಬಿಂದುವಿನಿಂದ ಹುಟ್ಟಿ ಜಲಭರಿತವಾಗಿದೆ. ಜಲವೇ ರಕ್ತವಾಗಿ, ಗಟ್ಟಿಯಾಗಿ ಎಲುಬು ಆಗಿದೆ. ತೊಗಲು ಸುಂದರವಾದ ಕವಚವಾಗಿ ತನುವಾಗಿದೆ. ಈ ತನುವಿನಲ್ಲಿ ಅರಿವು ತನ್ಮಯವಾಗಿದೆ. ಅದನ್ನು ತಿಳಿಯಬೇಕಾದ ಮನ ತನುವನ್ನು ಆವರಿಸಿದೆ.

ಜಲದಿಂದ ಹುಟ್ಟಿದ ತನು, ಜಲದಿಂದಲೇ ಹುಟ್ಟಿದ ಅರಿವು, ಜಲದಿಂದಲೇ ಹುಟ್ಟಿದ ಮನ, ಜಲದಿಂದಲೇ ಹುಟ್ಟಿದ ಭೂಮಿ, ಜಲದಿಂದಲೇ ಹುಟ್ಟಿದ ಅಗ್ನಿ ತನುವಿನಲ್ಲಿ ಬೆರೆತು ಬೆಂದು ಅಜ್ಞಾನದ ಸಂಸಾರವಾಗಿ ಉರಿದವು.

ತನುವಿನಲ್ಲಿ ತನ್ಮಯವಾದ ಅರಿವನು ಅರಿತು ಅಮೃತದಂತೆ ಪಾನಮಾಡಿದ ಮನ ಅದರ ಭಾರದ ಸಂಸಾರವನ್ನು ಕಿತ್ತೆಸೆದು ಆಕಾಶಕ್ಕೆ ಹಾರಿ ಶಿವನಿಗೆ ಆಭರಣವಾಯಿತು. ಅಂದರೆ ತನುವಿಗೆ ಅರಿವಿನ ಅಭರಣವಾಗಿ ಮೆರೆಯಿತು.

ಈ ಸೂತ್ರ ಬಲ್ಲ ಜ್ಞಾನಿತನುವಿಗೆ ಮಾತ್ರ ಜಗದ ಜನರ ಜ್ಞಾನ ಅಜ್ಞಾನ ಪರಿಚಯವಾಗುತ್ತದೆ. ಸರ್ವ ತನುಗಳು ತಿಳಿಯಲೆಂದು ಜ್ಞಾನಸೂತ್ರ ರಚಿಸಿ ಅಮರರಾಗಿದ್ದಾರೆ ಅಪ್ಪಣ್ಣ ಶರಣರು.

132

ಧರೆಯೊಳಗೆ ಹುಟ್ಟಿದವರೆಲ್ಲ ಬಲ್ಲೆನೆಂದು, ಬಲ್ಲತನಕ್ಕೆ ಗೆಲ್ಲಸೋಲಕ್ಕೆ
ಹೋರಿ, ಸಲ್ಲದೆ ಹೋದರು ನಮ್ಮ ಶರಣರಿಗೆ.
ಅದೇನು ಕಾರಣವೆಂದರೆ,
ಇವರೆಲ್ಲ ಪುರಾಣದ ಪುಂಡರು, ಶಾಸ್ತ್ರದ ಸಟೆಯುರು,
ಆಗಮದ ತರ್ಕಿಗಳು, ವೇದದ ಹಾದರಿಗರು,
ಬೀದಿಯ ಪಸರದ, ಸಂತೆಯ ಸುದ್ದಿಯ ಗೊತ್ತಿಗರು.

ಇಂತಿವರಾರೂ ಲಿಂಗದ ನೆಲೆಯನರಿಯರು.
ಹಿಂದೆ ಹೋದ ಯುಗಂಗಳಲ್ಲಿ ಹರಿಬ್ರಹ್ಮರು ವಾದಿಸಿ,
ನಮ್ಮ ದೇವನ ಕಾಣದೆ ಹೋದರು. ಇದಕ್ಕೆ ಶ್ರುತಿ ಸಾರುತ್ತಿದೆ.
ದೇವ ದಾನವ ಮಾನವರು ಕಾಲ ಕಾಮಾದಿಗಳ ಆರಾಧಿಸಿ,
ನಮ್ಮ ದೇವರ ಕಾಣದೆ ಹೋದರು.
ನಿಮ್ಮ ಪಾಡೇನು? ಅರಿಮರುಳಗಳಿರಾ ?
ನಮ್ಮ ದೇವನ ಕಂಡೆನೆಂದರೆ ನೋಟಕಿಲ್ಲ, ನೆನಹಿಗಿಲ್ಲ.
ತನುವಿಗಿಲ್ಲ, ಸಾಧಕರಿಗಿಲ್ಲ, ಭಾವನೆಗಿಲ್ಲ.
ಇಂತಪ್ಪ ದೇವನ ಒಡಲ ಹಿಡಿವರ ಕಂಡೆನೆಂದರೆ ಆಗದು.
ಇದರ ಬಿಡುಮುಡಿಯನರಿದು ಅಂಗೈಸುವ ಶರಣರ ಸಂಗದೊಳಗೆ.
ಎನ್ನ ಕಂಗಳು ಲಿಂಗವಾಗಿ, ಕರವೆ ಜಂಗಮವಾಗಿ,
ಇಹ ಪರದೊಳಗೆ ಪರಿಪೂರ್ಣವಾದೆನಯ್ಯಾ .
ನಿಮ್ಮ ಧರ್ಮ ನಿಮ್ಮ ಧರ್ಮ, ಬಸವ ಪ್ರಿಯ ಕೂಡಲಚೆನ್ನಬಸವಣ್ಣಾ.

ಭೂಮಿಯ ಮೇಲೆ ಹುಟ್ಟಿದ ಮನುಜರೆಲ್ಲರಿಗೂ ದೇವರು ಬೇಕೇ ಬೇಕು. ಕೆಲವರು ಸತ್ಯದ ಜಾಡು ಹಿಡಿದು ಹುಡುಕುವರು. ಕೆಲವರು ಚೈತನ್ಯದ ಜಾಡು ಹಿಡಿದು ಹುಡುಕುವರು. ಕೆಲವರು ಗುರುಬೋಧೆ ಪಡೆದು ಶಿಷ್ಯನಾಗಿ ಹುಡುಕುವರು. ಕೆಲವರು ಮಠ ಮಂದಿರ ಚರ್ಚಗಳನ್ನು ಕಟ್ಟಿ, ಜಾತ್ರೆ ಉತ್ಸವ ಆರಾಧನೆ ಮಾಡಿ ಹುಡುಕುವರು. ಕೆಲವರು ಧ್ಯಾನ ಯೋಗ ಸಮಾಧಿ ಜಪತಪಗಳನ್ನು ಮಾಡಿ ಹುಡುಕುವರು. ಕೆಲವರು ಕಾಯಕ, ವೈಚಾರಿಕದ ನಡೆ ನುಡಿಯ ಮೇಲೆ ದೇವರನ್ನು ಹುಡುಕುವರು. ಕೆಲವರು ಭಗವದ್ಗೀತೆ, ಬೈಬಲ್, ಉಪನಿಷತ್‌ಗಳನು ಓದಿ ಪುಸ್ತಕದ ಮೂಲಕ ದೇವರನ್ನು ಹುಡುಕುವರು. ಇವರೆಲ್ಲ ಹುಡುಕಲು ಸಾಧ್ಯವಾಗದೆ ಸಲ್ಲದೆ ಹೋದರು.

ಇವರೆಲ್ಲ ಪುರಾಣದ ಪುಂಡರು, ಶಾಸ್ತ್ರದ ಸಟೆಯರು, ಆಗಮದ ತರ್ಕಿಗಳು, ವೇದದ ಹಾದರಿಗಳು ಬೀದಿಯ ಪಸರದ, ಸಂತೆಯ ಸುದ್ದಿಯನ್ನೆ ದಿಟವೆಂದವರು. ಅಂಗದಲ್ಲಿಯೆ ಸಂಗಮವಾದ ಅರಿವೆಂಬ ಗುರುದೇವನ ನೆಲೆಯನು ಅರಿಯರು. ಹಿಂದೆ ಬ್ರಹ್ಮದೇವ, ದೇವರನ್ನು ಕಂಡೇ ತೀರುತ್ತೇನೆ ಎಂದು ಹಟ ಕಟ್ಟಿ ಶ್ರೀಮುಖವನ್ನು ಆಯ್ದುಕೊಂಡು ಆಕಾಶಕ್ಕೆ ಜಿಗಿದ. ಹಲವಾರು ವರ್ಷಗಳ ಪ್ರಯಾಣದ ಬಳಿಕವೂ ದೇವರು ಸಿಗಲೇ ಇಲ್ಲ. ಕೇದಿಗೆಯ ಬನ ಹೊಕ್ಕು ಅದೇ ಶಿವನ ಜಡೆಯೆಂದು ನಾನು ಶಿವನ ಶ್ರೀಮುಖ ನೋಡಿದೆನೆಂದು ಸುಳ್ಳು ಹೇಳಿದ. ಕೂಡಲೇ ಬ್ರಹ್ಮದೇವನ ಒಂದು ಮುಖ ಕಳಚಿ ಬಿತ್ತೆಂದು ಶ್ರುತಿ ಹೇಳುತ್ತದೆ.

ವಿಷ್ಣು ದೇವರು ದೇವನನ್ನು ಕಾಣುತ್ತೇನೆಂದು ಆತನ ಶ್ರೀ ಪಾದ ಹಿಡಿದು ಪಾತಾಳಕ್ಕೆ ಪಯಣಿಸಿದ ಎಷ್ಟೋ ವರ್ಷಗಳು ಕಳೆದರೂ ಶ್ರೀಪಾದ ಸಿಕ್ಕಲೇ ಇಲ್ಲ. ಇವರಿಬ್ಬರು ವಾದಿಸಿದರೂ ಶಿವನನ್ನು ಕಾಣದೆ ಹೋದರು ಎಂದು ಶ್ರುತಿ ಸಾರುತ್ತಿದೆ.

ದೇವ ದಾನವ ಮಾನವರು ಕಾಲ ಕಾಮಾದಿಗಳನ್ನು ಆರಾಧಿಸಿ ದೇವರನ್ನು ಕಾಣಲು ಹೋದರು. ಅವರಿಗೆ ದೇವನ ದರ್ಶನವಾಗಲಿಲ್ಲ; ಇನ್ನು ಸಾಮಾನ್ಯರ ಪಾಡೇನು? ನೋಟ ನೆನಹುಗಳಿಂದ ಕಾಣಲು ಸಾಧ್ಯವಿಲ್ಲ. ತನುವಿನ ಮೂಲಕ, ನೋಟ, ಭಾವನೆಗಳ ಮೂಲಕ ಕಾಣಲು ಸಾಧ್ಯವಿಲ್ಲ, ದೇವರನ್ನು ಒಡಲು ಹಿಡಿದು ಒಡಲಿಂದಲೇ ಹುಡುಕಿ ಕಾಣುತ್ತೇನೆಂದರೂ ಸಾಧ್ಯವಿಲ್ಲ.

ಶರಣರೊಂದಿಗೆ ಸಂಗಮಾಡಿ, ದೇವರ ಕಾಣುವ ಗುಟ್ಟನು ಅರಿದು ಕಂಗಳೇ ಲಿಂಗವಾಗಿ, ಅಂಗವೇ ಜಂಗಮವಾಗಿ ಅರಿವಿನ ನಿಮ್ಮ ಧರ್ಮಪಾಲಿಸಿ ಈ ಜಗದೊಳಗೆ ಪರಿಪೂರ್ಣ ನಾದೆನಯ್ಯಾ. ಬಸವಪ್ರಿಯ ಕೂಡಲ ಚೆನ್ನಬಸವಣ್ಣ ನಾನೇ ಆದೆನಯ್ಯಾ ಎಂದು ಅಪ್ಪಣ್ಣ ಶರಣರು ದೇವನನ್ನು ಕಂಡು ದೇವನ ಕಾಣುವ ಸೂತ್ರ ರಚಿಸಿದ್ದಾರೆ.

133

ಧ್ಯಾನದಲ್ಲಿ ಕುಳ್ಳಿರ್ದು, ಜ್ಞಾನದಲ್ಲಿ ನೋಡಿ,
ಮೌನ ಮುಗ್ಧವ ಮಾಡಿ, ಸ್ವಾನು ಭಾವದಿಂದರಿದು,
ಮತ್ತೇನೇನು ಹೊದ್ದಲೀಯದೆ, ತಾನು ತಾನಾಗಿ ಜ್ಞಾನಕ್ಕತೀತನಾಗಿ,
ಧ್ಯಾನ ಧಾರಣ ಸಮಾಧಿಯ ಮೆಟ್ಟಿ ನಿಂದ ನಿಜಲಿಂಗೈಕ್ಯಂಗೆ
ನಮೊ ನಮೊ ಎಂಬೆ. ಇಂದೆನ್ನ ಭವ ನಷ್ಟವಾಗಿ ಹೋದವು ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಜನನ ಮತ್ತು ಮರಣದ ದುಃಖ ಅವೆರಡರ ಭಯ ಹಿಂಗ ಬೇಕಾದರೆ ಅಂಗದ ಸತ್ಯ ಅಂಗಕ್ಕೆ ಗೋಚರವಾಗಬೇಕು. ಆಗ ಸರ್ವಾಂಗವೇ ಲಿಂಗಾಂಗವಾಗುತ್ತದೆ; ಸಂಪೂರ್ಣ ಜ್ಞಾನಾಂಗವಾಗುತ್ತದೆ. ಅಂಗವನ್ನೇ ಜ್ಞಾನಾಂಗ ಮಾಡಿಕೊಳ್ಳುವುದಕ್ಕಾಗಿ ಅಪ್ಪಣ್ಣ ಶರಣರು ಈ ವಚನದಲ್ಲಿ ಏಳು ಸೂತ್ರಗಳನ್ನು ಓದುಗರಿಗಾಗಿ ದಾಖಲಿಸಿದ್ದಾರೆ.

ಧ್ಯಾನದಲ್ಲಿ ಕೂಡುವುದು: ಯೋಗ ಪಟುಗಳು ಧ್ಯಾನ ಮಾಡುವ ಹಲವಾರು ವಿಧಾನಗಳನ್ನು ಕಲಿಸುತ್ತಾರೆ. ದೇಶದ ಕಾಲು ಭಾಗದ ಜನ ಧ್ಯಾನದಲ್ಲಿ ನಿರತವಾಗಿದೆ. ಆದರೂ ಅಂಗ ಜನನ ಮರಣಗಳ ದುಃಖದಿಂದ ನಿವಾರಣೆಯಾಗಿಲ್ಲ. ಧ್ಯಾನ ಮಾಡುವುದನ್ನೂ ಬಿಟ್ಟಿಲ್ಲ. ಅಂಗ ಧ್ಯಾನ ಮಗ್ನ ಭಂಗಿಯಲ್ಲಿ ಕುಳಿತಿರುತ್ತದೆ. ಮನ ಜನನ ಮರಣಗಳ ದುಃಖದಲ್ಲಿ ನಿರತವಾಗಿರುತ್ತದೆ. ಜ್ಞಾನದಿಂದ ನೋಡುವುದು ಮನಕ್ಕೆ ಸಾಧ್ಯವಾಗುವುದಿಲ್ಲ. ಹರಿದಾಡುವ ಮನಕ್ಕೆ ಅಂಗದಲ್ಲಿಯೇ ಸಂಗಮವಾದ ಜ್ಞಾನವನ್ನು ನೋಡಿ, ಆ ಜ್ಞಾನದಲ್ಲಿ ಲೀನವಾಗಿ, ಮೌನದಿಂದ ವೀಕ್ಷಣೆ ಮಾಡಿದಾಗ ಸ್ವಾನುಭವ ಉಂಟಾಗುತ್ತದೆ.

ಹರಿದಾಡುವ ಮನಕ್ಕೆ ಅಂಗದಲ್ಲಿ ಸಂಗಮವಾದ ಜ್ಞಾನವೇ ಬೇಲಿಯಾಗುತ್ತದೆ. ತಾನು ತಾನೇ ಆದ ಆ ಮನವೇ ಘನ ಮನವಾಗುತ್ತದೆ. ಮಹಾಜ್ಞಾನಕ್ಕೆ ಅತೀತನಾಗುತ್ತದೆ. ಧ್ಯಾನ ಧಾರಣ ಸಮಾಧಿಯ ತೋರಿಕೆಯ ಕ್ರಿಯೆಗಳು ಅಂಗದಿಂದ ಕಳಚಿ ಬೀಳುತ್ತವೆ. ಅಂಗವೇ ಅರಿವಿನ ನಿಜಲಿಂಗವಾಗುತ್ತದೆ. ಮನ ಆ ಅರಿವಿನಲ್ಲಿ ಐಕ್ಯವಾಗುತ್ತದೆ.

ಧ್ಯಾನ, ಜ್ಞಾನ, ಮೌನ, ಸ್ವಾನುಭವವನು ಅರಿತು ಗೋಚರಿಸುವ ಯಾವ ಆಚಾರವನೂ ಮಾಡದೆ, ತಾನು ತಾನೇ ಆಗಿ ಜ್ಞಾನದ ಸವಿ ಸುಖವನು ಸವಿದು, ಧ್ಯಾನ ಧಾರಣ ಸಮಾಧಿಯನು ಮೆಟ್ಟಿ ನಿಂತ ನಿಜ ಅಂಗಕ್ಕೆ ನಮೋ ನಮೋ ಎಂಬೆ. ಇಂತಹ ಅಂಗದ ದರ್ಶನದಿಂದ ಎನ್ನ ಅಂಗದ ಜನನ ಮರಣಗಳು ನಷ್ಟವಾಗಿ ಹೋದವು. ಬಸವ ಪ್ರಿಯ ಕೂಡಲಚೆನ್ನಬಸವಣ್ಣಾ ಎಂದು ಅಂಗದಲ್ಲಿ ಸಂಗಮವಾದ ಅರಿವಿನೊಂದಿಗೆ ಮೌನದಿಂದಲೇ ಮಾತನಾಡಿದ್ದಾರೆ.

ಈ ಮಾತು ಮಾತಾದರೂ ಮಾತಲ್ಲದ ಮಾತು. ಮಾತನಳಿಯುವ ಮಾತು. ಮೌನದ ಮಾತು!

ನಂಬುವುದು, ಶರಣರನೆ ನಂಬುವುದು.
ಕೊಂಬುವುದು, ಶರಣರ ಪ್ರಸಾದವನೆ ಕೊಂಬುವುದು.
ಕೊಡುವುದು, ಶರಣರಿಗೆ ಕೊಡುವುದು.
ಉಡುವುದು, ಶರಣರುಟ್ಟ ಮೈಲಿಗೆಯನೆ ಉಡುವುದು.
ಇಂತಪ್ಪ ಶರಣರ ಬರವೆ, ಎನ್ನ ಪ್ರಾಣದ ಬರವು.
ಅವರ ಹೊಕ್ಕೆ ಎನ್ನ ಪ್ರಾಣದ ಹೊಕ್ಕು.
ಇಂತಪ್ಪ ಶರಣರ ಸಂಗವ ಮಾಡಿದ ಕಾರಣ,
ಏಕವಾಗಿ ಹೋದೆ ಅವರ ಪಾದದಲ್ಲಿ.
ಇನ್ನು ಬೇಕು ಬೇಡೆಂಬ ಸಂದೇಹ ಹುಟ್ಟಿದರೆ.
ಇಹ ಲೋಕಕ್ಕೂ ಅಲ್ಲ, ಪರಲೋಕಕ್ಕೂ ಅಲ್ಲ.
ಇದಕ್ಕೆ ನೀವೇ ಸಾಕ್ಷಿ, ಬಸವ ಪ್ರಿಯ ಕೂಡಲ ಚೆನ್ನ ಬಸವಣ್ಣಾ.

ಶರಣರು ಮಹಾಜ್ಞಾನಿಗಳು. ಮಹಾಜ್ಞಾನಕ್ಕೆ ಶರಣು ಹೋದವರೆ ಶರಣರು. ಜ್ಞಾನ ಅಂಗದ ಕಣ ಕಣದಲ್ಲಿದೆ. ಮನ ಅಂಗವನ್ನು ಆವರಿಸಿದೆ. ಮನಕ್ಕೆ ಸುಖಬೇಕು. ತನಗೆ ಬೇಕಾದ ಸುಖವನ್ನು ಅಂಗದಿಂದಲೇ ಅನುಭವಿಸುತ್ತದೆ. ಸುಖದಿಂದಾದ ಫಲಾಫಲಗಳನ್ನು ಅಂಗಕ್ಕೆ ಮೆತ್ತುತ್ತದೆ. ಕೋತಿ ಮಸರ್ನನ ತಿಂದು ಮೇಕೆಯ ಮೋತಿಗೆ ಮೆತ್ತಿದಂತೆ. ಜನ ಮೇಕೆಯನ್ನು ಗುರುತಿಸುತ್ತಾರೆ. ತಿಂದ ಕೋತಿಯನ್ನು ಗುರುತಿಸಲರಿಯರು. ಇಂತಹ ಕೋತಿಯನ್ನು ಹಿಡಿದು ಅರಿವೆಂಬ ಶ್ರೀರಾಮನ ಪಾದಕ್ಕೆ ಹಾಕಿ ಆಂಜನೇಯನನ್ನು ಮಾಡುವ ಕಲೆ ಶರಣರೊಬ್ಬರಿಗೆ ಮಾತ್ರ ತಿಳಿದಿದೆ. ಅದಕ್ಕಾಗಿ ನಂಬಿದರೆ ಶರಣರನ್ನು ಮಾತ್ರ ನಂಬುತ್ತೇನೆ. ಏಕೆಂದರೆ ಮನವೆಂಬ ವಾನರನನ್ನು ನರನನ್ನಾಗಿ ಮಾಡುತ್ತಾರೆ.

ಕೊಂಬುವುದು, ಶರಣರ ಪ್ರಸಾದವನೇ ಕೊಂಬುವುದು:

ಆಲಿಸಿದರೆ ಶರಣರ ಮಾತನೇ ಆಲಿಸುವೆ. ಅವರ ಮಾತು ಬರೀ ಮಾತಲ್ಲ; ಅಂಗದ ಅಜ್ಞಾನವನ್ನು ಕೊಲ್ಲುವ ದಿವ್ಯ ಪ್ರಸಾದ. ಅವರು ಉಣ್ಣುವ ಊಟವೂ ಎಂಜಲಲ್ಲ. ನಾಲಿಗೆಯ ಮೇಲೆ ನರ್ತಿಸುವ ಅಜ್ಞಾನವನ್ನು ಕೊಂದು ಹಾಕುವ ದಿವ್ಯ ಔಷಧಿ.

ಕೊಟ್ಟರೆ ಶರಣರಿಗೆ ಕೊಡುವೆ. ಏಕೆಂದರೆ ಅವರಿಗೆ ಕೊಡುವ ಯಾವ ವಸ್ತುಗಳೂ ನನ್ನಲಿಲ್ಲ. ನನ್ನಲ್ಲಿದ್ದದ್ದು ಅಜ್ಞಾನ ಮಾತ್ರ. ಶರಣರ ಹೊರತಾಗಿ ಅದನ್ನು ಯಾರೂ ತೆಗೆದುಕೊಳ್ಳುವುದಿಲ್ಲ ಭೂಮಿ ಹೇಮ ನನ್ನದಲ್ಲ. ವಿಷಯ ವಸ್ತುಗಳೂ ನನ್ನವಲ್ಲ. ವಿಷದಂತೆ ಆವರಿಸಿದ ಮನ ಮಾತ್ರ ನನ್ನದು. ಅದನ್ನೇ ಅವರಿಗೆ ಕೊಟ್ಟು ಧನ್ಯನಾಗುವೆ. ಅವರು ಬಿಟ್ಟ ವಸ್ತ್ರವನ್ನೇ ಉಡುವೆ. ಶರಣರ ಬರವೆ ಎನ್ನ ಪ್ರಾಣದ ಬರವು.

ಶರಣರ ಸಂಗ ಮಾಡಿದರೆ; ಅವರು ಮನ ಮತ್ತು ಜ್ಞಾನ ಸಂಗ ಮಾಡುವ ವಿಧಾನವನ್ನು ತಿಳಿಸುತ್ತಾರೆ. ಆಗ ಮನವೇ ಘನಮನವಾಗಿ ಜ್ಞಾನದಲ್ಲಿ ಏಕವಾಗಿ ಹೋಗುತ್ತದೆ. ಪಾದ ನೆತ್ತಿ ಎನ್ನುವ ಅಜ್ಞಾನವನ್ನು ಅಂಗ ಕಳೆದುಕೊಂಡು ಲಿಂಗಾಂಗವಾಗುತ್ತದೆ.

ಬೇಕು ಬೇಡ ಎಂಬ ಅಜ್ಞಾನ ಕಾಯದಿಂದ ದೂರವಾಗುತ್ತದೆ. ಕಾಯವೇ

ಕೈಲಾಸವಾಗುತ್ತದೆ. ಬೇಕು ಬೇಡೆಂಬ ಅಜ್ಞಾನ ಮತ್ತೆ ಮರುಕಳಿಸಿದರೆ ಇಹಲೋಕಕ್ಕೂ ಪರಲೋಕಕ್ಕೂ ದೂರ. ಇದಕ್ಕೆ ಲಿಂಗದಲ್ಲಿಯೇ ಸಂಗವುವಾದ ಬಸವಪ್ರಿಯ ಕೂಡಲಚೆನ್ನಬಸವಣ್ಣನೆಂಬ ಮಹಾಜ್ಞಾನವೇ ಸಾಕ್ಷಿ ಎಂದಿದ್ದಾರೆ ಅಪ್ಪಣ್ಣ ಶರಣರು.

135

ನಮ್ಮಂತುವ ತಿಳಿದು ನೋಡಿದರೆ ಹೇಳಿಹೆನು.
ಅದೆಂತೆಂದರೆ, ಮೇಲು ಕೀಳಾಯಿತ್ತು, ಕೀಳು ಮೇಲಾಯಿತ್ತು.
ನಿರಾಳ ಆಳವಾಯಿತ್ತು, ಆಳ ನಿರಾಳವಾಯಿತ್ತು.
ಉತ್ತರ ಪೂರ್ವವಾಯಿತ್ತು, ಪೂರ್ವ ಉತ್ತರವಾಯಿತ್ತು.
ಗುರುವು ಶಿಷ್ಯನಾಯಿತ್ತು, ಶಿಷ್ಯ ಗುರುವಾಯಿತ್ತು.
ಅರ್ಪಿತ ಅನರ್ಪಿತವಾಯಿತ್ತು, ಅನರ್ಪಿತ ಅರ್ಪಿತವಾಯಿತು.
ಇಂತಪ್ಪ ಘನವ ವೇಧಿಸಿ ನುಡಿಯ ಬಲ್ಲರೆ,
ಆತನೆ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣ.
ನಡೆದುದೆ ಬಟ್ಟೆ, ನುಡಿದುದೆ ತತ್ವ.
ಇಂತಪ್ಪ ಸರ್ವಾಂಗ ಪ್ರಸಾದಿಯ ಪ್ರಸಾದವಕೊಂಡು,
ಸರ್ವಾಂಗ ಶುದ್ಧವಾಯಿತ್ತು.
ನಾ ನಿಮ್ಮ ಪಾದದೊಳು ನಿರ್ಮುಕ್ತನಾಗಿ ಏನೂ ಇಲ್ಲದಂತಾದೆನಯ್ಯಾ.
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಜಲ ಪವಿತ್ರ. ಅದಕ್ಕೆ ಮೇಲಿಲ್ಲ, ಕೀಳಿಲ್ಲ. ವಾಸನೆ ಬಣ್ಣ ರುಚಿಯಿಲ್ಲ. ತನ್ನ ಮಟ್ಟ ತಾನು ಕಾಯ್ದುಕೊಂಡು ಸಮಾನತೆಯಿಂದ ಮೆರೆಯುತ್ತದೆ. ಜಲದ ಅಂತರಾಳ ಹೀಗಾದರೆ ಅದರ ಹೊರಾವರಣವೆ ಬೇರೆ. ಜಲ, ಜೀವ ಜಲಬಿಂದುವಾಗಿ ಗರ್ಭಹೊಕ್ಕು ಕೆಂಪುವರ್ಣದ ರಕ್ತವಾಯಿತು. ಆ ರಕ್ತವೇ ಗಟ್ಟಿಯಾಗಿ ಮಾಂಸ, ಮಜ್ಜ, ಮೇದಸ್ಸು, ಎಲುಬು ಆಯಿತು. ಆ ಜೀವ ಜಲವೇ ಇವೆಲ್ಲವುಗಳಿಗೆ ಸುಂದರವಾದ ಚರ್ಮದ ಕವಚವಾಗಿ, ಗರ್ಭದಿಂದ ಹೊರಬಂದು ಅಂಗವೆಂದು ಹೆಸರು ಪಡೆಯಿತು.

ಅಂಗವನ್ನು ಮೇಲೆನ್ನಲು ಹೋದರೆ ಕೀಳಾಗಿ ಗುರುತಿಸಿಕೊಳ್ಳುತ್ತದೆ. ಕೀಳೆನ್ನಲು ಹೋದರೆ ಮೇಲಾಗಿ ಗುರುತಿಸಿಕೊಳ್ಳುತ್ತದೆ. ಅಂಗದ ಆಳವೇ ನಿರಾಳವಾಗಿದೆ. ಅದರ ನಿರಾಳವೇ ಆಳವಾಗಿದೆ. ಅಂಗವೇ ಅಂಗವನ್ನು ಹಡೆದು ಅಂಗವಾಗಿದೆ. ಪೂರ್ವವೆನ್ನುವಂತೆಯೂ ಇಲ್ಲ ಉತ್ತರವೆ ನ್ನುವಂತೆಯೂ ಇಲ್ಲ.

ಅಂಗವೇ ಗುರುವಾಗಿದೆ. ಅಂಗವೇ ಶಿಷ್ಯನಾಗಿದೆ. ಗುರು ಶಿಷ್ಯನೆಂದು ಅಂಗವೇ ಗುರುತಿಸಿಕೊಂಡಿದೆ. ಅಂಗದ ಆಳ ಅದರ ಅರಿವು ಅಂಗದಲ್ಲಿಯೇ ಮರೆಯಾಗಿದೆ. ಮರೆವನ್ನು ಅರಿವಿಗೆ ತಂದುಕೊಳ್ಳಲು ಅಂಗ ಅಂಗಕ್ಕೆ ಶರಣು ಹೋಗುತ್ತಲಿದೆ. ಅಂಗದಿಂದಲೇ ಅರಿವಾಗಿ ಬಂದ ಪುಸ್ತಕಗಳಿಗೆ ಅಂಗ ಮೊರೆಹೋಗುತ್ತಲಿದೆ; ಹಗಲಿರುಳೆನ್ನದೆ ಹಪಹಪಿಸುತ್ತದೆ. ಅಂಗವೇ ಲಿಂಗವೆಂದರಿಯದೇ ಅಂಗ ನಿರ್ಮಿಸಿದ ಕಲ್ಲನ್ನೆ ಲಿಂಗವೆಂದು ತನ್ನದಲ್ಲದ ಹೂ ಪತ್ರೆ ಅರ್ಪಿತ ಮಾಡುತ್ತದೆ. ಅಂಗಕ್ಕೆ ಅರಿವಾದರೆ ಅದು ಲಿಂಗವಲ್ಲ; ಬರೀ ಕಲ್ಲು. ಅನರ್ಪಿತವೆಂದು ಪುನಹ ಮರುಗುತ್ತದೆ.

ಇಂತಪ್ಪ ಘನವ ವೇಧಿಸಿ ನುಡಿಯಬಲ್ಲರೆ ಆತನೇ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣ, ಆತ ನಡೆದುದೇ ದಾರಿ. ಆತ ನುಡಿದುದೇ ತತ್ವ.

ಜಲ, ಗಿಡ, ಮರ ಬಳ್ಳಿ ಸಸಿಗಳಿಗೆ ಹರಿದು ಹೂ ಹಣ್ಣು ಕಾಯಿ ಹಸಿರಲೆಗಳನ್ನು ನೀಡಿ ಪ್ರಕೃತಿಯನ್ನು ಬೆರಗುಗೊಳಿಸಿದರೆ; ಅದೇ ಜೀವ ಜಲ ಗರ್ಭಕ್ಕೆ ಹರಿದು ಅಂಗವೆಂಬ ಅರಿವಿನ ಲಿಂಗವಾಗಿದೆ. ನೋಡುತ್ತದೆ, ಮಾತನಾಡುತ್ತದೆ, ಕೇಳಿ ಆನಂದಿಸುತ್ತದೆ. ಸ್ಪರ್ಶಿಸಿ ವಾಸಿಸಿ ನಡೆದಾಡುತ್ತದೆ. ಬೋಧಿವೃಕ್ಷವಾಗಿ ಬೋಧಿಸುತ್ತದೆ.

ಸರ್ವಾಂಗದಲ್ಲಿರುವ ಅರಿವೇ ಅಂಗಕ್ಕೆ ಪರಿಚಯವಾಗಿ ಅಂತಹ ಅಂಗದ ಅರಿವಿನ ಪ್ರಸಾದವಕೊಂಡು ಸರ್ವಾಂಗ ಶುದ್ಧವಾಯಿತ್ತು. ಅಂಗ ಅಂಗದಿಂದಲೇ ನಿರ್ಮುಕ್ತವಾಗಿ ಏನೂ ಇಲ್ಲದಂತಾಯಿತ್ತು ಬಸವ ಪ್ರಿಯ ಕೂಡಲ ಚೆನ್ನಬಸವಣ್ಣಾ ಎಂದು ಅಪ್ಪಣ್ಣ ಶರಣರು ಅಂಗದ ಅರಿವನು ಉಂಡು ಆನಂದದಿಂದ ನುಡಿದಿದ್ದಾರೆ.

136

ನಾನೊಂದು ಸುಖವ ಕಂಡು, ಸುಯಿದಾನಿಯಾಗಿ ನಿಂದೆ.
ಸುಖವೆನಗೆ ಸುಖವಾಸನೆಯಾಗಿ ವೇಧಿಸಿತ್ತು.
ಆ ವೇಧಿಸಿದ ಸುಖವ ನೋಡಲಾಗಿ, ಅದು ತಾನೆ ಬ್ರಹ್ಮನಾಗಿ ನಿಂದಿತ್ತು.
ಆ ಬ್ರಹ್ಮದ ನೆಲೆಯನರಿದವರಿಗೆ ಹಮ್ಮು ಬಿಮ್ಮು ಮನ ನಾಸ್ತಿ.
ಅವರು ಸುಮ್ಮಾನದ ಸುಖಿಗಳು.
ಒಮ್ಮನವಾಗಿ ನಿಮ್ಮನೆ ನೋಡಿ, ನಿಮ್ಮನೆ ಕೂಡಿದರಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ತನುವಿನ ಶಾಶ್ವತ ಸುಖವೆಂದರೆ ಬ್ರಹ್ಮ ಸುಖ. ಆದರೆ ತನುವನ್ನು ಆವರಿಸಿದ ಮನ ಭ್ರಮಾ ಸುಖಕ್ಕೆ ಮರುಳಾಗಿದೆ. ಇದು ಕೂಡಲೇ ಸಿಗುವ ಸುಖ. ಮನ ಭ್ರಮಾ ಸುಖವನ್ನು ದೂರ ಸರಿಸಿ ಬ್ರಹ್ಮ ಸುಖವನ್ನು ಬಯಸಿ, ಅದನ್ನು ತನುವಿನಲ್ಲಿಯೇ ಹುಡುಕಾಡಿದರೆ ಮಾತ್ರ ತನಗೆ ಸಿಗುವ ಸುಖ. ತನ್ನಲ್ಲಿಯೇ ಕಂಡುಕೊಳ್ಳುವ ಸುಖ. ಸುಯಿದಾನಿಯಾಗಿ ನಿಂತು ನಿರಂತರ ಅನುಭವಿಸುವ ಸುಖ.

ಮೂಗು ಸುಗಂಧ, ದುರ್ಗಂಧವನ್ನು ಹೊರ ಚೆಲ್ಲಿ ಅರಿವನ್ನೇ ಪರಿಮಳವಾಗಿ ನಿರಂತರ ವಾಸಿಸುವ ಬ್ರಹ್ಮ ಸುಖ. ಭ್ರಮೆ ಕಳೆದುಕೊಂಡು ತಾನೇ ಬ್ರಹ್ಮನಾಗಿ ಆಸ್ವಾದಿಸುವ ಪರಮಾನಂದದ ಸುಖ. ಅಹಂಕಾರ ಬಿಗುಮಾನಗಳನ್ನು ಕಳೆದುಕೊಂಡ ಸುಮ್ಮಾನದ ಸುಖ. ಒಮ್ಮನವಾಗಿ ಆನಂದಿಸುವ ಘನಸುಖ; ಘನಮನದ ಸುಖ. ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಬಸವಪ್ರಿಯ ಕೂಡಲಚೆನ್ನಬಸವಣ್ಣನನ್ನು ಕೂಡಿದ ಸುಖ.

137

ನಾವು ಜಂಗಮವೆಂಬರು, ತಾವು ಭಕ್ತರೆಂಬರು.
ಭಕ್ತ, ಜಂಗಮದ ನಿಲುಕಡೆ ಎಂತಿರಬೇಕೆಂದರೆ,

ಮೂರುವಿಡಿದು ಮೂರನರಿದರೆ ಭಕ್ತನೆಂಬೆ.
ಮೂರ ಬಿಟ್ಟರೆ, ಮೂರ ಕಂಡರೆ, ಜಂಗಮವೆಂಬೆ.
ಈ ಉಭಯವು ಒಂದಾದ ಭೇದವೆಂತೆಂದರೆ,
ಭಕ್ತನ ನಡೆ ನುಡಿಯಲ್ಲಿ ಕವಲು ದೋರುತಿರ್ದಡೆ,
ಹೀಗಲ್ಲವೆಂದು ಆ ಸ್ಥಲಕ್ಕೆ ತಕ್ಕ ಹಾಗೆ ನಿಲುಕಡೆಯ ತೋರಿಕೊಟ್ಟು,
ಆತನಲ್ಲಿದ್ದ ಕರ್ಮವು ತನ್ನ ಮುಟ್ಟದಂತೆ, ಅವನ ತಟ್ಟದಂತೆ,
ಈ ಉಭಯಕೊಡೆಯನಾಗಿ ನಿಂದರೆ, ಜಂಗಮಲಿಂಗವೆಂಬೆ.
ಅದೆ ಅಯ್ಯಾ ಎಂದರೆ ಕೈಕೊಂಡು,
ಮನದಲ್ಲಿ ಪ್ರಪಂಚವಿಲ್ಲದೆ ಆ ಜಂಗಮದಲ್ಲಿ ಅಡಗಿದರೆ ಭಕ್ತನೆಂಬೆ.
ಇಂತಾದರೆ ಆ ಭಕ್ತ ಜಂಗಮಕ್ಕೆ ನಮೋನಮೋ ಎಂಬೆ.
ಇಂತಲ್ಲದೆ ಇದ್ದವರ ಎನ್ನತ್ತ ತೋರದಿರಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಅಂಗ ಒಂದೆ. ಭಕ್ತ, ಜಂಗಮ ಎಂಬ ಹೆಸರುಳ್ಳ ಎರಡು ಅಂಗವಿರಲು ಸಾಧ್ಯವೆ? ಭಕ್ತನಾದರೆ ಮೂರು ಹಿಡಿದು ಮೂರನು ಅರಿಯಲು ಸಾಧ್ಯವಾಗಬೇಕು.ಆತನಿಗೆ ಭಕ್ತನೆನ್ನಬಹುದು. ಮೂರು ಬಿಟ್ಟು ಆ ಮೂರನು ಕಾಣಲು ಬರಬೇಕು ಆತನಿಗೆ ಜಂಗಮವೆನ್ನಬಹುದು.

ತನು ಮನ ಧನವನಿಡಿದು, ತನುವಿನ ತನುವನು , ಮನದ ಮನವನು, ಘನದ ಘನವನು ಅರಿಯಲು ಸಾಧ್ಯವಾದವನೇ ಭಕ್ತ.

ತನು ಮನ ಧನವನು ಬಿಟ್ಟು, ತನುವಿನ ತನುವನು ಮನದ ಮನವನು, ಘನದ ಘನವನು ಕಂಡವನೇ ಜಂಗಮ. ಭಕ್ತ ಬೇರೆ ಜಂಗಮ ಬೇರೆ ಅಲ್ಲ. ಅವರಿಬ್ಬರೂ ಒಂದೇ. ನಡೆ ನುಡಿಯಲ್ಲಿ ಕವಲು ತೋರದಿದ್ದುದೇ ಒಂದಾದ ಬಗೆ. ನಡೆ ಬೇರೆ ನುಡಿ ಬೇರೆಯಾಗಿ ತನಗೆ ತಾನೇ ಗೋಚರಿಸಿದರೆ ತನು ಮನ ಘನವನು ತನು ಸ್ಥಲಕ್ಕೆ ತಂದು ಅದರ ನಿಲುಕಡೆಯ ತನಗೆ ತಾನೇ ಅನುಭವಕ್ಕೆ ತಂದುಕೊಂಡು, ಭಕ್ತನಲ್ಲಿದ್ದ ಕರ್ಮವು ಜಂಗಮನಿಗೆ ಮುಟ್ಟದಂತೆ, ಭಕ್ತನಿಗೆ ತಟ್ಟದಂತೆ, ಜಂಗಮ ಭಕ್ತರಿಬ್ಬರನ್ನು ಒಬ್ಬನನ್ನಾಗಿ ಮಾಡಿ, ಆ ಉಭಯಕ್ಕೆ ಒಡೆಯನಾಗಿ ನಿಂತವನೇ ಜಂಗಮ.

ಎಲೆ ಅಯ್ಯ ಎಂದರೆ ಆನಂದದಿಂದ ಕೇಳಿ ಮನದಲ್ಲಿ ದುಗುಡ ದುಮ್ಮಾನಗಳು ಏಳದೆ ಶಬ್ದದ ಅಲೆಗಳು ತನುವಿನಲ್ಲಿ ಅಡಗಿ ಪ್ರಸಾದ ಮಾಡಿಕೊಂಡಾತನೇ ಭಕ್ತ.

ಇಂತಾದ ಭಕ್ತ ಜಂಗಮಕ್ಕೆ ನಮೋ ನಮೋ ಎಂಬೆ ಇಂತಲ್ಲದ ಶಬ್ದ ಸಂಭ್ರಮಿಗಳನು ಎನ್ನತ್ತ ತೋರದಿರು ಎಂದು ಬಸವ ಪ್ರಿಯ ಕೂಡಲ ಚೆನ್ನಬಸವಣ್ಣನಿಗೆ ಅಪ್ಪಣ್ಣ ಶರಣರು ಆದೇಶ ನೀಡಿದ್ದಾರೆ.

138

ನಾವು ಭಕ್ತ, ಮಹೇಶ್ವರ, ಪ್ರಸಾದಿ,
ಪ್ರಾಣಲಿಂಗಿ, ಶರಣ, ಐಕ್ಯರೆಂದು ನುಡಿವಿರಿ.
ಭಕ್ತ ಸ್ಥಲ ಒತ್ತಿ ಹೇಳಿದರೆ, ಚಿತ್ತದಲ್ಲಿ ಕರಗುವಿರಿ, ಕೊರಗುವಿರಿ.
ಮತ್ತೆ ನಮಗೆ ಮುಕ್ತಿಯಾಗಬೇಕೆಂದು ಚಿಂತೆಯ ಮಾಡುವಿರಿ.

ಇಂತೀ ಉಭಯದಿಂದ ಸತ್ಯವಾವುದು, ನಿತ್ಯವಾವುದು.
ಎಂದರಿಯದೆ, ಕೆಟ್ಟರಲ್ಲ ಜಗವೆಲ್ಲ.
ಜಗದ ವ್ಯಾಕುಳವಳಿದುದೇ ಸತ್ಯ , ನಿರಾಕುಳದಲ್ಲಿ ನಿಂದುದೇ ನಿತ್ಯ .
ಈ ಉಭಯದ ಗೊತ್ತನರಿದರೆ ಅದೇ ಐಕ್ಯ ,
ಬಸವ ಪ್ರಿಯ ಕೂಡಲ ಚೆನ್ನಬಸವಣ್ಣಾ.

ಮನದ ಗುಣವೇ ಹೀಗೆ. ಭಕ್ತ , ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯನಾಗಬೇಕೆಂದು ನುಡಿಯುತ್ತದೆ. ಆದರೆ ಪುರಾಣ ಪುಣ್ಯ ಕತೆಗಳಿಗೆ ಮಾರು ಹೋಗುತ್ತದೆ. ಗುರು ಸ್ಥಲವನು ಒತ್ತಿ ಹೇಳಿದರೆ ಗುರು ತನುವಿಗೆ ಶರಣಾಗುತ್ತದೆ. ಪಾದೋದಕ ಪ್ರಸಾದಕೊಂಡು ಕಣ್ಣಿಗೊತ್ತಿ ಕೊಂಡು ಧನ್ಯನಾದೆನೆಂದು ಸ್ವೀಕರಿಸುತ್ತದೆ. ಮುಕ್ತಿಯಾಗಲಿಲ್ಲವೆಂದು ಕೊರಗುತ್ತದೆ. ಹಗಲಿರುಳು ಮುಕ್ತಿಗಾಗಿ ಚಿಂತಿಸುತ್ತದೆ. ಭಕ್ತಿಯಿಂದ ಪೂಜಿಸಿದರೆ ಮುಕ್ತಿ ದೊರೆಯುವುದಿಲ್ಲ. ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನಾಗುವುದಿಲ್ಲ.

ಭಕ್ತನಿಂದ ಹಿಡಿದು ಐಕ್ಯ ಎನ್ನುವುದು ಪದವಿಯಲ್ಲ. ಮನ ತನುವಿನಲ್ಲಿಯೇ ಹುಡುಕಿ ಸತ್ಯ ಯಾವುದು, ನಿತ್ಯ ಯಾವುದು ಎಂದು ಅನುಭವಿಸಿ ಪ್ರಯೋಗಕ್ಕೆ ನಿಂತು ಸಾಧಿಸಬೇಕು. ತನಗೆ ತಾನೇ ಅರಿಯಬೇಕು.

ಭಕ್ತನೆಂದು ಶಬ್ದದಿಂದ ಹೇಳಿ ಭಕ್ತನ ವೇಷ ಧರಿಸಿ ಮಠ ಮಂದಿರಗಳಿಗೆ ಅಲೆದು ಗುರುಸೇವೆ ಮಾಡಿದರೆ ಮುಕ್ತಿ ದೊರೆಯುವುದಿಲ್ಲ. ತನುವಿನೊಂದಿಗೆ ಹರಿದಾಡುವ ಮನ ವಸ್ತುವಿನ ಸತ್ಯವನ್ನು ಅರಿತು, ಅರಿಯುವ ಆ ಅರಿವಿನ ಆಳಕ್ಕೆ ಹೋಗಿ ಆ ಅರಿವಿನಲ್ಲಿ ಲೀನವಾಗಬೇಕು. ತನುವಿನಲ್ಲಿಯೇ ತನ್ಮಯವಾದ ಆ ಅರಿವಿಗೆ ಶರಣು ಹೋಗಿ ಆ ಅರಿವಿಗೆ ಭಕ್ತಿ ಮಾಡಬೇಕು.

ಅಂಗದಲ್ಲಿ ಸಂಗಮವಾದ ಅರಿವು ಬರೀ ಅರಿವಲ್ಲ. ನುಡಿಯಲು ಬಾರದ ನುಡಿಯನ್ನು ನುಡಿದು ಹೇಳುವ ಗುರು. ಈ ಗುರುದೇವನ ಅನುಭವ ಮನಕ್ಕೆ ಆಗಿ ಆ ಮನದಿಂದಲೇ ಆತನಿಗೆ ಭಕ್ತಿ ಮಾಡುವುದೇ ಭಕ್ತ . ಹರಿದಾಡುವ ಮನ ಭಕ್ತನಾದ ಸಂಕೇತ. ಇದು ಯಾರಿಗೂ ಕಾಣುವುದಿಲ್ಲ; ತನಗೆ ಕಾಣದೇ ಇರುವುದಿಲ್ಲ ! ಇಂತಹ ಆಚಾರಕ್ಕೆ ಶರಣರು ಅಗೋಚರ ಆಚಾರ ಎಂದು ಕರೆದರು.

ಮಠ ಮಂದಿರ ಗುರುಲಿಂಗ ಜಂಗಮರನ್ನು ಪೂಜಿಸುವ ಆಚಾರ ಗೋಚರದ ಆಚಾರ. ಇದು ಸರ್ವರಿಗೂ ಕಾಣುತ್ತದೆ. ಆದರೆ ಸತ್ಯವೆಂದರೇನು, ನಿತ್ಯವೆಂದರೇನೆಂದು ತನಗೆ ಹೊಳೆಯುವುದಿಲ್ಲ. ತೋರಿಕೆಯ ಈ ಆಚಾರವನ್ನು ಸರ್ವರು ಹೊಗಳುತ್ತಾರೆ; ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನು ಮಾತ್ರ ತೆಗಳುತ್ತಾನೆ. ಈತ ಎಂದೂ ಮುಕ್ತನಾಗಲಾರ. ವ್ಯಾಕುಳವ ನಳಿದುಕೊಂಡು ನಿರಾಕುಳನಾಗಲಾರ.

ತನುವಿನಲ್ಲಿ ತನ್ಮಯವಾದ ಅರಿವು, ತನುವನ್ನು ಆವರಿಸಿದ ಮನಕ್ಕೆ ಪರಿಚಯವಾದರೆ ಆ ಮನವೆ ಭಕ್ತನಾಗುತ್ತಾನೆ. ಈ ಭಕ್ತನಿಗೆ ಅಂಗದಲ್ಲಿಯೇ ಅರಿವನ ಲಿಂಗಯ್ಯಾ ಕಾಣುತ್ತಾನೆ. ಮಹೇಶ್ವರನ ದರ್ಶನವೂ ಆಗುತ್ತದೆ. ಭಕ್ತ ಆತನಿಗೆ ಶರಣು ಹೋಗಿ ಶರಣನಾಗುತ್ತಾನೆ.

ನೋಡಿದ ಜ್ಞಾನ ಅಜ್ಞಾನದ ನೋಟಗಳು ತನುವಿನಲ್ಲಿ ಸಂಕಟ ಉಂಟು ಮಾಡದೆ ಅನುಭವಿ ಶರಣನಲ್ಲಿ ಪ್ರಸಾದವಾಗುತ್ತವೆ. ಕೇಳಿದ ಶಬ್ದಗಳೆಲ್ಲ ಕಿವಿಯಲ್ಲಿಯೇ ಪ್ರಸಾದವಾಗುತ್ತವೆ. ಸ್ಪರ್ಶ, ಸುಖ ದುಃಖ ಸಂಕಟವನ್ನುಂಟು ಮಾಡದೆ ಚರ್ಮದಲ್ಲಿ ಪ್ರಸಾದವಾಗುತ್ತದೆ. ರುಚಿ ವಾಸನೆಗಳು ಕೂಡಾ

ಶರಣನಿಗೆ ಪ್ರಸಾದವಾಗಿ; ಪ್ರಸಾದಿಯಾಗುತ್ತಾನೆ. ಶರಣನ ಕಾಯ ಪ್ರಸಾದ ಕಾಯವಾಗುತ್ತದೆ.

ಸಕಲ ಸುಖ ದುಃಖಗಳು ಶರಣನಿಗೆ ಅರಿವಿನಿಂದ ಗೋಚಾರಕ್ಕೆ ಬಂದು ಬಾಧೆ ಉಂಟು ಮಾಡುವುದಿಲ್ಲ. ಶವಕ್ಕೆ ಏನು ಮಾಡಿದರೂ ಬಾಧೆಯಾಗುವುದಿಲ್ಲ. ಏಕೆಂದರೆ ದೇಹದಲ್ಲಿ ಪ್ರಾಣವಿಲ್ಲ. ಶರಣನ ಕಾಯದಲ್ಲಿ ಪ್ರಾಣವೇ ಅರಿವಿನ ಲಿಂಗವಾಗಿದೆ. ಮನ ಆ ಅರಿವಿಗೆ ಭಕ್ತನಾಗಿದೆ. ಆ ಅರಿವಿಗೆ ಶರಣು ಹೋಗಿ ಶರಣನಾಗಿದೆ. ಹೀಗಾಗಿ ತನುವಿಗೆ ಬಡಿದ ಸಕಲ ಸುಖ ದುಃಖಗಳನ್ನು ಅರಿವೆಂಬ ಗುರುದೇವನೇ ಅರಿವಿನಿಂದ ಸ್ವೀಕರಿಸುತ್ತಾನೆ. ಭಕ್ತ ಅದನ್ನು ಆನಂದದಿಂದ ವೀಕ್ಷಿಸುತ್ತಾನೆ. ಈ ಉಭಯದ ಗೊತ್ತನರಿಯುವ ಭಕ್ತನೇ ಐಕ್ಯನಾಗುತ್ತಾನೆ.

139

ನಿತ್ಯ ಅನಿತ್ಯವೆಂಬುದ ತೋರಿದಿರಿ,
ಸತ್ಯ ಅಸತ್ಯವೆಂಬುದ ತೋರಿದಿರಿ.
ಆಚಾರ ವಿಚಾರವೆಂಬುದ ತೋರಿದಿರಿ.
ಅಯ್ಯಾ ಸೋಹಂ ದಾಸೋಹಂ ಎಂಬುದ ತೋರಿದಿರಿ.
ಇದು ಎಂಬುದ ತೋರಿದಿರಿ,
ಅಯ್ಯಾ ಮುಕ್ತಿ ಎಂಬುದ ತೋರಿದಿರಿ.
ಅಂಗ ಲಿಂಗವೆಂಬುದ ತೋರಿದಿರಿ,
ಪ್ರಾಣವೇ ಜಂಗಮವೆಂಬುದ ತೋರಿದಿರಿ.
ಪ್ರಸಾದವೇ ಪರವೆಂದು ತೋರಿದಿರಿ.
ಇಂತಿವರ ಭೇದಾದಿ ಭೇದವನೆಲ್ಲ ತೋರಿದಿರಿ.
ನಿಮ್ಮ ಹಾದಿ ಹತ್ತಿಸಿದಿರಿ.
ಮೂದೇವರೊಡೆಯ ಚೆನ್ನ ಮಲ್ಲೇಶ್ವರಾ,
ನಿಮ್ಮ ಹಾದಿಗೊಂಡು ಹೋಗುತ್ತಿರ್ದು.
ನಾನೆತ್ತ ಹೋದೆನೆಂದರಿಯೆನಯ್ಯಾ.
ಬಸವಪ್ರಿಯ ಕೂಡಲಚೆನ್ನಬಸವಣ್ಣಾ,
ನಾ ಹೋದ ಹಾದಿಯ ನೀವೆ ಬಲ್ಲಿರಿ.

ನಿತ್ಯ ಅನಿತ್ಯ, ಸತ್ಯ ಅಸತ್ಯವನ್ನು ತೋರಿದಿರಿ. ಆಚಾರ ವಿಚಾರವೆಂಬುದ ತೋರಿದಿರಿ. ಸೋಹಂ, ದಾಸೋಹಂ, ಬಂಧನ ಮುಕ್ತಿ, ಅಂಗ ಲಿಂಗ, ಪ್ರಾಣ ಜಂಗಮ, ಪ್ರಸಾದ ಪರವೆಂಬುದನು ತೋರಿದಿರಿ. ಹೀಗೆ ಅಪ್ಪಣ್ಣ ಶರಣರು ತಮಗೆ ತೋರಿ ಬಂದ ಸತ್ಯವನ್ನು ಸರ್ವ ಓದುಗರಿಗೆ ಉಣಬಡಿಸಿದ್ದಾರೆ. ಆದರೆ ಈ ಊಟವನು ಓದುವ ಓದುಗರು ಜಾಣತನದಿಂದ ಉಣ್ಣಬೇಕು.

ಪ್ರತಿ ಅಂಗದಲ್ಲಿಯೂ ಇಬ್ಬರಿದ್ದಾರೆ. ಸತ್ಯವೆಂದರೇನೆಂದು ತೋರುವ ಒಬ್ಬ ಜ್ಞಾನಿಯಿದ್ದಾನೆ. ಆ ಸತ್ಯದ ಹಾದಿಯಲ್ಲಿ ಅಂಗ ಹಿಡಿದು ನಡೆಯುವ ಒಬ್ಬ ಭಕ್ತನಿದ್ದಾನೆ. ಇವರಿಬ್ಬರಿಗೂ ಅವಿನಾಭಾವ ಸಂಬಂಧ. ಇವರಿಬ್ಬರೂ ಅಂಗವನ್ನು ಮಾಧ್ಯಮ ಮಾಡಿಕೊಂಡು ಅಂಗದಲ್ಲಿಯೇ ವಾಸವಾಗಿದ್ದಾರೆ. ಇದನ್ನು ತಿಳಿದ ಜ್ಞಾನಿ, ಅಂಗದಲ್ಲಿ ಜ್ಞಾನ ಸಂಗಮವಾಗಿದೆ ಎಂದು ಅಂಗವನ್ನು ಆವರಿಸಿದ ಮನಕ್ಕೆ ದಾರಿ ತೋರಿಸುತ್ತಾನೆ. ಆ ಮನವೇ ಭಕ್ತನಾಗಿ

ಅಂಗದಲ್ಲಿಯೇ ಸಂಗಮವಾದ ಮಹಾಜ್ಞಾನಿಯೊಂದಿಗೆ ಮಾತನಾಡುತ್ತಾನೆ. ಈ ಸಂಭಾಷಣೆಯನ್ನು ಅಪ್ಪಣ್ಣ ಶರಣರು ಸಕಲರಿಗೂ ವೇದ್ಯವಾಗುವಂತೆ ವಚನದ ಮೂಲಕ ವಿವರಿಸಿದ್ದಾರೆ.

ಜಗದ ಜನರೆಲ್ಲ ಪೂಜಿಸುವ ಲಿಂಗವನ್ನು ಸತ್ಯವೆಂದು ನಂಬಿ, ಪೂಜಿಸಲು ಹೋದರೆ, ಅದು ಸತ್ಯವಲ್ಲ ಅಸತ್ಯವೆಂದು ಹೇಳಿದಿರಿ. ಸತ್ಯ ಯಾವುದು ಎಂದು ಕೇಳಲು ಹೋದರೆ ಅದರಲ್ಲಿರುವ ಕಲ್ಲನ್ನೇ ಸತ್ಯವೆಂದು ತೋರಿದಿರಿ. ಕಲ್ಲನ್ನು ಯಾರೂ ಪೂಜಿಸಲಿಲ್ಲ. ಪೂಜಿಸುವ ಜಗದ ಕಣ್ಣುಗಳಿಗೆಲ್ಲ ಅದು ಕಲ್ಲಾಗಿಯೇ ಕಂಡಿತು. ಕಲ್ಲು ನೋಡಿದ ಕಣ್ಣಿನಲ್ಲಿ ಲಿಂಗವೆಂಬ ಭಾವವಿಲ್ಲ. ಕಟೆದ ಕಲ್ಲು ಕಣ್ಣಿಗೆ ಲಿಂಗವಾಯಿತು. ತನುವಿನಲ್ಲಿ ಪೂಜಿಸುವ ಭಾವ ಬೆಳೆಯಿತು. ಅಸತ್ಯ ತನುವನ್ನು ಆವರಿಸಿತು. ತನುವಿನಲ್ಲಿದ್ದ ಸತ್ಯ ತನುವಿನಲ್ಲಿಯೇ ಉಳಿಯಿತು. ಜ್ಞಾನ ತನುವಿನ ಬಳಕೆಗೆ ಬಾರಲೇ ಇಲ್ಲ. ಭವ್ಯವಾದ ಮಂದಿರಗಳನ್ನು ತನು ನಿರ್ಮಾಣ ಮಾಡಿತು. ತಾನು ನಿರ್ಮಿಸಿದ ದೇವರನ್ನು ಹಗಲಿರುಳೆನ್ನದೇ ತಾನೇ ಪೂಜಿಸಿತು. ಜಗತ್ತು ದೇವರೆಂದೇ ಕರೆಯಿತು. ಜಗತ್ತಿಗೆ ಕಾಣುವ ಸತ್ಯವನ್ನು ಜ್ಞಾನಿ ಅಸತ್ಯವೆಂದು ತೋರಿದ. ಜ್ಞಾನಿಗೆ ತೋರಿದ ಸತ್ಯ ಜಗತ್ತಿಗೆ ಅಸತ್ಯವಾಗಿ ತೋರಿತು.

ಮನ ತನುವಿನೊಂದಿಗೆ ಆಚಾರಿಸುವ ಆಚಾರವನ್ನು ವಿಚಾರಿಸಲು ಹೋಗಲಿಲ್ಲ. ತನುವಿನಲ್ಲಿಯೇ ತನ್ಮಯವಾದ ಅರಿವಿನೊಂದಿಗೆ ಮನ ವಿಚಾರಿಸಲು ಹೋದರೆ ಪೂಜಿಸುವ ಲಿಂಗ ಅಸತ್ಯವಾಗಿ ಪೂಜೆಗೆ ಬಾರದ ಕಲ್ಲು ಸತ್ಯವಾಗುತ್ತದೆ. ಜಗತ್ತಿಗೆ ತೋರಿ ಬರುವ ಲಿಂಗ ತನಗೆ ಕಲ್ಲಾಗಿ ಕಾಣುತ್ತದೆ. ಜಗತ್ತು ಅಸತ್ಯವನ್ನ ಸತ್ಯವೆಂದು ಪೂಜಿಸುತ್ತದೆ. ಜಗತ್ತಿನ ಪೂಜೆ ಗೋಚರದ ಪೂಜೆ. ತನ್ನ ಪೂಜೆ ಅಗೋಚರದ ಪೂಜೆ.

ಶಬ್ದ ಸ್ಪರ್ಶ ರುಚಿ ವಾಸನೆಯಲ್ಲಿ ಕೂಡಾ ನಿರ್ಭಾವವೇ ಅಡಗಿದೆ. ಮನ ಜಗದ ಅರಿವನ್ನು ನಿಜ ಅರಿವೆಂದು ನಂಬಿರುವುದರಿಂದ, ತನುವಿನಲ್ಲಿ ತನ್ಮಯವಾದ ಅರಿವು ತನುವಿನಲ್ಲಿಯೇ ತನುವಿನ ಬಳಕೆಗೆ ಬಾರದಂತೆ ಉಳಿದಿದೆ. ಈ ಸತ್ಯವನ್ನು ಹೊರಗಿನ ಯಾವ ಗುರುವೂ ತೋರಿಸಲಾರ. ಅಂತರಂಗದ ಅರಿವೆಂಬ ಗುರುದೇವ ತೋರಿಸದೇ ಇರಲಾರ. ಹೀಗೆ ನುಡಿದು ತೋರುವ ಗುರುವಿನ ನುಡಿಯನು ಆಲಿಸುವ ಶಕ್ತಿ ಮನ ಬಯಕೆಯಿಂದ ಪಡೆದುಕೊಳ್ಳಬೇಕು. ಹಗಲಿರುಳೆನ್ನದೆ ಈ ಬಯಕೆಗಾಗಿ ಹಪಹಪಿಸಬೇಕು. ಆಗ ಅರಿವೆಂಬ ಗುರುದೇವನ ಹಾದಿಗೊಂಡು ಮನ ಹಿಂದೆ ಹಿಂದೆ ಹೋಗುತ್ತದೆ; ಗುರುದೇವ ದಾರಿ ತೋರುತ್ತಾ ಮುಂದೆ ಮುಂದೆ ಹೋಗುತ್ತಾನೆ.

140

ನಿಷ್ಠೆಯ ಮೆರೆದರೇನಯ್ಯಾ ?
ಲೋಕದ ಮನುಜರ ದೃಷ್ಟಿಗೆ ಸಿಲ್ಕಿ ಭ್ರಷ್ಟೆದ್ದು ಹೋದರು.
ತನು ಕಷ್ಟ ಮಾಡಿದರೇನಯ್ಯಾ ಮನ ನಿಷ್ಟವಾಗದನ್ನಕ್ಕ ?
ತನು ಮನವೆರಡು ನಷ್ಟವಾಗಿ, ಘನವ ನೆಮ್ಮಿ ,
ನಿಮ್ಮ ನೆನಹು ನಿಷ್ಪತ್ತಿಯಾದ ಶರಣರ
ಎನಗೊಮ್ಮೆ ತೋರಯ್ಯಾ , ನಿಮ್ಮ ಧರ್ಮ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಕಲ್ಲು ದೇವರಿಗೆ ನಿಷ್ಠೆಯ ತೋರಿದರೇನು ತನುವಿನ ಅವಗುಣಗಳು ನಿಲ್ಲುವುದಿಲ್ಲ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಅಳಿಯುವುದಿಲ್ಲ. ಅಷ್ಟ ಮದಗಳಿಂದ ತನು ಭ್ರಷ್ಟೆದ್ದು ಹೋಗುವುದು ನಿಲ್ಲುವುದಿಲ್ಲ. ತನು ಲೋಕದ ನಿಂದೆಗೆ ಗುರಿಯಾಗುವುದು ತಪ್ಪುವುದಿಲ್ಲ.

ತನು ಜಪ ತಪಗಳ ಮೂಲಕ ಕಷ್ಟದಲ್ಲಿ ಭಾಗಿಯಾದರೇನು? ಮನ ತನುವಿನಲ್ಲಿಯೇ ತನ್ಮಯವಾದ ಅರಿವಿಗೆ ನಿಷ್ಠನಾಗಲು ಅರಿಯದಿದ್ದರೆ ಸಕಲ ಜಪತಪಗಳು ವ್ಯರ್ಥವೇ ಸರಿ.

ತನು ಮನಗಳೆರಡು ನಷ್ಟವಾಗಿ, ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನ ಪಾದ ಹಿಡಿಯುವವರೆಗೆ, ತೋರಿಕೆಯ ಸಕಲ ಆಚಾರಗಳು ವ್ಯರ್ಥವೇ ಸರಿ. ತನು ಮನಗಳೆರಡು ತನುವಿನಲ್ಲಿಯೇ ತನ್ಮಯವಾದ ಅರಿವನ್ನು ಮಾತ್ರ ನೆನೆಯುವ ಘನ ಮನದ ತನುವನು ತೋರಿ ಕೃತಾರ್ಥನನ್ನಾಗಿ ಮಾಡು. ಇದು ನಿಮ್ಮ ಧರ್ಮ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ ಎಂದು ಅಪ್ಪಣ್ಣ ಶರಣರು ಅರಿವನ್ನೇ ಗುರುವೆಂದು ತಿಳಿದು ಆ ಗುರುದೇವನನ್ನು ಸ್ಮರಿಸುವ ಬಗೆ ವಿವರಿಸಿದ್ದಾರೆ.

141

ನೀವು ಹೊತ್ತಿಪ್ಪ ವೇಷದಲ್ಲಿ ತತ್ವ ತಿಳಿದು ನೋಡಿರಣ್ಣಾ.
ಜ್ಞಾನ ಬಿತ್ತಿಗೆಯ ಮೇಲೆ ನಿಂದು ಅಂಗದ ನಿಚ್ಚಣಿಕೆಯನಿಕ್ಕಿ,
ಒತ್ತಿನಿಂದರೆ ಉತ್ತರ ಜ್ಞಾನವೆಂಬುದು ನಿಮ್ಮ ಒತ್ತಿನಲ್ಲಿಪ್ಪುದು,
ಇದ ನೋಡಿದರೆ ನಿಶ್ಚಯ, ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಅಂಗದ ಗರ್ಭದಲ್ಲಿ ಹೊಕ್ಕ ಜೀವ ಜಲಬಿಂದು ಅಂಗದ ವೇಷದಲ್ಲಿ ಹೊರಬಂದು ತತ್ವವನ್ನು ಒಳಗೊಂಡಿದೆ. ನೋಟದಲ್ಲಿ, ಶಬ್ದದಲ್ಲಿ, ಸ್ಪರ್ಶದಲ್ಲಿ, ರುಚಿಯಲ್ಲಿ, ವಾಸನೆಯಲ್ಲಿ ತತ್ವ ಅಡಗಿದೆ. ಈ ಐದು ಮಹಾಜ್ಞಾನ ತನುವಿನಲ್ಲಿ ಸಂಗಮವಾಗಿ ಅಂಗ ಅರಿವೆಂಬ ಮಹಾಲಿಂಗವಾಗಿದೆ. ಮನ, ಈ ಮಹಾಜ್ಞಾನದ ನೆರಳಾಗಿ ಜನ್ಮ ತಳೆದು ಅಂಗವನ್ನೇ ಆವರಿಸಿದೆ.

ಮನ, ಜ್ಞಾನವನ್ನು ತಿಳಿಯದ್ದರಿಂದ ಈ ಜ್ಞಾನವೇ ಮನಕ್ಕೆ ರುಚಿಯಾಗಿ ಪರಿಣಮಿಸಿದೆ. ರುಚಿಯ ಚಪಲಕ್ಕಾಗಿ ತತ್ವ ವೇತ್ತ ಅಂಗವನ್ನೇ ಮನ ದುರ್ಬಳಕೆ ಮಾಡಿಕೊಳ್ಳುತ್ತಲಿದೆ.

ಜಗದ ತನುಗಳೆಲ್ಲ ಜ್ಞಾನವನ್ನು ಮಾತ್ರ ಹೊತ್ತಿವೆ. ತನುಗಳಿಂದಲೇ ಜ್ಞಾನದ ಹೊತ್ತಗೆಗಳು ಹೊರಬಂದಿವೆ. ತತ್ವ ಓದಿದರೆ ಎಲ್ಲ ತನುಗಳು ಕೇಳಿ ಆನಂದ ಪಡುತ್ತವೆ. ಓದಿದ ತನು, ಬರೆದ ತನು. ಕೇಳಿದ ತನುಗಳೆಲ್ಲ ಒಂದೆಂದು ಮನದಿಂದಾಗಿ ತಿಳಿಯುತ್ತಿಲ್ಲ. ಓದಿದ ತನು ಶಾಸ್ತ್ರಿ ಎಂದು, ಬರೆದ ತನು ಪಂಡಿತನೆಂದೂ, ಕೇಳಿದ ತನು ಭಕ್ತನೆಂದು ಅಜ್ಞಾನದಿಂದ ನುಡಿಯುತ್ತದೆ. ಇದು ಮನ, ತನುವಿಗೆ ಹಾಕಿದ ಅಜ್ಞಾನದ ವೇಷವೆಂದು ಮನಕ್ಕೆ ಅರಿವಾಗುತ್ತಿಲ್ಲ.

ಜ್ಞಾನ ಬಿತ್ತಿಗೆಯ ಮೇಲೆ ನಿಂದು ಅಂಗದ ನಿಚ್ಚಣಿಕೆಯನಿಕ್ಕಿ, ಒತ್ತಿ ನಿಂದರೆ ಉತ್ತರ ಜ್ಞಾನವೆಂಬುದು ನಿಮ್ಮ ಒತ್ತಿನಲ್ಲಿಪ್ಪುದು ಇದ ನೋಡಿದರೆ ನಿಶ್ಚಯ:

ಮನದಿಂದಲೇ ಅರಿತರಿತು ನೋಡಿದರೆ ತನು ಒಂದು ಜ್ಞಾನದ ಬಿತ್ತಿಗೆ. ತನು ತನುವಿನಲ್ಲಿ ಬಿತ್ತಿ ತನುವನ್ನೇ ಬೆಳೆದಿದೆ. ಬಿತ್ತಿದ ತನುವೊಂದು ಬಯಲು. ಅದರ ಬೀಜವೂ ಬಯಲು. ಬೀಜ ಪಡೆದ ಗರ್ಭವೂ ಬಯಲು!

ತನು, ತನುವಿನಲ್ಲಿ ಬಿತ್ತಿದ್ದು ಜೀವ ಜಲಬಿಂದುವಿನಾಕಾರದ ಬೀಜ. ಜಲವೂ ಜಲವಲ್ಲ. ಜಲಜನಕ ಆಮ್ಲಜನಕ ಸೇರಿ ಜಲವಾಗಿದೆ. ಜಲಜನಕ ಆಮ್ಲಜನಕಗಳೆರಡೂ ಕಾಣುವುದಿಲ್ಲ.

ಅವುಗಳ ವಾಸ ಬಯಲಲ್ಲಿಯೇ. ಆಮ್ಲಜನಕ+ಜಲಜನಕವನ್ನು ಕೂಡಿಸಿ ಅದರಲ್ಲಿ ಬಯಲು ಬೆರೆತು, ಜೀವ ಜಲಬಿಂದುವಿನ ಬೀಜವಾಗಿ ಗರ್ಭ ಹೊಕ್ಕು ತನುವಾಗಿದೆ.

ಬಯಲು ಬಯಲನೇ ಬಿತ್ತಿ, ಬಯಲು ಬಯಲನೇ ಬೆಳೆದಿದೆ. ಹೀಗಾಗಿ ತನು ಬಯಲು; ತನುವಿನ ಜೀವನವೂ ಬಯಲು, ತನುವಿನ ಭಾವನೆಯೂ ಬಯಲು. ಬಯಲನ್ನು ನಂಬಿದ ತನುಗಳೆಲ್ಲ ಬಯಲು. ಹೀಗಾಗಿ ಬಯಲ ಬಿತ್ತಿಗೆಯ ಅಂಗವೊಂದು ಮಹಾಜ್ಞಾನದ ನಿಚ್ಚಣಿಕೆಯೂ ಹೌದು. ಈ ನಿಚ್ಚಣಿಕೆಯನ್ನು ಹತ್ತಿ ಒತ್ತಿ ನಿಂತರೆ ಉತ್ತರ ಜ್ಞಾನವೆಂದೇ ದೊರೆಯುತ್ತದೆ.

142

ನುಡಿದ ನುಡಿಗೆ ನಡೆ ಇಲ್ಲದಿದ್ದರೆ,
ಮೃಡನ ಶರಣರು ಕಡೆನುಡಿದಲ್ಲದೆ ಮಾಣರು.
ಎಮ್ಮ ಶರಣರು ಮತ್ತೆ ಹೊಡೆಗೆಡೆದು ಎನ್ನ ನುಡಿದು, ಹೊಡೆದು, ರಕ್ಷಿಸಿದಿರಲ್ಲ.
ಎನ್ನ ಒಡೆಯರು ನೀವಹುದೆಂದು ಬಿಡದೆ ಅವರ ಬೇಡಿಕೊಂಬೆ.
ಇದೀಗ ನಮ್ಮ ಶರಣರ ನಡೆ ನುಡಿ, ಅದಂತಿರಲಿ. ಅದಕೆ ನಮೋ ನಮೋ ಎಂಬೆ.
ಈ ಪೊಡವಿಯೊಳು ಹುಟ್ಟಿದ ಮನುಜರೆಲ್ಲರು ಒಡೆಯರೆಂದು ಪೂಜೆಯ ಮಾಡಿ,
ತುಡುಗುಣಿ ನಾಯಿಯಂತೆ ಒಕ್ಕುದ ಮಿಕ್ಕುದ ನೆಕ್ಕಿ,
ತಮ್ಮ ಇಚ್ಛೆಗೆ ನುಡಿದರೆ ಒಳ್ಳಿದನೆಂಬರು.
ಸತ್ಯವ ನುಡಿದರೆ ಸಾಯಲವನೆಲ್ಲಿಯ ಶರಣ ? ಇವನೆಲ್ಲಿಯ ಜಂಗಮ?
ಇವರ ಕೂಡಿದ ಮನೆ ಹಾಳೆಂದು,
ಕಂಡ ಕಂಡವರ ಕೂಡ ಹೇಳಿಯಾಡುವ, ಈ ಕಾಳು ಮನುಜರನು.
ಲಿಂಗ ಜಂಗಮವೆಂದು ಕೂಡಿಕೊಂಡು ಹೋದರೆ,
ತನ್ನ ತನ್ನ ಪದಾರ್ಥವ ಹಿಡಿದರೆ,
ಒಡೆಯನೆ ಬದುಕಿದೆ, ತ್ರಾಹಿ ಎಂಬ ಮೃಡ ಶರಣರನು
ಈ ಅಡಗು ಕಚ್ಚಿಕೊಂಡಿರುವ, ಹಡಕಿ ಮನುಜರನು ಸರಿಗಂಡಡೆ,
ನಾಯಕ ನರಕದಲ್ಲಿಕ್ಕುವ,
ನಮ್ಮ ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ.

ನುಡಿದ ನುಡಿಗೆ ಅದರದೇ ಆದ ಅರಿವಿನ ನಡೆ ಇರುತ್ತದೆ. ಪ್ರತಿ ನುಡಿ ಪ್ರತಿ ಶಬ್ದ ಅರಿವಿನಿಂದಲೇ ತುಂಬಿದೆ. ಮನ ನುಡಿದಾಗ ಅರಳುತ್ತದೆ. ನುಡಿದಂತೆ ನಡೆಯುವುದು ಬಂದಾಗ ಕೆರಳುತ್ತದೆ. ಆದರೆ ನುಡಿದದ್ದು ತಾನೇ ಮನ. ದೇಹ ಬಳಸಿ ನುಡಿಯಿತು. ನುಡಿದಂತೆ ನಡೆಯುವ ಸಮಯ ಬಂದಾಗ ದೇಹದಿಂದಲೇ ನಕಾರ ಭಾವನೆ ತೋರಿ ಕೆರಳಿತು. ನುಡಿಯುವಾಗ ಮನಕ್ಕೆ ಆನಂದವಾಯಿತು. ನುಡಿದಂತೆ ನಡೆಯುವ ಸಮಯ ಬಂದಾಗ ಕೆರಳಿತು. ನುಡಿಯಲ್ಲಿ ದೋಷವಿಲ್ಲ. ನುಡಿಯುವ ದೇಹದಲ್ಲಿಯೂ ದೋಷವಿಲ್ಲ. ನಡೆಯುವ ಮನದಲ್ಲಿ ದೋಷವಿದೆ. ದೇಹ ಬಳಸಿ ನುಡಿಯುತ್ತದೆ; ದೇಹ ಬಳಸಿ ನಡೆಯದೆ ದೇಹಕ್ಕೆ ಕೆಟ್ಟ ಹಣೆಪಟ್ಟಿ ಕಟ್ಟುತ್ತದೆ.

ಇರುವುದೊಂದೆ ಮನ, ಇರುವುದೊಂದೆ ಅರಿವು, ಇರುವುದೊಂದೆ ದೇಹ. ದೇಹದಲ್ಲಿ

ತನ್ಮಯವಾದ ಅರಿವು ಬಳಸಿ ಮನ ನುಡಿಯಿತು; ಅರಿವು ಬಳಸಿ ನಡೆಯಲಿಲ್ಲ. ಜನ ಮನವನ್ನು ನಿಂದಿಸುವುದಿಲ್ಲ; ದೇಹವನ್ನು ನಿಂದಿಸುತ್ತಾರೆ. ಮನ ಅರಿವು ಬಳಕೆ ಮಾಡದಿದ್ದರೆ ದೇಹದ ತಪ್ಪೆ ? ಹೀಗೆಂದು ಯಾರು ಪ್ರಶ್ನಿಸಬೇಕು ? ನುಡಿದ ಮನವೇ ನಡೆಯುವಾಗ ಪ್ರಶ್ನಿಸಿಕೊಳ್ಳಬೇಕು. ಮನ ಅರಿವಿಗೆ ಶರಣು ಹೋಗಬೇಕು; ಅಂದರೆ ಮಾತ್ರ ಶರಣನಾಗಲು ಸಾಧ್ಯ. ಮನ ಮಾಡಿದ ತಪ್ಪು ಮನವೇ ತಿಳಿದುಕೊಳ್ಳುವುದು ಸುಲಭದ ಕೆಲಸವಲ್ಲ. ಶರಣರಿಗೆ ಮಾತ್ರ ಸಾಧ್ಯ . ಅವರು ವಿಜ್ಞಾನಿಗಳು. ಅಂತಹ ವಿಜ್ಞಾನಿಗಳನ್ನು ಹುಡುಕುತ್ತಾ ಅವರನ್ನೇ ಮನ ಒಡೆಯರನ್ನಾಗಿ ಮಾಡಿಕೊಳ್ಳಬೇಕು. ನುಡಿದ ಮನವನ್ನು ಬಡಿದು ಸಂತೈಸಿ ಸಮಾಧಾನಿಯನ್ನಾಗಿ ಮಾಡುತ್ತಾರೆ.

''ನುಡಿದರೆ ಮುತ್ತಿನ ಹಾರದಂತಿರಬೇಕು. ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು. ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು''. ಮುತ್ತು , ಮಾಣಿಕ್ಯ , ಸ್ಫಟಿಕಗಳು ನುಡಿಯುವುದಿಲ್ಲ. ಆದರೆ ಬೆಳಗುವ ಮೂಲಕ ನುಡಿಯುತ್ತವೆ. ಜಲಬಿಂದು ಗಟ್ಟಿಯಾಗಿ ಮುತ್ತಾಯಿತು, ಮಾಣಿಕ್ಯವಾಯಿತು, ಸ್ಫಟಿಕವಾಯಿತು. ವಸ್ತು ಒಂದೇ; ಹೆಸರು ಬೇರೆ ಬೇರೆ. ಆದರೆ ಬೆಳಗುವಿಕೆ ಮಾತ್ರ ಒಂದೇ ಆಗಿದೆ !

ಜಲಬಿಂದುವೇ ಗರ್ಭದಲ್ಲಿ ಹೊಕ್ಕು , ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಆಗಿ ,ಸುಂದರವಾದ ಚರ್ಮದ ಕವಚದೊಂದಿಗೆ ತನುವಾಗಿ ಬೆಳಗಿ ನುಡಿಯುವ ಮುತ್ತಾಗಿ ಹೊರಗೆ ಬಂದಿದೆ. ನೋಡಿ, ನುಡಿದು, ಕೇಳಿ, ಮುಟ್ಟಿ, ಮೂಸಿಸಿ, ರುಚಿಸುವ ಮೂಲಕ ತನು ನಡೆದಾಡುತ್ತ ಬೆಳಗುವ ಮುತ್ತು ! ತನುವಿನ ಈ ಅರಿವನ್ನು ತನುವನ್ನು ಆವರಿಸಿದ ಮನದಿಂದಲೇ ತಿಳಿದಾತನೇ ಶರಣ ! ಹೀಗೆ ವೇಷಧರಿಸಿ ಶರಣನೆಂದು ಹೆಸರಿಟ್ಟುಕೊಂಡವರೆಲ್ಲ ಶರಣರಲ್ಲ. ಅವರು ಕಾಳು ಮನುಜರು. ಕೂಳಿಗಾಗಿ ಕಾಳು ಪಡೆಯಲು ವೇಷ ಹಾಕಿಕೊಂಡವರು. ಅಡಗು ಕಚ್ಚಿಕೊಂಡ ಹಡಕಿ ಮನುಜರು; ಹೇಸಿ ಮನುಜರು. ಇವರನ್ನು ಶರಣರಿಗೆ ಸರಿಗಟ್ಟಲು ಬರದು ಎಂದು ಅಪ್ಪಣ್ಣ ಶರಣರು ಕಠಿಣವಾಗಿ ನುಡಿದಿದ್ದಾರೆ.

143

ನುಡಿದರೆ ಗುರುವಾಗಿ ನುಡಿಯ ಬೇಕು, ನಡೆದರೆ ಪರವಾಗಿ ನಡೆಯಬೇಕು.
ಕುಳಿತರೆ ಲಿಂಗವಾಗಿ ಕುಳಿತಿರಬೇಕು, ಇದ್ದರೆ ಜಂಗಮವಾಗಿ ಇರಬೇಕು.
ಈ ನಾಲ್ಕರ ಹೊಂದಿಗೆಯನರಿಯದವರು
ಎಷ್ಟು ದಿನವಿದ್ದರೂ ಫಲವೇನು ಹೇಳಾ,
ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ ?

ನುಡಿದರೆ ಗುರುವಾಗಿ ನುಡಿಯಬೇಕು, ನಡೆದರೆ ಪರವಾಗಿ ನಡೆಯ ಬೇಕು:

ಜಲಬಿಂದು ಮುತ್ತಾಗಿ ಬೆಳಗುತ್ತದೆ ; ನುಡಿಯುವುದಿಲ್ಲ . ನುಡಿಯುವ ಅವಶ್ಯಕತೆಯೂ ಅದಕ್ಕಿಲ್ಲ. ಹಾಗೆಯೇ ಜಲಬಿಂದುವೇ ಗರ್ಭ ಹೊಕ್ಕು; ನೋಡುವ ಕೇಳುವ ಮೂಸಿಸುವ ರುಚಿಸುವ ಸ್ಪರ್ಶಿಸುವ ನಡೆದಾಡುತ್ತಾ ನುಡಿಯುವ ಅರಿವಿನ ಲಿಂಗವಾಗಿ ಹೊರಬಂದಿದೆ.

ಕಣ್ಣಿಗೆ ನೋಡಿ ಆನಂದ ಪಡುವ ಅರಿವಿನ ಶಕ್ತಿಯಿದೆ. ಅದು ಮುತ್ತಿನಂತೆ ಹೊಳೆಯುತ್ತದೆ; ಮುತ್ತಿನಂತೆ ನುಡಿಯದೆ ಬೆಳಗುತ್ತದೆ ; ಬೆಳಗುವುದು ಮಾತ್ರ ಕಣ್ಣಿನ ಕೆಲಸ ; ನುಡಿಯುವುದಲ್ಲ.

ಏಕೆಂದರೆ ಕಣ್ಣಿಗೆ ಬಾಯಿಯಿಲ್ಲ. ಹೀಗಾಗಿ ಕಣ್ಣು ಅರಿವುಳ್ಳದ್ದಾಗಿದೆ.

ಕಿವಿಗೆ ಕೇಳುವ ಅರಿವಿನ ಶಕ್ತಿಯಿದೆ. ಅದು ನಿಃಶಬ್ದ ಬ್ರಹ್ಮ. ಕಿವಿಗೂ ಬಾಯಿಯಿಲ್ಲ. ಕೇಳಿದುದನ್ನು ನಿಃಶಬ್ದ ಮಾಡಿ ಜೀರ್ಣಸಿಕೊಳ್ಳುತ್ತದೆ. ಹೀಗಾಗಿ ಕಿವಿ ಕೂಡಾ ಗುರುವಿನ ಕಾರ್ಯ ನಿರ್ವಹಿಸುತ್ತದೆ.

ಮೂಗು ಪರಿಮಳವನ್ನು , ದುರ್ಗಂಧವನ್ನು ಹೀರಿ ಮರು ನುಡಿಯದೆ ಆನಂದದಿಂದ ಅನುಭವಿಸುತ್ತದೆ. ಮೃಷ್ಠಾನ ಪರಿಮಳದಿಂದ ಕೂಡಿದ್ದರೆ ಅದು ಉಂಡಮೇಲೆ ಹೊರಬರುವ ಮತ್ತೊಂದು ಪದಾರ್ಥ ಮಲ. ಅದು ಕೂಡಾ ಮೃಷ್ಠಾನ್ನವೇ ಆಗಿದೆ. ಅದನ್ನು ಹಂದಿ ನಾಯಿ ಹಸು ಕೀಟಗಳು ಮೃಷ್ಠಾನ್ನದಂತೆ ಉಣ್ಣುತ್ತವೆ. ಹೀಗಾಗಿ ಮೂಗು ಕೂಡಾ ಅರಿವುಳ್ಳ ಗುರುವೇ ಆಗಿದೆ.

ಚರ್ಮದಲ್ಲಿ ಸ್ಪರ್ಶಿಸಿ ಸುಖಿಸುವ ನಿರ್ಭಾವ ಶಕ್ತಿಯಿದೆ. ಚರ್ಮವೆಲ್ಲ ಒಂದೇ. ಅದರೊಳಗೆ ಅಡಗಿದ ಪದಾರ್ಥವೆಲ್ಲ ಒಂದೇ ಎಂದು ತಿಳಿಯುವ ಶಕ್ತಿ ಚರ್ಮಕ್ಕಿದೆ. ಚರ್ಮ ಕೂಡಾ ನುಡಿಯುವುದಿಲ್ಲ. ಅರಿವಿನಿಂದ ಸ್ಪರ್ಶಿಸುತ್ತದೆ. ಹೀಗಾಗಿ ಚರ್ಮವೂ ಕೂಡಾ ಗುರುವೇ ಆಗಿದೆ.

ನಾಲಗೆಗೆ ಅನೇಕ ರಸದ ರುಚಿಗಳನ್ನು ಅರಿವಿನಿಂದ ಆಸ್ವಾದಿಸುವ ಶಕ್ತಿಯಿದೆ. ಎರಡು ಮೂರು ತುತ್ತಿನಲ್ಲಿಯೇ ರುಚಿಯನ್ನು ಅರುಚಿಯನ್ನಾಗಿ ಮಾಡಿಕೊಳ್ಳುವ ಅದ್ಭುತ ಶಕ್ತಿಯಿದೆ. ಮೊದಲ ತುತ್ತು ಸಿಹಿಯಾದರೆ, ಆ ಸಿಹಿ ಎರಡನೇ ತುತ್ತಿನಲ್ಲಿ ಇರುವುದಿಲ್ಲ. ಮೂರನೇ ತುತ್ತಿನಲ್ಲಿ ಸಿಹಿ ನಿರ್ನಾಮವಾಗಿ ನಾಲಗೆ ಪದಾರ್ಥದ ರುಚಿ ಎಣಿಸದೆ ಅಂಗಕ್ಕೆ ಅನ್ನ ತಳ್ಳುತ್ತದೆ. ನಾಲಿಗೆ ಕೂಡಾ ನುಡಿಯುವುದಿಲ್ಲ; ನಡೆದು ಅರಿವಿನ ಮಾರ್ಗ ಸೂಚಿಸುತ್ತದೆ. ಹೀಗಾಗಿ ನಾಲಗೆ ಕೂಡಾ ಗುರುವೇ ಆಗಿದೆ.

ಬಾಯಿ ಮಾತ್ರ ಸುಳ್ಳು ನುಡಿಯುತ್ತದೆ. ಕಣ್ಣು, ಕಿವಿ, ಮೂಗು, ಚರ್ಮ, ನಾಲಗೆಯ ಪಾತ್ರವನ್ನು ಬಾಯಿಯೇ ವಹಿಸಿಕೊಂಡು ನೋಡಿದೆನೆಂದು ನುಡಿಯುತ್ತದೆ. ನೋಡಲು ಬಾಯಿಗೆ ಕಣ್ಣಿಲ್ಲ. ಕೇಳಿದೆನೆಂದು, ಮುಟ್ಟಿದೆನೆಂದು, ಮೂಸಿಸಿದೆನೆಂದು, ರುಚಿಸಿದೆನೆಂದು ಸುಳ್ಳು ಬೊಗಳುತ್ತದೆ.

ಸಕಲ ಅಂಗಗಳಲ್ಲಿ ಗುರುವಾಗಿ ನುಡಿಯುವ ಐದು ಗುರುಗಳು ವಾಸವಾಗಿದ್ದಾರೆ. ಇವರನ್ನು ಜಗದ್ಗುರುಗಳೆಂದು ಕರೆಯಬಹುದು. ಈ ಸದ್ಗುರುಗಳ ನಡೆ ಇಹದ ನಡೆಯಲ್ಲ. ಅದು ಪರದ ನಡೆ, ಕೈಲಾಸದ ನಡೆ. ಸತ್ಯದ ನಡೆ. ಅರಿವಿನ ನೋಟದ ನಡೆ.

ಪಂಚ ಗುರುಗಳಿಂದ ಭರಿತವಾದ ಅಂಗವೇ ಲಿಂಗ. ಇದು ಜಂಗಮವೂ ಹೌದು. ಇಂತಹ ಸದ್ಗುರುಗಳನ್ನು ಅರಿಯದ ಮನ ಅಂಗದಲ್ಲಿ ಎಷ್ಟುದಿನ ವಾಸವಿದ್ದರೇನು? ಗುರುವಾಗಿ ನುಡಿಯದು; ಪರವಾಗಿ ನಡೆಯದು; ಲಿಂಗವೆಂದರೇನು ಜಂಗಮವೆಂದರೇನೆಂದು ಮೊದಲೇ ತಿಳಿಯದು. ಇಂತಹ ಅರಿವಿನೆಡೆಗೆ ಸುಳಿಯದ ಮನ ಅಂಗವೆಂಬ ಲಿಂಗದಲ್ಲಿ ವಾಸವಾಗಿದ್ದರೂ ನಿಷ್ಫಲ!

144

ನುಡಿದರೇನಯ್ಯ ನಡೆ ಇಲ್ಲದನ್ನಕ್ಕ ?
ನಡೆದರೇನಯ್ಯ ನುಡಿ ಇಲ್ಲದನ್ನಕ್ಕ ?
ಈ ನಡೆನುಡಿಯರಿದು ಏಕವಾಗಿ,
ತಾವು ಮೃಡಸ್ವರೂಪರಾದ ಶರಣರಡಿಗೆರಗಿ ನಾನು ಬದುಕಿದೆನಯ್ಯಾ
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಕೋಗಿಲೆ ಹಾಡುವುದಕ್ಕಾಗಿ ಅದರ ಧ್ವನಿ ಬಳಕೆಯಾಗುತ್ತದೆ. ಕಾಗೆ ಕೋಳಿಗಳ ಧ್ವನಿ ಬಳಕೆಯಾಗುವುದು ಕೂಗಿ ಕರೆಯುವುದಕ್ಕಾಗಿ. ಹಾಗೆಯೇ ತನುವಿನ ಧ್ವನಿ ಇರುವುದು ತನ್ನ ಚೇತನ ಶಕ್ತಿ ಬಳಕೆಯಾಗುವುದಕ್ಕಾಗಿ ಮಾತ್ರ. ಆದರೆ ಮನ ತನ್ನ ಸಂತೋಷಕ್ಕಾಗಿ ತನುವಿನ ಧ್ವನಿಯನ್ನು ಯರ್ರಾ ಬಿರ್ರಿಯಾಗಿ ಬಳಸುತ್ತದೆ. ನಿರಪರಾಧಿ ತನುವನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಅದಕ್ಕೆ ಶಿಕ್ಷೆ ಕೊಡುತ್ತದೆ.

ತನುವಿನಲ್ಲಿ ಐದು ಮಹಾಚೇತನಗಳು ತನ್ಮಯವಾಗಿವೆ. ಕಣ್ಣು ನೋಡುವ ಕಾಯಕದಲ್ಲಿ ನಿರತವಾಗಿದೆ. ಅದು ಕೇವಲ ನೋಡುತ್ತದೆ. ನೋಡಿದುದನ್ನು ನೋಡಿ ನೋಡಿಯೇ ಕಾಯಕ್ಕೆ ಅದರ ಸತ್ಯ ಮತ್ತು ಆನಂದವನ್ನು ರವಾನಿಸುತ್ತದೆ. ನೋಟದ ತರಂಗಗಳು ಕಾಯದಲ್ಲಿ ಸಂಚಲನವನ್ನುಂಟು ಮಾಡುತ್ತವೆ. ಕಣ್ಣು ನುಡಿದು ಹೇಳುವುದಿಲ್ಲ. ಏಕೆಂದರೆ ಅದಕ್ಕೆ ಬಾಯಿಯಿಲ್ಲ. ಬಲಿಷ್ಠವಾದ ನೋಟದ ತರಂಗಗಳು ಮಾತ್ರ ಇವೆ. ಕಣ್ಣು ಎಷ್ಟೊಂದು ಶಕ್ತಿ ಶಾಲಿ ಎಂದರೆ ಅದು ನೋಡುವಾಗ ತನುವಿನ ಕಣ ಕಣಗಳಲ್ಲಿ ಕಣ್ಣುಗಳನ್ನು ಸೃಷ್ಟಿ ಮಾಡುತ್ತದೆ. ಕಣ್ಣಿನೊಂದಿಗೆ ತನುವಿಗೂ ಆ ಬಲವನ್ನು ರವಾನಿಸುತ್ತದೆ. ಹೀಗಾಗಿ ಕಣ್ಣಿಗೆ ನುಡಿಯುವ ಅವಶ್ಯಕತೆಯೇ ಇಲ್ಲ. ನೋಡಿ ನಡೆಯುವುದೊಂದೇ ಅದರ ಕೆಲಸ.

ಹೀಗೆಯೇ ತನುವಿನಲ್ಲಿ ತನ್ಮಯವಾದ ಚರ್ಮ, ಮೂಗು, ನಾಲಿಗೆ, ಕಿವಿಗಳ ಕರ್ತವ್ಯವೂ ಆಗಿದೆ. ಈ ಐದೂ ಚೇತನಗಳು ನುಡಿಯುವುದಿಲ್ಲ. ನೋಡುವುದು, ಕೇಳುವುದು, ಸ್ಪರ್ಶಿಸುವುದು, ರುಚಿಸುವುದು, ಪರಿಮಳವನ್ನು ಆಸ್ವಾದಿಸುವುದೇ ಇವುಗಳ ಕಾಯಕವಾಗಿದೆ. ನುಡಿಯುವ ಅವಶ್ಯಕತೆಯೇ ಇವುಗಳಿಗೆ ಇಲ್ಲ.

ತನುವಿಗೆ ಬಾಯಿ ಬಂದಿದೆ. ಇದು ಐದು ಚೇತನಗಳಿಗೆ ಆಹಾರ ಒದಗಿಸಿದರೆ ಸಾಕು. ತನು ಧನ್ಯನಾಗುತ್ತದೆ. ಆದರೆ ಐದು ಮಹಾ ಚೇತನಗಳನ್ನು ಮರೆಯಿಸಿ ತಾನೇ ಚೇತನವೆಂದು ನುಡಿದು ಹೇಳುತ್ತದೆ. ಆದರೆ ನುಡಿದಂತೆ ನಡೆಯಲು ಬರುವುದಿಲ್ಲ. ಅದು ಸಾಧ್ಯವೂ ಅಲ್ಲ.

ಬಾಯಿಗೆ ನೋಡಲು ಬರುವುದಿಲ್ಲ; ನೋಡಿದೆನೆಂದು ಬಾಯಿಯ ಮೂಲಕ ನುಡಿದು ಹೇಳಿದರೆ ಅದು ಸುಳ್ಳಲ್ಲವೆ ? ಹೀಗಾಗಿ ಅದಕ್ಕೆ ನಡೆಯಲು ಸಾಧ್ಯವಾಗುವುದಿಲ್ಲ.

ಬಾಯಿಗೆ ಕೇಳಲು ಬರುವುದಿಲ್ಲ. ಮೂಸಿಸಲು ಬರುವುದಿಲ್ಲ. ಸ್ಪರ್ಶಿಸಲು ಬರುವುದಿಲ್ಲ. ನಾಲಿಗೆಯಂತೆ ರುಚಿಸಲು ಬರುವುದಿಲ್ಲ. ಆದರೂ ಈ ಎಲ್ಲಾ ಮಹಾ ಚೇತನಗಳ ಕಾಯಕವನ್ನು ನುಡಿಯುವ ಮೂಲಕ ನಡೆದೆನೆಂದು ನುಡಿಯುತ್ತದೆ. ಐದು ಮಹಾ ಚೇತನಗಳ ನಡೆಯರಿಯುವ ಶಕ್ತಿ ಬಾಯಿಗೆ ಇಲ್ಲ ದಿರುವುದರಿಂದ ಆ ಚೇತನಗಳೊಂದಿಗೆ ಬಾಯಿಗೆ ಏಕವಾಗಲು ಬರುವುದಿಲ್ಲ. ಮೃಡಸ್ವರೂಪರಾದ ಶರಣರು ಮಾತ್ರ ನಡೆಯುತ್ತಾರೆ. ಅವಶ್ಯವಿದ್ದರೆ ನಡೆದಂತೆ ನುಡಿಯುತ್ತಾರೆ.

ಶರಣರು ತಂತ್ರಜ್ಞಾನಿಗಳು. ಐದು ಮಹಾಚೇತನಗಳನ್ನು ಏಕವಾಗಿಸಿಕೊಂಡು ನಡೆದರು; ನಡೆದಂತೆ ನುಡಿದರು. ಸಾಧ್ಯವಾದರೆ ಶರಣರನ್ನು ಹುಡುಕಿ, ಅವರಿಗೆರಗಿ ಬದುಕುವುದನ್ನು , ನಡೆದಂತೆ ನುಡಿಯುವುದನ್ನು ಕಲಿಯಬಹುದು. ಬಸವಣ್ಣನಿಗೆ ಪ್ರಿಯವಾದ ಕೂಡಲ ಚೆನ್ನಬಸವಣ್ಣನೇ ತಾನಾಗಬಹುದು.

145

ಪರಾಪರದಲ್ಲಿ ಹುಟ್ಟಿದ ಪಾದೋದಕ.

ಪರಬ್ರಹ್ಮದ ಪರಮಪ್ರಕಾಶವೇ ಪಾದೋದಕ.
ಪರಿಪೂರ್ಣ ಪ್ರವೇಶಿಸಿಕೊಂಡಿರ್ಪುದೆ ಪಾದೋದಕ.
ಪರಮನಂಘ್ರಿ ಕಮಲದಲ್ಲಿ ಹುಟ್ಟಿದುದೆ ಪಾದೋದಕ.
ತರತರದ ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ.
ಶರಣ ಐಕ್ಯದೊಳಡಗಿದ ಪಾದೋದಕ. ಅದಕ್ಕೆ ದೃಷ್ಟ:
ಪಾಕಾರಂ ಪರಮ ಜ್ಞಾನಂ ದೋಕಾರಂ ದೋಷನಾಶನಂ।
ದಕಾರಂ ದಹತೇ ಜನ್ಮ ಕಕಾರಂ ಕರ್ಮಭೇದನಂ।।
ಎಂದುದಾಗಿ, ಇಂತಪ್ಪ ಪಾದೋದಕವ ಕೊಂಡು,
ಪರಿಣಾಮ ತೃಪ್ತಿಯನೆಯ್ದುವ ಸದ್ಭಕ್ತರಿಗೆ ನಮೊ ನಮೊ ಎಂಬೆ.
ಬಸವಪ್ರಿಯ ಕೂಡಲಸಂಗಮದೇವಾ, ಮಾಂ ತ್ರಾಹಿ, ತ್ರಾಹಿ ಕರುಣಾಕರನೆ.

'ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು, ಬಯಲು ಬಯಲಾಗಿ ಬಯಲಾಯಿತ್ತಯ್ಯಾ' ಬಯಲು ಎನ್ನುವುದು ಒಂದು ಸ್ವರ್ಗ; ಅದು ಸ್ವರ್ಗಕ್ಕೂ ಮಿಗಿಲಾದದ್ದು. ಸೃಷ್ಟಿಗೆ ಕಾರಣವಾದ ಸಕಲ ಬೀಜಗಳು ಅಲ್ಲಿಯೇ ಜನ್ಮ ತಳೆದವು. ಭೂಮಿ, ಸೂರ್ಯ, ಚಂದ್ರ, ನಕ್ಷತ್ರಗಳು, ಗಾಳಿ, ನೀರು, ಬೆಂಕಿಯ ಬೀಜಗಳಿಗೆ ಬಯಲು ಜನ್ಮ ನೀಡಿತು. ಬಯಲೇ ಬಿತ್ತಿತು. ಬಯಲೇ ಬೆಳೆಯಿತು. ಸೃಷ್ಟಿ ಮಾಡಿದ ಸಕಲ ವಸ್ತುಗಳನ್ನು ಪುನಃ ಬಯಲಲ್ಲಿಯೇ ಬಯಲು ಮಾಡಿ ಬಯಲು ತನ್ನ ಗರ್ಭದಲ್ಲಿ ಬಂಧಿಸಿಕೊಂಡಿತು.

ಜಲಜನಕವು ಬಯಲು, ಆಮ್ಲಜನಕವೂ ಬಯಲು ಇವೆರಡನ್ನೂ ಬಯಲು ತನ್ನ ಗರ್ಭದಲ್ಲಿಟ್ಟುಕೊಂಡು ತನಗೆ ಬೇಕಾದಾಗ ತಾನು ಅದರಲ್ಲಿ ಹುದುಗಿ ಜಲ ಮಾಡುತ್ತದೆ. ಆ ಜಲವನ್ನೇ ಗಟ್ಟಿಮಾಡಿ ಭೂಮಿಯನ್ನಾಗಿಸುತ್ತದೆ. ಖನಿಜವನ್ನಾಗಿಸುತ್ತದೆ.

ಬಯಲ ಜಲವೆ ಸಕಲ ಬೀಜಗಳಿಗೆ ಜನ್ಮ ನೀಡಿ, ಜಲ ಹರಿದು, ಆ ಜಲವೇ ವೃಕ್ಷವಾಗಿ, ಆ ಜಲವೇ ಪುನಃ ಬೀಜವಾಗಿ ವೃಕ್ಷವಾಗಿ ಬಯಲು ಸೇರಿ ಬಯಲಾಗುತ್ತದೆ. ಬಯಲ ಜೀವ ಜಲಬಿಂದುವೇ ಗರ್ಭ ಸೇರಿ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಆಗಿ ಸುಂದರವಾದ ಚರ್ಮದೊಂದಿಗೆ ಬಂಧಿಸಿ ತನುವಾಗಿದೆ. ನಡೆದಾಡುತ್ತ ನುಡಿಯ ಬೋಧಿಸುವ ಬೋಧೀ ವೃಕ್ಷವಾಗಿದೆ.

ಸ್ವರ್ಗದಲ್ಲಿರುವ ಬಯಲು ಜೀವ ಜಲಬಿಂದುವಿನಲ್ಲಿ ಬಂಧಿಯಾಗಿ ಪರಿಪೂರ್ಣ ಗರ್ಭವನ್ನು ಪ್ರವೇಶ ಮಾಡುವ ಮೂಲಕ ಪಾದೋದಕ ಎನ್ನುವ ಹೆಸರು ಪಡೆಯುತ್ತದೆ. ಈ ಉದಕ ಸಾಮಾನ್ಯವಾದುದಲ್ಲ. ಈ ಉದಕಕ್ಕೆ ನೋಡಿ ತಿಳಿಯುವ, ಕೇಳಿ, ಮೂಸಿಸಿ, ರುಚಿಸಿ, ಸ್ಪರ್ಶಿಸಿ ಆನಂದ ಪಡುವ, ಅಭಿವ್ಯಕ್ತಪಡಿಸುವ ಶಕ್ತಿಯಿದೆ.

ಈ ಪಾದೋದಕದಲ್ಲಿ ತರತರದ ಭಕ್ತರು, ಮಾಹೇಶ್ವರರು, ಪ್ರಸಾದಿ, ಪ್ರಾಣಲಿಂಗಿಗಳು, ಶರಣರು, ಐಕ್ಯರು ಅಡಕವಾಗಿದ್ದಾರೆ. ಇದರಲ್ಲಿ ಪರಮಜ್ಞಾನವೂ ಸಕಲ ದೋಷ ನಿವಾರಣೆ ಮಾಡುವ ಅಂಜನವೂ ಜನ್ಮಕ್ಕೆ ಕಾರಣವಾದ, ಕರ್ಮ ಭೇದನ ಮಾಡುವ ನಿರ್ಗುಣವೂ ಅಡಕವಾಗಿದೆ.

ಇಂತಹ ಪಾದೋದಕವನ್ನು ಕಂಡು ಅದನ್ನು ಕೊಂಡು ಪಾದೋದಕದ ಪರಿಣಾಮವನುಂಡು, ತೃಪ್ತಿಯನ್ನು ಹೊಂದುವ ಸದ್ಭಕ್ತನಿಗೆ ನಮೋ ನಮೋ, ಮಾಂ ತ್ರಾಹಿ, ತ್ರಾಹಿ ಕರುಣಾಕರನೇ ಎಂದಿದ್ದಾರೆ ಅಪ್ಪಣ್ಣ ಶರಣರು.

ಪಿಂಡವಾದುದ ಪಿಂಡಜ್ಞಾನ ಹುಟ್ಟಿ ಅರಿಯನಯ್ಯಾ ಶರಣನು.
ಅದೆಂತೆಂದಡೆ; ಆತ್ಮರುಗಳಲ್ಲಿ ಪರಮಾತ್ಮನ ಕಳೆ ವೇದ್ಯವಾಗಿದೆ.
ತನುವ ರುಧಿರ ಕೂಡಿಕೊಂಡು ಅಷ್ಟ ತನು ಮೂರ್ತಿ ಎನಿಸಿಕೊಂಡು,
ಸಪ್ತ ಧಾತು ಬೆರೆಸಿಕೊಂಡು, ಷಡುವರ್ಣವ ಕೂಡಿಕೊಂಡು,
ಪಂಚತತ್ವವ ಪ್ರವೇಶಿಸಿಕೊಂಡು,
ಚತುಷ್ಟಯ ಕರಣವ ದಳಕುಳವ ಮಾಡಿಕೊಂಡು,
ಸ್ಥೂಲ ಸೂಕ್ಷ್ಮ ಕಾರಣವ ಅಂಗವ ಮಾಡಿಕೊಂಡು,
ಕಾಯ ಜೀವವೆರಡು ದಳಕುಳವ ಮೆಟ್ಟಿಕೊಂಡು,
ಏಕದಳದ ಮೇಲೆ ಪರಮಾತ್ಮ ತಾ ನಿಂದು, ಸಾಕ್ಷಿಕನಾಗಿ ಸಾವು ಹುಟ್ಟನರಿವುತ್ತ,
ಜ್ಞಾನವಿದು ಅಜ್ಞಾನವಿದು ಎಂದು ಕಾಣುತ್ತ, ಸಂಸಾರ ಹೇಯವ ಮಾಡುತ್ತ,
ಲಿಂಗವ ಹಾಡುತ್ತ, ಲಿಂಗವ ಹಾಡುತ್ತ, ಜಂಗಮವ ಹರಸುತ್ತ,
ಲಿಂಗವಾಗಿ ಬಂದು ಗುರುಪಾದವಿಡಿದಾತನೀಗ ತತ್ ಶಿಷ್ಯ.
ಆ ಶಿಷ್ಯಂಗೆ ಗುರುಸ್ವಾಮಿ, ಕಾಯವಿದು ಕರಣವಿದು
ಜೀವವಿದು ವಾಯುವಿದು,
ಮನವಿದು ಪ್ರಾಣವಿದು ಮಾಯವಿದು ಮದವಿದು ಮಲವಿದೆಂದು
ಆತನಾದಿಯನರುಹಿ, ತನ್ನಾದಿಯ ಕುರುಹಿದೇಕೋ ಮಗನೇ ಎಂದು,
ಗಣಸಾಕ್ಷಿಯಾಗಿ ಹಸ್ತ ಮಸ್ತಕ ಸಂಯೋಗ ಮಾಡಿ,
ಕರ್ಣದಲಿ ಮಂತ್ರವ ಹೇಳಿ, ಕರಸ್ಥಲಕ್ಕೆ ಲಿಂಗವ ಕೊಡುವಲ್ಲಿ,
ಮಗನೆ, ಹಸ್ತವೆಂದರೆ
ಮಂತ್ರಲಿಂಗವಾಗಿ ಇದೇನೆ,
ಮಸ್ತಕವೆಂದರೆ ಚಿದ್ಬ್ರಹ್ಮದಲ್ಲಿ ತೋರುವ ಸುನಾದಕಳೆ ನಾನೇಯಾಗಿ ಇದೇನೆ.
ಸಂಯೋಗವೆಂದರೆ ಸರ್ವಾಂಗದಲ್ಲಿ ಪ್ರಾಣಜಂಗಮವಾಗಿ ನಾನೇ ಇದೇನೆ.
ತ್ರಿವಿಧ ಉಪದೇಶವೆ ತ್ರಿವಿಧ ಪ್ರಣವವಾಗಿ ಅದಾವೆ.
ತ್ರಿವಿಧ ಪ್ರಣವವೆ ಗುರುಲಿಂಗಜಂಗಮವೆಂದು,
ಆ ಗುರುಲಿಂಗಜಂಗಮವೆ ಇಷ್ಟ ಪ್ರಾಣ ತೃಪ್ತಿಯೆಂದು,
ಆ ಇಷ್ಟ ಪ್ರಾಣ ತೃಪ್ತಿಯ ಆಚಾರಾದಿ ಮಹಾಲಿಂಗವೆಂದು,
ಆ ಆಚಾರಾದಿ ಮಹಾಲಿಂಗವೇ ಮೂವತ್ತಾರು ಲಿಂಗವೆಂದು,
ಆ ಮೂವತ್ತಾರು ಲಿಂಗವೆ ಇನ್ನೂರಾ ಹದಿನಾರು ಲಿಂಗವೆಂದರಿದು,
ಇಂತಿವೆಲ್ಲಕ್ಕೆ ಇಷ್ಟ ಗುರುವೆ ಆದಿ, ಇಷ್ಟಲಿಂಗವೆ ಮಧ್ಯ,
ಇಷ್ಟಲಿಂಗವೆ ಅವಸಾನ.
ಇದು ಕಾರಣ, ಗುರುವಿಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ.
ಈ ತ್ರಿವಿಧವು ತ್ರಿವಿಧ ಮುಖದಲ್ಲಿ ಗುರುವಿಂದ ತನು ಶುದ್ಧ ಪ್ರಸಾದವಾಯಿತ್ತು.
ಲಿಂಗದಿಂದ ಮನ ಸಿದ್ಧ ಪ್ರಸಾದವಾಯಿತ್ತು.

ಜಂಗಮದಿಂದ ಪದಾರ್ಥ ಪ್ರಸಿದ್ಧ ಪ್ರಸಾದವಾಯಿತ್ತು.
ಈ ತ್ರಿವಿಧ ಪ್ರಸಾದವೆ ಅಂಗವಾದ ಶರಣಂಗೆ
ಅರಿವೇ ಗುರು, ಜ್ಞಾನವೆ ಲಿಂಗ, ಭಾವವೆ ಜಂಗಮು.
ಇಂತಪ್ಪ ಶರಣ ಮತ್ತೆ ಗುರುವೆನ್ನ, ಲಿಂಗವೆನ್ನ, ಜಂಗಮುವೆನ್ನ,
ಆಚಾರವೆನ್ನ, ತಾನೆನ್ನ ನಾನೆನ್ನ, ಏನೂ ಎನ್ನ, ಬಸವಪ್ರಿಯ
ಕೂಡಲಚೆನ್ನ ಸಂಗದೇವ ತಾನೆ ತನ್ಮಯವಾಗಿ.

ಜಲ ಪಿಂಡವಾದುದನು, ಆ ಪಿಂಡಕ್ಕೆ ಜ್ಞಾನವಾದುದನು ಶರಣ ಮಾತ್ರ ಬಲ್ಲನು. ಶರಣ ಪಿಂಡಜ್ಞಾನಕ್ಕೆ ಶರಣು ಹೋಗಿ ಶರಣನಾಗಿದ್ದಾನೆ. ಜ್ಞಾನವೆಂದರೆ ಕಲಿಯುವುದಲ್ಲ; ಪಿಂಡದಲ್ಲಿರುವುದನ್ನು ತಿಳಿಯುವುದು. ತಿಳಿದು ಆ ಜ್ಞಾನವೇ ತಾನಾಗುವುದು.

ಸಕಲ ತನುಗಳಲ್ಲಿಯೂ ಪರಮಾತ್ಮನೇ ಇದ್ದಾನೆ. ರಕ್ತಮಯವಾದ ತನುಗಳೆಲ್ಲ ಒಂದೇ ಆಗಿವೆ. ಇಂತಹ ತನುವೇ ಅಷ್ಟ ತನುಮೂರ್ತಿ ಎನ್ನಿಸಿಕೊಂಡು ಸಪ್ತಧಾತು ಬೆರೆಸಿಕೊಂಡಿದೆ. ಷಡುವರ್ಣವ ಕೂಡಿಕೊಂಡು ಪಂಚತತ್ವವನ್ನು ಪ್ರವೇಶಿಸಿದೆ.

ಸ್ಥೂಲ ತನು, ಸೂಕ್ಷ್ಮ ತನು, ಕಾರಣ ತನು, ನಿರ್ಮಲ ತನು, ಆನಂದ ತನು, ಚಿನ್ಮಯ ತನು, ಚಿದ್ರೂಪತನು, ಶುದ್ಧ ತನುವೆಂದು ತನು ಹೆಸರು ಪಡೆದಿದೆ.

ಅಂಗ ಒಂದೇ; ಆದರೂ ಅದಕ್ಕೆ ಎಂಟು ಹೆಸರುಗಳು! ಸೂಕ್ಷ್ಮ ಕಾರಣ ಇವೆರಡೂ ಅಂಗಗಳು ಕಾಣುವುದಿಲ್ಲ. ಇವೆರಡಿಲ್ಲದೆ ಸ್ಥೂಲಾಂಗವೇ ಇಲ್ಲ. ಕಾಯ ಕಂಡರೆ ಜೀವ ಕಾಣುವುದಿಲ್ಲ; ಜೀವವಿಲ್ಲದೆ ಕಾಯವಿಲ್ಲ. ಜೀವ ಕಾಯವನ್ನು ಮೆಟ್ಟಿ ಇವೆರಡನ್ನು ಏಕ ಮಾಡಿಕೊಂಡು ಸಾಕ್ಷಿಯಾಗಿ ಹುಟ್ಟು ಸಾವುಗಳನ್ನು ಜ್ಞಾನ ಅಜ್ಞಾನವನ್ನು ಕಾಣುತ್ತಾ, ಸಂಸಾರವನ್ನು ಹೇಯ ಮಾಡುತ್ತಾ ಪರಮಾತ್ಮ ಕಾಯ ಹಿಡಿದು ಕಾಯದಲ್ಲಿಯೇ ನಿಂತಿದ್ದಾನೆ.

ಲಿಂಗವ ಹಾಡುತ್ತ, ಅಂಗವೇ ಲಿಂಗವೆಂದು ಹಾಡುತ್ತಾ, ಜಂಗಮವನು ಹರಸುತ್ತಾ ಲಿಂಗವಾಗಿ ಬಂದು ಅರಿವೆಂಬ ಗುರುಪಾದವನು ಹಿಡಿದಾತನೆ ಸೂಕ್ಷ್ಮ ಕಾಯವೆಂಬ ಶಿಷ್ಯ. ಈ ಶಿಷ್ಯನ ಮೂಲಕ ಸ್ಥೂಲ ಕಾಯಕ್ಕೆ ಕಾರಣವಾದ ಕಾರಣ ಕಾಯದ ಪರಮಾತ್ಮನನ್ನು ಕಂಡುಕೊಳ್ಳಬೇಕಿದೆ.

ಕಾರಣ ಕಾಯಕ್ಕೆ ಕಾರಣವಾದ ಪರಮಾತ್ಮನನ್ನು ಕಂಡ ಶ್ರೀ ಗುರುಸ್ವಾಮಿಯು, ಪರಮಾತ್ಮನನ್ನು ಕಾಣುವ ತವಕವುಳ್ಳ ಶಿಷ್ಯನನ್ನು ಕರೆದು ಕಾಯವಿದು, ಕರಣವಿದು, ಜೀವವಿದು, ವಾಯುವಿದು, ಮನವಿದು, ಪ್ರಾಣವಿದು, ಮಾಯವಿದು, ಮದವಿದು, ಮಲವಿದೆಂದು ಶಿಷ್ಯನ ಕಾಯವಿಡಿದು ತಿಳಿಸುತ್ತಾ ಪರಮಾತ್ಮನ ಆದಿಯನು ಅರುಹುತ್ತಾನೆ. ತನ್ನಾದಿಯ ಕುರುಹನು ಅಲ್ಲಗಳೆಯುತ್ತಾನೆ. ಮಗನೇ ಎಂದು ಮೈದಡವಿ, ಶ್ರೀಗುರು ಹಸ್ತಮಸ್ತಕ ಸಂಯೋಗ ಮಾಡುತ್ತಾನೆ.

ಕರ್ಣದಲ್ಲಿ ಮಂತ್ರವ ಹೇಳಿ, ಕರಸ್ಥಲಕ್ಕೆ ಲಿಂಗವ ಕೊಟ್ಟು: ಮಗನೆ, ಹಸ್ತವೆಂದರೆ ಕಾಯ; ಕರವೆಂದರೂ ಕಾಯವೆ. ಈ ಕಾಯದ ಮಸ್ತಕದಲ್ಲಿ ಚಿದ್ಬ್ರಹ್ಮವೇ ಅಡಗಿದೆ. ತೋರುವ ಸುನಾದ ಕಳೆಯೂ ನಾನೇ ಆಗಿರುವೆ. ಸರ್ವಾಂಗದಲ್ಲಿ ಅರಿವು ಎನ್ನುವ ಗುರುವೇ ಸಂಗಮವಾಗಿದ್ದಾನೆ. ಪ್ರಾಣವೂ ಆತನೇ ಜಂಗಮವೂ ಆತನೇ ಆಗಿರುವನು.

ಕಾಯವೂ ಒಂದೇ, ಕಾರಣವೂ ಒಂದೇ, ಸೂಕ್ಷ್ಮವೂ ಒಂದೇ ಆಗಿದೆ. ಈ ತ್ರಿವಿಧ ಉಪದೇಶವೇ ತ್ರಿವಿಧ ಪ್ರಣವವಾಗಿದೆ. ಈ ತ್ರಿವಿಧವೇ ಗುರು ಲಿಂಗ ಜಂಗಮವಾಗಿದೆ. ಇಷ್ಟ ಪ್ರಾಣ ತೃಪ್ತಿಯಾಗಿದೆ. ಆಚಾರಾದಿ ಮಹಾಲಿಂಗವೆಂದು ಮೂವತ್ತಾರು ಹೆಸರುಗಳಿಂದ

ಕರೆಯಿಸಿಕೊಂಡಿದೆ. ಇನ್ನೂರಾ ಹದಿನಾರು ಲಿಂಗವೂ ಇದೇ ಆಗಿದೆ.

ಇವೆಲ್ಲವುಗಳಿಗೂ ಗುರುವೇ ಆದಿ, ಗುರುವೇ ಮಧ್ಯ, ಗುರುವೇ ಅವಸಾನ. ಇದು ಕಾರಣ ಗುರುವಿಗೆ ತನುವನು ಅರ್ಪಿಸಿ, ಲಿಂಗಕ್ಕೆ ಮನವನು ಅರ್ಪಿಸಿ, ಜಂಗಮಕ್ಕೆ ಧನವನು ಅರ್ಪಿಸಬೇಕು.

ಗುರುವಿನ ಆಶೀರ್ವಾದದಿಂದಾಗಿ ತನು ಶುದ್ಧ ಪ್ರಸಾದವಾಯಿತು. ಲಿಂಗದಿಂದ ಮನ ಸಿದ್ಧ ಪ್ರಸಾದವಾಯಿತು. ಜಂಗಮದಿಂದ ಪದಾರ್ಥ ಪ್ರಸಿದ್ಧ ಪ್ರಸಾದವಾಯಿತು.

ಈ ತ್ರಿವಿಧ ಪ್ರಸಾದವೂ ಬೇರಲ್ಲ. ಅಂಗವೇ ತ್ರಿವಿಧ ಪ್ರಸಾದವಾದ ಶರಣಂಗೆ ಅರಿವೇ ಗುರು, ಜ್ಞಾನವೇ ಲಿಂಗ, ಭಾವವೇ ಜಂಗಮ. ಹೀಗೆ ಶ್ರೀ ಗುರುದೇವನಿಂದ ತಿಳಿದು, ಹೀಗೆ ತಿಳಿಯುವ, ತಿಳಿ ಹೇಳುವ ಅರಿವಿಗೆ ಶರಣು ಹೋಗಿ ಶರಣನೇ ತಾನಾದ ಶರಣ ಮತ್ತೆ ಗುರು ಎನ್ನುವುದಿಲ್ಲ, ಲಿಂಗ ಎನ್ನುವುದಿಲ್ಲ, ಜಂಗಮ ಎನ್ನುವುದಿಲ್ಲ, ಆಚಾರವೆನ್ನುವುದಿಲ್ಲ, ತಾನೆನ್ನುವುದಿಲ್ಲ, ನಾನು ಎನ್ನುವುದಿಲ್ಲ, ಏನೂ ಎನ್ನುವುದಿಲ್ಲ. ಏಕೆಂದರೆ ಇವೆಲ್ಲವೂ ತಾನು ತಾನೇ ಆಗಿರುವುದರಿಂದ. ಬಸವಣ್ಣನಿಗೆ ಪ್ರಿಯವಾದ ಅರಿವೆಂಬ ಕೂಡಲ ಚೆನ್ನಸಂಗಮದೇವ ತನುವಿನಲ್ಲಿ ತನ್ಮಯವಾಗಿರುವುದರಿಂದ.

147

ಪುರಾತರು ಪುರಾತರು ಎಂದು,
ಪುರಾಣದೊಳಗೆ ಕಥೆಯನೆ ಕಲಿತುಕೊಂಡು
ಪುರದ ಬೀದಿಯೊಳಗೆ ಹರದರಂತೆ,
ಮಾತಿನ ಹಸರವನಿಕ್ಕಿ ಮಾರುವ ಅಣ್ಣಗಳಿರಾ, ನೀವು ಕೇಳಿರೊ.
ಅಂದು ಹೋದವರ ಸುದ್ದಿಯ ನುಡಿದರೆ,
ಇಂದು ಬಂದರೊ. ನಿಮಗೆ ಇಂದು ಬಂದವರನರಿಯದನ್ನಕ್ಕ
ಅಂದು ಹೋದವರ, ಇಂದು ಬಂದವರ ಒಂದೇ ಎಂದರಿದ ಭಕ್ತರ
ಆಚರಣೆಯ ತೋರಿ ಬದುಕಿಸಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಪುರಾತರು, ಶರಣರು, ದಾಸರು, ಸಂತರು ಎಂದು ಪುರಾಣದೊಳಗಿರುವ ಕತೆಯನು ಕಲಿತುಕೊಂಡು ಪುರಪಟ್ಟಣ ಗ್ರಾಮದ ಬೀದಿಗಳಲ್ಲಿ ಹರದರಂತೆ ಹಾಡಿ ಹೊಗಳಿದರೇನು? ಹೊಗಳಿದವನಿಗೆ ಜ್ಞಾನ ದಕ್ಕಲಿಲ್ಲ. ಕೇಳಿದವನೂ ಜ್ಞಾನಿಯಾಗಲಿಲ್ಲ, ಪುರಾತರ ಮಾತನು ಕೇಳಿ, ಆ ಮಾತನೇ ಬೀದಿಯಲ್ಲಿ ಮಾರಿ, ಉಂಡು ತೇಗಿದವನೊಬ್ಬ, ಕೇಳಿ ತೇಗಿದವನೊಬ್ಬ. ಮಾತಿನ ಹಸರವನಿಕ್ಕಿ ಪುರಾತರ ಮಾತ ಮಾರಿದರೇ ಹೊರತು ಮತ್ತೇನನೂ ಮಾಡಲಿಲ್ಲ.

ಮಾತು ಮಾರಿದವನ ಮೇಲೆ, ಪುರಾತರ ಮೇಲೆ ಕೇಳುಗನಿಗೆ ಭಾವದ ರೋಗ ಬಲಿಯಿತೇ ಹೊರತು ನಿರ್ಭಾವಿಯಾಗಲಿಲ್ಲ. ಪುರಾತರು, ತನುವಿನ ಭಾವ ದುರ್ಭಾವ ಕಳೆಯಲು ಮಾತಿನ ಮೂಲಕ ಮಾತ ಕಳೆಯುವ ಮಾತಲ್ಲದ ಮಾತಿನ ನಿರ್ಭಾವ ಸೂತ್ರ ರಚಿಸಿದರು. ಪ್ರತಿ ಅಂಗವೂ ಅರಿವಿನ ಲಿಂಗಾಂಗ ಹೇಗೆ ಎನ್ನುವುದನ್ನು ವಿವರಿಸಿ ಹೇಳಿದರು. ಹೀಗೆ ಹೇಳಿದ ಲಿಂಗಾಂಗವನ್ನೇ ಮಾತಿನ ಮಲ್ಲನಾಗಿ ಹೊಗಳುವುದೆಂದರೇನು? ಸತ್ಯ ಹೇಳಿ

ಸತ್ತು ಹೋದ ಅಂಗದ ಸುದ್ದಿ ನುಡಿದರೆ ಅದು ವ್ಯರ್ಥವಲ್ಲವೆ?

ಅಂದು ಬಂದರು. ಬಂದ ಕೆಲಸ ಪೂರೈಸಿ ಅಂದೇ ಹೋದರು. ಇಂದು ಬಂದವರು ಅಂದು ಬಂದವರು ಒಂದೇ ಅಲ್ಲವೆ? ಅಂದು ಬಂದವರು ಅಂಗದ ಮೂಲಕ ಬಂದರು. ಅರಿವಿನ ಲಿಂಗವಾಗಿ ಹೋದರು. ಇಂದು ಬಂದವರೂ ಅಂಗದ ಮೂಲಕ ಬಂದಿದ್ದಾರೆ; ಅರಿವಿನ ಲಿಂಗವಾಗಿ ಹೋಗುವುದು ಬೇಡವೇ ?

'ನಿತ್ಯ ನಿರಂಜನ ತಾನೆಂದರಿಯದೆ 'ತತ್ತ್ವಮಸಿ' ಎಂದು ಹೊರಗನೆ ಹಾಡಿ ಸತ್ತಿತ್ತಲ್ಲ ಜಗವೆಲ್ಲ ನಾಯಿಸಾವ. ತಮ್ಮ ತಾವರಿಯದೆ ಸತ್ತವರ ಪತ್ರ ಓದಿದಡೆ ಎತ್ತಣ ಮುಕ್ತಿ ಗುಹೇಶ್ವರಾ'

ಪ್ರತಿ ಅಂಗವೂ ನಿರಂಜನ ಮೂರ್ತಿಯೇ ಆಗಿದೆ. ಪ್ರತಿ ಅಂಗದಲ್ಲಿಯೂ ಅರಿವಿನ ತತ್ತ್ವ ಅಡಗಿದೆ. ಅದನ್ನು ಅಂಗವೇ ತಿಳಿಯಬೇಕು. ಆ ತತ್ತ್ವವೇ ತಾನಾಗಬೇಕು. ಎನ್ನುವುದೇ 'ತತ್ತ್ವಮಸಿ' ಎಂದು ಬೊಗಳುತ್ತದೆ ನಾಯಿಯಂತೆ. ಆ ತತ್ತ್ವ ತಾನೇ ಎಂಬುದನು ಅರಿತಿಲ್ಲ. ಆದರೆ ಸೂತ್ರ ಹೊರಚೆಲ್ಲಿದ ಗ್ರಂಥವನ್ನು ಹಾಡುತ್ತದೆ. ಮಾತಿನ ಮೂಲಕ ಮಾರಾಟ ಮಾಡುತ್ತದೆ. ಕೇಳಿದ ಅಂಗ ಆನಂದ ಪಟ್ಟು ಹಾಡಿದ ಅಂಗಕ್ಕೆ ಹಣ ನೀಡುತ್ತದೆ. 'ತತ್ತ್ವಮಸಿ' ಪದ ಸರಕಾಯಿತೆ ಹೊರತು ಸಾರಾಯದ ಮಾರ್ಗವಾಗಲಿಲ್ಲ.

ತಮ್ಮ ತಾವರಿಯದೆ ಸತ್ತವರು ಬರೆದ ಪತ್ರ ಓದಿದಡೆ ಎತ್ತಣ ಮುಕ್ತಿ ಗುಹೇಶ್ವರಾ:

ಪ್ರತಿ ಅಂಗವೂ ಅರಿವಿನ ಲಿಂಘವಾಗಲಿ ಎಂದು 'ತತ್ತ್ವಮಸಿ' ಸೂತ್ರ ಬರೆದಿಟ್ಟು ಪುರಾತರು ಸತ್ತು ಹೋದರು.

ಸತ್ತು ಹೋದ ಪುರಾತರು ಬರೆದುದನು ಮತ್ತೆ ಮತ್ತೆ ಓದಿ ತತ್ತ್ವವೇ ತಾನಾಗದೆ ತತ್ತ್ವವೇ ತಾನೆಂದು ನುಡಿದು ಸಾಯುವುದೆಂದರೇನು? ಇಂದು ಬಂದವನರಿಯದೇ ಅಂದು ಹೋದವರ ಸುದ್ದಿಯ ನುಡಿಯುವುದೆಂದರೇನು? ಅಂದು ಹೋದವರು ಇಂದು ಬಂದವರು ಒಂದೇ ಎಂದು ಬದುಕುವವರ ತೋರಿ ಬದುಕಿಸಯ್ಯಾ ಬಸವ ಪ್ರಿಯ ಕೂಡಲ ಚೆನ್ನಬಸವಣ್ಣಾ ಎಂದು ನುಡಿಯಲ್ಲದ ಅರಿವಿನ ನುಡಿಯ ನುಡಿದಿದ್ದಾರೆ ಅಪ್ಪಣ್ಣ ಶರಣರು.

148

ಪೃಥ್ವಿ, ಅಪ್ಪು, ಅಗ್ನಿ, ವಾಯು, ಆಕಾಶ, ಚಂದ್ರ,
ಸೂರ್ಯ, ಸೋಮ, ಮಂಗಳ, ಬುಧ, ಬೃಹಸ್ಪತಿ, ಶುಕ್ರ, ಶನಿ
ಇವು ಮೊದಲಾದ ಪಂಚತತ್ವ ನವಗ್ರಹಂಗಳಿಲ್ಲದಂದಿನ,
ನಕ್ಷತ್ರಂಗಳಿಲ್ಲದಂದಿನ, ಸಪ್ತ ಸಮುದ್ರಂಗಳಿಲ್ಲದಂದಿನ,
ಸಪ್ತಕುಲ ಪರ್ವತಂಗಳು ಇಲ್ಲದಂದಿನ, ಸಪ್ತಮುನಿವರ್ಗಂಗಳು ಇಲ್ಲದಂದಿನ,
ಹರಿಬ್ರಹ್ಮ, ಕಾಲಕರ್ಮ, ದಕ್ಷಾದಿಗಳಿಲ್ಲದಂದಿನ
ರುದ್ರಕೋಟಿ, ಸಾದಾಶಿವನಿಲ್ಲದಂದಿನ, ಏನೂ ಏನೂ ಇಲ್ಲದಂದಿನ,
ಶೂನ್ಯ ನಿಶ್ಶೂನ್ಯಕ್ಕೆ ನಿಲುಕದ ಮಹಾಘನವ
ನಾನು ಬಲ್ಲೆ, ತಾನು ಬಲ್ಲೆನೆಂದು ನುಡಿವ ಹೀನ ಮನುಜರ ಕೂಗಾಟ,
ಬೇಟಕ್ಕೆ ನಾಯಿ ಬೊಗಳಿದಂತಾಯಿತ್ತು.
ಆ ತುಟ್ಟ ತುದಿಯಲ್ಲಿಪ್ಪ ಘನವ ಮುಟ್ಟಿ ಹಿಡಿದು ಬಂದ ಶರಣರು ಬಲ್ಲರಲ್ಲದೆ,

ಬಹುವಾಕ್ಕು ಜಾಲವ ಕಲಿತುಕೊಂಡು, ಗಟ್ಟಿತನದಲ್ಲಿ ಬೊಗಳಿಯಾಡುವ.
ಮಿಟ್ಟೆಯ ಬಂಡರೆತ್ತ ಬಲ್ಲರು ನಮ್ಮ ಶರಣರ ಸುದ್ದಿಯ,
ಬಸವ ಪ್ರಿಯ ಕೂಡಲಚೆನ್ನ ಬಸವಣ್ಣ?

ಶರಣ ಬಯಲ ಬೀಜದ ಮಹಾಬೋಧೀ ವೃಕ್ಷ. ಬಯಲ ಸುದ್ದಿ ಬಯಲ ಬೀಜದಿಂದ ಬಂದ ಬಯಲ ಶರಣನಿಗೆ ಮಾತ್ರ ತಿಳಿದಿದೆ ಹೊರತು ಅನ್ಯರಿಗೆ ತಿಳಿಯುವುದಿಲ್ಲ. ತಿಳಿಯುವ ಬಯಕೆಯಾದರೆ ಸಕಲ ತನುಗಳಿಗೂ ತಿಳಿಯುತ್ತದೆ. ಏಕೆಂದರೆ ಬಯಲ ತತ್ವ ಸಕಲ ತನುಗಳನ್ನು ಒಳಗೊಂಡಿದೆ. ಮನದ ಆವರಣದಿಂದಾಗಿ ತನುವಿನಲ್ಲಿಯೇ ತನ್ಮಯವಾಗಿ ಉಳಿದಿದೆ.

ಭೂಮಿ ನೀರು ಅಗ್ನಿ ಗಾಳಿ ಆಕಾಶ ಚಂದ್ರ, ಸೂರ್ಯ ಸೋಮ ಮಂಗಳ ಬುಧ ಬೃಹಸ್ಪತಿ ಶುಕ್ರ ಶನಿ ಮೊದಲಾದ ಪಂಚ ತತ್ತ್ವ ನವಗ್ರಹಗಳು ಇಲ್ಲದ ಅಂದಿನ ದಿನವನ್ನು ನಕ್ಷತ್ರಗಳು ಸಪ್ತ ಸಮುದ್ರಗಳು ಸಪ್ತ ಕುಲ ಪರ್ವತಗಳು ಸಪ್ತ ಮುನಿವರ್ಗಗಳು ಇಲ್ಲದ ಅಂದಿನ ದಿನವನ್ನು ಹರಿ ಬ್ರಹ್ಮ ದಕ್ಷಾದಿಗಳು, ರುದ್ರ ಕೋಟಿ ಸದಾಶಿವನು ಇಲ್ಲದ ಅಂದಿನ ದಿನವನ್ನು. ಏನೇನೂ ಇಲ್ಲದ ಅಂದಿನ ದಿನವನ್ನು ಶೂನ್ಯ ನಿಶೂನ್ಯಕ್ಕೆ ನಿಲುಕದ ಮಹಾ ಘನವನು ನಾನು ಬಲ್ಲೆ ತಾನು ಬಲ್ಲೆನೆಂದು ನುಡಿವ ಹೀನ ಮನುಜರ ಕೂಗಾಟವು ಬೇಟೆ ನಾಯಿ ಬೊಗಳಿದಂತಾಯಿತು.

ತನುವಿನ ತುಟ್ಟ ತುದಿಯಲ್ಲಿಪ್ಪ ಘನವನು ಮುಟ್ಟಿ ಹಿಡಿದು ಬಂದಾತನು ಶರಣನೊಬ್ಬನೆ. ಆತ ಮಾತ್ರ ಬಲ್ಲನಲ್ಲದೆ ಮಾತಿನ ಜಾಲವ ಕಲಿತುಕೊಂಡು ವೇದ ಉಪನಿಷತ್ತು ಭಗವದ್ಗಿತೆಯ ಮೂಲಕ ಗಟ್ಟಿತನದಲ್ಲಿ ಬೊಗಳಿಯಾಡುವ ಘನವನು ಅರಿಯದ ಭಂಡ ಮನವೆತ್ತ ಬಲ್ಲದು?

ತನುವಿನಲ್ಲಿಯೇ ತನ್ಮಯವಾದ ಅರಿವಿಗೆ ಶರಣು ಹೋಗಿ ಶರಣನೇ ತಾನಾದ ಮನ ಮಾತ್ರ ಘನವನು ಬಲ್ಲದು. ಘನದ ಸುದ್ದಿಯನು ಹೊತ್ತ ಪುಸ್ತಕಗಳನ್ನು ಓದಿದ ಮನ ಘನವನು ಅರಿಯದು; ಘನದ ವಾರ್ತೆಯನು ತಿಳಿದಿದೆ. ಅದು ಬೇಟೆಗಾಗಿ ಒದರುವ ಹೆಳವ ನಾಯಿ. ಘನದ ರುಚಿಯನು ಅರಿಯದ ಭಂಡನಾಯಿ. ಗನದ ರುಚಿಯನರಿದು ಘನವನೆ ಸವಿಯ ಬೇಕಾದರೆ ಮನ ತನುವಿನಲ್ಲಿಯೇ ಬೇಟೆಯನಾಡಬೇಕು. ಅರಿವಿನ ಬೇಟೆ ಸವಿದು ಅರಿವೇ ತಾನಾಗಬೇಕು.

149

ಪ್ರಣಮವೇ ಪ್ರಾಣ, ಪ್ರಾಣವೆ ಲಿಂಗ.
ಲಿಂಗವೇ ಅಂಗ, ಆ ಅಂಗವೇ ಅಗಮ್ಯ ಅಗೋಚರ ಅಪ್ರಮಾಣ.
ಲಿಂಗಸಂಗವೆ ಜಂಗಮಲಿಂಗ
ಜಂಗಮ ಒಂದೆರಡೆಂದು ಸರಿದು ಮಾಡಲಂಜಿ ಬೆರಗಾಗಿರಲು
ಬೇಗೆಯೆದ್ದು ಬೆಳಗಾಯಿತ್ತ ಕಂಡು,
ಕಣ್ಣು ಮುಚ್ಚಿ ಕರಗಿ ಪ್ರಾಣಲಿಂಗ ಲೀಯವಾದ,
ಬಸವ ಪ್ರಿಯ ಕೂಡಲಸಂಗಮದೇವ ಪ್ರಭುವೆ.

ಓಂ ಕಾರವೆಂಬ ಪ್ರಣಮವು ಹೊರಗಿಲ್ಲ. ಅದನ್ನು ಶಬ್ದದಿಂದ ನುಡಿಯಲು ಬರುವುದಿಲ್ಲ. ಪ್ರಾಣವೇ ಪ್ರಣಮ! ಆ ಪ್ರಾಣವೆ ಲಿಂಗ. ಆ ಲಿಂಗವೆ ಅಂಗ. ಅ ಅಂಗವು ಅಗಮ್ಯ. ಅಗೋಚರ

ಅಪ್ರಮಾಣ! ಇಂತಹ ಲಿಂಗ ಸಂಗಮವೇ ಜಂಗಮಲಿಂಗ.

ಅಂಗ ಮತ್ತು ಪ್ರಾಣ ಹೇಗೆ ಬೇರೆ ಬೇರೆ ಅಲ್ಲವೊ ಹಾಗೆಯೇ ಲಿಂಗ ಜಂಗಮ ಅಂಗ ಪ್ರಣವವೂ ಬೇರೆ ಬೇರೆ ಅಲ್ಲ. ಅಂಗದಲ್ಲಿಯೇ ಸಕಲವೂ ಸಂಗಮವಾಗಿವೆ. ಮನಕ್ಕೆ ತಿಳಿಯದ್ದರಿಂದ ಅಂಗ ಬೇರೆ ಲಿಂಗ ಬೇರೆ ಜಂಗಮ ಬೇರೆ ಎಂದು ಅಂಗದಲ್ಲಿಯೇ ಅಜ್ಞಾನದ ಬೆಂಕಿ ಹಚ್ಚಿಕೊಂಡಿದೆ. ತಿಳಿಯಲು ಹೋದರೆ ಅಂಗದಲ್ಲಿಯೇ ಲಿಂಗ ಜಂಗಮರು ಸಂಗಮವಾಗಿದ್ದಾರೆ. ಅಂಗಕ್ಕೆ ಹತ್ತಿದ ಬೆಂಕಿಯಲ್ಲಿಯೇ ಜ್ಞಾನದ ಬೆಳಕು ಗೋಚರವಾಗಿ ಅಂಗ ಗಮನಕ್ಕೆ ನಿಲುಕದ ಅಗಮ್ಯಲಿಂಗವಾಗಿದೆ. ಗೋಚರಕ್ಕೆ ನಿಲುಕದ ಅಗೋಚರ ಲಿಂಗವಾಗಿದೆ. ಪ್ರಮಾಣಿಸಲು ಬಾರದ ಅಪ್ರಮಾಣ ಜಂಗಮ ಲಿಂಗವೇ ಅಂಗದಲ್ಲಿ ಸಂಗಮವಾಗಿದೆ.

ಜಂಗಮ ಒಂದೆರಡೆಂದು ಸರಿದು ಮಾಡಲು ಅಂಜಿಕೆಯಾಗಿ ಬೆರಗಾಗಿರಲು ಅಂಗದಲ್ಲಿ ಹೊತ್ತಿಕೊಂಡ ಬೆಂಕಿಯೇ ಜ್ವಾಲೆಯಾಗಿ ಉರಿದು ಬೆಳಗಿಂಗೆ ಬೆಳಗಾಗಿ ಬೆಳಗಾದುದನು ಕಂಡು ಕಣ್ಣು ಮುಚ್ಚಿ ಕರಗಿ ಪ್ರಣವ ಪ್ರಾಣಲಿಂಗದಲ್ಲಿ ಲೀಯವಾಯಿತು.

ಬಸವಣ್ಣನಿಗೆ ಪ್ರಿಯವಾದ ಚೆನ್ನಬಸವಣ್ಣನು ಪ್ರಭುದೇವರು ಅಂಗದಲ್ಲಿಯೇ ಕೂಡಿ ಕೂಡಲ ಸಂಗಮದೇವರೇ ತಾವಾದರು.

150

ಪ್ರಥಮದಲ್ಲಿ ಭಕ್ತಸ್ಥಲವೆಂದು ನುಡಿವಿರಿ.
ಆ ಭಕ್ತಸ್ಥಲ ವೆಲ್ಲರಿಗೆಂತಾಯಿತ್ತು ಹೇಳಿರಣ್ಣಾ!
ಸತಿ ಪತಿ ಸುತರು ಭೃತ್ಯಾಚಾರದಲ್ಲಿ ಭಕ್ತಿಯ ಮಾಡಿಹೆನೆಂದಣ್ಣಗಳು ಕೇಳಿರೊ.
ಪತಿಯ ಮಾತು ಮೀರುವಾಕೆ ಸತಿಯಲ್ಲ, ಪಿತನ ಮಾತು ಮೀರುವಾತ ಸುತನಲ್ಲ.
ಅತಿಕೃಪೆಯಿಂದ ದೀಕ್ಷೆ, ಶಿಕ್ಷೆಯನಿತ್ತ ಗುರುವಿನಾಜ್ಞೆಯ ಮೀರುವಾತ ಶಿಷ್ಯನಲ್ಲ.
ಇಂತಿವು ಭಕ್ತಸ್ಥಲಕ್ಕೆ ಸಲ್ಲವು ಕೇಳಿರಣ್ಣಾ!
ಆ ಸತಿಗೆ ಪತಿಯೇ ಗುರುವಾಗಿ, ಆ ಸುತಗೆ ಪಿತನೇ ಗುರುವಾಗಿ,
ಆ ಪಿತಗೆ ಅತಿಕೃಪೆಯಿಂದ ದೀಕ್ಷೆ ಶಿಕ್ಷೆಯನಿತ್ತ ಗುರುವೆ ಗುರುವಾಗಿ,
ಏಕಪದವಿಲ್ಲಾಗಿ ಭಕ್ತಸ್ಥಲವ ಮಾಡಿಹೆನೆಂಬಣ್ಣಗಳಿರಾ ಕೇಳಿ.
ಈ ಒಂದು ಸ್ಥಲವುಳ್ಳವರಿಗೆ ಆರುಸ್ಥಲವು ಅಡಗಿತ್ತು.
ಇಂತಿವು ಏಕಸ್ಥಲವಾದ ಮೇಲೆ ಮುಂದೆಂತೆಂದಡೆ,
ಆ ಪತಿಗೆ ಸತಿಯೇ ಗುರುವಾಗಿ, ಆ ಪಿತಗೆ ಸುತನೇ ಗುರುವಾಗಿ,
ಅತಿಕೃಪೆಯಿಂದ ದೀಕ್ಷೆ ಶಿಕ್ಷೆಯ ನಿತ್ತ ಗುರುವೆ ಶಿಷ್ಯನಾಗಿ,
ಇಂತಿದೀಗ ನಿರ್ಣಯ ಸ್ಥಲವು.
ಇದನರಿಯದೆ, ಅವಳು ಸತಿ, ತಾ ಪತಿ ಎಂಬ ಹಮ್ಮಿಂದವೇ
ಅವರು ಸುತರು, ತಾ ಪಿತನೆಂಬ ಹಮ್ಮಿಂದವೇ
ಅವರು ಶಿಷ್ಯರು, ತಾ ಗುರುವೆಂಬ ಹಮ್ಮಿಂದವೇ
ಇದು ಲಿಂಗ ಪಥಕ್ಕೆ ಸಲ್ಲದು, ಹಿಡಿದ ವ್ರತಕ್ಕೆ ನಿಲ್ಲದು,
ಇದ ಮುಂದೆ, ನಮ್ಮ ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ.

ಪ್ರಾರಂಭದಲ್ಲಿ ಭಕ್ತಿ ಸ್ಥಲದಿಂದಲೇ ಮಹಾಜ್ಞಾನಕ್ಕೆ ಹೋಗಬೇಕು ಎಂದು ನುಡಿಯುತ್ತಾ ಭಕ್ತಿಯೆಂದರೆ ಏನು? ಒಬ್ಬ ವ್ಯಕ್ತಿಗೆ ಒಂದು ವಸ್ತುವಿಗೆ ನಿಷ್ಠನಾಗಿ ಸೇವೆ ಮಾಡುವುದ ಭಕ್ತಿಯೇ?

ಪತಿಯ ಮಾತು ಮೀರುವಾಕೆ ಸತಿಯಲ್ಲ. ಪಿತನ ಮಾತು ಮೀರುವಾತ ಸುತನಲ್ಲ ಕೃಪೆಯಿಂದ ಶಿಕ್ಷಣವನಿತ್ತ ಗುರುವಿನ ಆಜ್ಞೆಯನು ಮೀರುವಾತ ಶಿಷ್ಯನಲ್ಲ; ಎಂದು ಹೇಳುವರು ಹೀಗೆ ಹೇಳುವುದು ಹೇಳಿದಂತೆ ಆಯಾ ಆಚಾರದಲ್ಲಿರುವದನ್ನು ಭಕ್ತಿ ಎನ್ನಲು ಬರುವುದಿಲ್ಲ

ಮನವೆಂಬ ಸತಿಗೆ ಅರಿವೆಂಬ ಪತಿಯೇ ಗುರುವಾಗಿ, ಮನವೆಂಬ ಸುತನಿಗೆ ಅರಿವೆಂ ಪಿತನೇ ಗುರುವಾಗಿ, ಆ ಪಿತನಿಗೆ ಕೃಪೆಯಿಂದ ಅರಿವಿನ ಶಿಕ್ಷಣವನು ಇತ್ತ ಗುರು ಗುರುವಾಗುವುದು ಭಕ್ತಿಸ್ಥಲ.

ಈ ಒಂದು ಬಕ್ತ ಸ್ಥಲ ವುಳ್ಳವರಿಗೆ ಆರು ಸ್ಥಲಗಳು ಅಡಗುತ್ತವೆ. ಹೀಗಾಗಿಯೇ ಶರಣರೆ ಸೇರಿ ಬಸವಣ್ಣನವರನ್ನು ಭಕ್ತಿ ಭಂಡಾರಿ ಬಸವಣ್ಣ ಎಂದು ಕರೆದರು.

ಭಕ್ತ ಸ್ಥಲದಲ್ಲಿ ಮಾಹೇಶ್ವರ ಸ್ಥಲ. ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ, ಐಕ್ಯಸ್ಥಲ ಅಡಗಿ ಏಕಸ್ಥಲವಾದ ಅಂಗವೇ ಲಿಂಗಾಂಗ. ಅದು ಷಟಸ್ಥಲ ಧ್ವಜವೂ ಹೌದು. ಅಂತ ಲಿಂಗಾಂಗದಲ್ಲಿ ಸತಿ, ಪತಿ, ಗುರು, ಪಿತ, ಸುತರು ಸಂಗಮವಾಗಿರುತ್ತಾರೆ.

ಇಂತಿವು ಏಕಸ್ಥಲವಾದ ಮೇಲೆ ಮುಂದೆಂತೆಂದಡೆ:

ಪತಿಗೆ ಸತಿಯೇ ಗುರುವಾಗಿ, ಪಿತಗೆ ಸುತನೇ ಗುರುವಾಗಿ, ಶಿಷ್ಯನಿಗೆ ದೀಕ್ಷೆ ಶಿಕ್ಷೆಯನ ಇತ್ತ ಗುರುವೇ ಶಿಷ್ಯನಾಗುತ್ತಾನೆ. ಇದೇ ಮಹಾಜ್ಞಾನ ಹೊಂದಿದ ನಿರ್ಣಯ ಸ್ಥಲವು.

ಇದನ್ನು ಅರಿಯದೆ ಅವಳು ಸತಿ, ತಾನು ಪತಿ, ಅವರು ಸುತರು, ತಾನು ಪಿತನೆಂದ ಅವರು ಶಿಷ್ಯರು ತಾನು ಗುರುವೆಂದು ಅಹಂಕಾರದಿಂದ ನುಡಿಯುವುದು ಲಿಂಗ ಪಥಕ್ಕೆ ಅಂದು ಮಹಾಜ್ಞಾನ ಪಥಕ್ಕೆ ಸಲ್ಲದು. ಹಿಡಿದ ಜ್ಞಾನ ವ್ರತಕ್ಕೂ ನಿಲ್ಲದು ಎನ್ನುತ್ತಾರೆ ಅಪ್ಪಣ್ಣ ಶರಣರು

151

ಪ್ರಸಾದವೆಂದು, ಅರ್ಪಿತ ಪ್ರಸಾದವೆಂದು, ಅವಧಾನ ಪ್ರಸಾದವೆಂದು,
ಪರಿಣಾಮ ಪ್ರಸಾದವೆಂದು, ಸಮಯ ಪ್ರಸಾದವೆಂದು, ಸರ್ವಾಂಗಪ್ರಸಾದವೆಂದು,
ಶುದ್ಧ ಪ್ರಸಾದವೆಂದು, ಸಿದ್ಧಪ್ರಸಾದವೆಂದು, ಪ್ರಸಿದ್ಧ ಪ್ರಸಾದವೆಂದು,
ಪರಿಪೂರ್ಣಪ್ರಸಾದವೆಂದು, ದಿವ್ಯಪ್ರಸಾದವೆಂದು,
ಆದಿ ಪ್ರಸಾದವೆ ಅಂಗ ಪ್ರಾಣ ಭಾವ. ಅದಕ್ಕೆ ದೃಷ್ಟ:
ಪ್ರಕಾರೋಯಂ ಪ್ರಸಾದಸ್ಯಾತ್ ಸಾಕಾರಂ ಭಕ್ತಿರುಚ್ಯತೇ।
ಪ್ರಸಾದಂ ಪೂರ್ವಿಕಾ ಭಕ್ತಿರ್ಮುಕ್ತಿರೇತಿ ದಕಾರಂ॥
ಎಂದುದಾಗಿ, ಇಂತೀ ಪ್ರಸಾದಿ ನೀನೆಯಲಾ,
ಬಸವಪ್ರಿಯ ಕೂಡಲಸಂಗಮದೇವಾ,
ಮಾಂತ್ರಾಹಿ, ತ್ರಾಹಿ ಕರುಣಾಕರನೆ.

ಪದಾರ್ಥ ಪ್ರಸಾದವಲ್ಲ. ಅನುಭವದ ಮೂಲಕ ಹನ್ನೊಂದು ವಿಧಾನದಲ್ಲಿ ಅರಿ ಪ್ರಸಾದ ಸುಖವನ್ನು ಅನುಭವಿಸಿ ಆನಂದ ಪಡಬಹುದೆಂದು ಅಪ್ಪಣ್ಣ ಶರಣರು ಹೇಳುತ್ತಾ

ಹಾಗೆಯೇ ಆದಿಪ್ರಸಾದವೆ ಅಂಗ ಪ್ರಾಣ ಭಾವ ಎಂದು ಸರ್ವಾಂಗದಲ್ಲಿ ಸಂಗಮವಾದುದನ್ನು ಅಂಗದಲ್ಲಿಯೇ ತೋರಿದ್ದಾರೆ.

ಅನಾದಿ ಬಯಲು ಅಂಗಕ್ಕೆ ಜನ್ಮ ನೀಡಿದೆ. ತನ್ನ ಲೀಲೆ ಮೆರೆಯಲು ಅಂಗದಲ್ಲಿಯೇ ಸಂಗಮವಾಗಿದೆ. ಪ್ರಾಣವೆಂದು ಭಾವವೆಂದು ಹೆಸರು ಪಡೆದಿದೆ.

ಬಯಲು, ಜೀವ ಜಲವಿಂದುವಾಗಿ ಪ್ರಸಾದರೂಪದಲ್ಲಿ ಗರ್ಭ ಪ್ರವೇಶಮಾಡಿ ಅಂಗ ಪ್ರಾಣ ಭಾವ ವೆಂಬ ಹೆಸರು ಪಡೆದು ಲಿಂಗಾಂಗವಾಗಿ ಭೂಮಿ ಪ್ರವೇಶ ಮಾಡಿದೆ. ಅನಾದಿಯ ಬಯಲು ಆದಿಯ ಬೀಜವಾಗಿ ಅಂಗದ ಗರ್ಭದಲ್ಲಿ ಅಂಕುರವಾಗಿ ಟಿಸಿಲೊಡೆದು ಅರಿವಿನ ಭೋದೀ ವೃಕ್ಷವಾಗಿ ಲಿಂಗಾಂಗವೆಂದು ಹೆಸರು ಪಡೆದು ನಡೆದಾಡುತ್ತಲಿದೆ.

ಜಗದಲ್ಲಿರುವ ಯಾವ ಅಂಗವಾದರೇನು? ಅದು ಲಿಂಗಾಂಗ; ಬಯಲ ಪ್ರಸಾದ; ಬಯಲು ಅರ್ಪಿಸಿದ ಪ್ರಸಾದ. ಬಯಲಿನ ಪರಿಣಾಮದಿಂದಾದ ಪ್ರಸಾದ. ಬಯಲಿನ ಸಮಯ ಪ್ರಸಾದ. ಸರ್ವಾಂಗದಲ್ಲೂ ಬಯಲು ಸಂಗಮವಾದ ಸರ್ವಾಂಗ ಪ್ರಸಾದ. ಶುದ್ಧ ಪ್ರಸಾದ. ಬಯಲಿನಿಂದಲೇ ಸಿದ್ಧವಾದ ಸಿದ್ಧ ಪ್ರಸಿದ್ಧ ಪ್ರಸಾದ. ಪರಿಪೂರ್ಣ ದಿವ್ಯ ಪ್ರಸಾದ. ಅನಾದಿ ಬಯಲ ಬೀಜದಿಂದ ಸಿದ್ಧವಾದ ಆದಿ ಪ್ರಸಾದ. ಅಂಗವೂ ಆದಿ, ಇದರ ಪ್ರಾಣವೂ ಆದಿ, ಇದರ ಭಾವವೂ ಆದಿ. ಇಂತಹ ಅನಾದಿ ಬಯಲ ಪ್ರಸಾದದಿಂದ ಬಂದ ಅಂಗ ಆದಿಯಾಗಿರುವಾಗ ಅದಕ್ಕೆ ಹೊರಗಿನ ಮತ್ತೊಂದು ಪ್ರಸಾದದ ಅವಶ್ಯಕತೆ ಇದೆಯೆ ?

ಸಕಲ ಪ್ರಸಾದವನೂ ನೀಡಿದ ಕರುಣಾಕರನೇ, ಈ ಸೂತ್ರವನ್ನು ಕರುಣಿಸಿದ ಬಸವಪ್ರಿಯ ಕೂಡಲಸಂಗಮದೇವನೆ ಸೆರಗೊಡ್ಡಿ ಬೇಡುವೆ ತಂದೆ; ಅಂಗದಲ್ಲಿಯೇ ಸಂಗಮವಾದ ಸಂಗಮನಾಥನೆ ಕರುಣಿಸು ಎಂದಿದ್ದಾರೆ ಅಪ್ಪಣ್ಣ ಶರಣರು.

152

ಪ್ರಾಣಲಿಂಗಿ ಪ್ರಾಣಲಿಂಗಿ ಎಂದು ನುಡಿದಾಡುತಿಪ್ಪಿರಿ
ಪ್ರಾಣಲಿಂಗದ ನೆಲೆಯನಾರು ಬಲ್ಲರು?
ಪ್ರಾಣಲಿಂಗಿಯಾದರೆ,
ಗುರುಲಿಂಗ ಜಂಗಮದ ಪಾದೋದಕ ಪ್ರಸಾದವ
ತನ್ನೊಳರಿದು ಮೈಮರೆದು ಪರವಶನಾಗಿ,
ಲಿಂಗದೊಳಗೆ ಬೆರೆಸುವದೀಗ ಪ್ರಾಣಲಿಂಗಿ,
ಇದನರಿಯದೆ ವಾಯು ಪ್ರಾಣವಾಗಿ, ಬಾಯನುಡಿಯ ಬಲ್ಲಿದವರಾಗಿ,
ಬೊಗಳಿಯಾಡುವ ಜಾವಳರ ಮಾತು ಮೆಚ್ಚುವನೆ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ?

ಗುರುದೇವನೆಂಬ ಅರಿವು ಅಂಗದಲ್ಲಿಯೇ ಇದೆ. ಗುರುದೇವನು ನುಡಿದ ಅರಿವು ಪಾಲಿಸುವ ಅವ್ಯಕ್ತ ಜಂಗಮನೂ ಅಂಗದಲ್ಲಿಯೇ ಇದ್ದಾನೆ. ಅಂಗಕ್ಕೆ ಬಡಿದ ಅಜ್ಞಾನವನ್ನು ಪ್ರಸಾದ ಮಾಡಿಕೊಂಡು ಜ್ಞಾನದಿಂದ ಸ್ವೀಕರಿಸುವ ಪ್ರಸಾದಿಯೂ ಅಂಗದಲ್ಲಿದ್ದಾನೆ. ಅರಿವಿನ ಉದಕವೇ ಪಾದೋದಕವಾಗಿ ಅಂಗದಲ್ಲಿ ಸಂಗ ಮಾಡಿ ಲಿಂಗಾಂಗವಾಗಿದೆ. ಪ್ರಾಣ ಲಿಂಗವಾಗಿದೆ.

ಪ್ರಾಣ, ಲಿಂಗ, ಅಂಗ, ಅರಿವು, ಗುರುವು, ಜಂಗಮ, ಪಾದೋದಕ, ಪ್ರಸಾದ ತನುವಿನಲ್ಲಿಯೇ ತನ್ಮಯವಾಗಿದೆ.

ಲಿಂಗಾಂಗವನ್ನು ಅರಿಯಬೇಕಾದ ಮನವು ಅಂಗವನ್ನು ಆವರಿಸಿ, ಅಂಗಾಗವನ್ನೇ ದುರ್ಬಳಕೆ ಮಾಡಿಕೊಳ್ಳುತ್ತಿರುವುದರಿಂದ ಪ್ರಾಣಲಿಂಗದ ನೆಲೆ ಮನಕ್ಕೆ ತಿಳಿಯದಾಗಿದೆ.

ಗುರು, ಲಿಂಗ ಜಂಗಮದ ಪಾದೋದಕವನ್ನು ಮನ ಭಕ್ತನಾಗಿ ಪ್ರಸಾದ ಮಾಡಿಕೊಂಡು ತನುವಿನೊಳಗೆ ಅರಿತು ಆ ಅರಿವೆಂಬ ಗುರುದೇವನೊಂದಿಗೆ ಬೆರೆತು ಮೈಮರೆತು ಪರವಶನಾಗುವುದೆ ಲಿಂಗದೊಳಗೆ ಬೆರೆಯುವ ಪ್ರಾಣಲಿಂಗಿಯ ಲಿಂಗಾಂಗ ಸಾಮರಸ್ಯ.

ಮನ ಇದನರಿಯದೆ, ತನುವಿನೊಂದಿಗೆ ವಾಯು ಚಲಿಸಿದಂತೆ ವಾಯುಪ್ರಾಣಿಯಾಗಿ, ಬಾಯ ನುಡಿಯ ಕಲಿತು, ಬೊಗಳಿಯಾಡುವ ಹೀನ ಮನದ ಮಾತನು ಗುರುದೇವನು ಮೆಚ್ಚುವನೆ, ಬಸವಪ್ರಿಯ ಕೂಡಲ ಚೆನ್ನಬಸವಣ್ಣ.

153

ಬಟ್ಟ ಬಯಲು ತುತ್ತ ತುದಿಯ ನಟ್ಟ ನಡುವಣ,
ಕಟ್ಟಕಡೆಯ ಮೆಟ್ಟಿ ನೋಡಿ
ಉಟ್ಟುದನಳಿದು ಬಟ್ಟ ಬತ್ತಲೆಯಾದೆ.
ಇನ್ನು ಬಿಟ್ಟುದ ಹಿಡಿಯಬಾರದು, ಹಿಡಿದುದ ಬಿಡಬಾರದು
ಇದಕ್ಕೆ ಒಡೆಯನಾವನೆಂದು ನೋಡಲಾಗಿ ನೋಡಿಹೆನೆಂದರೆ ನೋಟಕ್ಕಿಲ್ಲ
ಕೂಡಿಹೆನೆಂದರೆ ಕೂಟಕ್ಕಿಲ್ಲ, ಹಿಡಿದಿಹೆನೆಂದರೆ ಹಿಡಿಹಿಗಿಲ್ಲ
ಪೂಜಿಸಿಹೆನೆಂದರೆ ಪೂಜೆಗಿಲ್ಲ.
ಇದ ಮೆಲ್ಲಗೆ ಓಜೆಯಿಂದ ನೋಡಲಾಗಿ,
ನೋಡುವ ನೋಟವು ತಾನೆ, ಕೂಡುವ ಕೂಟವು ತಾನೆ,
ಹಿಡುವುದು ಆ ಹಿಡಿಹಿಗೆ ಸಿಕ್ಕಿಕೊಂಬುದು ತಾನೆ.
ಪೂಜಿಸುವುದು ಪೂಜೆಗೊಂಬುದು ತಾನೆ.
ನಾನಿದರ ಭೇದವನರಿದು ಆದಿ ಅನಾದಿಯನು ಏಕವ ಮಾಡಿ,
ನಾನಲ್ಲೇ ಐಕ್ಯನಾದೆನಯ್ಯಾ, ಬಸವಪ್ರಿಯ ಕೂಡಲಚೆನ್ನಬಸವಣ್ಣ

ಒಡಲಿಲ್ಲದ ಒಡೆಯ ಒಡಲಿನಲ್ಲಿಯೇ ಇದ್ದು ಒಡಲಿಂಗಾಧಾರವಾಗಿ ಒಡಲನ್ನು ಬೆಳಗುತ್ತಾನೆ. ಬೆಳಗಿಂಗೆ ಬೆಳಗಾಗಿ ಬೆಳಗಾಗುತ್ತಾನೆ. ಇಂತಹ ಒಡಲಿಲ್ಲದ ಒಡಲ ಹಡೆದ ಬಯಲೊಡೆಯನನ್ನು ಹಿಡಿದ ಮೇಲೆ ಬಿಡಬಾರದು.

ಒಡಲಿಗೆ ಒಡೆಯನಿಲ್ಲ, ಒಡಲೊಡೆಯನನ್ನು ನೋಡಲಾಗಿ ನೋಟಕ್ಕಿಲ್ಲ. ಕೂಡಿಹೆನೆಂದರೆ ಕೂಟಕ್ಕಿಲ್ಲ. ಹಿಡಿದಿಹೆನೆಂದರೆ ಹಿಡಿತಕ್ಕೆ ಸಿಗುವುದಿಲ್ಲ. ಪೂಜಿಸಿಹೆನೆಂದರೆ ಪೂಜೆಗೆ ಸಿಗುವುದಿಲ್ಲ. ಮೆಲ್ಲಗೆ ನೋಡಲಾಗಿ ನೋಡುವ ನೋಟವೆಲ್ಲ ತಾನೆ. ಕೂಡುವ ಕೂಟವೂ ತಾನೆ. ಹಿಡಿಯುವ ಹಿಡಿತಕ್ಕೆ ಸಿಕ್ಕಿ ಕೊಂಬುದೂ ತಾನೆ. ಪೂಜಿಸುವ ಪೂಜೆಗೆ ಸಿಕ್ಕಿಕೊಳ್ಳುವುದು ತಾನೆ. ಪೂಜಿಸುವುದು ಪೂಜೆಗೊಂಬುದೂ ತಾನೆ.

ಅಣ್ಣ ಬಸವಣ್ಣನವರು ಒಡಲೊಡೆಯನನ್ನು ಕುರಿತು ತಂದೆ ನೀನು ತಾಯಿ ನೀನು, ಬಂಧು ನೀನು ಬಳಗನೀನು, ನೀನಲ್ಲದೆ ಮತ್ತಾರೂ ಇಲ್ಲವಯ್ಯಾ ಕೂಡಲ ಸಂಗಮದೇವಾ. ಹಾಲಾವಾದರೂ ಅದ್ದು, ನೀರಲಾದರೂ ಅದ್ದು ನಿಮ್ಮ ಧರ್ಮ ಎಂದಿದ್ದಾರೆ.

ಒಡಲಿಗೆ ಒಡಲೇ ತಂದೆ ಒಡಲಿಗೆ ಒಡಲೇ ತಾಯಿ, ಜೀವ ಒಡಲಲ್ಲಿರುವ ಜಲಬಿಂದು ಒಡಲಿಗೆ ಜಾರಿ ಒಡಲಾಗಿ ಹೊರಬಂದಿದೆ. ಜೀವ ಜಲ ಬಿಂದುವನ್ನು ಹಿಡಿಯಲು ಹೋದರೆ ಅದು ಜೀವವಲ್ಲ. ಜಲವೂ ಅಲ್ಲ. ಏಕೆಂದರೆ ಜಲ ಜನಕ ಮತ್ತು ಆಮ್ಲ ಜನಕ ಬೆರೆತು ಜಲವಾಗಿದೆ. ಇವೆರಡರ ವಾಸಸ್ಥಳ ಬಯಲು. ಬಯಲ ಗರ್ಭದಲ್ಲಿದ್ದ ಜಲ ಜನಕವನ್ನು ಆಮ್ಲ ಜನಕವನ್ನು ಬಯಲೇ ಹಿಡಿದು ತಾನು ಅದರಲ್ಲಿ ಬೆರೆತು ಒಂದು ಮಾಡಿದಾಗ ಜೀವ ಜಲವಾಗುತ್ತದೆ. ಬಯಲನ್ನು ಹಿಡಿಯಲು ಸಾಧ್ಯವೇ? ಅದು ಎಲ್ಲೆಲ್ಲೂ ಇದೆ. ಒಡಲೊಳಗಿದೆ; ಒಡಲು ಮತ್ತೊಂದು ಒಡಲನ್ನು ಸೃಷ್ಠಿ ಮಾಡಿದೆ. ಗಿಡಮರ ಬಳ್ಳಿ ಪಶು ಪಕ್ಷಿ ಸಂಕುಲವನ್ನು ಸೃಷ್ಠಿ ಮಾಡಿದೆ. ಉರುಗವನು ಸೃಷ್ಠಿ ಮಾಡಿ ವಿಷವಾಗಿದೆ. ಹಸುವನ್ನು ಸೃಷ್ಠಿ ಮಾಡಿ ಅಮೃತವಾಗಿದೆ. ಒಡಲನ್ನು ಸೃಷ್ಠಿ ಮಾಡಿ ಒಡಲೊಡೆಯನಾಗಿದೆ.

ಒಡಲೊಡೆಯನನ್ನು ಅರಿತ ಒಡಲೇ ಧನ್ಯ. ಬಯಲನ್ನೇ ಹಿಡಿದು ಬೀಜವನ್ನಾಗಿಸಿ, ಆ ಬಯಲನ್ನೇ ಬಯಲಲ್ಲಿ ಬಿತ್ತಿ ಬಯಲನ್ನೇ ಬೆಳೆದು ಆ ಬಯಲನ್ನೇ ಜೀವನವನ್ನಾಗಿಸಿಕೊಂಡು ಬಟ್ಟ ಬಯಲಾಗಿ ಬತ್ತಲಾದಾತ ಮತ್ತೆ ಬಿಟ್ಟ ಬಟ್ಟೆಯನು ಹಿಡಿಯಬಲ್ಲನೆ? ಹಿಡಿದುದನು ಬಿಡಲಾರನು. ಒಡೆಯನಾರೆಂದು ನೋಡಲಾಗಿ ನೋಡಿಹೆನೆಂದರೆ ನೋಟಕ್ಕೆ ದೊರೆಯನು. ಕೂಡಿಹೆನೆಂದರೆ ಕೂಟಕ್ಕೆ ದೊರೆಯನು ಪೂಜಿಸಿಹೆನೆಂದರೆ ಪೂಜೆಗೆ ದೊರೆಯನು. ಏಕೆಂದರೆ ಪೂಜಿಸುವ ಪೂಜಕನೂ, ನೋಟಕನೂ, ಕೂಟಕನೂ ತಾನೇ ಆಗಿದ್ದಾನೆ. ಬಯಲ ಭೇದವನು ಅರಿತು, ಆದಿ ಅನಾದಿಯನು ಏಕ ಮಾಡಿ ಬಯಲಲ್ಲೇ ಐಕ್ಯನಾಗಿ ಬಯಲಾಗಿದ್ದಾನೆ. ಬಸವಪ್ರಿಯ ಕೂಡಲ ಚೆನ್ನಬಸವಣ್ಣ ತಾನೇ ಆಗಿದ್ದಾನೆ.

154

ಬಯಲಬ್ರಹ್ಮವೇ ಪಿಂಡಬ್ರಹ್ಮವೆನಿಸಿ,
ಆ ಪಿಂಡಬ್ರಹ್ಮವೆ ಶಿವಶಕ್ತಿಯೆನಿಸಿ,
ಆ ಶಿವಶಕ್ತಿಯ ಪ್ರಪಂಚೇ ಪಂಚಮೂರ್ತಿಯ ಪ್ರಪಂಚೆನಿಸಿ,
ಆ ಪಂಚಮೂರ್ತಿಯ ಪ್ರಪಂಚು ಯುಕ್ತಿಯಿಂ
ಜಗಬ್ರಹ್ಮಾಂಡ ಜೀವ ಜಂತಜಾಲ
ಎಂಬತ್ನಾಲ್ಕು ಲಕ್ಷ ವರ್ಣಾಶ್ರಮದಲ್ಲಾಡಿಸಿ, ಆಡದಂತಿರ್ಪ
ಪರಂಜ್ಯೋತಿ ಬಸವಪ್ರಿಯ ಕೂಡಲಸಂಗಮ ದೇವ ಪ್ರಭುವೆ

ಬಯಲ ಜೀವ ಜಲ ಬಿಂದುವೆ ಗರ್ಭದಲ್ಲಿ ಹೊಕ್ಕು, ಪಿಂಡಬ್ರಹ್ಮ ವೆನಿಸಿ, ಆ ಪಿಂಡಬ್ರಹ್ಮವೆ ಶಿವಮತ್ತು ಶಕ್ತಿ ಎನಿಸಿ ತನುವು ಆಗಿ ಹೊರ ಬಂದಿದೆ. ತನು, ಹೆಣ್ಣು ಅಲ್ಲ; ಗಂಡು ಕೂಡಾ ಅಲ್ಲ. ತನುವಿನಲ್ಲಿ ತನ್ಮಯವಾದ ಅರಿವು ಶಿವನೆಂದು ಹೆಸರು ಪಡೆಯಿತು. ತನುವನ್ನು ಆವರಿಸಿದ ಆ ಶಿವನ ಬೆಳಕಿನಿಂದ ಹುಟ್ಟಿದ ನೆರಳು ಶಕ್ತಿಯೆಂದು ಹೆಸರು ಪಡೆಯಿತು. ತನುವಿನಲ್ಲಿ ಸಂಗಮವಾದ

ಶಿವಶಕ್ತಿಯೆಂಬ ಮಹಾಜ್ಞಾನದಿಂದ ಕಣ್ಣು, ಕಿವಿ, ಮೂಗು, ಚರ್ಮ, ನಾಲಿಗೆ ಎಂಬ ಪಂಚ ಮೂರ್ತಿಯ ಜ್ಞಾನ ಉದಯ ವಾಯಿತು. ನೋಡುವ ಮೂಲಕ, ಕೇಳುವ ಮೂಲಕ, ರುಚಿಸಿ, ಮೂಸಿಸಿ, ಸ್ಪರ್ಶಿಸಿ ಆನಂದಿಸುವ ಮೂಲಕ ಪಂಚಮೂರ್ತಿಯ ಪ್ರಪಂಚ ಸಿದ್ಧವಾಯಿತು.

ಪಂಚಮೂರ್ತಿಗಳ ಮುಕ್ತಿಯಿಂದಲೇ ಪ್ರಪಂಚ ಜಗ ಬ್ರಹ್ಮಾಂಡ ಜೀವಜಂತು ಜಾಲ ಎಂಬತ್ತು ನಾಲ್ಕು ಲಕ್ಷ, ವರ್ಣಾಶ್ರಮ ಸಿದ್ಧವಾಗಿದೆ. ಶರಣ ಮಾತ್ರ ಈ ಜಗದ ಪಂಚಮೂರ್ತಿಗಳ ಆಟವನ್ನು ನೋಡುತ್ತಾನೆ. ಆ ಆಟದಲ್ಲಿ ಭಾಗಿಯಾಗದೆ ಆಡದಂತೆ ಪರಂಜ್ಯೋತಿಯಾಗಿ ಬೆಳಗುತ್ತಾನೆ.

ಶರಣ ಮಹಾಜ್ಞಾನದ ವಿಜ್ಞಾನಿ! ಆತನಿಗೆ ಬಯಲ ಬ್ರಹ್ಮವೂ ಗೊತ್ತು. ಪಿಂಡ ಬ್ರಹ್ಮವೂ ಗೊತ್ತು. ಶಿವಶಕ್ತಿಯ ಪ್ರಪಂಚವೂ ಗೊತ್ತು. ಶಿವನಿಂದಲೇ ಹುಟ್ಟಿದ ಶಕ್ತಿಯೂ ಗೊತ್ತು. ಶಿವಶಕ್ತಿಗಳಿಂದ ಹುಟ್ಟಿದ ಪಂಚಮೂರ್ತಿಗಳ ಪ್ರಪಂಚವೂ ಗೊತ್ತು. ಪಂಚ ಮೂರ್ತಿಗಳು ಎಂಬತ್ತುನಾಲ್ಕು ಲಕ್ಷ ಜೀವ ಜಂತುಗಳನ್ನು ಆಡಿಸಿ ದರೇನಂತೆ ಶರಣ ತಾನು ಆಡದಂತಿರ್ಪ. ಪರಂಜ್ಯೋತಿಯಂತೆ ಅವುಗಳನ್ನು ಬೆಳಗುತ್ತಾನೆ.

155

ಬಯಲಿಂದಲೇ ಹುಟ್ಟಿ, ಬಯಲಿಂದಲೇ ಬೆಳೆದು,
ಬಯಲಾಮೃತವನೆ ಉಂಡು, ಬಯಲನೆ ಉಟ್ಟು,
ಬಯಲನೆ ತೊಟ್ಟು, ಬಯಲು ಬಯಲೊಳಗೆ ಬೆರೆದ ಭೇದವ,
ಈ ಭುವನದೊಳಗೆ ಇಪ್ಪಭವಭಾರಿಗಳು ಎತ್ತಬಲ್ಲರು, ಭವವಿರಹಿತ
ಶರಣರ ನಿಲವ, ಬಸವ ಪ್ರಿಯ ಕೂಡಲ ಚೆನ್ನಬಸವಣ್ಣಾ?

ಬಯಲಿಗೆ ಜನನವಿಲ್ಲ ಮರಣವಿಲ್ಲ. ಬಯಲಿಂದಲೇ ಹುಟ್ಟಿದ ತನುವಿಗೆ ಜನನ ಉಂಟು, ಮರಣ ಉಂಟು. ಬಯಲಿಂದಲೇ ಹುಟ್ಟಿದ ಜಲಕ್ಕೆ ಜನನ ಉಂಟು, ಮರಣ ಉಂಟು. ಜಲದಿಂದಲೇ ಸಕಲ ಸಸ್ಯ ಸಂಕುಲ, ಗಿಡ ಮರ ಬಳ್ಳಿ, ಜಲದಿಂದಲೇ ಜಲಚರ, ಉರುಗ ಪಶು ಪಕ್ಷಿ ಪ್ರಾಣಿ ಕೀಟ. ಜಲದಿಂದಲೇ ಮನು ಕುಲ !

ಬಯಲು ತನ್ನ ಗರ್ಭದಲ್ಲಿದ್ದ ಜಲ ಜನಕವನ್ನು, ಆಮ್ಲಜನಕವನ್ನು ಒಂದು ಮಾಡಿ ಜಲಕ್ಕೆ ಪ್ರಾಣ ನೀಡಿ ಕೆಳಗೆ ತಳ್ಳಿತು. ಆ ಜಲವೇ ಗಟ್ಟಿಯಾಗಿ ಭೂಮಿ ಖನಿಜ ಕಲ್ಲುಗಳಿಗೆ ಜನ್ಮ ನೀಡಿತು. ತಾನು ಭೂಮಿಯಲ್ಲಿ ಹರಿದು ಬಯಲಾಮೃತವಾಯಿತು.

ಜಲಕ್ಕೆ ಬಣ್ಣವಿಲ್ಲ, ವಾಸನೆಯಿಲ್ಲ, ರುಚಿಯಿಲ್ಲ, ಏಕೆಂದರೆ ಅದು ಬಯಲಿನಿಂದಲೇ ಜನಿಸಿದೆ. ಬಯಲು ನಿರ್ಮಿಸಿದ ಭೂಮಿಯ ಮೇಲೆ ಹರಿದು ಸಕಲ ಪ್ರಾಣಿ ಪಶು ಪಕ್ಷಿ ಮುಂತಾದ ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳಿಗೆ, ಪ್ರಾಣ, ಬಣ್ಣ, ರುಚಿ, ವಾಸನೆ ದಯಪಾಲಿಸಿದೆ. ಮನುಷ್ಯನನ್ನು ಹೊರತಾಗಿ ಸಕಲವೂ ಸಹಜ. ಆದರೆ ಮನುಷ್ಯ ಮಾತ್ರ ಅಸಹಜ.

ಬಯಲು ಜೀವ ಜಲಬಿಂದುವಾಗಿ ಗರ್ಭಹೊಕ್ಕು ಅರಿವಿನ ಅಮೃತಮಯ ತನುವಾಗಿ ಹೊರ ಬಂದಿದೆ. ತನು ತನ್ನನ್ನು ಹಾಗೂ ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳನ್ನು ತಿಳಿಯುವ ಸಹಜ ನಿರ್ಗುಣವನ್ನು ಹೊಂದಿದೆ. ಆದರೆ ಮನದಿಂದಾಗಿ ತಿಳಿಯಲು ಸಾಧ್ಯವಾಗುತ್ತಿಲ್ಲ. ಮನ

ತನುವಿಗೆ ಜನನ ಮರಣಗಳ ಭಯ ಹುಟ್ಟಿಸಿದೆ. ಈ ಮನದಿಂದಲೇ ತನುವಿನಲ್ಲಿಯೇ ತನ್ಮಯವಾದ ಅರಿವನು ತಿಳಿಯಬೇಕು. ಅರಿವು ಬೇರಲ್ಲ ಬಯಲು ಬೇರಲ್ಲ. ಮನ ಬಯಲಾಮೃತವನು ಉಂಡು, ಅದನ್ನೇ ಉಟ್ಟು, ಅದನ್ನೇ ತೊಟ್ಟು, ಆ ಬಯಲಲ್ಲೇ ಬೆರೆತು, ಬಯಲೊಳಗೆ ಬೆರೆತ ಬೇಧವ ಕಂಡು ಆ ಅಮೃತವನು ಉಂಡವನೇ ಶರಣ. ಆತ ಮಹಾಜ್ಞಾನಿ. ಇಂತಹ ಮಹಾಜ್ಞಾನಿಗಳ ನಿಲವನು ಜನನ ಮರಣಗಳ ಬಾಧೆಗೆ ತುತ್ತಾದ ತನುಗಳು ಅರಿಯವು.

156

ಬಯಲೆ ರೂಪಾಯಿತ್ತು, ನಿರ್ವಯಲೆ ನಿರೂಪಾಯಿತ್ತು.
ಸರ್ವಾಂಗದೊಳು ಉರಿ ವೇಧಿಸಿತ್ತು.
ಅಲ್ಲೊಂದು ಸದಮದಗಜ ಹಯನಾಯಿತ್ತು.
ಅಮೃತವನೆ ಉಂಡಿತ್ತು, ಮಧುರಸವನೆ ಉಂಡಿತ್ತು.
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನ ಕೂಡಿತ್ತು.

ಬಯಲು ಫಥಫಥಲ್ಲನೆ ಸಿಡಿದು ಉರಿಹುಟ್ಟಿ ಮಳೆ ಸೃಜಿಸಿ, ಆ ಬಯಲು ಆ ಮಳೆಯನು ಒಡಗೂಡಿ, ನೋಡಲು ಮಂಜುಗಡ್ಡೆ ಯಾಗಿ, ರೂಪವಾಗಿ ತೋರುತ್ತದೆ. ಬಯಲೇ ಬೀಜವಾಗಿ ಆ ಬಯಲೇ ರೂಪವಾಯಿತಲ್ಲ.

ನೀರಬೊಂಬೆ ನಿರಾಳದ ಗೆಜ್ಜೆಕಟ್ಟಿಕೊಂಡು ನಿರ್ಬಯಲು ಕೈಯಲ್ಲಿ ಹಿಡಿದು ನಿರಾಳ ರೂಪು ಧರಿಸಿ ಕುಣಿಯಿತಲ್ಲ ಇದು ಬಯಲು ರೂಪಾದ ಮಹಿಮೆ! ಆ ರೂಪವೇ ಬಯಲಾಗಿ ಗೆಜ್ಜೆಕಟ್ಟಿಕೊಂಡು ಆನಂದದಿಂದ ಕುಣಿ ಕುಣಿದಾಡಿದ ಮಹಿಮೆ!

ಅಂಗ ಹೆಣ್ಣಾದರೇನು ಗಂಡಾದರೇನು ಅವೆರಡೂ ಅಂಗಗಳೇ. ನೀರು ಗಟ್ಟಿಯಾದ ನೀರಬೊಂಬೆಗಳು! ಆ ಬೊಂಬೆಗಳು ಸಮರತಿಯಾಗಲು ಉರಿ ಹುಟ್ಟಿ ಜಲಹರಿದು, ಅಖಂಡವೆಂಬ ನಾಮದಿಂದ ಪಿಂಡವಾಗಿ ಬ್ರಹ್ಮಾಂಡವಾಗಿ ಬಯಲ ಗೆಜ್ಜೆಯನು ಧರಿಸಿ ಅನಾದಿಯಿಂದ ಬಂದು ಆದಿಗೆ ಪ್ರಥಮವಾಯಿತು.

ಬಯಲೇ ರೂಪವಾಯಿತು; ಆ ಬಯಲೇ ನಿರೂಪವೂ ಆಯಿತು. 'ಬಯಲು ರೂಪ ಮಾಡಬಲ್ಲಾತನೇ ಶರಣ. ಆ ರೂಪ ಬಯಲ ಮಾಡಬಲ್ಲಾತನೇ ಲಿಂಗಾನುಭವಿ. ಆ ರೂಪ ಬಯಲ ಮಾಡಲರಿಯದಿರ್ದಡೆ ಎಂತು ಶರಣನೆಂಬೆ? ಆ ಬಯಲ ರೂಪ ಮಾಡಲರಿಯದಿರ್ದಡೆ ಎಂತು ಲಿಂಗಾನುಭವಿಯೆಂಬೆ? ಈ ಉಭಯ ಒಂದಾಗಿರ್ದಲ್ಲಿ ನಿಮ್ಮ ತೆರೆಹುಂಟೆ ಕೂಡಲಸಂಗಮದೇವಾ'

ಅಲ್ಲೊಂದು ಸದಮದಗಜ ಹಯನಾಯಿತ್ತು :

ಬಯಲ ಬೆಳಕಿನಿಂದ ಹುಟ್ಟಿದ ನೆರಳೇ ಸದಮದಗಜ. ಅದನ್ನು ಮನವೆಂದು ಕರೆದರು. ಇದು ರೂಪವನ್ನು ಆವರಿಸಿ ಮದಗಜವಾಗಿ ಮಾರ್ಪಟ್ಟಿತು. ಮದಗಜ ತನ್ನ ಸುಖಕ್ಕಾಗಿ ಗಜವನ್ನೇ ಹುಡುಕಿತು. ಗಜ ಗಜವನ್ನು ಕೂಡಿ ಮದಗಜವನ್ನೇ ಸೃಷ್ಟಿ ಮಾಡಿತು. ಸದಮದಗಜವಾಗಲಿಲ್ಲ.

ಬಯಲೇ ರೂಪವಾಗಿದೆ. ಆ ರೂಪದಲ್ಲಿಯೇ ಬಯಲಿದೆ ಎಂದು ಬಯಲ ಬೆಳಕಿನಿಂದ ಹುಟ್ಟಿದ ಮನನೆಂಬ ಮದ ಗಜಕ್ಕೆ ಹೊಳೆದರೆ ಸಾಕು, ಆ ಬಯಲಲ್ಲಿ ಬೆರೆತು ಬಯಲಾಗುತ್ತದೆ.

ಹಯನಾಗುತ್ತದೆ; ಸದಮದಗಜವಾಗುತ್ತದೆ. ಅಮೃತವನ ಉಂಡು, ಮಧುರಸವನೇ ಉಂಡು ಬಯಲ ಕೂಡಿ ಬಯಲಾಗುತ್ತದೆ.

ಬಯಲ ಬೀಜ ಬಿತ್ತಿಗೆಯಾಗಿದ್ದೆ. ರೂಪಾಗಿ ಬೆಳೆದರೇನು ಅದು ನಿರೂಪ ಜ್ಞಾನದ ಎಲುಬಿನ ಮರವೇ ಆಗಿದೆ. ಆ ಮರದ ತುಂಬಾ ತನಿರಸವ ಜ್ಞಾನದ ಫಲಗಳೇ ತುಂಬಿವೆ. ರೂಪ ಬಯಲ ತಿಳಿಯಬೇಕು; ಬಯಲು ರೂಪವನ್ನು ಎಚ್ಚರಿಸಿ ತನ್ನಂತೆ ಬಯಲು ಮಾಡಿಕೊಳ್ಳಬೇಕು.

157

ಬೆಟ್ಟವ ಬೆಳ್ಳಕ್ಕಿ ನುಂಗಿ,
ತುಟ್ಟ ತುದಿಯ ಬಟ್ಟ ಬಯಲ ನಟ್ಟ ನಡುವಣ ಶಬ್ದವ ಮುಟ್ಟಿ
ಹಿಡಿದವ ಹುಟ್ಟಲಿಲ್ಲ, ಹೊದ್ದಲಿಲ್ಲ, ಅಷ್ಟದಳ ಕುಳವ ಮುಟ್ಟಲಿಲ್ಲ.
ಹೃತ್ಕಮಲಕರ್ಣಿಕಾ ಮಧ್ಯದಲ್ಲಿರ್ಪ ಸದ್ವಾಸನೆಯ
ಸ್ವಾನುಭಾವ ಅಮೃತವನುಂಡು,
ಮನ ಮಗ್ನವಾದಾತನೆ ಪ್ರಾಣಲಿಂಗಿ,
ಬಸವಪ್ರಿಯ ಕೂಡಲಸಂಗಮದೇವ ಪ್ರಭುವೆ.

ಅರಿಯದಿದ್ದರೆ ಬೆಟ್ಟ. ಅರಿತರೆ ಅದು ಅರಿವಿಗೆ ಆಹಾರ; ಗೋವರ್ಧನನ ಕಿಬ್ಬೆರಳಲಿ ನಿಲ್ಲುವುದು! ಅರಿವೇ ಬೆಳ್ಳಕ್ಕಿ; ಅಜ್ಞಾನವೇ ಬೆಟ್ಟ. ನೋಡುವುದನ್ನು ನೋಡಲು ಅರಿಯದಿದ್ದಕ್ಕಾಗಿ ಅಜ್ಞಾನದ ಬೆಟ್ಟ ವಿಶ್ವವನ್ನೇ ವ್ಯಾಪಿಸಿಕೊಂಡಿದೆ. ವಿಶ್ವದ ತನುಗಳನ್ನೆಲ್ಲ ವ್ಯಾಪಿಸಿಕೊಂಡಿದೆ. ತನುವಿನಲ್ಲಿಯೇ ತನ್ಮಯವಾದ ಜ್ಞಾನದ ಬೆಳ್ಳಕ್ಕಿಯನ್ನು ಅಜ್ಞಾನ ಆವರಿಸಿಕೊಂಡು ಅತ್ತಲಿತ್ತ ಹಾರದಂತೆ ಮಾಡಿದೆ.

ತನುವಿನ ಮೂಲ ಅರಿಯಲು ಹೋದರೆ ಅದೊಂದು ಜಲಬಿಂದು! ಜಲಬಿಂದುವನ್ನು ಅರಿಯಲು ಹೋದರೆ ಜಲಜನಕ, ಆಮ್ಲಜನಕ! ಇವೆರಡೂ ಕಾಣುವುದಿಲ್ಲಬರೀ ಬಯಲು! ಬಯಲಿನಲ್ಲಿಯೇ ಇವುಗಳ ವಾಸ! ಜಲಜನಕ, ಆಮ್ಲಜನಕವನ್ನು ಕೂಡಿಸಿ ಬಯಲು ಇಚ್ಛಿಸಿದರೆ ಮಾತ್ರ ಜಲ!. ಈ ಜಲ ಬಿಂದುವೇ ಗರ್ಭ ಹೊಕ್ಕು ಪಿಂಡವಾಗಿ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಆಗಿ ಸುಂದರವಾದ ಚರ್ಮದ ಕವಚ ಧರಿಸಿ ತನುವಾಗಿ ಭೂಮಿಗೆ ಬಂದಿದೆ. ವಿಶ್ವದ ತುಂಬಾ ಬಯಲ ಕುಡಿ ವ್ಯಾಪಿಸಿದೆ. ತನುವೆಂದು, ದೇಹವೆಂದು, ಶರೀರವೆಂದು ಆಯಾಭಾಷೆಯಲ್ಲಿ ಕರೆಯಲ್ಪಟ್ಟಿದೆ.

ಮಹಾಜ್ಞಾನಿ ಅಪ್ಪಣ್ಣ ಶರಣರು ತನುವನ್ನು ಅಜ್ಞಾನದ ಬೆಟ್ಟವೆಂದು ಕರೆದಿದ್ದಾರೆ. ತನುವಿನಲ್ಲಿಯೇ ತನ್ಮಯವಾಗಿ ಸಕಲವನ್ನು ತಿಳಿಯುವ ಅರಿವನ್ನು ಬೆಳ್ಳಕ್ಕಿ ಎಂದು ಕರೆದಿದ್ದಾರೆ. ತನುವನ್ನು ಆವರಿಸಿರುವ ಮನವನ್ನು, ಮನದ ಅಜ್ಞಾನದ ಮಾತನ್ನು ಕೇಳುವ ತನುವನ್ನು, ತನುವಿನಲ್ಲಿಯೇ ತನ್ಮಯವಾದ ಅರಿವು ನುಂಗುವುದೇ ಬೆಳ್ಳಕ್ಕಿ ಬೆಟ್ಟ ನುಂಗಿದಂತೆ!

ತನುವಿನಲ್ಲಿಯೇ ತನ್ಮಯವಾದ ಅರಿವನ್ನು ತನುವನ್ನು ಆವರಿಸಿದ ಮನ ಅರಿಯದಿದ್ದರೆ ತನುವೇ ಅಜ್ಞಾನದ ಬೆಟ್ಟ. ಅರಿತರೆ ತನುವೇ ವಿರಾಟ ಸ್ವರೂಪ್ ಜಗದಗಲ ಮುಗಿಲಗಲ! ತನುವನ್ನು ಬೆಳಗಿಸಿ ಬೆಳಗಾಗಿ ಬೆಳಗುವ ಬೆಳ್ಳಕ್ಕಿ!

ಬೆಟ್ಟವ ಬೆಳ್ಳಕ್ಕಿ ನುಂಗಿ

ತುಟ್ಟ ತುದಿಯ ಬಟ್ಟ ಬಯಲ ನಟ್ಟ ನಡುವಣ ಶಬ್ದವ ಮುಟ್ಟಿ ಹಿಡಿದವ ಹುಟ್ಟಲಿಲ್ಲ, ಹೊದ್ದಲಿಲ್ಲ, ಅಷ್ಟದಳ ಕುಳವ ಮುಟ್ಟಲಿಲ್ಲ; ಅಷ್ಟದಳ ಕಮಲದ ಮೇಲಿಪ್ಪ ನಿಶ್ಶೂನ್ಯನ ಮರ್ಮವರಿಯದೆ, ಪ್ರಾಣಲಿಂಗವೆಂದೆಂಬರು, ಸಂತೆಯ ಸುದ್ದಿಯ ವಂಚಕರು, ಅಂಗದ ಅಪ್ಯಾಯನಕ್ಕೆ ಲಿಂಗವನರಸುವ, ಭಂಗಿತರನೇನೆಂಬೆ ಗುಹೇಶ್ವರ ಎಂದು ಪ್ರಭುಗಳು ಹೇಳುತ್ತಾರೆ. ಇವರ ಮತ್ತೊಂದು ವಚನದಲ್ಲಿ ಹೃದಯ ಕಮಲದೊಳಗೊಂದು ಮರಿದುಂಬಿ ಹುಟ್ಟಿತ್ತು, ಹಾರಿ ಹೋಗಿ ಆಕಾಶವ ನುಂಗಿತ್ತಯ್ಯ! ಆ ತುಂಬಿಯ ಗರಿಯ ಗಾಳಿಯಲ್ಲಿ, ಮೂರು ಲೋಕವೆಲ್ಲವೂ ತಲೆ ಕೆಳಗಾಯಿತ್ತು! ಪಂಚವರ್ಣದ ಹಂಸೆಯ ಪಂಜರವ ಖಂಡಿಸಿದಡೆ, ಗರಿಮುರಿದು, ತುಂಬಿ ನೆಲಕ್ಕುರುಳಿತ್ತು! ನಿಜದುದಯ ಬೆಡಗಿನ ಕೀಲ, ಗುಹೇಶ್ವರಾ, ನಿಮ್ಮ ಶರಣರ ಅನುಭವ ಸಂಗದಲ್ಲಿರ್ದು ಕಂಡೆನಯ್ಯಾ ಎಂದಿದ್ದಾರೆ.

ತನುವಿನ ತುಟ್ಟ ತುದಿಯ ಬಟ್ಟ ಬಯಲ ನಟ್ಟ ನಡುವಣ ಶಬ್ದವ ಮುಟ್ಟಿ ಹಿಡಿವನಿಗೆ ಜನನವಿಲ್ಲ ಮರಣವಿಲ್ಲ. ಅವನು ಮಹಾಜ್ಞಾನಿ, ತನುವಿನ ಮಾಂಸ ಮಲ ಕೀವು ರಕ್ತಗಳು ಅವನಿಗೆ ಸೋಂಕಲೇ ಇಲ್ಲ. ಬದಲಾಗಿ ತನುವೇ ಸದ್ವಾಸನೆಯ ಕಮಲವಾಗಿ ಅರಳಿ ಅರಿವಿನ ಪರಿಮಳ ಬೀರಿತು. ಬದಲಾಗಿ ಅದರ ಸ್ವಾನುಭವದ ಅಮೃತದ ಪರಿಮಳವನುಂಡು ಮನ ಆ ಹೃದಯ ಕಮಲದ ಮಧ್ಯದಲ್ಲಿಯೇ ಬಂಧಿಯಾಗಿ ಪ್ರಾಣಕ್ಕೆ ಪ್ರಾಣಲಿಂಗಿಯಾಯಿತು. ಬಸವಣ್ಣನಿಗೆ ಪ್ರಿಯವಾದ ಹೃದಯ ಸಂಗಮದಲ್ಲಿ ಕೂಡಿ ಸಂಗಮದೇವ ಪ್ರಭುವೇ ತಾನಾಯಿತು.

ಅನುಭಾವಿಗಳು ಸಿಕ್ಕುವುದು ವಿರಳ, ಅವರನ್ನು ಕಂಡು ಹಿಡಿಯುವುದೂ ಜಟಿಲ, ಶರಣರು ಅನುಭವದ ಅರಿವಿನ ಕ್ರಾಂತಿಯನ್ನೇ ಮಾಡಿದರು. ಈ ಕ್ರಾಂತಿ ಮತ್ತೊಬ್ಬರೊಂದಿಗೆ ಕೂಡಿ ಮಾಡುವುದಲ್ಲ. ತನ್ನಲ್ಲಿ ತಾನೇ ತನಗಾಗಿ ಮಾಡಿಕೊಳ್ಳುವ ಕ್ರಾಂತಿ ಈ ಕ್ರಾಂತಿ ತನುವಿನಲ್ಲಿಯೇ ಶುರುವಾಗಿ ಸರ್ವ ತನುಗಳಲ್ಲಿಯೂ ತನಗೆ ತಾನೇ ಹೊತ್ತಿಕೊಳ್ಳಬೇಕು.

ಸರ್ವ ತನುಗಳಲ್ಲಿಯೂ ಅರಿವಿದೆ. ಅದನ್ನು ತಿಳಿಯುವ ಮನವಿದೆ. ಮನ ಅರಿವಿನಲ್ಲಿ ಮಗ್ನವಾಗಿ ಆ ಅರಿವಿನ ಮೂಲಕವೇ ತನು ದೃಷ್ಯ ನೋಡಬೇಕು. ಶಬ್ದಕೇಳಬೇಕು. ಪದಾರ್ಥ ರುಚಿಸಬೇಕು. ತನುವನ್ನು ತನು ಅರಿವಿನಿಂದಲೇ ಸ್ಪರ್ಶಿಸಬೇಕು. ಅರಿವಿನಿಂದಲೇ ಪದಾರ್ಥದ ಪರಿಮಳವನ್ನು ಅರಿಯಬೇಕು. ಹೀಗೆ ಸಕಲ ಜ್ಞಾನೇಂದ್ರಿಯಗಳ ರುಚಿಯೂ ಅರಿವಿನ ರುಚಿಯಾಗದ ವಿನಹ ಬೆಟ್ಟವನ್ನು ಬೆಳ್ಳಕ್ಕಿ ಬಂದು ನುಂಗದು.

158

ಬೆಳಗ ನುಂಗಿದ ಕತ್ತಲೆಯಂತೆ, ಕತ್ತಲೆಯ ನುಂಗಿದ ಬೆಳಗಿನಂತೆ,
ಹೊಳೆವ ಜ್ಯೋತಿಯ ಕಳೆ ಬಯಲೊಳಡಗಿದಂತೆ,
ನಳಿನಮಿತ್ರನ ಬೆಳಗು, ಹೊಳೆವ ಕಂಗಳ ಬೆಳಗು
ಥಳ ಥಳ ಹೊಳೆದು ಒಂದಾದಂತೆ,
ಸರ್ವಜೀವರೊಳು ಕಳೆ ಒಂದಲ್ಲದೆ ಎರಡಿಲ್ಲ.
ಸಂದಳಿದ ಸಮರಸೈಕ್ಯ,
ಬಸವಪ್ರಿಯ ಕೂಡಲಸಂಗಮದೇವ ಪ್ರಭುವೆ.

ಕತ್ತಲೆಯನ್ನು ಸೃಷ್ಠಿ ಮಾಡಿದ್ದೇ ಬೆಳಗು. ಸೃಷ್ಠಿ ಮಾಡಿದ ಬೆಳಕನ್ನೇ ನುಂಗುವ ಶಕ್ತಿ ಕತ್ತಲೆಗಿದೆ. ಸೃಷ್ಠಿ ಮಾಡಿದ ಕತ್ತಲೆಯನ್ನೇ ನುಂಗುವ ಶಕ್ತಿ ಬೆಳಕಿಗಿದೆ. ಆವರಿಸಿದ ಕತ್ತಲೆ ತನ್ನಷ್ಟಿಗೆ ತಾನೇ ಕರಗದು. ಕತ್ತಲೆ ಮೇಲೆ ಬೆಳಕು ಬಿದ್ದು ಆ ಕತ್ತಲನ್ನು ನುಂಗಿದಾಗಲೇ ಬೆಳಕು!

ಹೊಳೆವ ಜ್ಯೋತಿಯ ಕಳೆ ಬಯಲೊಳಡಗಿದಂತೆ

ಸೂರ್ಯ ಚಿಮ್ಮಿದ ಬೆಳಕನ್ನು, ಬೆಳಕಿನಿಂದ ಉಂಟಾದ ಕತ್ತಲೆಯನ್ನು ಬಯಲು ತನ್ನೊಳಡಗಿಸಿಕೊಂಡು ಎರಡನ್ನೂ ಇಲ್ಲದಂತೆ ಮಾಡಿ ತನ್ನ ಸಹಜ ಶಕ್ತಿಯನ್ನು ಬೀರುತ್ತದೆ.

ನಳಿನ ಮಿತ್ರನ ಬೆಳಗು, ಹೊಳೆವ ಕಂಗಳ ಬೆಳಗು ಥಳ ಥಳ ಹೊಳೆದು ಒಂದಾದಂತೆ:

ಸೂರ್ಯ ಬೆಳಗುವ ಬೆಳಕಿಗೂ ಹೊಳೆವ ಕಂಗಳು ಬೆಳಗುವ ಬೆಳಕಿಗೂ ವ್ಯತ್ಯಾಸವೇ ಇಲ್ಲ. ಬೆಳಕಿನಿಂದಲೇ ಬೆಳಕು ಹುಟ್ಟಿ ಆ ಬೆಳಕು ಬೆಳಕಲ್ಲಿಯೇ ಬೆರೆತು ಒಂದಾದಂತೆ.

ಸೂರ್ಯ ಸರ್ವ ವಸ್ತುಗಳನ್ನೂ ಬೆಳಗುತ್ತಾನೆ. ಬೆಳಗಿದ ಯಾವ ವಸ್ತುಗಳನ್ನೂ ತನಗೆ ಬೇಕೆಂದು ತೆಗೆದುಕೊಳ್ಳುವುದಿಲ್ಲ. ಹಾಗೆಯೇ ಬೇಡದ ವಸ್ತುವೆಂದು ಬೆಳಗದೆ ಬಿಡುವುದಿಲ್ಲ. ಸಹಜವಾಗಿ ಬೆಳಗುತ್ತಾನೆ.

ಬೆಳಗಿಸಿಕೊಳ್ಳುವ ವಸ್ತು ಅದರ ಸೌಂದರ್ಯ ವಾಸನೆ ಸ್ಪರ್ಶ ಶಬ್ದ ರುಚಿ ಇದರ ಯಾವ ಜ್ಞಾನವೂ ಸೂರ್ಯನ ಬೆಳಕಿಗಿಲ್ಲ. ಆದರೆ ಸೂರ್ಯನ ಬೆಳಕಿನಿಂದ ಥಳ ಥಳನೆ ಹೊಳೆವ ಕಂಗಳ ಬೆಳಕಿಗೆ ಈ ಶಕ್ತಿ ಇದೆ. ಸೌಂದರ್ಯ ನೋಡಿ ಆನಂದ ಪಡುತ್ತದೆ. ಶಬ್ದ ಕೇಳಿ ಸುಖಿಸುತ್ತದೆ. ಸ್ಪರ್ಶಿಸಿ, ರುಚಿಸಿ ಅದರ ಪರಿಮಳವನ್ನು ಹೀರಿ ಕುಣಿ ಕುಣಿದಾಡುತ್ತದೆ. ಸೂರ್ಯನಂತೆ ಒಂದು ವಸ್ತುವನ್ನು ತನಗೆ ಬೇಕೆಂದು ತನ್ನ ಗರ್ಭದಲ್ಲಿ ಇಟ್ಟುಕೊಳ್ಳುವುದಿಲ್ಲ. ಕಂಗಳ ಬೆಳಕು ಬೆಳಗುವ ಸೂರ್ಯನನ್ನೇ ಥಳಥಳ ಬೆಳಗಿ ಹೊಳೆದು ಬೆಳಗಿನಲ್ಲಿಯೇ ಒಂದಾದಂತೆ ಕೋಟಿ ಸೂರ್ಯಂ ಸಮ ಪ್ರಭ ಎಂದಂತೆ!

ಸರ್ವ ಬಸವಪ್ರಿಯ ಕೂಡಲ ಸಂಗಮದೇವ ಪ್ರಭುವೆ:

ಸೂರ್ಯ ಬೆಳಗಿದ ಬೆಳಕನ್ನು ಕಂಗಳೇ ತಿಳಿಯಬೇಕು. ಕಂಗಳು ಬೆಳಗುವ ಬೆಳಕನ್ನು ಕಂಗಳೇ ತಿಳಿಯಬೇಕು. ಆದರೆ ಹೀಗಾಗುವುದಿಲ್ಲ. ಬೆಳಗುವ ಸೂರ್ಯನ ಬೆಳಕಿನಿಂದ ಕತ್ತಲು ಹುಟ್ಟಿ ಬೆಳಗುವ ಸೂರ್ಯನನ್ನೇ ಇಲ್ಲದಂತೆ ಮಾಡಿದೆಯೋ ಹಾಗೆಯೇ ಬೆಳಗುವ ಕಂಗಳಿಂದ ಮನ ಹುಟ್ಟಿ ಬೆಳಗುವ ಕಣ್ಣುಗಳನ್ನೇ ಆವರಿಸಿ ಕಾಣದಂತೆ ಮಾಡಿದೆ.

ಅರಿವಿನಿಂದ ನೋಡಲು ಹೋದರೆ ಜಗದ ಸರ್ವ ಜೀವಿಗಳ ಕಳೆ ಒಂದಲ್ಲದೆ ಎರಡಿಲ್ಲ. ಆದರೆ ಕಂಗಳಿಗೆ ಮುಸುಕಿದ ಕತ್ತಲೆ ಕಳೆದು ನೋಡಲು ಸಾಧ್ಯವಾಗುತ್ತಿಲ್ಲ. 'ನೋಡೂದ ನೋಡಲರಿಯದೆ ಕೆಟ್ಟಿತ್ತಿ ಜಗವೆಲ್ಲ. ನೋಡಲಾದ ನೋಡುವಡೆ ಕೂಡಲಿಲ್ಲ ಅಗಲಲಿಲ್ಲ. ಕೂಡದ ಅಗಲದ ಕೂಟದ ಸುಖವನು ಗುಹೇಶ್ವರಾ ನಿಮ್ಮ ಶರಣ ಮಾತ್ರ ಇಲ್ಲ' ಎಂದು ಪ್ರಭುಗಳು ಹೇಳಿದ್ದಾರೆ.

ಹೊಲೆಗೇರಿಯಾದರೇನು, ಶಿವಾಲಯವಾದರೇನು ನೆಲ ಮಾತ್ರ ಒಂದೇ ಸೂರ್ಯಬೆಳಗುವ ಬೆಳಕು ಒಂದೇ. ಆದರೆ ಕಾಣುವ ಕಂಗಳಲ್ಲಿ ಅಜ್ಞಾನದ ಪೊರೆ ಹುಟ್ಟಿ ಹೊಲಗೇರಿ, ಶಿವಾಲಯಗಳನ್ನು ಸೃಷ್ಠಿಸಿದೆ. ಸಮರಸಭಾವ ಕಂಗಳಲ್ಲಿಯೇ ಉಳಿದು ಬಳಕೆಗೆ ಬಾರದಂತೆ ಆಗಿದೆ. ಕಂಗಳ ಬೆಳಕಿನಿಂದ ನೋಡಿದರೆ ಶಿವಾಲಯದ ನಿರ್ಮಾಣವೂ ಕಲ್ಲಿನಿಂದಲೇ, ಹೊಲೆಗೇರಿಯ ನಿರ್ಮಾಣವೂ ಕಲ್ಲಿನಿಂದಲೇ.

ಕಲ್ಲನ್ನು ಕಲ್ಲೆಂದು ನೋಡುವಾಗ ಕಣ್ಣಿನ ಜ್ಞಾನ ಕಣ್ಣಿಗೆ ಬಳಕೆಯಾಗುತ್ತದೆ. ಜಗದ ಕಣ್ಣುಗಳೆಲ್ಲ ಕಲ್ಲನ್ನು ಕಲ್ಲೆಂದ ನೋಡುತ್ತವೆ. ಇದು ಕಣ್ಣಿನ ಸಹಜ ಜ್ಞಾನ. ಸರ್ವ ಕಣ್ಣುಗಳಲ್ಲಿ ಕಳೆ ಒಂದಲ್ಲದೆ ಎರಡಿಲ್ಲ. ಅದೇ ಕಲ್ಲು ಕಟೆದು ಮಸೀದೆ ಮಾಡಿದರೆ ಕಲ್ಲಲ್ಲ; ಅದು ಮಸೀದೆ! ಅದೇ ಕಲ್ಲು ಕಟೆದು ಚರ್ಚ್ ಮಾಡಿದರೆ ಅದು ಕಲ್ಲಲ್ಲ; ಚರ್ಚ್ ಅದೇ ಕಲ್ಲು ಕಟೆದು ಶಿವಾಲಯ ಮಾಡಿದರೆ ಅದು ಕಲ್ಲಲ್ಲ; ಶಿವಾಲಯ! ಕಲ್ಲನ್ನು ನೋಡುವುದಕ್ಕಾಗಿ ಪುನಃ ಕಣ್ಣು ಕುರಾನ್, ಬೈಬಲ್, ಭಗವದ್ಗೀತೆಗಳನ್ನು ಪಠಿಸಬೇಕೆ? ವೇದ, ಶಾಸ್ತ್ರ, ಆಗಮ, ಉಪನಿಷತ್ತುಗಳನ್ನು ಓದಬೇಕೆ? ಓದಿದರೂ ಕಂಗಳಿಗೆ ಕಲ್ಲನ್ನು ನೋಡಿ ಕಲ್ಲೆನ್ನಲು ಬರುವುದಿಲ್ಲವಲ್ಲ. ಕಲ್ಲು ಕೆತ್ತಿದರೇನು ಕೆತ್ತದಿದ್ದರೇನು ಅದು ಕಲ್ಲಲ್ಲವೆ? ಕಣ್ಣು ನೋಡೂನ್ನು ನೋಡಲು ಅರಿಯಬಾರದೆ? ಕಣ್ಣಿಗೆ ಸಂದಳಿದ ಸಮರಸೈಕ್ಯ ಬೇಡವೆ?

ನೋಡೂದನ್ನ ನೋಡುವ ಜ್ಞಾನ ಕಂಗಳಲ್ಲಿಯೇ ಸಂಗಮವಾಗಿದೆ. ಆ ಬೆಳಕು ಸರ್ವ ಕತ್ತಲನ್ನೂ ನುಂಗಿ ಬೆಳಗಿಂಗೆ ಬೆಳಗಾಗಿ ಬೆಳಗುವ ಬೆಳಕು. ಅಲ್ಲಿ ಬಸವಪ್ರಿಯ ಕೂಡಲ ಸಂಗಮದೇವ ಪ್ರಭುವೇ ವಾಸವಾಗಿದ್ದಾನೆ. ಇದನ್ನು ನೋಡುವ ಕಂಗಳೇ ಅರಿಯಬೇಕೆಂದು ಅಪ್ಪಣ್ಣ ಶರಣರು ಕಂಗಳಿಗೆ ಅಪ್ಪಣೆ ಮಾಡಿದ್ದಾರೆ.

159

ಬ್ರಹ್ಮನ ಹುಟ್ಟು, ವಿಷ್ಣುವಿನ ಸ್ಥಿತಿ, ರುದ್ರನ ಲಯಕ್ಕೆ
ಒಳಗಾದ ಮನುಜರೆಲ್ಲ ತಾವು ಪ್ರಸಾದಿ,
ಪ್ರಾಣಲಿಂಗಿಗಳೆಂದು ನುಡಿದುಕೊಂಬಿರಿ.
ಪ್ರಸಾದಿ ಸ್ಥಲ ಎಲ್ಲರಿಗೆಂತಾದುದಣ್ಣಾ?
ಪ್ರಸಾದಿ ಸ್ಥಲ ಪರಮಸುಖ ಪರಿಣಾಮ
ಮನ ಮೇರೆದಪ್ಪಿ ತನುವೇ ಪ್ರಸಾದವ ಮಾಡುವುದೀಗ ಪ್ರಸಾದ.
ಇದನರಿಯದೆ ಸದಮದನಾಗಿ ಮುಡಿ ನೋಡಿ ಒಡಲ ಕೆಡಿಸಿಕೊಂಬ
ಜಡಮನುಜರ ನುಡಿಯ ಕೇಳಲಾಗದು,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಬ್ರಹ್ಮ ವಿಷ್ಣು ರುದ್ರರೆಂದರೆ ದೇವರಲ್ಲ. ಅದು ತನುವಿನ ಸ್ಥಿತಿ. ತನುವಿಗೆ ಹುಟ್ಟು ಇದೆ. ಹಾಗೆಯೇ ಮರಣವೂ ಇದೆ. ಇವೆರಡೂ ತನುವಿನ ಸಹಜ ಗುಣ. ತನುವನ್ನು ಮನ ಆವರಿಸಿದೆ. ಈ ಮನವನ್ನೇ ಬ್ರಹ್ಮ ಎಂದು ಕರೆಯುತ್ತಾರೆ.

ಮನ ತನುವಿನಲ್ಲಿ ರಸಾಯನಿಕ ಕ್ರಿಯೆ ಉಂಟು ಮಾಡಿದಾಗ ತನು ತನುವಿನೊಂದಿಗೆ ಬೆರೆತು ಮತ್ತೊಂದು ತನುವಿಗೆ ಜನ್ಮ ನೀಡುತ್ತದೆ. ಸಕಲ ಪ್ರಾಣಿ ಕೀಟ ಗಿಡ ಮರ ಬಳ್ಳಿ ಪಶು ಪಕ್ಷಿಗಳಲ್ಲಿಯೂ ಇದು ಸಹಜ ಕ್ರಿಯೆ. ತನು ಮಾತ್ರ ಹುಟ್ಟಿಗೆ ಕಾರಣ ವಾದದ್ದು ಮನ ಎಂದು ಕಂಡು ಹಿಡಿದಿದೆ.ಈ ಮನಕ್ಕೆ ಬ್ರಹ್ಮ ಎಂದು ಹೆಸರಿಟ್ಟು ಕರೆದು ಆರಾಧಿಸುತ್ತದೆ.

ಮನದ ಬಯಕೆಗಳನ್ನೆಲ್ಲ ಈಡೇರಿಸುವ ತನುವಿದೆ. ತನು ತನ್ನನ್ನು ತಾನು ರಕ್ಷಿಸಿ ಕೊಳ್ಳುತ್ತಾ ಮನದ ಬಯಕೆಗಳನ್ನು ಈಡೇರಿಸುತ್ತದೆ. ಇಂತಹ ರಕ್ಷಣಾ ಶಕ್ತಿಯುಳ್ಳ ತನುವಿಗೆ, ತನುವಿನ ಆ

ಶಕ್ತಿಗೆ ಮನ ವಿಷ್ಣುವೆಂದು ಕರೆದಿದೆ.

ತನುವಿನಲ್ಲಿ ಏನೆಲ್ಲ ಶಕ್ತಿಯಿದ್ದರೂ ಯಾವ ಶಕ್ತಿಯನ್ನೂ ಪರಿಗಣಿಸದೆ ಕ್ಷಣ ಮಾತ್ರ ದಲ್ಲಿ ತನುವಿನ ಪ್ರಾಣ ಹಾರಿ ಹೋಗುತ್ತದೆ. ಇಂತಹ ಲಯಕ್ಕೆ ಕಾರಣವಾಗುವ ಅಗೋ ಚರ ಶಕ್ತಿಯನ್ನು ಮನ ರುದ್ರನೆಂದು ಕರೆದು ಹೆಸರಿಟ್ಟಿದೆ.

ತನುವಿನ ಸೃಷ್ಟಿಗೆ ಕಾರಣವಾದ ಮನ ಬ್ರಹ್ಮನಾಗಿ, ತನುವಿನ ರಕ್ಷಣೆಗೆ ಕಾರಣವಾದ ಶಕ್ತಿ ವಿಷ್ಣುವಾಗಿ, ತನುವಿನ ಲಯಕ್ಕೆ ಕಾರಣವಾದ ಶಕ್ತಿ ರುದ್ರನಾಗಿ ಪ್ರಸಿದ್ಧಿ ಹೊಂದಿದೆ. ತನು ಹುಟ್ಟಿನೊಂದಿಗೆ ಈ ಮೂರು ಶಕ್ತಿಗಳನ್ನು ಹೊಂದಿದೆ. ತನು ಕುಲ ತನಗೆ ಅರಿಯ ದಂತೆ ತನಗೆ ತಾನೆ ಈ ಮೂರೂ ಶಕ್ತಿಗಳನ್ನು ಆರಾಧಿಸುತ್ತದೆ. ಪೂಜಿಸುತ್ತದೆ. ದೊಡ್ಡ ದೊಡ್ಡ ದೇವಾಲಯಗಳನ್ನು ಕಟ್ಟಿ ಮೈಮರೆತು ಕುಣಿದು ಉತ್ಸವ ಮಾಡುತ್ತದೆ. ಆದರೂ ತನು ಹುಟ್ಟು ಸಾವುಗಳ ನರಕ ಯಾತನೆಯಿಂದ ಹೊರಗಾಗುವುದಿಲ್ಲ.

ಮನ ಬಯಸಿದ ಸುಖ ತನುವಿನಿಂದಲೇ ಪಡೆಯಬೇಕು. ಮನಕ್ಕೆ ಆದ ದುಃಖ ತನುವಿನಿಂದಲೇ ನಿವಾರಣೆಯಾಗಬೇಕು. ಹುಟ್ಟು ಮನಕ್ಕೆ ಸುಖ ನೀಡಿದರೆ, ಸಾವು ದುಃಖ ನೀಡುತ್ತದೆ. ಹುಟ್ಟಿಗೂ ಸಾವಿಗೂ ಹುಟ್ಟು ಸಾವುಗಳ ಮಧ್ಯದ ಸುಖಕ್ಕೂ ಪೂಜೆಯೇ ಪರಿಹಾರವಾಗುತ್ತದೆ ಮನಕ್ಕೆ. ಹೀಗೆ ಮನ ಮತ್ತು ತನು ತನ್ನ ಆಯುಷ್ಯವನ್ನೆಲ್ಲ ವ್ಯರ್ಥ ಕಳೆಯುತ್ತದೆ.

ತನುವಿನಲ್ಲಿಯೇ ತನ್ಮಯವಾದ ಅರಿವಿನ ಸಂಪರ್ಕಕ್ಕೆ ಮನ ಹೋಗುವುದೇ ಇಲ್ಲ. ಅರಿವಿನಿಂದ ನೋಡಿದರೆ ಮನ ತನುವಿನಿಂದ ಮಾಡುವ ಚೇಷ್ಟೆಗಳೆಲ್ಲ ಅರಿವಿನ ಗಮನಕ್ಕೆ ಬರುತ್ತದೆ.

ಉದಾ : ಮನ ತನುವಿನ ಮೂಲಕ ಒಂದು ಕಲ್ಲು ತೆಗೆದುಕೊಂಡು ಅದನ್ನು ಕಟೆದು ಮೂರ್ತಿ ಮಾಡಿ ಅದಕ್ಕೆ ಬ್ರಹ್ಮನೆಂದು ಹೆಸರಿಟ್ಟು ತನುವಿನ ಮೂಲಕ ಆರಾಧಿಸ್ತುದೆ. ಮತ್ತೊಂದು ಕಲ್ಲು ಕಟೆದು ಮೂರ್ತಿ ಮಾಡಿ ವಿಷ್ಣುವೆಂದು ಹೆಸರಿಟ್ಟು ತನುವಿನ ಮೂಲಕ ಆರಾಧಿಸುತ್ತದೆ. ಮತ್ತೊಂದು ಕಲ್ಲು ಕಟೆದು ಮೂರ್ತಿ ಮಾಡಿ ರುದ್ರನೆಂದು ಹೆಸರಿಟ್ಟು ತನುವಿನ ಮೂಲಕ ಆರಾಧಿಸುತ್ತದೆ. ಆಲಯಗಳನ್ನು ನಿರ್ಮಿಸಿ ಉತ್ಸವ ಗಳನ್ನು ಮಾಡುತ್ತದೆ.

ಕಲ್ಲನ್ನು ಕಲ್ಲೆಂದು ನುಡಿಯುವ ತನು ಕಟೆದ ಕಲ್ಲನ್ನು ದೇವರೆಂದು ಆರಾಧಿಸುತ್ತದೆ. ಇದು ಮನದ ಮಾಯಾಜಾಲವೆಂದು ಅರಿವು ಹೇಳಿದರೂ ತನು ಅರಿವಿನ ಮಾತು ನಂಬುವುದೇ ಇಲ್ಲ. ಅರಿವಿನ ಪ್ರಸಾದ ತನುವಿಗೆ ದಕ್ಕದೆ ಮನ ತನುವನ್ನು ಸಾಯುವವರೆಗೂ ಅಜ್ಞಾನದ ಕೆಲಸಗಳಲ್ಲಿಯೇ ಕಳೆಯುವಂತೆ ಮಾಡುತ್ತದೆ.

ಅರಿವಿನ ಪ್ರಸಾದ ಸಕಲ ತನುಗಳಿಗೂ ಆಗುವುದಿಲ್ಲ. ಏಕೆಂದರೆ ತನುವಿನೊಂದಿಗೆ ಅಜ್ಞಾನದಿಂದ ಸುಖಿಸುವ ಮನ ಮೇರೆದಪ್ಪಿ ಅರಿವಿನತ್ತ ವಾಲುವುದು ಬಲು ಜಟಿಲ. ಮನ ತನುವನ್ನು ಆವರಿಸಿದೆ; ಅರಿವು ತನುವಿನಲ್ಲಿಯೇ ಸಂಗಮವಾಗಿದೆ. ಆದರೂ ಅರಿವಿನ ಪ್ರಸಾದ ಮನಕ್ಕೆ ದಕ್ಕುವುದು ಬಲು ಜಟಿಲ. ಮನ ಅರಿವಿನ ಪ್ರಸಾದ ಮೆದ್ದರೆ ಸಾಕು ಆ ಮನವೇ ಘನಮನವಾಗುವುದು. ಇದು ಬಿಟ್ಟು ಮುಡಿ ನೋಡಿ ನುಡಿದು, ವೇಷ ಧರಿಸಿ ಒಡಲ ಕೆಡಿಸುವ ಮನದ ದುರುಳ ತನವ ಕೇಳಲಾಗದು ಎಂದಿದ್ದಾರೆ ಅಪ್ಪಣ್ಣ ಶರಣರು.

160

ಬ್ರಹ್ಮಾಂಡದ ಬಯಲ ಪಸರಿಸಿ ಹಿಡಿದರೆ, ಬಯಲಾವುದುಂಟು ಹೇಳಿರಣ್ಣಾ?

ಕಂಗಳ ಮುಂದಣ ಕತ್ತಲೆ ಹರಿವುದಕ್ಕೆ ಜ್ಯೋತಿ ಆವುದುಂಟು ಹೇಳಿರಣ್ಣಾ ?
ಇಂಗಿತವನರಿದ ಬಳಿಕ, ತ್ರಿವಿಧಕ್ಕೆ ತ್ರಿವಿಧವನಿತ್ತು
ತ್ರಿವಿಧವನರಿತು, ತ್ರಿವಿಧವ ಮರೆದು, ಕಲಿಯುಗದ ಕತ್ತಲೆಯ ದಾಂಟಿ,
ತನ್ನ ಭವವ ದಾಂಟಿದವಂಗೆ, ಬ್ರಹ್ಮಾಂಡದ ಬಯಲು ಕೈವಶವಾಯಿತ್ತು.
ಕಂಗಳ ಮುಂದಣ ಕತ್ತಲೆ ಹರಿದು ಹೋಯಿತ್ತು,
ನಿಮ್ಮ ಸಂಗಸುಖದೊಳಗಿಪ್ಪ ಲಿಂಗೈಕ್ಯಂಗೆ
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಬ್ರಹ್ಮಾಂಡವೆಲ್ಲ ಬಯಲ ಬೀಜದಿಂದಲೇ ಜನ್ಮ ಪಡೆದಿದೆ. ''ಬಯಲು ಬಯ ಲನೆ ಬಿತ್ತಿ, ಬಯಲು ಬಯಲನೇ ಬೆಳೆದು, ಬಯಲು ಬಯಲಾಗಿ ಬಯಲಾಯಿತ್ತಯ್ಯಾ. ಬಯಲು ಜೀವನ, ಬಯಲು ಭಾವನೆ, ಬಯಲು ಬಯಲಾಗಿ ಬಯಲಾಯಿತ್ತಯ್ಯಾ. ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು; ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ'' ಎಂದಿದ್ದಾರೆ ಅಲ್ಲಮಪ್ರಭುಗಳು.

ನಕ್ಷತ್ರ, ಚಂದ್ರ, ಸೂರ್ಯ, ಆಕಾಶ ಕಾಯಗಳು ಬಯಲು ಬೀಜದಿಂದಲೇ ಜನ್ಮ ಪಡೆದು ಬಯಲ ಆಶ್ರಯದಲ್ಲಿಯೇ ಬೆಳಗುತ್ತಲಿವೆ. ಭೂಮಿ, ಜಲ, ಸಸ್ಯರಾಶಿ, ಜಲ ಚರಗಳು, ಪ್ರಾಣಿ, ಪಶು, ಪಕ್ಷಿ, ಉರಗ, ಕೀಟ ಇವೆಲ್ಲವುಗಳೊಂದಿಗೆ ಇಡೀ ಬ್ರಹ್ಮಾಂಡವನ್ನೇ ತಿಳಿಯುವ ಮನುಷ್ಯ ಕೂಡಾ ಬಯಲ ಬೀಜದ ಕುಡಿಯಾಗಿದ್ದಾನೆ.

ಬಯಲ ಬೀಜದಿಂದಲೇ ಹೊರಬಂದ ತನು ಬಯಲನ್ನೇ ಹಿಡಿಯುವುದೆಂದರೇನು? ಇದು ಪ್ರಶ್ನೆ ಆದರೂ ತನು ಇರುವವರೆಗೆ ತನುವಿಗೆ ಬಯಲೆಂದರೇನೆಂದು ತಿಳಿಯುವುದೇ ಇಲ್ಲ. ಕಣ್ಣು ಕಾಣುತ್ತವೆ; ಆದರೂ ಕಣ್ಣಿಗೆ ಬಯಲು ಕಾಣುವುದಿಲ್ಲ. ಏಕೆಂದರೆ ಕಣ್ಣಿಗೆ ಹಗಲು ಕುರುಡುತನದ ಅಜ್ಞಾನ ರೋಗ ಆವರಿಸಿದೆ. ಕಾರಣ ಜಗ ಮಗಿಸುವ ಸೂರ್ಯನ ಬೆಳಕು ಕೂಡಾ ಕಣ್ಣಿನ ಕತ್ತಲೆಯನ್ನು ಕಳೆಯಲು ಸಾಧ್ಯವಾಗುತ್ತಿಲ್ಲ. ಅಂದ ಮೇಲೆ ವೇದಶಾಸ್ತ್ರ ಪುರಾಣ ಭಗವದ್ಗೀತೆ ಬೈಬಲ್ ಕುರಾನ್‌ಗಳು ಕಂಗಳ ಕತ್ತಲೆಯನ್ನು ಹರಿಯಬಲ್ಲವೆ?

ಬಯಲ ಬೀಜದಿಂದ ಹುಟ್ಟಿದ ಬ್ರಹ್ಮಾಂಡವಾದರೇನು? ಪಿಂಡಾಂಡವಾದರೇನು? ಬಯಲಲ್ಲವೇ? ತನು ಬಯಲ ಬೀಜದಿಂದ ಜನ್ಮ ಪಡೆದು ಬಯಲ ಬೋಧಿ ವೃಕ್ಷವಾಗಿದ್ದರೂ ಸಾತ್ವಿಕ ರಾಜಸ ತಾಮಸವೆಂಬ ಮೂರು ಗುಣಗಳಿಂದ ಬೇರ್ಪಡಿಸಿ ಕೊಂಡಿದೆ. ಸಾತ್ವಿಕನಾಗಿ ರಾಜಸ ತಾಮಸ ಗುಣಗಳನ್ನು ನೋಡಿ ಸಾತ್ವಿಕನೆಂದು ಮೆರೆ ಯುತ್ತದೆ. ನೋಡುವ ತನು, ನೋಟಕ್ಕೆ ಒಳಗಾದ ತನುಗಳು ನಿರ್ಗುಣಿ ಬಯಲ ಬೀಜದ ಕುಡಿಗಳೆಂದು ಅರಿವಾಗುತ್ತಿಲ್ಲ. ಅರಿವುಂಟು ಮಾಡುವ ಅಂಗದಲ್ಲಿಯೇ ಗುರುದೇವ ಸಂಗಮನಾಗಿದ್ದಾನೆ; ಇದರ ಇಂಗಿತವನರಿಯುವ ಅಂಗವೇ ಲಿಂಗವಾಗಿದೆ. ಇವೆರಡನ್ನೂ ನಿರ್ಧರಿಸಿ ಬಯಲ ಜ್ಞಾನ ಬಳಕೆ ಮಾಡುವ ಜಂಗಮನೂ ಅಂಗದಲ್ಲಿಯೇ ಸಂಗಮವಾಗಿದ್ದಾನೆ. ಆದರೂ ಅಂಗವನ್ನು ಆವರಿಸಿರುವ ಮನದಿಂದಾಗಿ ಅಂಗ ಮಂಗನಂತೆ ಸಾತ್ವಿಕ ರಾಜಸ ತಾಮಸ ಗುಣಗಳಿಂದ ವರ್ತಿಸುತ್ತದೆ.

ತನು ತಾನು ತನುವೇ ಆಗಿದ್ದರೂ, ತನ್ನಂತೆ ಇರುವ ತನುಗಳೆಲ್ಲಾ ತನುವೇ ಆಗಿದ್ದರೂ, ತನುವಿಗೆ ತನುವನ್ನು ತನುವನ್ನಾಗಿ ನೋಡಲು ಸಾಧ್ಯವಾಗುತ್ತಿಲ್ಲ. ಹೆಣ್ಣಾಗಿ ಗಂಡನ್ನು, ಗಂಡಾಗಿ ಹೆಣ್ಣನ್ನು ನೋಡುತ್ತದೆ. ಜಾತಿ ಮತ ಪಂಥ ದೇಶ ಗಡಿ ಭಾಷೆಗಳ ಸೋಂಕು ರೋಗ ಕಣ್ಣನ್ನು

ಆವರಿಸಿದೆ. ಶ್ರೀಮಂತ ಬಡವ ಅಧಿಕಾರಿ ಜವಾನ ಗುರು ಶಿಷ್ಯ ಎನ್ನುವ ಅಜ್ಞಾನ ಮೆತ್ತಿಕೊಂಡು ತನುವನ್ನು ನೋಡುತ್ತದೆ.

ಅಂಗದಲ್ಲಿಯೇ ಸಂಗಮವಾದ ಗುರು ಲಿಂಗ ಜಂಗಮದ ಇಂಗಿತವನು ಅರಿಯದು. ಸಾತ್ವಿಕ ರಾಜಸ ತಾಮಸವೆಂಬ ತ್ರಿವಿಧ ಜ್ಞಾನದಿಂದಲೇ ಮರೆದು ಕಲಿಯುಗದ ಕತ್ತಲೆಯನು ದಾಟಬೇಕಾಗಿದೆ.

ಕಲಿಯುಗದ ಕತ್ತಲೆಯನು ತನು ಸಾತ್ವಿಕನಾಗಿ ಕಳೆಯಲು ಬರುವುದಿಲ್ಲ. ತನು ತನುವಿಗೆ ಪಾಠ ಮಾಡಲು ಬರುವುದಿಲ್ಲ. ತನುವಿನ ಅಜ್ಞಾನವನ್ನು ತನುವಿನ ಜ್ಞಾನದಿಂದಲೇ ತನುವಿಗೆ ಕಳೆದುಕೊಳ್ಳಲು ಬರುತ್ತದೆ. ಬೆಳಗುವ ಕಣ್ಣಿನಲ್ಲಿಯೇ ಅಜ್ಞಾನದ ಕತ್ತಲೆ ಆವರಿಸಿರುವುದರಿಂದ ಆ ಕಣ್ಣನ್ನು ಯಾವ ಜ್ಯೋತಿಯೂ ಬೆಳಗಲರಿಯದು. ಕಣ್ಣಿನಲ್ಲಿಯೇ ಸಂಗಮವಾದ ಅರಿವಿನ ಜ್ಞಾನದ ಬೆಳಕು ಮಾತ್ರ ಕಣ್ಣನ್ನು ಆವರಿಸಿದ ಕತ್ತಲೆಯನ್ನು ಹೊಡೆದೋಡಿಸುವುದು.

ತನ್ನ ಭವವ ದಾಟಿದ ತನುವಿಗೆ ಬ್ರಹ್ಮಾಂಡದ ಬಯಲು ಕೈವಶವಾಗುತ್ತದೆ. ಕಂಗಳ ಮುಂದಣ ಕತ್ತಲೆ ಹರಿದು ಹೋಗುತ್ತದೆ. ಅಂಗದೊಳಗೆ ಸಂಗಮವಾದ ಅರಿವಿನ ಸಂಗ ಮಾಡಿ ಆ ಸಂಗ ಸುಖದೊಳಗೆ ಸಂಗಮವಾಗಿ ಅರಿದ ತ್ರಿವಿಧವನೂ ಮರೆದು ಮಹಾಜ್ಞಾನಿಯಾಗಿ ಮೆರೆಯುತ್ತದೆ.

161

ಭಕ್ತನಾದರೂ ಆಗಲಿ, ಗುರುವಾದರೂ ಆಗಲಿ,
ಲಿಂಗವಾದರೂ ಆಗಲಿ, ಜಂಗಮವಾದರೂ ಆಗಲಿ,
ಈ ಮರ್ತ್ಯದಲ್ಲಿ ಒಡಲುವಿಡಿದು ಹುಟ್ಟಿದ ಮೇಲೆ,
ಮಾಯೆಯ ಗೆದ್ದೆಹೆನೆಂದರೆ ಸಾಧ್ಯವಲ್ಲ ಕೇಳಿರಣ್ಣಾ!
ಗೆಲ್ಲಬಹುದು ಮತ್ತೊಂದು ಭೇದದಲ್ಲಿ.
ಅದೆಂತೆಂದರೆ: ಭಕ್ತನಾದರೆ ತನುವ ಗುರುವಿಂಗಿತ್ತು, ಮನವ ಲಿಂಗಕ್ಕಿತ್ತು,
ಧನವ ಜಂಗಮಕ್ಕಿತ್ತು ಬೆರೆದರೆ, ಮಾಯಾಪಾಶ ಹರಿಯಿತ್ತು.
ಇದರ ಗೊತ್ತು ಹಿಡಿವೆನೆಂದರೆ ಆತನ ಭಕ್ತನೆಂಬೆ.
ಗುರುವಾದರೆ ಸಕಲ ಆಗಮಂಗಳನರಿದು, ತತ್ವಮಸಿ ಎಂದು ನಿತ್ಯವ ನೆಮ್ಮಿ,
ತನ್ನ ಒತ್ತುವಿಡಿದ ಶಿಷ್ಯಂಗೆ ಪರತತ್ವವ ತೋರಿ,
ಪ್ರಾಣಲಿಂಗವ ಕರದಲ್ಲಿ ಕೊಟ್ಟು,
ಆ ಲಿಂಗವೆಂಬ ಉಭಯದೊಳಗೆ ತಾನಡಗಿ, ತನ್ನೊಳಗೆ ಶಿಷ್ಯನಡಗಿ,
ನಾನು ನೀನು ಎಂಬ ಉಭಯ ಎರಡಳಿದರೆ, ಆತನ ಗುರುವೆಂಬೆ.
ಜಂಗಮವಾದರೆ ಬಾಯಿ ಲೆಕ್ಕಕ್ಕೆ ಬಾರದೆ, ಬಂದು ಆಶ್ರಿತವೆನಿಸಿಕೊಳ್ಳದೆ
ಆಸೆಯಳಿದು ಲಿಂಗಜಂಗಮವಾಗಿ ನಿರ್ಗಮನಿಯಾಗಿ,
ಭರ್ಗೋ ದೇವಸ್ಯ ಎಂಬ, ಏಕೋದೇವನದ್ವಿತೀಯವೆಂಬ ಶ್ರುತಿಗೆ ತಂದು,
ತಾ ಪರಮಾನಂದದಲ್ಲಿ ನಿಂದು, ಪರಿಪೂರ್ಣನೆನಿಸಿಕೊಂಡು,
ಅಣುವಿಂಗಣು, ಮಹತ್ತಿಂಗೆ ಮಹತ್ತು, ಘನಕ್ಕೆ ಘನವೆಂಬ ವಾಕ್ಯಕ್ಕೆ ಸಂದು,
ತಾ ನಿಂದು ಜಗವನೆಲ್ಲವ ಆಡಿಸುವ ಅಂತರಾತ್ಮನಾಗಿ ಅಡಗಿದರೆ ಜಂಗಮವೆಂಬೆ.
ಅಂತಾದರೆ ಈ ತ್ರಿವಿಧವು ಏಕವಾದುದನರಿದು, ಈ ಲೋಕದ ಕಾಕುಬಳಕೆಗೆ ಸಿಲುಕದೆ,

ಇಲ್ಲಿ ಹುಟ್ಟಿದವರೆಲ್ಲ ಇವರೊಳಗೆ ಆದರು.
ನಾನು ತ್ರಿವಿಧದ ನೆಲೆಯ ಹಿಡಿದುಕೊಂಡು ಇವೆಲ್ಲಕ್ಕೂ
ಹೊರಗಾಗಿ ಹೋದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ತನುವನ್ನು ಆವರಿಸಿದ ಮನವೆಂಬ ಮಾಯೆಯನ್ನು ಗೆಲ್ಲುವುದು ಸುಲಭವಲ್ಲ ಎಂದು ಅಪ್ಪಣ್ಣ ಶರಣರು ಈ ವಚನದ ಮೂಲಕ ನುಡಿಯುತ್ತ ಅದನ್ನು ಗೆಲ್ಲುವ ಸೂತ್ರವನ್ನು ಓದುಗರಿಗೆ ಸರಳವಾಗಿ ನೀಡಿದ್ದಾರೆ.

ತನುವನು ಗುರುವಿಗಿತ್ತು, ಮನವನು ಲಿಂಗಕ್ಕಿತ್ತು, ಧನವನು ಜಂಗಮನಿಗಿತ್ತು ಬೆರೆದರೆ ಮಾಯಾಪಾಶಾ ಹರಿಯುತ್ತದೆ ಎಂದಿದ್ದಾರೆ. ಆದರೆ ಇದರ ಗೊತ್ತು ಹಿಡಿಯುವುದು ಹೇಗೆ? ಇದು ಸುಲಭದ ಮಾತಲ್ಲ. ಇದರ ಗೊತ್ತು ಹಿಡಿದಾತನೆ ಭಕ್ತ!

ತನುವನು ಗುರುವಿಂಗಿತ್ತು ಎಂದರೆ ಗುರುವಿನ ಉಪದೇಶ ಪಡೆದು, ಹಗಲಿರುಳು ಆತನ ಸೇವೆ ಮಾಡುವುದು ಅಲ್ಲ. ತನುವಿನ ಗುಣಾವಗುಣಗಳನ್ನು ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನಿಗೆ ಸಂಪೂರ್ಣವಾಗಿ ಸಮರ್ಪಿಸುವುದು. ಅರಿವೆಂಬ ಗುರುದೇವನ ಆದೇಶವನ್ನು ಮಾತ್ರ ಪಾಲಿಸಿ ನುಡಿದಂತೆ ನಡೆಯುವುದು. ನುಡಿಯುವ ನಡೆಯುವ ಮುಟ್ಟುವ ರುಚಿಸುವ ನೋಡುವ ಕೇಳುವ ಮೂಸಿಸಿ ಪುಳಕಗೊಂಡು ಉದ್ರಿಕ್ತನಾಗುವ ಸಕಲ ಇಂದ್ರಿಯಗಳನ್ನು ಗುರುದೇವನಿಗೆ ಸಮರ್ಪಿಸು ವವನೇ ಭಕ್ತನು!

ಆ ಅರಿವೆಂಬ ಗುರುದೇವನು ಹೇಳಿದಂತೆ ಕೇಳುವವನೇ ಭಕ್ತನು. ಇದು ಗೋಚರಕ್ಕೆ ಸಿಗುವ ಆಚಾರವಲ್ಲ. ತನ್ನ ಸ್ವಸುಖದ ಅಗೋಚರದ ಆಚಾರ.

ಗುರುವಾದರೆ ಸಕಲ ಆಗಮಂಗಳನು ಅರಿದು, ಅಂಗದಲ್ಲಿ ಸಂಗಮವಾದ ತತ್ವವನು ಅರಿದು, ಆ ತತ್ವವೇ ತಾನೆಂದು ನಂಬಿ, ಇದರ ಗೊತ್ತನು ಅರಿತು ತಿಳಿಯಲು ಬಂದ ಶಿಷ್ಯನಿಗೆ, ಶಿಷ್ಯನ ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನನ್ನು ತೋರಿ, ಅಂಗದಲ್ಲಿ ಸಂಗಮವಾದ ಅರಿವಿನ ಲಿಂಗವನ್ನೇ ಆತನ ಕೈಯಲ್ಲಿ ಕೊಟ್ಟು ಆ ಅಂಗಲಿಂಗವೆಂಬ ಉಭಯದೊಳಗೆ ತಾನು ಅಡಗಿ, ತನ್ನೊಳಗೆ ಶಿಷ್ಯನು ಅಡಗಿ, ಅಂಗಕ್ಕೆ ಲಿಂಗಕ್ಕೆ ಭೇದವುಂಟೆ? ನನ್ನದು ಅಂಗವೇ, ನಿನ್ನದೂ ಅಂಗವೇ. ನಾನು ಗುರು ಹೇಗೆ, ನೀನು ಶಿಷ್ಯನು ಹೇಗೆ? ನಾವಿಬ್ಬರೂ ಅಂಗದಲ್ಲಿಯೇ ಸಂಗಮವಾದ ಅರಿವಿನ ಅಮೃತ ಸವಿಯಲು ಬಂದವರು ಎಂದು ಹೇಳುತ್ತ ಅರಿವೆಂಬ ಗುರುದೇವನು ಅಂಗದಲ್ಲಿಯೇ ತೋರಿಸುವಾತನನು ಗುರುವೆಂಬೆ ಎಂದಿದ್ದಾರೆ ಅಪ್ಪಣ್ಣ ಶರಣರು.

ವೇಷಧರಿಸಿ ಬಾಯಿ ಲೆಕ್ಕಕ್ಕೆ ಬರುವವ ಜಂಗಮನಲ್ಲ. ಆಶ್ರಯ ಪಡೆದು ಆಸೆ ಮಾಡುವವನೂ ಜಂಗಮನಲ್ಲ. ಅರಿವೆಂಬ ಗುರುದೇವನ ನುಡಿಯನ್ನು ನಡೆಯಲ್ಲಿ ತಂದವನೇ ಜಂಗಮ! ಅರಿವಿನ ಆಚಾರದ ಪರಮಾನಂದದಲ್ಲಿ ಮಿಂದು ಪರಿಪೂರ್ಣ ನೆನ್ನಿಸಿಕೊಂಡವನೇ ಜಂಗಮ. ತಾನು ಅಣುವಿಂಗೆ ಅಣು, ಮಹತ್ತಿಂಗೆ ಮಹತ್ತು ಘನಕ್ಕೆ ಘನ ಹೇಗೆ ಎಂಬುದನ್ನು ಅರಿತು ವಿರಾಟ ಸ್ವರೂಪನೇ ತಾನಾಗಿ ನಿಂದು, ಜಗವೆಲ್ಲವನು ಆಡಿಸುವ ಅಂತರಾತ್ಮಕನೇ ತಾನಾಗಿ ಪುನಃ ಅಂಗದಲ್ಲಿಯೇ ಅಡಗಿದರೆ ಆತನನು ಜಂಗಮನೆಂಬೆ!

ಭಕ್ತ ಗುರು ಜಂಗಮವೆಂಬ ತ್ರಿವಿಧವು ಅಂಗದಲ್ಲಿಯೇ ಸಂಗಮವಾದ ಸಂಪತ್ತು ಎಂದು

ಅರಿತವನು ಈ ಲೋಕದ ಕಾಕು ಬಳಕೆಯ ಅಜ್ಞಾನಕ್ಕೆ ಸಿಕ್ಕುವುದಿಲ್ಲ. ಅರಿಯದ ಜಗತ್ತು, ಜಗತ್ತಿನಲ್ಲಿ ಹುಟ್ಟಿದವರೆಲ್ಲ ಅವರೇ ಹೆಣೆದುಕೊಂಡ ಬಲೆಯಲ್ಲಿ ಅವರೇ ಸಾಯುತ್ತಾರೆ. ಅರಿತ ಶರಣ ಮಾತ್ರ ವಿಜ್ಞಾನಿ; ಆತ ಮಹಾಜ್ಞಾನಿ, ತ್ರಿವಿಧದ ನೆಲೆ ಹಿಡಿದುಕೊಂಡು, ಅದನ್ನೇ ಪರಮ ಸೂತ್ರವನ್ನಾಗಿ ಮಾಡಿಕೊಂಡು, ಜಗದ ಅಜ್ಞಾನಕ್ಕೆ ಹೊರಗಾಗಿ ಹೋಗುತ್ತಾನೆ. ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗ ಮಾಡಿ ಸ್ವಸುಖದಲ್ಲಿಯೇ ಐಕ್ಯನಾಗುತ್ತಾನೆ.

162

ಭಕ್ತನಾದರೆ ಎಂತಿರಬೇಕೆಂದರೆ, ಉಲುಹಡಗಿದ ವೃಕ್ಷದಂತಿರಬೇಕು,
ಶಿಶು ಕಂಡ ಕನಸಿನಂತಿರಬೇಕು, ಗಲಭೆಗೆ ನಿಲ್ಲದ ಮೃಗದಂತಿರಬೇಕು.
ತಾಯ ಹೊಲಬುದಪ್ಪಿದ ಎಳೆಗರುವಿನಂತೆ,
ತ್ರಿಕಾಲದಲ್ಲಿಯೂ ಲಿಂಗವನೆ ನೆನೆವ ಶರಣರ ಎನಗೊಮ್ಮೆ ತೋರಯ್ಯಾ ಶಿವನೆ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಸಿದ್ಧಾರ್ಥನಿಗೆ ವೃಕ್ಷ ಕರುಣಿಸಲಿಲ್ಲ. ಸಿದ್ಧಾರ್ಥ ಇಲ್ಲವಾಗಿ ಬುದ್ಧನಾದ. ಆ ಬುದ್ಧನೇ ಬೋಧಿ ವೃಕ್ಷವಾದ. ಸಿದ್ಧಾರ್ಥನ ಮಾತು ಬೇರೆ; ಬುದ್ಧನ ಮಾತು ಬೇರೆ. ಸಿದ್ಧಾರ್ಥ ಆಡುವ ಮಾತು ಮಾತಾದರೆ ಬುದ್ಧ ಆಡುವ ಮಾತು ಮಾತಲ್ಲದ ಮಾತು. ಮಾತನು ಅಳಿಯುವ ಮಾತು. ಉಲುಹಡಗಿದ ವೃಕ್ಷದ ಮಹಾಜ್ಞಾನದ ಮಾತು. ವೃಕ್ಷ ಮಾತನಾಡುವುದಿಲ್ಲ. ಆಯಾ ಋತುಮಾನಗಳಲ್ಲಿ ಫಲ ಪುಷ್ಪಗಳನ್ನು ಬಿಟ್ಟು ಆನಂದದಿಂದ ಅರಳುತ್ತದೆ. ಭವಿಯಿಂದ ಭಕ್ತನಾದವನು ಕೂಡಾ ಶಬ್ದ ಅಡಗಿದ ವೃಕ್ಷದಂತೆ ನಿಃಶಬ್ದದಿಂದ ಬೆಳಗುತ್ತಾನೆ. ಶಬ್ದವನ್ನು ನಪುಂಸಕಗೊಳಿಸಿ ಅರಿವಿನಿಂದ ಕೇಳುತ್ತಾನೆ. ಶಬ್ದವನ್ನು ಅರಿವಿನಿಂದ ಅರಳಿಸಿ ಹೂವಿನಂತೆ ಹೃದಯದಿಂದ ಹೃದಯಕ್ಕೆ ಚೆಲ್ಲುತ್ತಾನೆ.

ಭವಿಯಿಂದ ಭಕ್ತನಾದವನ ಇರುವಿಕೆ ಶಿಶುಕಂಡ ಕನಸಿನಂತೆ! ಬಲು ಸುಂದರ. ಶಿಶು ತನ್ನ ಆನಂದವನ್ನು ಮಲಗಿದಾಗ ಸರ್ವರಿಗೂ ತೋರಿಸುತ್ತದೆ. ಅದಕ್ಕೆ ಆದ ಆನಂದವನ್ನು ಅಭಿವ್ಯಕ್ತಪಡಿಸುವುದಿಲ್ಲ. ಭಕ್ತ ಅಭಿವ್ಯಕ್ತಪಡಿಸುತ್ತಾನೆ. ಆದರೂ ಭವಿಗೆ ಅರ್ಥವಾಗುವುದಿಲ್ಲ. ಭಕ್ತನಾಗಬೇಕೆಂಬ ಬಯಕೆಯಾದರೆ ಅರ್ಥವಾಗದೇ ಇರುವುದಿಲ್ಲ. ಏಕೆಂದರೆ ಶಿಶುತನವನ್ನು ಅನುಭವಿಸಿದ್ದಾನೆ. ಮರೆತು ಹೋಗಿದ್ದಾನೆ. ಮತ್ತೆ ಶಿಶುವಾಗಬೇಕೆಂಬ ಬಯಕೆ ಭವಿಗೆ ಹುಟ್ಟಬೇಕಲ್ಲ. ಸಿದ್ಧಾರ್ಥನಿಗೆ ಹುಟ್ಟಿತು. ಬುದ್ಧನೆಂಬ ಶಿಶುವಾಗಲು ಮತ್ತೆ ಎಂಟ್ಹತ್ತು ವರ್ಷಗಳ ಕಾಲವನ್ನೇ ಉರುಳಿಸಬೇಕಾಯಿತು. ಮಾತನಾಡದ ಮಾತಲ್ಲದ ಮಾತನಾಡುತ್ತಾ ನಡೆದಾಡುವ ಬೋಧಿವೃಕ್ಷವೇ ತಾನಾದ.

ಭವಿ-ಭಕ್ತನಿಗೆ ಬಹಳ ಅಂತರವಿಲ್ಲ. ಭವಿ ಭಕ್ತನನ್ನು ಗರ್ಭೀಕರಿಸಿಕೊಂಡಿದ್ದಾನೆ. ನೋಡುವ ಕಣ್ಣಿನಲ್ಲಿ ಭವಿಯೂ ಇದ್ದಾನೆ; ಭಕ್ತನೂ ಇದ್ದಾನೆ. ಇವರಿಬ್ಬರ ವಾಸ ಕಿವಿ ಮೂಗು ನಾಲಗೆ ಮತ್ತು ಚರ್ಮದಲ್ಲಿ. ಭವಿ ನೋಡುವ ನೋಟ ಅಂಗದ ಸುಖಕ್ಕಾಗಿ. ಭಕ್ತ ನೋಡುವ ನೋಟ ಲಿಂಗದ ಸುಖಕ್ಕಾಗಿ. ಭವಿ ಭೋಗಕ್ಕಾಗಿ ನೋಡುತ್ತಾನೆ. ಭಕ್ತ ಆನಂದದಿಂದ ನೋಡುತ್ತಾನೆ. ಇವರಿಬ್ಬರಿಗೂ ಬಳಕೆಯಾಗುವ ಕಣ್ಣು ಒಂದೇ. ಹರಿಯುವ ದೃಶ್ಯವೂ ಒಂದೇ. ಆದರೆ ಅದರ ಸಂಚು ಬೇರೆ. ಕಣ್ಣಿನಲ್ಲಿರುವ ಈ ಕಲೆಯನ್ನು ಅರಿತ ಕಲೆಗಾರನೇ ಭಕ್ತ. ಅರಿಯದೆ ಭೋಗಿಸುವವನೇ ಭವಿ.

ಗಲಭೆಯಾದರೆ ಸಾಕು ತನ್ನ ನಾಲ್ಕು ಕಾಲು ಮತ್ತು ಮುಖವನ್ನು ತನ್ನ ಚಿಪ್ಪಿನೊಳಗೆ ಸೆಳೆದುಕೊಂಡು ಆಮೆ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತದೆ. ಜಲದೊಳಗೆ ಅಡಗಿಕೊಂಡು ಕಾಣದಂತೆ ಶತೃಗಳಿಂದ ದೂರ ಉಳಿಯುತ್ತದೆ, ವಿಷ್ಣು ಆಮೆಯಾಗಿ ಸಮುದ್ರದ ಆಳಕ್ಕೆ ಹೋಗಿ ಹಿಮಾಲಯವೆಂಬ ಪರ್ವತದ ಕಡೆಗೋಲು ಕೆಳಗೆ ಜಾರದಂತೆ ತನ್ನ ಡುಬ್ಬದ ಮೇಲೆ ಹೊತ್ತಂತೆ. ಕಡಲಲ್ಲಿ ಬೆರೆತ ವಿಷ ಅಮೃತ ಬೇರೆ ಮಾಡಲು ಸಹಕರಿಸಿದಂತೆ.

ಹಾಗೆಯೇ ತನು ಒಂದು ಕಡಲು ಇದರಲ್ಲಿ ಭವಿ ಎಂಬ ವಿಷವೂ ಇದೆ. ಭಕ್ತನೆಂಬ ಅಮೃತವೂ ಇದೆ. ಇವೆರಡಕ್ಕೂ ತನುವೆಂಬ ಕಡಲೇ ಉಪಕರಣ. ಉಪಾಯದಿಂದ ಅಮೃತ ಬೇರೆ ಮಾಡಿ ಅದನ್ನು ಕುಡಿದು ಭಕ್ತನಾಗಬೇಕು. ಇಲ್ಲದ ಭವಿತನವನ್ನು ಭಕ್ತನಾಗುವ ಮೂಲಕ ತಾನೇ ಕಳೆದುಕೊಳ್ಳಬೇಕು; ಕರುಳ ಬಳ್ಳಿ ಹರಿದುಕೊಂಡ ಶಿಶುವಿನಂತೆ. ಗರ್ಭದಲ್ಲಿದ್ದ ಶಿಶು ತಾಯಿಯೊಂದಿಗೆ ಬೆಳೆಯುತ್ತದೆ. ತಾಯಿಯ ಪರಿಚಯ ಶಿಶುವಿಗಿಲ್ಲ. ಶಿಶುವಿನ ಪರಿಚಯ ತಾಯಿಗಿಲ್ಲ. ಶಿಶು ಹೊರಗೆ ಬಂದ ಮೇಲೆ ತಾಯಿಯ ನಂಟು ಹರಿದುಕೊಳ್ಳುತ್ತದೆ. ಪ್ರೇಮಪಾಶವಾಗಿ ಕಾಡಿ ಸಿದ್ಧಾರ್ಥನನ್ನು ಪೋಷಿಸುತ್ತದೆ. ಶಿಶುವಿನ ಗರ್ಭದಲ್ಲಿದ್ದ ಬುದ್ಧನನ್ನು ಅಲ್ಲಿಯೇ ಉಳಿಯುವಂತೆ ಮಾಡುತ್ತದೆ. ಅಜ್ಞಾನವೆಂಬ ಪಾಶವನ್ನು ಹರಿದು ಹಾಕಿದವನು ಬುದ್ಧನಾಗುತ್ತಾನೆ. ಭಕ್ತನಾಗುತ್ತಾನೆ.

ತ್ರಿಕಾಲದಲ್ಲಿಯೂ ಲಿಂಗವನೇ ನೆನೆವ ಶರಣರ ಎನಗೊಮ್ಮೆ ತೋರಯ್ಯಾ:

ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಕಾಲಗಳು. ತನು ಎಚ್ಚರದಲ್ಲಿರುವುದೇ ಜಾಗ್ರತ್. ತನು ಮಲಗಿದಾಗ ಸ್ವಪ್ನದಲ್ಲಿರುವುದೇ ಸ್ವಪ್ನಕಾಲ. ತನು ಮಲಗಿದಾಗ ಸ್ವಪ್ನ ಕಾಣದ ನಿದ್ರೆಯಲ್ಲಿರುವುದೇ ಸುಷುಪ್ತಿ. ಆದರೆ ತನು ಮೂರು ಕಾಲದಲ್ಲಿಯೂ ಸ್ವಪ್ನ ಕಾಣುತ್ತದೆ. ಜಾಗ್ರತ್‌ನಲ್ಲಿ ಎಚ್ಚರವಾಗಿರದೆ; ಅರಿವಿನ ಆನಂದವನ್ನು ಅನುಭವಿ ಸದೆ, ಅಜ್ಞಾನವನ್ನು ಆಮಂತ್ರಣ ಮಾಡಿಕೊಂಡು ಸದಾ ಸ್ವಪ್ನ ಕಾಣುತ್ತದೆ. ತಾನು ಶಾಸಕನಾಗಬೇಕು, ಸಚಿವನಾಗಬೇಕು, ಪದವಿ, ಪೀಠಗಳನ್ನು ಅಲಂಕರಿಸಬೇಕು, ಮದುವೆಯಾಗಬೇಕು,ಶ್ರೀಮಂತನಾಗಬೇಕು, ಮಕ್ಕಳು ಮರಿ ಹೆಂಡತಿಯೊಂದಿಗೆ ಸುಖ ದುಃಖಗಳನ್ನು ಹೊಂದುತ್ತ, ಹೊಂಚು ಹಾಕುತ್ತಾ ಒಮ್ಮೆ ಇಲ್ಲವಾಗುತ್ತದೆ. ಮಲಗಿದಾಗಲೂ ಇದೇ ಸ್ವಪ್ನವನ್ನು ಕಾಣುತ್ತದೆ. ಇನ್ನು ಸುಷುಪ್ತಿಯಲ್ಲಿ ತನು ಜಾಗ್ರತ್ ಸ್ವಪ್ನಗಳನ್ನು ಅರಿಯದೆ ಗಾಢವಾಗಿ ಮಲಗಿರುತ್ತದೆ. ತಾನು ಹೆಣ್ಣು ಗಂಡು ಎನ್ನುವುದೂ ಅಲ್ಲ, ಶ್ರೀಮಂತ ಬಡವನೂ ಅಲ್ಲ, ಶಾಸಕ ಸಚಿವನೂ ಅಲ್ಲ, ತನು ಏನೇನೂ ಅಲ್ಲ ದಂತೆ ಆನಂದದಿಂದ ಮಲಗಿರುತ್ತದೆ. ಎಚ್ಚರವಾದಾಗ ತನುವಿಗೆ ಈ ಆನಂದ ಸದಾ ಇರಬೇಕಲ್ಲ ಎಂದು ಹೊಳೆಯದೆ ಮಾಯವಾಗುತ್ತದೆ. ಮತ್ತೆ ತನ್ನನ್ನು ಭವಿಲೋಕಕ್ಕೆ ಪರಿಚಯಿಸಿ ಸದಾ ಭವಿತನದ ಅಜ್ಞಾನದಲ್ಲಿಯೇ ಕೊಳೆಯುವಂತೆ ಮಾಡುತ್ತದೆ. ಇರುಳು ಕಂಡ ಭಾವಿಯಲ್ಲಿ ಹಗಲು ಬೀಳುವಂತೆ ಮಾಡುತ್ತದೆ.

ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲಿಯೂ ಸಿದ್ಧಾರ್ಥನನ್ನು ಕಳೆದುಕೊಂಡು ಬುದ್ಧನಂತೆ ಆನಂದದಿಂದ ಇರುವ ಮಹಾನುಭಾವರನ್ನು ಎನಗೆ ತೋರಯ್ಯಾ ಶಿವನೆ, ಎನಗೆ ತೋರಿದಂತೆ ಸರ್ವರಿಗೂ ತೋರಯ್ಯಾ ಶಿವನೆ ಎಂದು ಅಪ್ಪಣ್ಣ ಶರಣರು ಹಿರಿಯ ಆಶಯವನ್ನು ಹೊಂದಿ ಭವಿತನ ಕಳೆದುಕೊಂಡು ಭಕ್ತನಾಗುವ ಸೂತ್ರವನ್ನು ರಚಿಸಿದ್ದಾರೆ.

163

ಭಕ್ತನಾದರೆ ಪೃಥ್ವಿಸಾರದಲಾದ ಪದಾರ್ಥವ ಲಿಂಗಕ್ಕೆ ಕೊಡದ ಭಾಷೆ.

ಮಹೇಶ್ವರನಾದರೆ ಅಪ್ಪುವಿನ ಸಾರದಿಂದ
ಉದಕವ ಲಿಂಗಕ್ಕೆ ಮಜ್ಜನಕೆರೆಯದ ಭಾಷೆ.
ಪ್ರಸಾದಿಯಾದರೆ ಅಗ್ನಿಯಿಂದಾದ ಕಳೆಯ ಲಿಂಗಕ್ಕೆ ವೇದಿಸದ ಭಾಷೆ.
ಪ್ರಾಣಲಿಂಗಿಯಾದರೆ ವಾಯುವಿನಿಂದಾದ ಧ್ಯಾನವ ಲಿಂಗದಲ್ಲಿ ನೋಡದ ಭಾಷೆ.
ಐಕ್ಯನಾದರೆ ಆತ್ಮದಿಂದಾದ ಅಹಂ ಮಮತೆಯಲಿ ಲಿಂಗವ ಭಾವಿಸದ ಭಾಷೆ.
ಇಂತೀ ಆರರಿಂದ ಮೀರಿ ತೋರುವ ಘನವು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಭಕ್ತನಾದರೆ ಪೃಥ್ವಿಸಾರದಲಾದ ಪದಾರ್ಥವ ಲಿಂಗಕ್ಕೆ ಕೊಡದ ಭಾಷೆ :

ಭೂಮಿ ಬೆಳೆದ ಪದಾರ್ಥಗಳನ್ನೇ ಪಡೆದು, ನಾನಾ ರೀತಿಯ ಭಕ್ಷ ಭೋಜ್ಯಗಳನ್ನು ತಯಾರಿಸಿ ಲಿಂಗಕ್ಕೆ ಎಡೆ ಮಾಡುವವನು ಭಕ್ತನೆಂದು ಹೇಳಿಸಿಕೊಳ್ಳುತ್ತಾನೆ. ದೇಶಾದ್ಯಂತ ಹೀಗೆ ಮಾಡಿ ಬುಂಜಿಸುವವನನ್ನೇ ಭಕ್ತನೆಂದು ಕರೆಯುತ್ತಾರೆ. ಆತನ ವೇಷ ಭಾಷೆಯೇ ಬೇರೆ. ಚಲನವಲನಗಳೇ ಬೇರೆಯಾಗಿರುತ್ತದೆ. ಆದರೆ ತನುವಿನ ಅಂತರಾಳದ ಅಜ್ಞಾನ ಹೀಗೆ ಮಾಡುವುದರಿಂದ ಹೋಗುವುದಿಲ್ಲವೆಂದು ಆತನಿಗೆ ಗೊತ್ತೇ ಆಗುವುದಿಲ್ಲ.

ಇಳೆ ನಿಮ್ಮ ದಾನ ಅದರಲ್ಲಿ ಬೆಳೆದ ಬೆಳೆಯು ನಿಮ್ಮ ದಾನ ಎನ್ನುವ ದಾಸಿಮಾರ್ಯರ ಸೂತ್ರ ಭಕ್ತನ ಗಮನಕ್ಕೆ ಬರುವುದೇ ಇಲ್ಲ. 'ನಿಮ್ಮ' ಅಂದರೆ ಯಾರು? ಆತನನ್ನು ಹೊರಗಿನ ದೇವರೆಂದೇ ಭಾವಿಸಿದ್ದಾನೆ ಡಂಭಾಚಾರದ ಭಕ್ತ. ಹೀಗಾಗಿ ಪೃಥ್ವಿಯಲ್ಲಿ ಬೆಳೆದ ಪದಾರ್ಥ ತನ್ನದು. ಪೃಥ್ವಿಯೂ ತನ್ನದು; ಆ ಪದಾರ್ಥದ ಅಡಿಗೆ ಮಾಡಿ ಲಿಂಗಕ್ಕೆ ಎಡೆ ಮಾಡುವ ನಾನೇ ಧನ್ಯನೆಂದು ಭಾವಿಸಿ, ಜೀವನ ಪರ್ಯಂತ ಭಕ್ತನ ವೇಷ ಧರಿಸಿ, ಕಲ್ಲು ಲಿಂಗಕ್ಕೆ ಪೂಜಿಸಿ ಎಡೆಮಾಡಿ ಮೋಸಕ್ಕೆ ಒಳಗಾಗುತ್ತಾನೆ. ಸ್ವತಹ ತನ್ನ ಅನುಭವದಿಂದ ತಾನು ನೋಡುವುದಿಲ್ಲ.

ಜಲಬಿಂದುವೇ ಕಲ್ಲು ಮಣ್ಣುಗಳಿಂದ ಗಟ್ಟಿಯಾಯಿತು. ಪೃಥ್ವಿ ಎಂದು ಹೆಸರು ಪಡೆಯಿತು. ಜಲಬಿಂದುವೇ ಸಕಲ ಬೀಜ ಸಸ್ಯಗಳಿಗೆ ಜನ್ಮ ನೀಡಿ, ಅವುಗಳನ್ನು ಪೃಥ್ವಿಗೆ ಚೆಲ್ಲಿ, ಜಲಹರಿದು ಸಸ್ಯ ಸಂಕುಲ ಬೆಳೆಯಿತು. ಸಕಲ ಪಡಿಪದಾರ್ಥಗಳು ಹರಿದ ಜಲದಿಂದಲೇ ಸೃಷ್ಟಿಯಾದವು.

ಜಲಬಿಂದುವೇ ತಂದೆಯ ಮುಖಾಂತರ ತಾಯಿ ಗರ್ಭಕ್ಕೆ ಪ್ರವೇಶಿಸಿ, ರಕ್ತವಾಗಿ, ಮಾಂಸವಾಗಿ, ಎಲುಬು, ಮಜ್ಜಾ, ಮೇದಸ್ಸು ಆಗಿ, ರೋಮ ಉಗುರುಗಳು ಬೆಳೆದು, ಆ ಜಲದಿಂದಲೇ ಚರ್ಮದ ಕವಚವಾಗಿ ಸುಂದರವಾದ ತನು ಹೊರಬಂತು. ಇದು ಉದರದೊಳಗೆ ಬಚ್ಚಿಟ್ಟುಕೊಂಡ ಬಯಕೆಯ ತನುವಾಗಿ ಗರ್ಭದಿಂದ ಹೊರಬಂತು. ತನುವಿನಲ್ಲಿ ಬಯಕೆಯಾದ ಬಯಕೆಗಳನ್ನೆಲ್ಲ ತನುವೇ ಪೂರೈಸಿಕೊಳ್ಳುತ್ತಾ ಹೋದರೆ ಹೇಗೆ? ಅರಿವಿನಿಂದ ವಿಚಾರಿಸಿ ಅನುಭವಕ್ಕೆ ಹೋಗಬಾರದೆ? ತನುವಿನಲ್ಲಿ ಅನುಭವವೆಂಬ ಅರಿವಿನ ಅಮೃತವೂ ಇದೆ, ಅಜ್ಞಾನದ ಬಯಕೆಗಳೂ ಇವೆ.

ಬಯಲುದೇವ ತನ್ನಲ್ಲಿಯೇ ಗರ್ಭಗೊಂಡ ಆಮ್ಲಜನಕವನ್ನೂ ಜಲಜನಕವನ್ನೂ ಹಿಡಿದು ತಾನು ಅದರಲ್ಲಿ ಐಕ್ಯಗೊಂಡು ಜಲಬಿಂದುವಾದ. ಗಟ್ಟಿಯಾಗಿ ಭೂಮಿಯಾದ, ಭೂಮಿಗೆ ಹರಿದು ಜಲವಾದ, ಸಸ್ಯ ಸಂಕುಲವಾದ, ಗರ್ಭಹೊಕ್ಕು ತನುವಾದ, ತನುವಿನಲ್ಲಿಯೇ ತನ್ಮಯವಾಗಿ ಅರಿವಿನ ಅಮೃತವಾದ. ಆ ತನುವನ್ನೇ ಬೆಳಗುವ ಅರಿವಿನ ಬೆಳಕಾದ. ಆ ಬೆಳಕಿನ ನೆರಳಿನಿಂದಲೇ ಮನಕ್ಕೆ ಜನ್ಮಕೊಟ್ಟ, ಮನ ಭಕ್ತನಾಗಬೇಕು; ಜನ್ಮಕೊಟ್ಟ ತಂದೆಯನು ಹಾಡಿ ಹೊಗಳಿ ಆತನನ್ನು ಪೂಜಿಸಬೇಕು.

ಆತ ಹೊರಗಿಲ್ಲ. ತನುವಿನಲ್ಲಿಯೇ ತನ್ಮಯವಾಗಿ ಜನ್ಮಕೊಟ್ಟ ಮನಕ್ಕೆ ಸದಾ ಬೋಧಿಸುತ್ತಾನೆ. ಆತನನ್ನು ಮರೆತ ಮನ ಆ ತನುವನ್ನೇ ಆವರಿಸಿ, ಆ ತನುವಿಗೆ ಭಕ್ತನ ವೇಷ ಧರಿಸಿ, ಆ ತನುವಿನ ಮೂಲಕ ಕಲ್ಲನ್ನೇ ಲಿಂಗ ಮಾಡಿ, ಆಲಯ ಮಾಡಿ ಹೊರಗಿನ ಲಿಂಗಕ್ಕೆ ಒಲಿಯುತ್ತಾನೆಯೇ? ಮನದ ಕತ್ತಲು ತಾನು. ಆತನ ಬೆಳಕಿನಲ್ಲಿಯೇ ಲೀನವಾಗಿ ಬೆಳಕಾಗಬೇಕು. ತನುವಿನಲ್ಲಿಯೇ ತನ್ಮಯವಾದ ಆತ ತನುವನ್ನು ಆವರಿಸಿದ ಮನವನು ತನ್ನತ್ತ ಸೆಳೆದರೆ, ತನುವನ್ನು ಆವರಿಸಿದ ಮನ ತನುವಿಗೇ ಭಕ್ತನ ವೇಷ ಧರಿಸಿ ಹೊರಗಿನ ಆಲಯಕ್ಕೆ ಸೆಳೆಯುತ್ತದೆ.ಮನ ಹೊರಗನೇ ಪೂಜಿಸಿ ಹೊರಗನೆ ಹಾಡಿ ಬೆಳಕಾಗದೆ ಕತ್ತಲಲ್ಲೇ ಕಾಲ ಕಳೆದು ಒಮ್ಮೆ ತನುವಿನೊಂದಿಗೆ ಹಾಳಾಗುತ್ತದೆ; ತನುವಿನಲ್ಲಿಯೇ ತನ್ಮಯವಾಗಿ ಸದಾ ಬೋಧಿಸುವ ಲಿಂಗಯ್ಯನನ್ನು ಕಾಣದೆ!

ಲಿಂಗಯ್ಯ ಸೃಷ್ಟಿಸಿದ ತನು, ಲಿಂಗಯ್ಯ ಸೃಷ್ಟಿದ ಇಳೆ, ಲಿಂಗಯ್ಯ ಸೃಷ್ಟಿಸಿದ ಬೆಳೆ, ಲಿಂಗಯ್ಯನೇ ಸೃಷ್ಟಿಸಿದ ಮನವೆಂಬ ಶುನಿ ನೀನು. ಆತನ ದಾನದಿಂದ ಹುಟ್ಟಿ ಆತನನ್ನು ಪೂಜಿಸದೇ ಆತ ಸೃಷ್ಟಿಸಿದ ಪರಿಕರಗಳನ್ನು ಪಡೆದು, ಆತನನ್ನೇ ದೇವನನ್ನಾಗಿಸಿ ಪೂಜಿಸಿದರೆ ನಿನ್ನ ಶುನಿತನ ಮಾಡುವುದೇ? ಭಕ್ತನಾದರೆ ಪೃಥ್ವಿಸಾರದಲಾದ ಪದಾರ್ಥವ ಲಿಂಗಕ್ಕೆ ಕೊಡದ ಭಾಷೆ!

ಮಹೇಶ್ವರನಾದರೆ ಅಪ್ಪುವಿನ ಸಾರದಿಂದ ಉದಕವ ಲಿಂಗಕ್ಕೆ ಮಜ್ಜನಕ್ಕೆರೆಯದ ಭಾಷೆ:

ತನುವೆಂದರೆ ಭಕ್ತನೂ ಹೌದು, ಮಹೇಶ್ವರನೂ ಹೌದು. ಜಲಬಿಂದುವಿನಿಂದಾದ ತನು, ತನುವಿನಲ್ಲಿತನ್ಮಯವಾದ ಅರಿವೇ ಲಿಂಗ. ಅಂಗ ಲಿಂಗವೂ ಹೌದು. ಇದನ್ನು ತಿಳಿದು ಅಗೋಚರದ ಆಚಾರದಲ್ಲಿ ತೊಡಗಿದಾತನೇ ಭಕ್ತ, ಮಹೇಶ್ವರ ಇವರಿಬ್ಬರೂ ಒಂದಂಗದಲ್ಲಿಯೇ ಉದಯವಾದರು. ಇವರಿಬ್ಬರ ಪಾತ್ರವೂ ಒಂದೇ. ಇವರಿಬ್ಬರೂ ಜಲಬಿಂದುವಿನ ಸಾರದಿಂದ ಹುಟ್ಟಿದವರು. ಜಲಬಿಂದುವಿನ ಸಾರದಿಂದಲೇ ಮಾಡಿದ ಪಾಷಾಣ ಲಿಂಗಕ್ಕೆ ಮಜ್ಜನಕ್ಕೆರೆ ಯುವುದೆಂದರೇನು? ಅದು ಭಕ್ತನಿಂದಲೂ ಸಾಧ್ಯವಿಲ್ಲ. ಮಹೇಶ್ವರನಿಂದಲೂ ಸಾಧ್ಯವಿಲ್ಲ. ಇವರಿಬ್ಬರೂ ಅಂಗದಲ್ಲಿಯೇ ಸಂಗಮವಾದ ಲಿಂಗಯ್ಯನಿಗೆ ಮಜ್ಜನ ಮಾಡುವವರು. ಅಂಗಕ್ಕೆ ಎರೆದರೆ ಸಂಗಮನಾಥನು ನೆನೆದು ಪುಳಕಗೊಳ್ಳುತ್ತಾನೆ. ಗೋಚರದ ಆಚಾರದಲ್ಲಿ ಭಕ್ತ ಮಹೇಶ್ವರರಿಬ್ಬರೂ ಭಾಗಿಯಾಗುವುದಿಲ್ಲ.

ಪ್ರಸಾದಿಯಾದರೆ ಅಗ್ನಿಯಿಂದಾದ ಕಳೆಯ ಲಿಂಗಕ್ಕೆ ವೇದಿಸದ ಭಾಷೆ :

ಲಿಂಗಕ್ಕೆ ಎಡೆ ಮಾಡಿದ ಪ್ರಸಾದವನ್ನು ಚೆಲ್ಲದೆ ಭುಂಜಿಸುವಾತ ಪ್ರಸಾದಿಯಲ್ಲ. ಲಿಂಗಕ್ಕೆ ಕರ್ಪೂರ ಬೆಳಗಿದರೆ ಕರ್ಪೂರವೂ ಅಗ್ನಿಯೂ ಇಲ್ಲವಾಗುತ್ತದೆ. ಈ ಆಚಾರದಲ್ಲಿ ತೊಡಗಿದಾತನೂ ಪ್ರಸಾದಿಯಲ್ಲ. ದೃಶ್ಯದಲ್ಲಿ ಜ್ಞಾನವೂ ಇದೆ. ಅಜ್ಞಾನವೂ ಇದೆ. ಜ್ಞಾನಕ್ಕೂ ಅಜ್ಞಾನಕ್ಕೂ ದೃಶ್ಯದ ಕಾರಣವೊಂದೇ. ಪ್ರಸಾದಿಯಾದವನು ತನ್ನ ಅಜ್ಞಾನವನ್ನು ತನ್ನ ಜ್ಞಾನದ ಕಣ್ಣಿನಿಂದಲೇ ಉಂಡು ಜ್ಞಾನದಿಂದ ನೋಡುತ್ತಾನೆ. ಆ ಜ್ಞಾನಕ್ಕೆ ವಸ್ತುವಿನ ಸತ್ಯ ಗೋಚರಿಸುತ್ತದೆ. ಈ ಕಲೆ ತಿಳಿದು ಇದರ ಆಚಾರದಲ್ಲಿ ತೊಡಗಿದಾತನೇ ಪ್ರಸಾದಿ. ಹಾಗೆಯೇ ಶಬ್ದದಲ್ಲಿ ಅರಿವೂ ಇದೆ, ಅಗ್ನಿಯೂ ಇದೆ. ಅಗ್ನಿಯನ್ನು ಶಬ್ದವೆಂದು ಕರೆದಿದ್ದಾರೆ ಪುರಾತನರು. ಶಬ್ದ ತಿಳಿಯದ ರಾಮ ಮಹಾಭಾರತ ಯುದ್ಧಕ್ಕೆ ಚಾಲನೆ ನೀಡಿದ. 'ನಿಶ್ಯಬ್ದಂ ಬ್ರಹ್ಮಮುಚ್ಚತೆ' ಇದು ಬಲು ರಹಸ್ಯವಾದ ಸೂತ್ರ. ಬೆಂಕಿ ಒಂದು ನಾಲಗೆಯಿಂದ ಸುಟ್ಟರೆ ಶಬ್ದ ತನ್ನ ಏಳು ಕೆನ್ನಾಲಿಗೆಯಿಂದ ಸುಡುತ್ತದೆ. ದೇಹ ಸಾಯುವವರೆಗೂ ಶಬ್ದ ದೇಹದಲ್ಲಿಯೇ ಸಂಗ್ರಹವಾಗಿ ದೇಹವನ್ನೇ ಸುಡುತ್ತಿರುತ್ತದೆ. ಸುಡುವ ಮತ್ತು ಅರಳಿಸುವ ಶಬ್ದಗಳೆರಡನ್ನೂ ಅರಿವಿನಿಂದ ಆನಂದದಿಂದ ಕೇಳಿ ಪ್ರಸಾದ ಮಾಡಿಕೊಂಡಾ ತನೇ ಪ್ರಸಾದಿ. ಈತ

ಶಬ್ದವನ್ನು ನಿಶ್ಯಬ್ದ ಮಾಡಿ ಅರಿವಿನಿಂದ ಕೇಳುತ್ತಾನೆ. ಈ ಕಲೆ ದೇಹದಲ್ಲಿಯೇ ಅಡಗಿದೆ. ಆದರೆ ದೇಹ ಹೊರಗಿನ ದೇವರಿಗೆ ಪ್ರಸಾದ ನೈವೇದ್ಯ ಮಾಡಿ ಆ ಪ್ರಸಾದವನ್ನು ತಾನೇ ಉಂಡು, ಪ್ರಸಾದಿ ಯೆಂದು ಘೋಷಣೆ ಮಾಡಿಕೊಳ್ಳುತ್ತದೆ.

ಪ್ರಾಣಲಿಂಗಿಯಾದರೆ ವಾಯುವಿನಿಂದ ಧ್ಯಾನದ ಲಿಂಗದಲ್ಲಿ ನೋಡದ ಭಾಷೆ :

ಸ್ಥೂಲ ಸೂಕ್ಷ್ಮ ಕಾರಣ ಶರೀರಗಳೆಂದು ಶರೀರವೊಂದನ್ನು ಕರೆಯುತ್ತಾರೆ. ಸೂಕ್ಷ್ಮ ಶರೀರ ಬಯಕೆ ಮಾಡಿದುದನೆಲ್ಲ ಸ್ಥೂಲ ಶರೀರ ಸೇವಿಸುತ್ತದೆ. ಇದರ ಪ್ರಾಣ ವಾಯು ಜಲ ಮತ್ತು ಆಹಾರದಲ್ಲಿ ಅಡಗಿದೆ. ಕಾಯದಲ್ಲಿ ಕಾಯದ ಪ್ರಾಣದಲ್ಲಿ ಸಂಗಮವಾದ ಲಿಂಗಕ್ಕೆ ಮಾತ್ರ ಆಹಾರ ಜಲ ವಾಯುವಿನ ಅವಶ್ಯಕತೆಯೇ ಇಲ್ಲ. ಏಕೆಂದರೆ ಇದು ಬಯಲು ದೇವನೆಂದು ಕರೆಯಿಸಿಕೊಂಡ ಬಯಲು ಲಿಂಗ. ಈ ಬಯಲು ಬಯಲ ಬೀಜವನೆ ಬಿತ್ತಿ ಬಯಲ ಜೀವನದ ಕಾಯವನ್ನು ಪಡೆದಿದೆ. ಬಯಲ ಭಾವನೆಯ ಕಾಯವನು ಪಡೆದಿದೆ. ಕೊನೆಗೆ ಬಯಲು ಬಯಲಾಗಿ ಬಯಲಲ್ಲಿಯೇ ಸೇರುತ್ತದೆ. ಇದನ್ನು ಕಾಯ ಇರುವಾಗಲೇ ಕಾಯದಿಂದಲೇ ತಿಳಿದು ವಾಯುವಿನ ಸಂಚನರಿ ತವನೇ ಪ್ರಾಣಲಿಂಗಿ. ಅವನಿಗೆ ಜನನ ಮರಣಗಳಿಲ್ಲ, ಏಕೆಂದರೆ ಅದು ಬಯಲು ಅದಕ್ಕೆ ಹುಟ್ಟಿಲ್ಲ ಸಾವೂ ಇಲ್ಲ, ಕಾಯ, ಪ್ರಾಣ ಮತ್ತು ಮನಸ್ಸು ಕಾಯದಲ್ಲಿಯೇ ಸಂಗಮವಾದ ಲಿಂಗದ ಉಪಕರಣಗಳು!

ಐಕ್ಯನಾದರೆ ಆತ್ಮದಿಂದಾದ ಅಹಂ ಮಮತೆಯಲಿ ಲಿಂಗವ ಭಾವಿಸದ ಭಾಷೆ :

ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿಗಳು ಅಂಗದಲ್ಲಿಯೇ ಸಂಗಮವಾಗಿದ್ದಾರೆ. ಇವರು ಹೊರಗಿನ ವೇಷಧಾರಿಗಳಲ್ಲ. ವೇಷವೆಂದರೆ ಇವರಿಗೆ ಆಗದ ಮಾತು. ಈ ಅರಿವಿನ ಕಲೆಯನ್ನು ಬಲ್ಲಾತನೇ ಐಕ್ಯ. ಈತ ಸಮರ್ಥ. ಇವೆಲ್ಲವುಗಳ ಸೂಕ್ಷ್ಮ ಅಹಂಕಾರವನ್ನೂ ಮೀರಿ ನಿಂತು ಸಹಜತೆಯಿಂದ ಬದುಕುವವನೇ ಶರಣ!

164

ಭಕ್ತನಾದರೆ ಮುಕ್ತಿಪಥಗತಿಗೆ ನಿಲುಕದಂತಿರಬೇಕು.
ಮಹೇಶ್ವರನಾದರೆ ಮನದಲ್ಲಿ ಮನ್ಮಥ ಹೊಗದಂತಿರಬೇಕು.
ಪ್ರಸಾದಿಯಾದರೆ ತನ್ನ ಪ್ರಾಣವೇ ಅಗ್ನಿಸ್ವರೂಪವೆಯಾಗಿರಬೇಕು.
ಪ್ರಾಣಲಿಂಗಿಯಾದರೆ ಪ್ರಾಣವ ನಿಲ್ಲಿಸಿ ಲಿಂಗಪ್ರಾಣಿಯಾಗಿರಬೇಕು.
ಶರಣನಾದರೆ ತನ್ನ ಮರಣಬಾಧೆಯ ಗೆಲಿದಿರಬೇಕು.
ಐಕ್ಯನಾದರೆ ಅನ್ನ ಪಾನಾದಿಗೆ ಇಚ್ಛೆ ಇಲ್ಲದಿರಬೇಕು.
ನಿರ್ವಯಲಾದರೆ ಸರ್ವರ ಕಣ್ಣಿಗೆ ಬಯಲು ಬಯಲಾಗಿರಬೇಕು.
ಈ ಷಟ್‌ಸ್ಥಲ ಸಂಪನ್ನತೆಯಲ್ಲಿ ಇರಬಲ್ಲಡೆ,
ಎಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎನ್ನುವ ಷಟಸ್ಥಲಗಳು ಗೋಚರಕ್ಕೆ ಬರುವ ಆಚಾರಗಳಲ್ಲ. ಇವು ಅಗೋಚರದ ಆಚಾರಗಳು. ಆದರೆ ಸಮಾಜ ವ್ಯಕ್ತಿಯ ವೇಷದಿಂದ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯನೆಂದು ನಿರ್ಧರಿಸಿ ಗೌರವ ಕೊಡುತ್ತದೆ. ಅದು ಹಾಗಲ್ಲ. ವ್ಯಕ್ತಿಯಲ್ಲಿ ಸಂಗಮವಾದ ಅವ್ಯಕ್ತ ಭಕ್ತ ಮನಕ್ಕೆ ಪರಿಚಯವಾಗಿ ಆ ಭಕ್ತನೇ

ತಾನಾಗಬೇಕು. ಹೀಗೆಯೇ ವ್ಯಕ್ತಿಯಲ್ಲಿ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯರು ಸಂಗಮವಾಗಿದ್ದಾರೆ. ಅವರ ಕೆಲಸವೂ ಬೇರೆ ಬೇರೆ. ಭಕ್ತನಾದವನು ಸ್ವತಹ ಅದನ್ನು ಕಂಡುಕೊಂಡಾಗ; ಆಯಾ ಕೆಲಸಗಳಿಗೆ ತನು ಸಿದ್ಧವಾಗಿ ಆಯಾ ಪಾತ್ರದಲ್ಲಿಯೇ ಐಕ್ಯವಾಗುತ್ತದೆ. ಇದನ್ನು ಪಾತ್ರವೆನ್ನಲೂ ಬರುವುದಿಲ್ಲ. ಇದು ತನುವಿನ ನಿಜ ಕೆಲಸ. ಆಗ ತನು ಮನ ಹಾಕುವ ಅನೇಕ ಪಾತ್ರದಿಂದ ಮುಕ್ತವಾಗುತ್ತದೆ.

ಭಕ್ತ ವೇಷದಲ್ಲಿದ್ದ ತನು ಸದಾ ಮುಕ್ತಿಗಾಗಿ ಹಾತೊರೆಯುತ್ತಿರುತ್ತದೆ. ಮನ ತನುವಿಗೆ ಭಕ್ತನ ವೇಷ ಧರಿಸಿ ಗುಡಿ ಗುಂಡಾರಗಳಿಗೆ ಸುತ್ತುತ್ತದೆ. ಪುಣ್ಯಕ್ಷೇತ್ರಗಳ ದರ್ಶನ ಮಾಡಿಕೊಳ್ಳುತ್ತದೆ. ನಾನಾ ಗುರುಗಳ ದರ್ಶನ ಮಾಡಿ ಪಾವನನಾದೆನೆಂದು ಭ್ರಮದಿಂದ ಸಂಭ್ರಮಿಸುತ್ತದೆ. ಗುರು ಹೇಳಿದ ನಿಯಮಗಳನ್ನು ಪಾಲಿಸಿ ಜಪತಪಗಳನು ಮಾಡುತ್ತದೆ. ಕಾವಿ, ಕಾಷಾಯಗಳನ್ನು ಧರಿಸುತ್ತದೆ. ಜನಿವಾರ, ಲಿಂಗ, ಕಾಶಿದಾರ, ಶಿಲುಬೆ, ಗಡ್ಡ ಬಿಟ್ಟು ವ್ರತಗಳನ್ನು ಆಚರಿಸುತ್ತ ಪ್ರಾರ್ಥನೆ ಪೂಜಾ ವಿಧಾನಗಳಲ್ಲಿ ತೊಡಗುತ್ತದೆ.

ಮನ ವೇಷದಿಂದ ಮುಕ್ತನಾಗಬೇಕು. ತನುವನ್ನು ಯಾಮಾರಿಸುವ ಸ್ವಭಾವವನ್ನು ಮನ ಬಿಡಬೇಕು. ದೇವನನ್ನು ಹುಡುಕಿ, ಆ ದೇವನಿಗೆ ಭಕ್ತನಾಗಬೇಕೆನ್ನುವ ಮನ ಮತ್ತು ಆ ದೇವನು ಇವರಿಬ್ಬರೂ ತನುವಿನಲ್ಲಿಯೇ ಇದ್ದಾರೆ. ಅಂದ ಮೇಲೆ ತನುವನ್ನು ಆವರಿಸಿದ ಮನ ತನುವನ್ನು ಹಿಡಿದು ದೇವನನ್ನು ಹುಡುಕುವುದು ವ್ಯರ್ಥವಲ್ಲವೇ? ಮರುಳಾಗಿ, ತನುವಿನಿಂದ ಕೆತ್ತಿದ ಮೂರ್ತಿಗೆ ತನುವೇ ಭಕ್ತಿ ಮಾಡಿ ಆರಾಧಿಸುವುದು ವ್ಯರ್ಥವಲ್ಲವೆ? ಇದು ಮುಕ್ತಿಯ ಪಥವೇ ಅಲ್ಲ. ಆದರೂ ಜಗದ ತನುಗಳೆಲ್ಲ ಈ ಮುಕ್ತಿಗೆ ಹಾತೊರೆಯುತ್ತಲಿವೆ. ನಿಜ ಮುಕ್ತಿ ಪಥ ಸೂಚಿಸಿದ ಬುದ್ಧ ಬಸವ ಕ್ರಿಷ್ಣನನ್ನು ದೇವರನ್ನಾಗಿಸಿ ಮೂರ್ತಿ ಮಾಡಿ ಜಗದ ತನುಗಳೆಲ್ಲಾ ಆರಾಧಿಸುತ್ತವೆ. ಮೂರ್ತಿ ಪೂಜಿಸುವುದು ಒಂದು ರೋಗ; ಮೂರ್ತಿಯನ್ನು ಪೂಜಿಸದೆ ಪ್ರಾರ್ಥಿಸುವುದೂ ಒಂದು ರೋಗ. ಇವೆರಡೂ ಮನದ ರೋಗಗಳೆಂದು ಮನಕ್ಕೆ ತಿಳಿಯಬೇಕಲ್ಲ! ಇದು ಮನ ಆವರಿಸಿದ ಪ್ರತಿ ತನುವಿನ ನಿಜಪಥ !

ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಇವು ಆಗುವಿಕೆ; ತನುವಿಗೆ ವೇಷ ಹಾಕುವಿಕೆ ಅಲ್ಲ. ತನುವನ್ನು ಆವರಿಸಿದ ಮನ ತನುವಿನಲ್ಲಿಯೇ ತನ್ಮಯವಾದ ಅರಿವಿನತ್ತ ಸಾಗಿ ಆ ಅರಿವೇ ತಾನಾಗುವಿಕೆ. ಒಂದನ್ನು ಕಳೆದುಕೊಂಡು ಒಂದರೊಳಗೆ ಒಂದೇ ಆಗುವಿಕೆ. ನೋಡಲು ಹೋದರೆ ಒಂದೇ ಇದೆ. ತನು ಈ ನಾಡಿನದಾದರೇನು? ಈ ದೇಶದ್ದಾದರೇನು? ಗಡಿನಾಡಿನದ್ದಾದರೇನು; ಪರದೇಶದ್ದಾದರೇನು? ತನು ಒಂದೇ. ಅದರ ಕಿವಿ, ಬಾಯಿ, ಮೂಗು, ಕಣ್ಣು, ನಾಲಿಗೆ, ಚರ್ಮ ಒಂದೇ. ಅದನ್ನು ಆವರಿಸಿದ ಮನ ಒಂದೇ. ಅದರಲ್ಲಿ ಸಂಗಮವಾದ ಅರಿವು ಒಂದೇ. ಭಾಷೆ ಮಾತ್ರ ಬೇರೆ ಬೇರೆ; ಅರ್ಥ ಒಂದೇ! ಆದರೂ ಮನದಿಂದಾಗಿ ಹೆಣ್ಣು ಗಂಡಾಗಿದೆ. ಶ್ರೀಮಂತ,ಬಡವನಾಗಿದೆ. ನಾನಾ ಕೆಲಸಗಳಲ್ಲಿ ತೊಡಗಿ ಜಾತಿ ಮತ ಪಂಥಗಳನ್ನು ಸೃಷ್ಟಿಸಿಕೊಂಡು ತನ್ನನ್ನು ತಾನೇ ಬಂಧಿಸಿಕೊಂಡಿದೆ. ಬಂಧನಕ್ಕೊಳಪಟ್ಟು; ತನುವಿನ ಸ್ವಾತಂತ್ರ್ಯ ತನುವನ್ನು ಆವರಿಸಿದ ಮನವೇ ಕಳೆದುಕೊಂಡಿದೆ. ಅದೇ ಸುಳ್ಳು ಬಂಧನ ಕ್ಕೊಳಪಟ್ಟು ಸುಳ್ಳು ಮುಕ್ತಿಯ ಮಾರ್ಗವನ್ನು ಹುಡುಕುತ್ತಲಿದೆ.

ತನು ಬರೆದ ಪುಸ್ತಕಗಳು ತನುವಿಗೇ ಮುಳುವಾಗಿವೆ. ತನುಗಳಿಗೆ ಸುಳುಹೂ ಆಗಿವೆ. ಇದನ್ನು ತನುವೇ ಅರಿಯಬೇಕು.

ಸುಂದರವಾದ ಚರ್ಮದ ಕವಚದಲ್ಲಿ ತನು ಬಂಧಿಯಾಗಿದೆ. ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಸೋರದಂತೆ ಚರ್ಮ ಚೀಲ ಮಾಡಿ ಅದನ್ನು ಹೊಲಿದುಕೊಂಡಿದೆ. ಕಣ್ಣು ಕಿವಿ ಮೂಗು ನಾಲಿಗೆಯನ್ನು ಸೇರಿಸಿಕೊಂಡು ಅರಿವಿನ ಸೌಂದರ್ಯದಿಂದ ತನು ದೇವತೆಯಾಗಿದೆ. ಆದರೆ ಆ ಅರಿವನ್ನೇ ಬಳಸಿಕೊಳ್ಳದ್ದಕ್ಕಾಗಿ ತನು ಹೆಣ್ಣು ಗಂಡಾಗಿ ಹೆಸರು ಪಡೆದು ರತಿ ಮನ್ಮಥರನ್ನು ಸೇರಿಸಿಕೊಂಡಿದೆ. ಚರ್ಮದಲ್ಲಿ ಮನ್ಮಥನನ್ನು ಸೇರಿಸಿಕೊಂಡು ಚರ್ಮವನ್ನೇ ರತಿಯನ್ನಾಗಿ ನೋಡುತ್ತದೆ. ಚರ್ಮದಲ್ಲಿ ಅಗ್ನಿ ಹುಟ್ಟಿ, ಅರಿವಿನ ತನು ಅಜ್ಞಾನದಿಂದ ಇಲ್ಲದ ಅಗ್ನಿಯಲ್ಲಿ ಪ್ರಾಣ ಕಾಮದ ದಾಹದಿಂದ ಬೇಯುತ್ತದೆ.

ಸುಂದರವಾದ ಅರಿವಿನ ತನು ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಗಳಿಂದ ಬೇಯುತ್ತಾ ಅನ್ನ ಪಾನದ ಇಚ್ಛೆಗಾಗಿ ಅರಿಷಡ್ವರ್ಗಗಳೊಂದಿಗೆ ಸಾಯುತ್ತದೆ. ತನುವಿನ ಅರಿವು ತನುವಿಗೆ ಬಳಕೆಯಾದರೆ ತನುವಿಗೆ ತನುವಿನಿಂದಲೇ ಮುಕ್ತಿ. ತನುವಿನಲ್ಲಿ ಹುಟ್ಟಿದ ರತಿ ಮನ್ಮಥರು ತನುವಿನಲ್ಲಿಯೇ ಸಾಯುತ್ತಾರೆ. ಆ ತನುವಿಗೇ ಪ್ರಸಾದವಾಗುತ್ತಾರೆ. ತನುವಿನಲ್ಲಿ ಹುಟ್ಟಿದ ಅಗ್ನಿ ತನುವಿನಲ್ಲಿಯೇ ನಂದುತ್ತದೆ. ತನು ವನ್ನು ಆವರಿಸಿದ ಮನ ತನುವಿನಲ್ಲಿಯೇ ಸಂಗಮವಾದ ಅರಿವಿಗೆ ಶರಣು ಹೋಗಿ ತನುವಿನ ಮರಣ ಬಾಧೆಯನ್ನು ಗೆಲ್ಲುತ್ತದೆ. ಅನ್ನ ಪಾನಾದಿಗಳಿಗೆ ಇಚ್ಛಿಸದೆ ಬಯಲೊಳಗೆ ಬೆರೆತು ಬಯಲೇ ಆಗುತ್ತದೆ.

ತನು ಒಂದು ಬಯಲ ಬೀಜ. ಆ ಬೀಜದಿಂದಲೇ ತನುವೆಂಬ ಹೆಸರು ಪಡೆದು ಜ್ಞಾನದ ವೃಕ್ಷವಾಗಿದೆ. ಮರೆತದ್ದರಿಂದ ಮನ ಆವರಿಸಿ ತನುವಾಗಿ ಹೆಣ್ಣು ಗಂಡಾಗಿದೆ. ಜಾತಿ ಮತ ಪಂಥಗಳ ಬಂಧನದಲ್ಲಿ ತಾನೇ ಬಂಧಿಸಿಕೊಂಡಿದೆ. ಶಾಸ್ತ್ರ ಗ್ರಂಥಗಳನ್ನು ರಚಿಸಿ ಅವುಗಳಿಂದ ತಾನೇ ಮುಕ್ತಿ ಪಡೆಯಬೇಕೆಂದು ಬಯಕೆ ಮಾಡಿದೆ. ತನುವಿನ ಅಜ್ಞಾನ ತನುವನ್ನೇ ಬಂಧಿಸಿದೆ. ತನುವಿನ ಜ್ಞಾನದಿಂದಲೇ ತನುವಿನ ಬಂಧನವನ್ನು ತನುವೇ ಬಿಡಿಸಬೇಕು. ಜ್ಞಾನ ತನುವಿನ ಫಲವೂ ಹೌದು; ತನುವಿನ ಬೀಜವೂ ಹೌದು.

ಜ್ಞಾನ ಬಯಲು. ಅದರ ಬೀಜವೂ ಬಯಲು. ತನು ಕಂಡರೇನು? ಅದು ಬಯಲ ಬೀಜದ ಫಲ. ಬಯಲು ಬಯಲನೇ ಬಿತ್ತಿ. ಬಯಲು ಬಯಲನೇ ಬೆಳೆದು ಬಯಲು ಬಯಲಾಗಿ ಬಯಲಾಗಬೇಕಾಗಿದೆ.

165

ಭಕ್ತನೊಂದು ಕುಲ, ಭವಿಯೊಂದು ಕುಲವೆಂಬರು.
ಭಕ್ತನೆಂತಿಪ್ಪ ಭವಿಯೆಂತಿಪ್ಪನೆಂದರೆ, ಆರೂ ಅರಿಯರು.
ಇದು ಬಲ್ಲವರು ತಿಳಿದು ನೋಡಿ.
ಭಕ್ತನೆಂದರೆ ಅಂಗ, ಭವಿಯೆಂದರೆ ಲಿಂಗ.
ಈ ಎರಡರ ಸಕೀಲ ಸಂಬಂಧವನರಿದರೆ,
ಆತನೇ ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ.

ಹಣೆಗೆ ತಿಲಕ, ನಾಮ, ವಿಭೂತಿ ಬಳಿದು ಮೂರುವೇಳೆ ಕಲ್ಲು ದೇವರನ್ನು ಪೂಜಿಸುವವ ಭಕ್ತನಲ್ಲ. ಈತ ಗೋಚರದ ಆಚಾರದ ಭಕ್ತ. ಭಕ್ತನೆಂದರೆ ಅಗೋಚರದ ಆಚಾರದಾತ. ಕಲ್ಲುದೇವರನ್ನು

ನೋಡಿ ಕಲ್ಲೆಂದು ತಿಳಿದು ಪೂಜಿಸದಾತ. ಯುವತಿಯನ್ನು ನೋಡಿ ಅಂಗವೆಂದು ತಿಳಿದು ಕಾಮಕೇಳಿ ಯಾಡದಾತ. ಸರ್ವರ ಅಂಗವನ್ನು ನೋಡಿ ಅರಿವಿನ ಲಿಂಗವೆಂದು ಸಹಜವಾಗಿ ತಿಳಿದಾತ. ಆಭರಣವನ್ನು ನೋಡಿ ಲೋಹವೆಂದು ತಿಳಿದು ಮರುಳಾಗದಾತ. ಕರೆನ್ಸಿಯನ್ನು ನೋಡಿ ಕಾಗದವೆಂದು ತಿಳಿದಾತ. ವಸ್ತುವಿನ ಮೂಲವನ್ನು ಅರಿತು ಆ ಸತ್ಯಕ್ಕೆ ಮರುಳಾದಾತ. ಅಗೋಚರದ ಆಚಾರದಲ್ಲಿ ಮಗ್ನನಾದಾತನೇ ಭಕ್ತ. ಈತನನ್ನು ಲೋಕ ಭವಿಯೆಂದು ತಿಳಿಯುತ್ತದೆ.

ಭಕ್ತನೆಂದರೆ ಅಂಗ ಭವಿಯೆಂದರೆ ಲಿಂಗ:

ಅಂಗದಲ್ಲಿ ಅರಿವು ಸಂಗಮವಾಗಿದೆ. ಅದು ಅಂಗವನ್ನು ಅಂಗವೆಂದೇ ಭಾವಿಸುತ್ತದೆ. ಹೆಣ್ಣೆಂದು ಗಂಡೆಂದು ಭಾವಿಸುವುದಿಲ್ಲ. ಕಲ್ಲು ಕಟೆದು ದೇವರಾದರೇನು? ಅದು ಕಲ್ಲೇ ಆಗಿದೆ. ಕಲ್ಲನ್ನು ಕಲ್ಲೆಂದು ಹೇಳುವ ಅಂಗ ಅದು ಬರೀ ಅಂಗವಲ್ಲ. ಅದು ಲಿಂಗಾಂಗ, ಅರಿಯದ ಜನ ಅದನ್ನು ಭವಿಯೆಂದು ಕರೆಯುತ್ತಾರೆ. ಅಂಗವನ್ನು ಆವರಿಸಿದ ಮನ ಕಲ್ಲು ದೇವರನ್ನು ಪೂಜಿಸಿದರೆ ಅದು ಡಾಂಭಿಕ ಭಕ್ತನ ಅಂಗ. ಕಲ್ಲುದೇವರನ್ನು ಕಲ್ಲೆಂದು ತಿಳಿಯುವುದೇ ಭವಿ. ಹೀಗೆ ತಿಳಿಯುವ ಅಂಗ ಅರಿವಿನ ಲಿಂಗವೂ ಹೌದು. ಇದು ಗೋಚರಕ್ಕೆ ಬರುವ ಆಚಾರವಲ್ಲ. ಇದು ಅಗೋಚರ ಆಚಾರ. ಇಂತಹ ಅಗೋಚರ ಆಚಾರದಲ್ಲಿದ್ದಾತನೇ ಭಕ್ತ. ಭಕ್ತನೆಂದರೆ ಅಂಗ; ಅಂಗದಲ್ಲಿ ಸಂಗಮವಾದ ಅರಿವೇ ಲಿಂಗ. ಆ ಅರಿವಿಗೆ ಶರಣು ಹೋದ ಮನವೇ ಭಕ್ತ.

ಈ ಎರಡರ ಸಕೀಲ ಸಂಬಂಧವನರಿದರೆ, ಆತನೇ ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ :

ಅಂಗದ ತಂತ್ರಗಾರಿಕೆಯನ್ನು ಅಂಗವೇ ಅರಿಯದಿದ್ದರೆ ಅದು ಅಂಗವಲ್ಲ, ಅಂಗದಂತೆ ಇರುವ ಮಂಗ. ಅಂಗದಲ್ಲಿ ಅರಿವು ಸಂಗಮವಾಗಿದೆ. ಅಂಗವನ್ನು ಮನ ಆವರಿಸಿದೆ. ಆವರಿಸಿದ ಮನ ಅಂಗವನ್ನು ತನ್ನಿಚ್ಛೆಗೆ ಬಳಸಿಕೊಂಡರೆ ಅದು ಅಂಗವಲ್ಲ. ಮಂಗ. ಆವರಿಸಿದ ಮನ ಅಂಗದಲ್ಲಿಯೇ ಸಂಗಮವಾದ ಅರಿವಿನಲ್ಲಿ ಸಂಗಮವಾಗಿ ಆ ಅರಿವನ್ನೇ ಬಳಸಿಕೊಂಡರೆ ಅದು ಬರೀ ಅಂಗವಲ್ಲ, ಲಿಂಗಾಂಗ, ಇದು ಅಂಗದ ಅರಿವಿನ ತಂತ್ರಗಾರಿಕೆ, ಅಂಗದ ಸಕೀಲಸಂಬಂಧವನ್ನು ಅಂಗವನ್ನು ಆವರಿಸಿದ ಮನವೇ ಅರಿಯುವಿಕೆ. ಆ ಅರಿವಿನಲ್ಲಿ ಕೂಡಿ ಕೂಡಲ ಸಂಗಮದೇವನೇ ತಾನಾಗುವಿಕೆ ಎಂದು ಅಪ್ಪಣ್ಣ ಶರಣರು ಅಂಗದ ಸಕೀಲ ಸಂಬಂಧವನ್ನು ಸರ್ವ ಓದುಗರಿಗೂ ಉಣಬಡಿಸಿದ್ದಾರೆ.

166

ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ,
ಸತ್ಯ ಶರಣರೈಕ್ಯರೆಂಬ ಇತ್ತತ್ತ ಗೊತ್ತ ಬಿಟ್ಟು,
ನಿರ್ವಯಲ ಲಿಂಗದೊಳು ನಿಮ್ಮ ಭಕ್ತನಾದರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಒಂದು ತನು ಗರ್ಭದಿಂದ ಹೊರ ಬಂದಿತೆಂದರೆ ಸಾಕು ಆ ತನು ಜ್ಞಾನಿ ತನು. ಜಗದ ತನುಗಳೆಲ್ಲ ಜ್ಞಾನಿ ತನುಗಳೇ ಆಗಿವೆ. ಭಾಷೆ ಮಾತ್ರ ಬೇರೆ ಬೇರೆ ಆದರೇನು ತನುವಿನ ಚರ್ಮ ಒಂದೇ; ಅದರ ಸ್ಪರ್ಶ ಜ್ಞಾನವೂ ಒಂದೇ. ಕಣ್ಣು ಒಂದೇ, ಮೂಗು ಒಂದೇ ; ಅದು ಮೂಸಿಸುವ ಪರಿಮಳ ಒಂದೇ. ನಾಲಿಗೆ ಒಂದೇ; ಅದು ರುಚಿಸುವ ರುಚಿ ಒಂದೇ. ಈ ಐದೂ ಜ್ಞಾನೇಂದ್ರಿಯಗಳನ್ನು ಅರಿಯುವ ಅರಿವು ಒಂದೇ. ಗರ್ಭಕ್ಕೆ ಪ್ರವೇಶಿಸಿ ತನುವಾಗಿ ಹೊರಬರಲು

ಕಾರಣವಾದ ಬಿಂದುವಿನ ಬೀಜ ಒಂದೇ.

ಬಯಲ ಒಂದು ಬೀಜ ಗರ್ಭಹೊಕ್ಕು ತನುವಾಗಿ ಹೊರ ಬಂದಿದೆ. ನೋಡುವ, ಕೇಳುವ, ಮೂಸಿಸುವ, ಮುಟ್ಟುವ, ರುಚಿಸುವ ಜ್ಞಾನ ಜಗದ ತನುಗಳಿಗೆಲ್ಲ ಬಯಲ ಬೀಜದಿಂದಲೇ ಬಂದಿದೆ. ಇಂತಹ ಜ್ಞಾನಿ ತನುವಿಗೆ ಜನ್ಮ ನೀಡಿದ ಬಯಲೇ ಅದರ ತಂದೆ ತಾಯಿ; ಬಂಧು ಬಳಗ. ಬಯಲಲ್ಲದೆ ಬೇರಾರೂ ಅದಕ್ಕಿಲ್ಲ. ಅದನ್ನೇ ನಂಬಬೇಕು; ಆರಾಧಿಸಬೇಕು. ತಂದೆ, ತಾಯಿ, ಬಂಧು ಬಳಗ ನಿಮಿತ್ತ ಮಾತ್ರ. ಆ ಬಯಲೊಳಗೆ ಕೂಡಿ ತನುವಿದ್ದಾಗಲೆ ಆ ನಿರ್ವಯಲ ಲಿಂಗದೊಳು ಒಂದಾಗಬೇಕು. ಅಂತಹ ತನುವೇ ಭಕ್ತ ತನು. ಬಯಲೊಳಗೆ ಕೂಡಿ, ಬಯಲೇ ಆದ ಬಯಲ ತನು.

ತನುವಿನ ಬೀಜ ಬಯಲು; ತನು ಬಯಲು. ಅದರ ಜೀವನ ಬಯಲು, ಅದರ ಭಾವನೆ ಬಯಲು. ಬಯಲ ಬೀಜದಿಂದ ಹುಟ್ಟಿದ ತನು ಬಯಲನ್ನೇ ನೋಡುತ್ತದೆ. ಬಯಲನ್ನೇ ಕೇಳುತ್ತದೆ, ಬಯಲನ್ನೇ ಮೂಸಿಸಿ, ಬಯಲನ್ನೇ ಮುಟ್ಟುತ್ತದೆ. ಬಯಲನ್ನೇ ರುಚಿಸಿ, ಬಯಲಿನಲ್ಲಿಯೇ ಬದುಕಿ, ಬಯಲಾಗಿ, ಬಯಲಲ್ಲಿ ಸೇರಿ, ಬಯಲೇ ಆಗುತ್ತದೆ.

ಗಿಡ ಮರ ಬಳ್ಳಿ ಪಶು ಪಕ್ಷಿ ಪ್ರಾಣಿಗಳಿಗೆ ಇದು ತಿಳಿಯುವುದಿಲ್ಲ. ಆದರೂ ಬಯಲ ಹೊರತಾಗಿ ಬೇರೆ ಅಲ್ಲ. ತನುವಿಗೆ ತನುವಿನ ಮೂಲ ತಿಳಿಯುವ ಶಕ್ತಿ ಇದೆ. ಆದರೂ ಅದು ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಸತ್ಯಶರಣ, ಐಕ್ಯರೆಂಬ ವೇಷ ಹಾಕುತ್ತದೆ. ತಿಳಿಯಲು ವೇಷ ಬೇಕೆ? ಯಾವ ವೇಷ ಹಾಕಿದರೇನು ಅದು ತನುವಲ್ಲವೆ? ವೇಷ ಹಾಕಿದ ತನು, ಹಾಕದ ತನು ಅವೆರಡೂ ಒಂದೇ ಅಲ್ಲವೆ? ಈ ನಾಟಕ ಯಾಕೆ ಎಂದು ಎರಡೂ ತನುಗಳು ಯೋಚಿಸಬೇಕಿಲ್ಲವೇ? ವೇಷ ಹಾಕಿದ ತನು ಒಂದೇ; ಅದನ್ನು ಪೂಜಿಸುವ ತನು ಒಂದೇ. ಇವೆರಡೂ ಅಜ್ಞಾನಿ ತನುಗಳು ತನುವನ್ನು ತನುವೆಂದು ತಿಳಿಯದ ತನುಗಳು. ಈ ಎರಡೂ ತನುಗಳಲ್ಲಿ ಬಯಲ ಜ್ಞಾನ ಸಂಗಮವಾಗಿದೆ; ಆ ಬಯಲ ಬೀಜವೇ ತನುವಿಗೆ ಕಾರಣವೆಂದು ತಿಳಿಯಲರಿಯದ ತನುಗಳು; ವ್ಯವಹಾರದ ತನುಗಳು. ತನುವಿನ ಸತ್ಯದ ಮೂಲವನ್ನು ಅರಿಯದ ತನುಗಳು.

ತನುವಿನ ಸತ್ಯವನ್ನು ತನುವೇ ಅರಿಯಲು ತನುವಿನಿಂದಲೇ ಹೊರ ಬಂದ ಪುಸ್ತಕ ಬೇಕೆ ಅದಕ್ಕೆ? ಶಾಸ್ತ್ರಪುರಾಣ ಆಗಮ ಉಪ ನಿಷತ್‌ಗಳು ಬೇಕೆ ಅದಕ್ಕೆ? ಇದೆಂತಹ ದುರ್ವ್ಯಸನಕ್ಕೆ ಗುರಿಯಾಗಿದೆ ಜಗದ ಜ್ಞಾನಿ ತನು! ತನುವಿನ ಜ್ಞಾನ ತನುವೇ ಮರೆತು ಜ್ಞಾನದ ತನುವಿನಲ್ಲಿ ಏನೇನೋ ಸಂಗ್ರಹಿಸಿಕೊಂಡುದು ಅಜ್ಞಾನವಲ್ಲವೆ? ಸಿಟ್ಟು ದ್ವೇಷ ಅಸೂಯೆ, ಜಾತಿ-ಮತ ಪಂಥ, ಹೆಣ್ಣು ಗಂಡು, ಶ್ರೀಮಂತ ಬಡವ, ಶಾಸಕ ಸಚಿವ, ಮಂತ್ರಿ ಪ್ರಧಾನಿ ಅಧ್ಯಕ್ಷ, ಪಂಡಿತ ಶಾಸ್ತ್ರೀ ಜ್ಞಾನಿ ಪೂಜಾರಿ, ಶಿಕ್ಷಕ, ಪ್ರಾಧ್ಯಾಪಕ, ಪದವೀಧರ, ವೈದ್ಯ ಎಂದು ತನುವೇ ತನುವನ್ನು ತನುವೆಂದು ಮರೆತು ಬೀಗುತ್ತದೆ. ಇದು ಜಲಚರದಲ್ಲಿ, ಸಸ್ಯಕುಲದಲ್ಲಿ, ಪ್ರಾಣಿವರ್ಗದಲ್ಲಿ ಹುಡುಕಿದರೆ ಸಿಗುವುದಿಲ್ಲ. ಬಯಲ ಜ್ಞಾನ ಇದ್ದು ಅದನ್ನು ಬಳಸಿಕೊಳ್ಳದ ತನುವಿನಲ್ಲಿ ಮಾತ್ರ ಸಿಗದೇ ಇರುವುದಿಲ್ಲ.

ತನುವಿನ ಜ್ಞಾನ ತನುವೇ ಪಡೆದುಕೊಳ್ಳಲು ತನುವಿಗೆ ಯಾವ ಶಿಕ್ಷಣದ ಅವಶ್ಯ ಕತೆಯೂ ಇಲ್ಲ. ಅದು ತನುವಿನಲ್ಲಿಯೇ ತನ್ಮಯವಾಗಿದ್ದ ತನುವಿಗೇ ಬೋಧಿಸುತ್ತದೆ. ಬೋಧಿಸುವ ಆ ಬಯಲ ಬೋಧೆಯನ್ನು; ತನುವನ್ನೇ ಆವರಿಸಿದ ಮನ ಆಲಿಸಬೇಕಷ್ಟೆ! ತನುವಿಗೆ ಹಾಕಿದ ಸಕಲ ವೇಷಗಳು ತಂತಾನೇ ಕಳಚಿ ಬೀಳುತ್ತವೆ. ತನು ತಾನೇ ಹೇರಿಕೊಂಡ ಅಜ್ಞಾನದ ಸಕಲ ರೋಗಗಳನ್ನು ಕಳೆದುಕೊಂಡು ನಿರೋಗಿಯಾಗುತ್ತದೆ. ಆಗ ನೋಡುವ ನೋಟದಲ್ಲಿ ತನುವಿನ ಜ್ಞಾನ

ಹರಿಯುತ್ತದೆ. ಕೇಳುವ ಕಿವಿಯನ್ನು ತನು ಶಬ್ದದ ತರಂಗಗಳು ಚುಂಬಿಸುತ್ತವೆ. ಸ್ಪರ್ಶಿಸುವ ಚರ್ಮಕ್ಕೆ ಸಹಜ ಸ್ಪರ್ಶಾನಂದವಾಗುತ್ತದೆ. ಸುಗಂಧ ದುರ್ಗಂಧ ಕಳೆದು ಮೂಗು ಪರಿಮಳ ಹೀರುತ್ತದೆ. ರುಚಿ ಅರುಚಿಗಳನ್ನು ಕಳೆದುಕೊಂಡು ನಾಲಿಗೆ ಪ್ರಸಾದ ಸ್ವೀಕರಿಸುತ್ತದೆ. ಪರರನ್ನು ತನ್ನಂತೆಯೇ ಬಗೆಯುವ ಸ್ವರ್ಗಸುಖ ತನುವಿನಲ್ಲಿಯೇ ಸಿಗುತ್ತದೆ. ಇದು ತನುವಿನಲ್ಲಿಯೇ ಸಂಗಮವಾದ ತನುವಿನ ಸ್ವಸುಖ. ತನುವೇ ತಿಳಿದು ಅದನ್ನು ಪಡೆಯಬೇಕಷ್ಟೆ.

167

ಭಕ್ತಿಯ ಮಾಡಿಹೆನೆಂಬವರೆಲ್ಲ ಭಾಗ್ಯವಂತರಾದರು.
ಮುಕ್ತಿಯ ಸಾಧಿಸಿಹೆನೆಂಬವರೆಲ್ಲ ಮೂವಿಧಿಗೊಳಗಾದರು.
ತತ್ವವನರಿದಿಹೆನೆಂಬವರೆಲ್ಲ ತರ್ಕಿಗಳಾದರು.
ವಿರಕ್ತಿಯ ಮಾಡಿಹೆನೆಂಬವರೆಲ್ಲ ವೈರಾಗಿಗಳಾದರು.
ಈ ಚತುರ್ವಿಧದೊಳಗೆ ಆವಂಗವೂ ಅಲ್ಲ.
ಎಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಭಕ್ತಿಯ ಮಾಡಿದ ಅಂಗ ಭಾಗ್ಯವಂತ ಆಗಬಹುದು. ತತ್ವವನು ಅರಿದಿಹೆನೆಂಬ ಅಂಗ ತರ್ಕಕ್ಕೊಳಗಾಗಬಹುದು. ವಿರಕ್ತಿಯ ನಾಗಿಹೆನೆಂಬ ಅಂಗ ವೈರಾಗ್ಯಕ್ಕೆ ಒಳಪಡಬಹುದು. ಇದೆಲ್ಲ ಮುಕ್ತಿ ಸಾಧಿಸಬೇಕೆಂಬ ಹಠಕ್ಕೆ ಒಳಗಾದ ಅಂಗದ ಆಚಾರ. ಮನ ತನುವನ್ನು ವಿಧಿಗೆ ಗುರಿಮಾಡಿ, ಗೋಚರದ ಆಚಾರಕ್ಕೆ ಅಂಗವನ್ನು ಸಿಲುಕಿಸಿ ಅಂಗದಲ್ಲಿ ಹಾಯಾಗಿ ಸಂಸಾರ ಹೂಡುತ್ತದೆ.

ಈ ಚತುರ್ವಿಧದ ಆಚಾರಕ್ಕೆ ಒಳಪಟ್ಟ ಯಾವ ಅಂಗವೂ ಅರಿವಿನ ಲಿಂಗಾಂಗವಲ್ಲ ಎಂದು ಹೇಳುತ್ತಾರೆ ಶಿವಶರಣ ಹಡಪದ ಅಪ್ಪಣ್ಣಗಳು.

ಎಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ ಶರಣರ ಪರಿಬೇರೆ :

ಭಕ್ತಿ ಮಾಡಲು ಹೋದ ಅಂಗ ಗೋಚರಕ್ಕೆ ಬರುತ್ತದೆ. ಮುಕ್ತಿ ಮಾಡಲು ಹೊರಟ ಅಂಗವೂ ಗೋಚರಕ್ಕೆ ಬರುತ್ತದೆ. ತತ್ವವನು ಹೇಳಲು ಹೊರಟ ಅಂಗವೂ ಶಾಸ್ತ್ರಿ ಪಂಡಿತನಂತೆ ಗೋಚರಕ್ಕೆ ಬರುತ್ತದೆ. ವಿರಕ್ತನ ವೇಷದಲ್ಲಿದ್ದ ಅಂಗವೂ ಗೋಚರಕ್ಕೆ ಬರುತ್ತದೆ.

ಜನಕ್ಕೆ ಗೋಚರಿಸಬೇಕೆಂದು ಆಯಾ ವೇಷವನ್ನು ಮನ ತನುವಿಗೆ ಹಾಕಿ ತನುವಿನೊಂದಿಗೆ ಸುಖಿಸುತ್ತದೆ. ತನುವಿನಲ್ಲಿಯೇ ತನ್ಮಯವಾದ ಅರಿವನ್ನು ಅರಿತು, ಆ ಅರಿವಿನೊಂದಿಗೆ ಬೆರೆತು, ಅರಿವೇ ಆಗುವ ಬಯಕೆಯನ್ನು ಮಾತ್ರ ಮನ ಮಾಡುವುದೇ ಇಲ್ಲ.

ಅರಿವಿಗೆ ಶರಣು ಹೋಗಿ ಆ ಶರಣನೇ ಆದ ತನುವಿಗೆ ಮನ ಭಕ್ತಿ ಮಾಡುವುದಿಲ್ಲ. ಏಕೆಂದರೆ ಶರಣ ಭಕ್ತನೂ ಅಲ್ಲ, ವಿರಕ್ತಿಯೂ ಅಲ್ಲ, ಮುಕ್ತನೂ ಅಲ್ಲ, ಶಾಸ್ತ್ರಿ ಪಂಡಿತನೂ ಅಲ್ಲ. ಶರಣ ಯಾವ ವೇಷಧಾರಿಯೂ ಅಲ್ಲ. ಆತನ ಪರಿಯೇ ಬೇರೆ. ತನ್ನ ಆನಂದದಲ್ಲಿ ತಾನೇ ತನ್ಮಯನಾದಾತ. ತನ್ನಂತೆಯೇ ಸರ್ವರನ್ನೂ ನೋಡುವಾತ. ಸರ್ವರನ್ನೂ ತನ್ನಂತೆಯೇ ಮಾಡಿಕೊಳ್ಳಬೇಕೆಂಬ ಬಯಕೆಯುಳ್ಳಾತ. ತನುವಿನಲ್ಲಿಯೇ ತನ್ಮಯವಾದ ಅರಿವನ್ನು ತನುವಿಗೆ ಆವರಿಸಿದ ಮನದಿಂದ ಅರಿತು, ಆ ಅರಿವೇ ತಾನಾದಾತ. ಭ್ರಮೆ ಕಳಚಿ ಬ್ರಹ್ಮಜ್ಞಾನಿಯಾದಾತ. ವಿರಾಟಸ್ವರೂಪನೇ ತಾನಾದ ಸ್ವಸ್ವರೂಪ ಜ್ಞಾನಿಯಾತ.

ಶರಣನನ್ನು ಅಂಗದಿಂದ ಗುರುತಿಸುವಂತಿಲ್ಲ, ಏಕೆಂದರೆ ಆತ ಅರಿವಿನ ಲಿಂಗಾಂಗ! ಇಂತಹ ಶರಣನನ್ನು ಗುರುತಿಸಲು ಭಕ್ತಿಯ ಮಾಡಿ ಭಾಗ್ಯವಂತನಾದಾತನಿಗೂ ಸಾಧ್ಯವಾಗುವುದಿಲ್ಲ. ಮುಕ್ತಿಯ ಸಾಧನೆಯಲ್ಲಿದ್ದಾತನಿಗೂ ಸಾಧ್ಯವಾಗುವುದಿಲ್ಲ. ತತ್ವವನು ಅರಿತ ಪಂಡಿತ ಶಾಸ್ತ್ರಿಗೂ ಸಾಧ್ಯವಾಗುವುದಿಲ್ಲ. ವಿರಕ್ತನಿಗೂ ಸಾಧ್ಯವಾಗುವುದಿಲ್ಲ. ಮಠ ಪೀಠಾಧಿ ಪತಿಗೂ ಸಾಧ್ಯವಾಗುವುದಿಲ್ಲ. ಶರಣ ಮಾತ್ರ ಶರಣನನ್ನು ಗುರುತಿಸುತ್ತಾನೆ. ಬಿಗಿದಪ್ಪಿಕೊಂಡು ಕುಣಿ ಕುಣಿದಾಡುತ್ತಾನೆ. ನಲಿನಲಿದಾಡುತ್ತಾನೆ. ಸಸಿಯ ಮೇಲೆ ಸಾಗರ ಹರಿದಂತಾಯಿತ್ತಯ್ಯಾ ಎಂದು ಬಸವಣ್ಣ ಶರಣರ ಗಣ ತಿಂಥಿಣಿಯನ್ನು ನೋಡಿ ಹಾಡಿದಂತೆ ಉಬ್ಬಿ ಹೋಗುತ್ತಾನೆ.

168

ಮನವನರಿದಂಗೆ ಮತದ ಹಂಗೇಕೊ?
ನಿತ್ಯವನರಿದಂಗೆ ತೀರ್ಥದ ಹಂಗೇಕೊ?
ಪರಮಾರ್ಥವನರಿದಂಗೆ ಪ್ರಸಾದದ ಹಂಗೇಕೊ?
ಜ್ಯೋತಿಯನರಿದಂಗೆ ಕತ್ತಲೆಯ ಹಂಗೇಕೊ?
ಲೋಕವನರಿದಂಗೆ ವ್ಯಾಕುಲದ ಹಂಗೇಕೊ?
ಈ ತೆರನನರಿದಂಗೆ ಮುಂದಾವ ಭೀತಿಯುಂಟು ಹೇಳಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ?

ತನು ಅರಿವಿನ ದೇವಾಲಯ. ತನುವಿನಲ್ಲಿಯೇ ತನ್ಮಯವಾದ ಅರಿವನ್ನು ಮನದಿಂದಲೇ ಅರಿಯಬೇಕು. ಹೀಗೆ ಅರಿಯುವ ಮನವನ್ನೂ ಮನದಿಂದಲೇ ಅರಿಯಬೇಕು. ಜಾತಿ ಮತ ಪಂಥಗಳನ್ನು ತನುವಿನಲ್ಲಿಯೇ ಸೃಷ್ಟಿಸಿದ್ದು ಮನ. ಇಂತಹ ಮನ ವನ್ನು ಅರಿವಿನಿಂದ ಅರಿತವನಿಗೆ ಜಾತಿ ಮತ ಪಂಥಗಳೇ ಇಲ್ಲ. ಆತ ಹೆಣ್ಣೂ ಅಲ್ಲ; ಗಂಡೂ ಅಲ್ಲ. ಸಾಕ್ಷಾತ್ ಅರಿವಿನ ಲಿಂಗಾಂಗ. ಇಂತಹ ಅಂಗಕ್ಕೆ ಯಾವ ಹಂಗೂ ಇಲ್ಲ.

ಬಯಲ ತೀರ್ಥದಿಂದ ಹುಟ್ಟಿದ ಅಂಗಕ್ಕೆ ಯಾವ ತೀರ್ಥಗಳ ಅವಶ್ಯಕತೆಯೂ ಇಲ್ಲ. ಅದು ನಿತ್ಯ ಸತ್ಯ. ಸಾಕ್ಷಾತ್ ಶಿವನ ಪಾದೋದಕದಿಂದ ಹುಟ್ಟಿದ ಅರಿವಿನ ಲಿಂಗಾಂಗ! ಬಯಲ ಬಿಂದುವಿನ ಬೀಜದಿಂದಲೇ ಪಿಂಡವಾಗಿದೆ. ಆ ತೀರ್ಥದಿಂದಲೇ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಆಗಿ ಜಾರದಂತೆ ಚರ್ಮದ ಕವಚವಾಗಿದೆ. ನೋಡುವ ಕೇಳುವ ಮುಟ್ಟಿ ಆನಂದಿಸುವ ಪರಿಮಳ ಮೂಸಿಸಿ ರುಚಿಸುವ ಸದ್ಗುಣ ಹೊಂದಿ ನುಡಿದು ನಡೆದಾಡುವ ಲಿಂಗಾಂಗವಾಗಿದೆ. ಇಂತಹ ಸತ್ಯವನ್ನು ಅರಿದ ಅರಿವಿನ ಲಿಂಗಾಂಗಕ್ಕೆ ತೀರ್ಥದ ಹಂಗಿಲ್ಲ.

ಕಲ್ಲು ದೇವರಿಗೆ ಎಡೆಮಾಡಿದ ಪ್ರಸಾದವಲ್ಲ. ಉಂಡು ಜೀರ್ಣಿಸಿಕೊಳ್ಳುವ ಅರಿವಿನ ಕಾಯವೇ ಪ್ರಸಾದ ಕಾಯ. ನೋಡಿದ ದೃಶ್ಯ ಕಣ್ಣಿನಲ್ಲಿ ಸಂಗ್ರಹವಾಗದೆ ಅರಿವಿನಿಂದ ಜೀರ್ಣಿಸಿಕೊಂಡ ಕಾಯವೇ ಪ್ರಸಾದ ಕಾಯ. ಕೇಳಿದ ಶಬ್ದ, ಮೂಸಿಸಿದ ಗಂಧ, ಸ್ಪರ್ಶಿಸಿದ ಸ್ಪರ್ಶ, ರುಚಿಸಿದ ಪದಾರ್ಥ ಜೀರ್ಣಿಸಿಕೊಂಡ ಕಾಯವೇ ಪ್ರಸಾದ ಕಾಯ. ಇದು ಪರಮಾರ್ಥದ ಕಾಯ; ಪ್ರಸಾದ ಕಾಯ. ಇಂತಹ ಕಾಯಕ್ಕೆ ಪ್ರಸಾದದ ಹಂಗೇಕೆ?

ಸೂರ್ಯನ ಬೆಳಕನ್ನು ಬೆಳಕಿನಿಂದಲೇ ಬೆಳಗುವ ಜ್ಯೋತಿಯೊಂದು ಒಡಲೊಳಗೆಯೇ ಇದೆ.

ಆ ಜ್ಯೋತಿ ಒಡಲಿಂಗೆ ಆಧಾರವಾಗಿ ಇದೆ; ಆದರೂ ಒಡಲು ಸೋಂಕಿಲ್ಲ. ಒಡಲು ಸೋಂಕದೆ ಒಡಲನ್ನು ಸೂರ್ಯನನ್ನು ಬೆಳಗುವ, ಬೆಳಗಿಂಗೆ ಬೆಳಗಾಗಿ ಬೆಳಗುವ ಜ್ಞಾನ ಜ್ಯೋತಿಯನ್ನು ಕಂಡು ಆ ಜ್ಯೋತಿಯೇ ತಾನಾದ ಒಡಲಿಂಗೆ ಕತ್ತಲೆಯ ಹಂಗೇಕೆ ?

ಅಂಗದಲ್ಲಿಯೇ ಸಂಗಮವಾದ ಅರಿವಿನ ಲಿಂಗವನು ಅಂಗವೇ ಅರಿಯದಿದ್ದಕ್ಕಾಗಿ ಲೋಕವೇ ವ್ಯಾಕುಲದಲ್ಲಿ ಮುಳುಗಿದೆ. ಲೋಕದ ಅಂಗಗಳೆಲ್ಲ ವ್ಯಾಕುಲದಲ್ಲಿ ಮುಳುಗಿವೆ. ಅಂಗದಲ್ಲಿಯೇ ಸಂಗಮವಾದ ಅರಿವಿನ ಲಿಂಗವನು ಆ ಅಂಗವೇ ಅರಿತ ಮೇಲೆ ಅದು ಲಿಂಗಾಂಗ. ಅದಕ್ಕೆ ಲೋಕದ ಚಿಂತೆಯಿಲ್ಲ. ತನ್ನನ್ನು ಲೋಕವನ್ನೂ ಅರಿತ ಅರಿವಿನ ಲಿಂಗಾಂಗ!

ಲೋಕವನ್ನೇ ಅರಿತ ಅರಿವಿನ ಲಿಂಗಕ್ಕೆ ಯಾವ ಭೀತಿಯೂ ಇಲ್ಲ ಭಯವೂ ಇಲ್ಲ. ಅದು ನಿರ್ಭಯಿ. ಅರಿವಿನಲ್ಲಿಯೇ ಕೂಡಿ ಆ ಅರಿವೇ ತಾನಾದ ಅರಿವಿನ ಲಿಂಗಾಂಗವದು.

169

ಮನವೆ ಮಾರುತನ ಒಡಗೂಡಿರ್ದು,
ತನುವೆ ವಿಕಾರದೊಳಗಿರ್ದು ಮನವೆಂತು ಕಂಡಿತ್ತೆಂಬಿರಿ?
ಎಲೆ ಅಣ್ಣಗಳಿರಾ, ಘನವೆಂತಿಪ್ಪುದೆಂದರೆ,
ಈ ತನುವ ಮರೆದು, ಹರಿವ ಮನವ ಲಿಂಗದೊಳು ನಿಲಿಸಿ,
ಈ ಜನಿತಕ್ಕೆ ನಾನಿನ್ನಾರೆಂದು
ತ್ರಿಕಾಲದಲ್ಲಿಯೂ ಎಮ್ಮ ಶರಣರಿಗೆ ನೆನೆವನೆ ನಿತ್ಯನು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಸಸಿ ತನ್ನ ಗರ್ಭದೊಳಗಿದ್ದ ಹೂವನ್ನು ಅರಳಿಸಲೇಬೇಕೆಂದು ಪ್ರತಿದಿನ ಬೇರೆ ಬೇರೆಯಾಗಿ ಕಂಡು ಪ್ರೌಢತ್ವಕ್ಕೆ ಬಂದು ಗಿಡವಾಗಿ ಗರ್ಭದೊಳಗಿದ್ದ ಮೊಗ್ಗನ್ನು ಹೊರ ರೆಂಬೆಗೆ ಅಂಟಿಸಿಕೊಂಡು ಹೂವಾಗಿ ತೂಗಾಡುತ್ತ ತನ್ನ ಸೌಂದರ್ಯವನ್ನು ತಾನೇ ಉಣ್ಣುತ್ತದೆ. ಆದರೆ ತಾಯಿ ಗರ್ಭದಿಂದ ಹೊರಬಂದ ಶಿಶುವಿಗೆ ಜ್ಞಾನದ ಹೂವಾಗಿ ಅರಳುವ ಪ್ರೌಢತ್ವ ಬರುವುದೇ ಇಲ್ಲ. ಸಸಿಯಂತೆ ತನು ಕೂಡಾ ಆನಂದದ ಜ್ಞಾನದ ಮರವೆಂದು ಆ ತನುವಿಗೆ ತಿಳಿಯುವುದೇ ಇಲ್ಲ.

ಮನ ಬಯಸಿದಂತೆ ತನು ಗಾಳಿಯಂತೆ ಹರಿದಾಡುತ್ತದೆ. ಏಕೆಂದರೆ ಮನ ಗಾಳಿಯೊಡಗೂಡಿದೆ. ಸುಗಂಧವಾದರೇನು, ದುರ್ಗಂಧವಾದರೇನು? ಗಾಳಿಗೆ ಇವೆರಡೂ ಒಂದೇ. ಅವೆರಡರ ಮೇಲೆ ಹಾದು ಅವೆರಡನ್ನೂ ಹೊತ್ತೊಯ್ಯುತ್ತದೆ. ದುರ್ಗಂಧ ಸುಗಂಧದೊಂದಿಗೆ ಗಾಳಿ ಆರೋಪಕ್ಕೆ ಒಳಗಾಗುತ್ತದೆ. ಹಾಗೆಯೇ ಮನ ತನ್ನ ಸುಖಕ್ಕಾಗಿ ತನುವನ್ನು ವಿಕೃತಗೊಳಿಸುತ್ತದೆ.

ಮನ ತನುವಿಗೆ ಕಾವಿ ಧರಿಸಿ ಪೀಠಾಧಿಪತಿಯನ್ನು, ಸ್ವಾಮಿಯನ್ನು, ಗುರುವನ್ನು ಆಗಿಸುತ್ತದೆ. ಆದರೆ ಅದು ತನುವಿನಲ್ಲಿ ಸಂಗಮವಾದ ಅರಿವಿನ ಸಂಗಮನಾಥನ ಕೆಲಸವಲ್ಲ. ಆತನಿಗೆ ಯಾವ ವೇಷದ ಅಗತ್ಯವೂ ಇಲ್ಲ. ಬಯಲಲ್ಲಿ ಗಾಳಿ ಇದ್ದು, ಗಾಳಿ ಹರಿದಾಡುತ್ತದೆಯೇ ಹೊರತು ಬಯಲಲ್ಲ. ಹಾಗೆಯೇ ತನುವನ್ನು ಆವರಿಸಿದ ಮನ ಗಾಳಿಯೊಡಗೂಡಿ ತನುವಿನೊಂದಿಗೆ ತನುವನ್ನು ವಿಕೃತಗೊಳಿಸಿ ಹರಿದಾಡುತ್ತದೆಯೇ ಹೊರತು ತನುವಿನಲ್ಲಿಯೇ

ಸಂಗಮವಾದ ಅರಿವನ್ನಲ್ಲ. ಅದು ಬಯಲಿನಂತೆ ನಿಶ್ಚಲ!

ಸೈಕಲ್, ಮೋಟರ್ ಸೈಕಲ್, ನಾಲ್ಕು ಚಕ್ರದ ವಾಹನಗಳು ಅವುಗಳ ಗಾಲಿಯೊಂದಿಗೆ ಓಡಾಡುತ್ತವೆ. ಆದರೆ ಎಕ್ಸಲ್ ಅಲ್ಲ. ಎಕ್ಸಲ್ ವಾಹನಕ್ಕೆ ಆಧಾರ. ಅದಿಲ್ಲದೆ ವಾಹನವೇ ಇಲ್ಲ. ವಾಹನ ಓಡುತ್ತದೆ, ಎಕ್ಸಲ್ ಅಲ್ಲ. ಅದರಂತೆಯೇ ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಮನಾಥನೂ ಕೂಡಾ. ವಾಹನ ಜಡ; ಅಂಗ ಚೇತನ! ಅಂಗದಲ್ಲಿ ಸಂಗಮವಾದ ಅರಿವಿನ ಸಂಗಮನಾಥನನ್ನು ಅಂಗವನ್ನು ಆವರಿಸಿದ ಮನದಿಂದಲೇ ತಿಳಿಯಬೇಕು. ಮನ ಆ ಸಂಗಮನಾಥನೇ ತಾನಾಗಬೇಕು. ಆಗ ಅಂಗದಲ್ಲಿ ಅರಿವಿನ ಹೂ ಅರಳುತ್ತದೆ. ಅಂಗ ಅರಿವಿನ ಲಿಂಗವೇ ಆಗುತ್ತದೆ! ಈ ಶಿಕ್ಷಣ ಹೊಂದಿ ಅರಳಿದ ಅಂಗ ಮಾತ್ರ ಮಹಾಲಿಂಗಾಂಗ ವೆಂದೆನ್ನಿಸಿಕೊಳ್ಳುತ್ತದೆ. ಉಳಿದ ಅಂಗಗಳು ಮಂಗನಂತೆ ಸಾಯುತ್ತವೆ. ಲಿಂಗಾಂಗ ವೆನ್ನಿಸಿಕೊಳ್ಳುವುದೇ ಇಲ್ಲ. ಅಂಗದ ಸುಖ ಅಂಗಕ್ಕೆ ದೊರೆಯುವುದೇ ಇಲ್ಲವೆಂದು ಅಪ್ಪಣ್ಣ ಶರಣರು ಸಾರಿದ್ದಾರೆ.

ಅಂಗದ ಶಿಕ್ಷಣ ಅಂಗಕ್ಕೆ ದೊರೆತ ಅಂಗ ಅಂಗವಲ್ಲ. ಅದು ಮಹಾಲಿಂಗ! ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲಿಯೂ ಅಂಗದ ಅರಿವಿನ ಪರಿಮಳ ಹರಿದಾಡುತ್ತಲೇ ಇರುತ್ತದೆ. ಅರಳಿದ ಹೂವಿಗೆ ಇರುಳಾದರೇನು ಹಗಲಾದರೇನು ಅದನ್ನು ಹೊತ್ತ ಸಸಿ ಮಲಗಿ ನಿದ್ರಿಸಿದರೇನು? ಎಚ್ಚತ್ತರೇನು? ಸಸಿ ಬಿಟ್ಟ ಹೂವಿನ ಪರಿಮಳವಂತು ಸದಾ ಸೂಸುತ್ತದೆ. ಹಾಗೆಯೇ ತನು ಕೂಡಾ. ಮನ ಅರಿವಿನೊಂದಿಗೆ ಸಂಬಂಧ ಏರ್ಪಟ್ಟ ಬಳಿಕ ತನು ಸದಾ ಮಹಾಜ್ಞಾನದ ಆನಂದದಿಂದ ಅರಳಿ ಅದರ ಪರಿಮಳ ದಶದಿಕ್ಕುಗಳಿಗೂ ಹರಡುತ್ತದೆ. ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲಿ ಕೂಡಾ!

170

ಮರ್ತ್ಯದಲ್ಲಿ ಹುಟ್ಟಿ, ಕಂಗಳ ಮುಂದಣ ಕತ್ತಲೆಯ ಕಳೆಯದೆ,
ನಾವು ಗುರು ಜಂಗಮ, ನಾವು ಭಕ್ತರು ಎಂಬ ನುಡಿಗೆ ಏಕೆ ನಾಚರೊ?
ಭಕ್ತನಾದರೆ, ಸತ್ತು ಚಿತ್ತಾನಂದವನೊತ್ತಿ ಮೆಟ್ಟಿ,
ತತ್ವಮಸಿವಾಕ್ಯವೆಂದು ಕಂಡು ಬಿಟ್ಟು,
ಲಿಂಗದ ಗೊತ್ತುವಿಡಿದು, ಹಿಂದೆ ಹರಿದು, ಗುರುವಿನ ಗೊತ್ತನರಿದು,
ಜಗದೊಳಗಣ ಗುಂಗುದಿಯನೆಲ್ಲವ ಹರಿದು, ಜಂಗಮದ ಗೊತ್ತನರಿದು,
ಮುಂದಣ ಮುಕ್ತಿ ಎಂಬುದ ಮರೆದು,
ಎಂತಿರ್ದಂತೆ ಬ್ರಹ್ಮವು ತಾನೆ ಎಂಬುದನರಿದು,
ಪರಿಣಾಮದಲ್ಲಿ ಪರವಶನಾಗಿ ನಿಂದು,
ಮತ್ತೆ ಆರನೆಣಿಸಲಿಲ್ಲ, ಮೂರು ಮುಟ್ಟಲಿಲ್ಲ, ಬೇರೊಂದುಂಟೆನನಲಿಲ್ಲ,
ಬಸವಪ್ರಿಯ ಕೂಡಲಚೆನ್ನಬಸವಣ್ಣನಿಗೆ ಸೂರೆಹೋದ ಶರಣನು.

ಕಣ್ಣ ಮುಂದಿನ ಅಜ್ಞಾನದ ಕತ್ತಲನ್ನು ಕಳೆದುಕೊಂಡು ಜ್ಞಾನದಿಂದ ನೋಡಲು ಮನುಷ್ಯನಿಗೆ ಮಾತ್ರ ಬರುತ್ತದೆ. ಮತ್ತಾವ ಪ್ರಾಣಿಗೂ ಬರುವುದಿಲ್ಲ. ಹಾಗೆ ನೋಡುವ ಅರಿವಿನ ಮನುಷ್ಯನೆ ಗುರುವೆಂಬ ತಂತ್ರಜ್ಞಾನಿ. ಹಾಗೆ ನೋಡುವ ಅರಿವಿನ ಮನುಷ್ಯನೆ ಜಂಗಮ ಎಂಬ ತಂತ್ರಜ್ಞಾನಿ; ಭಕ್ತನೆಂಬ ತಂತ್ರಜ್ಞಾನಿ, ಇವನಿಗೆ ಆಯಾ ವೇಷದ ಅವಶ್ಯಕತೆಯಿಲ್ಲ.

ಅರಿವೇ ಗುರು. ಆ ಗುರುದೇವನೇ ಮಹಾದೇವ. ಆ ಮಹಾದೇವನೇ ಸದಾಶಿವ. ಆ ಸದಾಶಿವನೇ ಸಾಕ್ಷಾತ್ ಪರಬ್ರಹ್ಮ. ಮನ, ತನುವಿಗೆ ಹಾಕಿದ ಸಕಲ ವೇಷಗಳನ್ನು ಕಳಚಿಕೊಂಡು ಅರಿವಿಗೆ ಶರಣು ಹೋಗಿ ಭಕ್ತಿ ಮಾಡುವುದೇ ಭಕ್ತನ ತನು. ಭಕ್ತ, ಅರಿವಿಗೆ ಮೊರೆ ಹೋಗಿ ಆ ಅರಿವು ತಾನಾಗುವುದೇ ಗುರು. ಭಕ್ತ, ಅರಿವೆಂಬ ಗುರುವಿನ ಬೋಧೆಯನು ಆಲಿಸಿ ತನುವಿಗೆ ಎದುರಾದ ಅಜ್ಞಾನವನು ಅರಿವಿನಿಂದ ಕತ್ತರಿಸುವುದೇ ಜಂಗಮ.

ಈ ಮೂರೂ ಒಂದೇ ತನುವಿನ ಮೂರು ಅರಿವಿನ ತಂತ್ರಜ್ಞಾನಗಳು. ಮನ, ಇಂತಹ ತಂತ್ರಜ್ಞಾನವನ್ನು ಅರಿತು ಅರಿವಿನ ಸುಖ ಉಣ್ಣುವುದೇ ಘನಮನ. ಆದರೆ ಮನ, ಇದಾವುದರ ಗೋಜಿಗೆ ಹೋಗದೆ ತನುವಿಗೆ ಭಕ್ತನ ವೇಷ ಧರಿಸಿ ಭಕ್ತನಂತೆ ಮಾತನಾಡುವುದು; ಗುರುವಿನ ವೇಷ ಧರಿಸಿ ಗುರುವಿನಂತೆ ಮಾತನಾಡುವುದು; ತನುವಿಗೆ ಜಂಗಮನ ವೇಷ ಧರಿಸಿ ಜಂಗಮನಂತೆ ಮಾತನಾಡಿ ಸುಖಪಡುವುದು. ಮನಕ್ಕೆ ಇದು ವೇಷವೆಂದು ವೇದ್ಯವಾದರೂ ವೇಷವನ್ನು ಬಿಡದೆ ತನಗೆ ತಾನೇ ಮೋಸ ಮಾಡಿಕೊಳ್ಳುವುದು; ತನುವಿಗೂ ಮೋಸ ಮಾಡುವುದು. ಅರಿವಿನ ಸುಖ ತನು ಮನಗಳೆರಡಕ್ಕೂ ದಕ್ಕದೇ ಹೋಗುವುದು.

ಮನ ಭಕ್ತನಾದರೆ ತನುವಿನಲ್ಲಿ ತನ್ಮಯವಾದ ಸತ್‌ಚಿತ್ ಆನಂದವನ್ನು ಸವಿಯಬೇಕು. ತನುವಿನ ತತ್ವವನು ಅರಿತು ಆ ತತ್ವವೇ ತಾನಾಗಬೇಕು. ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಲಿಂಗದ ಗೊತ್ತ ಹಿಡಿದು ಲಿಂಗಾಂಗವಾಗಬೇಕು. ಹಿಂದಣ ಅಜ್ಞಾನವೆಲ್ಲವ ಹರಿದು ಭಕ್ತ, ಗುರು, ಲಿಂಗ, ಜಂಗಮವನು ಅರಿಯಬೇಕು. ಮುಕ್ತಿ ಎಂಬುದನು ಮರೆತು ಭ್ರಮೆ ಕಳಚಿಕೊಂಡು ಬ್ರಹ್ಮನಾಗಬೇಕು. ಶರಣು ಹೋಗಿ ಶಿವ ಶರಣನೇ ತಾನಾಗಬೇಕು.

171

ಮರ್ತ್ಯಲೋಕದ ಮಹಾಗಣಂಗಳು ನೀವು ಕೇಳಿರಯ್ಯಾ.
ಅದೇನು ಕಾರಣವೆಂದರೆ,
ಗುರುವೆನ್ನದು, ಲಿಂಗವೆನ್ನದು, ಜಂಗಮವೆನ್ನದು, ಪ್ರಸಾದವೆನ್ನದು.
ಈ ಚತುರ್ವಿಧವು ಎನ್ನದಾದ ಕಾರಣದಿಂದ,
ಇದರ ಹಾನಿ ವೃದ್ಧಿ ಎನ್ನದಾದ ಕಾರಣದಿಂದ,
ಕಂಡುದ ನುಡಿವನಲ್ಲದೆ, ಜಗದಂತೆ ಮಿಥ್ಯಾಳಾಪವಾಗಿ ನುಡಿವನಲ್ಲ.
ಮುಂದೆ ಸತ್ತುಗಿತ್ತು ಹುಟ್ಟುವನಲ್ಲ.
ಮುಂದೆ ಹೊತ್ತುದ ಹುಸಿಮಾಡಿ, ಮತ್ತೊಂದ ದಿಟ ಮಾಡುವನಲ್ಲ.
ಅದನೇನು ಕಂಡವರು ಕಂಡಂತೆ ನುಡಿವರು.
ಉಂಡವರು ಉಂಡಂತೆ ತೇಗುವರು ಎಂಬುದ ನೀವು ಅರಿದುಕೊಳ್ಳಿ.
ಪಂಚಾಚಾರಕ್ಕೊಳಗಾದ ಶಿವ ಭಕ್ತರು ಎಮ್ಮಲ್ಲಿ ಹಿಂಚುಮುಂಚು ನೋಡಬೇಡ.
ನಿಮ್ಮ ಪ್ರಪಂಚನೆಯ ಹರಿದುಕೊಂಡು,
ನಿಮ್ಮಲ್ಲಿರ್ದ ಭವಿಗಳನೆ ಭಕ್ತರ ಮಾಡಿ ವಿವರಿಸಿ ನೋಡಲಾಗಿ,
ನಾ ನೀನೆಂಬುವದಕ್ಕಿಲ್ಲ.
ಆ ಉಭಯದ ಗೊತ್ತ ಮೆಟ್ಟಲಾಗಿ, ಭಕ್ತ ಜಂಗಮ ಒಂದೇ ಅಂಗ.

ಅದಕ್ಕೆ ನಿಶ್ಚಿಂತ ನಿಜೈಕ್ಯವು.
ಆ ನಿಲುವಿಂಗೆ ನಮೋ ನಮೋ ಎನುತಿರ್ದೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಗುರು ಲಿಂಗ ಜಂಗಮ ಪ್ರಸಾದ ಇದು ಬೇರೆ ಬೇರೆ ಅಲ್ಲ. ಈ ಚತುರ್ವಿಧವೂ ತಾನೇ. ಇದರ ಹಾನಿ ವೃದ್ಧಿಯೂ ತನ್ನದೇ. ಈ ಚತುರ್ವಿಧವನ್ನೂ ತನ್ನಂಗದಲ್ಲಿಯೇ ಕಂಡ ಶರಣ ಮಿಥ್ಯ ನುಡಿಯುವುದಿಲ್ಲ. ಸತ್ತು ಹುಟ್ಟುವುದಿಲ್ಲ. ಒಂದು ಸುಳ್ಳು ಮತ್ತೊಂದು ದಿಟವೆಂದು ಹೇಳುವವನಲ್ಲ. ಜಗದ ಸರ್ವಾಂಗಗಳನ್ನು ಲಿಂಗದಂತೆಯೇ ಕಾಣುವನು. ಕಂಡುದನು ಕಂಡಂತೆ ನುಡಿವನು.

ಸಕಲ ತನುಗಳಲ್ಲಿ ಗುರು ಲಿಂಗ ಜಂಗಮ ಪ್ರಸಾದವನೇ ಕಾಣುವನು. ಕಂಡುದನು ಕಂಡಂತೆ ಉಂಡು, ಉಂಡುದನು ಉಂಡಂತೆ ತೇಗುವನು. ಲೋಕ ಸುಳ್ಳು ಉಂಡು ಸುಳ್ಳನೇ ತೇಗುವುದು. ಶರಣ ಸತ್ಯವನೇ ಉಂಡು ಸತ್ಯವನೇ ತೇಗುವನು.

ಪಂಚಾಚಾರಕ್ಕೆ ಒಳಗಾದ ಶಿವಭಕ್ತರೇ ಬೇರೆ. ನಿಜವನು ಕಂಡು ನಿಜವನೇ ನುಡಿ ಯುವ ಶರಣನೇ ಬೇರೆ. ಅರಿವಿನಿಂದ ನೋಡಲು ಹೋದರೆ ಭವಿಯ ಅಂಗವು ಅರಿವಿನ ಲಿಂಗವೇ ಭಕ್ತನ ಅಂಗವೂ ಅರಿವಿನ ಲಿಂಗವೇ ಆಗಿದೆ.

ಅಂಗವು ಒಂದೇ, ಅದರಲ್ಲಿ ಸಂಗಮವಾದ ಪದಾರ್ಥಗಳು ಒಂದೇ, ಅರಿವೂ ಒಂದೇ ಅಂಗವನ್ನು ಆವರಿಸಿದ ಮನ ಒಂದೇ ಆಗಿರುವಾಗ ಬೇರ್ಪಡಿಸಿ ಭವಿ ಎನ್ನಲು ಬರುವುದಿಲ್ಲ, ಭಕ್ತ, ಜಂಗಮ, ಲಿಂಗ, ಪ್ರಸಾದಿ, ಗುರು, ಶಿಷ್ಯ ಎನ್ನಲೂ ಬರುವುದಿಲ್ಲ. ನಾ ನೀನೆನ್ನಲೂ ಬಾರದಂತೆ ಅಂಗ ಅರಿವಿನ ಭಂಡಾರವೇ ಆಗಿರುವ ನಿಶ್ಚಿಂತ ನಿಜೈಕ್ಯವಾಗಿದೆ.

ಅಂಗ ಯಾವ ದೇಶದ್ದಾದರೇನು? ಅರಿವಿನ ಲಿಂಗಾಂಗವೇ ಆಗಿದೆ. ಲಿಂಗ ಮಧ್ಯೇ ಜಗತ್ ಸರ್ವಂ ಎನ್ನುವಂತೆ ಅರಿವಿನ ಲಿಂಗಾಂಗದ ನಿಶ್ಚಿಂತ ನಿಲುವಿಂಗೆ ನಮೋ ನಮೋ ಎನುತಿರ್ದೆ ಎಂದು ಲಿಂಗಾಂಗವನ್ನು ಕೊಂಡಾಡಿದ್ದಾರೆ ಅಪ್ಪಣ್ಣ ಶರಣರು.

172

ಮರದೊಳಗಳ ಕಿಚ್ಚು ಮರನ ಸುಡುತ್ತಿದ್ದಿತ್ತಯ್ಯಾ.
ಮರ ಬೆಂದು ನಿಂದುರಿಯಿತ್ತು,
ಮಣ್ಣು ಜರಿದು ಬಿದ್ದಿತ್ತು, ಉರಿ ಹೋಗಿ ನಂದಿತ್ತು.
ಸ್ವಯಂ ಪ್ರಕಾಶವಾಗಿಪ್ಪ ಎಲೆ ಉಳಿಯಿತ್ತು.
ಉರಿ ಬಂದು ಎನ್ನ ಕರಸ್ಥಲದಲ್ಲಿ ಅಡಗಿತ್ತು.
ಇದ ಕಂಡು ನಾ ಬೆರಗಾಗಿ ನೋಡುತಿರ್ದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಅಂಗ ಅದೊಂದು ಅರಿವಿನ ಮಂತ್ರ ದಂಡವೂ ಹೌದು; ಜ್ಞಾನದ ಬೋಧೀ ವೃಕ್ಷವೂ ಹೌದು. ಕಿಚ್ಚು, ನೀರು, ಮಣ್ಣು, ಗಾಳಿ ಮತ್ತು ಬಯಲೆಂಬ ಐವರ ಸಂಗದಿಂದ ಹುಟ್ಟಿದ ಮರ ಐವರನ್ನೂ ತನ್ನ ಗರ್ಭದಲ್ಲಿಯೇ ಅಡಗಿಸಿಕೊಂಡಿದೆ. ಐವರಿಂದ ಹುಟ್ಟಿ, ಐವರಿಂದಲೇ ಬೆಳೆದು ಐವರ ಮೂಲಕವೇ ನಷ್ಟವಾಗಿ ಐವರಲ್ಲಿ ಒಂದಾಗಿ ಬಯಲಾಗುತ್ತದೆ.

ಮರದೊಳಗಣ ಕಿಚ್ಚು ಮರವನ್ನು ಬೆಳಗಿ, ಮರವನ್ನೇ ಸುಸುತ್ತದೆ. ಮರ ಸುಟ್ಟು, ಮಣ್ಣು ಜರಿದು, ಉರಿ ನಂದಿ, ಸ್ವಯಂಪ್ರಕಾಶವಾಗಿ ಎಲೆ ಮಾತ್ರ ಉಳಿಯುತ್ತದೆ.

ಸ್ವಯಂ ಪ್ರಕಾಶವಾಗಿಪ್ಪ ಎಲೆ ಉಳಿಯಿತ್ತು. ಉರಿ ಬಂದು ಎನ್ನ ಕರಸ್ಥಲದಲ್ಲಿ ಅಡಗಿತ್ತು:

ಜಲಬಿಂದು ಗರ್ಭಹೊಕ್ಕು ಜೀವವುಳ್ಳ ತನುವಾಗಿ ಹೊರಬಂದು ಬೆಳಗುತ್ತದೆ. ಬೆಳಗುವ ಅಂಗದಲ್ಲಿ ಗಾಳಿ ನೀರು ಮಣ್ಣು ಬೆಂಕಿ ಬಯಲು ಸಂಗಮವಾಗಿವೆ. ನಾಲ್ಕು ಭೂತಗಳು ಬಯಲಲ್ಲೇ ಸಂಗಮವಾಗಿವೆ. ಬಯಲು ಮಾತ್ರ ಗಾಳಿ ನೀರು ಮಣ್ಣು ಬೆಂಕಿಯನ್ನು ತನ್ನ ಗರ್ಭದಲ್ಲಿಟ್ಟುಕೊಂಡು ತಾನು ಕಾಣದಂತೆ ಅವುಗಳನ್ನು ಮಾತ್ರ ತೋರಗೊಟ್ಟಿದೆ. ಬಯಲಿಗೆ ಸಾಕಾದಾಗ ತನ್ನ ಗರ್ಭದಲ್ಲಿದ್ದ ನಾಲ್ಕೂ ಭೂತಗಳನ್ನು ತನ್ನಂತೆ ಬಯಲು ಮಾಡಿ ತಾನೊಂದೆ ಉಳಿಯುತ್ತದೆ.

ಜಲದಲ್ಲಿ ಆಮ್ಲಜನಕವೂ ಇದೆ ; ಉರಿಯುವ ಜಲಜನಕವೂ ಇದೆ. ಆಮ್ಲಜನಕ ಜಲಜನಕಗಳೆರಡೂ ಬಯಲ ಗರ್ಭದಲ್ಲಿ ಸಂಗಮವಾಗಿವೆ. ಬಯಲು ತನಗಿಷ್ಟವಾದಾಗ ಅವರೆಡನ್ನೂ ಕೂಡಿಸಿ ತಾನು ಅದರಲ್ಲಿ ಕೂಡಿ ಜಲವಾಗುತ್ತದೆ; ಜೀವಜಲಬಿಂದುವಾಗುತ್ತದೆ. ಆ ಜಲವೇ ಕಲ್ಲು ಮಣ್ಣು ಭೂಮಿ ಖನಿಜವಾಗುತ್ತದೆ. ಬೆಂಕಿಯಾಗಿ ದಗದಗನೆ ಉರಿಯುತ್ತದೆ. ಬಯಲು ಇವೆಲ್ಲವುಗಳನ್ನು ಇಲ್ಲವಾಗಿಸಿ ತಾನೊಂದೆ ಉಳಿಯುತ್ತದೆ.

ಬಯಲು ಜಲವಾಗಿ, ಜೀವ ಜಲವಾಗಿ, ಜೀವಿ ಪ್ರಾಣಿಗಳಾಗಿ, ಭೂಮಿ, ಹೇಮವಾಗಿ ಕಂಡರೇನು? ಇವೆಲ್ಲವುಗಳ ಜನನ ಬಯಲಿಂದಲ್ಲವೆ? ಬಯಲು ಬಿತ್ತಿತ್ತು; ಬಯಲು ಬಯಲನೇ ಬೆಳೆಯಿತು. ಬಯಲು ಬಯಲಾಗಿ ಬಯಲಾಯಿತ್ತು. ಬಯಲು ಜೀವನ ಬಯಲು ಭಾವನೆ ಬಯಲು ಬಯಲಾಗಿ ಬಯಲಾಯಿತ್ತು. ಬಯಲನ್ನು ತಿಳಿದತನು ಬಯಲಾಗುವ ಮುನ್ನ ಬಯಲನ್ನು ಬಯಲಾಗಿಯೇ ಪೂಜಿಸಿತ್ತು. ಆ ಬಯಲನ್ನೇ ನಂಬಿದ ತನು ತನು ಇರುವಾಗಲೇ ಬಯಲಾಗಿ ಸ್ವಯಂ ಪ್ರಕಾಶವಾಗಿ ಹಸಿರೆಲೆಯಾಗಿ ಉಳಿಯಿತ್ತು. ಉರಿ ಬಂದು ತನುವಿನಲ್ಲಿ ಅಡಗಿತ್ತು. ಅಂಗ ಅರಿವಿನ ಬೋಧೀಮರವಾಗಿ ಜ್ಞಾನದ ಮರವಾಗಿ ತೋರಿತ್ತು.

173

ಮರೆದರೆ ಮಾಯೆ, ಅರಿದರೆ ಮಾಯೆ ಇಲ್ಲ.
ಅರಿವು ಮರೆವೆ ಎರಡ ನೂಂಕಿ ನಿಂದರೆ,
ಮುಂದೆ ಕಣ್ಣು ತೆರಪಾಗಿ ತೋರುವ ಬಯಲೆ ಲಿಂಗದ ಬೆಳಗು.
ಆ ಲಿಂಗದ ಬೆಳಗೆ ನೆಮ್ಮುಗೆಯಾದರೆ ಲಿಂಗೈಕ್ಯವು.
ನಿಶ್ಚಿಂತದಲ್ಲಿ ಲೀಯವಾದರೆ, ನಿರವಲಯವು.
ಇದೀಗ ನಮ್ಮ ಮುನ್ನಿನ ಆದ್ಯರ ನಡೆನುಡಿ.
ಇದನರಿಯದೆ ವೇದ ಪುರಾಣ ಶಾಸ್ತ್ರ ಆಗಮ ಇವನೊಂದನು.
ಓದದರೆ ಹಾಡಿದರೆ ಕೇಳಿದರೆ ಕಾಯ ವಾಯುವೆಂದರು,
ನಮ್ಮ ಕೂಡಲಚೆನ್ನಬಸವಣ್ಣಾ.

ವಾರಿಕಲ್ಲ ಕೊಡನ ತುಂಬ ಮುತ್ತು ಮಾಣಿಕ್ಯವ ತುಂಬಿ, ಎತ್ತುವರಿಲ್ಲದೆ ಸಖಿಯನರಸುತಿಪ್ಪೆ. ತನುವಿನ ಮನದಲ್ಲಿ, ಮನದ ಆ ತನುವಿನಲ್ಲಿ, ಮನ ಮೇರೆದಪ್ಪಿ ತನಗೆ

ತಾನೇ ಎತ್ತಿಕೊಂಡರೆ ಉಕ್ಕಿ ಹರಿದಿತ್ತಾ ಅಜಗಣ್ಣನ ಭಾವ ಎಂದು ಮಸರಕಲ್ಲಿನ ಮುಕ್ತಾಯಕ್ಕ ಸುಂದರವಾದ ಸೂತ್ರ ರಚಿಸಿದ್ದಾಳೆ.

ಜೀವಜಲ ಬಿಂದು ಗರ್ಭದಲ್ಲಿ ಹೊಕ್ಕು ಆ ಜಲಬಿಂದುವೇ ರಕ್ತವಾಯಿತು. ಮೂಳೆ ಮಾಂಸ ಮಜ್ಜೆ ಮೇದಸ್ಸು ಆಯಿತು. ಆ ಜಲಬಿಂದುವೇ ಚರ್ಮದ ಕವಚವಾಗಿ ನಖ ಶಿಖೆಗಳು ಹುಟ್ಟಿ; ಜಲವೇ ಅಂಗವಾಗಿ ಗರ್ಭದಿಂದ ಹೊರ ಬಂದಿತು. ಅಂದ ಮೇಲೆ ಅಂಗ ವಾರಿಕಲ್ಲ ಕೊಡನಲ್ಲವೆ? ಈ ಕೊಡದ ತುಂಬ ಅರಿವಿನ ಮುತ್ತು ಮಾಣಿಕ್ಯಗಳೇ ತುಂಬಿ ಅಂಗ ಅರಿವಿನಿಂದ ಬೆಳಗುತ್ತಿಲ್ಲವೆ? ಅಂಗ ಅಂಗವನ್ನೇ ಅರಿಯದೆ,ಮರೆವಿನಿಂದಾಗಿ ಅಂಗ ಮತ್ತೊಂದು ಅಂಗವನ್ನು ಅರಿಯುವುದಕ್ಕಾಗಿ ಹುಡುಕುತ್ತದೆ. ಇದೊಂದು ಸೋಜಿಗ. ಅರಿತ ಅಂಗವಾದರೇನು ಅರಿವನು ಮರೆತ ಅಂಗವಾದರೇನು ಎರಡೂ ಅಂಗಗಳಲ್ಲವೆ? ಎರಡೂ ಅಂಗಗಳಲ್ಲಿ ಮುತ್ತು ಮಾಣಿಕ್ಯಗಳು ತುಂಬಿಲ್ಲವೆ? ಒಂದು ಅರಿತಿದೆ ಮತ್ತೊಂದು ಅರಿಯುಯುವುದನ್ನು ಮರೆತಿದೆ. ಎರಡೂ ಅಂಗಗಳಲ್ಲಿ ಅರಿವು ಭರಿತವಾಗಿದೆ.

ಪ್ರಣತಿಯಿದೆ, ಎಣ್ಣೆಯಿದೆ, ಬತ್ತಿಯಿದೆ. ಬೆಳಗುವ ಜ್ಯೋತಿ ಬತ್ತಿಯಲ್ಲಿ ಸುಪ್ತವಾಗಿದೆ. ಬೆಳಗುತ್ತಿರುವ ಪ್ರಣತಿಯ ಬತ್ತಿ ಚುಂಬಿಸಿದರೆ ಬೆಳಗಿದಂತಾಯಿತೆ? ಎರಡೂ ಪ್ರಕಾಶಗಳೂ ಒಂದಲ್ಲವೆ? ಬೆಳಗಿನೊಳು ಬೆಳಗು ಕೂಡಿ ಬೆಳಗಾ ಗಲಿಲ್ಲವೆ? ನಾನು ಬೆಳಗಿದೆನೆಂದು ಬೀಗಲಿಲ್ಲ. ನಾನು ಬೆಳಗಿಸಿಕೊಂಡೆನೆಂದು ಕುಬ್ಜನಾಗಲಿಲ್ಲ. ಒಂದು ಬೆಳಗುತ್ತಿತ್ತು. ಮತ್ತೊಂದು ಬೆಳಗುವುದನ್ನು ಮರೆತಿತ್ತು ಅಷ್ಟೆ.

ವೇದ ಪುರಾಣ ಆಗಮ ಶಾಸ್ತ್ರಗಳೆಲ್ಲ ಅಂಗದಿಂದ ಹೊರಬಂದ ಮುತ್ತು ರತ್ನಗಳು. ಏನಿದ್ದರೂ ಇವು ಅಂಗದಿಂದಲೇ ಹೊರಬಂದವುಗಳೇ ಆಗಿವೆ. ವೇದ ಪುರಾಣ ಆಗಮ ಶಾಸ್ತ್ರಗಳು ಅಂಗವನ್ನು ಬೆಳಗಲು ಸಾಧ್ಯವೇ? ಶಬ್ದದಿಂದ ಹುಟ್ಟಿ ಗಾಳಿಯಲ್ಲಿ ತೇಲಿ ಮರೆಯಾಗುವ ಶಾಸ್ತ್ರಗಳನು ಓದಿದರೆ ಕೇಳಿದರೆ ಹಾಡಿದರೆ ಅದು ವಾಯುಕಾಯವೆಂದರು. ಕಾಯದಲ್ಲಿಯೇ ಕೈಲಾಸವಡಗಿದೆ. ಪ್ರತಿಯೊಂದು ಕಾಯವೂ ಕೈಲಾಸವೇ. ಕೈಲಾಸವನ್ನು ಅರಿತ ಕಾಯ, ಮರೆತ ಕಾಯ ಎನ್ನಬಹುದೇ ಹೊರತು ಮತ್ತೇನೂ ಅಲ್ಲ.

174

ಮಹಾಘನ ನೆಲೆಗೊಂಡಿಪ್ಪ ಶರಣನ ನೆಲೆ ಎಂತಿಪ್ಪದೆಂದರೆ,
ನೆಲದ ಮರೆಯ ನಿಧಾನದಂತೆ, ತಿಲದ ಮರೆಯ ತೈಲದಂತೆ,
ಮುಗಿಲ ಮರೆಯ ಮಿಂಚಿನಂತೆ,ನೀರೊಳಗಣ ಕಿಚ್ಚಿನಂತೆ,
ಕಾಷ್ಠದೊಳಗಣ ಅಗ್ನಿಯಂತೆ, ತೃಣದೊಳಗಣ ಚೈತನ್ಯದಂತೆ,
ಈ ವಿಶ್ವದೊಳು ಇದ್ದೂ ಇಲ್ಲದಂತಿಪ್ಪ ಮಹಾಘನವ-
ನಿಮ್ಮ ಶರಣರು ಬಲ್ಲರಲ್ಲದೆ,
ಮರ್ತ್ಯದ ಮರಣ ಬಾಧೆಗೊಳಗಾದ ಮನುಜರೆತ್ತ ಬಲ್ಲರು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಸಕಲ ಅಂಗಗಳಲ್ಲಿ ಮಹಾಘನವೆಂಬ ಅರಿವಿನ ಲಿಂಗವು ಸಂಗಮವಾಗಿದೆ. ಆ ಅರಿವಿಗೆ

ಶರಣು ಹೋದ ಶರಣನು ಮಾತ್ರ ಬಲ್ಲನಲ್ಲದೆ ಮರ್ತ್ಯದ ಮರಣ ಬಾಧೆಗೊಳಗಾದ ಮನುಜರೆತ್ತ ಬಲ್ಲರು ಎಂದು ಅಪ್ಪಣ್ಣ ಶರಣರು ಪ್ರಶ್ನಿಸಿದ್ದಾರೆ.

ಅಂಗದಲ್ಲಿಯೇ ಸಂಗಮವಾದ ಮಹಾಘನವನು ಕಂಡುಕೊಂಡ ಶರಣನು ನೆಲದ ಮರೆಯ ನಿಧಾನದಂತೆ ಇರುವನು. ತಿಲದ ಮರೆಯ ತೈಲದಂತೆ ಇರುವನು, ಮುಗಿಲ ಮರೆಯ ಮಿಂಚಿನಂತೆ ಇರುವನು. ನೀರೊಳಗಣ ಕಿಚ್ಚಿನಂತೆ ಇರುವನು. ಕಾಷ್ಠದೊಳಗಣ ಅಗ್ನಿಯಂತೆ ಇರುವನು. ತೃಣದೊಳಡಗಿದ ಚೈತನ್ಯದಂತೆ ಈ ವಿಶ್ವದೊಳು ಇದ್ದೂ ಇಲ್ಲದಂತೆ ಇರುವನು. ಆತ ಮಾತ್ರ ತನುವಿನಲ್ಲಿ ತನ್ಮಯವಾದ ಸತ್ಯ ಬಲ್ಲನಲ್ಲದೆ ಮರ್ತ್ಯದ ಮರಣ ಬಾಧೆಗೆ ಒಳಗಾದ ಮನುಜರಿಗೆ ಗೊತ್ತಾಗುವುದೇ ಇಲ್ಲ.

ಶರಣರ ಈ ಶಿಕ್ಷಣ ಶಾಲಾ ಕಾಲೇಜುಗಳಲ್ಲಿ ಜಾರಿಗೆ ಬಂದರೆ ಸಕಲ ತನುಗಳ ಗಮನಕ್ಕೂ ಬಯಕೆಯಾಗುವುದು. ಮನಕ್ಕೆ ತನುವಿನಲ್ಲಿಯೇ ತನ್ಮಯವಾದ ಮಹಾಘನವನು ಪಡೆಯಬೇಕೆಂದು ಬಯಕೆಯಾದರೆ ಸಾಕು; ಇಂದಲ್ಲ ನಾಳೆ ಒಟ್ಟಾರೆ ತನು ಇರುವುದರೊಳಗಾಗಿ ತನುವಿನ ಗಮನಕ್ಕೆ ಬಂದು ಕುಣಿಕುಣಿದಾಡುವುವುದು.

175

ಮಾತನರಿದವಂಗೆ ಮಥನದ ಹಂಗೇಕೊ?
ತೀರ್ಥವನರಿದವಂಗೆ ತೀರ್ಥದ ಹಂಗೇಕೊ?
ಪರಮಾತು ಮನವನರಿದವಂಗೆ ಪ್ರಸಾದದ ಹಂಗೇಕೊ?
ಜ್ಯೋತಿಯನರಿದವಂಗೆ ಕತ್ತಲೆಯ ಹಂಗೇಕೊ?
ಲೋಕವನರಿದವಂಗೆ ವ್ಯಾಕುಲದ ಹಂಗೇಕೊ?
ಈ ತೆರನರಿದವಂಗೆ ಮುಂದಾವ ಭೀತಿಯುಂಟು ಹೇಳಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಮಾತನರಿದವಂಗೆ ಮಥನದ ಹಂಗೇಕೊ?:

ಮಾತಿನಲ್ಲಿ ಸುಖವಿಲ್ಲ ದುಖವಿಲ್ಲ. ಮಾತಿನಲ್ಲಿ ಅರಿವು ಮಾತ್ರ ಇದೆ. ಮಾತನರಿತವ ನುರಿತ ಮಾತನಾಡುತ್ತಾನೆ. ಆ ಮಾತು ಮಾತಲ್ಲ; ಮಾತಲ್ಲದ ಮಾತು. ಮಾತನಳಿಯುವ ಮಾತು. ಮಾತಿನಲ್ಲಿ ಸುಖ ದುಃಖ ಜೋಡಣೆ ಮಾಡಿದರೆ ಆ ಮಾತು ಆಡಿದ ತನುವಿಗೂ ಕೇಳಿದ ತನುವಿಗೂ ಸುಖ ದುಃಖ ಸಿಟ್ಟು ಕ್ರೌರ್ಯ ಉಂಟು ಮಾಡುತ್ತದೆ. ಮಾತನರಿತವ ಮಾತ್ರ ಮಥನಕ್ಕುಂಟಾಗುವುದಿಲ್ಲ. ಕೇಳುಗನ ತನುವನ್ನೂ ಅರಳಿಸಬಲ್ಲ. ತಾನು ಸಹಜಕ್ಕಾಗಿ ಇರಬಲ್ಲ.

ತನುಗಳು ಮಾತು ಕಲಿತಿಲ್ಲವೆ ಹೇಗೆ ಎಂದು ಕೇಳಿದರೆ ಮಾತನರಿತವ ಮಾತ್ರ ಈ ಪ್ರಶ್ನೆಗೆ ಉತ್ತರಿಸಬಲ್ಲ. ಜಗದ ತನುಗಳು ಆಡುವ ಮಾತುಗಳು ಮಾತಲ್ಲ. ಆ ಮಾತುಗಳಲ್ಲಿ ನಂಜು ಬೆರೆತಿದೆ. ನಂಜಿನಿಂದ ಆಡಿದ ಮಾತನ್ನು ಕೇಳುಗ ನಂಜಿನಿಂದಲೇ ಕೇಳುತ್ತಾನೆ. ನಂಜು ಕಳೆದು ಮಾತು ಕೇಳುವ ಶಕ್ತಿ ಮಾತನರಿಯದವನಿಗೆ ಇಲ್ಲ. ಮಾತನರಿತವ ಮಾತ್ರ ಮಾತಿನಲ್ಲಿ ಬೆರೆತ ನಂಜನುಂಡು ಮಾತನು ನಪುಂಸಕ ಮಾಡಿ ಅರಿವಿನಿಂದ ಸಹಜವಾಗಿ ಕೇಳಬಲ್ಲ. ಇಂತಹ ಮಾತನರಿತ ಮಹಾನುಭಾವನನ್ನು ಜ್ಞಾನಿಗಳು ನಿಃಶಬ್ದವೇದಿ ಎಂದು ಕರೆಯುತ್ತಾರೆ. ಈತನಿಗೆ ಯಾರ ಮಾತಿನ

ಹಂಗೂ ಇಲ್ಲ. ಜ್ಞಾನಿಗಳು ಗಂಗಾಧರನೆಂದು ಹೆಸರಿಟ್ಟು ಕರೆದಿದ್ದಾರೆ. ಗಂಗೆಯನ್ನೇ ಧರಿಸಿದ ಅಂಗಕ್ಕೆ ಗಂಗಾಜಲದ ಅವಶ್ಯಕತೆಯಿದೆಯೆ? ಗಂಗಾ ತೀರ್ಥದ ಅವಶ್ಯಕತೆಯಿದೆಯೆ? ಅರಿತವನಿಗೆ ಸರ್ವಾಂಗದಲ್ಲಿ ಗಂಗಾತೀರ್ಥದ ಭರಿತವಾಗಿದೆ ಅಂದ ಮೇಲೆ ಅವನಿಗೆ ತೀರ್ಥದ ಹಂಗೇಕೆ?

ಪರಮಾತು ಮನವನರಿದವಂಗೆ ಪ್ರಸಾದದ ಹಂಗೇಕೊ?:

ಪರಮಾತು; ಪರಶಿವನ ಮಾತು. ಅದು ಶಬ್ದದಿಂದ ಕೇಳಲು ಬರುವುದಿಲ್ಲ. ನಿಃಶಬ್ದದಿಂದ ತನಗೆ ತಾನೇ ಆಲಿಸಿದರೆ ತನಗೇ ದಕ್ಕುವ ಪ್ರಸಾದವದು. ಇಂತಹ ನಿಃಶಬ್ದದ ಪರಮಾತಿನ ಪರಶಿವನ ಪ್ರಸಾದವನುಂಡ ತನುವಿಗೆ ಪ್ರಸಾದದ ಹಂಗೇಕೊ? ಹಳಸುವ ಪ್ರಸಾದ; ಲೋಕಕ್ಕೆ ದಕ್ಕುವ ಅಜ್ಞಾನದ ಪ್ರಸಾದ. ಹಳಸದ ಪ್ರಸಾದ ಅಂಗದಲ್ಲಿಯೇ ಸಂಗಮವಾಗಿದೆ. ಅದನ್ನು ಅಂಗದಿಂದಲೇ ಪಡೆಯಬೇಕು.

ಜ್ಯೋತಿಯನರಿದವಂಗೆ ಕತ್ತಲೆಯ ಹಂಗೇಕೊ?

ಒಂದು ಕಣ್ಣಿಗೆ ಬೆಳಕು ಕೊಡುವ ಜ್ಯೋತಿಯಾದರೆ ಮತ್ತೊಂದು ಕಣ್ಣೊಳಗೆ ಸಂಗಮವಾಗಿ ಕಣ್ಣನ್ನು ಬೆಳಗುವ ಮುಕ್ಕಣ್ಣನ ಕಣ್ಣಿನ ಜ್ಯೋತಿ. ಜ್ಯೋತಿ ಸಕಲರಿಗೂ ಪರಿಚಯ. ಕಣ್ಣ ಬೆಳಗುವ ಜ್ಯೋತಿ ಮುಕ್ಕಣ್ಣನಿಗೆ ಮಾತ್ರ ಪರಿಚಯ. ಅಂಗ ನೋಡಿ ರತಿ ಎಂದು, ಮನ್ಮಥ ಎಂದು ಪರಿಚಯಿಸಿಕೊಂಡು ಅಂಗದಲ್ಲಿ ಕಾಮ ಸಂಚಯನ ಮಾಡಿಕೊಳ್ಳುವ ಕಣ್ಣು ಕಣ್ಣಲ್ಲ. ಈ ಕಣ್ಣಿಗೆ ಹೊರಗಿನ ಬೆಳಕು ಮಾತ್ರ ಕಾಣುತ್ತದೆ. ಈ ಬೆಳಕಿನಿಂದ ನೋಡುವ ಕಾಮದ ಕಣ್ಣು, ಲೋಭದ ಕಣ್ಣು, ಮೋಹ ಮದ ಮತ್ಸರದ ಕಣ್ಣು. ಒಳ ಕಣ್ಣಿನಿಂದ ನೋಡಿರದೆ ಇದೆಲ್ಲ ಸುಡುತ್ತದೆ. ತನ್ನಂತೆ ಇರುವ ಜ್ಞಾನಾಂಗ ಮಾತ್ರ ಕಾಣುತ್ತದೆ. ಇಂತಹ ಕಣ್ಣಿನ ಜ್ಯೋತಿಯನರಿತವನು ಬೆಳಗು ಕತ್ತಲೆಯನು ಕಳೆದು ಬೆಳಗಬಲ್ಲ. ಅರಿಷಡ್ವರ್ಗಗಳನು ಸುಟ್ಟು ಅರಿವಿನಿಂದ ಜ್ಞಾನಾಂಗವನ್ನೇ ಕಾಣಬಲ್ಲ.

ಲೋಕವನರಿದವಂಗೆ ವ್ಯಾಕುಲದ ಹಂಗೇಕೊ?

ತನ್ನ ತಾನರಿತವನೇ ಲೋಕವನ್ನು ಅರಿತವನು. ಅವನಿಗೆ ಯಾವ ವ್ಯಾಕುಲಗಳೂ ಇಲ್ಲ. ಇಂತಾತನನ್ನು ಲೋಕ ವಿರೋಧಿಸುವುದು. ಲೋಕ ವಿರೋಧಿ ಶರಣ; ಶರಣ ವಿರೋಧಿ ಲೋಕ. ಲೋಕದ ಆಚಾರ ಗೋಚರಕ್ಕೆ ಬರುವ ಆಚಾರಗಳಾದರೆ, ಶರಣನ ಆಚಾರ ಅಗೋಚರದ ಆಚಾರ. ಗೋಚರಕ್ಕೆ ಬರದ ಆಚಾರ. ತನ್ನ ಆಚಾರ. ಸ್ವಸುಖದ ಆಚಾರದಲ್ಲಿ ತನ್ನ ತಾನರಿತಾತನು ಸದಾ ಭಾಗಿಯಾಗಿರುತ್ತಾನೆ. ಇಂತಹ ಶರಣನಿಗೆ ಲೋಕದ ಯಾವ ಭೀತಿಯೂ ಇರುವುದಿಲ್ಲ.

176

ಮಾತು ಮಾತಿಗೆ ಮಥನವ ಮಾಡುವಾತನೆ ಜಾತ
ಮಾತಿಗೆ ಮೊದಲ ಕಂಡಾತನೆ ಅಜಾತ
ಕಾತರಕ್ಕೆ ಕಂಗೆಟ್ಟು, ಕಳವಳಿಸದಿಪ್ಪಾತನೆ ಪರಮಾತ್ಮ
ನೀತಿ ನಿಜ ನೆಲೆಗೊಂಡಾತನೆ ಜಗನ್ನಾಥ
ಇವೇತರೊಳಗು ಸಿಕ್ಕದಿಪ್ಪಾತನೆ ಗುರುನಾಥ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ

ಮಾತಿಗೆ ಮಾತನಾಡಿ ಮಾತಮುರಿಯುವಾತ, ಮಾತಿನ ಮಥನಮಾಡುವಾತ

ಮಾತುಬಲ್ಲಾತನನ್ನು ಮಾತುಗಾರ ಜಾಣ ಎಂದು ಕರೆಯಬಹುದು. ಆದರೆ ಈತ ಮಾತನಳಿದು ಮಾತಲ್ಲದ ಮಾತನಾಡುವಾತನಲ್ಲ.

ಮಾತಿಗೆ ಮೊದಲು ಮಾತನು ಹಿಡಿದುಕೊಂಡು ನಪುಂಸಕ ಮಾಡಿ ಆ ಮಾತನು ಕಂಡಾತನೆ ಅಜಾತ. ಈತನಿಗೆ ಹುಟ್ಟಿಲ್ಲ. ಸಾವೂ ಇಲ್ಲ. ಹುಟ್ಟಿದಾತ, ಮಾತನು ಮಥನ ಮಾಡಿ ಆಡಿದರೆ, ಹುಟ್ಟಿದಾತ ಮಾತಿಗೆ ಮೊದಲು ಮಾತನು ಕಂಡು ಆ ಮಾತುಗಳನ್ನೆಲ್ಲ ನಪುಂಸಕ ಮಾಡಿ ಆ ಮಾತುಗಳನ್ನೇ ಬೆಳಗುತ್ತಾನೆ. ಸು-ಮಾತು, ಕು-ಮಾತುಗಳೆರಡೂ ಅಜಾತನಿಗೆ ಸಮ. ಇವೆರಡನ್ನೂ ಮಾತಿಗೆ ಮೊದಲೆ ಕೇಳುತ್ತಾನೆ. ಇವೆರಡನ್ನೂ ಅರಿವಿನಿಂದ ಬೆಳಗುತ್ತಾನೆ.

ನುಡಿದರೆ ಮುತ್ತಿನ ಹಾರದಂತಿರಬೇಕು; ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು; ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು. ಮುತ್ತು, ಮಾಣಿಕ್ಯ, ಸ್ಫಟಿಕಗಳು ನುಡಿಯುತ್ತವೆಯೇ? ಅವು ನುಡಿಯುವುದಿಲ್ಲ. ಜಲಬಿಂದು ನುಂಗಿ ಗಟ್ಟಿಯಾಗಿ ಮುತ್ತು ಮಾಣಿಕ್ಯ ಸ್ಫಟಿಕವಾಗಿ ಬೆಳಗುತ್ತವೆ. ಬೆಳಗುವ ಮೂಲಕ ನುಡಿಯುತ್ತವೆ.

ಅಜಾತ ಮಾತು ಕೇಳುತ್ತಾನೆ. ಮಥಿನಿಸಿ ಜೀರ್ಣಿಸಿಕೊಳ್ಳುತ್ತಾನೆ. ಮತ್ತೆ ಮಾತನಾಡುವುದಿಲ್ಲ; ಆನಂದದಿಂದ ಮುತ್ತು ಮಾಣಿಕ್ಯ ಸ್ಫಟಿಕದಂತೆ ಬೆಳಗುತ್ತಾನೆ. ಮಾತನಾಡಬೇಕೆಂದು ಕಂಗೆಡುವುದಿಲ್ಲ, ಕಾತರಿಸುವುದಿಲ್ಲ, ಕಳವಳಕ್ಕೊಳಪಟ್ಟು ಧೃತಿಗೆಡುವುದಿಲ್ಲ. ಸಾವಿಲ್ಲದ ರೂಹಿಲ್ಲದ ಕೇಡೇ ಇಲ್ಲದ ಅಜಾತನೀತ. ಸಾಕ್ಷಾತ್ ಪರಮಾತ್ಮನೆ ಈತ. ನೀತಿ ನಿಜ ನೆಲೆಗೊಂಡಾತನೆ

ಈತ ಜಗನ್ನಾಥನೇ ಈತ. ಇವೇತರೊಳಗು ಸಿಕ್ಕ ದಿಪ್ಪಾತನೆ ಗುರುನಾಥ.

ಅಪ್ಪಣ್ಣ ಶರಣರ ಸುಂದರವಾದ ಮಾತಿದು. ಬೆಳಗಿನ ಮಾತು. ಸಂಶೋಧಕರಿಗೆ ಸಾಹಿತಿಗಳಿಗೆ, ಲೋಕದ ಗುರುಪೀಠಗಳಿಗೆ ದೊರಕದ ಬೆಡಗಿನ ಮಾತು.

ಕಾಯಉಳ್ಳಾತ ಗುರುನಾಥನಲ್ಲ. ಕಾಯದೊಳಗೆ ಕರಗಿ, ಕಾಯದ ಕಣ ಕಣದಲ್ಲಿ ಸಂಗಮವಾಗಿ, ಕಾಯಕ್ಕೆ ಅಕಾಯವಾಗಿ ಬೋಧಿಸುವಾತನೇ ಗುರುನಾಥ. ಜಲಬಿಂದುವನ್ನೇ ಅರಿವಿನ ಬೀಜವನ್ನಾಗಿಸಿ, ಆ ಬೀಜದ ಮೂಲಕ ಗರ್ಭ ಹೊಕ್ಕು ಕಾಯವಾಗಿ, ಆ ಕಾಯದಲ್ಲಿ ಅಕಾಯವಾಗಿ ಬೆರೆತು ಸದಾ ಕಾಯವನ್ನು ಕಾಯುವಾತ.

ಮಾತು ಮಾತಿಗೆ ಮಥನವ ಮಾಡಿ ಮಾತನಾಡಲು ಪ್ರೇರಣೆ ನೀಡಿದಾತ. ಮಾತಿಗೆ ಮೊದಲೇ ಮಾತನ್ನು ಕಂಡು ಮಾತನಾಡದ ಅಜಾತ. ಮಾತಿನ ಕಾತರಕ್ಕೆ ಕಂಗೆಟ್ಟು, ಕಳವಳಿಸದ ಪರಮಾತ್ಮನಾತ. ನೀತಿ ನಿಜ ನೆಲೆಗೊಂಡ ಜಗನ್ನಾಥನಾತ. ಇವೇತರ ಜಂಜಡಕ್ಕೊಳಗಾಗದ ಈತ ಯಾವ ಪೂಜೆಗೂ ಒಳಗಾಗುವಾತನಲ್ಲ. ಪೂಜಿಸಿದರೆ ಸಿಗುವಾತನೂ ಅಲ್ಲ. ಏಕೆಂದರೆ ಪೂಜಿಸುವ ಪ್ರತಿ ತನುವೂ ಸಾಕ್ಷಾತ್ ಪರಮಾತ್ಮನೇ ಆಗಿದೆ. ಇಂತಹ ಅಜಾತ ಪರಮಾತ್ಮನನ್ನು ಜಾತ ಅಂದರೆ ಹುಟ್ಟಿದ ಅಂಗ ಕಂಡುಕೊಳ್ಳಬೇಕಾಗಿದೆ. ಹಡಪದ ಅಪ್ಪಣ್ಣಗಳ ಸೂತ್ರದ ಮೂಲಕ.

177

ಮಿಥ್ಯವನರಿದವರೆಲ್ಲ ತತ್ವಕ್ಕೆ ಅಂದೇ ಹೊರಗು
ತಥ್ಯವನರಿದ ಶರಣರು ಸತ್ತಂತೆ ಇರಬೇಕು
ತಥ್ಯಮಿಥ್ಯ ಎರಡಳಿದ ಶರಣಂಗೆ ಮತ್ತೊಂದು ಬಾರಿ ನಮೋನಮೋ ಎಂಬೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ

ಮನಕ್ಕೆ ಮಿಥ್ಯವನು ಅರಿಯುವುದೆಂದರೆ ಅದಕ್ಕೆ ಬಲು ಸುಖ. ತಾನೇ ಕಟೆದ ಕಲ್ಲಿಗೆ ತಾನೇ ದೇವರೆಂದು ಪೂಜಿಸಿ ತನುವಿನೊಂದಿಗೆ ಮನ ಸುಖಿಸುತ್ತದೆ. ಇಲ್ಲದ ದೆವ್ವವನ್ನು ಇದೆ ಎಂದು ಭ್ರಮಿಸಿ ಮನ ತನುವಿನೊಂದಿಗೆ ಸುಖಿಸುತ್ತದೆ. ತನುವಿಗೆ ಆಗುವ ತೊಂದರೆಯೂ ಮನಕ್ಕೆ ಸುಖ. ತನುವಿಗೆ ಆಗುವ ಸುಖವೂ ಮನಕ್ಕೆ ಸುಖ ಏಕೆಂದರೆ ಮನ ತಾನು ಆವರಿಸಿದ ತನುವಿನಲ್ಲಿಯೇ ಸತ್ಯವಿದೆ;. ಸತ್ಯದ ತತ್ವವಿದೆ; ಆ ಸತ್ಯದ ಸುಖವೇ ತನಗೆ ಶಾಶ್ವತ ಸುಖ ನೀಡುವುದೆಂದು ಅದಕ್ಕೆ ಮಾಹಿತಿ ಇಲ್ಲದ ನಿಮಿತ್ಯ ತನ್ನ ತತ್ವದಿಂದಲೇ ತನು ಹೊರಗಿದೆ. ಉಣ್ಣೆ ಕೆಚ್ಚಲಿನ ರಕ್ತ ಹೀರಿದಂತೆ ಕ್ಷೀರದ ರುಚಿ ಅದಕ್ಕೆ ಹಿಡಿಸದಂತೆ.

ವೇದ ಉಪನಿಷತ್ತು ಭಗವದ್ಗೀತೆ ಬೈಬಲ್ ಕುರಾನ್ ಅರಿತ ಮನ ಸುಮ್ಮನಿರುವುದಿಲ್ಲ. ಆಯಾ ಪೀಠ ಪರಂಪರೆಗಳನ್ನು ಸೃಷ್ಟಿ ಮಾಡಿ ತನು,ತನುಗಳ ಮೇಲೆಯೇ ಯುದ್ಧ ಸಾರುತ್ತದೆ. ಇದು ಮನದ ಕೆಲಸವೆಂದು ತನುವಿಗೆ ಗೊತ್ತಾಗುವುದಿಲ್ಲ. ಏಕೆಂದರೆ ತನು, ಮನ ಮತ್ತು ಅರಿವಿನ ಒಂದು ಉಪಕರಣವೇ ಹೊರತು ಮತ್ತೇನೂ ಅಲ್ಲ. ಟಿ.ವಿ. ಪೆಟ್ಟಿಗೆಗೆ ಚಾನಲ್ ಮತ್ತು ವಿದ್ಯುತ್ ಇದ್ದಂತೆ. ಇವೆರಡೂ ಇಲ್ಲದ ಟಿ.ವಿ. ವ್ಯರ್ಥ. ಹಾಗೆಯೇ ಅರಿವು ಮತ್ತು ಮನ ಇಲ್ಲದ ದೇಹ ಶವ.

ಬೈದರೂ ಹೊಗಳಿದರೂ ಶವಕ್ಕೆ ಸ್ಪಂದನೆ ಇಲ್ಲ. ಏಕೆಂದರೆ ಅವೆರೆಡೂ ಅದಕ್ಕೆ ತಿಳಿಯುವುದಿಲ್ಲ. ತಿಳಿಯುವ ಶಕ್ತಿ ತನುವಿನಲ್ಲಿ ಇಲ್ಲವಾಗಿದೆ. ತನುವಿದ್ದಾಗ ಮನ ವಿಪರೀತವಾಗಿ ತಿಳಿದು ತನುವಿಗೆ ಸುಖ ಮತ್ತು ದುಃಖ ಉಂಟು ಮಾಡುತ್ತದೆ. ಶಬ್ದ ತಿಳಿಯುವ ಶಕ್ತಿ ಅರಿವಿಗೆ ಮಾತ್ರ ಇದೆ. ಮನ ಅರಿವಿಗೆ ಶರಣು ಹೋದರೆ ಸಾಯುತ್ತದೆ. ತನುವಿನಲ್ಲಿ ಅರಿವು ಮಾತ್ರ ಉಳಿಯುತ್ತದೆ. ತನು ಅರಿವಿನ ತನುವಾಗುತ್ತದೆ. ಸಹಜವಾಗಿ ಕೇಳುತ್ತದೆ. ಸಹಜವಾಗಿ ನೋಡಿ, ಮುಟ್ಟಿ, ಮೂಸಿಸಿ, ರುಚಿಸುತ್ತದೆ. ತಥ್ಯ ಮಿಥ್ಯ ಎರಡಳಿದು ಅನುಭವಿಸುವ ಅರಿವಿನ ಲಿಂಗಾಂಗವಾಗುತ್ತದೆ. ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಅರಿವಿನ ಲಿಂಗಕ್ಕೆ ಒಲಿದ ಅಂಗ ಮಹಾಲಿಂಗ ವಾಗುತ್ತದೆ. ಇಂತಹ ಅಂಗವನ್ನು ಇಂತಹ ಉತ್ಕಟ ಬಯಕೆ ಇರುವ ಅಂಗ ಮಾತ್ರ ಕಂಡು ಆ ಅಂಗಕ್ಕೆ ನಮೋ ನಮೋ ಎಂದು ಶರಣು ಹೋಗಿ ಶರಣನೇ ತಾನಾಗುತ್ತದೆ. ಇದೊಂದು ಸುಂದರವಾದ ದೇಹದ ಶಿಕ್ಷಣ. ಬಯಕೆ ಉಳ್ಳಮನಕ್ಕೆ ಮಾತ್ರ ಉತ್ಕಟ ಇಚ್ಛೆಯಾಗುತ್ತದೆ.

178

ಮೀಸಲು ಸೂಸಲಾಗಿ, ದೋಸೆ ಕಡಬು ಹೊಯ್ದು,
ಹಬ್ಬವ ಮಾಡಿಹೆನೆಂಬ ಹೇಸಿಗಳ ಮಾತ ಕೇಳಲಾಗದು.
ಅದೇಕೆ ಎಂದರೆ, ಲಿಂಗ ಜಂಗಮದ ಭಾಷೆ ಸಲ್ಲದಾಗಿ
ಇನ್ನು ಮೀಸಲಾವುದೆಂದರೆ,
ಭಾಷೆಗೇರಿಸಿದ ತನುವೆ ಅಡ್ಡಣಿಗೆ,
ಘನವೆ ಹರಿವಾಣ, ಮನ ಮೀಸಲೋಗರ
ಈ ಅನುವನರಿದು, ಮಹಾಲಿಂಗಕ್ಕೆ ಅರ್ಪಿತವ ಮಾಡುವನೆ ಸದ್ಭಕ್ತನು,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ

ತನುವೆ ಅಡ್ಡಣಿಗೆ, ಅರಿವೇ ತಟ್ಟೆ, ಮನವೇ ಮೀಸಲ ಅಡಿಗೆಯಾಗಬೇಕಿತ್ತು. ಆದರೆ ಈ ಅನುವನು ಅರಿಯದ ಮನ ತನುವನ್ನು ಹಿಡಿದುಕೊಂಡು ಹಿಂದುವಾಗಿ ಹನ್ನೆರಡು ಹಬ್ಬಗಳನ್ನು

ಮೀಸಲಿನಿಂದ ಮಿಂದು ಹಸಿವಿನಿಂದ ಬೆಂದು ಕಲ್ಲದೇವರಿಗೆ ನೈವೇದ್ಯ ಮಾಡಿ ಆನಂದದಿಂದ ಸುಳ್ಳು ಹಬ್ಬವನ್ನು ಮಾಡುತ್ತದೆ. ಹೀಗೆಯೇ ಮನ ಮುಸಲ್ಮಾನ, ಕ್ರಿಶ್ಚನ್ ವೇಷಧರಿಸಿ ಮೀಸಲಿನ ಸಂಭ್ರಮದಿಂದ ಹಬ್ಬಗಳನ್ನು ಆಚರಿಸುತ್ತದೆ. ಇದು ತನುವನ್ನು ಆವರಿಸಿದ ಹೇಸಿ ಮನದ ಕೆಲಸವೆಂದು ಮನಕ್ಕೆ ಅರಿವಾಗದು. ಇಂತಹ ಮನ ಆವರಿಸಿದ ಹೇಸಿತನುಗಳ ಮಾತು ಕೇಳಲಾಗದು ಎಂದಿದ್ದಾರೆ ಅಪ್ಪಣ್ಣ ಶರಣರು.

ಅದೇಕೆ ಎಂದರೆ ಲಿಂಗ ಜಂಗಮದ ಭಾಷೆ ಸಲ್ಲದಾಗಿ:

ತನು ಮತ್ತು ಅದನ್ನು ಆವರಿಸಿದ ಮನಗಳೆರಡೂ ತನುವಿನಲ್ಲಿಯೇ ಸಂಗಮವಾದ ಲಿಂಗ ಜಂಗಮದ ಭಾಷೆಯನ್ನು ಅರಿಯಬೇಕಿತ್ತು . ಆದರೆ ಈ ಭಾಷೆ ಮನದ ಅರಿವಿಗೆ ಬರುವುದೇ ಇಲ್ಲ. ಲಿಂಗ ಜಂಗಮರಿಬ್ಬರೂ ತನುವಿನಲ್ಲಿಯೇ ಸಂಗಮವಾಗಿ ತನು ಮನಗಳೆರಡಕ್ಕೂ ಹಗಲಿರುಳೆನ್ನದೆ ಪಾಠ ಮಾಡುತ್ತಿರುವ ಶಿಕ್ಷಣ ತಜ್ಞರು ಇರುವ ಹೆಣೆದ ಮೀಸಲ ಭಾಷೆಯ ರುಚಿ ಬಲು ಸೊಗಸು, ಬಲು ರುಚಿ, ಮೃಷ್ಟಾನ್ನವದು. ಇಂತಹ ಓಗರವನ್ನು ಉಂಡ ಮನವೇ ಘನಮನ. ಅದರ ತನುವೇ ಅಡ್ಡಣಿಗೆ, ಘನವೇ ಹರಿವಾಣ. ಈ ಹರಿವಾಣದಲ್ಲಿ ಎಂದೆಂದೂ ಅಳಸದ ಅಮೃತದ ಬುತ್ತಿಯೇ ಇದೆ. ಉಂಡಷ್ಟು ಹೆಚ್ಚಳವಾಗುವ ಅಕ್ಷಯ ಪಾತ್ರೆಯದು. ಇಂತಹ ಮಹಾಪ್ರಸಾದವನು ಉಂಡು ಅಂಗದಲ್ಲಿಯೇ ಸಂಗಮವಾದ ಲಿಂಗಯ್ಯನಿಗೆ ಅರ್ಪಿತ ಮಾಡುವವನೇ ಸದ್ಭಕ್ತನು.

179

ಮುಟ್ಟಿಯೂ ಮುಟ್ಟಬಾರದ ಠಾವಿನಲ್ಲಿ,
ಹುಟ್ಟಿಯೂ ಹುಟ್ಟದೊಂದು ಶಿಶುವಾಯಿತ್ತು .
ಅವ ದಿಟ್ಟನಲ್ಲ; ಧೀರ ವೀರ. ಕೊಟ್ಟದವನಲ್ಲ, ಕೊಟ್ಟುದ ಬೇಡ,
ಅವನ ಮುಟ್ಟಿ ಒಡನೆರೆದವರು ನಿತ್ಯ ನಿತ್ಯ ಲಿಂಗೈಕ್ಯರು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಶರಣರು ಅಂಗವನ್ನು ಲಿಂಗಾಂಗವೆಂದು ಕರೆದರು. ಅಂಗದಲ್ಲಿಯೇ ಲಿಂಗವನ್ನು ಕಂಡುಕೊಂಡರು. ಆ ಭಾಗ್ಯ ಸರ್ವ ಅಂಗಗಳಿಗೂ ದಕ್ಕಲೆಂದು ಸರಳ ಸೂತ್ರಗಳನ್ನು ರಚಿಸಿದರು. ಸ್ವ ಸ್ವರೂಪ ಜ್ಞಾನ ಹೇಗೆ ಪಡೆಯಬೇಕೆನ್ನುವ ತಂತ್ರಗಾರಿಕೆಯನ್ನು ಅಪ್ಪಣ್ಣ ಶರಣರು ಈ ವಚನದಲ್ಲಿ ಹೆಣೆದಿದ್ದಾರೆ.

ಕಣ್ಣಿಗೆ ಕಾಣದ ಬಯಲ ಬೀಜವೊಂದು ಗರ್ಭ ಹೊಕ್ಕು ಶಿಶುವಾಯಿತು. ಬಯಲು ಆ ಶಿಶುವಿನಲ್ಲಿಯೇ ಸಂಗಮವಾಯಿತು. ಅದರ ಭಾವನೆ, ಅದರ ಜೀವನ ಬಯಲಾದರೂ ಶಿಶುವಿನೊಂದಿಗೆ ಹೆಮ್ಮರವಾಯಿತು. ಬಯಲ ಬೀಜದಿಂದ ಹುಟ್ಟಿದ ಕುಡಿ ಕಣ್ಣಿಗೆ ಕಂಡರೂ ಅದರ ನಿಜ ಸ್ವರೂಪ ಬಯಲು. ಅದರ ಸತ್ಯ ಬಯಲು. ಸಿನಿಮಾ ಪರದೆಯಂತೆ. ಸಿನಿಮಾ ಕಾಣುತ್ತದೆ. ಪರದೆಯನ್ನು ಯಾರೂ ನೋಡುವುದಿಲ್ಲ. ಸಿನಿಮಾದ ಚಿತ್ರಗಳಿಗೆ ಕಾರಣವಾದದ್ದೇ ಬೆಳ್ಳಿ ಪರದೆ. ಇದನ್ನು ನೋಡಿದವನಿಗೆ ಸಿನಿಮಾ ಕಾಣುವುದಿಲ್ಲ. ಎಷ್ಟೋ ಚಿತ್ರಗಳು ಪರದೆಯ ಮೇಲೆ ಬಂದು ಹೋಗುತ್ತವೆ. ಪರದೆ ಮಾತ್ರ ಒಂದೇ. ಚಿತ್ರ ಸತ್ಯವೋ ಪರದೆ ಸತ್ಯವೋ ಎಂದು

ಯಾವ ನೋಡುಗನಿಗೂ ಹೊಳೆಯುವುದೇ ಇಲ್ಲ. ಪ್ರಶ್ನೆಯೂ ಏಳುವುದಿಲ್ಲ. ಹೊಳೆದರೆ ಸಾಕು ಹುಡುಕಲು ಹೋಗುತ್ತಾನೆ. ತೋರುಗ ಸಿಕ್ಕರೆ ಉಳಿಯುತ್ತಾನೆ. ಆ ಬಿಳಿ ಪರದೆಯೇ ತಾನಾಗುತ್ತಾನೆ. ಬಯಲಾಗಿ ಬಯಲಾಗುತ್ತಾನೆ.

ಅವ ದಿಟ್ಟನಲ್ಲ; ಧೀರ ವೀರ. ಮಹಾವೀರ, ಬುದ್ಧ ಬಸವಾದಿ ಶರಣನೂ ತಾನೇ. ಕೊಟ್ಟವನಲ್ಲ ; ಕೊಟ್ಟುದ ಬೇಡ. ಸ್ವರೂಪ ಜ್ಞಾನ ಸರ್ವ ಅಂಗಗಳಲ್ಲಿ ಸಂಗಮವಾಗಿದೆ. ಯಾರೂ ಜ್ಞಾನವನ್ನು ಕೊಡಲು ಬರುವುದಿಲ್ಲ. ಅಂಗದಲ್ಲಿ ಸಂಗಮವಾದ ಜ್ಞಾನಿಯೇ ಅಂಗಕ್ಕೆ ತನ್ನ ಸರ್ವಸ್ವವನ್ನೇ ಕೊಟ್ಟಿದ್ದಾನೆ. ಕೊಟ್ಟುದನು ಎಂದೆಂದೂ ಬೇಡದವನಾಗಿದ್ದಾನೆ. ಅದನ್ನು ಬಳಸಿಕೊಳ್ಳಲು ಹಗಲಿರುಳೆನ್ನದೆ ಮನಕ್ಕೆ ನಾನಾ ವಿಧದಲ್ಲಿ ಪಾಠ ಮಾಡುವ ಪಾಠಕನೂ ಆಗಿದ್ದಾನೆ. ಅಂತಹ ಕರುಣಾಮಯಿ ಸದ್ಗುರು ಎಂದೆಂದೂ ಯಾರನ್ನೂ ಬೇಡದವನಾಗಿದ್ದಾನೆ.

ಅವನ ಮುಟ್ಟಿ ಅವನೊಡನೆ ಇದ್ದವರು ನಿತ್ಯ ಸತ್ಯರು. ನಿತ್ಯ ನಿತ್ಯ ಲಿಂಗೈಕ್ಯರು. ಜಗತ್ತನ್ನು ಬಯಲಿನಂತೆ ನೋಡಬಲ್ಲರು. ಬಯಲ ಬೀಜದಿಂದಲೇ ಸಕಲ ಸೃಷ್ಟಿ. ಜೀವ ಜಲ, ಸಸ್ಯ ಸಂಕುಲ, ಪ್ರಾಣಿ ಗಿಡ ಮರ ಬಳ್ಳಿ, ಜಲಚರ ಮನುಷ್ಯ ವರ್ಗ. ಮನುಷ್ಯನನ್ನು ಬಿಟ್ಟು ಉಳಿದವೆಲ್ಲವೂ ಸಹಜ. ಮನುಷ್ಯನಿಗೆ ಮಾತ್ರ ಸತ್ಯದ ಮೂಲ ತಿಳಿದು ಆನಂದದಿಂದ ಇರಲು ಬರುತ್ತದೆ. ಆದರೆ ಮನುಷ್ಯ ತನಗೆ ತಾನೇ ವಂಚನೆಗೆ ಒಳಗಾಗಿದ್ದಾನೆ. ಅಂಗದಲ್ಲಿಯೇ ಸಂಗಮವಾದ ಸದ್ಗುರುವಿನ ಮಾತನ್ನು ಧಿಕ್ಕರಿಸುವ ನಿಕೃಷ್ಟನಾಗಿದ್ದಾನೆ.

ಅಂಗವನ್ನು ಆವರಿಸಿದ ಮನವೇ ಶಿಷ್ಯ. ಅಂಗದಲ್ಲಿ ಸಂಗಮವಾದ ಅರಿವೇ ಗುರು. ಶಿಷ್ಯನಿಗೆ ತಿಳಿಯದಿದ್ದರೆ ಗುರುವಿಗೇನು ನಷ್ಟ. ಆತ ಧೀರ ವೀರ. ಅಂಗವನ್ನು ಶಿಷ್ಯನಿಗೆ ಧಾರೆ ಎರೆದು ಆ ಅಂಗದಲ್ಲಿಯೇ ಸಂಗಮವಾಗಿದ್ದಾನೆ. ಅಂಗವನ್ನು ಸೋಂಕದೆ ಅಂಗವನ್ನೇ ಬೆಳಗುತ್ತಾನೆ. ಬೆಳಗುವ ಆ ಬಿಳಿಯ ಬೆಳಕನ್ನು ಶಿಷ್ಯ ಅರಿತು ಅರಿವಿನ ಬೆಳಕೇ ತಾನಾಗಬೇಕು. ಆ ಬೆಳಕಿನಿಂದ ಹುಟ್ಟಿದ ಕತ್ತಲೇ ತಾನು. ಬೆಳಕಿನಿಂದಲೇ ಕತ್ತಲ ಸೃಷ್ಟಿ; ಬೆಳಕಿನಿಂದಲೇ ಕತ್ತಲಿಗೆ ಮೋಕ್ಷ!

180

ಮುಳುಗುತ್ತ ತೆರಹಿಲ್ಲದಲ್ಲಿ ಅಂಗವ ಬೇರಿಟ್ಟರಸಿಹೆನೆಂಬುದೆ ಭಿನ್ನಭಾವ.
ಆ ಭಿನ್ನ ಭಾವವೆ ಭ್ರಮೆ, ಆ ಭ್ರಮೆಯೆ ಭವ.
ಆ ಭವವೆ ಭವಿ, ಆ ಭವಿಯೇ ಜೀವ.
ಆ ಜೀವನೆ ಎಂಭತ್ತು ನಾಲ್ಕು ಲಕ್ಷ ಜೀವಜಂತು.
ಇದನರಿದವನೆ ಐಕ್ಯ, ಮರೆದವನೆ ಮಾನವ.
ಇದೇ ಜೀವ ಪರಮರ ಹಸಿಗೆ.
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಅರಿವಿನ ಲಿಂಗಯ್ಯನಿರುವುದು ಅಂಗದಲ್ಲಿ. ಆದರೆ ಮನ ಅಂಗವನ್ನು ಆಲಯಕ್ಕೆ ಕರೆದುಕೊಂಡು ಹೋಗಿ, ಆ ಆಲಯದಲ್ಲಿ ಲಿಂಗಯ್ಯನನ್ನು ಹುಡುಕಾಡುತ್ತದೆ. ಕಲ್ಲು, ಕೇರಿನ ಲಿಂಗ ಮಾಡಿ ಅಂಗದ ಮೇಲೆ ಬಿಗಿದುಕೊಂಡು ದಿನದ ಮೂರು ವೇಳೆ ಆತನೇ ಲಿಂಗಯ್ಯನೆಂದು ಪೂಜಿಸುತ್ತದೆ. ಪಡಿಪದಾರ್ಥಗಳನ್ನು, ನಾನಾ ಭಕ್ಷಗಳನ್ನಿಟ್ಟು ನೈವೇದ್ಯ ಮಾಡುತ್ತದೆ. ಪತ್ರಿ ಪುಷ್ಪ

ಧೂಪ ದೀಪಗಳಿಂದ ಆರಾಧಿಸಿ ಅಂಗದ ಮೇಲೆ ಕಟ್ಟಿ ಕೊಂಡ ಲಿಂಗಯ್ಯನನ್ನು ಒಲಿಸಿಕೊಳ್ಳಲು ತವಕಿಸುತ್ತದೆ. ತಾನೇ ಕೊರಳಿಗೆ ಕಟ್ಟಿಕೊಂಡ ಲಿಂಗ ಒಲಿಯುವುದೆಂದರೇನು? ತಾನೇ ಕಟೆದು ಕಲ್ಲಿನಿಂದ ಕಟ್ಟಿದ ಆಲಯದ ಲಿಂಗಯ್ಯ ಒಲಿಯುವುದೆಂದರೇನು? ಒಲಿಯದ್ದಕ್ಕಾಗಿ ಬೇಡರ ಕಣ್ಣಪ್ಪ ಕಣ್ಣುಗಳ ಕಳೆದುಕೊಂಡ. ಸಿರಿಯಾಳ ಚಂಗಳೆಯರು ಮಗನನ್ನು ಕಳೆದುಕೊಂಡರು. ಶಿಬಿ ತನ್ನ ಮಾಂಸವನ್ನೇ ಕಳೆದುಕೊಂಡ. ಇವರು ತೆರಹಿಲ್ಲದ ಭವವನ್ನು ಬೇರಿಟ್ಟು ಹುಡುಕಿದರೇ ಹೊರತು; ಅಂಗದಲ್ಲಿಯೇ ಸಂಗಮವಾದ ಲಿಂಗಯ್ಯನನ್ನು ಹುಡುಕಲೇ ಇಲ್ಲ.

ಒಲಿಸಿಕೊಳ್ಳುವ ಉತ್ಕಟ ಇಚ್ಛೆ ಇದ್ದರೇನು? ಅಂಗಬಿಟ್ಟು, ಅಂಗದೊಂದಿಗೆ ಲಿಂಗಯ್ಯನನ್ನು ಹೊರಗೆ ಹುಡುಕಿದರೆ ಸಿಕ್ಕಾನೆಯೇ? ಸಿಗಲಾರ. ಆ ಭಿನ್ನ ಭಾವವೇ ಭ್ರಮೆ. ಆ ಭ್ರಮೆಯೇ ಭವ. ಆ ಭವವೇ ಭವಿ. ಆ ಭವಿಯೇ ಜೀವ. ಆ ಜೀವನೇ ಎಂಭತ್ತು ನಾಲ್ಕು ಲಕ್ಷ ಜೀವಜಂತು. ಇದನರಿದರಿದು ಅಂಗದಲ್ಲಿಯೇ ಹುಡುಕಿದವನೇ ಅಂಗದಲ್ಲಿಯೇ ಸಂಗಮನಾಥನನ್ನು ಕೂಡಿಕೊಂಡು ಅಲ್ಲಿಯೇ ಐಕ್ಯನಾಗುತ್ತಾನೆ.

ಬೇಡದ ಅಜ್ಞಾನದ ಕಣ್ಣು ಕಿತ್ತಿಕೊಂಡು ಅರಿವಿನ ಕಣ್ಣಿನಿಂದ ನೋಡಿ ಆ ಕಣ್ಣಿನಲ್ಲಿ ಐಕ್ಯನಾದವನೇ ಕಣ್ಣಪ್ಪನಾಗುತ್ತಾನೆ. ಅಜ್ಞಾನವೆಂಬ ಮೋಹದ ಮಗನನ್ನು ಕುಟ್ಟಿ ಅರಿವಿಗೆ ಉಣಬಡಿಸಿದವನೇ ಸಿರಿಯಾಳನಾಗುತ್ತಾನೆ. ಅಂಗ ಲಿಂಗ ಬೇರಿಲ್ಲ. ಅಂಗದಲ್ಲಿಯೇ ಅರಿವಿನ ಲಿಂಗ ಸಂಗಮವಾಗಿದೆ. ಮನದಿಂದ ಅರಿತು, ಅಲ್ಲಿಯೇ ಸಂಗಮ ಗೊಂಡುದೇ ಘನಮನ. ಅದೇ ಐಕ್ಯ ಇದನ್ನು ಮರೆತವನೇ ಮಾನವ. ಇದೇ ಜೀವ ಪರಮರ ಬೆಸೆಯುವ ಬೇಸಿಗೆಯ ಹಸಿಗೆ.

ಜೀವ ಕಾಯದ ಹೊಲಿಗೆಯ ಬಿಚ್ಚಿ ಒಳ ಪ್ರವೇಶ ಮಾಡದ ಮನ ಕಾಯದೊಂದಿಗೆ ಅರಿವಿನ ಪ್ರಯಾಣದಲ್ಲಿದೆ. ಜೀವ ಕಾಯದ ಅಜ್ಞಾನದ ಹೊಲಿಗೆಯನರಿತು; ತಂತಾನೇ ಬಿಚ್ಚಿಕೊಂಡು ಒಳ ಪ್ರವೇಶ ಮಾಡಿ ಅರಿವಿನಲ್ಲಿ ಐಕ್ಯವಾದ ಮನ ಘನ ಮನವಾಗಿದೆ. ಆ ಕಾಯ ಅಕಾಯವಾಗಿದೆ. ಜೀವ ಪರಮರ ಕಂಡು ಬೇಸಿಗೆಯ ಹಾಸಿಗೆಯಲ್ಲಿ ಬೆಚ್ಚನೆ ಮಲಗಿದೆ. ಭ್ರಮೆ ಕಳೆದುಕೊಂಡ ಮನ ನಿಚ್ಚಲ ಬ್ರಹ್ಮವಾಗಿದೆ. ಭವಿತನ ಕಳೆದುಕೊಂಡು ಅ ಭವವೇ ತಾನಾಗಿದೆ.

ಹೊರಗಿದ್ದಾನೆಂದು ಮನ ಮರೆತು ಒಡಲೊಂದಿಗೆ ಓಡಾಡಿತು. ಒಡಲೊಳಗಿದ್ದುದನು ಅರಿತು ಮನ ಒಡಲೊಡೆಯನ ಕೂಡಿತು. ಕೂಡಲ ಸಂಗಯ್ಯನೇ ತಾನಾಯಿತು.

181

ಮೂಲಬ್ರಹ್ಮದಲ್ಲಿ ಮೊನೆದೋರಿದ ಪ್ರಸಾದವೆ ಪರಮಪ್ರಣಮ.
ಆ ಪ್ರಣಮದ ಪರಮಪ್ರಕಾಶವೇ ಪ್ರಸಿದ್ಧ ಪ್ರಸಾದ.
ಆ ಪ್ರಸಿದ್ಧ ಪ್ರಸಾದದಿಂದಲೇ ಬ್ರಹ್ಮಾಂಡ ರೂಪುದೋರಿತ್ತು.
ಆ ಸ್ವರೂಪವೆ ಪ್ರಸಾದ, ನಿರೂಪೇ ಲಿಂಗೈಕ್ಯ. ಅದಕ್ಕೆ ದೃಷ್ಟ:
ತತ್ವ ಪ್ರದೀಪಿಕಾಯಾಂ: ಪ್ರಸಾದಂ ಮುಕ್ತಿ ಮೂಲಂಚ ಯತ್ರಸ್ರಾದಂ ಶಿವಸ್ಯಾ ಚ।
ಶಿವಸ್ಯರ್ವಾಧಿದೇವಸ್ಯಾದ್ ವೇದಕರ್ಮೇಷು ತದ್ವಿನಂ॥
ಎಂದುದಾಗಿ, ಇಂತಿದೀಗ ಪ್ರಸಾದ ಮಹಾತ್ಮೆ.
ಇದೇ ಪ್ರಸನ್ನ ಪ್ರಸಾದ. ಇಂತೀ ಪ್ರಸಾದವ ಕೊಂಡವನೆ ಶಿವಕುಲ
ಬಸವಪ್ರಿಯ ಕೂಡಲಸಂಗಮದೇವಾ, ಮಾಂ ತ್ರಾಹಿ, ತ್ರಾಹಿ ಕರುಣಾಕರನೆ.

''ಓಂ ದ್ಯಾವಾ ಭೂಮೀ ಜನಯನ್ ದೇವ ಏಕೋ ದೇವ'' ಎಂದು ಶ್ರುತಿ ಸ್ಮೃತಿಗಳು ಸಾರುತ್ತಲಿವೆ. ಆದರೂ ಪ್ರಣವನುಚ್ಚರಿಸುವ ಅಪ್ರಮಾಣಿಕರೆಲ್ಲರೂ ಪ್ರಣವ ಮಂತ್ರವನೋದಿ ಮಂತ್ರಾರ್ಥವನರಿಯರು. ''ಪ್ರಣವ ಓಂ ನಮಃ ಶಿವಾಯ, ಪ್ರಣವ ಓಂ ನಮಃ ಶಿವಾಯ, ಪ್ರಣವ ಓಂ ನಮಃ ಶಿವಾಯ'' ಎಂದವು ಶ್ರುತಿಗಳೆಲ್ಲಾ; 'ಪ್ರಣವ ಭರ್ಗೋದೇವ' ಎಂದವು ಶ್ರುತಿಗಳೆಲ್ಲಾ! ಕೂಡಲಸಂಗನನರಿಯದ ದ್ವಿಜರೆಲ್ಲಾ ಭ್ರಮಿತರು.

ವಶ್ಯವ ಬಲ್ಲೆವೆಂದಿರಯ್ಯಾ-ಬುದ್ಧಿಯನರಿಯದ ಮನುಜರು ಕೇಳಿರಯ್ಯಾ; ವಶ್ಯವಾವುದೆಂದರಿಯದೆ, ಮರುಳುಗೊಂಬಿರೆಲೆ ಗಾವಿಲ ಮನುಜರಿರಾ! 'ಓಂ ನಮಃ ಶಿವಾಯ' ಎಂಬ ಮಂತ್ರ ಸರ್ವಜನವಶ್ಯ ಕೂಡಲಸಂಗಮದೇವಾ.

ಪ್ರಣವ ಎಂಬುದು ಪ್ರಸಾದ. ಜಗದ ಸೃಷ್ಟಿಯ ಬೀಜ. ಮೂಲಬ್ರಹ್ಮ. ಅದು ಪರಮ ಪ್ರಕಾಶ. ಪ್ರಸಿದ್ಧ ಪ್ರಸಾದ. ಆ ಪ್ರಸಿದ್ಧ ಪ್ರಸಾದದಿಂದಲೇ ಜಗದ ಸೃಷ್ಟಿ. ಅದರ ಸ್ವರೂಪವೇ ಪ್ರಸಾದ. ಅದರ ನಿರೂಪವೇ ಲಿಂಗೈಕ್ಯ.

ಪ್ರಣವ ಶಬ್ದವಾದರೂ ಶಬ್ದದಿಂದ ಅದರ ಅರ್ಥ ಹೇಳಲು ಬರುವುದಿಲ್ಲ. ತನ್ನನ್ನು ತಾನೇ ಎಂದು ಬೆಳಕಿಗೆ ಹೇಗೆ ಹೇಳಲು ಬರುವುದಿಲ್ಲವೋ ಹಾಗೆಯೇ ತನ್ನನ್ನು ತಾನೇ ಎಂದು ತನುವಿಗೆ; ತನುವಿನಲ್ಲಿ ತನ್ಮಯವಾದ ನಿರೂಪಕ್ಕೆ ಹೇಳಲು ಬರುವುದಿಲ್ಲ. ಏಕೆಂದರೆ ಕಾಣುವ ತನುವು ಪ್ರಸಾದ ವಾದರೆ; ಕಾಣಬಾರದ ತನುವಿನಲ್ಲಿಯೇ ತನ್ಮಯವಾದ, ತನುವಿಗೆಯೇ ನುಡಿದು ಹೇಳುವ ತನುವು ಅದು ಲಿಂಗೈಕ್ಯ. ಅದು ಪ್ರಣವ!

ಪ್ರಣವ ಸಕಲ ತನುಗಳಲ್ಲಿ ತನ್ಮಯವಾಗಿದೆ. ತನು ಕಂಡುಬರುವ ಅಕ್ಷರವಾದರೆ; ಕಾಣಲು ಬಾರದ ಅಕ್ಷರೋತ್ತಮನೂ ಹೌದು. ಅಕ್ಷರ ಅದರ ಧ್ವನಿಯನು ಎಲ್ಲರೂ ಬಲ್ಲರು. ಅದರ ತಿರುಳನು ಮಾತ್ರ ಬಲ್ಲವನೇ ಬಲ್ಲ. ವೇದ ವೇದಾಂತ ಶ್ರುತಿ ಸ್ಮೃತಿಗಳು ಸಾರಿದರೇನು? ಪಂಡಿತ ಶಾಸ್ತ್ರಿ ಪುರಾಣಿಕ ವಾಚಿಸಿದರೇನು 'ತತ್ವಮಸಿ' ಎಂದು ಹೊರಗನೇ ಹಾಡಿ ಸತ್ತಿತ್ತಲ್ಲ ಜಗವೆಲ್ಲ ನಾಯಿಸಾವ ಎಂದು ಪ್ರಭು ಹೇಳಿದಂತೆ!

ಪ್ರಣವ ತನುವಿನ ಪ್ರಸಾದ! ಅದನ್ನು ಕೇಳಿ, ಓದಿ, ಜಪ ಮಾಡಿ ವಶ ಮಾಡಿ ಕೊಳ್ಳಬೇಕಿಲ್ಲ. ವಶ್ಯವಾವುದೆಂದು ಅರಿಯದೆ, ಮರುಳು ಗೊಂಬಿರಿ ಎಲೆ ಮನುಜರಿರಾ! 'ಓಂ ನಮಃ ಶಿವಾಯ' ಎಂಬ ಮಂತ್ರ ಸರ್ವ ಜನ ವಶ್ಯ. ಅದು ಸರ್ವಾಂಗದಲ್ಲಿಯೂ, ಸರ್ವಾಂಗಗಳಲ್ಲಿಯೂ ಸಂಗಮ ವಾಗಿದೆ ಎನ್ನುತ್ತಾರೆ ಬಸವಣ್ಣ.

ಬ್ರಹ್ಮಾಂಡವನ್ನು ಸೃಷ್ಟಿಸಿದ ಪ್ರಣವ, ಅಂಗದಲ್ಲಿ ಐಕ್ಯವಾಗಿ ಅರಿವಿನ ಲಿಂಗವಾಗಿ ಅಂಗದಲ್ಲಿಯೇ ಸಂಗಮವಾಗಿದೆ. ಆದರೂ ಅಂಗವನ್ನು ಆವರಿಸಿದ ಮನಕ್ಕೆ, ಅಂಗಕ್ಕೆ, ಅದನ್ನು ಪಡೆದುಕೊಳ್ಳುವ ಬಯಕೆಯೇ ಆಗುತ್ತಿಲ್ಲ. ಇದು ಅಂಗದ ದುರ್ದೈವವೇ ಸರಿ. ಅಂಗವನ್ನು ಆವರಿಸಿದ ಮನದ ದುರ್ದೈವವೇ ಸರಿ!

182

ಯೋಗದಿಂದರಿದಿಹೆನೆಂಬಿರಿ, ಓದಿನಿಂದರಿದಿಹೆನೆಂಬಿರಿ.
ವೇದದಿಂದರಿದಿಹೆನೆಂಬಿರಿ, ಶಾಸ್ತ್ರದಿಂದರಿದಿಹೆನೆಂಬಿರಿ.
ಕೇಳಿರಣ್ಣಾ, ಯೋಗದಂತದು ಅಲ್ಲ. ಓದಿದಂತದು ಅಲ್ಲ.

ವೇದದಂತದು ಅಲ್ಲ, ಶಾಸ್ತ್ರದಂತದು ಅಲ್ಲ. ಶರಣ ಸ್ಥಲ ಬೇರೆ.
ಅದೆಂತೆಂದಡೆ: ಗಂಡಳಿದು ಹೆಣ್ಣಾಗಬೇಕು, ಹೆಣ್ಣಳಿದು ಗಂಡಾಗಬೇಕು.
ಉಂಡೆನುಟ್ಟೆನೆಂಬ ಹಂಗಳಿದು, ಈ ಲೋಕದ ಸಂದೇಹವನಳಿದ ಶರಣಂಗೆ
ನಮೋ ನಮೋ ಎನುತಿರ್ದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ

ಯೋಗದಿಂದ, ಓದಿನಿಂದ, ವೇದದಿಂದ, ಶಾಸ್ತ್ರ, ಪುರಾಣ, ಆಗಮ, ಉಪನಿಷತ್ತುಗಳಿಂದ ತನುವಿನ ಜ್ಞಾನದ ಹೂ ಅರಳುವುದಿಲ್ಲ. ಅವೇನಿದ್ದರೂ ತನುವಿನಿಂದ ಹೊರಬಂದ ಪುಸ್ತಕಗಳಾಗಿವೆ. ತನುವಿನಿಂದಲೇ ಹೊರ ಬಂದು ತನುವಿಗೆ ಸಹಾಯ ಮಾಡಬಲ್ಲವೆ? ಸಸಿಯಲ್ಲಿ ಹೂ ತನ್ಮಯವಾದಂತೆ; ತನುವಿನಲ್ಲಿ ಜ್ಞಾನ ತನ್ಮಯವಾಗಿದೆ. ಸಸಿಯಲ್ಲಿ ಹೂ ಅರಳುತ್ತದೆ. ಆದರೆ ತನುವಿನಲ್ಲಿ ಜ್ಞಾನದ ಹೂ ಅರಳುವುದು ಸಾಧ್ಯವಾಗುವುದೇ ಇಲ್ಲ. ಏಕೆಂದರೆ ಮನ ತನುವಿನತ್ತ ನೋಡದೆ, ತನುವನ್ನೇ ತನ್ನ ಸುಖದ ಸ್ವಾರ್ಥಕ್ಕಾಗಿ ದುರ್ಬಳಕೆ ಮಾಡಿಕೊಳ್ಳುತ್ತದೆ. ಭೂಮಿ ಹೇಮ ವಿಷಯ ಸುಖಕ್ಕಾಗಿ ತನುವನ್ನು ಮತ್ತೆ ಮತ್ತೆ ವಿಕೃತಗೊಳಿಸುತ್ತದೆ. ತನುವಿನಲ್ಲಿಯೇ ತನ್ಮಯವಾದ, ತನುವಿನ ಸಂಪತ್ತೇ ಆದ, ಜ್ಞಾನದ ಸುಖದಿಂದ ದೂರ ಉಳಿಯುತ್ತದೆ.

ವೇದ ಶಾಸ್ತ್ರ ಯೋಗದಿಂದ ಪಂಡಿತನಾಗಿ, ಮನ ತನುವಿಗೆ ಶಾಸ್ತ್ರಿ ಪಂಡಿತನ ಹಣೆಪಟ್ಟಿ ಕಟ್ಟಿ ವ್ಯವಹಾರ ಮಾಡುತ್ತದೆಯೇ ಹೊರತು ಜ್ಞಾನಿಯೇ ತಾನಾಗಲು ಹಿಂಜರಿಯುತ್ತದೆ. ಏಕೆಂದರೆ ಮನ ತನುವಿನ ಜ್ಞಾನದೊಂದಿಗೆ ಬೆರೆತರೆ ಸಾಕು ಸುಳ್ಳು ಸುಖಗಳಿಂದ ದೂರ ಉಳಿದು ಜ್ಞಾನಿಯೇ ತಾನಾಗುತ್ತದೆ. ಜ್ಞಾನರತ್ನ ಎನ್ನುವುದು ಮನಕ್ಕೆ ಹೊಳೆಯುತ್ತಿಲ್ಲ.

ಮನ ಹೆಣ್ಣು. ಜ್ಞಾನವೇ ಗಂಡು. ತನು ಇವೆರಡರ ಮನೆ. ಇದನ್ನು ಮರೆತ ಮನ ತನುವನ್ನು ಸುಂಟರ ಗಾಳಿಯಂತೆ ಆವರಿಸಿ ಅದನ್ನೇ ಹೆಣ್ಣು ಗಂಡಾಗಿಸಿ, ಹೆಣ್ಣನ್ನು ಗಂಡಾಗಿ ನೋಡುತ್ತದೆ. ಗಂಡನ್ನು ಹೆಣ್ಣಾಗಿ ನೋಡುತ್ತದೆ. ಆದರೆ ತನು ಹೆಣ್ಣಲ್ಲ; ಗಂಡಲ್ಲ. ಅರಿವೆಂಬ ನಲ್ಲ; ಮನವೆಂಬ ನಲ್ಲೆ ವಾಸಮಾಡಿದ ಮನೆ. ಇದು ಬರಿ ಮನೆ ಅಲ್ಲ ಸಾಕ್ಷಾತ್ ಶಿವ-ಪಾರ್ವತಿಯರು ವಾಸ ಮಾಡಿದ ಕೈಲಾಸ. ಇಂತಹ ತನುವೆಂಬ ಕೈಲಾಸವನ್ನು ಶಂಕರಾಚಾರ್ಯರು ಸೌಂದರ್ಯಲಹರಿಯಲ್ಲಿ ಸುಂದರವಾಗಿ ಬಣ್ಣಿಸಿದ್ದಾರೆ.

'' ಸ್ಫುರದಂಡಾ ಭೋಗಪ್ರತಿಫಲಿತ ತಾಟಂಕಯುಗಲಂ
ಚತುಷ್ಚಕ್ರಂ ಮನ್ಯೇ ತವ ಮುಖಮಿದಂ ಮನ್ಮಥರಥಮ್
ಯಮಾರುಹ್ಯ ದ್ರೂಹ್ಯತ್ಯವನಿರಥಮರ್ಕೇಂದು ಚರಣಂ
ಮಹಾವೀರೋ ಮಾರಃ ಪ್ರಮಥಪತಯೇ ಸಜ್ಜಿತವತೇ ॥ 59 ॥

ಹೇ ಭಗವತಿ, ಕೆನ್ನೆಗಳ ಮೇಲೆ ಪ್ರತಿಬಿಂಬಿಸುವ ಓಲೆಗಳುಳ್ಳ ನಿನ್ನ ಮುಖವನ್ನು ನಾಲ್ಕು ಚಕ್ರಗಳುಳ್ಳ ಮನ್ಮಥ ರಥವೆಂದು ಭಾವಿಸುತ್ತೇನೆ. ಈ ರಥವನ್ನೇರಿದ ಮಾರನು ಮಹಾವೀರನಾಗಿ ಸೂರ್ಯಚಂದ್ರರೇ ಗಾಲಿಗಳಾಗಿರುವ ಭೂಮಿಯೆಂಬ ತೇರಿನಲ್ಲಿ ಸಜ್ಜಿತನಾಗಿರುವ ಪ್ರಮಥಪತಿಯಾದ ಪರಮೇಶ್ವರನನ್ನು ಎದುರಿಸುತ್ತಾನೆ.

ಅಮೂ ತೇ ವಕ್ಷೋಜಾವಮೃತರಸ ಮಾಣಿಕ್ಯಕುತುಪೌ
ನ ಸಂದೇಹಸ್ಪದೋ ನಗಪತಿಪತಾಕೇ ಮನಸಿನಃ ।

ಪಿಬಂತೌ ತೌ ಯಸ್ಮಾದ ವಿದಿತವಧೂಸಂಗರಸಿಕೌ
ಕುಮಾರಾವದ್ಯಾಪಿ ದ್ವಿರದವದನ ಕ್ರೌಂಚದಲನೌ ॥ 73 ॥

ಹಿಮವಂತನ ವಂಶಕ್ಕೆ ಪತಾಕೆಯಂತಿರುವವಳೆ, ನಿನ್ನ ಸ್ತನಗಳೆರಡೂ ಅಮೃತರಸದಿಂದ ತುಂಬಿದ ಮಾಣಿಕ್ಯದ ಬಿಂದಿಗೆಗಳು. ಈ ವಿಷಯದಲ್ಲಿ ನಮ್ಮ ಮನಸ್ಸಿನಲ್ಲಿ ಸ್ವಲ್ಪ ಸಂದೇಹವೂ ಇಲ್ಲ; ಏಕೆಂದರೆ ಆ ಸ್ತನ್ಯಪಾನ ಮಾಡಿದ ಷಣ್ಮುಖ-ವಿಘ್ನೇಶ್ವರರಿಬ್ಬರೂ ಸ್ತ್ರೀ ಸಂಗದ ಸವಿಯನ್ನು ಅರಿಯದವರಾಗಿ ಈಗಲೂ ಕುಮಾರರಾಗಿಯೇ ಇದ್ದಾರೆ ಎಂದು ಅಂಗದ ಮಹಿಮೆಯನ್ನು ಅಂಗವನ್ನು ಆವರಿಸಿದ ಹೆಣ್ಣೆಂಬ ಮನವನ್ನೂ ವರ್ಣಿಸಿದ್ದಾರೆ.

ಎಮ್ಮ ಗಂಡನು ಏಕಾಂತಂಬೊಕ್ಕನು ಬೇಗ ಬೇಗ ಹೊರನಡಿಯಿರಣ್ಣಾಗಳಿರಾ ಒಬ್ಬನಿದ್ದಡೂ ಸೈರಿಸ ಕಪಿಲಸಿದ್ಧ ಮಲ್ಲಿಕಾರ್ಜುನಾ ಎಂದು ಸಿದ್ಧರಾಮ ಶಿವಯೋಗಿಗಳು ತಾವು ಲೋಕದ ದೃಷ್ಟಿಯಲ್ಲಿ ಗಂಡಾಗಿದ್ದರೂ ಹೆಣ್ಣಾಗಿ ಅರಿವಿನ ನಲ್ಲನೊಂದಿಗೆ ಅಂಗದಲ್ಲಿಯೇ ಕೂಡುವ ಕೂಟದ ಹಾಡನ್ನು ಹಾಡಿದ್ದಾರೆ. ಅಂಗದ ಮನೆಯಲ್ಲಿ ವಕ್ಕರಿಸಿದ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ಅರಿಷಡ್ವರ್ಗಗಳನ್ನು ಹೊರಗೆ ಕಳುಹಿಸಿ ಅರಿವಿನ ಗಂಡನೊಂದಿಗೆ ಮಲಗಿದ್ದಾರೆ.

ಅಕ್ಕ ಮಹಾದೇವಿ, ಮೀರಾ, ಬುದ್ಧ, ಮಹಾವೀರ, ಬಸವಾದಿ ಶರಣರು, ದಾಸವರೇಣ್ಯರು, ಕ್ರಿಸ್ತ, ಕೃಷ್ಣ, ಪೈಗಂಬರರು ಅಂಗದ ಮೂಲಕವೇ ಮಹಾವೀರರಾಗಿ ಪ್ರಕಾಶಿತಗೊಂಡಿದ್ದಾರೆ. ಅಂಗ ಎನ್ನುವುದು ಗಂಡಲ್ಲ ಗಂಡಳಿದು ಹೆಣ್ಣಾಗಬೇಕು. ಅಂಗ ಹೆಣ್ಣಲ್ಲ; ಹೆಣ್ಣಳಿದು ಗಂಡಾಗಬೇಕು. ಉಂಡೆನು ಉಟ್ಟೆನು ಎಂಬ ಅಂಗದ ಹಂಗನು ಅಳಿದು, ಈ ಲೋಕದ ಸಂದೇಹವನು ಅಳಿದು, ಮನ ಅಂಗದಲ್ಲಿಯೇ ಸಂಗಮವಾದ ಅರಿವಿನ ನಲ್ಲನಿಗೆ ಶರಣು ಹೋಗಬೇಕು. ಶರಣನೇ ತಾನಾಗಬೇಕು. ಇಂತಹ ಶರಣನಿಗೆ ನಮೋ ನಮೋ ಎನುತಿರ್ದೆನಯ್ಯಾ ಎಂದಿದ್ದಾರೆ ಅಪ್ಪಣ್ಣ ಶರಣರು.

183

ಯೋಗಾಂಗ,ಭೋಗಾಂಗ, ತ್ಯಾಗಾಂಗ ಈ ತ್ರಿವಿಧವನು ಮರೆದು,
ಭಕ್ತಿಯೋಗದ ಮೇಲೆ ನಿಂದು, ರಾಜ ಯೋಗದ ಮೇಲೆ ನಿಂದು,
ನಡೆದು ನುಡಿದು ತೋರುವವರು ನಮ್ಮ ಶರಣರು.
ಗುರು ಲಿಂಗ ಜಂಗಮ ಈ ತ್ರಿವಿಧವನು,
ಸುಖ ದುಃಖ ಚಿಂತೆ ಸಂತೋಷವೆಂಬುವ ಕಳೆದು,
ಉತ್ಪತ್ತಿ ಸ್ಥಿತಿ ಲಯವೆಂಬುವಂ ಸುಟ್ಟು,
ದೃಕ್ಕು ದೃಶ್ಯ ನಿಜವೆಂಬ ತ್ರಿಕರಣವಏಕವ ಮಾಡಿ,
ಪಿಂಡಾಂಡ ಬ್ರಹ್ಮಾಂಡ ಒಂದೆಂಬುದನರಿದು,
ಸಂದ ಹರಿದು ನಿಂದ ನಿಜಾನಂದದಲ್ಲಿ ಹಿಂದು ಮುಂದೆಂಬುದನರಿಯದೆ,
ನಿಮ್ಮೊಳೊಂದಾದ ಲಿಂಗೈಕ್ಯಂಗೆ ವಂದಿಸಿ ವಂದಿಸಿ,
ಎನ್ನ ಬಂಧನ ಹರಿದು, ನಾನು ಬಟ್ಟ ಬಯಲಾದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಯೋಗ, ಭೋಗ, ತ್ಯಾಗ ಇವು ಅಂಗಕ್ಕೆ ಅಂಟಿಕೊಂಡ ರೋಗಗಳು. ಯೋಗದಿಂದ ಅಂಗ ರೋಗ ರುಜಿನಗಳಿಂದ ಮುಕ್ತನಾಗಬಹುದು ಆದರೆ ಮನೋರೋಗದಿಂದ ಮುಕ್ತನಲ್ಲ. ರಾಮದೇವ ಬಾಬಾ ಒಬ್ಬ ಯೋಗಪಟು. ಒಂದು ವಸ್ತ್ರ ಉಟ್ಟು ಮತ್ತೊಂದು ವಸ್ತ್ರ ಹೊದ್ದ ಸನ್ಯಾಸಿಯಾತ. ಆದರೂ ವ್ಯವಹಾರದಲ್ಲಿ ನಿಪುಣ. ತಾನು ಕಲಿತ ಯೋಗವನ್ನು ಇಡೀ ಪ್ರಪಂಚದಲ್ಲಿ ಮಾರಾಟ ಮಾಡಿ ಅದನ್ನು ಸರಕಾಗಿಸಿಕೊಂಡಾತ. ಯೋಗವೇ ಅಂಗಕ್ಕೆ ಭೋಗವಾಗಿ ಮಾರ್ಪಟ್ಟಿತು. ಯೋಗವೇ ಅಂಗಕ್ಕೆ ತ್ಯಾಗವಾಗಿ ಮಾರ್ಪಟ್ಟಿತು. ಯೋಗಿಯಾದರೂ ಅಂಗಕ್ಕೆ ಅಂಟಿದ ಯಾವ ರೋಗಗಳೂ ಕಳಚುವುದಿಲ್ಲ.

ಮನ ಅಂಗವನ್ನು ಆವರಿಸಿಕೊಂಡು, ಅಂಗವನ್ನು ಹೊಲಿದುಕೊಂಡು ಗರ್ಭದಿಂದಲೇ ಅಂಗದೊಂದಿಗೆ ಹೊರಬಂದಿದೆ. ಅದರ ಹೊಲಿಗೆಯನ್ನು ತಂತ್ರಗಾರಿಕೆಯಿಂದ ಬಿಚ್ಚಿಕೊಂಡು ಅಂಗದಲ್ಲಿಯೇ ಸಂಗಮವಾದ ಅರಿವಿಗೆ ಭಕ್ತಿ ಮಾಡಿ, ಭಕ್ತಿ ಯೋಗದಲ್ಲಿ ನಿಂತು ರಾಜಯೋಗಿ ಆನಂದದಿಂದ ಇರುವುದು ಬಲು ಜಟಿಲ.

ಭಕ್ತ ಎಂದರೆ ರಾಮದೇವ ಬಾಬಾನಂತೆ ವೇಷಧಾರಿಯಲ್ಲ. ವ್ಯಾಪಾರಿಯೂ ಅಲ್ಲ. ಕುಟಿಲ ಸನ್ಯಾಸಿಯೂ ಅಲ್ಲ. ರಾಜಯೋಗಿ! ಲೋಕದಂತೆ ಸಂಸಾರಿಯಾದರೂ ಸಂಸಾರಿಯಲ್ಲ. ಕೆಸರಲ್ಲಿ ಅರಳಿದ ಕಮಲದಂತೆ. ಅದು ಅಲ್ಲಿಯೇ ಹುಟ್ಟಿ ಅಲ್ಲಿಯೇ ಅರಳಿದರೂ ಕೆಸರನ್ನು ಎಲ್ಲಿಯೂ ಮೆತ್ತಿಕೊಂಡಿಲ್ಲ. ನೀರನ್ನು ಎಲ್ಲಿಯೂ ಅಂಟಿಸಿಕೊಂಡಿಲ್ಲ. ಇದ್ದಲಿಯೇ ಇದ್ದು ಅವೆರಡರ ಹೊಲಿಗೆಯನ್ನು ಬಿಚ್ಚಿಕೊಂಡು ಪರಿಮಳ ಸೂಸುತ್ತಾ ಅಲ್ಲಿಯೇ ಅರಳಿದೆ. ಹಾಗೆಯೇ ರಾಜಯೋಗಿಯೂ ಕೂಡಾ. ನಡೆಯುತ್ತಾ ನಡೆದಂತೆ ನುಡಿದು ತೋರುತ್ತಾನೆ.

ಭಕ್ತಿಯೋಗದಿಂದ ಅರಿವೆಂಬ ಗುರುದೇವನಿಗೆ ಭಕ್ತಿ ಮಾಡಿ ಆ ಗುರುದೇವನೇ ತಾನಾಗಿರುತ್ತಾನೆ. ಆ ಭಕ್ತಿಯೋಗದಿಂದಲೇ ಅಂಗದಲ್ಲಿಯೇ ಸಂಗಮವಾದ ಲಿಂಗಕ್ಕೆ ಭಕ್ತಿ ಮಾಡಿ ಲಿಂಗಾಂಗವೇ ತಾನಾಗುತ್ತಾನೆ. ಆ ಭಕ್ತಿಯೋಗದಿಂದಲೇ ಅಂಗದಲ್ಲಿಯೇ ಸಂಗಮವಾದ ಜಂಗಮನಿಗೆ ಭಕ್ತಿ ಮಾಡಿ ಆ ಜಂಗಮನೇ ತಾನಾಗುತ್ತಾನೆ. ಸುಖ ದುಃಖ ಚಿಂತೆ ಸಂತೋಷಗಳನ್ನು ಕಳೆದುಕೊಂಡು ನಡೆದಾಡುವ ಜ್ಞಾನದ ಮರವಾಗುತ್ತಾನೆ. ಸಹಜನಾಗುತ್ತಾನೆ.

ಢೋಂಗಿ ಬಾಬಾಗಳಿಗೆ ಇದು ಸಾಧ್ಯವಾಗುವುದಿಲ್ಲ. ಅವರಿಗೆ ಸುಖವೂ ಉಂಟು ದುಃಖವೂ ಉಂಟು. ಚಿಂತೆಯೂ ಉಂಟು. ಸಂತೋಷವೂ ಉಂಟು. ಆದರೆ ಸಹಜ ನಲ್ಲ. ಸದಾ ಏರಿಳಿತಗಳಿಂದಲೇ ಇದ್ದು ಸುಖವನ್ನು ಹುಡುಕುತ್ತಾ ದುಃಖವನ್ನು ಹೀರಿಕೊಳ್ಳುತ್ತಾನೆ. ಉತ್ಪತ್ತಿ ಸ್ಥಿತಿ ಲಯವನ್ನು ಸುಟ್ಟು ಇರುವಾಗಲೇ ಬೂದಿಯಾಗುತ್ತಾನೆ. ನೋಡಲ್ಪಡುವ ವಸ್ತುವು, ನೋಡುವ ತನು, ಇವೆರಡರ ನಿಜವ ತಿಳಿಯದೇ ಈ ತ್ರಿಕರಣವ ಏಕವ ಮಾಡುವ ತಂತ್ರಗಾರಿಕೆಯನ್ನು ಅರಿಯದೇ ಹೋಗುತ್ತಾನೆ.

ಬ್ರಹ್ಮಾಂಡವನ್ನು ಸೃಷ್ಟಿಸಿದ ಬೀಜ ಒಂದೇ. ಪಿಂಡಾಂಡವನ್ನು ಸೃಷ್ಟಿಸಿದ ಬೀಜ ಒಂದೇ. ಆದರೂ ತಾನು ಕುಬ್ಜನಾಗಿ ಬ್ರಹ್ಮಾಂಡವನ್ನು ದೊಡ್ಡದು ಮಾಡಿ ಅದನ್ನು ಸಂಪಾದಿಸಲು ಹೋಗುತ್ತಾನೆ. ಇವೆರಡಕ್ಕೂ ಕಾರಣವಾದ ಬಯಲ ಬೀಜವೊಂದೇ ಎಂದು ತಿಳಿದು ಸಹಜನಾಗಿರುವಲ್ಲಿ ಎಡವುತ್ತಾನೆ. ಶರಣ ಹಾಗಲ್ಲ. ಅದರ ಸಂದ ಹರಿದು ಬ್ರಹ್ಮಾಂಡ ಪಿಂಡಾಂಡ ಒಂದೆಂಬುದನರಿದು, ವಿರಾಟ ಸ್ವರೂಪಿಯೇ ತಾನಾಗಿ ಆ ನಿಜಾನಂದದಲ್ಲಿ ಒಂದಾಗುತ್ತಾನೆ. ಅಂತಹ ನಿ ಶರಣನಿಗೆ ಲಿಂಗೈಕ್ಯನಿಗೆ ವಂದಿಸಿ ವಂದಿಸಿ, ಎನ್ನ ಬಂಧನ ಹರಿದುಕೊಂಡು, ಬಟ್ಟ

ಬಯಲಾದೆನಯ್ಯಾ ಎಂದಿದ್ದಾರೆ ಹಡಪದ ಅಪ್ಪಣ್ಣ ಶರಣರು.

ಢೋಂಗಿ ಬಾಬಾಗಳು ತಮ್ಮ ವ್ಯವಹಾರಕ್ಕಾಗಿ ಎಲ್ಲೆಡೆ ಸಿಕ್ಕುತ್ತಾರೆ, ಏಕೆಂದರೆ ಅವರು ವೇಷಧಾರಿಗಳು. ಶರಣ ಹಾಗಲ್ಲ. ಆತ ಮಹಾಜ್ಞಾನಿ. ಆತನಿಗೆ ಯಾವ ವೇಷವೂ ಇರುವುದಿಲ್ಲ. ಆತ ಅಗೋಚರದ ಆಚಾರದಾತ. ನೋಡಿ, ಕೇಳಿ, ಮುಟ್ಟಿ, ಮೂಸಿಸಿ, ರುಚಿಸಿ ಸಹಜವಾಗಿ ಇರುವಾತ. ಇಂತಹ ಮಹಾಜ್ಞಾನಿಯನ್ನು ಹುಡುಕಲು ಎಲ್ಲರಿಗೂ ಸಾಧ್ಯವಿಲ್ಲ. ಏಕೆಂದರೆ ತಿಳಿದುಕೊಳ್ಳುವ ಬಯಕೆ ದೇಹಕ್ಕೆ ಆಗುವುದೇ ಇಲ್ಲ. ಜ್ಞಾನಿಯಾಗುವ ಬಯಕೆಯಾದರೆ ಸಾಕು ಜ್ಞಾನದ ತಂತ್ರಜ್ಞಾನವನ್ನು ಸೂಚಿಸುವ ಜ್ಞಾನಿ ಸಿಕ್ಕೇ ಸಿಕ್ಕುತ್ತಾನೆ. ಅಂಗದ ಸಕಲ ಬಂಧನಗಳನ್ನು ಹರಿದು, ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಮನಾಥನ ದರ್ಶನ ಮಾಡಿಸುತ್ತಾನೆ. ಅಂಗ ಸಂಗಮನಾಥನ ಸುಕ್ಷೇತ್ರವೆಂದು ಸಾರುತ್ತಾನೆ.

184

ರಾಗ ರಚನೆ ಬಲ್ಲೆನೆಂಬ ವ್ಯಂಗಿ ಮನುಜರಿರಾ, ನೀವು ಕೇಳಿ:
ರಾಗವಾವುದು, ರಚನೆಯಾವುದು ಬಲ್ಲರೆ ನೀವು ಹೇಳಿರೋ
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ
ಈ ರಾಗ ದ್ವೇಷವ ಹಿಡಿದು, ಕೂಗಿಡುವುದೆಲ್ಲವು ರಾಗವೆ?
ವೇದ ಪುರಾಣಾಗಮ ಶಾಸ್ತ್ರವನೋದಿ ಕಂಡವರ
ಬೋಧಿಸುವುದೆಲ್ಲ ರಚನೆಯೇ ಅಲ್ಲ.
ಇನ್ನು ರಾಗವಾವುದು ಎಂದರೆ,
ಯೋಗಿ, ಜೋಗಿ, ಶ್ರವಣ, ಸನ್ಯಾಸಿ, ಕಾಳಾಮುಖಿ,
ಪಾಶುಪತ ಷಡುದರ್ಶನಕ್ಕೆ ಶ್ರುತವ ತೋರಿ ನುಡಿದು,
ದ್ರುಷ್ಟವ ತೋರಿ ನಡೆದು, ಅಲ್ಲದಿರ್ದರೆ
ನೀತಿಯ ತೋರಿ ಮರೆವುದೀಗ ರಚನೆ.
ಇದನರಿಯದೆ ನಾನು ರಾಗ ರಚನೆಯ ಬಲ್ಲೆನೆಂದು ನುಡಿವ
ಮೂಗು ಹೋದ ಮೂಕೊರೆಯರ ಮೆಚ್ಚುವನೆ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ

ಮೂಗು ಇರುವುದು ಅರಿವಿನ ಪರಿಮಳವನು ಹೀರಿ ಆನಂದ ಪಡುವುದಕ್ಕಾಗಿ. ಚರ್ಮ ಇರುವುದು ಅರಿವಿನ ಸ್ಪರ್ಷವನು ಸ್ಪರ್ಷಿಸಿ ಆನಂದ ಪಡುವುದಕ್ಕಾಗಿ. ಕಣ್ಣು ಇರುವುದು ಸತ್ಯವಸ್ತುವನ್ನು ಅಥವಾ ವಸ್ತುವಿನ ಸೌಂದರ್ಯವನ್ನು ನೋಡುವುದಕ್ಕಾಗಿ. ಕಿವಿ ಇರುವುದು ಶಬ್ದದ ಅರಿವನ್ನು ಕೇಳುವುದಕ್ಕಾಗಿ. ನಾಲಿಗೆ ಇರುವುದು ಪದಾರ್ಥದ ರುಚಿಯ ಮೂಲ ಸ್ವಾದವನು ರುಚಿಸುವುದಕ್ಕಾಗಿ. ಆದರೆ ತನುವಿನ ಈ ಎಲ್ಲಾ ಜ್ಞಾನ ತನುವಿನಲ್ಲಿಯೇ ಗರ್ಭೀಕರಿಸಿಕೊಂಡು ರೋಗಿಯಾಗಿ ಕ್ಷಣ ಕ್ಷಣಕ್ಕೂ ತೊಳಲಾಡುತ್ತದೆ.

ಧ್ವನಿಯನ್ನು ಧ್ವನಿಯೊಂದಿಗೆ ಟಂಕಿಸಿ, ಹಾಡಲು ಹೇಳಿದ ಧ್ವನಿಯನ್ನು ಅರಿವಿನಿಂದ ಕೇಳಲು ಕಿವಿಗೆ ಹೇಳುತ್ತದೆ. ಹಾಗೆಯೇ ಕಿವಿಗೆ ಕೇಳುವ ಸಹಾಯವನ್ನು ಮಾಡುತ್ತದೆ. ಧ್ವನಿಯಲ್ಲಿ

ಸಹಜತೆಯಿದೆ. ಸಹಜತೆಯಿಂದ ಕೇಳುವ ಶಕ್ತಿ ಕೂಡಾ ಇದೆ. ಆದರೆ ಅದು ಕಿವಿಯಲ್ಲಿ ಇಲ್ಲ; ಕಿವಿಯ ಕಿವಿಯಲ್ಲಿ ಇದೆ. ಕಿವಿ ಅಜ್ಞಾನದಿಂದ ಕೇಳಿದರೆ ಕಿವಿಯ ಕಿವಿ ಜ್ಞಾನದಿಂದ ಸಹಜವಾಗಿ ಕೇಳುತ್ತದೆ.

ಕತ್ತೆ ಎಂದು ಬರೆದರೆ ಬರೆದ ಕೈಗೆ ದೋಷವಿಲ್ಲ ನೋಡಿದ ಕಣ್ಣಿಗೂ ದೋಷವಿಲ್ಲ. ನುಡಿದ ಬಾಯಿಗೂ ದೋಷವಿಲ್ಲ. ಕೇಳಿದ ಕಿವಿಗೂ ದೋಷವಿಲ್ಲ. ಆ ಕತ್ತೆ ನೀನೇ ಎಂದು ನುಡಿದರೆ ನುಡಿದ ದೇಹ ಸುಟ್ಟು ನುಡಿಯುತ್ತದೆ. ಕೇಳಿದ ದೇಹವೂ ಸುಡುತ್ತದೆ. ನೋಡಿದ ಕಣ್ಣು ಕಾದು ಕೆಂಡವಾಗುತ್ತವೆ. ಬರೆದ ಕೈ ತತ್ತರಿಸುತ್ತವೆ. ಶಬ್ದ ನುಡಿದ ತನು ಸುಖಿಸಲಿಲ್ಲ; ಕೇಳಿದ ತನುವೂ ಸುಖಿಸಲಿಲ್ಲ. ಎರಡು ತನುಗಳ ಕ್ರೋಧ ಮದ ಮತ್ಸರಗಳನ್ನು ದಮನ ಮಾಡಿಕೊಳ್ಳಲು ಆ ಎರಡೂ ತನುಗಳಿಗೂ ಸಾಧ್ಯವಾಗುವುದಿಲ್ಲ. ವೇದ ಪುರಾಣ ಆಗಮ ಶಾಸ್ತ್ರವನು ಓದಿದ ದೇಹಗಳಿಗೂ ಶಬ್ದ ಘಾಸಿಗೊಳಿಸುತ್ತದೆ. ದೇಹದಲ್ಲಿ ಶಬ್ದ ರೋಗವನ್ನು ಸೃಷ್ಟಿಸಿತು; ಕ್ರೋಧ ಮದ ಮತ್ಸರಗಳನ್ನು ಸೃಷ್ಟಿಸಿತು. ಹಾಗೆಯೇ ಶಬ್ದಗಳಿಂದ ರಾಗ ರಚನೆ ಮಾಡಿದ ಪಂಡಿತನಿಗೆ ಹಾಡಿದ ಸಂಗೀತಗಾರನಿಗೆ ವಿದ್ಯೆಯ ಅಹಂಕಾರವನ್ನು ಸೃಷ್ಟಿಸಿತು, ಕೇಳಿದ ಕಿವಿಗಳಿಗೆ ಸಂತೋಷವನ್ನು ಉಂಟು ಮಾಡುತ್ತದೆ. ಕು-ಶಬ್ದ, ಸು-ಶಬ್ದ ಎನ್ನುವುದು ಶಬ್ದದಲ್ಲಿಯೇ ಅಡಗಿದೆ. ಇವೆರಡೂ ಕೇಳಿ ಸುಖಿಸುವುದೂ ದುಃಖಿಸುವುದು ಹೊರ ಕಿವಿಯ ಧರ್ಮ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ಸೃಷ್ಟಿಸಿ ದೇಹವನ್ನು ಘಾಸಿಗೊಳಿಸುವುದು. ದೇಹವನ್ನು ದುಃಖಕ್ಕೆ ಈಡು ಮಾಡುವುದು, ಹೊರಕಿವಿ, ಹೊರಗಣ್ಣು, ಹೊರ ಚರ್ಮ, ಹೊರ ನಾಲಿಗೆ, ಹೊರ ಮೂಗಿನ ಧರ್ಮ. ಮನ ಮೂಕೊರತಿಯಾಗಿ ದೇಹದ ಈ ಐದೂ ಭಾಗಗಳನ್ನು ಆವರಿಸಿ, ದೇಹಕ್ಕೆ ಸುಖವನ್ನೂ ದುಃಖವನ್ನೂ ಕೊಡುತ್ತದೆ.

ಮೂಗಿಲ್ಲದ ದೇಹ ಹೆಣ್ಣಾದರೇನು ಗಂಡಾದರೇನು ಅದು ಸುಂದರವಾಗಿ ಕಾಣುವುದಿಲ್ಲ. ಅದು ವೇದ ಆಗಮ ಪುರಾಣ ಶಾಸ್ತ್ರಗಳನ್ನು ಓದಿ ಅವುಗಳಿಂದಲೇ ಇತರ ದೇಹಗಳಿಗೆ ಬೋಧಿಸಿದರೇನು ಅದು ಪರಮ ಜ್ಞಾನಿಯ ದೇಹವಲ್ಲ. ಜ್ಞಾನವಿದ್ದರೂ ದೇಹಕ್ಕೆ ಬಳಕೆಯಾಗದಂತೆ ಮನ ತಡೆ ಒಡ್ಡಿದೆ. ಜ್ಞಾನದ ದೇಹವನ್ನು ಅಜ್ಞಾನದ ತನ್ನ ಕಬಂಧ ಬಾಹುಗಳಿಂದ ಬಂಧಿಸಿದೆ. ರಾಗ ರಚನೆಯ ಮದದಿಂದಾಗಿ ಅಜ್ಞಾನದ ಮೂಕೊರತಿಯಾಗಿದೆ. ವೇದ ಪುರಾಣ ಆಗಮ ಶಾಸ್ತ್ರವನು ಓದಿದರೂ ಮೂಕೊರತಿಯಾಗಿದೆ. ಯೋಗಿ, ಜೋಗಿ, ಶ್ರವಣ, ಸನ್ಯಾಸಿ, ಕಾಳಾಮುಖಿ ಪಾಶುಪತದ ದರ್ಶನ ಭಾಗ್ಯ ಮನಕ್ಕೆ ದಕ್ಕಿದರೂ ಅದು ಸಮಾಧಾನಿಯಾಗುವುದಿಲ್ಲ. ಅದರ ಅಹಂಕಾರ ವಿದ್ಯಾಮದ ಅಳಿಯುವುದಿಲ್ಲ. ಅದು ದೇಹಕ್ಕೆ ಉಂಟು ಮಾಡುವ ಕಾಮ ಕ್ರೋಧ ಲೋಭ ಮೋಹ ತಗ್ಗುವುದಿಲ್ಲ.

ಸಕಲ ಶಾಸ್ತ್ರಗಳು, ಆಗಮ, ಪುರಾಣಗಳು, ವೇದ ಉಪನಿಷತ್‌ಗಳು ದೇಹದ ದೇವನಿಂದಲೇ ರಚನೆಯಾಗಿದೆ. ಸಕಲ ರಾಗದ ರಚನೆಗಳೂ ಆ ದೇಹದ ದೇವನಿಂದಲೇ ರಚಿಸಲ್ಪಟ್ಟಿದೆ. ದೇಹದ ದೇವನಿಂದ ರಚಿಸಲ್ಪಟ್ಟ ಶಾಸ್ತ್ರ ಪುರಾಣ ಆಗಮ ವೇದ ಉಪನಿಷತ್ತುಗಳೆಲ್ಲ ದೇಹಕ್ಕೆ ಎಂಜಲಲ್ಲವೆ ? ದೇಹದಿಂದ ರಚಿಸಲ್ಪಟ್ಟ ವಸ್ತುಗಳೆಲ್ಲ ದೇಹಕ್ಕೆ ಹೇಗೆ ಹಿತ ನೀಡಬಲ್ಲವು ಎಂದು ದೇಹವನ್ನು ಆವರಿಸಿದ ಮನ ಯೋಚಿಸಬೇಕು. ದೇಹದ ದೇವನನ್ನು ಅಪ್ಪಿಕೊಂಡು ಕೇಳಿದ ಶ್ರುತಿಗಳನ್ನೆಲ್ಲ ಆ ದೇವನೊಂದಿಗೆ ಶ್ರುತವಿಟ್ಟು ನೋಡಬೇಕು. ಆಗ ಮನ ನಂಬುವುದು ದೇಹದ ದೇವನನ್ನು; ಶಾಸ್ತ್ರವನ್ನಲ್ಲ.

ದೇಹ ಅರಿಯುವ ದೇವನಿದ್ದ ದೇವಾಲಯ. ಕೈಲಾಸ. ಆತ ಮೂಗು ಕಿವಿ ಕಣ್ಣು ನಾಲಿಗೆ

ಚರ್ಮದಲ್ಲಿ ವಾಸವಾಗಿದ್ದಾನೆ. ಆದರೆ ಮನ ಇವೆಲ್ಲವನ್ನೂ ಆವರಿಸಿದೆ. ತನ್ನ ವಶಕ್ಕೆ ಪಡೆದಿದೆ.

ಶಾಸ್ತ್ರ ಪುರಾಣ ವೇದ ಆಗಮ ಉಪನಿಷತ್‌ಗಳನ್ನು ಓದಿದ ಮನ ದೇಹದ ಕೊರಳಿಗೆ ಜನಿವಾರ, ಲಿಂಗ ನೇತು ಹಾಕಿ ಜುಟ್ಟು ಬಿಟ್ಟು ಹಣೆಗೆ ತಿಲಕ ನಾಮಗಳನ್ನು ಬರೆದುಕೊಂಡು ಸುಗಂಧಭರಿತ ಮೃಷ್ಠಾನ್ನವನ್ನು ಲಿಂಗ ಜನಿವಾರಗಳಿಗೆ ಅರ್ಪಿಸಿ ಉಣ್ಣುತ್ತದೆ. ಇದನ್ನು ಕೇಳಿದ ಕಿವಿ, ಮೂಸಿಸಿದ ಮೂಗು, ಚಪ್ಪರಿಸಿದ ನಾಲಿಗೆ, ಸ್ಪರ್ಶಿಸಿದ ಕೈ, ನೋಡಿದ ಕಣ್ಣು ಆನಂದದಿಂದ ಸುಖಿಸುತ್ತದೆ. ಉಂಡ ಮೃಷ್ಠಾನ್ನ ಜೀರ್ಣವಾಗಿ ವಿಸರ್ಜಿಸುವಾಗ ಕೊರಳಿಗೆ ಬಿಗಿದ ಜನಿವಾರ ಕಿವಿಗೆ ಬಿಗಿಯುತ್ತದೆ. ಬೆಳಗಿನ ಮೃಷ್ಟಾನ್ನದ ಸುಗಂಧ ಹೀರಿದ ಮೂಗನ್ನು ಅದರ ದುರ್ಗಂಧ ಹೀರದಂತೆ ವಸ್ತ್ರ ಮುಚ್ಚುತ್ತದೆ. ಕಣ್ಣು ಕಿವಿ ಚರ್ಮ ನಾಲಿಗೆ ಮಲದ ರೂಪ, ವಾಸನೆ ನೋಡಿ ಅಸಹ್ಯಪಟ್ಟುಕೊಳ್ಳುತ್ತವೆ.

ದೇಹ ವಿಸರ್ಜಿಸಿದ ಮಲ ಹಂದಿಗೆ ಅಮೃತ. ತನ್ನ ಪಾಲಿನ ಅಮೃತದ ಮೇಲೆ ನೀರು ಚೆಲ್ಲಿ ಹಾಳು ಮಾಡದಿರಲೆಂದು ಹಂದಿ ದೇಹವನ್ನು ತಳ್ಳಿ ಆನಂದದಿಂದ ಉಣ್ಣುತ್ತದೆ. ಯಾವುದು ಮೃಷ್ಟಾನ್ನ, ಯಾವುದು ಮಲ ಎಂದು ಅರಿಯದ ಮನುಷ್ಯನನ್ನು ಮನುಷ್ಯ ಅನ್ನುವುದಾದರೂ ಹೇಗೆ? ಇದನ್ನು ಅರಿಯಲೆಂದೇ ವಿಷ್ಣು ಹಂದಿಯ ಪಾತ್ರವನ್ನು ಸೃಷ್ಟಿಸಿದ; ಜನ ವರಹನನ್ನು ಪೂಜಿಸಿದರು; ಆದರೆ ಮೂಗಿನ ಅರಿವಿನ ಪರಿಮಳವನ್ನು ಅರಿಯಲಿಲ್ಲ. ಇಂತಹ ಮೂಕೊರತಿಯರು ಯಾವ ರಾಗ ರಚನೆ ಮಾಡಿದರೇನು? ವೇದ ಪುರಾಣ ಆಗಮ ಶಾಸ್ತ್ರವನು ಓದಿದರೇನು ಮೂಗು ಹೋದ ಮೂಕೊರೆಯರನು ಮೆಚ್ಚುವನೆ ದೇಹದಲ್ಲಿದ್ದ ದೇವ ಎಂದು ಪ್ರಶ್ನಿಸಿದ್ದಾರೆ ಅಪ್ಪಣ್ಣ ಶರಣರು.

185

ರಾಗವ ಹಾಡಿದವರೆಲ್ಲರು
ರೋಗ ರುಜಿನಕ್ಕೆ ಒಳಗಾಗಿ ಸತ್ತು ಹೋದರು.
ರಚನೆ ಮಾಡಿದವರೆಲ್ಲರು
ಸುಚಿತ್ತ ಕೆಟ್ಟು ನಿಂದೆಕುಂದೆಗೊಳಗಾಗಿ ಸತ್ತು ಹೋದರು
ರಾಗರಚನೆಯ ಬಿಟ್ಟು,
ಮೂಗ ಮುಗ್ಧರಾಗ್ಗಿಪ್ಪವರ ನಾನಾರನು ಕಾಣೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಮನುಷ್ಯನಲ್ಲಿಯೇ ಹುದುಗಿದ್ದ ಮನುಷ್ಯತ್ವ ಮನುಷ್ಯನಿಗೆ ತಿಳಿಯದ್ದಕ್ಕಾಗಿ ಮಹಾಮನುಷ್ಯ ಹಡಪದ ಅಪ್ಪಣ್ಣ ಮಮ್ಮಲ ಮರುಗಿದ್ದಾರೆ. ರೋಗ ರುಜಿನಗಳಿಗೆ, ನಿಂದೆಕುಂದೆಗಳಿಗೆ ಒಳಗಾಗಿ ಮನುಷ್ಯ ಕ್ಷಣಕ್ಷಣಕ್ಕೂ ಸತ್ತು, ಒಮ್ಮೆ ಸತ್ತು ಹೋಗುವುದಕ್ಕಿಂತ ಶಬ್ದಮುಗ್ದನಾಗಿ, ಶಬ್ದಕ್ಕೆ ನಾಚಿ, ಸುಖ ದುಃಖಕ್ಕೆ ಒಳಗಾಗದ ನಿಃಶಬ್ದವೇದಿ ಸೂತ್ರವನ್ನು ಪಡೆದುಕೊಳ್ಳುವ ಸುಳುಹುಳ್ಳ ಸೂತ್ರವನ್ನು ತಮ್ಮ ವಚನದ ಮೂಲಕ ಓದುಗರಿಗೆ ನೀಡಿದ್ದಾರೆ ಅಪ್ಪಣ್ಣ ಶರಣರು.

ಒಂದು ಕೊರಳಿನ ಮೂಲಕ ಸಪ್ತಸ್ವರಗಳನ್ನು ನುಡಿಸುವ ಚಾಕಚಕ್ಯತೆಯುಳ್ಳ ದೇಹ, ಸಾವಿರಾರು ದೇಹಗಳನ್ನು ತನ್ನ ಕಲೆಯಿಂದ ಏಕ ಕಾಲಕ್ಕೆ ಸಂತುಷ್ಟಪಡಿಸುತ್ತದೆ. ಆದರೆ ಒಂದು ಕೊರಳಿನ ಅಪಸ್ವರಕ್ಕೆ ರೋಗ ರುಜಿನಗಳಿಗೆ ಒಳಗಾಗಿ ನೊಂದುಬೆಂದು ಭಸ್ಮವಾಗುತ್ತದೆ. ರಾಗದಿಂದ

ಸಂತೋಷವಾಗುತ್ತದೆ, ರಾಗದಿಂದ ದುಃಖವೂ ಆಗುತ್ತದೆ. ಸುಖ ದುಃಖಗಳನ್ನು ಉಂಟು ಮಾಡುವ ಶಕ್ತಿ ಕೊರಳಿನಿಂದ ಹೊರಸೂಸುವ ಧ್ವನಿಗಿದೆ. ಧ್ವನಿಯಿಂದಲೇ ಎಲ್ಲ ಸ್ವರಗಳನ್ನೂ ರಚಿಸಲ್ಪಟ್ಟಿದೆ. ಅದು ಕಿವಿಯಲ್ಲಿ ಸಂಗ್ರಹವಾಗಿದೆ. ಒಂದು ರಾಗವಾದರೆ, ಮತ್ತೊಂದು ರೋಗ! ಒಂದು ಕೊರಳು ಇವೆರಡನ್ನೂ ಹೊರಡಿಸುತ್ತದೆ. ಒಂದು ಕಿವಿ ಇವೆರಡನ್ನೂ ಕೇಳುತ್ತದೆ. ಕೊರಳಿಗೆ ಕಿವಿಗೆ ಇಷ್ಟು ಮಾತ್ರ ಗೊತ್ತು. ಆದರೆ ಇವೆರಡೂ ರೋಗಗಳೇ. ಇವೆರಡೂ ಕಲಿತದ್ದೇ. ಇವೆರಡೂ ತನುವಿನಲ್ಲಿ ಸಂಗ್ರಹವಾದದ್ದೇ.

ತನು ಬಯಲ ಬೀಜ. ಈ ಬೀಜದಿಂದಲೇ ಬಂದ ಮತ್ತೊಂದು ಶಕ್ತಿ ತನುವಿನಲ್ಲಿಯೇ ತನ್ಮಯವಾಗಿ ಇದೆ. ಅದು ಮಾತಲ್ಲದ ಮಾತಿನಿಂದ ತನುವಿಗೆ ಬೋಧಿಸುತ್ತದೆ. ಕಿವಿಗೆ ಬಡಿದ ಸುಖದುಃಖದ ಮಾತುಗಳನ್ನು ಮೆದುಗೊಳಿಸಿ, ಮುಗ್ಧವಾಗಿ ಕೇಳುತ್ತದೆ. ಮರು ಮಾತನಾಡದಂತೆ ತನುವನ್ನು ಮೌನಿಯನ್ನಾಗಿಸುತ್ತದೆ. ಇದು ತನುವಿನ ಶಕ್ತಿ. ತನುವಿನಲ್ಲಿಯೇ ತನ್ಮಯವಾದ ನಿಃಶಬ್ದವೇದಿ ಶಕ್ತಿ. ಈ ಶಕ್ತಿಗೆ ಶರಣು ಹೋದ ಶರಣನಿಗೆ ಮಾತ್ರ ಒಲಿದ ಶಕ್ತಿ . ಹೀಗಾಗಿ ಶರಣ, ಮಾತಾಡಿದರೆ ಮಾತಲ್ಲದ ಮಾತನಾಡುವಾತ. ಕೇಳಿದ ಸುಖ ದುಃಖದ ಮಾತುಗಳನ್ನೆಲ್ಲ ಸಂತೋಷದಿಂದ ಉಂಡು ಮೌನದ ಮಾತನಾಡುವ ಹಸನ್ಮುಖಿಯಾತ.

ಅದ್ಭುತವಾದ ಶಕ್ತಿಯನ್ನು ತನು ತನುವಿನಲ್ಲಿಯೇ ಇಟ್ಟುಕೊಂಡು ಬಳಸುವ ಕಲೆ ಗೊತ್ತಿಲ್ಲದೆ ಸದಾ ಸುಖ ದುಃಖಗಳಿಗೆ ಒಳಗಾಗಿ ನಿಂದೆ ಕುಂದೆಗಳಿಗೆ ಒಳಗಾಗಿ ಸಾಯುತ್ತಾ ಬದುಕಿ ಸತ್ತು ಹೋಗುತ್ತದೆ. ಇಂತಹ ಅದ್ಭುತ ಶಕ್ತಿಯನ್ನು ಸಂತ ಪೈಗಂಬರರು ಖುರಾನ್ ಮೂಲಕ ಸಾರಿದರು. ತನು ಬಳಸಿಕೊಳ್ಳಲಿಲ್ಲ; ಬದಲಿಗೆ ಮುಸಲ್ಮಾನನಾಗಿ ಸುಖ ದುಃಖಗಳನ್ನು ಹೇರಿಕೊಂಡಿತು. ಬುದ್ಧ ತ್ರಿಪಿಟಿಕಗಳ ಮೂಲಕ ಸಾರಿದ ; ತನು ಬೌದ್ಧನಾಯಿತು. ಕ್ರಿಷ್ಣ ಭಗವದ್ಗೀತೆಯ ಮೂಲಕ ಸಾರಿದ; ತನು ಹಿಂದುವಾಯಿತು. ಕ್ರಿಸ್ತ ಬೈಬಲ್ ಮೂಲಕ ಸಾರಿದ ತನು ಕ್ರೈಸ್ತನಾಯಿತು. ಋಷಿ ಮುನಿಗಳು ವೇದ ಆಗಮ ಉಪನಿಷತ್‌ಗಳ ಮೂಲಕ ಸಾರಿದರು; ತನು ಕ್ಷತ್ರಿಯ, ಬ್ರಾಹ್ಮಣ, ವೈಶ್ಯ, ಶೂದ್ರನಾಯಿತು. ಇವರೆಲ್ಲರಂತಾಗಲಿಲ್ಲ. ಅವರೇ ತಾನಾಗಲಿಲ್ಲ. ತನುವಿನ ಶಕ್ತಿ ತನುವಿಗೆ ದಕ್ಕಲಿಲ್ಲ. ಜಾಲಕ್ಕೆ ಸಿಕ್ಕು ರೋಗ ರುಜಿನಗಳಿಗೆ ಬಲಿಯಾಗಿ ಬದುಕಿರುವಾಗಲೇ ಸಾಯುತ್ತಾ ಸತ್ತು ಸತ್ತು ಬದುಕಿ ಒಮ್ಮೆ ಸತ್ತು ಇಲ್ಲವಾಗುತ್ತದೆ. ತನುವಿನಲ್ಲಿಯೇ ತನ್ಮಯವಾದ ಮರುಜವಣಿಯ ಹಣ್ಣ ಮೆದ್ದು ಮರಣ ಗೆಲ್ಲಲು ತನುವಿಗೆ ಸಾಧ್ಯವಾಗುತ್ತಿಲ್ಲ.

186

ಲಿಂಗ ನಯನದಲ್ಲಿ ನೋಡುತ್ತ, ಲಿಂಗ ಜಿಹ್ವೆಯಲ್ಲಿ ನುಡಿವುತ್ತ,
ಲಿಂಗ ಹಸ್ತದಲ್ಲಿ ಮುಟ್ಟುತ್ತ, ಲಿಂಗ ನಾಸಿಕದಲ್ಲಿ ವಾಸಿಸುತ್ತ,
ಲಿಂಗ ಸ್ರೋತ್ರದಲ್ಲಿ ಕೇಳುತ್ತ, ಲಿಂಗ ಪಾದದಲ್ಲಿ ನಡೆವುತ್ತ,
ಸರ್ವಾಂಗಲಿಂಗಮಯವಾದ ಶರಣರ ಸಂಗಸುಖದೊಳಗೆ
ಎನ್ನ ನಿರಿಸಯ್ಯಾ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಮುಕ್ಕಣ್ಣನಿಗಿದ್ದಂತೆ ನಯನಗಳು ಮೂರು. ಒಂದು ಸ್ಥೂಲ ನಯನ, ಮತ್ತೊಂದು ಮನೋನಯನ, ಮಗದೊಂದು ಲಿಂಗನಯನ. ಹೀಗೆಯೇ ಜಿಹ್ವೆ, ನಾಸಿಕ, ಕಿವಿ, ಚರ್ಮದಲ್ಲಿ ಕೂಡಾ ಮೂರು ಪ್ರಕಾರಗಳಿವೆ. ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳೆಂದು ಒಂದು ಶರೀರದಲ್ಲಿ

ಮೂರು ಶರೀರಗಳಿವೆಯೋ ಹಾಗೆಯೇ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮದಲ್ಲಿಯು ಕೂಡಾ ಮೂರು ಪ್ರಕಾರಗಳಿದ್ದು ಅಪ್ಪಣ್ಣ ಶರಣರು ಕಾರಣ ಶರೀರದ ಐದು ಜ್ಞಾನೇಂದ್ರಿಯಗಳನ್ನು ಮಾತ್ರ ಹೆಸರಿಸಿದ್ದಾರೆ.

ಶರಣರಿಗೆ ಸರ್ವಾಂಗ ಲಿಂಗಮಯ ಅಂಗವಾಗಿ ಕಂಡಿದೆ. ಜಗದ ಸರ್ವ ಅಂಗಗಳೂ ಲಿಂಗಮಯ ಅಂಗಗಳೇ ಆಗಿವೆ. ಯಾವ ಅಂಗ ತನ್ನ ಅಜ್ಞಾನ ಕಳೆದುಕೊಂಡು ಜ್ಞಾನಾಂಗವಾಗಿದೆಯೋ ಅಂತಹ ಅಂಗಕ್ಕೆ ಜಗದ ಸರ್ವ ಅಂಗಗಳೂ ಲಿಂಗಮಯ ವಾಗಿ ಕಾಣುತ್ತವೆ. ಏಕೆಂದರೆ ಕಣ್ಣಿಗೆ ವಸ್ತುವಿನ ಸತ್ಯ ಮಾತ್ರ ಕಾಣುತ್ತದೆ. ನಾಲಿಗೆ ವಸ್ತು ವಿನ ಸತ್ಯ ಮಾತ್ರ ರುಚಿಸುತ್ತದೆ. ಚರ್ಮ ವಸ್ತುವಿನ ಸತ್ಯ ಮಾತ್ರ ಸ್ಪರ್ಶಿಸುತ್ತದೆ. ಮೂಗು ವಸ್ತುವಿನ ಸತ್ಯದ ಪರಿಮಳ ಮಾತ್ರ ಹೀರುತ್ತದೆ. ಕಿವಿ ಶಬ್ದದ ಸತ್ಯ ಮಾತ್ರ ಕೇಳುತ್ತದೆ. ಹೀಗೆ ಸತ್ಯವನ್ನು ನೋಡಿ ನುಡಿದು ಮುಟ್ಟಿ ಮೂಸಿಸಿ ಕೇಳುತ್ತಾ ನಡೆದಾಡುವ ಅಂಗವು ಅದರ ಸರ್ವಾಂಗವೂ ಲಿಂಗಮಯವಾಗಿರುತ್ತದೆ.

ಸರ್ವ ಓದುಗರಿಗೂ ನಿಲುಕದ ಬೆಡಗಿನ ವಚನವಿದು. ಓದಲು ಸರಳವಿದೆ. ತಿಳಿತಿಳಿದು ನೋಡಲು ಹೋದರೆ ತುಂಬಾ ಜಟಿಲ. ಜಗದ ಸರ್ವ ನಯನಗಳು ಲಿಂಗನಯನವಲ್ಲ. ನಯನ ಲಿಂಗನಯನವನ್ನು ಸಂಗಮಗೊಳಿಸಿಕೊಂಡಿದೆ. ಮನೋನಯನ; ನಯನವನ್ನು ಲಿಂಗನಯನವನ್ನೂ ಆವರಿಸಿದೆ. ಮನೋನಯನಕ್ಕೆ ಲಿಂಗನಯನದ ದರ್ಶನವಾಗಬೇಕು. ಆಗ ನಯನವೇ ಲಿಂಗನಯನವಾಗುವುದು.

ಲಿಂಗನಯನದ ಬೆಳಕಿನ ಕಿರಣದಿಂದಲೇ ನಯನ ಮತ್ತು ಮನೋ ನಯನಗಳು ಜನ್ಮ ತಳೆದಿವೆ. ನಯನವನ್ನು ಸದಾ ಮನೋ ನಯನ ಬಳಸುತ್ತಿರುವುದರಿಂದ ಮನುಷ್ಯ ಮಹಾ ಜ್ಞಾನಿಯಾಗಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ನಯನ ಟಿ.ವಿ.ಪೆಟ್ಟಿಗೆ ಇದ್ದಂತೆ. ಅದು ಜಡ. ಟಿ.ವಿ.ಪೆಟ್ಟಿಗೆಗೆ ಚಾನೆಲ್ ಮತ್ತು ವಿದ್ಯುತ್ ಹೇಗೆ ಅವಶ್ಯವೋ ಹಾಗೆಯೇ ನಯನ ನೋಡಬೇಕಾದರೆ ಲಿಂಗನಯನ ಮನೋನಯನ ಅವಶ್ಯವಾಗಿಬೇಕು.

ಮನೋನಯನ, ನಯನವನ್ನು ಬಳಸಿ ನೋಡಿದರೆ ಸತ್ಯ ಕಾಣುವುದಿಲ್ಲ. ಕಾಣುವುದೆಲ್ಲ ಬರೀ ಸುಳ್ಳು. ದೇಹಕ್ಕೆ ಸುಳ್ಳು ಸಂದೇಶ ನೀಡಿ ಸುಖ ದುಃಖಗಳನ್ನು ತಂದೊಡ್ಡುತ್ತದೆ. ಜಾತಿ ಮತ ಪಂಥಗಳನ್ನು, ಧರ್ಮಗಳನ್ನು, ಹೆಣ್ಣು ಗಂಡೆಂಬ ಭೇದವನು ತನುವಿನ ಕೊರಳಿಗೆ ಸುತ್ತಿ ಮನೋ ನಯನ ನಯನದೊಂದಿಗೆ ಸುಖಿಸುತ್ತದೆ.

ಉದಾ : ದೇವಾಲಯವನ್ನು ನೋಡಿ ಹಿಂದುವೆಂದು, ಮಸೀದಿಯನ್ನು ನೋಡಿ ಮುಸಲ್ಮಾನನೆಂದು, ಚರ್ಚ್‌ನೋಡಿ ಕ್ರಿಶ್ಚಿಯನ್ನನೆಂದು ತನುವಿಗೆ ಧರ್ಮದ ಅಜ್ಞಾನದ ಬೆಸುಗೆ ಹಾಕುತ್ತದೆ. ತನುವಿನ ಚರ್ಮ ಹಿಂದುವಲ್ಲ. ಮುಸಲ್ಮಾನ ಅಲ್ಲ. ಕ್ರಿಶ್ಚಿಯನ್ ಅಲ್ಲ. ಅದು ಚರ್ಮ ಮಾತ್ರ. ಚರ್ಮದೊಳಗಿದ್ದ ಪದಾರ್ಥಗಳು ಕೂಡಾ ಒಂದೇ ಆಗಿವೆ. ಇವುಗಳಲ್ಲಿ ಜಾತಿ-ಮತ ಪಂಥ, ಹೆಣ್ಣು ಗಂಡು, ಧರ್ಮಗಳನ್ನು ಹುಡುಕಿದರೆ ಸಿಗುವುದಿಲ್ಲ.

ದೇವಾಲಯ, ಚರ್ಚ್, ಮಸೀದಿಗಳಿಗೆ ಬಳಸಿದ ಪದಾರ್ಥ ಗಳು ಕಲ್ಲು, ಕಬ್ಬಿಣ, ಗಾರೆ, ಕಟ್ಟಿಗೆ ಇವು ಯಾವೂ ಮಸೀದಿ ಅಲ್ಲ, ಚರ್ಚ್ ಅಲ್ಲ, ದೇವಾಲಯವೂ ಅಲ್ಲ. ಹೀಗೆ ವಸ್ತುವಿನ ಸತ್ಯ ನೋಡುವ ಶಕ್ತಿ ಮನೋನಯನಕ್ಕೆ ಇಲ್ಲದ ನಿಮಿತ್ಯ ಆ ನಯನ ತಾನು ವಾಸ ಮಾಡಿದ ದೇಹವನ್ನೇ ರಕ್ಕಸನನ್ನಾಗಿ ಮಾಡುತ್ತದೆ. ಸುಳ್ಳು ಸುದ್ದಿಯನ್ನು ದೇಹಕ್ಕೆ ಚೆಲ್ಲಿ ದೇಹವೆಂಬ

ದೇವಾಲಯವನ್ನೇ ಹದಗೆಡಿಸಿ ಮನೋನಯನ ಮಾತ್ರ ಸುಖ ಪಡುತ್ತದೆ.

ಚರ್ಮ ಒಂದೇ. ಅದರೊಳಗಿರುವ ಪದಾರ್ಥಗಳೂ ಒಂದೇ. ಆದರೂ ಮನೋನಯನ ಗಂಡಾಗಿ ಹೆಣ್ಣನ್ನು ನೋಡಿ ತನುವಿಗೆ ಭೋಗದ ಆಸಕ್ತಿ ಕೆರಳಿಸುತ್ತದೆ. ಭೋಗಿಸದಿದ್ದರೆ ತನುವಿಗೆ ಸಮಾಧಾನವಿಲ್ಲ ; ಭೋಗಿಸಿದರೆ ತನುವಿಗೆ ಹಾದರದ ಪಟ್ಟ ! ಇರುವುದು ಒಂದು, ನೋಡುವುದು ಮತ್ತೊಂದು. ಇದು ಮನೋನಯನದ ಗುಣಧರ್ಮ. ಈ ನಯನಕ್ಕೆ ಕಾಣುವುದೇ ಸುಳ್ಳು. ಆದರೂ ಕಾಣುತ್ತದೆ ; ಕಾಣುವುದೆಲ್ಲ ಸತ್ಯವಲ್ಲ ; ನೋಡುವುದೆಲ್ಲ ಸತ್ಯವಲ್ಲ.ಇದು ಕುರುಡು ಕಣ್ಣಿನ ಪ್ರಪಂಚ.ಇದಕ್ಕೆ ಲಿಂಗನಯನವೇ ಬೋಧಿಸಬೇಕು. ಆದರೂ ಅದು ಬೋಧಿಸುವುದಿಲ್ಲ. ಲಿಂಗನಯನದ ಬೋಧೆ, ಮನೋನಯನ ಕೇಳುವುದಿಲ್ಲ, ಏಕೆಂದರೆ ಅದಕ್ಕೆ ಕಿವಿಯಿಲ್ಲ. ಜಗತ್ತನ್ನೆಲ್ಲ ಸುಳ್ಳು ಕಣ್ಣಿನಿಂದ ನೋಡಿ ಅದನ್ನೆಲ್ಲ ಭೋಗಿಸುತ್ತ ದೇಹದ ಮೂಲಕ ಸುಖ ಅನುಭವಿಸುವ ಈ ಕಣ್ಣಿಗೆ ಲಿಂಗನಯನದ ಮೂಲಕ ನೋಡುವ ಬಯಕೆಯಾದರೆ ಮಾತ್ರ ತನ್ನ ಹಗಲು ಕುರುಡುತನ ಹೋಗುತ್ತದೆ. ಲಿಂಗನಯನದಲ್ಲಿ ಮನೋನಯನ ಪ್ರವೇಶ ಮಾಡಿ ಲಿಂಗನಯನವೇ ತಾನಾಗುತ್ತದೆ.

ಮನೋನಯನ ಸ್ಥೂಲನಯನಗಳೆರಡು, ಲಿಂಗನಯದಲ್ಲಿ ಬೆರೆತು ಮೂರೊಂದಾದ ಘನವಾಗುತ್ತದೆ. ಮುಕ್ಕಣ್ಣನ ನಯನವಾಗುತ್ತದೆ. ಲಿಂಗನಯನದಿಂದ ನೋಡಿದ ಅಂಗಗಳೆಲ್ಲ ಲಿಂಗಾಂಗಗಳಾಗಿ ಕಾಣುತ್ತವೆ. ಸತ್ಯವನ್ನೇ ನೋಡುತ್ತದೆ, ಸತ್ಯವನ್ನೇ ನುಡಿಯುತ್ತದೆ.

ಬೇಡದ ಕಣ್ಣನ್ನು ಕಣ್ಣಪ್ಪನಂತೆ ಕಳೆದುಕೊಳ್ಳಲು ಎಲ್ಲರಿಗೂ ಬರುವುದಿಲ್ಲ. ಕಣ್ಣಪ್ಪ ತನ್ನ ಬೇಡದ ಮನೋ ನಯನವನ್ನು ಕಿತ್ತಿಕೊಳ್ಳಲಿಲ್ಲ. ಮನೋನಯನಕ್ಕೆ ಲಿಂಗನಯನದ ಅಂದರೆ ಮುಕ್ಕಣ್ಣನ ದರ್ಶನ ಮಾಡಿಸಿದ; ಮನೋನಯನವನ್ನು ಕಳೆದು ಕೊಂಡ. ಹಡಪದ ಅಪ್ಪಣ್ಣನಂತೆ ಕಣ್ಣಪ್ಪನ ಕತೆ ಹೇಳಲು ಬಾರದ ಸಾಹಿತಿ ಕಣ್ಣಪ್ಪ ಕಣ್ಣು ಕೀಳುವ ದೃಶ್ಯದ ಚಿತ್ರ ಬರೆದ. ಒಂದು ಕಣ್ಣಿನಲ್ಲಿ ಮೂರು ಕಣ್ಣುಗಳಿವೆ, ಒಂದು ಕಳೆದುಕೊಂಡರೆ ಮೂರೂ ಹೋಗುತ್ತವೆ. ಒಂದು ಕಣ್ಣಿನಲ್ಲಿ ಮುಕ್ಕಣ್ಣನಿದ್ದಾನೆ. ಮತ್ತೊಂದು ಕಣ್ಣಿನಲ್ಲಿ ಮನವೆಂಬ ತಾನು ವಾಸವಾಗಿದ್ದಾನೆ. ಕಣ್ಣು ಮಾತ್ರ ಎರಡಕ್ಕೂ ಪ್ರಧಾನ. ಹಾರ್ಡ್ ಡಿಸ್ಕ್ ಇದ್ದಂತೆ. ಈ ಕಲೆ ಬಲ್ಲವನೇ ಮುಕ್ಕಣ್ಣ. ಆ ತನುವಿನ ನಯನವೇ ಲಿಂಗನಯನ. ಅದು ಲಿಂಗ ಜಿಹ್ವೆ, ಅದು ಲಿಂಗ ಚರ್ಮ. ಲಿಂಗ ನಾಸಿಕ, ಲಿಂಗಕಿವಿ. ಅದರ ಸರ್ವಾಂಗವೇ ಲಿಂಗಮಯ. ಆ ತನುವನ್ನು ಶರಣ ತನುವೆಂದು ಕರೆಯುತ್ತಾರೆ.

187

ಲಿಂಗ ಪೂಜೆಯ ಮಾಡುತ್ತ , ತಮ್ಮಂಗದ ಸುಖದ ಸಲುವಾಗಿ
ಹಂಪೆಯ ಕಂಗಳರ ಹಾಗೆ ಕೂಗುತ್ತ , ಅರಚುತ್ತ ,
ಸತಿಸುತರೊಳಗೆ ಹೊಡೆದಾಡುತ್ತಿಪ್ಪರಲ್ಲದೆ,
ಆ ಲಿಂಗಕ್ಕೆ ತನಗೆ ಒಡೆಯರಾಗಿದ್ದ ಜಂಗಮ ಬಂದರೆ, ಎತ್ತಲೆಂದರಿಯರು.
ಇಂತಪ್ಪ ಕತ್ತಲೆ ಮನುಜರು, ಲಿಂಗವ ಕಟ್ಟಿದರೇನು ?
ಜಂಗಮಕಿಕ್ಕಿದರೇನು ? ಗುರುವಿಂಗೆ ಶರಣೆಂದರೇನು ?
ತಮ್ಮ ಮರಣಬಾಧೆಯ ಗೆಲುವವನಕ್ಕ ಹುರುಳಿಲ್ಲ ಹುರುಳಿಲ್ಲ.
ಮಾಡಿದ ಭಕ್ತಿ , ಅತ್ತಿಯ ಹಣ್ಣ ಬಿಚ್ಚಿದಂತೆ.
ಅವರು ಹೊತ್ತಿಪ್ಪ ವೇಷ ದೊಡ್ಡದು.

ಎಮ್ಮ ಸಮಯ ನಾನದನರಿದು, ನಿಮ್ಮಲ್ಲಿ ನಿರ್ಮುಕ್ತನಾದ ಬಳಿಕ,
ಈ ಜಗವೇನಾದರೇನಯ್ಯಾ , ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಕೊರಳಲ್ಲಿ ಲಿಂಗ, ಶಿಲುಬೆ, ಜನಿವಾರ, ರುದ್ರಾಕ್ಷಿ ಧರಿಸಿದರೇನು? ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಅಂಗದಲ್ಲಿ ಹುಟ್ಟಿ ಅಂಗಕ್ಕೆ ಬಾಧೆ ಕೊಡುವುದು ನಿಲ್ಲುವುದಿಲ್ಲ. ಸತಿ ಸುತರೊಂದಿಗೆ, ನೆರೆಹೊರೆಯವರೊಂದಿಗೆ, ಗೆಳೆಯರೊಂದಿಗೆ ಹೊಡೆದಾಡುವುದು ನಿಲ್ಲುವುದಿಲ್ಲ.ಲಿಂಗ ಕಟ್ಟಿದ ಜಂಗಮ ಬಂದರೂ ಗೌರವಿಸುವುದಿಲ್ಲ. ಇಂತಹ ಅಜ್ಞಾನದ ಕತ್ತಲೆಯಲ್ಲಿ ವಾಸ ಮಾಡುವ ಮನುಜರು ಲಿಂಗ ಕಟ್ಟಿದರೇನು, ಜಂಗಮನಿಗೆ ಉಣಬಡಿಸಿದರೇನು? ಗುರುವಿಗೆ ಶರಣೆಂದರೇನು ? ತನಗಾಗುವ ಮರಣ ಬಾಧೆಯ ಗೆಲ್ಲುವವರೆಗೆ ಹುರುಳಿಲ್ಲ ಹುರುಳಿಲ್ಲ.

ಮಾಡಿದ ಎಲ್ಲಾ ಭಕ್ತಿ ಅತ್ತಿಯ ಹಣ್ಣು ಬಿಚ್ಚಿದಂತೆ. ಅವರು ಹಾಕಿಕೊಂಡ ವೇಷ ಅವರಿಗೇ ದೊಡ್ಡದು. ಆದರೆ ಆ ವೇಷಕ್ಕೆ ಅವರೇ ಅನುಭವಿಸುವ ಬಾಧೆಯನು ಕಳೆಯಲಿಕ್ಕೆ ಸಾಧ್ಯವೇ ಇಲ್ಲ.

ಜಗತ್ತು ವೇಷದಲ್ಲಿಯೇ ಮುಳುಗಿ ಹೋಗಿದೆ. ಹಾಕಿಕೊಂಡ ಮುಖವಾಡವನ್ನು ಹಾಕಿಕೊಂಡವನೇ ಕಳಚಬೇಕಲ್ಲ. ಅದು ಅವನಿಗೆ ಸಾಧ್ಯವಾಗುವುದೇ ಇಲ್ಲ. ಇಂತಹ ವೇಷದಿಂದ ಹೊರ ಬರುವವರು ಆಲ್ಲೊಬ್ಬ ಇಲ್ಲೊಬ್ಬರಂತೆ. ಅಪ್ಪಣ್ಣ ಶರಣರಂತೆ. ಅವನು ಮಾತ್ರ ಅದನರಿದು ನಿರ್ಮುಕ್ತನಾಗುತ್ತಾನೆ. ಜಗತ್ತು ಏನಾದರೇನು ? ಅವನೊಳಗೆ ಜಗತ್ತು . ಅವನು ಮಾತ್ರ ಸರ್ವಸುಖಿ!

188

ಲಿಂಗಪ್ರಸಾದವ ಜಂಗಮಕ್ಕೆ ಕೊಡುವ ಕರ್ಮಿಗಳು ನೀವು ಕೇಳಿರೆ.
ಜಂಗಮ ಪ್ರಸಾದವ ಲಿಂಗಕ್ಕೆ ಕೊಡುವ ಧರ್ಮಿಗಳು ನೀವು ಕೇಳಿರೆ.
ಲಿಂಗ ಪ್ರಸಾದವ ಜಂಗಮಕ್ಕೆ ಕೊಡುವುದು ಅನಾಚಾರ.
ಜಂಗಮಪ್ರಸಾದವ ಲಿಂಗಕ್ಕೆ ಕೊಡುವುದು ಸದಾಚಾರ.
ಅದೆಂತೆಂದಡೆ :-ಶಿವಧರ್ಮ ಪುರಾಣದಲ್ಲಿ :
ಲಿಂಗಾರ್ಪಿತ ಪ್ರಸಾದಂಚ ನದದ್ಯಾಜ್ಜಂಗಮಾರ್ಪಿತಂ ।
ಜಂಗಮಾರ್ಪಿತ ಪ್ರಸಾದಂ ತದದ್ಯಾ ಲಿಂಗಮೂರ್ತಿಷು ॥
ಎಂದುದಾಗಿ ಇದು ಕಾರಣ,
ಜಂಗಮಪ್ರಸಾದವ ಲಿಂಗಕ್ಕೆ ಕೊಟ್ಟು ಕೊಂಬೆನಾಗಿ,
ಎನ್ನ ಭವಂ ನಾಸ್ತಿಯಾಯಿತ್ತಯ್ಯಾ ,
ಬಸವಪ್ರಿಯ ಕೂಡಲಚೆನ್ನ ಸಂಗಮದೇವಾ

ಕಲ್ಲಲ್ಲಿ ಕೆತ್ತಿದ ಲಿಂಗಕ್ಕೆ ಜಲದಿಂದ ತೊಳೆದು, ಪತ್ರಿ ಪುಷ್ಪದಿಂದ ಆರಾಧಿಸಿ, ನಾನಾ ಭಕ್ಷಗಳಿಂದ ನೈವೇದ್ಯ ಮಾಡಿ, ಅದನ್ನು ಲಿಂಗ ಪ್ರಸಾದವೆಂದು ಜಂಗಮನಿಗೆ ಉಣ ಬಡಿಸುವುದು ಅನಾಚಾರ. ಏಕೆಂದರೆ ಅದು ಲಿಂಗವಲ್ಲ ; ಕಲ್ಲು. ಎರೆದರೆ ನೆನೆಯುವುದಿಲ್ಲ ಮರೆತರೆ ಬಾಡುವುದಿಲ್ಲ. ಪತ್ರಿ , ಪುಷ್ಪ, ನೈವೇದ್ಯವೆಂದರೇನೆಂದು ಅದಕ್ಕೆ ತಿಳಿಯುವುದಿಲ್ಲ. ಏನೂ ತಿಳಿಯದ, ಅರಿಯದ ಲಿಂಗವನ್ನು ಲಿಂಗವೆನ್ನಬಹುದೆ ? ಇಂತಹ ಲಿಂಗಕ್ಕೆ ನೈವೇದ್ಯವನ್ನು ತಿಳಿಯುವ ಜಂಗಮನಿಗೆ ಉಣಬಡಿಸಬಹುದೆ ? ಜಂಗಮನನ್ನು ಪೂಜಿಸಿದರೆ ಸುಖಿಸುತ್ತಾನೆ. ಎರೆದರೆ ನೆನೆದು

ಪುಳಕಿತಗೊಳ್ಳುತ್ತಾನೆ. ಎಡೆ ಮಾಡಿದರೆ ಉಂಡು ಆನಂದ ಪಡುತ್ತಾನೆ. ಇಂತಹ ಉಣ್ಣುವ ಜಂಗಮನಿಗೆ ಉಣ್ಣದೇ ಇರುವ ಲಿಂಗಪ್ರಸಾದ ನೀಡಿದ ಭಕ್ತ ಕರ್ಮಕ್ಕೆ ಭಾಗೀದಾರನಾಗುತ್ತಾನೆ. ಅನಾಚಾರಿ ಎಂದೆನಿಸಿಕೊಳ್ಳುತ್ತಾನೆ.

ಜಂಗಮ ಪ್ರಸಾದ ಲಿಂಗಕ್ಕೆ ಕೊಡುವುದು ಸದಾಚಾರ :

ಒಬ್ಬ ಮನುಷ್ಯ ಹಸಿದ ಮತ್ತೊಬ್ಬ ಮನುಷ್ಯನಿಗೆ ಉಣ್ಣಿಸಿ ತಾನು ಉಣ್ಣುವುದು ಸದಾಚಾರ. ಅದರಲ್ಲೂ ಮಹಾಜ್ಞಾನಿಯೆಂಬ ಜಂಗಮನಿಗೆ ಉಣ್ಣಿಸಿ ತಾನು ಉಣ್ಣುವ ಆಚಾರ ಇದು ಸದಾಚಾರ.

ಪ್ರತಿ ಅಂಗದಲ್ಲಿ ಅವ್ಯಕ್ತ ಜಂಗಮನಿದ್ದಾನೆ. ಅವನು ಉಣ್ಣುವುದಿಲ್ಲ ; ಉಡುವುದಿಲ್ಲ . ಅಂಗದ ಮೂಲಕ ಉಣ್ಣುತ್ತಾನೆ ; ಅಂಗದ ಮೂಲಕವೇ ಉಡುತ್ತಾನೆ. ಅಂತಹ ಜಂಗಮನಿಗೆ ಪ್ರಸಾದವನ್ನು ಅಂಗದ ಮೂಲಕ ಉಣಬಡಿಸಬೇಕು. ಜಂಗಮನನ್ನು ಹೊತ್ತ ಅಂಗವನ್ನು ಅಂಗವೆನ್ನಲು ಬರುವುದಿಲ್ಲ. ಅದು ಲಿಂಗ ಅಂಗವೆಂಬ ಲಿಂಗಕ್ಕೆ ಉಣ್ಣಿಸುತ್ತ ಜಂಗಮನನ್ನು ನೋಡುವವನೇ ಧರ್ಮಿ. ಅವನು ಸದಾಚಾರಿ. ಅವನು ಜಂಗಮನಿಗೆ ಸಲ್ಲಬೇಕಾದ ಪ್ರಸಾದವನ್ನು ಅಂಗವೆಂಬ ಲಿಂಗಕ್ಕೆ ಕೊಟ್ಟು ನಂತರ ತಾನು ಸ್ವೀಕರಿಸುತ್ತಾನೆ, ಇಂತಹವನಿಗೆ ಜನನ ಮರಣಗಳಿಲ್ಲ. ಸಕಲ ಬಾಧೆಗಳನ್ನು ಗೆದ್ದ ಶರಣ ನೀತ.

189

ವಂದನೆಗೆ ನಿಲ್ಲಬೇಡ, ನಿಂದೆಗಂಜಿ ಓಡಲಿಬೇಡ.
ಹಿಂದು ಮುಂದು ಆಡಲಿಬೇಡ,ಸಂದೇಹಗೊಳಲಿಬೇಡ.
ದ್ವಂದ್ವ ಬುದ್ಧಿಯ ಕಳೆದು ನಿಂದಿರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಮನುಷ್ಯನ ಭಾಷೆ ದೇಶ ಯಾವುದಾದರೇನು ಸ್ವಭಾವ ಮಾತ್ರ ಒಂದೇ ಆಗಿದೆ. ಹೊಗಳಿಕೆ ಮತ್ತು ವಂದನೆಗೆ ಸುಖಿಸುತ್ತಾನೆ. ತೆಗಳಿಕೆ ಮತ್ತು ನಿಂದೆಗೆ ಕೆರಳುತ್ತಾನೆ. ಹಿಂದು ಮುಂದು ಆಡುತ್ತಾನೆ. ದ್ವಂದ್ವ ಬುದ್ಧಿಯನ್ನು ಕ್ಷಣ ಕ್ಷಣಕ್ಕೂ ತೋರಿಸಿ ಕೊಳ್ಳು ತ್ತಾನೆ. ಆದರೆ ಅಪ್ಪಣ್ಣ ಶರಣರು ತಿರುವು ಮರುವಾಗಿ ಹೇಳಿದ್ದಾರೆ. ಇದು ಆಚರಣೆಗೆ ತರುವುದು ಸುಲಭವಲ್ಲ. ಇದರ ತಂತ್ರಗಾರಿಕೆ ಬಲ್ಲ ನಿಃಶಬ್ದ ವೇದಿಗೆ ಜಟಿಲವಲ್ಲ.

ಅಪ್ಪಣ್ಣ ಶರಣರ ವಚನದ ತಂತ್ರಗಾರಿಕೆಯನ್ನು ರೂಢಿಸಿಕೊಂಡರೆ ಸಕಲ ದೇಶಗಳ ಭಾಷೆಯ ಮನುಷ್ಯನಿಗೆ ಸುಲಭವಾಗುತ್ತದೆ. ಸರಕಾರ, ಶಿಕ್ಷಣ ಇಲಾಖೆಗಳು ಶರಣರ ಈ ಕಲೆಯನ್ನು ತುಂಬಾ ಅಲಕ್ಷ್ಯ ಮಾಡಿವೆ.

ಹೊಗಳುವ, ವಂದಿಸುವ ಮನುಷ್ಯ ಉದ್ದೇಶ ಇಟ್ಟುಕೊಂಡೇ ಹೊಗಳುತ್ತಾನೆ. ತನ್ನ ಉದ್ದೇಶ ಈಡೇರದಿದ್ದಾಗ ತೆಗಳುತ್ತಾನೆ. ಇವೆರಡನ್ನೂ ಅರಿತರೆ ಸಾಕು ಮನುಷ್ಯ ಸ್ವಲ್ಪ ಮಟ್ಟಿಗೆ ಹೊರಾವರಣ ತಿಳಿದುಕೊಂಡು ಎಚ್ಚರದಲ್ಲಿರುತ್ತಾನೆ.

ಜ್ಞಾನಿಗಳ ಸಹವಾಸ ಮಾಡಿದರೆ, ಅವರ ಸತ್ಸಂಗದಲ್ಲಿ ಭಾಗಿಯಾದರೆ ಶಬ್ದದ ಅರಿವನ್ನು ತಿಳಿಯುತ್ತಾನೆ. ಪ್ರತಿ ಶಬ್ದದಲ್ಲಿ ಅರಿವಿದೆ ; ಅರ್ಥವಿಲ್ಲ ಎಂದು ಅವನಿಗೆ ಮನದಟ್ಟಾಗುತ್ತದೆ.

ಮನುಷ್ಯ ಶಬ್ದವನ್ನು ಹೊಗಳುವುದಕ್ಕೂ ಬಳಸುತ್ತಾನೆ, ತೆಗಳುವುದಕ್ಕೂ ಬಳಸುತ್ತಾನೆ. ಇವೆರಡಕ್ಕೂ ಬಳಸುವ ಶಬ್ದ ಮಾತ್ರ ಒಂದೇ. ಈ ಶಬ್ದಗಳಲ್ಲಿ ಹರಿತವಾದ ಆಯುಧಗಳಿಲ್ಲ,

ಸಿಹಿ,ಮಧುರಭರಿತವಾದ ಪದಾರ್ಥಗಳೂ ಇಲ್ಲ. ಆದರೂ ಶಬ್ದದಿಂದಲೇ ಸುಖಿಸುತ್ತಾನೆ. ಶಬ್ದದಿಂದಲೇ ದುಃಖಿಸುತ್ತಾನೆ. ಶಬ್ದ ನಿಂದಿಸಿದಾತನನ್ನು, ಕೇಳಿ ಹಚ್ಚಿ ಕೊಂಡಾತನನ್ನು ಘಾಸಿಗೊಳಿಸುತ್ತದೆ. ಕೇಳಿದವರನ್ನು ಘಾಸಿಗೊಳಿಸುವುದಿಲ್ಲ. ಹಾಗೆಯೇ ನಿಂದಿಸಿದವನಲ್ಲಿ, ನಿಂದನೆಗೆ ಒಳಪಟ್ಟವನಲ್ಲಿ ಸಂಗ್ರಹವಾಗುತ್ತದೆ. ನೆನಪಿಸಿ ಕೊಂಡಾಗೊಮ್ಮೆ ಗಾಯಗೊಳ್ಳುತ್ತಾರೆ. ಶಬ್ದ ಸುಖ,ಶಬ್ದದ ಗಾಯಗಳು ಮಾಯುವುದಿಲ್ಲ. ಮತ್ತೆ ಮತ್ತೆ ಚಿಗುರಿ ಅದರ ಮುಳ್ಳುಗಳು ತನುವನ್ನು ಗಾಯಗೊಳಿಸುತ್ತಲೇ ಇರುತ್ತವೆ. ಇವುಗಳಿಂದ ಮುಕ್ತನಾಗುವವನೇ ನಿಃಶಬ್ದವೇದಿ.

ಶಬ್ದವನ್ನು ನಿಃಶಬ್ದ ಮಾಡಿ, ನಪುಂಸಕಗೊಳಿಸಿ,ಅರಿವಿನಿಂದ ಕೇಳಬಲ್ಲ ಶಕ್ತಿ ಜ್ಞಾನಿಗೆ ಮಾತ್ರ ಇದೆ. ಆತ ವಂದನೆಯನ್ನು ನಿಂದನೆಯನ್ನು ಅಲಕ್ಷ ಮಾಡುತ್ತಾನೆ. ಇವರೆಡೂ ಆತನ ತನುವಿನಲ್ಲಿ ಸಂಗ್ರಹವಾಗುವುದಿಲ್ಲ. ಅರಿವಿನಿಂದ ಕೇಳುತ್ತಾನೆ. ಹ್ಯಾಗೆ ಅಜ್ಞಾನಿ ಕೇಳಿ ಕೂಡಲೇ ಘಾಸಿಗೊಂಡನೋ; ಅಷ್ಟೇ ಸಮಯದಲ್ಲಿ ಜ್ಞಾನಿ ಅರಿವಿನಿಂದ ಕೇಳಿ ಶಬ್ದವನ್ನೇ ನಪುಂಸಕಗೊಳಿಸುತ್ತಾನೆ. ನಿಂದಿಸಿದವನ ಮೇಲೆ ಮೌನ ಸವಾರಿ ನಡೆಯುತ್ತದೆ. ಹಸನ್ಮುಖದ ಅರಿವಿನ ಈ ಸವಾರಿಯಿಂದ ನಿಂದಿಸುವವ ಗಾಬರಿಯಾಗುತ್ತಾನೆ. ತೊಳಿ ಬಳಲುತ್ತಾನೆ. ಹಪಹಪಿಸುತ್ತಾನೆ.

ಗುಡುಗಿನ ಶಬ್ದದಿಂದ ಹುಟ್ಟಿದ ಮಿಂಚಿಗೆ ಭೂಮಿ ಬಿರಿಯುತ್ತದೆ. ಸೀಳಿ ಎರಡು ಹೋಳಾಗುತ್ತದೆ. ಆದರೆ ಬಯಲು ಮಿಸುಕಾಡುವುದೇ ಇಲ್ಲ. ಬೆಂಕಿ, ನೀರು, ವಾಯು, ಭೂಮಿ ಈ ನಾಲ್ಕು ಭೂತಗಳು ವಿಕೃತ ಅವಸ್ಥೆಯಲ್ಲಿ ನರ್ತನ ಮಾಡುತ್ತವೆ. ಬಯಲು ಮಾತ್ರ ಏನೂ ಆಗದಂತೆ ಶಾಂತಚಿತ್ತದಿಂದ ನಾಲ್ಕೂ ಭೂತಗಳನ್ನು ವೀಕ್ಷಿಸುತ್ತದೆ. ಇವುಗಳ ತಾಂಡವ ನೃತ್ಯ ಕೂಡಾ ಬಯಲ ಗರ್ಭದಲ್ಲಿಯೇ ನಡೆಯುತ್ತದೆ. ನಾಲ್ಕು ಮಕ್ಕಳನ್ನು ಗರ್ಭದಲ್ಲಿ ಹೊತ್ತ ಮಹಿಳೆ ಅವುಗಳ ತುಂಟಾಟವನ್ನು ಸಂತೋಷದಿಂದ ಸಹಿಸಿಕೊಂಡಂತೆ ಬಯಲು ನಾಲ್ಕು ಭೂತಗಳನ್ನು ಆನಂದದಿಂದ ಸಹಿಸಿಕೊಳ್ಳುತ್ತದೆ. ಹಾಗೆಯೇ ಪಂಚ ಭೂತಗಳ ಈ ಶರೀರದಲ್ಲಿ ಬಯಲು ಕೂಡಾ ಇದೆಯಲ್ಲ. ಅದು ತಾನಾಗುವ ಕಲೆ ಶರಣನಿಗೆ ಮಾತ್ರ ತಿಳಿದಿದೆ.

ಶರಣ ನಿಂದನೆಗೆ ನಿಲ್ಲುವುದಿಲ್ಲ, ನಿಂದೆಗಂಜಿ ಓಡುವುದಿಲ್ಲ. ಹಿಂದು ಮುಂದು ಆಡುವುದಿಲ್ಲ, ಸಂದೇಹಗೊಳ್ಳುವುದಿಲ್ಲ. ದ್ವಂದ್ವ ಬುದ್ಧಿಯ ಕಳೆದುಕೊಂಡ ಅಪ್ಪಟ ಅಪರಂಜಿ ಚಿನ್ನ ಆತ. ಎಲ್ಲಿ ಕಡಿದು ಪರೀಕ್ಷಿಸಿದರೂ ಒಂದೇ ಬಣ್ಣ. ಸಕಲರನ್ನೂ ತನ್ನಂತೆಯೇ ಮಾಡಿಕೊಳ್ಳುವ ಕಲೆಗಾರ ; ನಿಪುಣನೀತ.

190

ವಜ್ರದ ಮನೆಯೊಳಗಿರ್ದು, ಗೊರಲೆ ಮುಟ್ಟಿತೆಂಬ ಸಂದೇಹವೇಕೆ ?
ಭದ್ರಗಜ ಮೇಲೆ ಬರುತಿರ್ದು ಕೆಳಗಿರ್ದ ಗುಜ್ಜನಾಯಿ ಮುಟ್ಟಿತೆಂಬ ಸಂದೇಹವೇಕೆ ?
ಸಂಜೀವನ ಕೈಯ ಸಾರಿರ್ದು ಇಂದಿಗೆ ನಾಳಿಗೆಂಬ ಸಂದೇಹವೇಕೆ ?
ಸಜ್ಜನ ಸದ್ಭಕ್ತರ ಸಂಗದೊಳಗಿರ್ದು, ಸತ್ತೆನೊ ಬದುಕಿದೆನೊ ಎಂಬ ಸಂದೇಹವೇಕೆ ?
ಹತ್ತರಡಿಯ ಬಿದ್ದು ಹಾವು ಸಾಯದೆಂದು ಗಾದೆಯ ಮಾತ ನುಡಿವರು.
ನಿತ್ಯರಪ್ಪ ಶರಣರ ಸಂಗದೊಳಗಿರ್ದು,
ಮತ್ತೊಂದು ಉಂಟೆಂದು ಭಾವಿಸಿ ನೋಡುವ
ಕತ್ತೆ ಮನುಜರ ಅತ್ತ ಹೊದ್ದದೆ, ಇತ್ತಲೆ ನಿಂದು ನಾಚಿ ನಗುತಿರ್ದ,
ನಮ್ಮ ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ.

ಅಲೆಗ್ಝಾಂಡರನಂತೆ ತನುವಿಗೆ ಪ್ರಪಂಚದ ಸಂಪತ್ತು ದೊರೆಯಬಹುದು ; ಆದರೆ ಸಾಕ್ರೆಟೀಸ್ ಬುದ್ಧ ಕ್ರಿಸ್ತ ಕ್ರಿಷ್ಣ ಬಸವಾದಿ ಶರಣರಂತೆ ಸ್ವರೂಪ ಜ್ಞಾನ ದೊರೆಯದು. ಏಕೆಂದರೆ ತನುವಿಗೆ ತನ್ನ ಜ್ಞಾನಬೇಕೆಂದು ಪ್ರಯತ್ನಿಸುವ ತನುಗಳೇ ಅಲ್ಪ. ತನುವಿನ ಜ್ಞಾನ ತನುವಿಗೆ ದೊರೆಯುವುದೇ ಸ್ವರೂಪಜ್ಞಾನ. ಉಳಿದವರೆಲ್ಲ ಕತ್ತೆ ಮನುಜರೆಂದು ಪ್ರತಿ ತನುವಿನಲ್ಲಿ ತನ್ಮಯವಾದ ಆ ಜ್ಞಾನದೇವನೇ ಘೋಷಿಸಿದ್ದಾನೆ.

ಶರಣರ ಸಂಗದಲ್ಲಿದ್ದು ಅವರು ಹೇಳುವ ಸೂತ್ರಗಳೇ ಅಂತಿಮ. ಆದರೂ ಜ್ಞಾನಕ್ಕೆ ಹೋಗುವ ಮಾರ್ಗ ಮತ್ತೊಂದಿರಬಹುದೆಂದು ಬಯಸುವ ಹಾಗೆ ಪರೀಕ್ಷಿಸಿ ನೋಡುವ ಮನುಜ ದ್ವಂದ್ವ ಬುದ್ಧಿ ಉಳ್ಳವ. ಜ್ಞಾನ ಹೊರಗಿಲ್ಲ. ಅದು ಸರಕಲ್ಲ. ಮತ್ತೊಬ್ಬರಿಂದ ಪಡೆಯಲು ಸಾಧ್ಯವೂ ಇಲ್ಲ. ತನ್ನಿಂದ ತಾನೇ ಪಡೆಯಬೇಕು. ನಿನ್ನಲ್ಲಿಯೇ ಜ್ಞಾನವಿದೆಯೆಂದು ಸೂಚಿಸುವ ಜ್ಞಾನಿ ಬೇಕೇಬೇಕು. ಆತ ಗುರುವಾಗಿ ಹೇಳುವುದಿಲ್ಲ. ಗುರುವೆಂದು ಭಾವಿಸಿ ಬಂದ ಭಕ್ತನ ಮೈದಡವಿ ಆತನ ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವವನ್ನು ತೋರಿಸುತ್ತಾನೆ. ಆ ಸದ್ಗುರುವಿಗೆ ಭಕ್ತನಾಗಲು ಸೂಚಿಸುತ್ತಾನೆ.

ತನು ಯಾವುದಾದರೇನು ? ಅದು ಅರಿವೆಂಬ ಗುರುದೇವನಿದ್ದ ವಜ್ರದ ಮನೆ. ಗೊರಲೆ ಮುಟ್ಟಿತೆಂಬ ಸಂದೇಹವೇಕೆ ? ಅದು ಭದ್ರಗಜ, ನಾಯಿ ಮುಟ್ಟಿತೆಂಬ ಸಂದೇಹವೇಕೆ ? ಸಜ್ಜನ ಸದ್ಭಕ್ತರ ಸಂಗದೊಳಗಿರ್ದು ಸತ್ತೆನೊ ಬದುಕಿದೆನೊ ಎಂಬ ಸಂದೇಹವೇಕೆ ? ಒಡಲೊಳಗಿರ್ದು, ಒಡಲಿಂಗಾಧಾರವಾಗಿ, ಒಡಲ ಸೋಂಕದೇ ಒಡಲ ಬೆಳಗುವ ಒಡಲೊಡೆಯನಾತ. ಆತನಿಗೆ ಯಾವ ಕಲಿಕೆಗಳೂ ಬೇಕಿಲ್ಲ. ಆದರೆ ಮನ ಒಡಲನ್ನು ಹಿಡಿದು ಏನೆಲ್ಲ ಕಲಿಯುತ್ತದೆ. ಗುರುದೇವನನ್ನು ಮಾಡಿಕೊಂಡು ತಾನು ಶಿಷ್ಯನಾಗುತ್ತದೆ. ಆತ ಸದಾ ಗುರುವಾಗುತ್ತಾನೆ. ತಾನು ಸದಾ ಶಿಷ್ಯನಾಗುತ್ತಾನೆ. ವೇಷದ ಗುರು ; ವೇಷದ ಶಿಷ್ಯ. ಇವರಿಬ್ಬರೂ ಒಡಲೊಳಗಿದ್ದ ಒಡಲೊಡೆಯನ ಪರಿಚಯವಿಲ್ಲ. ಕತ್ತೆ ಮನುಜರೆಂದು ತಿರಸ್ಕರಿಸಿ ಒಡಲೊಳಗೇ ನಿಂತಿದ್ದಾನೆ. ಆದರೆ ಗುರು ಶಿಷ್ಯರನ್ನು ಹೊತ್ತಿಲ್ಲ. ನಾಚಿ ನಗುತಿರ್ದಾನೆ. ಇಂತಹ ಒಡಲೊಡೆಯನ ಪರಿಚಯ ಅಪ್ಪಣ್ಣ ಶರಣರು ಅಕ್ಷರದ ಮೂಲಕ ಸಕಲ ಓದುಗರಿಗೆ ಮಾಡಿಸಿದ್ದಾರೆ. ಆ ದೇವನನ್ನು ಪರಿಚಯಿಸಿಕೊಂಡ ಆ ದೇವನೇ ಆದವರು ಧನ್ಯರು.

191

ವಾದಿಗೆ ಜೂಜನಾಡುವಾತನೊಬ್ಬ ಘಾತಕ.
ಪರರ ಹಾದಿಯ ಹೋಗುವಾತನೊಬ್ಬ ಘಾತಕ.
ಪಶುವಧೆಯ ಮಾಡುವಾನೊಬ್ಬ ಘಾತಕ.
ಇವರು ಮೂವರು ಹೋದ ಹಾದಿಯಲ್ಲಿ ಹೋಗಲಾಗದು.
ಅದೇನು ಕಾರಣವೆಂದರೆ,
ಅವರು ಚಂದ್ರ ಸೂರ್ಯರುಳ್ಳನ್ನಕ್ಕ ನರಕದಲ್ಲಿಪ್ಪುದು ತಪ್ಪದು ಕಾಣಾ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಜೂಜನಾಡುವಾತನಿಗೆ, ಕೊಲೆಗಡುಕನಿಗೆ, ಕಳ್ಳನಿಗೆ, ಪರರ ಹಾದಿಯಲ್ಲಿ ಹೋಗು

ವಾತನಿಗೆ, ಪಶುವಧೆಯ ಮಾಡುವಾತನಿಗೆ ಇಂದಲ್ಲ ನಾಳೆ ಮುಕ್ತಿಯಿದೆ. ಆದರೆ ವಾದಿಗೆ ಮುಕ್ತಿಯಾಗುವುದಿಲ್ಲ. ಆತ ಸೂರ್ಯ ಚಂದ್ರ ಇರುವವರೆಗೆ ಅವರ ಹಾದಿಯನ್ನು ವಾದಿ ತುಳಿಯುವುದಿಲ್ಲ; ಹಾಗೆಯೇ ಅವರೆಲ್ಲರನ್ನು ತಾನು ಬದುಕಿರುವವರೆಗೆ ನಿಂದಿಸದೆ ಬಿಡಲಾರ. ಸಕಲರನ್ನು ಪಾತಕಿಯೆಂದು ನಿಂದಿಸುವುದೇ ವಾದಿಯ ಕೆಲಸ.

ವಾದಿ ಪ್ರಾಮಾಣಿಕನ ವೇಷಧಾರಿ. ಆದರೆ ಪ್ರಾಮಾಣಿಕನಲ್ಲ. ಒಮ್ಮೆ ಬುದ್ಧ ಅಂಗುಲಿ ಮಾಲನಿರುವ ಕಾಡು ಹೊಕ್ಕ. ಹಿಂಬಾಲಿಸಿದ ಸನ್ಯಾಸಿಗಳು ತಡೆದರು. ತಮ್ಮನ್ನು ಅಂಗುಲಿ ಮಾಲ ಕೊಂದರೆ ನಮಗಾರು ದಿಕ್ಕು ಎಂದು ರೋಧಿಸಿದರು. ನಮ್ಮಲ್ಲಿರುವ ಯಾರನ್ನಾದರೂ ಆಯ್ಕೆ ಮಾಡಿ ತಮ್ಮ ಉತ್ತರಾಧಿಕಾರಿ ಎಂದು ಘೋಷಣೆ ಮಾಡಿ, ತಾವು ಬರದಿದ್ದರೆ ನಾವೆಲ್ಲ ಆತನನ್ನೇ ಬುದ್ಧನೆಂದು ನಂಬುತ್ತೇವೆ ಎಂದರು.

ಬುದ್ಧ ಹಿಂಬಾಲಿಸುವ ಶಿಷ್ಯರನ್ನು ಕುರಿತು ನಸುನಕ್ಕು ಹೇಳಿದ. ನನ್ನ ಹಿಂಬಾಲಿಸುವ ತಾವೆಲ್ಲ ಬುದ್ಧರೆ ಆಗಿರುವಿರಿ. ಬುದ್ಧನ ವೇಷ ಧರಿಸಿರುವಿರಿ. ನಾನು ಯಾರನ್ನು ಉತ್ತರಾಧಿ ಕಾರಿಯೆಂದು ಘೋಷಿಸಲಿ ? ಆದರೆ ಅಂಗುಲಿ ಮಾಲ ಬುದ್ಧನಾಗಬಹುದು ಎಂದು ನಗು ನಗುತ್ತ ಕಾಡು ಹೊಕ್ಕ. ನೂರಾರು ಜನರನ್ನು ಕೊಂದು ಕೊರಳಲ್ಲಿ ಅವರ ಬೆರಳು ಹಾರವಾಗಿ ಧರಿಸಿಕೊಂಡ ಅಂಗುಲಿ ಮಾಲ ಬುದ್ಧನನ್ನು ನೋಡಿ ನೋಡುತ್ತ ನೋಡುತ್ತಾ ನೀರಾಗಿ ಕರಗಿ ಹೋದ. ಅಂಗವನ್ನು ಆವರಿಸಿದ ಅಂಗುಲಿ ಮಾಲ ಸತ್ತ. ಅಂಗದೊಳಗೆ ಸಂಗಮವಾದ ಬುದ್ಧ ಕಾಡಿನಿಂದ ನಾಡಿಗೆ ಬಂದ. ಬುದ್ಧನಿಗೆ ಬುದ್ಧ ಉತ್ತರಾಧಿಕಾರಿಯಾದ.

192

ವೇದಪುರಾಣಾಗಮ ಶಾಸ್ತ್ರ ನಾದದ ಸೊಮ್ಮೆಂಬಿರಿ.
ಆ ನಾದದಿಂದ ಆಕಾಶ ಪುಟ್ಟಿತ್ತು .
ಆಕಾಶದಿಂದ ವಾಯು ಪುಟ್ಟಿತ್ತು , ವಾಯುನಿಂದ ಅಗ್ನಿ ಪುಟ್ಟಿತ್ತು .
ಅಗ್ನಿಯಿಂದ ಅಪ್ಪು ಪುಟ್ಟಿತ್ತು ,ಅಪ್ಪುವಿನಿಂದ ಪೃಥ್ವಿ ಪುಟ್ಟಿತ್ತು .
ಪೃಥ್ವಿಯಿಂದ ಇರುವೆ ಕಡೆಯಾಗಿ ಎಂಬತ್ತು ನಾಲ್ಕು ಲಕ್ಷ ಜೀವಂಗಳು ಪುಟ್ಟಿದವು.
ಅದೇನು ಕಾರಣವೆಂದಡೆ, ರಸಗಂಧದಿಂದ ರೂಪಾದವು, ಅಗ್ನಿ ಕಳೆಯಾಯಿತ್ತು .
ವಾಯು ಚೈತನ್ಯವಾಯಿತ್ತು , ಆಕಾಶ ನಾದವಾಯಿತ್ತು .
ಇಂತಿದರೊಳಗೆ ನಮ್ಮ ದೇವ ಇವರೊಂದರಂತೆಯೂ ಅಲ್ಲ.
ಪಂಚತತ್ವವನಿಳುಹಿ, ಆತ್ಮತತ್ವ ಅನಾತ್ಮನೊಳು ಕೂಡಿ,
ಅನಾಮಯಲಿಂಗ ಕಾಣಬಹುದು.
ಅನಾಮಯಲಿಂಗವ ಕಂಡ ಬಳಿಕ ಅದೇ ಲಿಂಗೈಕ್ಯವು.
ಇದು ತಪ್ಪದು, ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ವೇದ ಆಗಮ ಪುರಾಣ ಶಾಸ್ತ್ರಗಳಿಗೆ ಬೈಬಲ್ ಖುರಾನ್‌ಗಳಿಗೆ ಎಲ್ಲಿಲ್ಲದ ಗೌರವ. ಅದು ಮೇಲಿನಿಂದಲೇ ಉದ್ಭವವಾಯಿತು ಎಂದು ಮುಸಲ್ಮಾನರು ಹೇಳುತ್ತಾರೆ. ಕ್ರಿಶ್ಚಿಯನ್ನರು ಹೇಳುತ್ತಾರೆ. ಹಿಂದೂಗಳು ಕೂಡಾ ಹಾಗೆಂದು ನಾದದಿಂದಲೇ ಹುಟ್ಟಿತೆಂದು ನಂಬುತ್ತಾರೆ. ಬಯಲೇ ಸಕಲ ಸೃಷ್ಟಿಗೆ

ಕಾರಣ. ಬಯಲ ಬೀಜದಿಂದಲೇ ವಾಯು, ಬಯಲ ಬೀಜದಿಂದಲೇ ಅಗ್ನಿ, ಬಯಲ ಬೀಜದಿಂದಲೇ ಜಲ, ಬಯಲು ಬೀಜದಿಂದಲೇ ಪೃಥ್ವಿ. ಇರುವೆ ಎಂಬತ್ನಾಲ್ಕು ಲಕ್ಷ ಜೀವರಾಶಿಗಳು !

ರಸಗಂಧದಿಂದ ರೂಪಾಗಿ, ವಾಯುವೇ ಚೈತನ್ಯವಾಗಿ, ಆಕಾಶನಾದವಾಗಿ ಸುಂದರವಾದ ಅಂಗವೆಂದೆನಿಸಿಕೊಂಡಿತ್ತು . ಆ ಅಂಗದಲ್ಲಿಯೇ ಸಂಗಮವಾದ ಅಂಗದೊಡೆಯ ಇವರೊಂದರಂತೆಯೂ ಅಲ್ಲ. ಆತನಿಗೆ ಇವುಗಳನ್ನು ಸರಿಗಟ್ಟುವಂತಿಲ್ಲ. ಸರ್ವಾಂಗ ಸುಂದರವಾದ ಅಂಗದೊಡೆಯ ಇವೆಲ್ಲವುಗಳನ್ನು ತನ್ನ ಗರ್ಭದಲ್ಲಿ ಸಂಗಮ ಗೊಳಿಸಿಕೊಂಡು ಅರಿವಿನ ಆನಂದದಿಂದ ನೋಡುತ್ತಾನೆ. ಕೇಳುತ್ತಾನೆ. ಮುಟ್ಟಿ ಮೂಸಿ ಸುತ್ತಾನೆ. ಸ್ಪರ್ಶಿಸಿ ಪುಳಕಿತನಾಗುತ್ತಾನೆ. ಈ ಎಲ್ಲವನ್ನೂ ಏಕಗೊಳಿಸಿ ಸರ್ವಾಂಗ ಲಿಂಗಿಯಾಗುತ್ತಾನೆ. ಲಿಂಗೈಕ್ಯನಾಗುತ್ತಾನೆ. ವಿರಾಟಸ್ವರೂಪಿಯಾಗಿ ಜಗದಗಲ ಮುಗಿಲ ಗಲಕ್ಕೂ ನಿಂತು ಬ್ರಹ್ಮಾಂಡದಿಂದತ್ತತ್ತ ವಿಸ್ತರಿಸಿಕೊಂಡು ಪಾತಾಳದಿಂದಲೂ ಅತ್ತತ್ತ ತನ್ನ ಶ್ರೀಪಾದವನ್ನು ಚಾಚುತ್ತಾನೆ. ಆತನಿಗೆ ಇವು ಯಾವೂ ಸರಿಸಾಟಿಯಲ್ಲ.

193

ವೇದವನೋದಿದವರೆಲ್ಲ ನಮ್ಮ ಶರಣರು ಹೋದ ಹಾದಿಯನರಿಯದೇ,
ನಾಹಂ ಎಂದು ಅಹಂಕರಿಸಿ, ಅನಿತ್ಯದೇಹಿಗಳಾಗಿ ಅನಾಮಿಕರಾಗಿ ಹೋದರು.
ಶಾಸ್ತ್ರವನೋದಿದವರೆಲ್ಲ ನಮ್ಮ ಶರಣರು ಹೋದ ಹಾದಿಯನರಿಯದೆ,
ಶ್ರವಣ, ಸನ್ಯಾಸಿ,ಯೋಗಿ, ಜೋಗಿಯಾಗಿ ಹೀಗೆ ಕೆಲಬರು ಕೆಟ್ಟರು.
ಆಗಮವನೋದಿದವರೆಲ್ಲ ನಮ್ಮ ಶರಣರು ಹೋದ ಹಾದಿಯನರಿಯದೆ,
ಕ್ರಿಯಾಪಾದ, ಚರ್ಯಪಾದ, ಜ್ಞಾನಪಾದವೆಂದು
ನಾನಾಪರಿಯ ಕರ್ಮಭಕ್ತಿಯ ಮಾಡಿ,
ಲಿಂಗ ಜಂಗಮದ ಮರ್ಮವನರಿಯದೆ, ಅಧರ್ಮಿಗಳಾಗಿ ಹೋದರು.
ಪುರಾಣವನೋದಿದವರೆಲ್ಲ ನಮ್ಮ ಪುರಾತರು ಹೋದ ಹಾದಿಯನರಿಯದೆ,
ಪುರದ ಬೀದಿಯೊಳಗೆ ಮಾತ ಕಥೆಯ ಪಸಾರವನಿಕ್ಕಿ ಮಾಡಿ,
ಫಲಪದ ಮುಕ್ತಿಗೆ ಸಲ್ಲದೆ ಹೋದರು.
ಇದು ಕಾರಣ, ಈ ಚತುರ್ವಿಧದೊಳಗಾವಂಗವೂ ಅಲ್ಲ.
ಎಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ವೇದ ಶಾಸ್ತ್ರ ಆಗಮ ಪುರಾಣ ಓದಿ ಜ್ಞಾನಿಯಾಗಲು ಸಾಧ್ಯವಾಗುವುದಿಲ್ಲ. ಬದಲಾಗಿ ಅಹಂಕಾರಿಯಾಗುತ್ತಾನೆ. ಸನ್ಯಾಸಿ ಯೋಗಿ ಜೋಗಿಯಾಗುತ್ತಾನೆ. ನಾನಾ ವಿಧದ ಕರ್ಮ ಭಕ್ತಿಯ ಮಾಡಿ ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಲಿಂಗ ಜಂಗಮವನು ಅರಿಯದೇ ಅಧರ್ಮಿಯಾಗುತ್ತಾನೆ. ಪುರದ ಬೀದಿಯೊಳಗೆ ಮಾತು ಕತೆಯ ಪಸಾರವನು ಇಕ್ಕಿ ಫಲಪದ ಮುಕ್ತಿಗೆ ಸಲ್ಲದೆ ಹೋಗುತ್ತಾನೆ.

ವೇದ ಶಾಸ್ತ್ರ ಆಗಮ ಪುರಾಣಗಳಿಗೆ ಜನ್ಮ ನೀಡಿದ ಅಂಗಕ್ಕೆ, ಅಂಗದಲ್ಲಿಯೇ ಸಂಗಮವಾದ ಲಿಂಗಕ್ಕೆ ಈ ಚತುರ್ವಿಧದ ಅಕ್ಷರಗಳು ಬೋಧಿಸಲು ಸಾಧ್ಯವೆ ? ಶರಣನ ಪರಿಯೇ ಬೇರೆ. ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಲಿಂಗಕ್ಕೆ, ಜಂಗಮನಿಗೆ ಶರಣು ಹೋಗಿ ಶರಣನಾದಾತ.

ತಾನು ಸತಿಯಾಗಿ ಲಿಂಗವನ್ನೇ ಪತಿಯನ್ನಾಗಿಸಿಕೊಂಡಾತ. ಅರ್ಧನಾರೀಶ್ವರನೇ ತಾನಾದಾತ. ಇಂತಹ ಶರಣನಿಗೆ ವೇದವನೋದಿದವರು ಸರಿಯಾಗಲಾರರು. ಶಾಸ್ತ್ರವನೋದಿದವರು, ಆಗಮವನು ಓದದಿದವರು ಆತನ ಹಾದಿಯನು ಅರಿಯರು. ಲಿಂಗ ಜಂಗಮದ ಮರ್ಮವನು ಅರಿಯದೆ ಅಧರ್ಮಿಗಳಾಗಿ ಹೋದರು. ಇದು ಸರ್ವಕಾಲಕ್ಕೂ ಸತ್ಯವೆಂದು ಅಪ್ಪಣ್ಣ ಶರಣರು ತಮ್ಮ ಈ ವಚನದ ಮೂಲಕ ಸಾರಿದ್ದಾರೆ.

194

ವೇಷವ ಹೊತ್ತು , ಆಶೆ ರೋಷವ ಬಿಡದೆ, ದೇಶವ ತಿರುಗಿ,
ಹೊರವೇಷದ ವಿಭೂತಿ ರುದ್ರಾಕ್ಷಿ ಕಾವಿ ಕಾಷಾಯಾಂಬರವ ಧರಿಸಿ ಫಲವೇನು ?
ಕಾಮ ಕೆಡದು,ಕ್ರೋಧ ಬಿಡದು,ಲೋಭ ಹಿಂಗದು, ಮೋಹ ನಿಲ್ಲದು,
ಮದ ಹೆರೆಸಾರದು, ಮತ್ಸರ ಬೆಂದು ಹೋಗದು.
ಇವೆಲ್ಲ ಸಹಿತ ಜಂಗಮ ಭಕ್ತರೆಂದು ಸುಳಿವವರ ಕಂಡು ನಾಚಿತ್ತು ಎನ್ನ ಮನ.
ಭಕ್ತ ಜಂಗಮ ಘನವೇನೆಂದು ಉಪಮಿಸುವೆ ?
ರೂಪಿನ ಹಾಗೆ, ನೆಳಲಿನ ಹಾಗೆ, ದೇಹದ ಹಾಗೆ,
ಪ್ರಾಣದ ಹಾಗೆ, ಭಾವದ ಹಾಗೆ, ದೇಹದ ಹಾಗೆ,
ಉರಿಯ ಹಾಗೆ, ಕರ್ಪುರದ ಹಾಗೆ, ಆವಿಯ ಹಾಗೆ, ನೀರಹಾಗೆ,
ಎರಡೊಂದಾದರೆ ತೆರಹಿಲ್ಲ.
ಆ ನಿಲುವಿಂಗೆ ನಮೋ ನಮೋ ಎನುತಿರ್ದೆ ಕಾಣಾ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ವೇಷ ಹಾಕಿ ದೇಶ ಸುತ್ತಿದರೇನು ? ಹೊರ ವೇಷದ ವಿಭೂತಿ-ರುದ್ರಾಕ್ಷಿ ಕಾವಿ ಕಾಷಾಯಾಂಬರಗಳು ಆಶೆ ರೋಷವನ್ನು ಬಿಡಲು ಸಹಾಯ ಮಾಡುವುದಿಲ್ಲ. ಅಂಗವನ್ನೇ ಹರಿದು ತಿನ್ನುವ ಕಾಮ ಕೆಡುವುದಿಲ್ಲ. ಅಂಗದಲ್ಲಿ ಹುಟ್ಟಿದ ಕ್ರೋಧ ಅಂಗವನ್ನೇ ಸುಡದೇ ಬಿಡುವುದಿಲ್ಲ.ಲೋಭ ಹಿಂಗುವುದಿಲ್ಲ, ಮೋಹ ನಿಲ್ಲುವುದಿಲ್ಲ. ಮದ ಹೆರೆ ಸಾರದೆ ಬಿಡುವುದಿಲ್ಲ. ಮತ್ಸರ ಬೆಂದುಹೋಗುವುದಿಲ್ಲ. ಇವೆಲ್ಲ ಸಹಿತ ಜಂಗಮ ಭಕ್ತನೆಂದು, ದಾಸವರೇಣ್ಯರು, ಪೀಠಾಧಿ ಪತಿ, ಮಠಾಧಿಪತಿಯೆಂದು, ಈ ನಾಡಿನ ಜಗದ್ಗುರುವೆಂದು ಅಂಗ ಜಂಬ ಕೊಚ್ಚಿಕೊಳ್ಳದೆ ಬಿಡುವುದಿಲ್ಲ. ಯಾಕೆ ಅಂಗ, ಅಂಗವನ್ನು ಆವರಿಸಿದ ಮನ ತನಗೆ ತಾನೇ ಮೋಸ ಮಾಡಿಕೊಳ್ಳುತ್ತದೆ ಎಂದು ಆಲೋಚಿಸುವುದೇ ಇಲ್ಲ.

ಭಕ್ತ ಜಂಗಮ ಘನವೇನೆಂದು ಉಪಮಿಸುವೆ ? :

ಭಕ್ತ ಜಂಗಮ, ಗುರು ಶಿಷ್ಯರೆಂದರೆ ಅವರು ವೇಷದವರಲ್ಲ. ವೇಷ ಭಕ್ತ ಜಂಗ ಮರಿಗೆ ಸಲ್ಲದು. ಭಕ್ತನೂ ತಾನೇ ; ಜಂಗಮನೂ ತಾನೇ. ಗುರುವೂ ತಾನೇ. ಹೀಗೆಂದು ಪರಿಪೂರ್ಣವಾಗಿ ತಿಳಿದಾಗ ವೇಷಕ್ಕೆ ಆಸ್ಪದವಿಲ್ಲ. ಪೀಠ-ಅಧಿಕಾರಕ್ಕೆ ಆಸ್ಪದವಿಲ್ಲ.

ಅಂಗವನ್ನು ಆವರಿಸಿದ ಮನವೇ ಅಂಗದಲ್ಲಿ ಸಂಗಮವಾದ ಜಂಗಮನಿಗೆ ಭಕ್ತಿ ಮಾಡಿ ಭಕ್ತನಾಗಿದೆ.ಇದು ತೋರಿಕೆಯ ವೇಷವಲ್ಲ.ಅಗೋಚರದ ಭಕ್ತಿ; ಅಗೋಚರದ ಯುಕ್ತಿ. ಒಂದರೊಳಗೊಂದು ಸಂಗಮವಾಗಿ ಎರಡೊಂದಾದ ಘನವಾಗಿದೆ. ಇಂತಹ ಘನವನು

ಏನೆಂದುಪಮಿಸುವುದು ?

ಮನಕ್ಕೆ ವೇಷವುಂಟು, ಆಸೆಯುಂಟು,ದೇಶ ಸುತ್ತುವ ಅಭಿಲಾಷೆ ಉಂಟು, ವಿಭೂತಿ-ರುದ್ರಾಕ್ಷಿ ಕಾವಿ ಕಾಷಾಯದ ವೇಷವನ್ನು ಅಂಗಕ್ಕೆ ಧರಿಸಿ ಅಂಗದೊಂದಿಗೆ ಅಂಗ ಬೆರೆತು ಕಾಮಕೇಳಿಯಾಡುತ್ತದೆ. ಕ್ರೋಧ ಲೋಭ ಮೋಹ ಮದ ಮತ್ಸರಗಳಿಂದ ಬೆಂದು ಹೋಗುತ್ತದೆ. ಈ ವೇಷ ಅಂಗಕ್ಕೆ ಸಮಾಧಾನ ತರುತ್ತಿಲ್ಲ ಎಂದು ಚಿಂತಿಸಲು ಸಹಿತ ಮನ ಬಿಡದೆ ಎಡೆಬಿಡದೆ ಕಾಡುತ್ತದೆ. ಇಂತಹ ವೇಷವನ್ನು ನೋಡಿ ನಾಚಿತ್ತೆನ್ನ ಮನ ಎಂದಿದ್ದಾರೆ ಅಪ್ಪಣ್ಣ ಶರಣರು.

ಭಕ್ತ ಜಂಗಮ ಘನವನೇನೆಂದು ಉಪಮಿಸುವೆ ? ರೂಪಿನ ಹಾಗೆ, ನೆಳಲಿನ ಹಾಗೆ, ದೇಹದ ಹಾಗೆ, ಪ್ರಾಣದ ಹಾಗೆ, ಭಾವದ ಹಾಗೆ, ನಿರ್ಭಾವದ ಹಾಗೆ, ಉರಿಯ ಹಾಗೆ, ಕರ್ಪುರದ ಹಾಗೆ, ಆವಿಯ ಹಾಗೆ, ನೀರ ಹಾಗೆ, ಎರಡೊಂದಾದರೆ ತೆರಹಿಲ್ಲ :

ದೇಹದಲ್ಲಿ ರೂಪು ನೆಳಲು ಪ್ರಾಣ ಭಾವ ನಿರ್ಭಾವ ಅಡಕ ಆಗಿದೆ. ದೇಹ ಒಂದೇ ಕಾಣುತ್ತದೆ. ಅದರ ರೂಪು ಕಾಣುತ್ತದೆ. ಅದರಲ್ಲಿ ಸಂಗಮವಾದ ಮನವೆಂಬ ನೆಳಲು, ದೇಹದ ಪ್ರಾಣ ಭಾವ ನಿರ್ಭಾವ ಕಾಣುವುದಿಲ್ಲ. ನಿರ್ಭಾವದಿಂದ ಜನ್ಮ ಪಡೆದ ಸಕಲವೂ ದೇಹಕ್ಕೆ ಪ್ರಧಾನವಾಗಿ ಬಳಕೆಯಾಗುತ್ತದೆ. ಆದರೆ ದೇಹದ ಸಹಜ ಸ್ಥಿತಿಯೇ ನಿರ್ಭಾವ. ಇದರಿಂದಲೇ ಭಾವ ಪ್ರಾಣ ರೂಪು ನೆಳಲು ಜನ್ಮ ತಳೆದು ದೇಹವಾಯಿತು. ದೇಹ ನಿರ್ಭಾವ ಸೃಷ್ಟಿಸಿದ ಸಂಪತ್ತು.

ಉರಿ ಆವಿ ನೀರು ಕರ್ಪುರದಲ್ಲಿ ಅಡಗಿದೆ. ನೀರು ಕಣ್ಣಿಗೆ ಗೋಚರವಾಗಬೇಕಾದರೆ ಜಲಜನಕ ಮತ್ತು ಆಮ್ಲಜನಕ ಒಂದರೊಳಗೊಂದು ಕೂಡಬೇಕು. ಅಂದರೆ ಮಾತ್ರ ಅದು ಜಲ ಎನ್ನಿಸಿಕೊಳ್ಳುತ್ತದೆ. ತಣ್ಣನೆಯ ಜಲದಲ್ಲಿ ಉರಿಯುವ ಜಲಜನಕವಿದೆ ; ಅದನ್ನು ಉರಿಯುವಂತೆ ಮಾಡುವ ಆಮ್ಲಜನಕವಿದೆ. ಉರಿ ಕರ್ಪುರದಲ್ಲಿ ಬೆರೆತು ಉರಿದು ಆವಿಯಾಗಿ ಏನೂ ಇಲ್ಲದಂತೆ ಬಯಲಾಗುತ್ತದೆ.ಬಯಲೇ ಬೀಜವಾಗಿ ಕಣ್ಣಿಗೆ ಕಾಣುವ ವೃಕ್ಷವಾಗಿ ಮತ್ತೆ ಉರಿದು ಬಯಲಾದ ಹಾಗೆ. ವೃಕ್ಷದಲ್ಲಿ ಬಯಲು ಕಾಣುವುದಿಲ್ಲ. ದೇಹ ಒಂದು ಜ್ಞಾನದ ಮರ ; ನಡೆದಾಡುವ ನಿರ್ಭಾವಿ ಮರ. ಬೋಧಿವೃಕ್ಷ. ಅಂಗದಲ್ಲಿ ಸಂಗಮವಾದ ನಿರ್ಭಾವ, ಅಂಗಕ್ಕೆ ಗೋಚರಕ್ಕೆ ಬಂದು ಎರಡೊಂದಾದ ನಿಲುವಿಂಗೆ ನಮೋ ನಮೋ ಎನುತಿರ್ದೆ ಎಂದಿದ್ದಾರೆ ಅಪ್ಪಣ್ಣ ಶರಣರು.

195

ವ್ಯಸನವುಳ್ಳನ್ನಕ್ಕ ಪ್ರಸಾದಿಯಲ್ಲ.
ವಿಷಯವುಳ್ಳನ್ನಕ್ಕ ಪಾದೋದಕ ಸಂಬಂಧಿಯಲ್ಲ.
ಭಾವವುಳ್ಳನ್ನಕ್ಕ ಭವವಿರಹಿತನಲ್ಲ, ಬಯಕೆವುಳ್ಳನ್ನಕ್ಕ ಐಕ್ಯನಲ್ಲ.
ಇಂತೀ ಐಕ್ಯಸ್ಥಲವೆಲ್ಲರಿಗೆಲ್ಲಿಹುದೊ ?
ಐಕ್ಯನಾದರೆ ಅನ್ನಪಾನಾದಿಗಳ ಇಚ್ಛೆ ನಿಂದು,
ಅನಲ,ಪವನನ ಗುಣ ಕೆಟ್ಟು, ಆಕಾಶದ ಗುಣವರತು,
ಆತ್ಮನೊಳು ಬೆರೆದವರ ಐಕ್ಯರೆಂಬೆ. ಆತ್ಮ ಅನಾತ್ಮನೊಳು ಅಡಗಿದರೆ ನಿರವಯಲನೆಂಬೆ.
ಇಂತಪ್ಪ ಶರಣ ಬಯಲು ಬಯಲಾಗಿಪ್ಪನಲ್ಲದೆ,
ವಿವರಿಸಿ ನೋಡಿದರೆ ಏನೆಂದರಿಯಬಾರದು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಅಂಗದಲ್ಲಿರುವ ಜ್ಞಾನ ಅಂಗಕ್ಕೆ ಬಳಕೆಯಾಗದಿದ್ದರೆ ಆ ಅಂಗ ವ್ಯಸನಗಳಿಂದ ಬಳಲುವುದು.ವಿಷಯಗಳಿಂದ ಬಳುಲುವುದು.ಭಾವ ದುರ್ಭಾವಗಳಿಂದ ಬಳಲುವುದು.ಅನ್ನ ಪಾನಾದಿಗಳ ಇಚ್ಛೆ-ಅಇಚ್ಛೆಗಳಿಂದ ಬಳುಲುವುದು. ಜನನ ಮರಣಗಳಿಂದ ಬಳಲುವುದು. ಗುಣಾವಗುಗಳಿಂದ ಬಳಲುವುದು. ಅಂತಹ ಅಂಗ ಪ್ರಸಾದಿಯಲ್ಲ, ಪಾದೋದಕ ಸಂಬಂಧಿಯಲ್ಲ. ಐಕ್ಯನಲ್ಲ. ಆಕಾಶದ ಗುಣ ಅದು ನಿರ್ಗುಣ. ನಿರ್ಗುಣವೆಂಬ ತತ್ವ ಗುಣ ಅವಗುಣಗಳುಳ್ಳ ಅಂಗಕ್ಕೆ ಗೋಚರವಾಗುವುದೇ ಇಲ್ಲ.

ಪ್ರಸಾದಿ, ಪಾದೋದಕ, ಐಕ್ಯನೆಂಬುದು ಬರೀ ಮಾತಲ್ಲ. ಅದು ಗೋಚರದ ಆಚಾರವುಳ್ಳ ಅಂಗಕ್ಕೆ ನಿಲುಕುವುದೂ ಇಲ್ಲ. ಪ್ರಸಾದಿ ಎಂಬುದು ಅಗೋಚರದ ಆಚಾರ.

ಚರ್ಮ ನೋಡಿ ಹೆಣ್ಣು ಗಂಡೆಂಬ ಭಾವನೆಗಳು ಕಣ್ಣಿನಲ್ಲಿ ಸುಳಿದು,ತನುವಿನಲ್ಲಿ , ಭೋಗದ ಆಸಕ್ತಿ ಕೆರಳಿ ನಾನಾ ವಿಧದ ವ್ಯಸನಗಳು ಆ ತನುವನ್ನು ಕಾಡುತ್ತಿದ್ದರೆ, ಆ ತನು ಪ್ರಸಾದಿ ತನುವಲ್ಲ. ಅದು ವ್ಯಸನವುಳ್ಳ ತನು, ವಿಷಯವುಳ್ಳ ತನು, ಜನನ ಮರಣಗಳ ಬಾಧೆವುಳ್ಳ ತನು. ಇಂತಹ ತನುವಿಗೆ ಪ್ರಸಾದಿಯ ತಂತ್ರಗಾರಿಕೆ ಗೊತ್ತಾಗುವುದಿಲ್ಲ.

ಪ್ರಸಾದಿಯೆಂದರೆ ತಟ್ಟೆಯಲ್ಲಿ ಒಂದಗಳೂ ಬಿಡದಂತೆ ತೊಳೆದುಕೊಂಡು ಉಂಡವನು ಪ್ರಸಾದಿಯಲ್ಲ. ನೋಡುವ ಕಣ್ಣಿಗೆ ಚರ್ಮ ಕಾಣಬೇಕೆ ವಿನಹ ಹೆಣ್ಣು ಗಂಡಲ್ಲ. ಅರಿವಿನ ಕಣ್ಣಿನಿಂದ ನೋಡಿದರೆ ಚರ್ಮ ಹೆಣ್ಣಲ್ಲ ಗಂಡಲ್ಲ. ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಕೂಡಾ ಹೆಣ್ಣಲ್ಲ ಗಂಡಲ್ಲ. ಆದರೂ ಹೆಣ್ಣೆಂದು ಗಂಡೆಂದು ಕಂಡು ಭೋಗದ ಆಸಕ್ತಿ ಕೆರಳಿಸುವ ಕಣ್ಣಿಗೆ ಕಣ್ಣಿನ ಅಜ್ಞಾನವೇ ಒಳ ಕಣ್ಣಿಗೆ ಪ್ರಸಾದ ಮಾಡಿಕೊಳ್ಳುವ ಕಣ್ಣುಳ್ಳ ಕಾಯವೇ ಪ್ರಸಾದಿ ಕಾಯ. ಇದು ಅಜ್ಞಾನವನ್ನು ಉಂಡು ಜೀರ್ಣಿಸಿಕೊಳ್ಳುವ ಪ್ರಸಾದಿ ಕಾಯ. ಇದು ಯಾವ ವ್ಯಸನಗಳಿಲ್ಲದ ಲಿಂಗಾಂಗ. ವಿಷಯವಿಲ್ಲದ ಲಿಂಗಾಂಗ. ಜ್ಞಾನೋದಕ ಸಂಬಂಧಿ.

ಭಾವವುಳ್ಳನ್ನಕ್ಕ ಭವವಿರಹಿತನಲ್ಲ :

ಭಾವ, ಸದ್ಭಾವವಾದರೆ ಒಳಿತು. ಆದರೆ ಹೀಗಾಗುವುದಿಲ್ಲ. ನಿರ್ಭಾವದ ಪರಿಚಯ ಬಾವಕ್ಕೆ ಆಗುವವರೆಗೆ ಅದು ಭಾವ ದುರ್ಭಾವಗಳ ವ್ಯಸನಾದಿ ವಿಷಯಗಳೊಂದಿಗೆ ತನುವನ್ನು ಬಾಧೆಗೊಳಪಡಿಸುತ್ತದೆ. ಉದಾ : ಗೆಳೆಯ ಭಾವದಿಂದ ಗೆಳತಿಯನ್ನು ಪ್ರೀತಿಸುತ್ತಾನೆ. ಗೆಳತಿಯ ಗುಣಗಾನ ಮಾಡುತ್ತ ಆನಂದದಿಂದ ಕಾಲ ಕಳೆಯುತ್ತಾನೆ. ಗೆಳತಿಯ ಹಾದರ ಗೊತ್ತಾದಾಗ ಗೆಳೆಯನ ಭಾವ ದುರ್ಭಾವವಾಗಿ ಪರಿವರ್ತನೆಯಾಗುತ್ತದೆ.ಭಾವದಿಂದ ಪ್ರೀತಿಸಿದ ದೇಹ ದುರ್ಭಾವಕ್ಕೆ ಒಳಗಾಗುತ್ತದೆ. ದ್ವೇಷ ಅಸೂಯೆ ಕ್ರೌರ್ಯಗಳು ದೇಹದಲ್ಲಿ ಮನೆ ಮಾಡುತ್ತವೆ. ಕ್ಷಣಕ್ಷಣಕ್ಕೂ ದೇಹ ಮರಣ ಬಾಧೆಗೆ ಗುರಿಯಾಗುತ್ತದೆ. ತನುವಿನಲ್ಲಿ ಹುಟ್ಟಿದ ಭಾವ ತನುವನ್ನೇ ದುರ್ಭಾವಿಯನ್ನಾಗಿ ಮಾಡಿತು. ತನುವಿನ ಭಾವ ದುರ್ಭಾವಗಳು ತನುವಿಗೆ ಪ್ರಸಾದವಾಗದೇ ಗೆಳತಿಯನ್ನು ಕೊಂದು ಹಾಕುವ ಸಂಚು ರೂಪಿಸುತ್ತದೆ. ಹಲವಾರು ವ್ಯಸನಗಳಿಂದ ತನು ಬಾಧೆಗೊಳಗಾಗುತ್ತದೆ. ನಿರ್ಭಾವಿಯಾಗುವ ಯೋಚನೆ ಭಾವಕ್ಕೆ, ಭಾವ ಉತ್ಪತ್ತಿಯಾದ ತನುವಿಗೆ ಹೊಳೆಯುವುದೇ ಇಲ್ಲ. ಭಾವವುಳ್ಳನ್ನಕ್ಕ ಭಾವ ಬಯಸಿದ ಬಯಕೆ ಉಳ್ಳನ್ನಕ್ಕ ಆ ತನುವಿಗೆ ಬಾಧೆ ತಪ್ಪಿದ್ದಲ್ಲ.

ಆಕಾಶದ ಗುಣವರತು ಆತ್ಮನೊಳು ಬೆರೆತವರ ಐಕ್ಯರೆಂಬೆ :

ಬಯಲು ಭಾವರಹಿತ ನಿರ್ಮಲ. ಅದಕ್ಕೆ ಚಲನೆಯಿಲ್ಲ. ಬಯಲ ಗರ್ಭದಲ್ಲಿ ಸುಳಿಯುವ ಗಾಳಿಗೆ ಚಲನೆಯಿದೆ. ಉರಿಯುವ ಅಗ್ನಿಗೆ ಹರಿಯುವ ಜಲಕ್ಕೆ ತಿರುಗುವ ಭೂಮಿಗೆ

ಚಲನೆಯಿದೆ.ವಿಕೃತ ಗುಣಗಳೂ ಇವೆ. ಈ ನಾಲ್ಕು ಭೂತಗಳು ಬಯಲ ಗರ್ಭದಲ್ಲಿಯೇ ಇವೆ. ಬಯಲ ಬಿಟ್ಟು ದೂರ ಇಲ್ಲ. ಬಯಲಲ್ಲಿಯೇ ಇವುಗಳ ತಿರುಗಾಟ. ಬಯಲು ಮಾತ್ರ ನಿಶ್ಚಲ. ಬಯಲಿಲ್ಲಿಯೇ ನಾಲ್ಕು ಭೂತಗಳ ತಿರುಗಾಟ. ಇದು ತಿಳಿದರೆ ಸಾಕು ಬಯಲಲ್ಲಿಯೇ ಐಕ್ಯ. ಆದರೆ ಮನ ಭಾವ ದುರ್ಭಾವಗಳನ್ನು ವಿಷಯಾದಿ ವ್ಯಸನಗಳನ್ನು ಜನನ ಮರಣ ಬಾಧೆಗಳನ್ನು ಸೃಷ್ಟಿಸಿ ತನುವನ್ನು ಸುಖ ದುಃಖಗಳಿಗೆ ಈಡು ಮಾಡಿ ತಾನು ಸದಾ ಸುಖಿಸುತ್ತ ತನುವಿನಲ್ಲಿಯೇ ವಾಸ ಮಾಡುತ್ತಾ ತನುವನ್ನು ತನ್ನಂತೆಯೇ ಚಲನೆಯಲ್ಲಿಟ್ಟಿದೆ. ಇಂತಹ ಚಲನೆಯಲ್ಲಿದ್ದ ಮನಕ್ಕೆ ಚಲನೆಯಿಲ್ಲದ ಬಯಲು ಪರಿಚಯವಾದರೆ ಸಾಕು ಮನ ಆ ಬಯಲಲ್ಲಿಯೇ ಐಕ್ಯವಾಗಿ ಬಯಲಾಗುತ್ತದೆ. ತನು ಇದ್ದಾಗಲೇ ಬಯಲಾಗುವುದು, ಬಯಲಲ್ಲಿ ಐಕ್ಯವಾಗುವುದು, ನಿರ್ವಯಲಾಗುವುದು ಸುಖ ದುಃಖಗಳಿಗೆ ಮೀರಿದ ಸುಖದ ಸುಖ.

196

ಶರಣನ ಅಂಗವು ಎಂತಪ್ಪುದೆಂದರೆ,
ವಾರಿಕಲ್ಲು ನೀರೊಳಗೆ ಬಿದ್ದಂತೆ,
ಸಾರಬಲಿದು, ಶರದಿಯ ಕೂಡಿದಂತೆ,
ಅರಗಿನ ಬೊಂಬೆಗೆ ಉರಿಯ ಸರವ ಮಾಡಿದಂತೆ,
ಪರಿಮಳವ ಕೂಡಿದ ವಾಯುವಿನಂತೆ,
ಆಡಂಬರವ ಮಾಡಿ ತೋರಿದ ಆಕಾಶದಂತೆ,
ಇದೀಗ ಶರಣರಂಗ,ಇದರಂದವ ತಿಳಿದರೆ ಐಕ್ಯ
ಇದರೊಳು ನಿಶ್ಚಿಂತನಾದರೆ ನಿರವಯವು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ

ವೃಕ್ಷ ಬೇಸಿಗೆಯಲ್ಲಿ ಚಿಗುರಿ, ಮಳೆಗಾಲದಲ್ಲಿ ನಳನಳಿಸಿ, ಚಳಿಗಾಲದಲ್ಲಿ ತನ್ನ ಸಕಲ ಎಲೆಗಳನ್ನು ಕೊಡವಿ ಮೌನದ ಮಹರ್ಷಿಯಾಗಿ ಆನಂದದಿಂದ ಆಕಾಶದೆತ್ತರಕ್ಕೆ ನಿಂತಿರುತ್ತದೆ. ಮರಕ್ಕೆ ಯಾವ ಫಲಾಪೇಕ್ಷೆಯೂ ಇಲ್ಲ. ಇದು ಮರದ ಸಹಜ ಜ್ಞಾನ. ಅಂತೆಯೇ ಸರ್ವಾಂಗವೂ ಅರಿವಿನ ಲಿಂಗಾಂಗವಾದಾಗ ಅದು ಕೂಡಾ ಸಹಜ ಮಹಾಜ್ಞಾನದ ವೃಕ್ಷವಾಗುತ್ತದೆ. ಇಂತಹ ಅಂಗವನ್ನು ಬುದ್ಧ 'ಬೋಧೀವೃಕ್ಷ ' ವೆಂದು ಕರೆದ.

ಬೋಧೀ ವೃಕ್ಷವೆಂದರೆ ಸದಾ ಅರಿವಿನ ಕಂಗಳಿಂದ ನೋಡುವ, ಅರಿವಿನ ಕಿವಿಗಳಿಂದ ಕೇಳುವ, ಅರಿವಿನ ಚರ್ಮದಿಂದ ಸ್ಪರ್ಶಿಸುವ, ಅರಿವಿನ ನಾಸಿಕದಿಂದ ಪರಿಮಳ ಹೀರುವ, ಅರಿವಿನ ನಾಲಗೆಯಿಂದ ಮುತ್ತಿನಂತೆ ನುಡಿಯುವ ಬೋಧೀವೃಕ್ಷ ! ಮುತ್ತು ನುಡಿಯುವುದಿಲ್ಲ; ಅದು ಬೆಳಗುವ ಮೂಲಕ ಬೆಳಕಿನ ನುಡಿ ನುಡಿಯುತ್ತದೆ.

ಮರಕ್ಕೆ ಮತ್ತೊಂದು ಮರ ಪಾಠ ಹೇಳುವುದಿಲ್ಲ. ಬೀಜದಲ್ಲಿ ಗರ್ಭೀಕರಿಸಿಕೊಂಡು ಮರದ ಸಕಲ ಗುಣಗಳನ್ನು ಅಂಕುರದ ಮೂಲಕ ಹೊರಚೆಲ್ಲಿ ಬೀಜದ ಸೊಟ್ಟೆ ಪಕ್ಕಕ್ಕೆ ವಾಲುತ್ತದೆ. ಹೂ ಹಣ್ಣು ಕಾಯಿ ಚಿಗುರು ಸ್ವಾದ ಪರಿಮಳವೆಲ್ಲ ಮರದ ಗರ್ಭದಲ್ಲಿಯೇ ಅಡಗಿ ಕಾಲಕಾಲಕ್ಕೆ ತಂತಾನೆ ಹೊರ ಬರುತ್ತದೆ. ಮರದ ಸಕಲ ಗುಣಗಳನ್ನು ಪುನಃ ಬೀಜದಲ್ಲಿ ಬಂಧಿಸಿ ಮಾಗಿ ತೊಟ್ಟು ಕಳಚಿ ಕೆಳಬೀಳುತ್ತದೆ. ಅಂಗ ಕೂಡ ಹೀಗೆಯೇ ಜ್ಞಾನದ ಮರ. ಆದರೆ ಅಂಗ ಮತ್ತೊಂದು

ಅಂಗದಿಂದ ಕಲಿತದ್ದನ್ನು ಕಳಚಿ ಬೀಳಿಸಿದರೆ ಮಾತ್ರ ಅದು ಜ್ಞಾನದ ಮರ. ಬೋಧಿವೃಕ್ಷ. ಸಿದ್ಧಾರ್ಥ ಕಲಿತದ್ದನ್ನು ಕೆಳಗೆ ಬೀಳಿಸಿದ. ಅಂಗದಲ್ಲಿಯೇ ಸಂಗಮವಾದ ಅರಿವನ್ನು ಮಾತ್ರ ಬಳಸಿದ. ಶರಣರು ಕೂಡಾ ಹಾಗೆಯೇ ಅಂಗದಲ್ಲಿಯೇ ಸಂಗಮವಾದ ಸಂಗಮನಾಥನನ್ನೇ ನೆನೆದರು ; ಆತನಿಗೆ ಭಕ್ತಿ ಮಾಡಿ ಅರಿವೇ ತಾವಾದರು. ವಾರಿಕಲ್ಲು ನೀರೊಳಗೆ ಬಿದ್ದಂತೆ. ಜಲ ಗಟ್ಟಿಯಾಗಿ ವಾರಿಕಲ್ಲಾಯಿತು. ನೀರೊಳಗೆ ಬಿದ್ದು ನೀರಾಯಿತು. ನೀರು ನೀರು ಒಂದಾಗಿ ಸಮುದ್ರ ಸೇರಿ ಅನಂತವಾಯಿತು. ಅರಗಿನ ಬೊಂಬೆಗೆ ಉರಿಯ ಉಡುಗೊರೆ ತೊಡಿಸಿ ಬೊಂಬೆ ಇಲ್ಲವಾಗಿ ಅನಂತವಾಯಿತು. ಪರಿಮಳ ಉಂಡ ವಾಯುವಿನಂತೆ, ಆಡಂಬರದ ಆಕಾಶದಂತೆ ಶರಣರ ಅಂಗವದು ಲಿಂಗಾಂಗ. ಅದನ್ನು ಬರೀ ಅಂಗವೆನ್ನಲು ಬರುವುದಿಲ್ಲ. ಅದರಂದವ ತಿಳಿದರೆ ಅದು ಅಲ್ಲಿಯೇ ಐಕ್ಯ. ನಿಶ್ಚಿಂತ; ನಿರವಯ. ಈ ಕಲೆ ಅರಿವಿಗೆ ಶರಣು ಹೋದ ಶರಣನಿಗೆ ಮಾತ್ರ ಸಾಧ್ಯ. ಅಂಗದ ಕಲೆ ಅಂಗವೇ ತಿಳಿದರೆ ಸರ್ವಾಂಗಗಳಿಗೂ ಸಾಧ್ಯ.

197

ಶರಣರಿಗೆ ಭವವುಂಟೆಂದು ಮರ್ತ್ಯದಲ್ಲಿ ಹುಟ್ಟಿದ
ಭವಭಾರಿಗಳು ನುಡಿದಾಡುವರು.
ತಮ್ಮ ಹುಟ್ಟ ತಾವರಿಯರು, ತಾವು ಮುಂದೆ ಹೊಂದುವುದನರಿಯರು,
ಇವರು ಬಂದ ಬಂದ ಭವಕ್ಕೆ ಕಡೆ ಮೊದಲಿಲ್ಲ.
ಇಂತಪ್ಪ ಸಂದೇಹಿಗಳು ನಮ್ಮ ಶರಣರ ಹುಟ್ಟ ಬಲ್ಲೆನೆನಬಹುದೇ?
ತನ್ನನರಿದವನಲ್ಲದೆ ಇದಿರನರಿಯರು.
ಈ ಉದರ ಪೋಷಕರೆಲ್ಲರೂ ಇದ ಬಲ್ಲೆನೆಂಬುದು ಹುಸಿ.
ಇದು ಬಲ್ಲವರು ಬಲ್ಲರಲ್ಲದೆ, ಸೋಲ್ಲಿಗಭೇದ್ಯನ ನಾನೆತ್ತ ಬಲ್ಲೆ?
ಎನ್ನ ಗುರು ಚೆನ್ನಮಲ್ಲೇಶ್ವರನೇ ಬಲ್ಲ.
ಇನ್ನು ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನೆ ಬಲ್ಲ.

ಶರಣರಿಗೆ ಮರಣವಿಲ್ಲ. ಮರಣದ ಬಾಧೆಯೂ ಇಲ್ಲ. ಮರಣ ಉಂಟೆಂದು ನುಡಿವವರು ಮರಣಕ್ಕೆ ಜನನಕ್ಕೆ ಒಳಗಾದವರು. ಅವರಿಗೆ ಅವರ ಹುಟ್ಟಿನ ಹುಟ್ಟೇ ಗೊತ್ತಿಲ್ಲ. ಹುಟ್ಟಿ ಮುಂದೇನಾಗುವೆನೆಂಬುದರ ಅರಿವೂ ಅವರಿಗಿಲ್ಲ. ಪುನರಪಿ ಜನನಂ ಪುನರಪಿ ಮರಣಂ ಎನ್ನುವಂತೆ ಮತ್ತೆ ಮತ್ತೆ ಹುಟ್ಟುವರು. ಮತ್ತೆ ಮತ್ತೆ ಸಾಯುವರು; ಕಡೆ ಮೊದಲಿಲ್ಲದೆ. ಇಂತಹ ಸಂದೇಹಿಗಳು ಶರಣರ ಹುಟ್ಟ ಬಲ್ಲೆನೆನ್ನಬಹುದೆ. ಅಂಗಕ್ಕೆ ಜನ್ಮಕೊಟ್ಟ ತಂದೆ ತಾಯಿಗಳನ್ನು ಪರಿಚಯಿಸಬಲ್ಲರೆ ಹೊರತು ಮತ್ತೇನನ್ನೂ ಅರಿಯರು. ಹೊಲೆಗಂಡಲ್ಲದೆ ಪಿಂಡದ ನೆಲೆಗೆ ಆಶ್ರವಿಲ್ಲವೆಂದು ಶರಣ ಹೇಳಿದ ಸೂತ್ರವನು ಇವರೆತ್ತಬಲ್ಲರು?

ಶರಣರ ಹುಟ್ಟು ಬಲ್ಲವರು ಬಲ್ಲರಲ್ಲದೆ ಸರ್ವರೆತ್ತ ಬಲ್ಲರು? ತಂದೆ ನೀನು ತಾಯಿ ನೀನು ಬಂಧು ನೀನು ಬಳಗ ನೀನು ನೀನಲ್ಲದೆ ಮತ್ತಾರು ಇಲ್ಲವಯ್ಯಾ ಕೂಡಲ ಸಂಗಮದೇವಾ. ಅಂಗದಲ್ಲಿ ಸಂಗಮವಾದ ಸಂಗಮನಾಥನನ್ನೇ ತಂದೆ ತಾಯಿ ಬಂಧುಬಳಗವನ್ನಾಗಿಸಿ ಕೊಂಡ ಶರಣರಿಗೆ ಆತನೇ ತಂದೆ ತಾಯಿ. ಆತನಾದರೋ ಅಂಗದಲ್ಲಿಯೇ ಸಂಗಮವಾಗಿದ್ದಾನೆ. ಅಂಗದಲ್ಲಿ ಸಂಗಮವಾದ ಸಂಗಮನಾಥ ಅಂಗವನ್ನು ಹಡೆಯಬಲ್ಲನೆ? ಅಂಗದಲ್ಲಿದ್ದೇ ಅಂಗಕ್ಕೆ ತಂದೆ ತಾಯಿ ಆಗಬಲ್ಲನೆಂದರೆ

ಏನಿದು ಗುಟ್ಟು. ಈ ರಹಸ್ಯವನ್ನು ಬಲ್ಲವರು ಮಾತ್ರ ಬಲ್ಲರಲ್ಲದೆ ಎಲ್ಲರೂ ಬಲ್ಲವರಲ್ಲ.

ಅಂಗದಲ್ಲಿ ಸಂಗಮವಾದ ಸಂಗಯ್ಯನಿಗೂ ಹುಟ್ಟಿಲ್ಲ; ಸಂಗಯ್ಯನನ್ನು ಬಲ್ಲ ಶರಣನಿಗೂ ಹುಟ್ಟಿಲ್ಲ. ಇವರಿಬ್ಬರನ್ನೂ ಹೊತ್ತ ಅಂಗಕ್ಕೆ ಜನನವುಂಟು ಮರಣವುಂಟು ಈ ರಹಸ್ಯ ಹೇಳಿದ ಚೆನ್ನಬಸವಣ್ಣನೂ ಬಲ್ಲ. ಕೇಳಿದ ಅಪ್ಪಣ್ಣನೂ ಬಲ್ಲ.

198

ಶಿವಭಕ್ತರ ಹಾದಿಯ ಕಾಣದೆ ಹರಗಣಂಗಳೆಲ್ಲಕ್ಕೆ ಪರಮ ಗುರುವಾಗಿ,
ಪರಮಾರಾಧ್ಯರಾಗಿ ಸುಳಿದಿರಲ್ಲದೆ
ನೀವು ಒಡಲು ವಿಡಿದಿದ್ದಿರೆನ್ನಬಹುದೆ? ಅದೇನು ಕಾರಣವೆಂದರೆ,
ಎನ್ನಭವವ ಛೇದನೆಯ ಮಾಡಿದುದಕ್ಕೆ ಎನ್ನ ಮನಕ್ಕೆ ಮನವೇ ಸಾಕ್ಷಿ.
ಮತ್ತೆ ಚೆನ್ನಮಲ್ಲೇಶ್ವರ ಸಾಕ್ಷಿ.
ಮರವೆಯಿಂದ ಈ ಮರ್ತ್ಯದಲ್ಲಿ ಒಡಲುವಿಡಿದು ಹುಟ್ಟಿದವರು
ಬ್ರಹ್ಮನಾದರೂ ಆಗಲಿ, ವಿಷ್ಣುವಾದರೂ ಆಗಲಿ,
ರುದ್ರನಾದರೂ ಆಗಲಿ, ಶಿವನಾದರೂ ಆಗಲಿ, ಸದಾಶಿವನಾದರೂ ಆಗಲಿ,
ಮಾಯೆವಿಡಿಸಿ ಕಾಡಿದದಲ್ಲದೆ ಮಾಣದು. ಮಿಕ್ಕಿನವರ ಭವಕ್ಕೆ ಕಡೆ ಇಲ್ಲ.
ಎನ್ನ ಪರಮಾರಾಧ್ಯರು ಚೆನ್ನಮಲ್ಲೇಶ್ವರ, ಮಾಯೆಯ ಮಂಡೆಯ ಮೆಟ್ಟಿ,
ಎನ್ನ ತನುಮನ ಧನಕ್ಕೆ ಒಡೆಯನಾಗಿ ತನ್ಮಯನಾಗಿ ತಾನೇ ರೂಪಾದನಯ್ಯಾ.
ನಾನೆಂಬುದಿಲ್ಲ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ದೇಹವೇ ಒಂದು ಪವಾಡ. ದೇಹವನ್ನು ದೇಹ ಅರಿಯುವುದೇ ಒಂದು ಪವಾಡ. ಒಡಲು ಒಡಲನ್ನು ಹಿಡಿದಿಲ್ಲ. ಆದರೂ ಒಡಲೊಳಗೊಂದು ಒಡಲಿದೆ. ಒಡಲಲ್ಲದ ಆ ಒಡಲನ್ನು ಒಡಲಿನಿಂದಲೇ ಅರಿಯಬೇಕು.

ಒಡಲು, 'ಒಡಲೊಳಗಿದ್ದು ಒಡಲಿಂಗಾಧಾರವಾಗಿ ಒಡಲ ಸೋಂಕದೆ ಒಡಲನ್ನು ಬೆಳಗುವ ಪರಿಯ ನೋಡಾ. ಬೆಳಗಿಂಗೆ ಬೆಳಗಾಗಿ ಬೆಳಗುವ ಪರಿಯ ನೋಡಾ ಗುಹೇಶ್ವರಾ'. ಮರವೆಯಿಂದ ಒಡಲು ಒಡಲುವಿಡಿದು ಹುಟ್ಟಿದೆ. ಬ್ರಹ್ಮ ವಿಷ್ಣು ರುದ್ರ ಶಿವ ಸದಾಶಿವರನ್ನು ಕೂಡಾ ಒಡಲಿನ ಈ ಮಾಯೆ ಕಾಡದೆ ಬಿಟ್ಟಿಲ್ಲ. ಇನ್ನು ಉಳಿದವರ ಪಾಡೇನು? ಅವರ ಸುಖ ದುಃಖಗಳಿಗೆ ಜನನ ಮರಣಗಳಿಗೆ ಕಡೆಯೇ ಇಲ್ಲ.

ಒಡಲೊಡೆಯ ಎನ್ನ ಪರಮಾರಾಧ್ಯ ಚೆನ್ನಮಲ್ಲೇಶ್ವರನು ಮಾಯೆಯ ಮಂಡೆಯ ಮೆಟ್ಟಿ, ತನು ಮನ ಧನಕ್ಕೆ ಒಡೆಯನಾದ. ತನುವಿನಲ್ಲಿ ತನ್ಮಯವಾದ ತನುವಿಗೆ ತಾನೇ ರೂಪಾದ.

ಹಡಪದ ಅಪ್ಪಣ್ಣ ಶರಣರ ಅದ್ಭುತ ಸೂತ್ರವಿದು. ಜಗದಲ್ಲಿರುವ ಒಡಲುಗಳೆಲ್ಲ ತೊಟ್ಟಿಲಲ್ಲಿ ಹಾಕಿ ಹೆಸರಿಟ್ಟುಕೊಂಡವನ ಒಡಲುಗಳಲ್ಲ. ಅವನು ನಿಮಿತ್ತ ಮಾತ್ರ. ಆದರೆ ಒಡಲೊಡೆಯನೇ ಬೇರೆ ಇದ್ದಾನೆ. ಆತ ಒಡಲೊಳಗೆ ಇದ್ದಾನೆ; ಒಡಲು ಸೋಂಕಿಲ್ಲ. ಆದರೂ ಒಡಲು ಬೆಳಗದೆ ಇರಲಾರ. ಒಡಲಿಗೆ ಹೆಸರಿಟ್ಟು ಕೊಂಡವನಿಗೆ ಒಡಲೊಡಯನ ಪರಿಚಯವಾಗಬೇಕು. ಆ ಒಡೆಯನೇ ತಾನಾಗಬೇಕು. ಇದು ಅಪ್ಪಣ್ಣ ಶರಣರ ಆಶಯ.

199

ಶೀಲವಂತರು ಶೀಲವಂತರು ಎಂದೇನೋ? ಶೀಲವಂತಿಕೆಯನಾರು ಬಲ್ಲರು?
ಶೀಲವಾದರೆ ಶಿವನೊಳು ಬೆರೆವುದೇ ಶೀಲ.
ಶೀಲವಾದರೆ ಗುರುಲಿಂಗ ಜಂಗಮವನು ತನ್ನೊಳಗರಿವುದೇ ಶೀಲ.
ಅದಕ್ಕೆ ಮೀರಿದ ಶೀಲವಾದರೆ, ಹಸಿವು ತೃಷೆ ನಿದ್ರೆ ಕೆಡಿಸುವುದೇ ಶೀಲ.
ಅದಕೆ ತುರಿಯಾತೀತ ಶೀಲವಾದರೆ,
ಬಾಲನಾಗಿ ತನ್ನ ಲೀಲಾ ವಿನೋದವ ಭೂಮಿಯ ಮೇಲೆ ನಟಿಸುವುದೇ ಶೀಲ.
ಇದನರಿಯದೆ ಶೀಲ ಶೀಲವೆಂದು ಮನೆ ಮನೆಗೆ ಶೀಲವಲ್ಲದೆ,
ತನ್ನ ತನಗೆ ಕಾಯಕೃತ್ಯವಲ್ಲದೆ,
ಇದನರಿದು ಮೋಹಘನವನೆ ಮರೆದು, ಮನವನೆ ಬಳಲಿಸಿ,
ಘನವ ಮಾಡಿ, ತನುವ ಹೊರದೆನೆಂಬ ಬಿನುಗರ ನುಡಿಯ ಮೆಚ್ಚುವನೆ,
ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ?

ಮನ ತನುವನ್ನು ಹಿಡಿದುಕೊಂಡು ಶೀಲ ಮಾಡುತ್ತದೆ. ಶೀಲದ ಉದ್ದೇಶ ಶಿವನನ್ನು ಒಲಿಸಿಕೊಳ್ಳುವುದೇ ಆಗಿದೆ. ತನುವನ್ನು ಹಿಡಿದು, ತನುವಿಗೆ ಮೂರು ವೇಳೆ ಸ್ನಾನ ಮಾಡಿಸಿ , ಪೂಜೆ ಮಾಡಿ, ಅನ್ನ ಪಾನಾದಿಗಳನ್ನು ಸ್ವೀಕರಿಸುವುದು. ತನು ಮತ್ತೊಂದು ತನುವಿಗೆ ತಾಕದೆ ಇರುವುದು, ಮಡಿ ಮೈಲಿಗೆ ಎಂದು ಆಚರಿಸುತ್ತ ತನುವಿನ ಆಯುಷ್ಯವನ್ನು ಮನ ವ್ಯರ್ಥವಾಗಿ ಕಳೆಯುತ್ತದೆ. ಮನದ ಆಚರಣೆಗಳಿಂದ ತನು ಮುಕ್ತನಾಗುವುದೇ ಇಲ್ಲ. ಶೀಲ ಯಾತಕ್ಕಾಗಿ ಮಾಡುತ್ತೇನೆಂದು ತನುವಿಗೆ ಕೊನೆಯವರಿಗೂ ತಿಳಿಯುವುದೇ ಇಲ್ಲ.

ಮನ, ತನುವಿನಿಂದಲೇ ನಿರ್ಮಾಣವಾದ ದೇವನನ್ನು ತನು ಹಿಡಿದೇ ಪೂಜಿಸುತ್ತದೆ. ತನು ಹಿಡಿದೆ ಶೀಲ ಮಾಡುತ್ತದೆ. ತನುವಿನಿಂದ ನಿರ್ಮಾಣವಾದ ದೇವ ತನುವಿಗೆ ಏನು ಕೊಟ್ಟಾನು ಎಂದು ತನುವಿಗೆ ಹೊಳೆಯುವುದೇ ಇಲ್ಲ. ಹಸಿವು ತೃಷೆ ನಿದ್ರೆ ಕೆಡಿಸಿಕೊಂಡು ಶೀಲ ಮಾಡುವ ನಿಯಮವನ್ನು ತನು ಬಿಡುವುದಿಲ್ಲ.

ಮನ, ನಿತ್ಯ ನಿತ್ಯ ತನು ಹಿಡಿದು ಶೀಲ ಮಾಡುತ್ತ ಪೂಜಿಸುವುದೂ ಬಿಡುವುದಿಲ್ಲ; ಹಾಗೆಯೇ ತನು ಹಿಡಿದು ಹಾದರ ಮಾಡುವುದೂ ಬಿಡುವುದಿಲ್ಲ. ಶೀಲ ಮಾಡುವ ಶೀಲವಂತ ತನುವನ್ನು ಸಕಲರೂ ನೋಡುತ್ತಾರೆ. ಹಾದರ ಮಾಡುವ ಮನವನ್ನು ಯಾರೂ ನೋಡುವುದಿಲ್ಲ. ಪೂಜೆಗೆ ಒಳಪಟ್ಟ ದೇವನೂ ನೋಡುವುದಿಲ್ಲ. ಏಕೆಂದರೆ ಅದು ಕಲ್ಲು ! ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ದೇವನು ನೋಡದೇ ಇರುವುದಿಲ್ಲ.

ದೇಹದಲ್ಲಿಯೇ ಸಂಗಮವಾದ ದೇವನಿಗೆ ಪೂಜೆ ಬೇಡ, ದೇಹ ಹಿಡಿದು ಹಾದರ ಮಾಡುವ ಮನದ ಚೇಷ್ಟೆಗಳೂ ಬೇಡ. ಬಾಲದೇಹಕ್ಕೆ ಹಾದರದ ಯಾವ ಚೇಷ್ಟೆಗಳೂ ಇರಲಿಲ್ಲ. ಪೂಜೆ ಪುರಸ್ಕಾರ ಶೀಲದ ನಿಯಮಗಳೂ ಇರಲಿಲ್ಲ. ದೇಹವೇ ದೇವಾಲಯವಾಗಿ ಬಾಲಕ್ರಿಷ್ಣನಂತೆ, ಬಾಲ ಲೀಲೆಗಳನ್ನು ಮೆರೆಯುತ್ತ ಸಹಜವಾಗಿತ್ತು. ಹಡೆದ ದೇಹದಿಂದಲೇ ಪಡೆದ ಅಜ್ಞಾನ ಇದ್ದ ದೇವನನ್ನೇ ಮರೆಯುವಂತೆ ಮಾಡಿತು. ಇಲ್ಲದ ದೇವನಿಗಾಗಿ ಶೀಲ ಮಾಡುತ್ತ ಶೀಲವಂತನೆಂದು ಹೆಸರು ಪಡೆಯಿತು. ದೇಹದ ಶೀಲ ಬತ್ತಿ ಹೋಯಿತು. ಇಲ್ಲದ

ಶೀಲ ಆಚರಣೆಗೆ ಬಂತು. ಶೀಲದ ಆಚರಣೆಯೂ ನಿಲ್ಲಲಿಲ್ಲ. ಅಶ್ಲೀಲ ಕ್ರಿಯೆಗಳೂ ನಿಲ್ಲಲಿಲ್ಲ.

ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಸವಿದ್ದಾಗ, ದೇವನಿದ್ದ ದೇಹದಿಂದಲೇ ದೇವನಿಲ್ಲದ ದೇವಾಲಯವನ್ನು ಶೀಲಮಾಡುತ್ತ ಪೂಜಿಸಬೇಕೆ? ದೇವನಿದ್ದ ದೇವಾಲಯಕ್ಕೆ ಶೀಲದ ನಿಯಮವೆ?

ನೋಡುವ ಕಣ್ಣಿನಲ್ಲಿ ಮುಕ್ಕಣ್ಣನ ಕಣ್ಣೊಂದಿದೆ. ಹಾಗೆಯೇ ನೋಡುವ ಕಣ್ಣನ್ನು ಮನೋ ಕಣ್ಣೊಂದು ಆವರಿಸಿದೆ. ಈ ಕಣ್ಣು ಕಣ್ಣನ್ನು ಹಿಡಿದು ಕಾಮಿನಿಯನ್ನು ನೋಡುತ್ತದೆ. ಇದು ಹಾದರದ ಕಣ್ಣು. ಕಲ್ಲು ನೋಡಿ ದೇವರೆನ್ನುತ್ತದೆ. ಕಾಯ ನೋಡಿ ಕಾಮಿನಿ ಎನ್ನುತ್ತದೆ. ಕಲ್ಲದೇವರ ಪೂಜಿಸುತ್ತದೆ. ಕಾಮಿನಿಯೊಂದಿಗೆ ಹಾದರ ಮಾಡುತ್ತದೆ. ಕಾಯ ಹಿಡಿದು ಶೀಲ ಮಾಡುತ್ತದೆ. ಇದು ಹಾದರದ ಕಣ್ಣು! ಈ ಕಣ್ಣು ಕಣ್ಣಿನಲ್ಲಿಯೇ ಇದೆ; ಮುಕ್ಕಣ್ಣನ ಕಣ್ಣು ಕಣ್ಣಿನಲ್ಲಿಯೇ ಇದೆ. ಹಾದರದ ಕಣ್ಣು ಮುಕ್ಕಣ್ಣನ ಕಣ್ಣಿಗೆ ಶೀಲ ಮಾಡಬೇಕು. ಆಗ ಗುರುಲಿಂಗ ಜಂಗಮರೇ ಕಾಣುತ್ತಾರೆ. ಆಗ ಕಾಯ ಬಾಲನಾಗಿ ತನ್ನ ಲೀಲಾ ವಿನೋದವನ್ನು ಭೂಮಿಯ ಮೇಲೆ ನಟಿಸುತ್ತದೆ.

ಇದನ್ನು ತಿಳಿಯುತ್ತ ಕಾಯ ಕೃತಾರ್ಥವಾಗಬೇಕು. ಶಿವನ ಕಾಯದೊಳಗೆ ಕಾಯ ಬೆರೆತು ಶಿವಕಾಯವಾಗಬೇಕು. ಶೀಲವಂತನ ಕಾಯವಾಗಬೇಕು. ಇದು ಶೀಲ. ಶಿವನೊಳು ಬೆರೆವುದೇ ಶೀಲ.

200

ಶೀಲವಂತರು, ಶೀಲವಂತರು ಎಂಬರು
ಶೀಲವಂತಿಕೆಯನಾರು ಬಲ್ಲರು ಹೇಳಾ ?
ನೆಲಕೆ ಶೀಲ ಶೀಲವೆಂಬೆನೆ ?
ಹೊಲೆ ಹದಿನೆಂಟು ಜಾತಿ-ನಡೆ ನುಡಿವುದಕ್ಕೆ ಒಂದೇಯಾಯಿತ್ತು .
ಜಲಕೆ ಶೀಲವೆಂಬೆನೆ ?ಮೀನು ಮೊಸಳೆಗಳು ಖಗಮೃಗಂಗಳು ನಿಂದೆಂಜಲು.
ಬೆಳೆಗೆ ಶೀಲವೆಂಬೆನೆ ? ಎತ್ತು ಕತ್ತೆ ತಿಂದು ಮಿಕ್ಕ ಎಂಜಲು.
ಹೊನ್ನಿಗೆ ಶೀಲವೆಂಬೆನೆ ? ಕಣ್ಣು ಕೆಡಿಸಿ ಕಾಡುತಿಪ್ಪುದು.
ಇನ್ನಾವುದು ಶೀಲ ಹೇಳಿರಣ್ಣಾ ? ಇದಕ್ಕೆ ಪಳಗಾದವರೆಲ್ಲ ದುಃಶೀಲರು.
ಇದ ಹಿಡಿದು ಹಿಡಿಯದೆ,ಬಿಟ್ಟು ಬಿಡದೆ,
ತನ್ನ ಮನಕ್ಕೆ ಶೀಲವಾಗಿಪ್ಪುದೆ ಅಚ್ಚ ಶೀಲ ಕಾಣಾ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ

ನೆಲವೊಂದೇ ಹೊಲಗೇರಿ ಶಿವಾಲಯಕ್ಕೆ, ಜಲವೊಂದೇ ಶೌಚಾಚ ಮನಕ್ಕೆ. ಹಾಗೆಯೇ ಕುಲವೊಂದೇ ತನ್ನ ತಾನರಿದವಂಗೆ. ತನುವನ್ನು ಆವರಿಸಿದ ಮನ ತನುವನ್ನು ತಿಳಿಯದೆ, ತನುವಿನಲ್ಲಿ ತನ್ಮಯವಾದ ಅರಿವೆಂಬ ದೇವನನ್ನು ತಿಳಿಯದೆ ಇರುವುದರಿಂದ ತನು ಹಿಡಿದು ತನುವಿನೊಂದಿಗೆ ಶೀಲ ಮಾಡುತ್ತದೆ. ಜನಕ್ಕೇನು ಗೊತ್ತು? ತನುವನ್ನೇ ದೂಷಿಸುತ್ತಾರೆ. ತನು ಹಿಡಿದ ಮನ ದೂಷಣೆಗೆ ಒಳಪಡುವುದೇ ಇಲ್ಲ. ಏಕೆಂದರೆ ಜನ ಕೂಡಾ ಮನ ಹೊತ್ತ ವರೆ ಆಗಿದ್ದಾರೆ.

ನೆಲಕ್ಕೆ ಶೀಲವಿಲ್ಲ. ಜಲಕ್ಕೆ ಶೀಲವಿಲ್ಲ. ವಾಯು ಅಗ್ನಿ ಆಕಾಶಗಳಿಗೆ ಶೀಲವಿಲ್ಲ.ಈ ಐದು ಹೊತ್ತವನು ಮಾತ್ರ ಅಜ್ಞಾನಿ ; ಶೀಲವಂತ ! ಏಕೆಂದರೆ ತನುವನ್ನು ಮನ ಆವರಿಸಿ

ಸಕಲವೂ ಆದ ತನುವನ್ನು ತಾನೇ ತಿಳಿಯದಂತೆ ಮಾಡಿದೆ. ತನು ಹಿಡಿದ ಶೀಲ ಆಚರಿಸುತ್ತದೆ.

ಜಲದಲ್ಲಿಯೇ ಮಿಂದು ಅದೇ ಜಲ ಮೀಸಲಿನಿಂದ ತಂದು ಪೂಜಿಸುತ್ತಾನೆ. ಜಲ ಮೀನು ಮೊಸಳೆ ಕಪ್ಪೆಗಳಿಂದ ಎಂಜಲಾಗಲಿಲ್ಲವೆ. ಯಾರಾದರೂ ಮುಟ್ಟಿದರೆ ಮತ್ತೆ ಮೀಯುತ್ತಾನೆ. ಏನೀ ಅಜ್ಞಾನದ ಮೀಸಲು. ಏನೀ ಅಜ್ಞಾನದ ಶೀಲ. ತನು ಒಂದೇ. ಚರ್ಮ ಒಂದೇ. ಕಣ್ಣು ಕಿವಿ ಮೂಗು ನಾಲಿಗೆ ಒಂದೇ. ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಒಂದೇ. ಆದರೂ ಹೆಣ್ಣು ಗಂಡು ಎಂಬ ಭೇದ. ಜಾತಿ ಮತ ಪಂಥ ಧರ್ಮ ಎನ್ನುವ ಭೇದಗಳನ್ನು ಜಗದ ತನುಗಳು ಹೊತ್ತುಕೊಂಡಿವೆ. ಏಕೆಂದರೆ ತನುವಿನ ಧರ್ಮವೆಂಬುದು ಜ್ಞಾನ. ತನುವನ್ನು ಆವರಿಸಿದ ಮನ ತನುವಿನಲ್ಲಿಯೇ ತನ್ಮಯವಾದ ಜ್ಞಾನವನ್ನು ಮರೆತುದರಿಂದ ಅದು ಅಜ್ಞಾನಿ ತನುವಾಗಿದೆ.

ನೆಲ ಜಲ ಅನ್ನ ಹೊನ್ನು ಹೆಣ್ಣು ಇವು ನೋಡುವ ಕಣ್ಣನ್ನೇ ಕೆಡಿಸಿ ಕಾಡುತ್ತಿವೆ. ನೆಲ ಒಂದೇ; ಆದರೂ ಹೊಲೆಗೇರಿ ಶಿವಾಲಯ ಎಂದು ಭೇದ ಹುಟ್ಟಿದೆ. ಉಣ್ಣುವ ಅನ್ನ ಒಂದೇ. ಅದಕ್ಕೆ ಹರಿದ ಜಲ ಒಂದೇ ಆದರೂ ಭೇದ ಹುಟ್ಟಿದೆ. ಭೂಮಿಯ ಗರ್ಭದಲ್ಲಿ ಹುಟ್ಟಿದ ಲೋಹಗಳೆಲ್ಲ ಒಂದೇ ಆದರೂ ಹೊನ್ನೆಂದು ಭೇದ ಮಾಡಿದೆ. ಹೆಣ್ಣು ಗಂಡೆನ್ನುವುದು ಕೂಡಾ ಒಂದೇ ಆದರೂ ನೋಡುವ ಕಣ್ಣನ್ನೇ ಕೆಡಿಸಿ, ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ಸೃಷ್ಟಿಸಿ ರಾಕ್ಷಸನನ್ನಾಗಿ ಮಾಡಿದೆ.

ಇದಕ್ಕೆ ಒಳಗಾದವರೆಲ್ಲ ದುಃಶೀಲರು :

ತನುವಿನ ಉಪಯೋಗಕ್ಕೆ ಮಾತ್ರ ಇರುವ ಪದಾರ್ಥಗಳು ತನುವನ್ನೇ ಹಾಳುಗೆಡವಲು ಕಾರಣವಾಗಿವೆ ಎನ್ನುವುದೂ ತಪ್ಪು. ಏಕೆಂದರೆ ತನುವನ್ನು ಆವರಿಸಿದ ಮನ, ತನುವನ್ನು ಹಿಡಿಯುವಂತೆ ಮಾಡಿ, ಅಜ್ಞಾನಿ ತನುವನ್ನಾಗಿ ಮಾಡಿದೆ. ಹೀಗೆ ಬಯಕೆಯಾದ ಮನಗಳೆಲ್ಲ ದುಃಶೀಲ ಮನ. ಹಿಡಿದು ಹಿಡಿಯದೆ, ಬಿಟ್ಟು ಬಿಡದೆ ತನ್ನ ಮನಕ್ಕೆ ಶೀಲವಾಗಿಪ್ಪುದೆ ಅಚ್ಚ ಶೀಲ. ಬಯಸದೇ ಬಂದುದು ಲಿಂಗ ಭೋಗ. ಬಯಕೆ ಮಾಡಿ ಪಡೆದುದು ಅಂಗ ಭೋಗ. ಒಂದು ಶೀಲ ; ಮತ್ತೊಂದು ದುಃಶೀಲ.

201

ಶುದ್ಧ, ಸಿದ್ಧ, ಪ್ರಸಿದ್ಧ, ಪ್ರಸಾದವೆಂದು ಹೆಸರಿಟ್ಟುಕೊಂಡು ಚೆನ್ನಾಗಿ ನುಡಿವಿರಿ.
ಶುದ್ಧವಾದ ಮುಖ, ಸಿದ್ಧವಾದ ಮುಖ, ಪ್ರಸಿದ್ಧವಾದ ಮುಖ,
ಅರಿದರೆ ನೀವು ಹೇಳಿರೊ.
ಅರಿದು ಅರಿಯದೆ, ಅರೆಮರುಳುಗಳಿರಾ ನೀವು ಕೇಳಿರೊ.
ಕಾಯ ಕರಣಾದಿಗಳ ಗುಣವಳಿದುದೆ ಶುದ್ಧ.
ಜೀವನ ದೃಶ್ಯ ಕೆಟ್ಟು, ಜಗದ ವ್ಯಾಕುಳವಳಿದು,ನಿರಾಕುಳದಲ್ಲಿ ನಿಂದುದೆ ಸಿದ್ಧ.
ಪ್ರಾಣದ ಭಯ, ಮರಣದ ಭಯ, ಮರಣಾದಿಗಳ ಹಿಂಗಿ,
ಭಾವಳಿದು ಭವಕ್ಕೆ ಸವೆದುದೆ ಪ್ರಸಿದ್ಧ.
ಈ ತೆರನನರಿಯದೆ ಎತ್ತರ ತೆತ್ತರನಾಗಿ ನುಡಿವಿರಿ.
ಬಲ್ಲವರೆನಿಸಿಕೊಂಡಿಹೆವೆಂದು ನಿಮ್ಮ ಬಲ್ಲತನ ಹಾಳಾಯಿತ್ತು .
ನೀವು ಬರುಸೂರೆಯ ಹೋಗುವುದನರಿಯದೆ,
ಬರಿದೆ ಏಕೆ ಅರಚಾಗಿ ಸತ್ತಿರಿ, ನೆರೆ ಮೂರು ಲೋಕವೆಲ್ಲ ?

ಇದನರಿದಾದರೂ ಆರಿಗೂ ಕೊಡಬೇಡ,ಕೊಳಬೇಡ.
ಮನ ಮುಟ್ಟಿ ಎರಗಿ ಬದುಕಿರೆ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಶಾಸ್ತ್ರ ಬಲ್ಲ ಮನ ತನು ಹಿಡಿದು, ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದದ ಬಗ್ಗೆ ಉಪನ್ಯಾಸ ಕೊಟ್ಟು ತಲೆದೂಗುವಂತೆ ಹೌದೌದೆನ್ನುವಂತೆ ಚಪ್ಪಾಳೆ ಗಿಟ್ಟಿಸಿಕೊಳ್ಳಬಹುದು. ಆದರೆ ಕಾಯ ಮತ್ತು ಕಾಯದ ಇಂದ್ರಿಯಗಳನ್ನು ಜ್ಞಾನೇಂದ್ರಿಯಗಳನ್ನಾಗಿ ಮಾರ್ಪಡಿಸಿಕೊಳ್ಳುವುದು ಮನಕ್ಕೆ ಜಟಿಲವಾಗುತ್ತದೆ. ಮಾತು ಕಲಿತು ವೇಷ ಹಾಕಿ ಹೌದೆನ್ನಿಸಿಕೊಳ್ಳಬೇಕೋ ಅಥವಾ ಶುದ್ಧವಾಗಿ ಬದುಕಬೇಕೋ ಎಂದು ಮನ ಮನವನ್ನೇ ಕೇಳಿಕೊಳ್ಳಲು ಸಾಧ್ಯವಾಗುವುದೇ ಇಲ್ಲ.

ತನುವಿನ ಕೋರಿಕೆಯ ಜೀವನ ಕೆಡಬೇಕು. ಏಕೆಂದರೆ ಅದು ಜೀವನವಲ್ಲ ; ಉಪ ಜೀವನಕ್ಕಾಗಿ ತನಗೆ ತಾನೇ ರೂಪಿಸಿಕೊಂಡ ಜೀವನ. ಉಪ ಜೀವನದ ಜೀವನ ಕೆಟ್ಟಾಗ ತನುವಿಗಂಟಿದ ವ್ಯಾಕುಳ ಚಿಂತೆಗಳು ನಿಂತು ನಿರಾಕುಳವಾಗುತ್ತವೆ. ಪ್ರಾಣದ ಭಯ, ಮರಣದ ಭಯ ಹಿಂಗುತ್ತದೆ. ತನುವಿನ ಭಾವ ದುರ್ಭಾವಗಳು ಅಳಿದು, ನಿರ್ಭಾವದಿಂದ ಪ್ರಸಿದ್ಧವಾಗುತ್ತದೆ.

ಬಲ್ಲವರೆನಿಸಿಕೊಳ್ಳುವುದು ಮನದ ಗುಣ. ಆದರೆ ಬಲ್ಲತನ ಬಳಕೆ ಮಾಡಿಕೊಳ್ಳದೆ ತನುವಿನಲ್ಲಿ ಹಾಗೇ ಉಳಿಯುತ್ತದೆ. ತನುವಿನಲ್ಲಿ ತನ್ಮಯವಾದ ಜ್ಞಾನ ಕೊಡಕೊಳ್ಳುವ ಜ್ಞಾನ ಅಲ್ಲ. ಅದನ್ನು ಪುಸ್ತಕದಿಂದ ಕಳವು ಮಾಡಿ ನುಡಿದರೆ ಸಿದ್ಧಿಸುವುದಿಲ್ಲ. ಅದು ತನುವಿನ ಸಿದ್ಧ ವಸ್ತು . ಪ್ರಸಿದ್ಧ ವಸ್ತು . ಶುದ್ಧ ವಸ್ತು . ತನುವಿನಲ್ಲಿಯೇ ಅರಿತು ಅರಿತು ಮನ ಪ್ರಸಾದಿಯಾಗಬೇಕು. ಉಂಡು ಜೀರ್ಣಿಸಿಕೊಂಡು ಘನಮನವಾಗಬೇಕು.

ಇದನರಿದು ಯಾರಿಗೂ ಕೊಡಬೇಡ ಕಳಬೇಡ. ಕಳಬೇಡ, ಬಳಸದೆ ಕೊಲ್ಲ ಬೇಡ. ಮನ ಮುಟ್ಟಿ ಎರಗಿ ಘನಮನದಿಂದ ಬದುಕು; ಎಲೆ ಮನವೆ.

202

ಶೃಂಗಾರದ ಊರಿಗೆ ಒಂಬತ್ತು ಬಾಗಿಲು, ಐದು ದಿಡ್ಡಿ, ಎರಡು ತೋರಗಂಡಿ,
ಐವರು ತಳವಾರರು, ಮೂವರು ಪ್ರಧಾನರು,
ಇಬ್ಬರು ಸೇನಬೋವರು, ಒಬ್ಬ ಅರಸು.
ಅರಸಿಂಗೆ ಐವರು ಸೂಳೆಯರು, ಅವರ ಬಾಗಿಲಕಾವರು ಹತ್ತು ಮಂದಿ.
ಅವರ ಪಾಲಿಪ ಡಕ್ಕಣದವರು ಇಪ್ಪತ್ತೈದು ಮಂದಿ.
ಅವರ ಭಂಡಾರ ಬೊಕ್ಕಸ ಅಟ್ಟ ಮಣಿಹ,
ಹರಿಮಣಿಹ, ಕಟ್ಟಿಗೆಯವರು, ಬೋಹೋ ಎಂದು ಕೊಂಡಾಡುವರು,
ಮುವತ್ತಾರು ಮಂದಿ ಚೂಣಿಯರು.
ಹುಯ್ಯಲ ಕಾಲಾಳುಗಳು ನೂರನಾಲ್ವತ್ತೆಂಟು.
ಈ ಸಂಭ್ರಮದಲ್ಲಿ ಆ ಮನವೆಂಬ ಅರಸು
ಸುಖಸಂತೋಷದಲ್ಲಿ ರಾಜ್ಯಂಗೆಯ್ಯುತ್ತಿರಲು,
ಇತ್ತ ಶರಣ ತನ್ನ ತಾನೇ ಎಚ್ಚೆತ್ತು ನೋಡಿ,

ಪಶ್ಚಿಮ ಕದವ ಮುರಿದು ಒಳ ಹೊಕ್ಕು,
ಒಳಗೆ ತೊಳಗಿ ಬೆಳಗುವ ಜ್ಯೋತಿರ್ಲಿಂಗವನೆ ಕಂಡು
ಆ ಲಿಂಗದಂಘ್ರಿ ಪಿಡಿದು ಸಂಗಸುಖದೊಳಗೆ,
ಒಂಬತ್ತು ಬಾಗಿಲಿಗೂ ಲಿಂಗವನೆ ಸ್ಥಾಪ್ಯವ ಮಾಡಲಾಗಿ,
ಮನವೆಂಬ ಅರಸು ಒಳಗೆ ಸಿಕ್ಕಿದ ಅಗಳ ಮುರಿದು ಬರುತ್ತಿರಲು
ದಾರಿಯ ಕಾಣದೆ ಕಣ್ಣು ಗೆಟ್ಟು ಹೋದರು.
ಮನವೆಂಬ ಅರಸು ತನ್ನ ಸೂಳೆಯರೈವರು,
ಪ್ರದಾನರು, ಸೇನಾಬೋವರು, ಪಾಲಿಪ ಡಕ್ಕಣದವರು,
ಬೋಹೋ ಎಂದು ಉಗ್ಗಡಿಸುವವರು,
ಆನೆ ಕುದುರೆ ಇವರೆಲ್ಲರನು ಹಿಡಿದು ಕಟ್ಟಿಕೊಂಡು
ಮಹಾಲಿಂಗವೆಂಬ ಅರಸಿಂಗೆ ತಂದೊಪ್ಪಿಸಿದನು.
ಆ ಲಿಂಗವ ಕಂಡವರೆಲ್ಲ ಲಿಂಗದಂತೆ ಆದರು.
ಇದು ಕಾರಣ, ಶರಣಂಗೆ ಅಂಗ ಭೋಗವೆಲ್ಲ ಲಿಂಗ ಭೋಗವಾಯಿತ್ತು .
ಲಿಂಗ ಭೋಗವೇ ಅರ್ಪಿತವಾಯಿತು, ಅರ್ಪಿತವೇ ಪ್ರಸಾದವಾಯಿತು;
ಪ್ರಸಾದದೊಳಗೆ ಪರಿಣಾಮಿಯಾದ.
ಇದು ಕಾರಣ, ಎನ್ನ ಅಂಗ ಉರಿವುಂಡ ಕರ್ಪುರದಂತಾಯಿತ್ತಯ್ಯಾ ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ತನು ಒಂದು ಶೃಂಗಾರದ ಊರು. ಈ ಊರಿಗೆ ಒಂಭತ್ತು ಬಾಗಿಲು, ಎರಡು ಕಣ್ಣು, ಎರಡು ಕಿವಿ, ಮೂಗಿನ ಎರಡು ಹೊರಳೆಗಳು, ಒಂದು ಬಾಯಿ, ಒಂದು ಗುದದ್ವಾರ, ಮತ್ತೊಂದು ಜನನೇಂದ್ರಿಯ. ಹೀಗೆ ನವದ್ವಾರಗಳೇ ತನುವಿಗೆ ಬಾಗಿಲುಗಳೆಂದು ಬಣ್ಣಿಸಿದ್ದಾರೆ ಅಪ್ಪಣ್ಣ ಶರಣರು.

ತನುವಿಗೆ ಮತ್ತೊಂದು ತನು ವೈರಿಯಲ್ಲ; ತನುವೇ ತನುವಿಗೆ ವೈರಿ. ಪಂಚ ಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು, ಪಂಚವಿಷಯಗಳು, ಪಂಚ ಅಂತಃಕರಣಗಳು, ಪಂಚ ಪರುಷಗಳು, ಪಂಚ ಮಹಾಪಾತಕಗಳು, ಸಪ್ತ ವ್ಯಸನಗಳು, ಅಷ್ಟ ಮದಗಳು ದಶವಾಯುಗಳು, ತಾಪತ್ರಯಗಳು, ಚತುರ್ವಿಧ ಪದವಿಗಳು, ಅಷ್ಟತನುಗಳು, ತ್ರಿಗುಣಗಳು, ಸಪ್ತ ಧಾತುಗಳು, ಸೂತಕಗಳು ಹೀಗೆ ತನುವಿನಲ್ಲಿ ಭಾವ,ದುರ್ಭಾವ, ಅಂತಃಕರಣ, ಸಿಟ್ಟು, ದ್ವೇಶ, ಅಸೂಯೆ, ಕ್ರೌರ್ಯ, ಕಾಮಾದಿ ಅರಿಷಡ್ವರ್ಗಗಳು ತನುವಿನಲ್ಲಿಯೇ ಹುಟ್ಟಿ ತನುವಿಗೆ ವೈರಿಯಾಗಿ ಕಾಡುತ್ತವೆ.

ವ್ಯಾಸ ಮಹರ್ಷಿಗಳು ಮಹಾಭಾರತದಲ್ಲಿ ಒಂದು ತನುವಿನಲ್ಲಿಯೇ ಪಾಂಡವರನ್ನು ಸೃಷ್ಟಿಸಿದರು; ನೂರಾ ಒಂದು ಕೌರವರನ್ನು ಸೃಷ್ಟಿಸಿದರು. ತನುವಿನ ಧರ್ಮವನ್ನು ಕಾಪಾಡಲು ಭೀಷ್ಮ ದ್ರೋಣಾದಿ ಆಚಾರ್ಯರನ್ನು ಸೃಷ್ಟಿಸಿದರು. ರಾಜ ಮಹಾರಾಜರನ್ನು , ಹದಿನೆಂಟು ಅಘೋಹಿಣೆ, ಸೈನ್ಯವನ್ನು ಸೃಷ್ಟಿಸಿ ಅದಕ್ಕೆ ಶ್ರೀ ಕೃಷ್ಣನನ್ನು ಒಡೆಯನನ್ನಾಗಿಸಿದರು. ಶ್ರೀ ಕೃಷ್ಣ ವಿರಾಟ ಸ್ವರೂಪ; ಬ್ರಹ್ಮಾಂಡಕ್ಕೆ ಒಡೆಯ.

ಅಂಗ ಒಂದು ಶೃಂಗಾರದ ಊರು; ದೇಶ. ದೇಶ ಅಂದರೆ ಬಯಲು. ಬಯಲ ಬೀಜವೇ ಅಂಡ; ಆ ಅಂಡದಿಂದಲೇ ಬ್ರಹ್ಮಾಂಡ. ಇಡೀ ಬ್ರಹ್ಮಾಂಡ ಅಂಗದಲ್ಲಿ ಅಡಗಿದೆ. ಅಂಗ ಬೀಜದಲ್ಲಿ ಅಡಗಿದೆ. ಬೀಜ ಬಯಲಲ್ಲಿ ಅಡಗಿದೆ. ಇದನ್ನು ತಿಳಿದಾತನೇ ಶರಣ; ಸಾಕ್ಷಾತ್ ಶ್ರೀ ಕೃಷ್ಣ. ಈತ

ಅಂಗದಲ್ಲಿರುವ ಪಶ್ಚಿಮ ಕದವ ಮುರಿದು ಒಳಹೊಕ್ಕು ತೊಳಗಿ ಬೆಳಗುವ ಜ್ಯೋತಿರ್ಮಯ ಮಹಾಜ್ಞಾನವೆಂಬ ಲಿಂಗವನು ಕಂಡು ಅಂಗದ ಒಂಭತ್ತು ಬಾಗಿಲಿಗೂ ಲಿಂಗವನು ಸ್ಥಾಪ್ಯವ ಮಾಡಿ, ಅಗಳ ಮುರಿದು ಹೊರ ಬರುತ್ತಿರಲು ಒಳಗೆ ಸಿಕ್ಕಿದ ವೈರಿಗಳು ದಾರಿಯ ಕಾಣದೆ ಕಂಗೆಟ್ಟು ಹೋಗುತ್ತಾರೆ.

ಮನವೆಂಬ ಅರಸು, ಆತನ ಸೂಳೆಯರೈವರು ಪ್ರದಾನರು ಸೇನಾಬೋವರು, ಪಾಲಿಪ ಡಕ್ಕಣದವರು ಬೋಹೋ ಎಂದು ಉಗ್ಘಡಿಸುವವರು, ಆನೆ, ಕುದುರೆ ಇವರೆಲ್ಲರನು ಹಿಡಿದು ಕಟ್ಟಿಕೊಂಡು ಮಹಾಲಿಂಗವೆಂಬ ಜ್ಞಾನಕ್ಕೆ ತಂದೊಪ್ಪಿಸಿದಾಗ ಆ ಲಿಂಗವನು ಕಂಡವರೆಲ್ಲ ಲಿಂಗದಂತೆ ಆಗುತ್ತಾರೆ.

ಹೀಗಾಗಿ ಶರಣನಿಗೆ ಅಂಗ ಭೋಗವೆಲ್ಲ ಲಿಂಗ ಭೋಗವಾಯಿತು. ಲಿಂಗಭೋಗವೇ ಅರ್ಪಿತವಾಯಿತ್ತು . ಅರ್ಪಿತವೇ ಪ್ರಸಾದವಾಯಿತು. ಶರಣ ಪ್ರಸಾದದೊಳಗೆ ಪರಿಣಾಮಿಯಾದ. ಹದಿನಾರು ಸಾವಿರ ಸ್ತ್ರೀಯರೊಂದಿಗೆ ರಮಿಸಿದ ಶ್ರೀ ಕೃಷ್ಣ ಬ್ರಹ್ಮಾಚಾರಿಯಾದಂತೆ. ಹದಿನಾರು ಸಾವಿರ ಅಂಗಗಳು ಶ್ರೀ ಕೃಷ್ಣನ ಮಹಾಜ್ಞಾನಕ್ಕೆ ದಾಸರಾಗಿ ಸೆರೆಯಾಳಾದವು.

ತನುವಿನ ಜ್ಞಾನಕ್ಕೆ ತನವನ್ನು ಆವರಿಸಿದ ಮನವೇ ಶರಣು ಹೋಗಿ ತನುವಿನಲ್ಲಿ ಹುಟ್ಟಿದ ವೈರಿಗಳನ್ನು ತನುವಿನ ಜ್ಞಾನದಿಂದಲೇ ನಷ್ಟ ಮಾಡಿ, ಆ ಜ್ಞಾನವೇ ತಾನಾದಂತೆ. ಇದು ಅರಿವಿಗೆ ಶರಣು ಹೋದ ಶರಣನ ಕಲೆ. ಮಹಾಜ್ಞಾನದ ಕಲೆ. ವಿರಾಟ ಸ್ವರೂಪನೇ ತಾನಾಗುವ ಜ್ಞಾನ ಕಲೆ. ತನುವಿನ ಬೆಡಗಿನ ಕಲೆ. ಈ ಕಲೆ ಕಲಿತವನೇ ಜ್ಞಾನಿ.

203

ಶ್ರೀ ಜಂಗಮಲಿಂಗ ಎಂತಿಹನೆಂದಡೆ;
ಇಂತಿ ಅಜಾಂಡ ಬ್ರಹ್ಮಾಂಡವು ತನ್ನ ಕುಕ್ಷಿಯೊಳು ನಿಕ್ಷೇಪವಾಗಿ,
ತಾ ನಿರ್ಗಮನಿಯಾಗಿ ಲಿಂಗರೂಪಾಗಿ ಸುಳಿಯಬಲ್ಲರೆ ಜಂಗಮಲಿಂಗವೆಂಬೆ.
ಅದಕ್ಕೆ ನಮೋ ನಮೋ, ಆ ನಿಲವಿಂಗೆ ಭವವಿಲ್ಲ ಬಂಧನವಿಲ್ಲ.
ಇಂತಲ್ಲದೆ ವೇಷವ ಹೊತ್ತು , ಹೊರ ವೇಷದ ವಿಭೂತಿ ರುದ್ರಾಕ್ಷಿಯ ತೊಟ್ಟು,
ಕಾಸುವಿಗೆ ಕೈಯಾಂತು ವೇಶಿದಾಸಿಯರ ಬಾಗಿಲ ಕಾಯ್ದು,
ಲೋಕದೊಳಗೆ ಗಾಸಿಯಾಗಿ ಜಂಗಮವೇಷಕ್ಕೆಲ್ಲ ಭಂಗವ ಹೊರಸಿ,
ಕಣ್ಣುಗಾಣದೆ ಜಾರಿಬಿದ್ದು, ದೂರಿಂಗೆ ಬಂದು,
ಈ ಮೂರಕ್ಕೊಳಗಾಗಿ, ಪಾರಾಗಿ ಹೋಗುವರ ವೇಷಕ್ಕೆ ಶರಣಾರ್ಥಿ,
ಅವರು ಸುತ್ತಿರ್ದ ಪಾಶವ ಕಂಡು ಹೇಸಿತ್ತೆನ್ನ ಮನ
ನಿಮ್ಮಾಣೆ, ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ

ತನು , ತನುವನ್ನೇ ಆವರಿಸಿದ ಮನಕ್ಕೆ ತನುವಿನಲ್ಲಿಯೇ ತನ್ಮಯವಾದ ಜಂಗಮನ ದರ್ಶನವಾಗಬೇಕು. ಜಂಗಮ ಅಂದರೆ ವೇಷಧಾರಿಯಲ್ಲ. ರುದ್ರಾಕ್ಷಿ ಧರಿಸಿ, ಭಸ್ಮ ಹೂಸಿಕೊಂಡು ಕಾವಿ ಹಾಕಿಕೊಂಡರೆ ಆತ ಜಂಗಮನಲ್ಲ. ಕಾಸಿಗೆ ಕೈಯೊಡ್ಡಿ ವೇಶಿದಾಸಿಯರ ಬಾಗಿಲ ಕಾಯುವ, ಕಣ್ಣು ಕಾಣದೆ ಜಾರಿ ಬಿದ್ದ ಕುರುಡ. ಈ ವೇಷದಿಂದ ಪಾರಾದವನೇ ಸಮರ್ಥ.

ತನುವನ್ನು ಆವರಿಸಿದ ಮನ ಸಾಕಷ್ಟು ತನುಗಳನ್ನು ಆಟವಾಡಿಸುತ್ತಿದೆ. ಒಂದು ತನುವಿಗೆ ಜಂಗಮನ ವೇಷ. ಒಂದು ತನುವಿಗೆ ವಿರಕ್ತನ ವೇಷ; ಮಠಾಧೀಶರ ವೇಷ. ಗುರುವಿನ ವೇಷ,

ಆಶ್ರಮದ ಒಡೆಯನ ವೇಷ, ಎಷ್ಟೊಂದು ವೇಷಗಳು! ಇದೆಲ್ಲ ಮನ ತನುವಿಗೆ ವೇಷ ಹಾಕಿ ಹೊಟ್ಟೆ ಹೊರೆಯುವ ವ್ಯವಹಾರ. ಮನ ತನುವಿಗೆ ಮಾಡುವ ನಿರಂತರ ಮೋಸದ ವ್ಯವಹಾರ. ವೇಷ ಮತ್ತಷ್ಟು ಬಲಿಯುತ್ತದೆಯೇ ಹೊರತು ಕಳಚುವುದಿಲ್ಲ. ವೇಷ ಹಾಕಿದವ ಜಂಗಮನಲ್ಲವೆಂದು ಆ ವೇಷ ಹಾಕಿದ ತನುವಿನ ಮನಕ್ಕೆ ಹೊಳೆಯುವುದೇ ಇಲ್ಲ. ಇದರಿಂದ ಪಾರಾಗುವ ಸೂಚನೆಯ ಸುಳುಹು ಕೂಡಾ ವೇಷ ಹಾಕಿದ ಆ ತನುವಿಗೆ ಹೊಳೆಯುವುದಿಲ್ಲ.

ಜಂಗಮವೆಂದರೆ ಅಜಾಂಡ ಬ್ರಹ್ಮಾಂಡವೇ ತನ್ನ ಕುಕ್ಷಿಯೊಳಗೆ ನಿಕ್ಷೇಪವಾಗಿರುವುದು ಆತನಿಗೆ ಹೊಳೆದು ಮಹದಾನಂದವಾಗುತ್ತದೆ. ನಿರ್ಗಮನಿಯಾಗಿ, ಲಿಂಗರೂಪಾಗಿ, ಸುಳಿಯುತ್ತಾನೆ. ಜನನ ಮರಣಗಳ ಬಾಧೆಯಿಂದ ದೂರವಾಗುತ್ತಾನೆ. ಸಂಸಾರದ ಸಮಾಜದ ಸಕಲ ಬಂಧನಗಳನ್ನು ಕಳಚಿಕೊಂಡು ನಿರಾಳವಾಗುತ್ತಾನೆ. ವ್ಯಕ್ತ ದೇಹವನ್ನು ಅವ್ಯಕ್ತ ಜಂಗಮ ಆಕ್ರಮಿಸಿಕೊಂಡು ಜಗದಗಲ ಮುಗಿಲಗಲಕ್ಕೆ ವಿಸ್ತಾರಗೊಳ್ಳುತ್ತಾನೆ. ಅಗಮ್ಯ ಅಗೋಚರ ಅಪ್ರಮಾಣ ಲಿಂಗವಾಗಿ ನಿಲ್ಲುತ್ತಾನೆ.

204

ಶ್ರೋತ್ರ , ನೇತ್ರ , ಜಿಹ್ವೆ, ತ್ವಕ್ಕು, ಘ್ರಾಣವೆಂಬ ಬುದ್ಧೀಂದ್ರಿಯಗಳನರಿದು,
ವಾಕ್ಕು, ಪಾಣಿ, ಪಾದ, ಪಾಯು, ಗುಹ್ಯವೆಂಬ ಕರ್ಮೇಂದ್ರಿಯವ ತೊರೆದು,
ಗಂಧ, ರಸ, ರೂಪು, ಸ್ಪರ್ಶನ, ಶಬ್ದವೆಂಬ ಪಂಚೇಂದ್ರಿಯವ ಜರಿದು,
ಮನ, ಬುದ್ಧಿ, ಚಿತ್ತ , ಅಹಂಕಾರವೆಂಬ ಚತುಷ್ಟಯ ಕರಣಂಗಳ ಮೆಟ್ಟಿ,
ಕಾಮ, ಕ್ರೋಧ, ಲೋಭ, ಮೋಹ,
ಮದ, ಮತ್ಸರವೆಂಬ ಅರಿಷಡ್ವರ್ಗಮಂ ಸುಟ್ಟು,
ತನುವ್ಯಸನ, ಮನವ್ಯಸನ, ಧನವ್ಯಸನ, ವಾಹನವ್ಯಸನ,
ಉತ್ಸಾಹವ್ಯಸನ, ಸೇವಕ ವ್ಯಸನ, ಮತ್ಸರವ್ಯಸನವೆಂಬ
ಸಪ್ತವ್ಯಸನಂಗಳ ಸ್ವಪ್ನದಲ್ಲಿ ನೆನೆಯದೆ,
ಪೃಥ್ವಿ, ಅಪ್ಪು ,ಅಗ್ನಿ, ವಾಯು, ಆಕಾಶ, ಚಂದ್ರ , ಸೂರ್ಯ, ಆತ್ಮರೆಂಬ ಇಂತೀ
ಅಷ್ಟಮದವ ಹಿಟ್ಟುಗಟ್ಟಿ,
ಪ್ರಾಣ, ಅಪಾನ, ಉದಾನ, ಸಮಾನ,
ನಾದ, ಕೂರ್ಮ,ಕ್ರಕರ, ದೇವದತ್ತ , ಧನಂಜಯವೆಂಬ ದಶವಾಯುವ ಕಡೆಮೆಟ್ಟಿ,
ಸಂಸಾರವ ಒಡಹಾಯ್ದು, ಜಗವ ಹೊದ್ದದೆ, ತಾನೊಂದು ಕಡೆಯಾಗಿ ನಿಂದು,
ಮಾಯೆಗೆ ಒಡೆಯನಾಗಿ, ಆ ಮಹಾಘನವ ಸೂರೆಗೊಂಡ ಶರಣಂಗೆ
ನಮೋ ನಮೋ ಎಂದು ಬದುಕಿದೆನಯ್ಯಾ , ಬಸವಪ್ರಿಯ
ಕೂಡಲಚೆನ್ನಬಸವಣ್ಣ, ನಿಮ್ಮ ಧರ್ಮ, ನಿಮ್ಮ ಧರ್ಮ.

ತನುವಿನಲ್ಲಿ ಸಂಗಮವಾದ ಜ್ಞಾನೇಂದ್ರಿಯಗಳು ಐದು, ಕರ್ಮೇಂದ್ರಿಯಗಳು ಐದು, ಪಂಚೇಂದ್ರಿಗಳು ಐದು, ಚತುಷ್ಟಯ ಕರಣಂಗಳು ನಾಲ್ಕು, ಅರಿಷಡ್ವರ್ಗಗಳು ಆರು, ವ್ಯಸನಗಳು ಏಳು. ಮದಗಳು ಎಂಟು, ವಾಯುಗಳು ಹತ್ತು , ಇವೆಲ್ಲವುಗಳನ್ನು ತನುವಿನಲ್ಲಿ ಸೃಷ್ಟಿ ಮಾಡಿದ್ದು

ಮನವೆಂಬ ಮಾಯೆ. ಶಾಸ್ತ್ರ ಕಲಿತು ಪಂಡಿತ ಶಾಸ್ತ್ರಿ ಆಗುವುದಕ್ಕಿಂತ ಮನವೆಂಬ ಮಾಯೆಗೆ ಒಡೆಯನಾದವನೇ ಸುಖಿ.

ಸಕಲ ವಿದ್ಯೆಗಳು ಸುಖಿಯಾಗುವುದಕ್ಕಾಗಿ. ತನು ಯಾವ ಜಾತಿಯದಾದರೇನು? ಯಾವ ಮತ ಧರ್ಮದ್ದಾದರೇನು? ಯಾವ ದೇಶ ಭಾಷೆಯದ್ದಾದರೇನು? ಅದು ಹೆಣ್ಣಾದರೇನು? ಗಂಡಾದರೇನು? ತನುವನ್ನು ಅಜ್ಞಾನವೆಂಬ ಮಾಯೆ ಆವರಿಸಿರುವದಂತೂ ಸತ್ಯ. ಈ ಮಾಯೆಯಿಂದಲೇ ತನು ಹೆಣ್ಣು ಗಂಡೆಂದು ಹೆಸರು ಪಡೆದಿದೆ. ಜಾತಿ ಮತ ಪಂಥ ಧರ್ಮಗಳಿಂದ ತನ್ನನ್ನೇ ತಾನು ಬೇಧ ಮಾಡಿಕೊಂಡಿದೆ. ದೇಶ ಭಾಷೆ ವೇಷಗಳಿಂದ ತನ್ನಿಂದ ತಾನೇ ದೂರವಾಗಿದೆ. ತಾನು ತನುವಾಗಿ ತನುವನ್ನೇ ಆಶೀರ್ವದಿಸುತ್ತದೆ.

ಪಂಡಿತ ಶಾಸ್ತ್ರಿ ಗುರುವಾಗಿ ಆಶೀರ್ವದಿಸುತ್ತದೆ. ಭಕ್ತ ಶಿಷ್ಯ ಭವಿಯಾಗಿ ಆಶೀರ್ವಾದ ಪಡೆಯುತ್ತದೆ. ಇದೊಂದು ವಿಚಿತ್ರವೆಂದು ತನುವಿಗೆ ಅನ್ನಿಸದೇ ಸುಖ ದುಃಖಗಳಲ್ಲಿ ಭಾಗಿಯಾಗುತ್ತದೆ. ತನು ಮನದ ಮಾಯೆಗೆ ಒಳಗಾಗುತ್ತದೆ.

ಮಾಯೆ ಬೀಸಿದ ಸಂಸಾರ ಜಾಲವನ್ನು ಕಿತ್ತೆಸೆದು, ಜಗವ ಹೊದ್ದದ್ದೆ, ಮಾಯೆಗೆ ಒಡೆಯನಾಗಿ ಮಹಾಜ್ಞಾನವೆಂಬ ಮಹಾಘನವ ಸೂರೆಗೊಂಡವನೆ ಶರಣ. ಅವನಿಗೆ ಜನನ ಮರಣಗಳ ಬಾಧೆಯಿಲ್ಲ. ಸುಖ ದುಃಖಗಳ ಜಂಜಾಟವಿಲ್ಲ. ಬರೀ ಸುಖದ ಸುಖದಲ್ಲಿ ಮೀಯುತ್ತ ಸದಾ ಮಹಾದಾನಂದದದಲ್ಲಿ ತಲ್ಲೀನನಾಗಿರುತ್ತಾನೆ. ಇಂತಹ ಶರಣನಿಗೆ ನಮೋ ನಮೋ ಎಂದು ಬದುಕಿದ್ದೆನಯ್ಯ ಎಂದಿದ್ದಾರೆ ಅಪ್ಪಣ್ಣ ಶರಣರು.

205

ಸಂಜೆ ಮುಂಜಾನೆಯೆಂದೆನಬೇಡ, ಅಂಜಿಕೆ ಬೇಡ, ಅಳಕು ಬೇಡ.
ಸಂದು ಸಂಶಯವೆಂಬ ಸಂದೇಹಬೇಡ.
ಮನದಲ್ಲಿ ಸಂಕಲ್ಪ ವಿಕಲ್ಪ ಆದಿ ವ್ಯಾಧಿ ದುರಿತು ದುಮ್ಮಾನ
ಭಯ ಮೋಹ ಚಿಂತೆ ಸಂತೋಷ ಸುಖ ದುಃಖ ಮೊದಲಾದವು
ಒಂದೂ ಇಲ್ಲದಿದ್ದಡೆ, ಆತನೇತರಲ್ಲಿರ್ದಡೂ ಅಜಾತ ಸ್ವಯಂಭು.
ಬಂದುದನೇ ಪರಿಣಾಮಿಸಿ, ನಿಶ್ಚಿಂತ ನಿಜ ನಿವಾಸಿಯಾಗಿಪ್ಪ
ಪರಮ ವಿರಕ್ತಂಗೆ ನಮೋ ನಮೋ ಎಂಬೆ.
ಆತ, ಬಸವಪ್ರಿಯ ಕೂಡಲಸಂಗಯ್ಯನಲ್ಲಿ ಒಂದಾದ ಲಿಂಗೈಕ್ಯನು.

ಇದು ಅಪ್ಪಣ್ಣ ಶರಣರ ಸುಂದರವಾದ ಸೂತ್ರ. ತನುವಿನಲ್ಲಿ ಹುಟ್ಟಿದ ಭ್ರಮೆಯನ್ನು, ಸುಖ ದುಃಖಗಳನ್ನು ; ತನುವಿನಲ್ಲಿಯೇ ಸಂಗಮವಾದ ಮಹಾಜ್ಞಾನವೆಂಬ ತಂತ್ರಜ್ಞಾನದಿಂದ ಕಳೆದುಕೊಂಡು ಸಹಜವಾಗಿ, ನಿಶ್ಚಿಂತ ನಿಜ ನಿವಾಸಿಯಾಗಿ ಹೇಗೆ ಇರಬಹುದೆನ್ನುವುದನ್ನು ಈ ಸೂತ್ರದ ವಚನದ ಮೂಲಕ ಸಕಲ ಓದುಗರಿಗೆ ಮನದಟ್ಟು ಮಾಡಿದ್ದಾರೆ.

ಸಂಜೆ ಮುಂಜಾನೆ ಎಂಬುದು ಇದೆ. ಕಣ್ಣಿಗೆ ಕಾಣುತ್ತದೆ. ಆದರೂ ಇಲ್ಲ. ಸಂಜೆ ಮುಂಜಾನೆಗಳನ್ನು ನೋಡಿ ಅನುಭವಿಸುವುದು ನಿಜಕಣ್ಣಲ್ಲ; ಅದು ಕುರುಡು ಕಣ್ಣು; ಕಣ್ಣಿನ ಭ್ರಮೆ. ನಿಜ ಕಣ್ಣಿಗೆ ಗೋಚರವಾಗುವುದು ಸೂರ್ಯೋದಯ ಸೂರ್ಯಾಸ್ತಗಳಲ್ಲ. ಸೂರ್ಯ ಮುಳುಗುವುದೂ ಇಲ್ಲ;

ತೇಲುವುದೂ ಇಲ್ಲ. ಸೂರ್ಯ ಸದಾ ಬೆಳಗುತ್ತಿರುತ್ತಾನೆ. ಜ್ಞಾನವೆಂಬ ಸೂರ್ಯನು ಕೂಡಾ ತನುವಿನಲ್ಲಿ ಸದಾ ಬೆಳಗುತ್ತಿರುತ್ತಾನೆ. ಈ ತಂತ್ರಜ್ಞಾನವನ್ನು ಅರಿತ ಜ್ಞಾನಿ ಶರಣನಿಗೆ ಮಾತ್ರ ಗೋಚರವಾಗುತ್ತದೆ. ಆತ ಅದನ್ನು ಬಳಸುತ್ತಾನೆ. ಹೀಗಾಗಿ ಆತ ಸಂಧ್ಯಾವಂದನೆ ಸೂರ್ಯೋದಯದ ಪೂಜೆ ಪುನಸ್ಕಾರಗಳನ್ನು ಮಾಡುವುದಿಲ್ಲ. ಅಂಜುವುದಿಲ್ಲ; ಅಳುಕುವುದಿಲ್ಲ. ಸಂದು ಸಂಶಯ ಸಂದೇಹಗಳು ಶರಣನಲ್ಲಿ ಮೂಡುವುದಿಲ್ಲ. ಸೂರ್ಯನನ್ನು ತಿಳಿಯುವ ಚಿತ್ ಸೂರ್ಯನಾತ.

ಕುರುಡನಿಗೆ ಸೂರ್ಯ ಮುಳುಗುವುದು ಹುಟ್ಟುವುದು ಕಾಣುತ್ತದೆ. ಹುಟ್ಟಿ ಮುಳುಗುವ ಸೂರ್ಯನನ್ನು ನೋಡುವ ಕಣ್ಣು ಕಾಣುತ್ತವೆ. ಆದರೆ ಕಾಣುವ ಕಣ್ಣುಗಳಲ್ಲ ಅವು; ಕುರುಡು ಕಣ್ಣುಗಳು ! ಸೂರ್ಯ ಹುಟ್ಟಿದರೆ ಸಾಕು. ಬೆಳಕಾಯಿತು. ಮನದ ಸಂಕಲ್ಪ ವಿಕಲ್ಪಗಳಿಗೆ, ಆದಿ ವ್ಯಾಧಿಗಳಿಗೆ, ದುರಿತ ದುಮ್ಮಾನಗಳಿಗೆ ಭಯ ಮೋಹ, ಚಿಂತೆ ಸಂತೋಷಗಳಿಗೆ ಸುಖ ದುಃಖಗಳಿಗೆ ಭ್ರಮೆ ಕಾರಣವಾಗುತ್ತದೆ. ಬೆಳಗಾದರೆ ಸಾಕು ಮನ ಮಾಡಿದ ಸಂಕಲ್ಪ ತನುವನ್ನೇ ಕಾಡುತ್ತದೆ.

ಕಲ್ಲನ್ನು ಕಲ್ಲೆಂದೆ ನೋಡುವ ಕಣ್ಣು ಸಂಕಲ್ಪ ವಿಕಲ್ಪಗಳಿಗೆ ಕೊಡದೆ ಕಲ್ಲೆಂದೇ ಹೇಳಲು ಬಾಯಿಗೆ ಸೂಚಿಸುತ್ತದೆ. ಕಲ್ಲನ್ನು ಕಲಾವಿದನಿಗೆ ಕೊಟ್ಟು ಮೂರ್ತಿಯನ್ನಾಗಿಸಿದಾಗ ಕಲ್ಲು ಮರೆತು ಭ್ರಮೆಯಿಂದ ದೇವರೆಂದು ತಿಳಿದು ಪೂಜಿಸಿ ಸಂಕಲ್ಪಕ್ಕೆ ಒಳಗಾಗುತ್ತದೆ. ನೋಡುವ ಕಣ್ಣು ಕಲ್ಲನ್ನು ಮರೆತು ದೇವರನ್ನು ನೋಡುತ್ತದೆ. ನೋಡುವ ಕಣ್ಣು ಹುಟ್ಟಿ ಮುಳುಗುವ ಸೂರ್ಯನನ್ನು ನೋಡುತ್ತದೆ. ಹಗಲಿರುಳೆನ್ನದೆ ನಿರಂತರ ಬೆಳಗುವ ಸೂರ್ಯನನ್ನು ಮರೆಯುತ್ತದೆ. ಅಷ್ಟೇ ಏಕೆ ತನ್ನನ್ನೇ ತಾನು ಮರೆತು ಸದಾ ಸಂಕಲ್ಪ ವಿಕಲ್ಪಕ್ಕೆ ಒಳಗಾಗುತ್ತದೆ.

ಬೆಳಗಾದರೆ ಸಾಕು ತಾನು ಹೆಣ್ಣು, ಗಂಡು, ಶ್ರೀಮಂತ ಬಡವ, ಅಧಿಕಾರಿ ರಾಜಕಾರಣಿ, ಹಿಂದು ಮುಸಲ್ಮಾನ ಕ್ರೈಸ್ತ ಜಾತಿ ಮತ ಪಂಥ ಧರ್ಮ ಭಾಷೆ ವೇಷ, ಜಗದ್ಗುರು, ಗುರು, ಸ್ವಾಮಿ, ಜಂಗಮ, ಭಕ್ತ, ಶಿಷ್ಯ ಏನೆಲ್ಲ ಹೇರಿಕೊಂಡು ತನಗೆ ತಾನೇ ಸಂಕಲ್ಪ ಮಾಡಿಕೊಂಡು ಸುಖ ದುಃಖಗಳಿಗೆ ಗುರಿಯಾಗುತ್ತದೆ.ಅದ್ಯಾವುದ ತಾನಲ್ಲ ಬೆಳಗುವ ಸೂರ್ಯನನ್ನು ಚಿತ್ ಸೂರ್ಯನಾಗಿ ಬೆಳಗಿಂಗೆ ಬೆಳಗಾಗಿ ಬೆಳಗುವ ಜ್ಞಾನ ಚೇತನವೆಂದು ತನಗೆ ಅನಿಸುವುದೇ ಇಲ್ಲ.

ಮಲಗಿದಾಗ ಸುಖ ನಿದ್ರೆಯಲ್ಲಿದ್ದ ತನು ಹೆಣ್ಣು ಅಲ್ಲ ಗಂಡೂ ಅಲ್ಲ. ಶ್ರೀಮಂತ ಬಡವನಂತೂ ಮೊದಲೇ ಅಲ್ಲ. ಜಾತಿ ಮತ ಪಂಥ ಧರ್ಮಗಳು ತನುವಿಗೆ ಇರಲಿಲ್ಲ. ಅಧಿಕಾರಿ ಶಾಸಕ ಸಚಿವ ಮಂತ್ರಿಯಾಗಿರಲಿಲ್ಲ. ತನು ಏನೊಂದಾಗದ ಅನಂತ ವಾಗಿತ್ತು . ಸಂಕಲ್ಪ ವಿಕಲ್ಪಗಳು ತನುವಿನಲ್ಲಿ ಸುಳಿಯುವುದೇ ಇಲ್ಲ. ಮುಳುಗಿದ ಸೂರ್ಯ ಬೆಳಗಿದ ಮೇಲೆ (ಅಂದರೆ ಕತ್ತಲು ಕಳೆದು ಬೆಳಕಾದ ಮೇಲೆ) ಸದಾ ಬೆಳಗಿಂಗೆ ಬೆಳಗಾಗಿ ಬೆಳಗುವ ಚಿತ್ ಸೂರ್ಯನಿಗೆ ಕತ್ತಲು ಆವರಿಸುತ್ತದೆ. ತನುವಿನ ಅಜ್ಞಾನ ತನುವಿಗೆ ಹೊಳೆಯುತ್ತದೆ. ರಾತ್ರಿ ತನು ಕಂಡ ಸತ್ಯವೇ ಹಗಲು ಸುಳ್ಳಾಗುತ್ತದೆ. ಇರುಳು ತನು ಮಲಗಿದ್ದಾಗ ಅಜ್ಞಾನದ ಬಾವಿ ಕಾಣಲೇ ಇಲ್ಲ. ಇರಳು ಕಳೆದು ಬೆಳಗಾದ ಮೇಲೆ ಅಜ್ಞಾನದ ಬಾವಿ ಕಂಡು ಅದರಲ್ಲಿ ತನು ಬಿದ್ದು ಹೆಣ್ಣೆಂದು ಗಂಡೆಂದು, ಶ್ರೀಮಂತನೆಂದು, ಬಡವನೆಂದು, ಶಾಸಕ ಸಚಿವ ಮಂತ್ರಿ ಪ್ರಧಾನಿ ಅಧ್ಯಕ್ಷನೆಂದು, ಘೋಷಿಸಿಕೊಳ್ಳುತ್ತದೆ. ಇರುಳು ಕಂಡ ಬಾವಿಯಲ್ಲಿ ಹಗಲು ಬೀಳುತ್ತದೆ.

ಸಂಜೆ ಮುಂಜಾನೆ ಕಳೆದು ಸದಾ ಬೆಳಗುವ ಸೂರ್ಯನನ್ನು ನೋಡಲಿಲ್ಲ. ಬೆಳಗುವ ಸೂರ್ಯನನ್ನು ಬೆಳಗುವ ಬೆಳಕು ತಾನೆಂದು ತನಗೆ ತಾನೇ ಅರಿವಾಗಲಿಲ್ಲ. ತಾನು ಮಾಡಿದ ಸಂಕಲ್ಪ ತನಗೆ ಮುಳುವಾಯಿತು. ಸುಖವಾದಾಗ ದೇಹ ಅರಳಿತು; ದುಃಖವಾದಾಗ ದೇಹ ಕೆರಳಿ

ಬಾಡಿತು. ಇವೆರಡೂ ಸುಳ್ಳು, ದೇಹ ಮನದಿಂದಾಗಿ ರಸಾಯನಿಕ ಕ್ರಿಯೆಗೆ ಗುರಿಯಾಯಿತೆಂದು ಮನಕ್ಕೆ ಮನವರಿಕೆಯಾಗಿ, ಮನ ಸಹಜವಾಗಲಿಲ್ಲ. ಏಕೆಂದರೆ ತನುವಿನ ಸಹಜತೆಯತ್ತ ಮನ ಪಯಣಿಸಲಿಲ್ಲ, ಮನ ಮಾಡಿಕೊಂಡ ಸಂಕಲ್ಪ ವಿಕಲ್ಪದ ಬಾವಿಯಲ್ಲಿ ತನುವನ್ನು ಕೆಡವಿ ಮನ ಸಂತೋಷ ಪಡುತ್ತದೆ. ಇದನ್ನು ತಿಳಿದಾತನೇ ಅಜಾತ. ಆತನೇ ಶರಣ. ಸ್ವಯಂಭು ಬಂದುದನೇ ಪರಿಣಾಮಿಸುತ್ತಾನೆ. ನಿಶ್ಚಿಂತನಾಗಿರುತ್ತಾನೆ. ನಿಜವಾಸಿಯಾಗಿರುತ್ತಾನೆ. ಜ್ಞಾನದ ಮರದಂತೆ ಪರಮ ವಿರಕ್ತನಾಗಿರುತ್ತಾನೆ. ಅಂತಹ ಶರಣನಿಗೆ ನಮೋ ನಮೋ ಎಂದಿದ್ದಾರೆ ಅಪ್ಪಣ್ಣ ಶರಣರು.

206

ಸತಿ ಸುತ ಮಾತಾಪಿತರಂದದಿ ಮೋಹದಲಿ ಮನ ಮಗ್ನವಾದರೆ,
ಅವನಿಗೆ ಲಿಂಗವಿಲ್ಲ, ಲಿಂಗಕ್ಕೆ ತಾನಿಲ್ಲ.
ಅದೇನು ಕಾರಣವೆಂದರೆ,
ಆತನ ಧ್ಯಾನ ಸತಿಯ ಮೇಲೆ ಸುತರ ಮೇಲೆ ಮಾತಾಪಿತರ ಮೇಲೆ ಇಪ್ಪುದಲ್ಲದೆ
ಲಿಂಗದ ಮೇಲಿಲ್ಲ. ಅದು ಕಾರಣ,
ಆತ ಕಟ್ಟಿದುದು ಲಿಂಗವಲ್ಲ, ತೊಟ್ಟುದುದು ವಿಭೂತಿ ರುದ್ರಾಕ್ಷಿಯಲ್ಲ.
ಅದು ಕಾರಣ , ಆತನಾಚಾರಕ್ಕೆ ದೂರ,
ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಮೋಹದಲ್ಲಿ ಮನ ಮಗ್ನವಾದರೆ, ಆ ಮನ ಅರಿವಿಗೆ ದೂರ ಆ ಮನಕ್ಕೆ ಅರಿವಿಲ್ಲ; ಆ ಅರಿವಿನಲ್ಲಿ ತಾನಿಲ್ಲ. ಏಕೆಂದರೆ ಮನದ ಧ್ಯಾನ ಸತಿ ಸುತರ ಮೇಲೆ, ಮಾತಾಪಿತರ ಮೇಲೆ ಇರುವುದಲ್ಲದೆ ಅರಿವನನ ಮೇಲಲ್ಲ.

ಅಂಗದ ಮೇಲೆ ಲಿಂಗ ಕಟ್ಟಿಕೊಂಡಿದ್ದರೂ ಸಹ ಅದು ಲಿಂಗವಲ್ಲ. ವಿಭೂತಿ ರುದ್ರಾಕ್ಷಿ ಧರಿಸಿದ್ದರೂ ಸಹ ಅದು ವಿಭೂತಿಯಲ್ಲ; ರುದ್ರಾಕ್ಷಿಯಲ್ಲ. ಆ ತನುವು ಅರಿವಿನ ಆಚಾರಕ್ಕೆ ದೂರ.

ಮನ ಅರಿವಿಗೆ ಮೋಹ ಮಾಡಿದಾಗ ತಂದೆ ತಾಯಿ ಸತಿ ಸುತರನ್ನು ಮೋಹಿಸಲು ಬರುತ್ತದೆ. ಇಲ್ಲದಿದ್ದರೆ ಆ ತನುವು ಮಾಡಿದ ಮೋಹ ಕುರುಡು ಮೋಹ. ಧೃತರಾಷ್ಟ್ರ ದುರ್ಯೋಧನನ ಮೇಲೆ ಮೋಹ ಮಾಡಿದಂತೆ. ಧೃತರಾಷ್ಟ್ರ ಕುರುಡನಲ್ಲ. ಮಗನ ಮೋಹದಿಂದಾಗಿ ಕುರುಡತನ ಆವರಿಸಿತ್ತು .

ಭಕ್ತ ಸಿರಿಯಾಳ ಚಂಗಳೆಯರು ಮಗನನ್ನು ಮೋಹಿಸಲಿಲ್ಲ. ಮೋಹದ ಮಗನನ್ನು ಅಂದರೆ ಮಗನಿಗೆ ಬಲಿಯಾದ ಕುರುಡು ಮೋಹವನ್ನು ಕುಟ್ಟಿ ಮಹಾಜ್ಞಾನವೆಂಬ ಜಂಗಮನಿಗೆ ಉಣಬಡಿಸಿದರು.

ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗನೀನು, ನೀನಲ್ಲದೆ ಮತ್ತಾರೂ ಇಲ್ಲವಯ್ಯ ಕೂಡಲ ಸಂಗಮದೇವಾ ಹಾಲಲ್ಲಾದರೂ ಅದ್ದು, ನೀರಲ್ಲಾದರೂ ಅದ್ದು ನಿಮ್ಮ ಧರ್ಮ. ಅರಿವೆಂಬ ಬಯಲ ಬೀಜ ತಂದೆಯ ಗರ್ಭದಲ್ಲಿ ಹೊಕ್ಕು ತಂದೆಯಾಗಿದೆ. ತಾಯಿಗರ್ಭ ಸೇರಿ ತಾಯಿಯಾಗಿ ಮಗುವಿಗೆ ಜನ್ಮ ನೀಡಿದೆ. ಆ ಮಗುವಿನಲ್ಲಿಯೇ ಸಂಗಮವಾಗಿ ಬಾಲ ಸಂಗಯ್ಯನಾಗಿದೆ. ಅಂಗದಲ್ಲಿಯೇ ಲಿಂಗವಾಗಿ; ಲಿಂಗಾಂಗ ಸಮರಸವಾಗಿ ಬೆಳೆದಿದೆ. ಅಂಗ

ಲಿಂಗವೂ ಹೌದು; ಜಂಗಮನೂ ಹೌದು. ಇಂತಹ ಲಿಂಗಾಂಗವನ್ನು ಸತಿ ಸುತ ಮಾತಾ ಪಿತರೆಂದು ಮನ ಮಗ್ನವಾಗಿ ಮೋಹಿಸಬಹುದೇ? ಆರಾಧಿಸಬೇಕಲ್ಲದೆ ಮೋಹಿಸಬಾರದು. ಮನದ ಮೋಹವು ಸತಿಯ ಮೇಲೆ, ಸುತರ ಮೇಲೆ, ಮಾತಾ ಪಿತರ ಮೇಲೆ ಇಪ್ಪುದಲ್ಲದೆ ಲಿಂಗದ ಮೇಲಲ್ಲ. ಇಂತಹ ಅಜ್ಞಾನದ ಮೋಹದಿಂದಲೇ ಕಣ್ಣಿದ್ದೂ ಕುರುಡನಾಗಿದ್ದ ಧೃತರಾಷ್ಟ್ರ. ಮೋಹದ ಕಣ್ಣು ಬೇಡದ ಕಣ್ಣು. ಇಂತಹ ಬೇಡವಾದ ಕಣ್ಣನ್ನು ಶಿವನಿಗಿತ್ತು ಧನ್ಯನಾಗಿದ್ದ ಕಣ್ಣಪ್ಪ.

ಕಣ್ಣಪ್ಪ ಕಣ್ಣು ಕಳೆದುಕೊಳ್ಳಲಿಲ್ಲ. ಬೇಡದ ಅಜ್ಞಾನದ ಕಣ್ಣನ್ನು ಮುಕ್ಕಣ್ಣನಿಗಿತ್ತು ; ಮುಕ್ಕಣ್ಣನ ಕಣ್ಣನ್ನು ತಾನು ಪಡೆದು ಮುಕ್ಕಣ್ಣನೇ ತಾನಾದ.

ನೋಡುವ ಕಣ್ಣಿನಲ್ಲಿ ಜ್ಞಾನದ ಕಣ್ಣೊಂದಿದೆ; ಅದು ಮುಕ್ಕಣ್ಣನ ಕಣ್ಣು! ಮೋಹದ ಕಣ್ಣೊಂದಿದೆ; ಅದು ಅಜ್ಞಾನದ ಕಣ್ಣು. ಅಜ್ಞಾನದ ಕಣ್ಣಿಗೆ ಸತಿ ಸುತ ಮಾತಾ ಪಿತರು ಬಂಧು ಬಳಗ ಮಾತ್ರ ಕಾಣುತ್ತದೆ. ಪ್ರೀತಿಯಲ್ಲಿ ಚ್ಯುತಿ ಬಂದರೆ ಅವರನ್ನು ವೈರಿಗಳಂತೆ ನೋಡುತ್ತದೆ. ಇತರರನ್ನೂ ವೈರಿಗಳಂತೆ ನೋಡುತ್ತದೆ. ಮುಕ್ಕಣ್ಣನ ಕಣ್ಣು ಹಾಗಲ್ಲ; ಸರ್ವರನ್ನು ನೋಡುತ್ತ ಯಾರನ್ನೂ ದ್ವೇಷಿಸುವುದಿಲ್ಲ; ಪ್ರೀತಿಸುವುದಿಲ್ಲ. ಬೆಳಕಿನ ಕಣ್ಣು; ಕಣ್ಣಿನ ಬೆಳಕು ಸರ್ವರ ಮೇಲೂ ಸೂರ್ಯನಂತೆ ಬೀರುತ್ತದೆ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಕಣ್ಣಿನಲ್ಲಿ ಸುಳಿಯುವುದೇ ಇಲ್ಲ. ಸಹಜ ಕಣ್ಣು. ಮೋಹದ ಕಣ್ಣು ಮುಖವಾಡದ ಕಣ್ಣು. ಅದರ ನೋಟ ಒಂದಾದರೆ ಅದರ ಇರುವಿಕೆಯೇ ಬೇಕು.ಅಕ್ಕ ಎಂದು ಬಾಯಿಗೆ ಸೂಚನೆ ಕಳುಹಿಸಿ ಕಾಮದ ಕಣ್ಣಿನಿಂದ ಅಂಗದ ರುಚಿಯನ್ನು ಸವಿಯುತ್ತದೆ. ಅದು ಸಹಜವಲ್ಲ.

ಅಸಹಜ ಕಣ್ಣನ್ನು ಕಣ್ಣೆ ಕಳೆದುಕೊಂಡು ಸಹಜ ಕಣ್ಣಿನಿಂದ ನೋಡಬೇಕು.ಈ ಕಲೆಯನ್ನು ಶರಣರಿಂದಲೇ ಕಲಿಯಬೇಕು. ಮೋಹದ ಕಣ್ಣಿಗೆ ಶರಣರ ದರ್ಶನ ಇಷ್ಟವಾಗುವುದಿಲ್ಲ.ಹೀಗಾಗಿ ಅಂಗದ ಮೇಲೆ ಲಿಂಗ ಜನಿವಾರ ಶಿಲುಬೆಗಳನ್ನು ಹಾಕಿಕೊಂಡು ಆಚಾರಿಯಂತೆ ಗೋಚರಿಸುತ್ತದೆ. ಧರ್ಮಿಯಂತೆ ಗೋಚರಿಸುತ್ತದೆ. ಕುರುಡು ಕಣ್ಣಿಗೆ ಕುರುಡು ವೇಷ!

207

ಸಾವಾಗ ದೇವನೆಂದರೆ, ಸಾವು ಬಿಡುವುದೇ? ಇದಾವ ಮಾತೆಂದು ನುಡಿವಿರಿ.
ಎಲೆಯಣ್ಣಗಳಿರಾ, ಬಾಳುವಲ್ಲಿ, ಬದುಕುವಲ್ಲಿ, ಗುರುಲಿಂಗ
ಜಂಗಮವನರಿಯದೆ, ಹಾಳುಹರಿಯತಿಂದ ಶುಕನಂತೆ ಕಾಲ್ಗೆಡೆದು
ಓಡಾಡಿ ಏಳಲಾರದೆ ಬಿದ್ದಾಗಶಿವ ಶಿವ ಎಂದರೆ,
ಅಲ್ಲಿ ದೇವನಿಪ್ಪನೆಂದು ಇದ ನೋಡಿ ನಾಚಿ ನಗುತಿರ್ದ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಒಡಲೊಳಗಿದ್ದು, ಒಡಲಿಂಗೆ ಆಧಾರವಾಗಿದ್ದು; ಒಡಲು ಸೋಂಕದೆ; ಒಡಲು ಬೆಳಗುವ ದೇವನನ್ನು ಒಡಲು ಸಾವಾಗ ನೆನವುದೆಂದರೇನು? ಸಾವಾಗ ನೆನೆದರೆ ಒಡಲಿಗೆ ಸಾವು ಬಿಡುವುದೆ?

ಬಾಳುವಲ್ಲಿ ಬದುಕುವಲ್ಲಿ ಅರಿವೆಂಬ ಗುರುದೇವನನ್ನು ಒಮ್ಮೆಯೂ ನೆನೆಯಲಿಲ್ಲ. ಗುರುದೇವನ ಮಾತು ಪಾಲಿಸುವ ಜಂಗಮನನ್ನು ಒಮ್ಮೆಯೂ ನೆನೆಯಲಿಲ್ಲ. ಇವರಿಬ್ಬರೂ ಹೊರಗಿನವರಲ್ಲ. ಒಡಲೊಳಗೆ ಸಂಗಮವಾಗಿದ್ದಾರೆ. ಇವರಿಬ್ಬರನ್ನೂ ಹೊತ್ತ ಅಂಗವೇ ಲಿಂಗ. ಇದು

ಲಿಂಗಾಂಗ ಸಾಮರಸ್ಯ. ಬಾಳಿ ಬದುಕಿದ್ದಾಗಲೇ ಅರಿಯಬೇಕಾದ ರಹಸ್ಯ ; ಸಾಯುವಾಗ ನೆನೆಯಲು ಹೋದರೆ ಸಾವು ಬಿಡುವುದೇ? ಬಾಳುವಲ್ಲಿ ಬದುಕುವಲ್ಲಿ ಗುರುಲಿಂಗ ಜಂಗಮನನ್ನು ಅರಿಯಬೇಕಿತ್ತು.

ಗುರುದೇವೋ ಮಹಾದೇವೋ ಗುರುದೇವೋ ಸದಾಶಿವಹ ಗುರುಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ ಎಂಬುದನ್ನು ಬದುಕಿರುವಾಗ ನಿತ್ಯ ನಿತ್ಯ ಗಿಳಿಯಂತೆ ಪಠಿಸಿ ಗುರುವಾಗಿ ಬೋಧಿಸಿದೆ; ಶಿಷ್ಯನಾಗಿ ಆಲಿಸಿದೆ; ಶಿವ ಶಿವ ಎಂದು ಕುಳಿತಾಗ, ಮಲಗಿದಾಗ, ಎದ್ದಾಗ ನುಡಿದೆ; ನುಡಿದ ನುಡಿ ಕೇಳಿ ನಾಚಿ ನಗುತಿರ್ದ ಶಿವ ಬಂದು ಪ್ರತ್ಯಕ್ಷನಾದನೆ?

ಬಾಳಿ ಬದುಕಿರುವಾಗ ಗುರುವೆಂದರೆ ಯಾರೆಂದು ಅರಿಯಲಿಲ್ಲ. ಲಿಂಗವೆಂದರೆ ಏನೆಂದು ಅರಿಯಲಿಲ್ಲ. ಜಂಗಮವೆಂದರೆ ಯಾರೆಂದು ಅರಿಯಲಿಲ್ಲ. ಶಿವ, ಮಹಾದೇವ, ಸದಾಶಿವ, ಸಾಕ್ಷಾತ್ ಪರಬ್ರಹ್ಮನೆಂದರೆ ಯಾರೆಂದು ಅರಿಯಲಿಲ್ಲ. ಸಾವಾಗ ದೇವನೆಂದರೆ ಸಾವು ಬಿಡುವುದೆ?

ನಿನ್ನ ಅರಿವೇ ನಿನಗೆ ಗುರು. ನಿನಗೆ ಆತ (ಬದುಕಿರುವಾಗಲೇ) ಒಡಲೊಳಗಿದ್ದು ನುಡಿದು ಹೇಳುತ್ತಾನೆ. ನೀನು ನುಡಿಯುವಾಗ ಆತ ಒಡಲೊಳಗಿದ್ದೇ ತಡೆಯುತ್ತಾನೆ. ತಡೆದರೂ ನುಡಿದಾಗ ಮೈದಡವಿ ಮತ್ತೆ ನುಡಿಯಬೇಡವೆಂದು ತಿಳಿ ಹೇಳುತ್ತಾನೆ. ಅದನ್ನು ಆಲಿಸುವ ಪರಿಪಾಲಿಸುವ ಭಕ್ತನಾಗಬೇಕು. ನೀನು ಆತನಿಗೇ ಭಕ್ತಿ ಮಾಡಬೇಕು. ಆತ ಶಿವನೂ ಹೌದು; ಮಹಾದೇವನೂ ಹೌದು, ಸದಾಶಿವನೂ ಸಾಕ್ಷಾತ್ ಪರಬ್ರಹ್ಮನೂ ಹೌದು. ಇದನ್ನು ನೀನು ಬದುಕಿರುವಾಗಲೇ ನಿನ್ನಿಂದಲೇ ನೀನು ತಿಳಿಯಬೇಕು. ತಿಳಿದರೆ ನಿನಗೆ ಹೊಳೆಯುವುದು; ಅಂಗದಲ್ಲಿ ಗುರು ಲಿಂಗ ಜಂಗಮ ಸಂಗಮವಾಗಿದ್ದಾರೆಂದು.ಮಹಾದೇವ ಸದಾಶಿವ ಸಾಕ್ಷಾತ್ ಪರಬ್ರಹ್ಮ ಸಂಗಮವಾಗಿದ್ದಾರೆಂದು. ಆದರೆ ಇದನ್ನು ಪುಸ್ತಕದಿಂದ ತಿಳಿದು ಶುಕನಂತೆ ನುಡಿದರೆ ಶಿವ ಒಲಿಯುವುದಿಲ್ಲ. ಅಂಗದಲ್ಲಿ ಸಂಗಮವಾದಾತನನ್ನು ಅಂಗದಲ್ಲಿಯೇ ಹುಡುಕಬೇಕು. ಹೊರಗೆ ಹುಡುಕಿದರೆ ಒಳಗಿದ್ದಾತ ನಾಚಿ ನಗುತಿರ್ದ.

208

ಸೀಮೆ ಭೂಮಿಯೆಂದೇನೋ, ಹೇಮುವನುರುಹಿದಂಗೆ.
ಕಾಮದ ಕತ್ತಲೆಯೆಂದೇನೋ, ಕಾಲನ ಗೆಲಿದಂಗೆ.
ನೇಮನಿತ್ಯವೆಂದೇನೋ, ತಾನು ತಾನಾದವಂಗೆ.
ಸಾಲ ಶೀಲವೆಂದೇನೋ, ನಿಶ್ಶೂನ್ಯವಾದ ಮಹಾಮಹಿಮ ಶರಣಂಗೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ ಇವು ಜಗಕ್ಕಿಕ್ಕಿದ ವಿಧಿ. ನಿನ್ನದೆಂಬುದು ಜ್ಞಾನರತ್ನಕಾಣಾ. ಅದನ್ನು ಕೆಡಗೊಡದೆ ಅಲಂಕರಿಸಿದೆಯಾದಡೆ ನಿನ್ನಂತಹ ಸಿರಿವಂತರು ಯಾರೂ ಇಲ್ಲ ಎಲೆ ಮನವೆ ಎಂದಿದ್ದಾರೆ ಅಲ್ಲಮ ಪ್ರಭುಗಳು. ಜಗದ ತನುಗಳೆಲ್ಲ ಭೂಮಿ, ಹೇಮ, ವಿಷಯಾಸಕ್ತಿಗೆ ಬಲಿಯಾಗಿವೆ. ಅದಕ್ಕೆ ತನುವನ್ನು ಆವರಿಸಿದ ಮನವೇ ಕಾರಣ. ಭೂಮಿ ಹೇಮ ವಿಷಯ ತನುವನ್ನು ವಿಧಿಯಾಗಿ ಕಾಡುತ್ತಲಿವೆ. ಇವುಗಳನ್ನು ಮನ ತನುವಿನ ಮೂಲಕ ಭೋಗಿಸಬೇಕೆಂಬ ಆಸೆ ಮಹಾದಾಸೆಯಾಗಿ ಕಾಡುತ್ತದೆ.ಅವುಗಳನ್ನು ಸ್ವಂತ ಮಾಡಿಕೊಳ್ಳಲು ಜೀವನ ಪರ್ಯಂತ ಮನ ತನುವನ್ನು ಕಾಡುತ್ತದೆ.

ಭೂಮಿ ಹೇಮ ವಿಷಯ ತನ್ನದಲ್ಲ. ಅದು ಜಗಕ್ಕೆ ಇಕ್ಕಿದ ವಿಧಿಯೆಂದು ತನಗೆ ಹೊಳೆಯುವುದೇ ಇಲ್ಲ. ತನ್ನದೆಂಬುದು ಜ್ಞಾನರತ್ನ. ಅದು ಅಂಗದಲ್ಲಿಯೇ ಸಂಗಮವಾಗಿದೆ. ಆ ಜ್ಞಾನದಿಂದ ಮನ ಭೂಮಿಯನ್ನು ನೋಡಿದಾಗ, ಭೂಮಿ ತನ್ನ ಸ್ವರೂಪವಾಗಿಯೇ ಕಾಣುತ್ತದೆ. ಭೂಮಿಯೊಳಗಿದ್ದ ಹೇಮವೂ ತನ್ನ ಸ್ವರೂಪವಾಗಿಯೇ ಕಾಣುತ್ತದೆ. ವಿಷಯ ತನ್ನ ತನುವಿನೊಳಗೆ ಇದ್ದು, ತನುವಿನಿಂದಲೇ ವಿಷ ದ್ರವ್ಯಸ್ರವಿಸಿ, ಅನ್ಯ ತನುವಿನಿಂದಲೇ ಸುಖವಾಯಿತೆಂದು ತನು ಭ್ರಮಿಸುತ್ತದೆ. ಈ ಭ್ರಮೆ ದೂರವಾಗಿ ಕಾಮದ ಕತ್ತಲೆ ಹರಿಯುತ್ತದೆ.

ಜಲಬಿಂದುವಿನಿಂದಲೇ ತನು ಜನ್ಮ ತಳೆಯಿತು. ಜಲಬಿಂದು ಗಟ್ಟಿಯಾಗಿ ಭೂಮಿ ಜನ್ಮ ತಳೆಯಿತು. ಜಲಬಿಂದು ಗಟ್ಟಿಗೊಂಡೆ ಹೇಮವಾಯಿತು. ತನುವಿನಲ್ಲಿ ತನ್ಮಯವಾದ ಬಿಂದು ತನುವಿನಿಂದಲೇ ಹೊರಬಂದು ವಿಷಯ ಸುಖ ತನುವಿಗೆ ಉಂಟಾಯಿತು. ಅಂದ ಮೇಲೆ ಜಲ ಬಿಂದುವಿನ ಸ್ವರೂಪ ಒಂದೇ.

ಭೂಮಿ, ಹೇಮ ಜಡ. ಇವರೆಡಕ್ಕೂ ತನುವನ್ನು ತಿಳಿಯುವ ಶಕ್ತಿ ಇಲ್ಲ. ಆದರೆ ತನುವಿನಲ್ಲಿ ಜ್ಞಾನ ಸಂಗಮವಾಗಿದೆ. ಅದು ತನುವಿನ ಸಂಪತ್ತು. ಆ ಜ್ಞಾನ ಸಂಪತ್ತಿನಿಂದ ಮನ ತನುವಿನ ಮೂಲಕ ಬಯಸಿದ ಬಯಕೆಗಳನ್ನೆಲ್ಲ ತಿಳಿದು ಉದಾಸೀನ ಮಾಡಬಹುದಾಗಿದೆ. ಆದರೆ ಮನವೆಂಬ ಕತ್ತಲೆ ಕಳೆಯದಿದ್ದರೆ ತನು ಜ್ಞಾನದಿಂದ ಬೆಳಗುವುದಿಲ್ಲ. ಮನ ಜ್ಞಾನದತ್ತ ಪಯಣಿಸಿ ಆ ಜ್ಞಾನ ರತ್ನವನ್ನು ಅಲಂಕರಿಸಿದರೆ ಸಾಕು ಆ ಮನವೇ ಘನ ಮನವಾಗುತ್ತದೆ. ಹೇಮವನು ಉರುಹಿ, ಕಾಲನ ಗೆಲಿದು, ತಾನು ತಾನೇ ಆಗುತ್ತದೆ. ಮನ ಜ್ಞಾನಕ್ಕೆ ಶರಣು ಹೋಗಿ ಮಹಾಮಹಿಮ ಶರಣನೇ ತಾನಾಗುತ್ತದೆ.

209

ಸುಖಾನುಭಾವ, ಲಿಂಗಾನುಭಾವವೆಂದು ನುಡಿದಾಡುತಿಪ್ಪಿರಿ.
ಲಿಂಗದ ನೆಲೆಯನಾರು ಬಲ್ಲರು?
ಆರುಲಿಂಗ, ಮೂರು ಲಿಂಗ, ಮೂವತ್ತಾರು ಲಿಂಗ,
ಬೇರೆ ಇನ್ನೂರಾ ಹದಿನಾರು ಲಿಂಗವೆಂದು
ಎಮ್ಮ ಶರಣರು ಸಾರಿಹೋದ ವಾಕ್ಯವನೆ ಮಾರುತಿಪ್ಪರಲ್ಲದೆ
ಬೇರೆ ಇಪ್ಪತ್ತೊಂದು ಮಹಾಘನಲಿಂಗವನಾರೂ ಅರಿಯರು,
ನಿಮ್ಮ ಶರಣರಲ್ಲದೆ, ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಅಂಗದಲ್ಲಿ ಲಿಂಗ ಸಂಗಮವಾಗಿದೆ. ಅದು ಅಂಗಕ್ಕೆ ಹೊಳೆದರೆ ಆ ಅಂಗವೆ ಲಿಂಗ. ಅದೇ ಸುಖಾನುಭಾವ. ಅಂಗದ ಮೇಲೆ ಲಿಂಗ ಧರಿಸಿದರೆ ಆ ಅಂಗ ಲಿಂಗಾಂಗವಾಗುವುದಿಲ್ಲ. ಬರೆದಿಟ್ಟ ಶಾಸ್ತ್ರ ದಿಕ್ಸೂಚಿಯೇ ಹೊರತು ಮತ್ತೇನೂ ಅಲ್ಲ. ಅಂಗ ಲಿಂಗಾಂಗವಾಗಬೇಕಾದರೆ ಅಂಗವನ್ನು ಆವರಿಸಿದ ಮನ ಅಂಗದಲ್ಲಿಯೇ ಸಂಗಮವಾದ ಲಿಂಗದತ್ತ ಪಯಣಿಸಬೇಕು. ಶಾಸ್ತ್ರದಿಂದ ಪ್ರಯಾಣಕ್ಕೆ ಬೇಕಾದ ಪ್ರಮುಖ ಮಾರ್ಗದ ಸುಳುಹು ಸಿಗಬಹುದು. ಅಥವಾ ಮನಕ್ಕೆ ಮಾರ್ಗದ ಸೂಚಿಯೇ ಒಂದು ಮನೋರಂಜನೆಯ ವಸ್ತುವಾಗಬಹುದು. ಆಗ ಮನ ಶಾಸ್ತ್ರವನ್ನು ವೇದಿಕೆಗೆ ಬಳಸಿ ರಂಜಿಸುತ್ತದೆ ಹಾಗೂ ರಂಜನೆಗೆ ಒಳಗಾಗುತ್ತದೆ.

ಆರುಲಿಂಗ, ಮೂರು ಲಿಂಗ, ಮೂವತ್ತಾರು ಲಿಂಗ, ಬೇರೆ ಇನ್ನೂರಾ ಹದಿನಾರು

ಲಿಂಗವೆಂದು ನಮ್ಮ ಶರಣರು ಸಾರಿ ಹೋಗಿದ್ದಾರೆ. ಆ ವಾಕ್ಯಗಳನ್ನೇ ಪಂಡಿತರು ಶಾಸ್ತ್ರಿಗಳು ಉಪನ್ಯಾಸಗಳ ಮೂಲಕ ಮಾರುತ್ತಿದ್ದಾರೆ. ಬೇರೆ ಇಪ್ಪತ್ತೊಂದು ಮಹಾಘನಲಿಂಗವನೂ ಆರೂ ಅರಿಯರು. ನಿಮ್ಮ ಶರಣರಲ್ಲದೆ ಎಂದು ಅಪ್ಪಣ್ಣ ಶರಣರು ಹೇಳಿದ್ದಾರೆ.

ಪಂಡಿತ ಶಾಸ್ತ್ರದಿಂದ ಜನರನ್ನು ರಂಜಿಸಬಲ್ಲ. ಅಂಗದಲ್ಲಿಯೇ ಸಂಗಮವಾದ ಲಿಂಗದತ್ತ ಪಯಣಿಸಿ ಆ ಲಿಂಗವೇ ತಾನಾಗಲಾರ. ಸ್ವಸುಖಿಯಾಗಲಾರ. ಶಾಸ್ತ್ರ ಮಾರಾಟ ಮಾಡಿ ಬಂದ ಅಲ್ಪ ಹಣದಿಂದ ಸ್ವಲ್ಪ ಸುಖಿಯಾಗುತ್ತಾನೆ. ಇದು ಬಾಹ್ಯ ಸುಖವೇ ಹೊರತು ಅಂತರಂಗದ ಸುಖವಲ್ಲ.

ಒಂದಂಗದಲ್ಲಿ ಆರು ಸ್ಥಲಗಳು. ಆರು ಸ್ಥಲಗಳಲ್ಲಿ ಆರು ಲಿಂಗಗಳು. ತ್ಯಾಗಾಂಗ, ಭೋಗಾಂಗ, ಯೋಗಾಂಗವೆಂದು ಮೂರು. ಈ ಮೂರೂ ಅಂಗಗಳಲ್ಲಿ ಮೂರು ಲಿಂಗಗಳು. ಹೀಗೆ ಒಟ್ಟು ಒಂಭತ್ತು ಲಿಂಗಗಳು. ಈ ಲಿಂಗಕ್ಕೆ ಅನುಗುಣವಾಗಿ ನವವಿಧ ಪೂಜೆಗಳು. ನವವಿಧ ಅಂಗ, ತನು, ಗಣ, ಸ್ಥಲ, ಹಸ್ತ, ಭಕ್ತಿ, ಶಕ್ತಿ, ಚಕ್ರ, ವರ್ಣ, ಅಧಿದೇವತೆ, ಲಿಂಗ, ಆತ್ಮ, ಸಾದಾಖ್ಯ ಪ್ರಣಮ, ಆಕೃತಿ, ದಿಕ್ಕು, ವೇದ, ಕಲೆ, ಮುಖ ಪದಾರ್ಥ, ಪ್ರಸಾದ, ನಾದ, ಲಕ್ಷಣ, ಸಂಜ್ಞೆಗಳು ಹೀಗೆ 9 X 24 = 216 ಲಿಂಗವೆಂದು ಸ್ಥಲವೆಂದು, ಸಕೀಲಗಳೆಂದು ಹೇಳುವರು. ಹಾಗೆಯೇ ಎಲ್ಲರೂ ಇದನ್ನೇ ಹೇಳುತ್ತಾರೆ. ಬೇರೆ ಇಪ್ಪತ್ತೊಂದು ಘನಲಿಂಗವನು ಅರಿಯರು.

ಕಾಯದಲ್ಲಿರುವ ಏಳು ಲಿಂಗಗಳನ್ನು, ಪ್ರಾಣಲ್ಲಿರುವ ಏಳು ಲಿಂಗಗಳನ್ನು ಮನದಲ್ಲಿರುವ ಏಳು ಲಿಂಗಗಳನ್ನು ಹೆಸರಿಸಿ ಇಪ್ಪತ್ತೊಂದು ಲಿಂಗಗಳನ್ನೂ ಹೇಳಿದ್ದಾರೆ. ಅಂಗದಲ್ಲಿ ಸಂಗಮವಾದ ಲಿಂಗದರ್ಶನ ಮನಕ್ಕೆ ಉಂಟಾಗಬೇಕಾದರೆ ಸೂಕ್ಷ್ಮಾತಿ ಸೂಕ್ಷ್ಮ ಅಜ್ಞಾನವನ್ನು ಬೇಧಿಸುತ್ತ ಚಕ್ರವ್ಯೂಹವನ್ನು ಭೇದಿಸುವ ಮೂಲಕ ಗುರಿ ತಲುಪಿ ಮನ ಘನ ಮನವಾಗಬೇಕಿದೆ.

ಶರಣರು ಶಾಸ್ತ್ರ ಬಲ್ಲವರು. ಆದರೆ ಶಾಸ್ತ್ರಕ್ಕೆ ಬೆಲೆ ಕೊಟ್ಟವರಲ್ಲ. ಏಕೆಂದರೆ ಸಕಲ ಶಾಸ್ತ್ರಗಳ ಹುಟ್ಟು ಅಂಗದ ಮೂಲಕವೇ ಆಗಿದೆ. ಅಂತಹ ಅಗಾಧವಾದ ಲಿಂಗಕ್ಕೆ ಅಂಗದಿಂದಲೇ ಹೊರಬಂದ ಪುಸ್ತಕಗಳು ಏನಾದರೂ ಹೇಳಬಹುದೇ? ಇದು ಶರಣರ ಪ್ರಶ್ನೆ. ಅಂಗದಲ್ಲಿ ಏಳುವ ಪ್ರಶ್ನೆಗಳಿಗೆ ಅಂಗದಿಂದಲೇ ಉತ್ತರ ಪಡೆಯಬೇಕು. ಮಹಾಲಿಂಗದ ದರ್ಶನವನ್ನು ಮನ ಅಂಗದ ಮೂಲಕವೇ ಮಾಡಿಕೊಳ್ಳಬೇಕು.

210

ಸುಪ್ರಭಾ ಕಳೆಯಿಂದ ಚಿತ್ಪ್ರಣಮ ಉದಯ
ಆ ಚಿತ್ಪ್ರಣಮದ ಮುಂದಣ ಚಿದ್ವಿವೇಕವೇ ಚಿದಬ್ಧಿ
ಆ ಚಿದಬ್ಧಿಯೇ ಪಾದೋದಕ, ಚಿದಮೃತವೇ ಪಾದೋದಕ.
ನಿಧಿ ನಿಧಾನವೇ ಪಾದೋದಕ, ಸುಧೆ ಸುರರ ತೃಪ್ತಿಯೇ ಪಾದೋದಕ
ಅದಕ್ಕೆ ದೃಷ್ಟ : ಶೋಷಣಂ ಪಾಪಪಂಕಸ್ಯದೀಪನಂ ಜ್ಞಾನ ತೇಜಸಃ।
ಗುರು ಪಾದೋದಕಂ ಪೀತ್ವಾ ಸಂಸಾರದ್ರುವ ನಾಶನಂ ॥
ಇಂತಪ್ಪ ಪಾದೋದಕವ ಕೊಂಡರೆ,
ಪಾಶಮುಕ್ತನಾಗಿ, ಪಶುಪತಿಯೆಂಬುಭಯವಳಿದು,
ನೀರು ಕ್ಷೀರ ಬೆರೆದಂತಿಪ್ಪ ನಮ್ಮ ಬಸವಪ್ರಿಯ ಕೂಡಲಸಂಗಮದೇವ.
ಮಾಂ ತ್ರಾಹಿ, ತ್ರಾಹಿ ಕರುಣಾಕರನೆ.

ಉದಯಾಸ್ತಗಳ ರೋಗ ಕಳೆದು ಉದಯವಾಗುವುದೇ ಜ್ಞಾನೋದಯ. ಅದು ಸತ್ಯವೂ ಹೌದು; ಅದು ಚಿತ್ತೂ ಹೌದು; ಆನಂದವೂ ಹೌದು; ಚಿತ್ಪ್ರಣಮವೂ ಹೌದು; ಚಿದ್ವಿವೇಕ ಚಿದಬ್ಧಿಯೂ ಹೌದು; ಚಿದಮೃತ ಪಾದೋದಕವೂ ಹೌದು. ಸರ್ವಾಂಗವೂ ಲಿಂಗವೇ ಆದ ನಿಧಿ ನಿಧಾನವೂ ಹೌದು.

ಭೂಮಿ ಅಗೆದು ಕಲ್ಲು ಪುಡಿ ಪುಡಿ ಮಾಡಿ ಕುಟ್ಟಿ ತೆಗೆದಾಗ ಹಳದಿ ಲೋಹ ಹೊರ ಬರುತ್ತದೆ. ಇದು ಭೂಮಿಯಲ್ಲಿ ಅಡಗಿದ ನಿಧಾನ; ಸಂಪತ್ತು. ಹಾಗೆಯೇ ಅಂಗವನ್ನು ಮಥನಿಸಿದಾಗ ಅರಿವೆಂಬ ಮಹಾಜ್ಞಾನವೆಂಬ ಸುಧೆ ಹೊರಬರುತ್ತದೆ. ಅದೇ ಪಾದೋದಕ.

ನೆತ್ತಿ ಜ್ಞಾನ ಪ್ರಧಾನವಾದುದು ಎಂದು ಪಂಡಿತವರ್ಗ ಒಪ್ಪಿಕೊಂಡಿದೆ; ಪಾದವನ್ನು ಸಂಪೂರ್ಣವಾಗಿ ಕಡೆಗಣಿಸಿದೆ. ಪಾದಕ್ಕೆ ಸರ್ವವೂ ಅಮೃತ. ನೆತ್ತಿ ಆಕಾಶ ನೋಡಿ ನಿರ್ಮಲವಾಗಲಿಲ್ಲ; ಸಮಾಧಾನಿಯೂ ಆಗಲಿಲ್ಲ. ಪಾದ ಭೂಮಿಯ ಮೇಲೆ ಚಲಿಸುತ್ತಾ ಭದ್ರವಾಗಿ ನಿಂತು ಸಕಲವನ್ನೂ ಆನಂದದಿಂದ ಸ್ಪರ್ಶಿಸುತ್ತದೆ. ಹೂ ತುಳಿದಾಗ ಹಿಗ್ಗುವುದಿಲ್ಲ; ಮಲ ತುಳಿದಾಗ ಕುಗ್ಗುವುದಿಲ್ಲ. ಇವರೆಡೂ ಪಾದದಲ್ಲಿ ಸಂಗ್ರಹವಾಗದೆ ಸದಾ ಪಾದ ನಿರ್ಮಲವಾಗಿರುತ್ತದೆ.

ಮುಖದಿಂದ ಬಂದ ಎಂಜಲನ್ನು ನೆತ್ತಿ ತಡೆದುಕೊಳ್ಳುವುದಿಲ್ಲ. ಎಂಜಲು ತಲೆಯ ಮೇಲೆ ಬಿದ್ದರೆ ತಲೆ ಹೋಗುವವರೆಗೂ ಕಾದಾಡುತ್ತದೆ. ಅದು ರಾಜನ ತಲೆಯಾದರೆ ರಾಜ್ಯಕ್ಕೆ ಮುಪ್ಪು. ಗೌಡನ ತಲೆಯಾದರೆ ಊರಿಗೇ ಮುಪ್ಪು. ಪ್ರಧಾನಿಯ ತಲೆಯಾದರೆ ದೇಶಕ್ಕೆ ಮುಪ್ಪು! ಕಾಲು ಹಾಗಲ್ಲ. ಎಂಜಲಾದರೂ ಒಂದೇ, ಮಲವಾದರೂ ಒಂದೇ, ಸಿಂಬಳ, ಸೆಗಣಿಯಾದರೂ ಒಂದೇ, ಹೂವಾದರೂ ಒಂದೇ ಎಲ್ಲವನ್ನೂ ತನ್ನ ಶ್ರೀಪಾದದಿಂದ ಮೆಟ್ಟುತ್ತದೆ. ಯಾವುದನ್ನೂ ತನ್ನ ಶ್ರೀಪಾದದಲ್ಲಿ ಇಟ್ಟುಕೊಳ್ಳುವುದಿಲ್ಲ. ಅಂಗ ಒಂದೇ ಆದರೂ ನೆತ್ತಿ ಪಾದ ಬೇರೆ ಬೇರೆ ಎಂದು ಮನ ಭಾವಿಸಿದೆ. ನಿರ್ಧರಿಸಿದೆ. ಇದೊಂದು ಸೋಜಿಗವೇ ಸರಿ. ಪಾದಕ್ಕೆ ಇಲ್ಲದ ನೋವು ನೆತ್ತಿಗೆ. ಅದಕ್ಕಾಗಿಯೇ ನೆತ್ತಿಯ ಅಹಂಕಾರ ಶಮನಗೊಳ್ಳಲು ಶರಣರ ಪಾದಕ್ಕೆ ನೆತ್ತಿ ಬೀಳಲೇ ಬೇಕು.

ಪಾದದಲ್ಲಿರುವ ನೆಮ್ಮದಿ, ನಿಷ್ಕಲ್ಮಷ ನೆತ್ತಿಗೆ ಹೊಳೆಯುವುದೇ ಇಲ್ಲ. ಶರಣ ಹಾಗಲ್ಲ. ಆತನ ನೆತ್ತಿ ಪಾದ ಎರಡೂ ಒಂದೇ. ಯಾರಿಗಾದರೂ ಹಣೆ ಮಣಿಯುತ್ತಾನೆ. ಶರಣೆನ್ನುತ್ತಾನೆ. ಸರ್ವಾಂಗವನ್ನೂ ತನ್ನ ಜ್ಞಾನ ಕಲೆಯಿಂದ ಒಂದು ಮಾಡಿಕೊಂಡಿದ್ದಾನೆ. ಅದು ಇರುವುದು ಕೂಡಾ ಒಂದೇ ಆಗಿದೆ.

ಒಮ್ಮೆ ಬುದ್ಧ ಮರದ ಕೆಳಗಡೆ ಧ್ಯಾನಾಸಕ್ತನಾಗಿ ಕುಳಿತಿದ್ದ. ಒಬ್ಬ ಮಹಿಳೆ ಬಂದು ಆತನನ್ನು ವಾಚಾಮಗೋಚರವಾಗಿ ಬಯ್ದಳು. ಬುದ್ಧ ನಗುನಗುತ್ತಾ ಕೇಳುತ್ತಿದ್ದ. ಆಕೆಯ ಬಯ್ಗಳು ಇನ್ನೂ ಜೋರಾದವು. ಆತ ಮತ್ತೆ ಹಸನ್ಮುಖನಾದ. ಮಹಿಳೆಗೆ ತಡೆದುಕೊಳ್ಳಲು ಆಗದೆ ಸಿಟ್ಟಿನಿಂದ ಕೆಂಡಾಮಂಡಲವಾಗಿ ಕ್ಯಾಕರಿಸಿ ಉಗಿದಳು. ಆ ಎಂಜಲಿನ ಹನಿಗಳಿಂದ ಬುದ್ಧ ಪುಳಕಿತಗೊಂಡ. ಶೀತಲ ಜಲ ತನ್ನ ಮುಖದ ಮೇಲೆ ಚೆಲ್ಲಿದಂತೆ ಬುದ್ಧನ ಮುಖ ಅರಳಿತು. ಮಹಿಳೆಗೆ ಕೂಡಲೆ ದಿಗಿಲಾಯಿತು. ಆಕೆಯ ಸಿಟ್ಟು ಸರ್ರನೆ ಇಳಿಯಿತು. ಹಣೆ ಬುದ್ಧನ ಪಾದಕ್ಕೆ ತಾಕಿಸಿ ತಪ್ಪಾಯಿತೆಂದು ಗೋಗರೆದು ಅತ್ತಳು. ಏನೂ ಆಗದಂತೆ ಬುದ್ಧ ಮಹಿಳೆಯ ಮೈದಡವಿ ಅಪ್ಪಿಕೊಂಡ.

ಮಹಿಳೆ ಸಿಟ್ಟಿಗೇಳಲು ಆಕೆಯ ಮಗ ತನ್ನ ಸೊಸೆ ಮತ್ತು ಮಕ್ಕಳನ್ನು ಬಿಟ್ಟು ಬುದ್ಧನ ಹಿಂದೆ ಹೋಗಿದ್ದ. ಸುಖಮಯವಾಗಿದ್ದ ಸಂಸಾರ ತಾಪತ್ರಯಕ್ಕೆ ಒಳಗಾಗಿತ್ತು. ಬುದ್ಧನಿಗೆ ಸಹನಶೀಲ ಶಕ್ತಿ, ಅಗಾಧವಾದ ಜ್ಞಾನ ಇದ್ದಕ್ಕಾಗಿ ಮಗ ಹೋಗಿದ್ದಾನೆ. ನಾನು ಕೂಡಾ ಮರುಳಾಗಿದ್ದೇನೆ ಎಂದು ಗೋಗರೆದು ಅಳುತ್ತಾ ಕ್ಷಮಿಸುವಂತೆ ಬುದ್ಧನ ಪಾದ ಹಿಡಿದು ಬೇಡಿಕೊಂಡಳು.

ಬುದ್ಧ ಸಿದ್ಧಾರ್ಥನಾಗಿದ್ದರೆ ಮಹಿಳೆಯ ರುಂಡ ನೆಲಕ್ಕುರುಳುತ್ತಿತ್ತು. ಸಿದ್ಧಾರ್ಥ ರಾಜ.

ಆತನಿಗೆ ಯಾರು ಉಗುಳಬೇಕು? ಉಗುಳಿದವರ ತಲೆ ಉಳಿಯಬಹುದೆಂದು ಯೋಚಿಸುವುದು ಕೂಡಾ ತಪ್ಪಾದೀತು. ಆದರೆ ಸಿದ್ಧಾರ್ಥ ಬುದ್ಧನಾಗಿ ಪರಿವರ್ತನೆಯಾಗಿದ್ದ; ಪಲ್ಲಟವಾಗಿದ್ದ. ತನುವಿನಲ್ಲಿಯೇ ತನ್ಮಯವಾದ ಸತ್ಯ ಬಳಸುವ ಸಮರ್ಥನಾಗಿದ್ದ. ಮಹಿಳೆಗೆ ಇತರರಿಗೆ ಅದು ಅಪಮಾನವಾಗಿತ್ತು. ಬುದ್ಧ ಅದೆಲ್ಲವನ್ನು ಸಹಜವಾಗಿ ಸ್ವೀಕರಿಸಿದ.

ಮಹಿಳೆ ಕೂಡಾ ಬುದ್ಧಳೇ. ಆದರೆ ಆಕೆಗೆ ತಾನು ಬುದ್ಧಳೆಂದು ತಿಳಿದಿಲ್ಲ. ಹೀಗಾಗಿ ಆ ಮಹಿಳೆ ಸಹಜಾವಸ್ಥೆಯಲ್ಲಿ ಇಲ್ಲ. ಆದರೂ ಮಹಿಳೆಯ ದೇಹ ಬುದ್ಧನ ಸಂಪತ್ತೇ ಆಗಿದೆ. ಬುದ್ಧ ಸಂಗಮ ವಾದ ಸಂಪತ್ತೇ ಆಗಿದೆ. ಆ ಸಂಪತ್ತಿನಿಂದ ಹೊರ ಬಂದ ಎಲ್ಲಾ ಎಂಜಲು ಬುದ್ಧ ವಿಸರ್ಜಿಸಿದ ಪ್ರಸಾದವೇ ಆಗಿದೆ. ಬುದ್ಧನಿಗೆ ಸಕಲ ದೇಹಗಳೂ ಬುದ್ಧ ದೇಹಗಳಾಗಿಯೇ ಕಂಡರೆ; ಸಾಮಾನ್ಯರು ದೇಹವನ್ನು ಗುರುತಿಸುವ ಮೂಲಕ ಗೌರವಾದರಗಳು ಸಲ್ಲುತ್ತವೆ. ಜ್ಞಾನಿಗಳು ಹಾಗಲ್ಲ. ಸಕಲ ತನುಗಳು ಜ್ಞಾನಿ ತನುಗಳೇ ಆಗಿವೆ. ತನುವಿಗೆ ಜ್ಞಾನಿ ಎಂದು ತಿಳಿದಿಲ್ಲ ಅಷ್ಟೇ. ಇಂತಹ ಜ್ಞಾನವನ್ನು ತನು ಆ ತನುವಿನಿಂದಲೇ ಪಡೆಯಬೇಕು. ಅದು ಪಾದೋದಕ. ಸುಧೆ. ಅದು ತನುವಿನ ನಿಧಾನ!

211

ಸೋಹಂ ಹೊಕ್ಕು ದಾಸೋಹಂ ಎಂಬ ಅಂಜನವ ಹಚ್ಚಿ
ಮುಂದೆ ನೋಡಲಾಗಿ ಅರುಹ ಕಂಡೆ,
ಆ ಅರುಹಿಂದ ಆಚಾರವ ಕಂಡೆ, ಆಚಾರದಿಂದ ಗುರುವ ಕಂಡೆ,
ಗುರುವಿಂದ ಲಿಂಗವ ಕಂಡೆ, ಲಿಂಗದಿಂದ ಜಂಗಮವ ಕಂಡೆ,
ಜಂಗಮದಿಂದ ಪ್ರಸಾದವ ಕಂಡೆ, ಪ್ರಸಾದದಿಂದ ಪರವ ಕಂಡೆ,
ಪರದೊಳಗೆ ವಿಪರೀತ ಸ್ವರೂಪವ ಕಂಡೆ,
ವಿಪರೀತ ಸ್ವರೂಪದೊಳಗೆ ನಿರ್ಲೇಪವಾದ,
ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ

ಶರಣರು ಪಡೆದ ಸುಖ ಸರ್ವರಿಗೂ ದಕ್ಕಲಿ ಎಂದು ನಾನಾ ಸೂತ್ರಗಳ ಮೂಲಕ ಮನ ಘನವನ್ನು ಪ್ರವೇಶ ಮಾಡುವ ವಿಧಾನವನ್ನು ಸರ್ವ ಓದುಗರೊಂದಿಗೆ ಹಂಚಿಕೊಂಡಿದ್ದಾರೆ. ಸ್ವರೂಪ ಜ್ಞಾನಕ್ಕೆ ಹೋಗುವ ಸೂತ್ರಗಳನ್ನು ಶರಣರು ಪ್ರಸಾದದಂತೆ ಅಕ್ಷರಗಳ ಮೂಲಕ ವಿತರಿಸಿದ್ದಾರೆ. ಆ ಸೂತ್ರಗಳೆಲ್ಲ ಸ್ವರ್ಗಕ್ಕೆ ಹೋಗುವ ಏಣಿಗಳು. ಅದನ್ನು ಹತ್ತಿಕೊಂಡು ಹೋದವನು ಜಾಣ. ಏಣಿಯನ್ನು ಹೊತ್ತುಕೊಂಡು ಹೋದವನು ಕೋಣ. ಕ್ರಿಷ್ಣ ಕ್ರಿಸ್ತ ಬುದ್ಧ ಮಹಾವೀರ ಪೈಗಂಬರ ಶರಣರು ದಾಸವರೇಣ್ಯರು ಸ್ವರ್ಗಕ್ಕೆ ಹೋಗುವ ಸೂತ್ರ ಪ್ರಧಾನವಾದ ಗ್ರಂಥರೂಪದ ಏಣಿಗಳನ್ನೇ ಬಿಟ್ಟು ಹೋಗಿದ್ದಾರೆ. ಆದರೆ ಜನ ಹತ್ತಿಕೊಂಡು ಅವರಂತೆ ಮೇಲೆ ಹೋಗದೆ ಪೂಜಿಸಿ ಹಿಂದುಗಳಾದರು. ಪ್ರಾರ್ಥಿಸಿ ಕ್ರಿಶ್ಚಿನ್ ಮುಸಲ್ಮಾನರಾದರು, ಜೈನ, ವೀರಶೈವ, ಬೌದ್ಧರಾದರು. ಅವರಂತೆ ಜ್ಞಾನಿಗಳಾಗಲಿಲ್ಲ.

ಸೋಹಂ ಹೊಕ್ಕು ದಾಸೋಹಂ ಎಂಬ ಅಂಜನವ ಹಚ್ಚಿಕೊಂಡು ಸ್ವರ್ಗ ನೋಡಲಿಲ್ಲ. ಅಂದರೆ ಅವನು ನಾನೆ. ನನ್ನೊಳಗೆ ಅವನಿದ್ದಾನೆ. ನಾನಿಲ್ಲದೆ ಅವನಿಲ್ಲ. ಅವನಿಲ್ಲದೆ ನಾನಿಲ್ಲ. ಅವನಿಂದಲೇ ನಾನು. ಮಹಾಜ್ಞಾನವೆಂಬ ಅವನೊಳು ನಾನು ಹೊಕ್ಕು ಅವನೇ ನಾನಾದೆ. ಅವನನ್ನು

ಕಂಡೆ. ಅವನು ಬೇರಲ್ಲ. ನನ್ನೊಳಗಿದ್ದ ಮಹಾಜ್ಞಾನವೇ ಅವನು. ಅವನೆಂದರೆ ನನ್ನೊಳಗಿದ್ದ ಅರಿವು ಅವನು. ಅವನಿಂದಲೇ ಆಚಾರವನು ಕಂಡೆ. ಅದು ಅಗೋಚರದ ಆಚಾರ. ಆ ಆಚಾರವೇ ಗುರು. ಆ ಗುರುವೇ ಲಿಂಗ. ಆ ಲಿಂಗವೇ ಜಂಗಮ. ಆ ಜಂಗಮದಿಂದಲೇ ಸಕಲ ಅಜ್ಞಾನ ನಾಷ. ಸಕಲ ಅಜ್ಞಾನವನ್ನು ನಾಷ. ಸಕಲ ಅಜ್ಞಾನವನ್ನು ಪ್ರಸಾದ ಮಾಡಿಕೊಳ್ಳುವ ಪರಮ ಪುರುಷನಾತ. ಆತ ಪರವೂ ಹೌದು; ವಿಪರೀತ ಸ್ವರೂಪವೂ ಹೌದು. ಆ ಸ್ವರೂಪ ನಿರ್ಲೇಪವೂ ಹೌದು.

ಇದನ್ನು ನಾನು ಎನ್ನುವ ಅಹಂಕಾರಿ ಮನ ಅವನು ಎನ್ನುವ ನಿರಹಂಕಾರಿ ತತ್ವವನ್ನು ಕಂಡು ಆ ತತ್ವವೇ ತಾನಾಗಬೇಕು. ಇದು ತನ್ನದೇ ಆದ ಸಂಪತ್ತಾದರೂ ಕೂಡ ತನಗೆ ಒಲಿಯಬೇಕಾದರೆ ಬಲು ಜಡ. ಅನುವಿನಿಂದ ನೋಡಿ ನೋಡಿ ತಿಳಿಯಬೇಕು. ತಾನೇ ಒಳ ಹೊಕ್ಕು ಅವನಾಗಬೇಕು.

212

ಸ್ಥಲವಿಟ್ಟು ನಡೆಯಬೇಕೆಂಬರು. ಸ್ಥಲವಿಟ್ಟು ನುಡಿಯಬೇಕೆಂಬರು
ಸ್ಥಲದ ನೆಲೆಯನಾರೂ ಅರಿಯರು.
ಕಾಯಸ್ಥಲ, ಕರಸ್ಥಲ, ಭಾವಸ್ಥಲವನರಿದು,
ಆ ಕಾಯಸ್ಥಲ ಕರಸ್ಥಲ ಭಾವಸ್ಥಲದಲ್ಲಿ ಕೂಡಿ ನಿಲಿಸುವುದೇ ಸ್ಥಲ.
ಇದನರಿಯದೆ, ಹಿಂದಕ್ಕೆ ನುಡಿದವರ ಮಾತು ಕಲಿತುಕೊಂಡು,
ಈಗ ನುಡಿವವರ ಮಾತ ಮೆಚ್ಚುವರೆ ನಮ್ಮ ಶರಣರು?
ಅದಂತಿರಲಿ. ಇನ್ನು ನೇಮವಾವುದು ಎಂದರೆ,
ಗುರುಲಿಂಗ ಜಂಗಮದ ಪಾದೋದಕ ಪ್ರಸಾದವನರಿದು, ಅಂಗೀಕರಿಸಿ,
ತನ್ನ ತನುವನೆ ಪ್ರಸಾದವ ಮಾಡುವದೀಗ ನೆಲೆ,
ಈ ಸ್ಥಲದ ನೆಲೆಯ ಬಲ್ಲವರಿಗೆ ನಮೋ ನಮೋ ಎಂಬೆ.
ಇದನರಿಯದೆ ಬರಿಯ ನುಡಿ ನುಡಿವವರ ಕಂಡರೆ ಛೀ ಎಂಬೆನು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಸ್ಥಲದ ನೆಲೆಯನು ಅರಿಯದಲೆ ಸ್ಥಲ ಹಿಡಿದು ನುಡಿಯುವುದು ಸುಲಭ. ಭಗವದ್ಗೀತೆ, ಖುರಾನ್, ಬೈಬಲ್‌ಗಳನ್ನು ಹಿಡಿದು ನುಡಿಯುವುದು ಸುಲಭ. ಅವುಗಳಿಗೆ ಅಂದರೆ ಸಕಲ ಶಾಸ್ತ್ರಕ್ಕೆ ಜನ್ಮ ಕೊಟ್ಟ ಕಾಯವಿಡಿದು ಅದರ ಸ್ಥಲವಿಡಿದು ಮಾತನಾಡುವುದು ಜಟಿಲ.

ಕಾಯದಲ್ಲಿ ಕರಸ್ಥಲವಿದೆ, ಭಾವಸ್ಥಲವೂ ಇದೆ. ಕಾಯ ಕಾಣುತ್ತದೆ. ಕಾಯದಲ್ಲಿ ಸಂಗಮವಾದ ಸ್ಥಲ ಕಾಣುವುದಿಲ್ಲ. ಹಾಗೆಯೇ ಕಾಯವನ್ನು ಆವರಿಸಿದ ಭಾವವೂ ಕಾಣುವುದಿಲ್ಲ. ಇದನ್ನು ಸ್ಥೂಲಕಾಯ, ಜ್ಞಾನಕಾಯ, ಮನೋ ಕಾಯವೆಂದೂ ಕರೆಯಬಹುದು.

ಸ್ಥೂಲ ಕಾಯವನ್ನು ಆವರಿಸಿದ ಮನೋಕಾಯ ಹಿಡಿದು ಜ್ಞಾನ ಕಾಯಕ್ಕೆ ಪ್ರವೇಶ ಮಾಡುವ ಶಾಸ್ತ್ರ ಸಕಲ ಗ್ರಂಥಗಳಲ್ಲಿ ಸ್ಥಲ ಕಟ್ಟುಗಳೊಂದಿಗೆ ಪರಿಚಯಿಸಲ್ಪಟ್ಟಿದೆ. ಅಂಥ ಶಾಸ್ತ್ರ ಹಿಡಿದು ಮನೋಕಾಯ ಸ್ಥೂಲ ಕಾಯದೊಂದಿದೆ ಮಾತನಾಡಬಹುದು. ಆದರೆ ಜ್ಞಾನಕಾಯಕ್ಕೆ ಪ್ರವೇಶ ಮಾಡುವುದು ಅದರೊಂದಿಗೆ ಮಾತನಾಡುವುದು ಅಷ್ಟೊಂದು ಸುಲಭದ ಕೆಲಸವಲ್ಲ ಎಂದು ಅಪ್ಪಣ್ಣ ಶರಣರು ಈ ವಚನದಲ್ಲಿ ನುಡಿದಿದ್ದಾರೆ.

ಹಿಂದೆ ನುಡಿದ ಹಿರಿಯರ ಮಾತುಗಳನ್ನು ಕಲಿತು ನುಡಿಯಬಹುದು. ಆದರೆ ಶರಣರು ಮೆಚ್ಚುವುದಿಲ್ಲ. ತಂತ್ರಜ್ಞಾನಿ ಅಲ್ಲವೆಂದು ನೀವಾಳಿಸಿ ಒಗೆಯುತ್ತಾರೆ. ಮನೋಕಾಯ ಹಿಡಿದು ಜ್ಞಾನಕಾಯಕ್ಕೆ ಹೋಗುವುದೇ ನೇಮ.

ಗುರುಲಿಂಗ ಜಂಗಮದ ಪಾದೋದಕ ಪ್ರಸಾದ ಹಿಡಿದು ಅಂಗೀಕರಿಸಿ, ತನ್ನ ತನುವನೇ ಪ್ರಸಾದ ಮಾಡುವುದೀಗ ನೆಲೆ. ಇದು ಅತ್ಯಂತ ಕಠಿಣ. ಭಾವಸ್ಥಲಕ್ಕೆ ಸಾಧ್ಯವಲ್ಲದ ಮಾತು. ಅಂದರೆ ಮನೋಕಾಯ ಜ್ಞಾನಕಾಯಕ್ಕೆ ಭಕ್ತಿ ಮಾಡದ ವಿನಃ ಗುರುವಿನ ದರ್ಶನವಾಗದು. ಲಿಂಗದ ದರ್ಶನವಾಗದು. ಜಂಗಮದ ದರ್ಶನವಾಗದು. ಪಾದೋದಕ ಪ್ರಸಾದ ಮನೋಕಾಯಕ್ಕೆ ದೊರೆಯದು.

ಕಾಯ ಪ್ರಸಾದ ಕಾಯವಾಗಬೇಕಾದರೆ ನೋಡಿದ ದೃಶ್ಯ , ಕೇಳಿದ ಶಬ್ದ, ಸ್ಪರ್ಶಿಸಿದ ಸ್ಪರ್ಶನೆ, ರುಚಿಸಿದ ವಸ್ತು , ವಾಸಿಸಿದ ಗಂಧ ಕಾಯಕ್ಕೆ ಪ್ರಸಾದವಾಗಬೇಕು. ಇದನ್ನು ನುಡಿದು ಹೇಳಬಹುದು. ಆದರೆ ಕಾಯದಲ್ಲಿ ಆ ಸುಖ ಗಮನಕ್ಕೆ ಬರಬೇಕಲ್ಲ. ಅಂದಾಗ ಮಾತ್ರ ತನುವೇ ಪ್ರಸಾದ ತನುವಾಗುವುದು. ಆ ಸ್ಥಲದ ನೆಲೆಯನು ಅದರ ತಂತ್ರ ಜ್ಞಾನವನು ಬಲ್ಲವನು ಮಾತ್ರ ಬಲ್ಲ. ಅಂತಹ ಶರಣನಿಗೆ ನಮೋ ನಮೋ ಎಂದು ಬದುಕುವೆನು. ಇದನು ಅರಿಯದೆ ನುಡಿದವರ ಛೀ ಎಂಬೆ ಎಂದಿದ್ದಾರೆ. ಅಪ್ಪಣ್ಣ ಶರಣರು.

213

ಸ್ಥಲವೆಂದರೆ ಒಂದು, ನೆಲೆಯೆಂದರೆ ಎರಡು,
ಕಲೆಯೆಂದರೆ ಮೂರು, ಕರಣ ಎಂದರೆ ನಾಲ್ಕು,
ಕಾಯವೆಂದರೆ ಐದು, ಕಾಮವೆಂದರೆ ಆರು,
ಸೀಮೆಯೆಂದರೆ ಏಳು, ನೇಮವೆಂದರೆ ಎಂಟು,
ತಾಮಸವೆಂದರೆ ಒಂಬತ್ತು , ಹರಿಯೆಂದರೆ ಹತ್ತು ,
ಹರನೆಂದರೆ ಇನ್ನೊಂದು.
ಇದೇ ದಶವಿಧ ಪಾದೋದಕ, ಇದೇ ಏಕಾದಶ ಪ್ರಸಾದ.
ಇದೇ ಅರ್ಪಿತ, ಇದೇ ಅವಧಾನ, ಇದೇ ಸುಯಿದಾನ
ಇದೇ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದ
ಇದೇ ನಮ್ಮ ಬಸವಪ್ರಿಯ
ಕೂಡಲ ಸಂಗಮ ಆಡುವ ಹೊಲಸ್ಥಲದ ನೆಲೆ.

ಅಂಗದಲ್ಲಿಯೇ ಸಂಗಮವಾದ ಕೂಡಲ ಸಂಗಮದೇವ ಅಂಗವನ್ನೇ ಆಲಯ ಮಾಡಿಕೊಂಡು ಅಂಗದಲ್ಲಿಯೇ ಇದ್ದಾನೆ. ಅಂಗವನ್ನೇ ಆಡಂಬುವ ಹೊಲ ಮಾಡಿಕೊಂಡು ಅಲ್ಲಿಯೇ ನೆಲೆಸಿದ್ದಾನೆ.

ಕಾಯ ಒಂದು, ಅದರ ಸ್ಥಲವೂ ಒಂದೇ. ಆ ಸ್ಥಲದ ನೆಲೆಯನು ಅರಿಯುವುದೇ ಎರಡು. ಅದರ ಕಲೆಯೇ ಮೂರು. ಅದರ ಕರಣಗಳೇ ನಾಲ್ಕು. ಕರಣಂಗಳುಳ್ಳ ಕಾಯವೇ ಐದು. ಅದರಲ್ಲಿರುವ ಕಾಮವೇ ಆರು. ಅದರ ಸೀಮೆಯೇ ಏಳು. ಅರಿಯುವ ನೇಮವೇ ಎಂಟು, ಕಾಯದ ತಾಮಸವೇ ಒಂಬತ್ತು . ಕಾಯವೇ ಹರಿ; ಹರಿಯೆಂದರೆ ಹತ್ತು , ಹರನೆಂದರೆ

ಇನ್ನೊಂದು. ಅದೇ ಕಾರಣ ಕಾಯ; ಕಾಣದ ಕಾಯ.

ಇದೇ ದಶವಿಧ ಪಾದೋದಕ, ಇದೇ ಏಕಾದಶ ಪ್ರಸಾದ. ಇದೇ ಅರ್ಪಿತ, ಇದೇ ಅವಧಾನ, ಇದೇ ಸುಯದಾನ, ಇದೇ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದ. ಈ ಕಾಯವೇ ಕೂಡಲ ಸಂಗಮ ದೇವನ ಆಡುಂಬೊಲ. ಹೊಲಸ್ಥಲದ ನೆಲೆಯೂ ಹೌದು.

214

ಹಂಚು ಕಂಥೆ, ಅತೀತ, ವಿರಕ್ತರು, ಸ್ಥಲದವರು ಎಂದು ನುಡಿದಾಡುವರು.
ಜಂಗಮ ಒಂದೆ, ಲಿಂಗ ಒಂದೆ, ಗುರು ಒಂದೆ.
ಎನ್ನ ಪರಮಾರಾಧ್ಯರು ಬಸವಣ್ಣ, ತನ್ನ ಲೀಲೆಯಿಂದ
ಒಂದ ಮೂರು ಮಾಡಿ ತೋರಿದ, ಮೂರನೊಂದು ಮಾಡಿ ತೋರಿದ.
ಆ ಒಂದು ನಾಮ ರೂಪಿಗಿಲ್ಲ
ಇದರಂದವ ಬಲ್ಲ ಶರಣರು ತಿಳಿದು ನೋಡಿ.
ಇದನರಿಯದೆ ಸ್ಥಲನೆಲೆಯೆಂಟೆಂದು ಹೊಲಬುಗಾಣದೆ ಹೋರಾಡಿ,
ಭವಭಾರಿಗಳಾಗಬೇಡಾ!
ಭವವಿರಹಿತ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಂಗೆ,
ಬಯಕೆ ಸವೆದು, ಭಾವಬಯಲಾಗಿ.

ಕಂಥೆಯವರು, ಅತೀತರು, ವಿಕ್ತರು, ಸ್ಥಲದವರು ಎಂದು ಸಂಪ್ರದಾಯ ಹಿಡಿದು ನುಡಿಯುವುದುಂಟು, ಸ್ಥಲ ನೆಲೆಯೆಂಟೆಂದು ಹೊಲಬುಗಾಣದೆ ಭವಭಾರಿಗಳಾಗಬೇಡಿ. ಜನನ ಮರಣಗಳನ್ನು ಗೆದ್ದ ಚೆನ್ನಬಸವಣ್ಣನ ಸೂತ್ರ ಹಿಡಿದು ಬಯಲಾಗಿ.

ಒಂದಂಗದಲ್ಲಿಯೇ ಜಂಗಮನಿದ್ದಾನೆ, ಲಿಂಗಯ್ಯನೂ ಇದ್ದಾನೆ, ಗುರುವೂ ಇದ್ದಾನೆ. ಒಂದನ್ನೇ ಮೂರು ಮಾಡಿ ತೋರಿದ. ಆ ಮೂರನ್ನೇ ಒಂದು ಮಾಡಿ ತೋರಿದ. ಆ ಒಂದಕ್ಕೆ ನಾಮವಿಲ್ಲ. ರೂಪವಿಲ್ಲ. ಸಿದ್ಧಾರ್ಥನಿಗೆ, ವರ್ಧಮಾನನಿಗೆ ನಾಮವಿತ್ತು; ರೂಪವಿತ್ತು. ಬುದ್ಧನಿಗೆ ಮಹಾವೀರನಿಗೆ ನಾಮವಿಲ್ಲ; ರೂಪವಿಲ್ಲ.

ಸಿದ್ಧಾರ್ಥನೂ ಇದ್ದ, ರಾಜನೂ ಇದ್ದ, ಬುದ್ಧನೂ ಇದ್ದ. ಸಿದ್ಧಾರ್ಥನಿಗೆ ತಾನು ಸಿದ್ಧಾರ್ಥನೆಂದು, ರಾಜನೆಂದು ಪರಿಚಯವಿತ್ತು. ತಾನು ಬುದ್ಧನೆಂದು ಪರಿಚಯವಿರಲಿಲ್ಲ. ಸಿದ್ಧಾರ್ಥನಿಗೆ ಜನನ ಮರಣಗಳು ಕಾಡಿದವು. ರಾಜನೆಂಬ ಅಹಂಕಾರವೂ ಕಾಡಿತು. ಹೆಂಡತಿ ಮಕ್ಕಳು ತಂದೆ ತಾಯಿ ಬಂಧುಗಳೂ ಕಾಡಿದರು.

ಅಂಗಗಳೆಲ್ಲ ಒಂದೇ; ಪಾತ್ರ ಬೇರೆ ಬೇರೆ. ಆದರೂ ಅವೆಲ್ಲ ಪಾತ್ರವೆಂದು ಪಾತ್ರದಲ್ಲಿದ್ದ ಅಂಗಕ್ಕೆ ಗೋಚರಿಸುತ್ತಿಲ್ಲ. ಪಾತ್ರ ಕಳಚಿಕೊಳ್ಳುವ ಬಗೆ ಹೇಗೆ? ಎಂದು ಚಿಂತಿಸುವಾಗಲೇ ಸಿದ್ಧಾರ್ಥ ಮತ್ತು ರಾಜನ ಪಾತ್ರಗಳೆರಡೂ ಕಳಚಿ ಬಿದ್ದವು. ಬುದ್ಧನೊಬ್ಬನೇ ಉಳಿದ. ಅಂಗ ಬುದ್ಧಾಂಗವಾಯಿತು; ಸಿದ್ಧಾಂಗವಾಯಿತು; ಸಹಜಾಂಗವಾಯಿತು. ಅಂಗದಲ್ಲಿದ್ದ ಸಾವು ನೋವುಗಳೆಲ್ಲ ಉದುರಿಬಿದ್ದವು. ಲಿಂಗಾಂಗ ಒಂದೇ ಉಳಿಯಿತು. ಜ್ಞಾನಾಂಗ ಸ್ಥೂಲಾಂಗ ಮನೋ ಅಂಗ ಲಿಂಗಾಂಗವಾಯಿತು.

ಒಂದ ಮೂರು ಮಾಡಿ ತೋರಿದ, ಮೂರನು ಒಂದು ಮಾಡಿ ತೋರಿದ. ನಾಮ ರೂಪುಗಳು ಉದುರಿಬಿದ್ದವು. ಕಾಯ ಅಕಾಯವಾಯಿತು. ಬುದ್ಧನ ಉಪದೇಶ ಕೇಳಿದ ಅಂಗಗಳಿಗೆಲ್ಲ ಅಂದರೆ ಅನುಯಾಯಿಗಳಿಗೆಲ್ಲ ಆನಂದವಾಯಿತು. ಮನಕ್ಕೆ ಅದೊಂದು ಜ್ಞಾನದ ನಶೆ. ಬುದ್ಧನಂತೆ ವೇಷ ಹಾಕಿದರು. ಬುದ್ಧನ ಹಿಂದೆ ಓಡಾಡಿದರು.ಬುದ್ಧರಾಗಲಿಲ್ಲ. ವೇಷದಾರಿಗಳೆಲ್ಲ ಬುದ್ಧರಲ್ಲ. ಮನ ವೇಷ ಧರಿಸಿ ಬುದ್ಧನಾಗುತ್ತದೆ. ವೇಷ ಕಳಚುವುದಿಲ್ಲ.

ಅಂಗುಲಿಮಾಲನದೂ ಒಂದು ಪಾತ್ರವೇ.ಬುದ್ಧ ಅಂಗುಲಿ ಮಾಲನೊಂದಿಗೆ ಮಾತನಾಡಲಿಲ್ಲ; ಬುದ್ಧನೊಂದಿಗೆ ಮಾತನಾಡಿದ ಬುದ್ಧ ಪ್ರಕಟವಾದ; ಅಂಗುಲಿ ಮಾಲನ ವೇಷ; ಆತನ ನಾಮಗಳೆರಡೂ ಕಳಚಿ ಬಿದ್ದವು. ಇದಕ್ಕೆ ಅಂಗುಲಿ ಮಾಲನೇ ಸಹಕರಿಸಿದ. ಬುದ್ಧನೊಂದಿಗೆ ಬೆರೆತು ಅಂಗುಲಿಮಾಲ ಇಲ್ಲವಾದ ಬುದ್ಧ ಮಾತ್ರ ಉಳಿದ. ಮೂರನೊಂದು ಮಾಡಿ ತೋರಿದ.

215

ಹಗಲು ಗೂಗೆಗೆ ಇರುಳಾಗಿಪ್ಪುದು, ಇರುಳು ಕಪಟಿಗೆ ಹಗಲಾಗಿಪ್ಪುದು
ಇದು ಜಗದಾಟ. ಈ ಹಗಲು ಇರುಳೆಂಬ ಉಭಯವನಳಿದು,
ನಿಗಮಂಗಳಿಗೆ ನಿಲುಕದ, ಸಗುಣ ನಿರ್ಗುಣ ಅಗಮ್ಯ ಅಗೋಚರವಪ್ಪ
ಮಹಾಘನ ಗುರುವಿನ ನೆಲೆಯ ನಿಮ್ಮ ಶರಣರು ಬಲ್ಲರಲ್ಲದೆ,
ಮರ್ತ್ಯದ ಮರಣ ಬಾಧೆಗೆ ಒಳಗಾಗುವ ಮನುಜರೆತ್ತ ಬಲ್ಲರೋ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಅಂಗಕ್ಕೆ ಎರಡು ಮುಖಗಳು. ಒಂದು ಇರುಳಿನ ಮುಖ ಮತ್ತೊಂದು ಹಗಲಿನ ಮುಖ. ಹಗಲು ಮನವೆಂಬ ಕಪಟಿ ಎಚ್ಚರವಾಗಿರುತ್ತಾನೆ. ರಾತ್ರಿ ಮಲಗಿರುತ್ತಾನೆ. ಮಲಗಿದಾಗ ಅಂಗ ಲಿಂಗಾಂಗವಾಗಿರುತ್ತದೆ. ಅದು ಹೆಣ್ಣು ಗಂಡು, ಶ್ರೀಮಂತ ಬಡವ, ರಾಜ ಕಾಲಾಳು ಎನ್ನುವ ಅಜ್ಞಾನ ಸುಳಿಯದೆ ಸರ್ವಾಂಗವೂ ಲಿಂಗಮಯವಾಗಿ ಆನಂದದಿಂದ ನಿದ್ರಿಸುತ್ತದೆ. ಹಗಲು ಮನವೆಂಬ ಕಪಟಿ ಎಚ್ಚರವಾಗಿರುವುದರಿಂದ ತನು ಹೆಣ್ಣಾಗಿ ಗಂಡನ್ನು ನೋಡುತ್ತದೆ; ಗಂಡಾಗಿ ಹೆಣ್ಣನ್ನು ನೋಡಿ ಕಾಮದ ಹಾದರ ಮಾಡುತ್ತದೆ. ತನು ತನುವಿನೊಂದಿಗೆ ಹಾದರ ಮಾಡುವುದು ತನುವಿನ ದೋಷವೆಂದು ತನುವಿಗೆ ಗೊತ್ತಾಗುವುದಿಲ್ಲ.

ಹಗಲು ಇರುಳೆಂಬ ಉಭಯವನು ಅಳಿಯುವ ಶಕ್ತಿ ಅಂಗದೊಳಗೆ ಸಂಗಮವಾಗಿದ್ದರೂ ಅಂಗಕ್ಕೆ ಗೊತ್ತಾಗುವುದೇ ಇಲ್ಲ. ಇರುಳಿನ ಮುಖದೊಳಗೊಂದು ನವರತ್ನದ ಖಂಡಿತ ಹಾರವಡಗಿತ್ತು . ಹಗಲಿನ ಮುಖದೊಳಗೊಂದು ನವಚಿತ್ರಪತ್ರದ ವೃಕ್ಷವಡಗಿತ್ತು . ರತ್ನದ ಹಾರವ ವೃಕ್ಷಕ್ಕಾಹಾರವನಿಕ್ಕಿದಡೆ, ಗುಹೇಶ್ವರ ಲಿಂಗಕ್ಕೆ ಸುಖವಾಯಿತ್ತು . ಎಂದು ಪ್ರಭುಗಳು ಹೇಳುತ್ತಾರೆ.

ಹಗಲಾದರೇನು ಇರುಳಾದರೇನು ಅಂಗ ನವರತ್ನದ ಖಂಡಿತ ಹಾರವೇ ಆಗಿದೆ. ಹಗಲಿನ ಮುಖದಲ್ಲಿ ವಸ್ತುಗಳು ತಿರುವು ಮರುವಾಗಿ ಕಾಣುತ್ತವೆ. ಲೋಹ ಚಿನ್ನವೆಂದು ಹೆಸರು ಪಡೆದು ಚಿತ್ತಾರದ ಪತ್ರವಾಗಿ ಅಂಗದಲ್ಲಿ ಅಡಗುತ್ತದೆ. ಕಾಗದ ಕರೆನ್ಸಿಯಾಗುತ್ತದೆ. ಭೂಮಿ ಹೇಮ ಕಾಮಿನಿಯಾಗಿ ಕಾಯವನ್ನು ವಿಧಿಯಾಗಿ ಕಾಡುತ್ತವೆ. ಅಂಗ ಮಂಗವಾಗಿ ಕುಣಿಯುತ್ತದೆ. ರತ್ನದ ಹಾರವನು ಜ್ಞಾನವೃಕ್ಷಕ್ಕೆ ಹಾರವನಿಕ್ಕಿದಡೆ ಸರ್ವಾಂಗಕ್ಕೂ ಸುಖವಾಯಿತ್ತೂ .

ಹಗಲಿನಲ್ಲಿ ಮಂಗನಂತೆ ಕುಣಿದ ಅಂಗ ಇರುಳಿನಲ್ಲಿ ಜ್ಞಾನಿಯಂತೆ ಮಲಗಿ ಸುಖವಾಗಿ ನಿದ್ರಿಸುತ್ತದೆ. ಹಗಲಿನ ಗಾಯಗಳು ಇರುಳಿನಲ್ಲಿ ಇಲ್ಲ. ಮತ್ತೆ ಹಗಲಾದರೆ ಗಾಯ; ಇರುಳಾದರೆ ಸುಖ. ಇರುಳು ಕಂಡ ಬಾವಿಯಲ್ಲಿ ಹಗಲು ಬೀಳುವುದೆಂದರೇನು? ಇದು ಅಂಗಕ್ಕೆ ರೂಢಿ. ಅಂಗಕ್ಕೆ ಅಂಗದಲ್ಲಿರುವ ಲಿಂಗ ಪರಿಚಯವಾದರೆ ಸಾಕು. ಅಂಗ ಲಿಂಗವೇ ಆಗುತ್ತದೆ. ಅಜ್ಞಾನದ ಹಗಲಿನ ಅಂಗವನ್ನು ಲಿಂಗ ನುಂಗಿ ಸರ್ವಾಂಗವೂ ಜ್ಞಾನಾಂಗವಾಗುತ್ತದೆ.

ದುರ್ಗುಣ ಕಳೆದುಕೊಂಡು ಸಗುಣಿಯಾಗುತ್ತದೆ, ನಿರ್ಗುಣಿಯಾಗುತ್ತದೆ. ಗಮನಕ್ಕೆ ನಿಲುಕದ ಅಗಮ್ಯವಾಗುತ್ತದೆ. ಗೋಚರಕ್ಕೆ ನಿಲುಕದ ಅಗೋಚರವಾಗುತ್ತದೆ. ಮಹಾಘನ ಅರಿವೆಂಬ ಗುರುವಿನ ನೆಲೆಯನ್ನು ತಿಳಿದು ಅದಕ್ಕೆ ಶರಣು ಹೋಗಿ ಶರಣನೇ ತಾನಾಗುತ್ತದೆ. ಮರ್ತ್ಯದ ಜನನ ಮರಣ ಬಾಧೆಗೆ ಒಳಗಾದ ಮನುಜನಿಗೆ ಇದು ಹೊಳೆಯುವುದಿಲ್ಲ. ಬಯಕೆಯಾದರೆ ಹೊಳೆಯದೆ ಇರುವುದಿಲ್ಲ.

216

**ಹರನಿಲ್ಲದೆ ದೈವವಿಲ್ಲೆಂದು ಶ್ರುತಿ ಸಾರುತಿರ್ದು
ವೇದಂಗಳು ಪೊಗಳುತಿರ್ದು, ನರರು ಸುರರು ಅರಿವಿರ್ದು, ಅರಿಯದೆ,
ಹರಿಯು ದೈವ, ಬ್ರಹ್ಮನು ದೈವ, ಸುರಪನು ದೈವ, ಮನುಮುನಿ
ತ್ರಿವಿಧ ದೇವರ್ಕಳು ದೈವವೆಂದು,
ಚಂದ್ರ , ಸೂರ್ಯರು ದೈವವೆಂದು ಆರಾಧಿಸುವಿರಿ.
ಪತಿವ್ರತೆಯಾದವಳಿಗೆ ತನ್ನ ಪುರುಷನ ನೆನಹಲ್ಲದೆ, ಅನ್ಯರ ನೆನೆವಳೆ?
ವೇಶಿಯಂತೆ ಹಲಬರು ನೆಂಟರೆ?
ಇವರೆಲ್ಲರ ಸಂತವಿಟ್ಟು ಮತ್ತೆ ಶಿವನೆ ಎಂಬ ಶಿವದ್ರೋಹಿಗಳು ಕೇಳಿರೋ,
ಹರಿದೈವವೆಂದು ಆರಾಧಿಸುವವರೆಲ್ಲ ಮುಡುಹ ಸುಡಿಸಿಕೊಂಡು,
ಮುಂದಲೆಯಲ್ಲಿ ಕೆರಹ ಹೊತ್ತರು.
ಬ್ರಹ್ಮವೆ ದೈವವೆಂದು ಆರಾಧಿಸುವರೆಲ್ಲ ಹೆಮ್ಮೆಯ ನುಡಿದು,
ಹೋಮವನಿಕ್ಕಿ ಹೋತನ ಕೊಂದು ತಿಂದು , ಪಾತಕಕ್ಕೆ ಒಳಗಾದರು.
ಸುರಪದೈವವೆಂದು ಆರಾಧಿಸಿದವರೆಲ್ಲ
ತಮ್ಮ ಸಿರಿಯಲ್ಲಿಗೆ ಹೋಗಿ ಶಿವನಲ್ಲಿಗೆ ಸಲ್ಲದೆ ಹೋದರು.
ಮನು ಮುನಿ ದೇವರ್ಕಳು ದೈವವೆಂದು ಆರಾಧಿಸಿದವರೆಲ್ಲ.
ಹಿಂದುಮುಂದಾಗಿ ಅಡ್ಡಬಿದ್ದು, ಅವರು ಬಂದ ಭವಕ್ಕೆ ಕಡೆ ಇಲ್ಲ.
ಇದನ್ನೆಲ್ಲ ಅರಿದು ಮತ್ತೆ
ಇವರೇ ದೈವವೆಂದು ಆರಾಧಿಸುವ ವಿವರಗೆಟ್ಟ
ಭವಭಾರಿಗಳ ನುಡಿಯ ಕೇಳಲಾಗದು,
ಅವರೊಡನೆ ನುಡಿಯಲಾಗದು.
ಅವರ ನಡೆಯ ಕಂಡರೆ ಛೀ ಎಂಬುರು ನಿಮ್ಮ ಶರಣರು,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ**

ಹರನೊಬ್ಬನೆ ದೈವ. ಹರನಿಲ್ಲದೆ ದೈವ ವಿಲ್ಲೆಂದು ಶ್ರುತಿ ಸಾರುತ್ತಿವೆ. ವೇದಗಳು ಹೊಗಳುತ್ತಿವೆ. ಆದರೂ ಜಗದ ಜನ ಅರಿಯದೆ ಹರಿ ಬ್ರಹ್ಮ ಸುರ ಮನು ಮುನಿಗಳು ದೈವವೆಂದು, ಚಂದ್ರ ಸೂರ್ಯರು ದೈವವೆಂದು ಆರಾಧಿಸುತ್ತಿವೆ.

ಪತಿವ್ರತೆ ತನ್ನ ಪುರುಷನಲ್ಲದೆ ಅನ್ಯರ ನೆನೆಯುವುಳೆ? ಅವಳಿಗೆ ವೇಶಿಯಂತೆ ಹಲವಾರು ನೆಂಟರುಂಟೆ? ಅನ್ಯ ದೈವಗಳನ್ನು ಪೂಜಿಸುತ್ತ ಮತ್ತೆ ಶಿವನೆ ಎಂದು ನೆನೆಯುವ ಶಿವದ್ರೋಹಿಗಳು ಕೇಳಿರೋ. ಹರಿದೈವವೆಂದು ಆರಾಧಿಸಿದವರು ಮುಡುಹ ಸುಡಿಸಿಕೊಂಡರು. ಮುದಲೆಯಲ್ಲಿ ಕೆರಹ ಹೊತ್ತರು. ಬ್ರಹ್ಮವೆ ದೈವವೆಂದು ಆರಾಧಿಸುವವರು ಹೆಮ್ಮೆಯಿಂದ ನುಡಿದು ಹೊಮ್ಮವನಿಕ್ಕಿ ಹೋತನಕೊಂದು ತಿಂದು, ಪಾತಕಕ್ಕೆ ಒಳಗಾದರು. ಸುರಪ ದೈವವೆಂದು ಆರಾಧಿಸಿದವರೆಲ್ಲ ತಮ್ಮ ಸಿರಿಯಲ್ಲಿಗೆ ಹೋಗಿ, ಶಿವನಿಗೆ ಸಲ್ಲದೆ ಹೋದರು.

ಹರನೆಂದರೆ ಶಿವ, ಶಿವನೆಂದರೆ ಹರ. ಈತ ಯಾರು? ವ್ಯಕ್ತಿಯೇ? ಅಥವಾ ಅವ್ಯಕ್ತನೋ. ಈತ ವ್ಯಕ್ತಿಯೊಳಗಿದ್ದ ಅವ್ಯಕ್ತ. ಜಗದ ವ್ಯಕ್ತಿಗಳೆಲ್ಲ ಈತನನ್ನು ಹೊರಗೆ ಹುಡುಕಿದರು. ಸತಿಗೆ ಪತಿಯೇ ದೈವ. ಆ ದೈವವನ್ನು ಹೆಣ್ಣಾಗಿ, ಸತಿಯಾಗಿ ಹುಡುಕಬೇಕಲ್ಲ. ಭೂಮಿಯ ಮೇಲೆ ವಾಸಿಸುವ ಅಂಗವುಳ್ಳವರೆಲ್ಲ ಸತಿಯರೆ. ಅಂಗ ಒಂದು ಮನೆ! ಅಂಗದಲ್ಲಿ ಸಂಗಮವಾದ ಅರಿವೆಂಬ ಸಂಗಯ್ಯನೆ ಪತಿ! ಅಂಗವನ್ನು ಆವರಿಸಿರುವ ಮನವೆ ಸತಿ! ಸತಿ ಪತಿಯನ್ನೇ ಹಗಲಿರುಳೆನ್ನದೆ ನೆನೆಯಬೇಕಲ್ಲ. ಸತಿಗೆ ಪತಿಯೇ ದೈವ! ಸತಿ ಪತಿಗಳು ಅಂಗದಲ್ಲಿಯೇ ಮನೆ ಮಾಡಿಕೊಂಡು ಅಂಗದಲ್ಲಿಯೇ ವಾಸವಾಗಿದ್ದಾರೆ.

ಸತಿ ವೇಶಿಯಾದರೆ ಹೇಗೆ? ಸತಿ ಪರಪುರುಷನ; ಪರದೈವವ ನೆನೆದರೆ ಹೇಗೆ? ಆಕೆ ಪತಿವ್ರತೆ ಎನ್ನಿಸಿ ಕೊಂಡಾಳೆಯೆ? ವೇಶಿಯಂತೆ ಹಲಬರು ನೆಂಟರೆ? ವೇಶ್ಯೆ ಹಲಬರ ನೆನೆದರೇನು ಆಕೆಯ ಚಿಂತೆ ಹಣದ ಮೇಲೆ. ಅಂಗದಲ್ಲಿಯೇ ಸಂಗಮವಾದ ಪರಮ ಪುರುಷನ ಮೇಲಲ್ಲ. ಪತಿ ಪರಮ ಪುರುಷನಿಗೂ ವೇಶ್ಯೆಗೂ ಸಂಬಂಧವೇ ಇಲ್ಲ. ಸತಿಯಂತೆ ವೇಷ ಧರಿಸಿ ಮತ್ತೆ ಶಿವನೆ ಎಂದರೆ ಶಿವ ಒಲಿವನೆ? ಸಂಬಂಧವಿಲ್ಲದ ಧ್ವನಿ ಶಿವನಿಗೆ ತಲುಪುವುದೇ? ಹಾಗೆಯೇ ಹರಿದೈವವೆಂದು ಬ್ರಹ್ಮ ದೈವವೆಂದು, ಸುರಪ, ಮನು ಮುನಿ ದೈವವೆಂದು ಸಿರಿಯ ಸಮೀಪ ಹೋಗಿ ಸಿರಿವಂತರಾದರು; ಶಿವನಿಗೆ ಸಲ್ಲದೆ ಹೋದರು. ಸಿರಿ ಸಂಪತ್ತಿಗಾಗಿ ದೈವ, ಅಂತೆಯೇ ವೇಶ್ಯೆಗೆ ನೆಂಟರು. ನೆನೆಯುವ ದೈವಕ್ಕೂ ನೆಂಟರಿಗೂ ಸಂಬಂಧವೇ ಇಲ್ಲ. ಭವಭಾರಿಗಳು. ದುಃಖಕ್ಕೆ ಸಮೀಪವಾದವರು. ದುಃಖವನ್ನು ಹೆಗಲ ಮೇಲೆ ಹೊತ್ತು ಪಯಣಿಸುವವರು. ಇವರಡೊನೆ ಶರಣರು ನುಡಿಯಲಾಗದು. ಇವರ ನಡೆಯ ಕಂಡರೆ ಛೀ ಎಂಬರು.

ಹೊರಗೆ ನೋಡುವ ಮನ ಒಮ್ಮೆ ಒಡಲೊಳಗೆ ನೋಡಿದರೆ ಒಡಲೊಡೆಯ ಗೋಚರಿಸುವನು. ಮನದ ಹಾದರ ಕಳಚಿ ಬೀಳುವುದು. ವೇಶಿ ಗರತಿಯಾಗುತ್ತಾಳೆ; ಸತಿ ಪತಿವ್ರತೆಯಾಗುತ್ತಾಳೆ.

217

ಹರಹರ ಎಂದು ಹತ್ತು ಬಾರಿ ಎನಬಹುದಲ್ಲದೆ,
ಹರಿವ ಮನವ ಮೆಟ್ಟಿ , ಮನವ ಲಿಂಗದೊತ್ತಿನಲ್ಲಿ ನಿಂದಿರಲರಿಯದು ನೋಡಾ !
ಇದು ಕಾರಣ, ತನುವ ಗುರುವಿಂಗಿತ್ತು , ಮನವ ಲಿಂಗಕ್ಕಿತ್ತು ,

ಧನವ ಜಂಗಮಕ್ಕಿತ್ತು , ತ್ರಿವಿಧವನು ತ್ರಿವಿಧಕ್ಕಿತ್ತ ಬಳಿಕ, ಒಂದಲ್ಲದೆ ಎರಡುಂಟೆ?
ಇದು ಮುಂದೆ ಆವನಾನೊಬ್ಬ ಭಕ್ತನು ನೋಡಿ ನಡೆವುದಕ್ಕೆ ಇದೇ ಸಾಧನ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ

ಹರ ಹರ ಎಂದು ಹತ್ತು ಬಾರಿ, ನೂರು, ಸಾವಿರ ಬಾರಿ ನುಡಿಯಬಹುದು, ಹರಿದಾಡುವ ಮನವನ್ನು ಹರ ಹರ ಎಂದು ನುಡಿದು ನಿಲ್ಲಿಸಲಾಗುವುದಿಲ್ಲ, ಹರನೊಂದಿಗೆ ಒಂದಾಗುವುದಿಲ್ಲ, .

ತನುವನು ಗುರುವಿಗೆ ಕೊಡಬೇಕು, ಮನವನು ಲಿಂಗಕ್ಕೆ ಕೊಡಬೇಕು. ಧನವನು ಜಂಗಮಕ್ಕೆ ಕೊಡಬೇಕು. ಈ ತ್ರಿವಿಧವನು ತ್ರಿವಿಧಕ್ಕೆ ಕೊಟ್ಟ ಬಳಿಕ ಒಂದಲ್ಲದೆ ಎರಡುಂಟೆ? ಇದು ಅಪ್ಪಣ್ಣ ಶರಣರ ಸ್ವರೂಪ ಜ್ಞಾನದ ಸೂತ್ರ . ಸರಳಸೂತ್ರ .

ತನುವನ್ನು ಮನ ಆವರಿಸಿದೆ. ತನುವಿನಲ್ಲಿ ಅರಿವು ತನ್ಮಯವಾಗಿದೆ. ಹಾಗೆಯೇ ತನುವೂ ಇದೆ. ಇದೆಲ್ಲವನ್ನೂ ತಿಳಿದು ಪಾಲಿಸುವ ಜಂಗಮನೂ ತನುವಿನಲ್ಲಿಯೇ ಇದ್ದಾನೆ. ತನುವನ್ನು ಗುರುವಿಗೆ ಕೊಡುವುದು ಹೇಗೆ? ಗುರುವೆಂದರೆ ಯಾರು? ಇದೆಲ್ಲವನ್ನು ತಿಳಿ ಹೇಳಿ ಹೇಗೆ ಪ್ರಯಾಣಿಸಬೇಕೆಂಬ ಮಾಹಿತಿ ಕೊಡುವ ಗುರುವೊಬ್ಬನಿದ್ದಾನೆ. ಈತ ಹೊರಗಿನ ಗುರು. ಶಿಷ್ಯನನ್ನು ಕರೆದು ಮೈದಡವಿ, ತನುವಿನಲ್ಲಿಯೇ ತನ್ಮಯವಾದ ಗುರುವನ್ನು ತನುವಿನಲ್ಲಿಯೇ ತೋರಿ ಸಕಲ ಮಾಹಿತಿಯನ್ನೂ ನೀಡುತ್ತಾ ನಿನ್ನ ಈ ತನುವನ್ನು ನಿನ್ನ ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುವಿಗೆ ಕೊಡು. ಈ ತನು ನಿನ್ನದಲ್ಲ; ನಿನ್ನ ಗುರುವಿನದು. ಆತನ ಆಜ್ಞೆಯನ್ನು ಈ ತನು ಪರಿಪಾಲಿಸಬೇಕು ಎಂದು ಹೇಳುತ್ತಾನೆ. ಅಂದಿನಿಂದ ತನು ಹರಿದಾಡುವ ಮನದ ಮಾತು ಕೇಳುವುದಿಲ್ಲ. ಅರಿವೆಂಬ ಹರನ ಮಾತು; ಗುರುದೇವನ ಮಾತು ಕೇಳುತ್ತದೆ.

ಅಂಗದಲ್ಲಿಯೇ ಲಿಂಗ ಸಂಗಮವಾಗಿದೆ. ಅಂಗವನ್ನು ಮನ ಆವರಿಸಿದೆ. ಮನದ ಸ್ವಭಾವ ಗಾಳಿಯಂತೆ ಅತ್ತಿಂದಿತ್ತ ಇತ್ತಿಂದತ್ತ ಹರಿದಾಡುವುದೇ ಆಗಿದೆ. ಅದು ತಾನೊಂದೆ ಹರಿದಾಡುವುದಿಲ್ಲ. ತನಗೆ ಬಯಕೆಯಾದೆಡೆಗೆ ತನುವನ್ನು ಹಿಡಿದು ತನುವಿನೊಂದಿಗೆ ಹರಿದಾಡುತ್ತದೆ. ತನುವಿನಲ್ಲಿ ಸಂಗಮವಾದ ಲಿಂಗಯ್ಯನ ಹಾಗೂ ಅರಿವೆಂಬ ಗುರುದೇವನ ಮಾತೂ ಕೇಳುವುದಿಲ್ಲ. ಜಂಗಮನ ಮಾತೂ ಕೇಳುವುದಿಲ್ಲ. ಅಂತಹ ಮನವೆಂಬ ಮರ್ಕಟವನ್ನು ಹಿಡಿದು ಅಂಗದಲ್ಲಿಯೇ ಸಂಗಮವಾದ ಲಿಂಗಯ್ಯನಿಗೆ ಕೊಡಬೇಕು. ಆಗ ಮನ ಘನಮನವಾಗುತ್ತದೆ.

ಅಂಗದಲ್ಲಿ ಅರಿವು ಇದೆ. ಅದು ಆಗಾಗ ಬಂದು ಹೋಗುತ್ತದೆ. ಮರೆವು ಆಗುತ್ತದೆ; ಅರಿವೂ ಆಗುತ್ತದೆ ಮರೆವಿಗೆ ಆಗುವ ಅರಿವು ಸಹಜವಲ್ಲ. ಸಹಜವಲ್ಲದ ಈ ಅರಿವನ್ನೇ ಶರಣರು ಧನವೆಂದು ಕರೆದಿದ್ದಾರೆ.ಧನವೆಂದರೆ ಹಣವಲ್ಲ. ತನುಮನ ಧನ. ಈ ಧನ ತನುವಿನಲ್ಲಿ ತನ್ಮಯವಾದ ಅರಿವು. 'ಅರಿದೆವರಿದೆವೆಂಬಿರಿ; ಅರಿದ ಪರಿಯೆಂತು ಹೇಳಿರೆ? ಅರಿದವರು ಅರಿದೆವೆಂಬರೆ? ಅರಿಯಬಾರದ ಘನವನರಿದವರು ಅರಿಯದಂತಿಪ್ಪರು ಗುಹೇಶ್ವರಾ' ಅರಿದ ಅರಿವನು ಮರೆತು ಸಹಜ ಅರಿವನಲ್ಲಿದ್ದವರು ಅರಿಯದಂತಿಪ್ಪರು. ಸಹಜವಾಗಿರುವವರು. ಅರಿದ ಅರಿವನು ಮರೆಯಲು ಬರುವುದಿಲ್ಲ. ಹೀಗಾಗಿ ಅಂಗದಲ್ಲಿಯೇ ಸಂಗಮವಾದ ಜಂಗಮನಿಗಿತ್ತಾಗ ಆತ ಆ ಅರಿತ ಅರಿವನು ಕರಗಿಸಿ ನಿಜದ ನಿಲುವಿಗೆ ಕೊಂಡೊಯ್ಯುತ್ತಾನೆ. ಸಹಜ ಅರಿವಿಗೆ ಕೊಂಡೊಯ್ಯುತ್ತಾನೆ. ಹೀಗೆ ತ್ರಿವಿಧವನ್ನು ತ್ರಿವಿಧಕ್ಕೆ ಕೊಡುವ ತಂತ್ರಜ್ಞಾನವನ್ನು ಹಡಪದ ಅಪ್ಪಣ್ಣನಂತೆ ಬಲ್ಲ ಗುರುದೇವನು ಮಾತ್ರ ಬಯಕೆ ಆದ ಶಿಷ್ಯನಿಗೆ ಹೇಳಿಕೊಡುತ್ತಾನೆ.

ಆಗ ಅಂಗ ಎರಡೊಂದಾದ ಘನಾಂಗವಾಗುತ್ತದೆ. ಲಿಂಗಾಂಗವಾಗುತ್ತದೆ.

218

ಹರಿ ಬ್ರಹ್ಮ ಕಾಲ ಕಾಮ ದಕ್ಷಾದಿಗಳ ದೇವರೆಂದು
ಗಟ್ಟಿಯತನದೊಳು ಬೊಗಳುವ ಮಿಟ್ಟೆಯ ಭಂಡರು ನೀವು ಕೇಳಿರೊ.
ಅವರ ಹುಟ್ಟನರಿಯಿರಿ, ಹೊಂದನರಿಯಿರಿ. ಅವರ ಹುಟ್ಟು ಕೇಳಿರಣ್ಣಾ !
ಏನೇನೋ ಇಲ್ಲದಂದು, ಶೂನ್ಯ ನಿಃಶೂನ್ಯಕ್ಕೆ ನಿಲುಕದ ಘನವು-
ಕೋಟಿಚಂದ್ರಸೂರ್ಯರ ಬೆಳಗಾಗಿ ಬೆಳಗುತ್ತಿಪ್ಪಲ್ಲಿ,
ಓಂಕಾರವೆಂಬ ನಿರಕ್ಷರ ಹುಟ್ಟಿತ್ತು .
ಓಂಕಾರದಿಂದ ನಕಾರ, ಮಕಾರ,ಶಿಕಾರ,ವಕಾರ,
ಯಕಾರವೆಂಬ ಪಂಚಾಕ್ಷರ ಹುಟ್ಟಿದವು.
ಆ ಪಂಚಾಕ್ಷರಿಗೆ ಪರಾಶಕ್ತಿ ರೂಪಾದಳು.
ಆ ಪಂಚಾಕ್ಷರಕ್ಕೂ ಪರಾಶಕ್ತಿಗೂ ಇಬ್ಬರಿಗೂ ಸದಾಶಿವನಾದ.
ಆ ಸದಾಶಿವಂಗೆ ಜ್ಞಾನಶಕ್ತಿಯಾದಳು,
ಆ ಸದಾಶಿವಂಗೆ ಜ್ಞಾನಶಕ್ತಿಯರಿಬ್ಬರಿಗೂ ಶಿವನಾದ.
ಆ ಶಿವಂಗೆ ಇಚ್ಛಾಶಕ್ತಿಯಾದಳು
ಆ ಶಿವಂಗೆ ಇಚ್ಛಾಶಕ್ತಿಗೂ ಇಬ್ಬರಿಗೂ ರುದ್ರನಾದ.
ಆ ರುದ್ರನಿಗೆ ಕ್ರಿಯಾಶಕ್ತಿಯಾದಳು.
ಆ ರುದ್ರಂಗೂ ಕ್ರಿಯಾಶಕ್ತಿಗೂ ಇಬ್ಬರಿಗೂ ವಿಷ್ಣುವಾದ.
ಆ ವಿಷ್ಣು ಪಡೆದ ಸತಿ-ಲಕ್ಷ್ಮಿಯು.
ಆ ವಿಷ್ಣುವಿಗೂ ಮಹಾಲಕ್ಷ್ಮಿಗೂ ಇಬ್ಬರಿಗೂ ಬ್ರಹ್ಮನಾದ.
ಆ ಬ್ರಹ್ಮಂಗೆ ಸರಸ್ವತಿಯ ಕೊಟ್ಟು , ಬರೆವ ಸೇವೆಯ ಕೊಟ್ಟ.
ಬ್ರಹ್ಮಂಗೂ ಸರಸ್ವತಿಗೂ ಇಬ್ಬರಿಗೂ ಮನುಮುನಿದೇವರ್ಕಳಾದರು.
ಆ ಮನುಮುನಿದೇವರ್ಕಳಿಗೆ ಸಕಲ ಸಚರಾಚರವಾಯಿತ್ತು .
ಇಹಲೋಕಕ್ಕೆ ನರರು ಆಗಬೇಕೆಂದು ಬ್ರಹ್ಮನು ಹೋಗಿ,
ಹರನಿಗೆ ಭಿನ್ನಪಂ ಮಾಡಲು, ಹರನು ಪರಮ ಜ್ಞಾನದಿಂದ ನೋಡಿ,
ತನ್ನ ಶರೀರದಿಂದಲೇ ನಾಲ್ಕು ಜಾತಿಯ ಹುಟ್ಟಿಸಿ, ಇಹಲೋಕಕ್ಕೆ ಕಳುಹಿಸಿದನು.
ಆ ಶಿವನ ಶರೀರದಲ್ಲಿ ಹುಟ್ಟಿದವರು ಶಿವನನ್ನೇ ಅರ್ಚಿಸಿ,
ಶಿವನನ್ನೇ ಪೂಜಿಸಿ, ಶಿವನನ್ನೇ ಭಾವಿಸಿ, ಶಿವನೊಳಗಾದರು.
ಅದರಿಂದಾದ ಭವಭಾದೆಗಳು ತಾವು ತಮ್ಮ ಹುಟ್ಟನರಿಯದೆ,
ಹುಟ್ಟಿಸುವಾತ ಬ್ರಹ್ಮ, ರಕ್ಷಿಸುವಾತ ವಿಷ್ಣು, ಶಿಕ್ಷಿಸುವಾತ ರುದ್ರನೆಂದು ಹೇಳಿದರು.
ಈ ಭ್ರಷ್ಟರ ಮಾತು ಕೇಳಿ ಕೆಟ್ಟಿತ್ತು ಜಗವೆಲ್ಲ.
ಆಗ ಶಿವನು ಕೊಟ್ಟು ಕಳುಹಿಸಿದ ಮಾಯೆಗೆ ಮರವೆಂಬ ಪಾಶ.
ಅವಳು ಕಟ್ಟಿ ಕೆಡಹಿದಳು ಮೂರು ಜಗವೆಲ್ಲವನು.

ಇವಳ ಕಟ್ಟಿಗೊಳಗಾದ ಭ್ರಷ್ಟರೆತ್ತ ಬಲ್ಲರೋ ನಿಮ್ಮ ಶರಣರ ಸುದ್ದಿಯ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ?

ಹರಿ ಬ್ರಹ್ಮ ಕಾಲ ಕಾಮ ದಕ್ಷಾದಿಗಳನ್ನು ದೇವರೆಂದು ಹೊಗಳುವಿರಿ. ಅವರು ದೇವರಲ್ಲ. ಅವರ ಹುಟ್ಟನು ತಿಳಿದಿಲ್ಲ. ಅವರ ಹುಟ್ಟು ಕೇಳಿದರೆ ಅವರನ್ನು ದೇವರಲ್ಲವೆಂದು ನೀವೆ ನಿರ್ಧರಿಸಬಹುದು ಎಂದು ಓದುಗರ ಜೊತೆಗೆ ಅಪ್ಪಣ್ಣ ಶರಣರು ಮಾತನಾಡಿದ್ದಾರೆ.

ಭ್ರಮೆಯಲ್ಲಿದ್ದವನು ಬ್ರಹ್ಮಜ್ಞಾನ ತಿಳಿಯಲಾರ. ತಿಳಿಯಲಾರದ ವನಿಗೆ ತಿಳಿ ಹೇಳುವವನೇ ಬ್ರಹ್ಮಜ್ಞಾನಿ. ಒಬ್ಬ ಹೇಳುಗ, ಮತ್ತೊಬ್ಬ ಕೇಳುಗ. ಹೇಳುಗ ತಿಳಿದಿದ್ದಾನೆ; ಕೇಳುಗ ತಿಳಿದಿಲ್ಲ. ಇದು ಸೃಷ್ಟಿಯ ನಿಯಮ. ಈ ಸೃಷ್ಟಿಯಲ್ಲಿ 'ನಾನು ಯಾರು? ' ಎಂಬ ಪ್ರಶ್ನೆ ಹುಟ್ಟಿಕೊಂಡಿದ್ದೆ ಬ್ರಹ್ಮನಿಗೆ. ಇದರಲ್ಲಿ ಎರಡು ರೀತಿ. ಬಹುರೂಪ. ನಾನು ಯಾರು ಎಂಬ ಜಿಜ್ಞಾಸೆ, ರಜೋಗುಣದಿಂದ ಪ್ರೇರಿತವಾಗಿ, ತಾನು ಮಾಡಬೇಕಾದದ್ದು ಏನು ಎಂಬುದು ಕರ್ಮ ಮುಖದತ್ತ ತಿರುಗಿ, ಪ್ರವೃತ್ತಿ ಮಾರ್ಗವನ್ನು ಹಿಡಿಯುತ್ತದೆ. ಸತ್ವ ಮಾರ್ಗದಿಂದ ಪ್ರೇರಿತವಾದ ಜಿಜ್ಞಾಸೆ ಜ್ಞಾನದತ್ತ ತಿರುಗಿ ನಿವೃತ್ತಿ ಮಾರ್ಗ ಹಿಡಿಯುತ್ತದೆ. ಹೀಗೆ ಬ್ರಹ್ಮದೇವನಿಗೆ ಹುಟ್ಟಿಕೊಂಡಿತು.

ಸೃಷ್ಠಿಪೂರ್ವದ ಗ್ರಹಿಕೆಯಿದು. ವಿಷ್ಣು ಶೇಷನ ಮೇಲೆ ಮಲಗಿದ್ದ. ಶೇಷನ ಮೇಲೆ 'ವಿ-ಶೇಷ'ವಾಗಿ ನಿದ್ರಿಸುತ್ತಿದ್ದ. ಆ ನಿದ್ರೆಗೆ ಯೋಗ ನಿದ್ರೆ ಎಂದು ಹೆಸರು. 'ಕಾಲ' ಬಂದಾಗ ತನ್ನನ್ನು ಎಚ್ಚರಿಸು ಎನ್ನುವ ನಿದ್ರೆ ಅದು. ಕಾಲ ಬಂತು. ಅದು ನಾರಾಯಣನಿಗೆ ಸುಪ್ರಭಾತ ಹಾಡಿ ಎಚ್ಚರಿಸಿತು. ನಾರಾಯಣ ತನ್ನಲ್ಲೇ ಕಣ್ತೆರೆದ. ಆ ನೋಟಕ್ಕೆ ಅದ್ಭುತವಾದ ಶಕ್ತಿ ಹುಟ್ಟಿತು. ಹೊಕ್ಕುಳ ಚಲಿಸಿದಂತಾಯಿತು. ನಾಭಿಯಿಂದ ತಾವರೆ ಒಂದು ಪ್ರಕಟವಾಯಿತು. ತನ್ನ ಹೊಕ್ಕುಳುದಿಂದಲೇ ಅರಳಿನಿಂತ ಮನೋಹರ ತಾವರೆಯನ್ನು ನೋಡಿ ಮುದಗೊಂಡ. ತನ್ನೊಳಗಿದ್ದ ಇದರಲ್ಲಿ ತಾನು ಇರಲಾರೆನೆ? ತಾವರೆಗಿಂತ ಸೂಕ್ಷ್ಮವಾಗಿ ಅದರೊಳಗೆ ಹೊಕ್ಕ. ಹೊಕ್ಕುಳು ಎನ್ನುವ ಪರ ಧನ್ಯವಾಯಿತು. ಈ ಹೊಕ್ಕುಳಲ್ಲಿಯೇ ಬ್ರಹ್ಮ ಹುಟ್ಟಿದ. ಅದಕ್ಕಾಗಿ ಬ್ರಹ್ಮನನ್ನು ಜ್ಞಾನಿ ಎಂದು ಕರೆಯುತ್ತಾರೆ. ಈತ ಆದಿಕವಿ. ನಾಲ್ಕು ವೇದಗಳು ಈತನಿಂದಲೇ ಹುಟ್ಟಿದುದಕ್ಕೆ ಚತುರ್ಮುಖನೆಂದು ಕರೆಯುತ್ತಿರಬೇಕು.

ಹೊಕ್ಕುಳ ಹೂವಿನ ನಡುವೆ ವರಿದುಂಬಿಯಾಗಿ ಇದ್ದ ಬ್ರಹ್ಮ ಈ ಕಮಲದ ಹೂ ಯಾವುದು? ಇದರಲ್ಲಿ ಕೂತಿರುವ ತಾನು ಯಾರು? ಹುಡುಕಾಟ ಪ್ರಾರಂಭವಾಗದೆ ತನ್ನ ಅರಿವು ತನಗೆ ಉಂಟಾಗದು. ತನ್ನ ಅರಿವು ಎಂದರೆ ತನ್ನ ಇರುವಿಕೆಯೇ ಅರಿವು ಆದುದರಿಂದ ಇರುವಿಕೆಯೇ ಸೃಷ್ಟಿಯಾದುದರಿಂದ ಸೃಷ್ಟಿಯಿಂದಲೇ ಸೃಷ್ಟಿಯ ಅರಿವು ಎಂದಂತೆ. ಅರಿವಿನಿಂದಲೇ ಸೃಷ್ಟಿ ಎಂದಂತೆ. ಒಂದಕ್ಕೊಂದು ಸಂಬಂಧ. ಅದಲು ಬದಲಾಗುವ ಸಂಬಂಧ.

ಬ್ರಹ್ಮ ಕಮಲದ ನಾಭದ ಒಳಹೊಕ್ಕು ಹುಡುಕಾಡಿ, ಅಲ್ಲಿರುವ ಜಲದಲ್ಲಿಳಿದು ಹುಡುಕಾಡಿದರೂ ನಾಲ್ಕು ಮುಖಗಳಿರುವ ಬ್ರಹ್ಮನಿಗೆ ಸಿಗಲೇ ಇಲ್ಲ. ಹುಡುಕಿ ಹುಡುಕಿ ದಣಿದ; ನಾಭಿ ಕಮಲಕ್ಕೆ ಮರಳಿದ. ಸಂಕಲ್ಪ ವಿಕಲ್ಪಗಳನ್ನು ತೊರೆದ ಮತ್ತೆ ನಾಭಿಕಮಲಕ್ಕೆ ಮರಳಿದ ಸ್ವಯೆಂಭು ಎಂಬ ಹೆಸರಿಗೆ ತಕ್ಕಂತೆ ತಾನು ಅದರಲ್ಲಿಯೇ ಮುಳುಗಿದ. ಅಲ್ಲಿ ಕಣ್ತೆರೆದು ನೋಡಿದರೆ ಅಲ್ಲಿಯೇ ತನ್ನೊಳಗೇ ತನ್ನ ಅಂತಃಕರಣದಲ್ಲಿಯೇ ಇತ್ತು . ದಿವ್ಯ ದರ್ಶನ, ತನ್ನ ನಾಲ್ಕು ಮುಖದ ಎಂಟು ಕಣ್ಣುಗಳಿಗೂ ಕಾಣದ ದರ್ಶನ ಮತ್ತೊಂದು ಮುಕ್ಕಣ್ಣನ ಕಣ್ಣಿಗೆ ಕಂಡಿತು.

ನಾಭಿಕಮಲದಲ್ಲಿ ಪ್ರಕಟಗೊಂಡ ಬ್ರಹ್ಮ ತನ್ನ ಹೃದಯಕಮಲದಲ್ಲಿರುವ ಭಗವಂತನನ್ನು ಕಂಡ. ಕಂಡಾಗಲೇ ತಿಳಿಯಿತು. ಇದು ವಿಶ್ವಸೃಷ್ಟಿಗೆ ಕಾರಣವಾದ ತಾಯಿಬೇಕು ಎಂದು. ಇದು ಸಮಸ್ತ ಸೃಷ್ಟಿಗೆ ಕಾರಣವಾದ ಹೊಕ್ಕುಳ ಬಳ್ಳಿ ಎಂದು. ಕಾಣುವುದು ತಿಳಿಯುವುದೂ ಏಕ ಕಾಲಕ್ಕೆ ಘಟಿಸಿದವು. ಕೈ ಮುಗಿದ. ಭಗವಂತನನ್ನು ತಿಳಿದಾಗ ತನ್ನನ್ನೂ ತಿಳಿದಂತಾಯಿತು. ಈ ಅನಂತ ಶಕ್ತಿಯ ಕುಡಿ ತಾನು ಎಂದು.

ಲೋಕ ಸೃಷ್ಠಿಯನ್ನು ಮಾಡುವ ಬ್ರಹ್ಮ ಸೃಷ್ಠಿಯಾದ ಅನಂತ ಲೋಕಗಳನ್ನು ತನ್ನಲ್ಲಿಯೇ ಕಂಡ. ಕಾಣದೇ ಸೃಷ್ಟಿ ಇಲ್ಲ. ಸೃಷ್ಟಿ ಎಂದರೆ ಅವನ ಪ್ರಸಾದ. ನಿನ್ನ ಇಚ್ಛೆಯಂತೆ ನಿರ್ವಹಿಸುವಾಗ ನಿನ್ನ ನೆನಪು ಮರೆಯದಂತೆ ಅನುಗ್ರಹಿಸು ಎಂದು ಬೇಡಿಕೊಂಡ. ಏಕೆಂದರೆ ಸೃಷ್ಟಿ ಮಾಡಿದ ಈ ಲೋಕ ನಿನ್ನನ್ನೇ ಮರೆಸುವ ಸ್ವಭಾವ ಉಳ್ಳದ್ದು. ಏಕೆಂದರೆ ನಾಲ್ಕು ಮುಖ ಎಂಟು ಕಣ್ಣುಗಳುಳ್ಳ ನಾನೇ ನಿನ್ನನ್ನು ಹೊರಗಡೆ ಹುಡುಕಿದೆನಲ್ಲ. ದಣಿದ ಮೇಲೆ ನಿನ್ನ ಬಳಿಗೆ ಮರಳಿದಂತಾಯಿತು.

ಎಲ್ಲೆಲ್ಲೂ ಇದ್ದ, ಮರದೊಳಗೆ ಮುಂದಾಗ್ನಿಯಂತೆ ಇದ್ದ ಭಗವಂತ ಕಾಣಲಿಲ್ಲ. ಅಡಗಿರುವುದನ್ನು ಯಾರು ಅರಿಯಬಲ್ಲರೋ ಆ ಅರಿವೇ ಬೆಂಕಿ. ಮರೆವಿನ ಕಶ್ಮಲಗಳನ್ನೆಲ್ಲ ಸುಟ್ಟು ಬಿಡುವ ಬೆಂಕಿ. ಅರಿವೆಂದರೆ ನೆನಪಿನ ಬೆಂಕಿ. ಇದನ್ನು ಮರೆವಿನ ಮೂಲಕವೇ ಅರಿಯಬೇಕು. ಅವನೇ ಬ್ರಹ್ಮ. ಬ್ರಹ್ಮಕಾಯ.

ಕಾಯ ಎರಡು ಹೋಳಾಗಿದೆ. ಎರಡೂ ಕಾಯವೇ ಒಂದು ಹೆಣ್ಣು ಮತ್ತೊಂದು ಗಂಡು. ಕಾಯ ಎಂದರೆ ಶರೀರ. ದೇಹ. ಕ ಎಂದರೆ ಸಂಕೇತ. ಕ ಎಂದರೆ ಯಾರು? ಸೃಷ್ಟಿಯಾದ ಪ್ರತಿಯೊಂದು ಕಾಯ ತನ್ನನ್ನು ತಾನು ಯಾರು ಎಂದು ಪ್ರಶ್ನಿಸಿ ಕೊಂಡರೆ ಅದರ ಭ್ರಮೆ ತೊಲಗಿ ಬ್ರಹ್ಮನೆಡೆಗೆ ಸೂಚಿಸುತ್ತದೆ. 'ಕ' ಎಂಬ ಸಂಕೇತ ವುಳ್ಳ ಬ್ರಹ್ಮ ಎರಡಾದ ಗಂಡಾದ ಹೆಣ್ಣಾದ ಇವೆರಡಕ್ಕೂ ಸಂಕೇತ. ಒಂದೇ. ಅದು ಕಾಯ. ' ಕ ' ಎಂಬುದು ಸಿಡಿದು ಉಂಟಾದ ಆಕಾರ. ಹೀಗೆ ಸೃಷ್ಟಿಗೊಂಡು ಉಂಟಾದ ಮೊದಲ ಆಕಾರವೇ 'ಮನು ' ಈತ ಮನುಷ್ಯರ ಮೊದಲ ಚಕ್ರವರ್ತಿ. ಮತ್ತೊಂದು ಹೆಣ್ಣು ಮನುವಿನ ಸಾಮ್ರಾಜ್ಞಿ ' ಶತರೂಪಾದೇವಿ' ಇವರು ಮನುಷ್ಯ ಕುಲದ ಅದಿ ದಂಪತಿಗಳು.

ಒಂದೇ ಕಾಯ ಸಿಡಿದು ಹೋಳಾದವು. ಅವೆರಡಕ್ಕೂ ಮತ್ತೇ ಒಂದಾಗಿ ಕೂಡುವ ಬಯಕೆ. ಬಹುವಾಗುವ ಬಯಕೆ ! ಇಲ್ಲಿಂದಲೇ ಮಿಥುನ ಧರ್ಮ ಪ್ರಾರಂಭವಾಯಿತು. ಒಂದೆರಡಾಗುವ ಬಯಕೆ; ಆ ಎರಡು ಒಂದಾಗಿ ಅನಂತವಾಗುವ ಬಯಕೆ. ಇದು ಬ್ರಹ್ಮ ಸಹಜವಾದ ಬಯಕೆ; ತನ್ನಲ್ಲಿಯೇ ಬ್ರಹ್ಮ ಸುಖವನ್ನು ಅನುಭವಿಸುವ ಬಯಕೆ, ತನ್ನಲ್ಲಿಯೇ ಇದ್ದ ಭ್ರಮೆ ಕಳಚಿಕೊಳ್ಳುವ ಬಯಕೆ ಉಂಟಾದಾಗ ಮಾತ್ರ ಕಾಯಕ್ಕೆ ಬ್ರಹ್ಮ ಸುಖ ದಕ್ಕುತ್ತದೆ.

ಕಾಯ ಒಂದೇ ಸಿಡಿದು ಎರಡಾದವು. ಈ ಎರಡೂ ಕಾಯಕ್ಕೆ ಶಕ್ತಿ ಒಂದೇ. ಆತನೇ ಶಿವ. ಈ ಶಿವ ಬೀಜವೇ ಓಂಕಾರ. ಇದು ಅಕ್ಷರವಲ್ಲ; ನಿರಕ್ಷರ. ಈ ನಿರಕ್ಷರದಿಂದಲೇ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಹುಟ್ಟಿತು. ಓಂಕಾರ ಇದಕ್ಕೆ ಹೊದಿಕೆಯಾಯಿತು. ಈ ಪಂಚಾಕ್ಷರಿಗೆ ಪರಾಶಕ್ತಿಯೇ ರೂಪವಾದಳು. ಪಂಚಾಕ್ಷರಕ್ಕೂ ಪರಾಶಕ್ತಿಗೂ ಸದಾಶಿವನೊಬ್ಬನೆ. ಆ ಸದಾಶಿವನೇ ಜ್ಞಾನ. ಈ ಜ್ಞಾನ ಎರಡೂ ದೇಹಗಳಿಗೆ ಶಕ್ತಿಯಾಯಿತು. ಚೈತನ್ಯವಾಯಿತು.

ವಿಷ್ಣು, ಲಕ್ಷ್ಮೀ , ಬ್ರಹ್ಮ ಸರಸ್ವತಿಯರಾದರು. ಅವರಿಗೆ ಮನು ಮುನಿ ದೇವರ್ಕಳಾದರು; ಸಕಲ ಸಚರಾಚರವಾಯಿತು. ಇಹಲೋಕಕ್ಕೆ ನರರಾದರು. ನಾಲ್ಕು ಜಾತಿಗಳು ಸೃಷ್ಟಿಯಾದವು. ಅವೆಲ್ಲ ಶಿವಶರೀರಗಳೇ ಆದರೂ ಶಿವನನ್ನೇ ಪೂಜಿಸಿ ಶಿವನನ್ನೇ ಅರ್ಚಿಸಿದರು. ಶಿವನನ್ನೇ

ಭಾವಿಸಿದರು. ಶಿವನೊಳಗಾದರು. ಶಿವಯಾರೆಂದು ಅರಿಯಲು ಹೋಗಲಿಲ್ಲ. ಅದರಿಂದಾಗ ಭವ ಬಾಧೆಗಳನ್ನು ತಾಳದೆ ತಮ್ಮ ಹುಟ್ಟನ್ನೇ ಮರೆತರು.

ಹುಟ್ಟಿಸುವಾತ ಬ್ರಹ್ಮನೆಂದರೆ, ರಕ್ಷಿಸುವಾತ ವಿಷ್ಣುವೆಂದರು. ಶಿಕ್ಷಿಸುವಾತ ರುದ್ರನೆಂದು ಹೇಳಿದರು. ತಾವಾರೆಂದು ತಿಳಿಯದ ಇವರನ್ನೆಲ್ಲ ಸಾರಾಸಗಟಾಗಿ ಭ್ರಷ್ಟರೆಂದು ಗುರುತಿಸಿದರು. ಅಪ್ಪಣ್ಣ ಶರಣರು. ಶಿವನು ಕಳುಹಿಸಿದ ಮರೆವೆಂಬ ಮಾಯಾ ಪಾಶಾ ಅರಿವಿನ ಮನುಷ್ಯನನ್ನು ಅರಿಯದಂತೆ ಕಾಡಿತು. ಮನುಕುಲದ ಸಕಲ ತನುಗಳನ್ನು ಈ ಮಾಯೆ ತನ್ನ ಮರುವಿನ ಪಾಶದಲ್ಲಿ ಕಟ್ಟಿ ಕೆಡಹಿದಳು. ಇವಳ ಕಟ್ಟಿಗೊಳಗಾದ ಭ್ರಷ್ಟರೆತ್ತ ಬಲ್ಲರು. ಶರಣರ ಸುದ್ದಿಯನ್ನು ಎಂದು ಪ್ರಶ್ನಿಸುತ್ತಾರೆ ಅಪ್ಪಣ್ಣ ಶರಣರು.

219

ಹರಿವ ಜಲಧಿಯಂತೆ, ಚರಿಸಿ ಬಹ ಮನವ ನಿಲ್ಲೆಂದು
ನಿಲಿಸುವ ಪುರುಷರುಂಟೆ ?
ಬಿರುಗಾಳಿ ಬೀಸಿದರೆ ಒಲಿ ಒಲಿದು ಉರಿವ ಬಲುಗಿಚ್ಚಿನ
ಉರಿಯ ನೆಲೆಗೆ ನಿಲಿಸು ವರುಂಟೆ ?
ಮಹಾ ಬಯಲೊಳಗಣ ಸಂಚನವನರಿದು ಅವಗಡಿಸುರುಂಟೆ ?
ಇವ ಬಲ್ಲೆನೆಂಬರೆಲ್ಲ ಅನ್ನದ ಮದ, ಅಹಂಕಾರದ ಮದ,
ಕುಲಮದ, ಛಲಮದ, ಯೌವ್ವನ ಮದ,ವಿದ್ಯಾಮದ,ತಪಮದ,
ಆತ್ಮದ ಮದ ಇಂತೀ ಅಷ್ಟಮದವಿಡಿದು ಬಲ್ಲೆವೆಂಬವರಲ್ಲದೆ,
ದೃಷ್ಟನಷ್ಟವಾವುದೆಂದರಿಯದೆ,
ಎಲ್ಲರೂ ಭ್ರಷ್ಟರಾಗಿ ಹೋದರು,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ,
ನಿಮ್ಮ ನೆಲೆಯನರಿಯದ ಕಾರಣ.

ಜಲದಂತೆ ಹರಿದಾಡುವ ಮನವನ್ನು ನಿಲ್ಲಿಸುವ ಪುರುಷರುಂಟೆ ? ಬಿರುಗಾಳಿಯಿಂದ ಒಲಿದೊಲಿದು ಉರಿವ ಬಲುಗಿಚ್ಚಿನ ಉರಿಯನ್ನು ನಿಲಿಸುವರುಂಟೆ ? ಮಹಾ ಬಯಲೊಳಗಣ ಸಂಚವನರಿದು ಅವಗಡಿಸುವರುಂಟೆ? ಎಂದು ಪ್ರಶ್ನಿಸುವ ಅಪ್ಪಣ್ಣ ಶರಣರು ಇವ ಬಲ್ಲೆನೆಂಬವರೆಲ್ಲ ಅಷ್ಟಮದಕ್ಕೆ ಒಳಪಟ್ಟು ಭ್ರಷ್ಟರಾಗಿ ಹೋದರು. ಏಕೆಂದರೆ ಅಂಗದಲ್ಲಿಯೇ ಸಂಗಮವಾದ ನೆಲೆಯನು ಅರಿಯದ ಕಾರಣ ಎಂದು ಹೇಳುತ್ತಾರೆ.

ಚಲಿಸುವ ಮನವನು ನಿಲ್ಲಿಸುವುದು ಹೇಗೆ ? ಮನದಿಂದಾಗಿ ಬೆಂಕಿಯಿಲ್ಲದೆ ಹತ್ತಿ ಉರಿಯುತ್ತಿರುವ ತನುವಿನ ಉರಿಯನು ನಿಲ್ಲಿಸುವುದು ಹೇಗೆ ? ತನು ಶಬ್ದದಿಂದ, ದೃಶ್ಯದಿಂದ, ಸ್ಪರ್ಶದಿಂದ, ರುಚಿಯಿಂದ,ವಾಸನೆಯಿಂದ ಉರಿಯುತ್ತದೆ. ಇದನ್ನು ತಣ್ಣಗೆ ಮಾಡುವುದು ಹೇಗೆ? ಉರಿಯಿಲ್ಲದೆ ಉರಿಯುತ್ತಿರುವ ಉರಿಯನ್ನು ಶೀತಲ ಜಲದಿಂದ, ಶೀತಲ ವಾಯುವಿನಿಂದ ಕಡಿಮೆ ಮಾಡಲು ಬರುವುದಿಲ್ಲ.

ಅಗ್ನಿ , ಜಲ,ವಾಯು,ಭೂಮಿಯೆಂಬ ನಾಲ್ಕು ಭೂತಗಳ ನೆಲೆಯನ್ನು ಬಯಲು ಮಾತ್ರ

ಬಲ್ಲುದು, ಜಲಪ್ರಳಯವಾದರೇನು? ಅಗ್ನಿ ತನ್ನ ಕೆನ್ನಾಲಿಗೆಯನ್ನು ಚಾಚಿ ಧರೆ ಹತ್ತಿ ಉರಿದರೇನು? ವಾಯು ಬಿರುಗಾಳಿ ಬೀಸಿ ಧರೆಯ ಮೇಲಿರುವ ಸಕಲ ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿದರೇನು? ಭೂಮಿ ಬಿರಿದು ತನ್ನ ಲಾವಾರಸವನ್ನು ಚೆಲ್ಲಿದರೇನು ? ಬಯಲು ವಿಚಲಿತವಾಗುವುದಿಲ್ಲ ! ಅದಕ್ಕೆ ಏನೇನೂ ಆಗದಂತೆ ಸಹಜ ಸ್ಥಿತಿಯ ಯೋಗ ನಿದ್ರೆಯಲ್ಲಿದೆ.

ಅಗ್ನಿ, ಜಲ, ವಾಯು, ಭೂಮಿ ಈ ನಾಲ್ಕೂ ಭೂತಗಳ ಚೇಷ್ಟೆಗಳನ್ನು ಮಕ್ಕಳಂತೆ ಗಮನಿಸಿ, ಅವೆಲ್ಲವುಗಳನ್ನು ಬಯಲು ತನ್ನ ಗರ್ಭದಲ್ಲಿ ಜೋಪಾನವಾಗಿ ಬಂಧಿಸಿಕೊಂಡಿದೆ. ಗರ್ಭ ಧರಿಸಿದ ತಾಯಿ ಹೊಟ್ಟೆಯಲ್ಲಿರುವ ತನ್ನ ಮಕ್ಕಳ ತುಂಟಾಟದಂತೆ ! ಗರ್ಭದಲ್ಲಿರುವ ಮಕ್ಕಳು ತಾಯಿಗೆ ಭಾರವಲ್ಲ. ಅದರ ತುಂಟಾಟವೂ ಭಾರವಲ್ಲ ; ಬದಲಾಗಿ ಬಲು ಆನಂದ ತರುತ್ತದೆ.

ಗಾಳಿ ಚಲಿಸಿದರೇನು ಬಯಲು ಚಲಿಸುವುದೆ ? ಬಯಲಲ್ಲಿ ಬೆಂಕಿ ಬುಸಗುಡವುದಲ್ಲದೆ ಬಯಲು ಬುಸಗುಡುವುದೆ ? ಬಯಲಿಗೆ ಬೆಂಕಿ ತಾಗುವುದೆ ? ಚಲಿಸುವ ಗಾಳಿ, ಉರಿಯುವ ಬೆಂಕಿಯ ನರ್ತನಗಳೆರಡೂ ಬಯಲಲ್ಲಿಯೇ. ಇವೆರಡರ ನರ್ತನೆ ಬಯಲಲ್ಲಿಯೇ. ಸಹಜವಾಗಿಯೇ ಇವುಗಳನ್ನು ವೀಕ್ಷಿಸುವುದು.

ಭೂಮಿ ಬಿರಿದು ಲಾವಾರಸ ಚಿಮ್ಮಿದರೂ, ಜಲ ಸುನಾಮಿಯಾಗಿ ರಭಸದಿಂದ ತನ್ನ ರುದ್ರ ನರ್ತನಗೈದರೂ ಬಯಲಿಗಿಲ್ಲ ಭಯ ! ಬದಲಾಗಿ ತನಗೆ ಆನಂದವೇ ಆನಂದ. ಏಕೆಂದರೆ ಬಯಲು ಈ ನಾಲ್ಕರ ಸಂಚನರಿದು ಇವುಗಳ ಸೃಷ್ಟಿಗೆ ಕಾರಣವಾಗಿದೆ.

ಪಂಚಭೂತಗಳಿಂದ ಹುಟ್ಟಿದ ತನುವಿಗೆ ಪಂಚಭೂತಗಳನ್ನು ಅರಿಯುವ ಶಕ್ತಿಯಿದೆ, ಆದರೂ ವಾಯುರೂಪದಿ ಚಲಿಸುವ ಮನದಿಂದಾಗಿ ಮನ ಹರಿದಾಡಿದಲ್ಲೆಲ್ಲ ತನು ಹರಿದಾಡಿ ಸುಖ ದುಃಖಕ್ಕೆ ಒಳಗಾಗುತ್ತದೆ. ಹರಿದಾಡುವ ಮನವನ್ನು ನಿಲ್ಲಿಸಲು ಜಪ ತಪ ಹೋಮ ಹವನ ಮಾಡಿ ದಣಿಯುತ್ತದೆ. ನಿಲ್ಲಿಸಿದೆನೆಂದು ತನುವಿಗೆ ವೇಷ ಹಾಕಿ ನುಡಿಯುತ್ತದೆ. ವೇಷ ಭಾಷೆ ಜಪ ತಪ ಕೆಲಸ ಮಾಡುವುದಿಲ್ಲವೆಂದು ಮನಕ್ಕೆ ತಿಳಿಯುವುದೇ ಇಲ್ಲ.

ತನು ಐದು ಭೂತಗಳಿಂದಲೇ ಹುಟ್ಟಿ ಬಯಲು ಎನ್ನುವ ಮಹಾಭೂತವನ್ನು ತಿಳಿಯದೆ ಇನ್ನುಳಿದ ನಾಲ್ಕು ಭೂತಗಳಿಗೆ ಬಲಿಯಾಗುತ್ತದೆ. ತನುವೇ ಪಂಚಭೂತವಾಗಿ ಭೂತಗಳಿಗೇ ಬಲಿಯಾಗುವುದೆಂದರೇನು ? ಇದು ಸರ್ವವೂ ಬಲ್ಲೆವೆಂಬ ತನುವನ್ನು ಆವರಿಸಿದ ಮನದ ಕಾಡಾಟ ; ಅಷ್ಟ ಮದಗಳ ಆಟ !

ಅನ್ನದ ಮದ : ಅನ್ನ ತನ್ನದಲ್ಲ ; ಅದನ್ನು ಬೆಳೆದ ಭೂಮಿಯೂ ತನ್ನದಲ್ಲ ; ಬೀಜವೂ ತನ್ನದಲ್ಲ ; ಬೆಳೆದ ಬೆಳೆಯೂ ತನ್ನದಲ್ಲ. ಆದರೂ ಮನದ ಆಟ ವಿಪರೀತ. ಇದೆಲ್ಲವನ್ನೂ ತಿಳಿಯುವ ತನುಗಳೆಲ್ಲ ಒಂದೇ ಆದರೂ ಒಂದಕ್ಕೆ ಅನ್ನ ನೀಡುವ ದಾನಿಯ ಮದ. ಮತ್ತೊಂದಕ್ಕೆ ಬೇಡುವ ಮದ. ತನು ಒಂದೇ ಆದರೂ ಬೇಡುವ ನೀಡುವ ಅಜ್ಞಾನದ ಆಟ. ಅಹಂಕಾರದ ಆಟ, ಕುಲಛಲದ ಆಟ, ಯೌವ್ವನದ ಆಟ, ಜಪ ತಪದ ಆಟ, ಆತ್ಮ ವಿದ್ಯೆಯ ಆಟ.

ಹೀಗೆ ಆಟ ಆಡುವುದರಲ್ಲಿಯೇ ತನುವಿನ ಆಯುಷ್ಯ ಕಳೆದು ಹೋಗುತ್ತದೆ. ತನುವಿನಲ್ಲಿಯೇ ತನ್ಮಯವಾದ ಬಯಲು ತನುವಿಗೆ ಒಲಿಯುವುದೇ ಇಲ್ಲ. ಮಹಾ ಬಯಲೆಂದರೆ ಬೆಳಕು. ಬೆಳಕಿನ ನೆರಳೇ ಮನ. ನೆರಳು ಬೆಳಕೆಂದರೆ ಯಾರಾದರೂ ಒಪ್ಪುತ್ತಾರೆಯೇ? ಹಾಗೆ ಮನವೆಂಬ ಕತ್ತಲು ತನುವಿಗೆ ಜಪತಪದ ಗೀಳು ಹಚ್ಚಿ, ತಾನು ಜ್ಞಾನಿ ಬೆಳಕು ಎಂದು ಬೊಗಳುತ್ತದೆ ಮಹಾಬಯಲಿನ ಸಂಚನರಿಯದೆ.

220

ಹಲವಂದ ಚಂದದಲ್ಲಿ ಹಾಡಿದರೇಯ್ಯ, ಲಿಂಗದನೆಲೆಯನರಿ ಯದನ್ನಕ್ಕ ?
ಕಲಿಯಾಗಿ ವೈರಾಗ್ಯ ತಲೆಗೇರಿ ಹರಿದಾಡಿದರೇನಯ್ಯಾ ?
ಮಾಯೆಯ ಬಲೆಯ ನುಸುಳಿಸಿದಲ್ಲದೆ ನಿಮ್ಮ ನೆಲೆಯ ಕಾಣಬಾರದು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಮನ ಮಾಯೆಯಾಗಿ ತನುವನ್ನೇ ಕಾಡುತ್ತದೆ. ಅದು ಹಾಡುವಂತೆ ಮಾಡುತ್ತದೆ. ಆಡುವಂತೆ ಮಾಡುತ್ತದೆ. ವೈರಾಗ್ಯ ತಲೆಗೇರಿ ಹರಿದಾಡುವಂತೆ ಮಾಡುತ್ತದೆ. ತನುವಿಗೆ ಬಿದ್ದ ಮಾಯೆಯ ಬಲೆಯನು ಕಿತ್ತೆಸೆಯದೆ ತನುವಿನೊಳಗೆ ಸಂಗಮವಾದ ಸಂಗಯ್ಯನ ನೆಲೆಯನು ಕಾಣಲು ಬರುವುದಿಲ್ಲ.

ಧೃತರಾಷ್ಟ್ರನಿಗೆ ಮಗನ ಮೇಲಿನ ಮೋಹವಾಗಿ ಕಾಡಿತು. ಭೀಷ್ಮನಿಗೆ ಪ್ರತಿಜ್ಞೆಯಾಗಿ ಕಾಡಿತು. ಕರ್ಣ ದ್ರೋಣರಿಗೆ ಕೌರವನ ರಿಣವಾಗಿ ಕಾಡಿತು. ಧರ್ಮರಾಜನಿಗೆ ಧರ್ಮದ ಪ್ರತಿಷ್ಠೆಯಾಗಿ ಕಾಡಿತು. ಆಯಾ ತನು ಆಯಾ ವಿಷಯದನುಸಾರವಾಗಿ ಮಾಯೆಯ ಬಂಧನದಲ್ಲಿದೆ. ಮನದ ಒಂದು ರೂಪವೇ ಮಾಯೆ. ತನು ತನ್ನನ್ನು ಆವರಿಸಿದ ಮನದಿಂದಲೇ ಬಂಧಿಯಾಗಿದೆ. ಆದರೂ ಅದಕ್ಕೆ ಅರಿವಿಲ್ಲ.ಅದರಿಂದ ಬಿಡುಗಡೆಯಾಗಬೇಕೆಂಬ ಬಯಕೆಯಿಲ್ಲ. ಬಿಡುಗಡೆಯಾಗಲು ತನುವಿಗೆ ಸಾಧ್ಯವೇ ಇಲ್ಲ. ಏಕೆಂದರೆ ಅದು ಅರಿವಿನ ಸೊತ್ತು . ಮಾಯೆಯ ತೊತ್ತು . ಮನಕ್ಕೆ ಬಿಡುಗಡೆ ಹೊಂದಬೇಕೆಂಬ ಬಯಕೆ ಉಂಟಾದಾಗಲೇ ಸಾಧ್ಯವಾಗುತ್ತದೆ. ಹಾಗೆ ಬಯಕೆಯಾಗುವುದು ಯಾವುದೇ ಒಂದು ತನುವಿಗೆ ಮಾತ್ರ.

ಮಹಾಭಾರತದಲ್ಲಿ ಎಷ್ಟೊಂದು ಜನ,ಅವರೆಲ್ಲ ಮಾಯೆಗೆ ಸಿಲುಕಿದವರೇ ಆಗಿದ್ದಾರೆ. ಪಾಂಡವರು, ಕೌರವರು, ಭೀಷ್ಮ, ದ್ರೋಣಾದಿಗಳು ಕೂಡಾ ಮಾಯೆಗೆ ಸಿಲುಕಿದವರೇ ! ಶ್ರೀಕೃಷ್ಣನೊಬ್ಬನೇ ಮಾಯೆಗೆ ಸಿಲುಕದಾತ, ಭ್ರಮೆ ಕಳೆದುಕೊಂಡು ಬ್ರಹ್ಮಜ್ಞಾನಿಯಾದಾತ. ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಲಿಂಗದ ನೆಲೆಯನು ಅರಿದಾತ. ವಿರಾಟ ಸ್ವರೂಪಿಯೇ ತಾನಾದಾತ.

221

ಹಸನ ಮಾಡಿ ಹರಗಿ ಹೊಲದಲ್ಲಿ ಕಸವ ಬಿತ್ತುವ ಮರುಳರಂತೆ,
ವಿಷಯ ಸುಖಂಗಳಿಗೆ ಹುಸಿಯನೆ ನುಡಿದು,
ಗಸಣೆಗೊಳಗಾಗುವ ಮನುಜರೆತ್ತ ಬಲ್ಲರೊ,ಮಹಾಘನ ಗುರುವಿನ ನೆಲೆಯ?
ಮರಣದ ಬಾಧೆಗೊಳಗಾದವರು ನಿಮ್ಮನೆತ್ತ ಬಲ್ಲರೊ ;
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಅರಿವೆಂಬ ಗುರುವಿನ ನೆಲೆ ಕಂಡುಕೊಳ್ಳುವುದು ಪ್ರತಿಯೊಂದು ತನುವಿನ ಧರ್ಮ. ಆ ತನುವಿನ ಮನದ ಧರ್ಮ. ಆದರೆ ಆ ಶಿಕ್ಷಣವೇ ತನುವಿನ ಕುಲದಲ್ಲಿ ಜಾರಿಯಲ್ಲಿ ಇಲ್ಲ. ಬದಲಾಗಿ ಹಸನು ಮಾಡಿ, ಹರಗಿ ಬಿತ್ತಬೇಕಾದ ಹೊಲವೆಂಬ ತನುವಿನಲ್ಲಿ ವಿಷಯದ ಕಸವನ್ನೆ ಬಿತ್ತಿಕೊಳ್ಳುತ್ತದೆ.

''ವಿಷಯವೆಂಬ ಹಸುರೆನ್ನ ಮುಂದೆ ತಂದು ಪಸರಿಸದಿರಯ್ಯಾ, ಪಶುವೇನು ಬಲ್ಲುದು ಹಸುರೆಂದೆಳೆಸುವುದು'' ಎಂದು ಅಣ್ಣ ಬಸವಣ್ಣನವರು ಹಾಡುವ ಮೂಲಕ ಕಾಯದಲ್ಲಿ ಕಸ ಬಿತ್ತುವ ಕಾಯಕಕ್ಕೆ ತಡೆ ಒಡ್ಡುವ ಸೂತ್ರವನ್ನು ರಚಿಸಿದರು.

ತನುವಿನ ಮನೋಧರ್ಮ ವಿಚಿತ್ರವಾಗಿದೆ. ಮನಕ್ಕೆ ಬೇಕಾದ ಸುಖ ತನುವಿನ ಅರಿವೆಂಬ ಗುರುದೇವನಿಗೆ ಬೇಡ. ತನುವನ್ನು ಮನ ಆವರಿಸಿದೆ. ಆದರೂ ತನುವಿನ ಏಳ್ಗೆ ಮನ ಬಯಸುವುದಿಲ್ಲ. ಅರಿವೆಂಬ ಗುರುದೇವ ತನುವಿನಲ್ಲಿ ಜ್ಞಾನದ ಬೀಜ ಬಿತ್ತಿ, ಜ್ಞಾನದ ಬೆಳೆ ಬೆಳೆದು, ಜ್ಞಾನದ ಫಲ ಉಣ್ಣಲು ಬಯಸುತ್ತಾನೆ. ಮನವೆಂಬ ಪಿಶಾಚಿ ಅಜ್ಞಾನದ ಬೀಜ ಬಿತ್ತಿ ಅಜ್ಞಾನದ ಬೆಳೆ ಬೆಳೆದು ತನುವಿನ ಮೂಲಕ ಅಜ್ಞಾನದ ಫಲ ಉಣ್ಣುತ್ತದೆ.

ತನುವಿನ ಕಣ್ಣುಗಳಲ್ಲಿ ಜ್ಞಾನ ಭರಿತವಾಗಿದೆ. ಮನ ಕಣ್ಣನ್ನು ಆವರಿಸಿ ತನ್ನ ಕಾಕದೃಷ್ಟಿಯಿಂದ ನೋಡುತ್ತದೆ. ಆ ಕಣ್ಣಿಗೆ ತನ್ನಂತೆ ಇರುವ ತನುಗಳು ಕಾಣುವುದೇ ಇಲ್ಲ. ಬದಲಾಗಿ ತನುವನ್ನು ಕಾಮದಿಂದ, ದ್ವೇಷ, ಅಸೂಯೆಯಿಂದ ನೋಡುತ್ತದೆ, ನೋಡಿದ ವಸ್ತುಗಳೆಲ್ಲ ತನಗೆ ಬೇಕೆಂದು ತನುವಿಗೆ ಸಂಚಲನವನ್ನುಂಟು ಮಾಡುತ್ತದೆ. ಮನ ಮತ್ತು ಜ್ಞಾನದ ದ್ವಂದ್ವಗಳು ಕಣ್ಣಿಗೆ ತಿಳಿಯುವುದಿಲ್ಲ. ಏಕೆಂದರೆ ಕಣ್ಣು ಸೂರ್ಯನಂತೆ ಬೆಳಕು ಚೆಲ್ಲುವುದಷ್ಟೇ ಅದರ ಕೆಲಸ. ಅದು ಜಡ. ಜ್ಞಾನದ ದೃಷ್ಟಿಕೋನ ಮನಕ್ಕೆ ತಿಳಿಯದು ; ಮನದ ಅಜ್ಞಾನವನ್ನು ಜ್ಞಾನ ಬೆಳಗದು. ಈ ದ್ವಂದ್ವ ಯುದ್ಧದಲ್ಲಿ ಮನಕ್ಕೆ ಜಯ ಲಭಿಸಿದರೆ ತನುವಿಗೆ ಮುಪ್ಪು. ಮನದ ಸುಖ ತನುವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಜೇಲಿಗೆ ತಳ್ಳುತ್ತದೆ. ಮತ್ತು ಸೇಡು ತೀರಿಸಿಕೊಳ್ಳಲು ತನುವನ್ನೇ ದುರ್ಬಳಕೆ ಮಾಡಿಕೊಳ್ಳುತ್ತದೆ. ಜ್ಞಾನ ಈ ವಿಷಯದಲ್ಲಿ ನಿರ್ಭಯ. ಅದಕ್ಕೆ ಆಲಯವಾದರೇನು? ಜೇಲಾದರೇನು? ಎರಡೂ ಒಂದೇ.

ಕಣ್ಣಲ್ಲಿರುವ ಜ್ಞಾನವನ್ನು ಕಣ್ಣನ್ನು ಆವರಿಸಿದ ಮನವೇ ತಿಳಿಯಬೇಕು. ಆ ಜ್ಞಾನವನ್ನು ಬಳಸಿ ಕಣ್ಣಿನಿಂದ ನೋಡಿದರೆ ಸರ್ವ ಜಗತ್ತು ಬೆಳಗಿಂಗೆ ಬೆಳಗಾಗಿ ಬೆಳಗುವುದು ಕಾಣುತ್ತದೆ. ಹಾಗೆ ನೋಡುವ ಬದಲು ಮನ ತನ್ನ ಕಸವನ್ನು ಕಣ್ಣಲ್ಲಿ ಚೆಲ್ಲಿ ಆ ಕಣ್ಣಿನ ಮೂಲಕ ನೋಡುತ್ತದೆ. ಚರ್ಮದಲ್ಲಿ ಕಸವನ್ನು ಚೆಲ್ಲಿ ಆ ಚರ್ಮದ ಮೂಲಕ ಮುಟ್ಟುತ್ತದೆ. ಮೂಗಿನಲ್ಲಿ ಮನ ತನ್ನ ಕಸವನ್ನು ಚೆಲ್ಲಿ ಅದರ ಮೂಲಕವೇ ಮೂಸಿಸುತ್ತದೆ. ಕಿವಿಯಲ್ಲಿ ತನ್ನ ಅಜ್ಞಾನದ ಕಸ ಚೆಲ್ಲಿ ಅದರ ಮೂಲಕ ಕೇಳುತ್ತದೆ. ನಾಲಿಗೆಯಲ್ಲಿ ಮನ ಕಸ ಚೆಲ್ಲಿ ಆ ಕಸದ ಮೂಲಕ ರುಚಿಸುತ್ತದೆ. ಹೀಗೆ ತನುವಿನ ಜ್ಞಾನೇಂದ್ರಿಯಗಳು ಹಸನು ಮಾಡಿದ ಹೊಲದಂತಿದ್ದರೂ, ಆ ಹೊಲದಲ್ಲಿ ಮನ ಅಜ್ಞಾನದ ಕಸ ಬಿತ್ತಿ ಅಜ್ಞಾನವನ್ನೇ ಬೆಳೆಯುತ್ತದೆ.

ಗಸಣೆಗೊಳಗಾಗುವ ಮನುಜರೆತ್ತ ಬಲ್ಲರೊ , ಮಹಾಘನ ಗುರುವಿನ ನೆಲೆಯ ? ಮರಣ ಬಾಧೆಗೊಳಗಾದವರು ನಿಮ್ಮನೆತ್ತ ಬಲ್ಲರೊ :

ತನು ಹಸನು ಮಾಡಿದ ಹೊಲ. ಅದು ಯಾವ ತನುವಾದರೇನು ? ಪ್ರತಿ ತನುವೂ ಜ್ಞಾನ ತನುವೇ ಆಗಿದೆ. ಹಸನಾದ ತನುವನ್ನು ಮನ ಆವರಿಸಿ ತನ್ನ ಅಜ್ಞಾನದ ಕಸವನ್ನು ಬಿತ್ತಿ ತನುವನ್ನು ಬಳಸಿಕೊಂಡು ಸುಖಿಸುತ್ತದೆ. ಮನದ ಗಸಣೆಗೆ ಒಳಗಾದ ಮನುಜ ತನುವನ್ನು ನೋಡಿ ಆ ತನುವನ್ನೇ ನಿಂದಿಸುತ್ತಾನಲ್ಲದೆ ಮನವನ್ನು ನೋಡುವುದಿಲ್ಲ. ತನುವಿನಲ್ಲಿ ತನ್ಮಯವಾದ ಮಹಾಘನ ಗುರುವಿನ ನೆಲೆಯನ್ನು ನೋಡುವುದಿಲ್ಲ. ಮರಣ ಬಾಧೆಗೊಳಗಾದ ಮನುಜ

ಅರಿವೆಂಬ ಗುರುದೇವನನು ಎತ್ತ ಬಲ್ಲ ? ಇದು ಜ್ಞಾನಿಗೆ ಮಾತ್ರ ಸಾಧ್ಯ.

ಸಿದ್ಧಾರ್ಥನೆಂಬ ರಾಜ ಅಂಗುಲಿಮಾಲನನ್ನು ಶಿಕ್ಷಿಸಿ ಆತನ ತನುವಿಗೆ ಮರಣ ದಂಡನೆ ನೀಡಿದರೆ, ಬುದ್ಧ ತನುವಿನಲ್ಲಿ ತನ್ಮಯವಾದ ಬುದ್ಧನನ್ನು ಅಪ್ಪಿಕೊಂಡು ಮನವೆಂಬ ಅಂಗುಲಿ ಮಾಲನಿಗೆ ಶಿಕ್ಷೆ ನೀಡುತ್ತಾನೆ. ಮನವೆಂಬುದು ತನುವನ್ನು ಆವರಿಸಿದ ಕತ್ತಲು ಬೆಳಕಿನಿಂದ ಮಾತ್ರ ಕರಗಿ ಬೆಳಕಾಗುತ್ತದೆ. ಬೆಳಕಿಂಗೆ ಬೆಳಕಾಗಿ ಬೆಳಗುತ್ತದೆ. ಬದಲಾಗಿ ಹುತ್ತವ ಹೊಡೆದರೆ ಹಾವು ಸಾಯುವುದಿಲ್ಲ, ತನು ಹುತ್ತ ; ಮನ ಹಾವು. ತನುವಿನಲ್ಲಿಯೇ ತನ್ಮಯವಾದ ಜ್ಞಾನ ತನುವನ್ನು ಬೆಳಗಿದರೆ, ತನುವನ್ನು ಆವರಿಸಿದ ಮನವೆಂಬ ಹಾವು ಆ ತನುವಿಗೆ ಆಭರಣ ವಾಗುತ್ತದೆ. ಮನವೆಂಬ ಹಾವನ್ನು ಆಭರಣ ಮಾಡಿಕೊಂಡ ತನುವೇ ನಾಗಭೂಷಣ ತನು ! ನಾಗಾಭರಣನ ತನು!

222

ಹಸಿವಿನಾಸೆಗೆ ಅಶನವ ಕೊಂಬರು, ವಿಷಯದಾಸೆಗೆ ಹುಸಿಯ ನುಡಿವರು.
ಹಸನಾಗಿ ವ್ಯಸನವ ಹೊತ್ತು , ಭಸಿತನದಿ ಹೂಸಿ ವಿಶ್ವ ತಿರುಗಿದರು.
ಈ ಹುಸಿಯ ಬಿಟ್ಟು, ಮಾಯೆಯ ಮುಸಕವ ಮಾಣ್ದಲ್ಲದೆ-
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನ ಕೂಡ.

ಹಸಿವಿನ ಆಸೆಗೆ ಮನ ತನುವಿಗೆ ಅರಿವಿನ ವೇಷ ಹಾಕುತ್ತದೆ. ಆದರೂ ಕಾವಿ ಧರಿಸಿದ ಆ ತನು ಸ್ವಾಮಿಯಲ್ಲ, ಗುರುವಲ್ಲ, ಮಠ-ಪೀಠಾಧಿಪತಿಯಲ್ಲ, ಜಗದ್ಗುರುವಂತೂ ಮೊದಲೇ ಅಲ್ಲ. ಹಾಗೆಯೇ ಮನ ವಿಷಯದ ಆಸೆಗಾಗಿ ತನುವನ್ನು ಹಿಡಿದುಕೊಂಡು ಹುಸಿಯನ್ನು ನುಡಿಯುತ್ತದೆ. ಆದರೂ ಆ ತನು ಸಹಜ ತನುವಲ್ಲ. ತನುವಿಗೆ ವೇಷ ಹಾಕಿ ವಿಶ್ವ ಪರ್ಯಟನೆ ಮಾಡಿದರೆ ಆ ತನುವಿನಲ್ಲಿ ಹಲವು ಮಾಹಿತಿಗಳ ಕಸ ತುಂಬುತ್ತದೆಯೇ ಹೊರತು ತನುವಿನಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನ ದರ್ಶನವಾಗುವುದಿಲ್ಲ.

ತನುವಿಗೆ ಹಾಕಿದ ಪಾತ್ರ ಕಳಚಿ, ಹುಸಿಯನು ಆಡುವುದು ಬಿಟ್ಟು, ಮನ ತನ್ನ ಕ್ಷಣಿಕ ಸುಖವನ್ನು ತೊರೆದು ಶಾಶ್ವತ ಸುಖಕ್ಕಾಗಿ ಘನದೆಡೆಗೆ ಪಯಣಿಸಿದಾಗ ಮನಕ್ಕಂಟಿದ ಮಾಯೆ ಕಳಚಿ ಬೀಳುತ್ತದೆ. ಮನವೇ ಘನದಲ್ಲಿ ಬೆರೆತು ಘನ ಮನವಾಗುತ್ತದೆ.

ಮನ ತಾನು ಆವರಿಸಿದ ತನುವಿನಲ್ಲಿಯೇ ಕಂಡುಕೊಳ್ಳಬೇಕಾದ ಅರಿವಿನ ಕಾಯಕವನ್ನು ಕಾಯಕ್ಕೆ ವೇಷ ಹಾಕಿ ಹುಡುಕಿದರೆ ಲಭ್ಯವಾಗುವುದಿಲ್ಲ. ಕಾಯ ಗುರುವೇಷದಲ್ಲಿದ್ದು ಹುಸಿ ಸುಖವನ್ನು ಅನುಭವಿಸುವುದೇ ವಿನಹ ಸಹಜ ಸುಖ ಕಾಯಕ್ಕೆ ಕಾಯವನ್ನು ಆವರಿಸಿದ ಮನಕ್ಕೆ ದಕ್ಕುವುದಿಲ್ಲ.

ಕಾಯದೊಳಗೆ ಸಂಗಮವಾದ ಅರಿವಿನ ಸಂಗಯ್ಯನನ್ನು ಕಾಯಕ್ಕೆ ಆವರಿಸಿದ ಮನ ಕಾಯದಲ್ಲಿಯೇ ಕೂಡದ ವಿನಹ ಶಾಶ್ವತ ಸಹಜ ಸುಖ ಮನಕ್ಕೆ ಲಭ್ಯವಾಗುವುದಿಲ್ಲ. ಮನ ಘನ ಮನವೂ ಆಗುವುದಿಲ್ಲ. ಇದು ಅಪ್ಪಣ್ಣ ಶರಣರ ಅನುಭವದ ಸೂತ್ರ.

223

ಹಾಕಿದ ಮುಂಡಿಗೆಯ ಎತ್ತುವವರಿಲ್ಲ.
ಎತ್ತಿದ ಮುಂಡಿಗೆಯ ದೃಷ್ಟದಲ್ಲಿ, ಶ್ರುತದಲ್ಲಿ ಗೆದ್ದು, ಇಸಕೊಂಬವರಿಲ್ಲ.

ಈ ಉಭಯದ ಗೊತ್ತನರಿಯದೆ ಕೆಟ್ಟರು,
ನಾವು ಭಕ್ತ ಜಂಗಮರೆಂಬುವುರೆಲ್ಲ.ಅದಂತಿರಲಿ.
ನಾನು ನೀನು ಎಂಬುಭಯದ ಗೊತ್ತನರಿದು, ದೃಷ್ಟದಲ್ಲಿ ಶ್ರುತದಲ್ಲಿ
ಗೆದ್ದು ಕೊಟ್ಟು, ನ್ಯಾಯದಲ್ಲಿ ಜಗವನೊಡಂಬಡಿಸಿ ಕೊಟ್ಟು,
ಆ ಸಿಕ್ಕಿ ಹೋಗುವ ಮುಂಡಿಗೆಯ ಎತ್ತಿಕೊಂಡು,
ಸುತ್ತಿ ನೋಡಿದರೆ ಬಟ್ಟ ಬಯಲಾಗಿರ್ದಿತ್ತು.
ಆ ಬಟ್ಟ ಬಯಲ ದಿಟ್ಟಿಸಿ ನೋಡಲು, ನೆಟ್ಟಗೆ ಹೋಗುತ್ತಿದ್ದೆ.
ಹೋಗ ಹೋಗುತ್ತ ನೋಡಿದರೆ, ನಾ ಎತ್ತ ಹೋದೆನೆಂದರಿಯೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ನಾನು ಭಕ್ತ, ನಾನು ಜಂಗಮ, ನಾನು ಆಶ್ರಮವಾಸಿ ಎಂದು ಹೇಳುವ ತನುಗಳೊಳಗೆ ಮುಂಡಿಗೆ ಬಿದ್ದಿದೆ. ತನುವಿನಲ್ಲಿಯೇ ನಾನು ಎನ್ನುವ ಅಹಂಕಾರ ಅವನೊಂದಿಗೆ ಹೊಲಿಗೆಯಾಗಿ ಅವನನ್ನು ಕಾಣದಂತೆ ಮಾಡಿದೆ. ನನಗೆ ನಾನೇ ಹೊಲಿಗೆ ಬಿಚ್ಚಿಕೊಂಡು ನಾನು ಅವನನ್ನು ಪೂಜಿಸದಂತೆ ಮಾಡಿದೆ. ಈ ನಾನು ಅವನನ್ನು ಕಾಣದ ವಿನಹ ನಾನು ಹೇಗೆ ಭಕ್ತ ? ನಾನು ಹೇಗೆ ಜಂಗಮ? ನಾನು ಹೇಗೆ ಆಶ್ರಮವಾಸಿ ಎಂದು ನನ್ನನ್ನು ನಾನೇ ಪ್ರಶ್ನೆ ಹಾಕಿಕೊಂಡು ನನ್ನ ಮಾಯದ ಹೊಲಿಗೆ ನಾನೇ ಬಿಚ್ಚಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಕಾಣ ಬರುವ ಈ ಕಾಯದಲ್ಲಿ ಕಾಣ ಬರದ ನಾನು ಎಂಬ ಮನ, ನೀನು ಎಂಬ ಘನದ ಗೊತ್ತನರಿಯಲು ನಾನು ಎಂಬ ಅಹಂಕಾರಿಗೆ ಸಾಧ್ಯವಾಗುತ್ತಿಲ್ಲ. ಆದರೂ ನಾನು ಭಕ್ತ, ನಾನು ಜಂಗಮ ಎನ್ನುವ ಅಹಂಕಾರ ಬಿಟ್ಟಿಲ್ಲ. ಕಾಯದಲ್ಲಿಯೇ ಹಾಕಿ ಹೊಲಿಯಲ್ಪಟ್ಟ ಮುಂಡಿಗೆಯನ್ನು ಬಿಚ್ಚಿಕೊಂಡು ಕಾಯವನ್ನೇ ಕೈಲಾಸ ಮಾಡಿಕೊಳ್ಳಲು ಕಾಯಕ್ಕೆ ಸಾಧ್ಯವಾಗುತ್ತಿಲ್ಲ.

ನಾನು ಭಕ್ತ, ನಾನು ಜಂಗಮ ಎಂದು ಜಂಬ ಕೊಚ್ಚಿಕೆಂಡು ನುಡಿಯಬಹುದು. ಆದರೆ ಕಾಯದಿಂದಲೇ ಕಾಯಕ್ಕೆ ಸಿದ್ಧವಾಗಬೇಕಲ್ಲ ನಾನು ಭಕ್ತ-ನಾನು ಜಂಗಮ ಎನ್ನುವುದು. ನನ್ನ ದೃಷ್ಟಿಗೆ ನಿಲುಕಬೇಕಲ್ಲ ; ನನ್ನ ಕಿವಿಯಲ್ಲಿ ನಾನು ಜಂಗಮ ಎನ್ನುವುದು ನನಗೆ ಸಿದ್ಧವಾಗಬೇಕಲ್ಲ?

ಭಕ್ತ ಜಂಗಮ ಎನ್ನುವುದು ನಾನು ಎಂಬ ಅಹಂಕಾರದ ವೇಷದಿಂದ ಸಿದ್ಧವಾಗುವುದಿಲ್ಲ, ಆ ವೇಷಕ್ಕೆ ಜನ ಮರುಳಾಗಿ, ಭಕ್ತಿ ಮಾಡಿ, ಜಂಗಮ ಭಕ್ತ ಎಂದು ಪ್ರಮಾಣಿಸಿ ನುಡಿದರೂ ಸಿದ್ಧವಾಗುವುದಿಲ್ಲ. ಇದು ಕಾಯದ ಕಾಣಬಾರದ ಮುಂಡಿಗೆ. ತನಗೆ ತಾನೇ ತಿಳಿಯುತ್ತಾ ಹೋದರೆ ಕಂಡುಬರುವ ಮುಂಡಿಗೆ. ಆ ಮುಂಡಿಗೆಯ ಗಂಟನ್ನು ನಾನು ಎನ್ನುವ ಅಹಂಕಾರ ಅಳಿದು ಆ ಅಹಂಕಾರವೇ ಅರಿವಾಗಿ ಮೆಲ್ಲಗೆ ಮುಂಡಿಗೆಯನ್ನು ತನಗೆ ತಾನೇ ಬಿಚ್ಚಿಕೊಳ್ಳಬೇಕು. ಅಲ್ಲಿ ಇಲ್ಲದ ಅವನ ದರ್ಶನವಾಗುತ್ತದೆ. ಮುಂಡಿಗೆಯೂ ಇಲ್ಲ, ನಾನೂ ಇಲ್ಲ, ಅವನೂ ಇಲ್ಲ ಬರೀ ಬಯಲು ದರ್ಶನವಾಗುತ್ತದೆ. ತಾನೂ ಬಯಲು, ಅವನೂ ಬಯಲು ! ತನ್ನನ್ನು ಅವನನ್ನು ಹೊತ್ತ ಕಾಯವೂ ಬಯಲು ! ತಾನು ಬಯಲು !! ತಾನು ಬಯಲು ಬಿತ್ತಿದ ಬೀಜವೆಂದು ತನಗೇ ಅರಿವಾಗಿ, ತನು ಅವನೊಂದಿಗೆ ಆ ಬಯಲ ಕಾಯದಲ್ಲಿಯೇ ಐಕ್ಯವಾಗಿ, ಬಯಲನ್ನೇ ದಿಟ್ಟಿಸುತ್ತಾ ಬಟ್ಟ ಬಯಲಾಗಿ, ಹೋಗುತ್ತಾ ಹೋಗುತಾ, ನಾ ಎತ್ತ ಹೋದೆನೆಂದು ಅರಿಯದೆ ನಾ ಎಂಬುದು ನಷ್ಟವಾಗಿ ಬಯಲು ಬಯಲಾಗಿ ಉಳಿಯುತ್ತದೆ. ಆಗ ಕಾಣುವ ಕಾಯಗಳೆಲ್ಲ ಬಯಲಾಗಿ ಕಾಣುತ್ತವೆ.

224

ಹಾಲ ಕಂಡ ಬೆಕ್ಕು ಮೆಲ್ಲುಲಿ ತೆಗೆದು ಕುಡಿವುತ್ತಿರಲು,
ಬಾಲನಿಗಿರ್ದ ಬೆಕ್ಕು ಹಾಲ ಕುಡಿವುತ್ತಿದೆಯೆಂದು ನಾರಿ ಕಂಡು,
ಗುದಿಗೆಯಲಿ ಹೊಡೆದರೆ,ಏಳುತ್ತ ಬೀಳುತ್ತ ಕಾಲ್ಗೆಡೆದು ಓಡುವಂತೆ,
ಏನ ಹೇಳುವೆಯಯ್ಯಾ ? ಮರ್ತ್ಯದ ಮನುಜರು ಕರಣಂಗಳ ಹರಿಯ ಬಿಟ್ಟು,
ತಮ್ಮ ಬಾಳುವೆಯ ಮರೆದು,
ಕಾಲನ ಬಾಯಲ್ಲಿ ಅಳುತ್ತ ಮುಳುಗುತ್ತಲಿಪ್ಪುದನಾದರೂ ಅರಿಯರು ನೋಡಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಹಾಲು ತನ್ನದೂ ಅಲ್ಲ ಇತರರದೂ ಅಲ್ಲ. ಅದು ಹಸುವಿನದು. ಕರುವಿಗಾಗಿ ಒಸರಿದ್ದು. ಹಾಲಿನ ಹಕ್ಕು ಕರುವಿನದು.ಆದರೆ ಮನುಷ್ಯ ಸ್ವಾರ್ಥಿ. ತನ್ನದೆಂದು ತನಗೆಂದು ಕರೆದು, ಕಡೆದು ಮೊಸರು ಮಜ್ಜಿಗೆ ಮಾಡಿ ಬೆಣ್ಣೆ ತೆಗೆದು ತುಪ್ಪ ಮಾಡಿ ತನ್ನದೆಂದು , ಇತರರು ತನಗೆ ನೀಡಿದರೆಂದು ಸವಿಯುತ್ತಾನೆ. ಅಂಗದಲ್ಲಿ ಅರಿವಿದ್ದರೂ ಅಂಗಕ್ಕೆ ಬಳಕೆಯಾಗಲಿಲ್ಲ. ಅಂಗ ಸಂಗ್ರಹ ಮಾಡಿಕೊಂಡ ಮರವೆಯ ಬಾಳಿನಲ್ಲಿ ಬದುಕುತ್ತದೆ ಹೊರತು ಅರಿವಿನ ಬಾಳುವೆ ಅಂಗಕ್ಕೆ ಬೇಕಿಲ್ಲ.

ಬೆಕ್ಕು ಸಹಜ. ಅದಕ್ಕೆ ಹಾಲು ತನ್ನದೆನ್ನುವುದೂ ತಿಳಿದಿಲ್ಲ, ಇತರರದು ಎನ್ನುವುದೂ ತಿಳಿದಿಲ್ಲ. ಹಸಿವಾದಾಗ ಹಾಲ ಹರವಿ ತೆಗೆದು ಬಾಲ ನಿಮಿರಿಸಿ ಆನಂದದಿಂದ ಕುಡಿಯುತ್ತದೆ. ಬೆಕ್ಕು ಸವಿಯುತ್ತಿರುವ ಆನಂದವನ್ನು ನಾರಿ ಸವಿಯಲು ಸಾಧ್ಯವಾಗುವುದಿಲ್ಲ. ಹಾಲು ನಾರಿಯದಲ್ಲ; ಬೆಕ್ಕಿನದೂ ಅಲ್ಲ. ಆದರೂ ನಾರಿ ಮಾರಿಯಾಗಿ ಗುದಿಗೆಯಿಂದ ಹೊಡೆದರೆ ಬೆಕ್ಕು ಕಾಲ್ದೆಗೆದು ಓಡುತ್ತದೆ. ಬೆಕ್ಕು ಪ್ರಶ್ನಿಸುವುದಿಲ್ಲ. ನಾರಿಗೆ ಹೊಳೆಯುವುದಿಲ್ಲ. ಬೆಕ್ಕಿನ ಜಾಗದಲ್ಲಿ ಮತ್ತೊಬ್ಬರಿದ್ದರೂ ಹೀಗೆ ಆಗುತ್ತಿತ್ತು.

ಬಸವಣ್ಣನವರು ಹಸು ಕದ್ದು ಕೊಂಡು ಹೋದ ಕಳ್ಳರನ್ನು ಕುರಿತು ಕರುವನ್ನು ಬಿಟ್ಟು ಹೋದರಲ್ಲ ಎಂದು ಚಿಂತಿಸುತ್ತಾರೆ. ಅಲ್ಲಿ ಉಂಬರೆ ಸಂಗ ; ಇಲ್ಲಿ ಉಂಬರೆ ಸಂಗ ಎಂದು ಆನಂದದಿಂದ ನುಡಿದು ಅರಿವಿನ ಸೂತ್ರವನ್ನು ಕಾಯಕ್ಕೆ ಎಟಕಿಸಿದ್ದಾರೆ. ಅಪ್ಪಣ್ಣ ಶರಣರು ಕೂಡಾ ಈ ವಚನದಲ್ಲಿ ಕಾಲನ ಬಾಯಿಗೆ ತಮ್ಮ ತಾವೇ ಸಿಲುಕುವ ಕಾರ್ಯಗಳನ್ನು ಕಂಡು ಮಮ್ಮಲ ಮರುಗಿದ್ದಾರೆ. ಇಂತಹ ಅರಿವಿನ ಸೂಕ್ಷ್ಮ ಸುಳುಹುಗಳು ಕಾಯಕ್ಕೆ ಸಿಗಲು ಸಾಧ್ಯವೆ ? ಕಾಯ ಈ ನಿಟ್ಟಿನಲ್ಲಿ ಯೋಚಿಸಲು ಎಂದಾದರೂ ಸಾಧ್ಯವಾದೀತು ಎಂಬ ಕಳಕಳಿ ಶರಣರದ್ದಾಗಿದೆ.

225

ಹಾಲಸಾಗರದೊಳು ತೇಲಾಡುತ್ತಿದ್ದು, ಚಿಲುಮೆಯ ನೀರಿಗೆ ಹರಿದಾಡಬೇಡ.
ಮೇಲುಗಿರಿ ಶಿಖರದ ಪಶ್ಚಿಮದಿ ತೇಲಾಡುತಿರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ತನು ಹಾಲಾಹಲವಲ್ಲ; ಹಾಲಸಾಗರ ! ಅಮೃತದ ಬುಗ್ಗೆ ! ಅರಿಯದೆ ಚಿಲುಮೆಯ ನೀರಿಗೆ ಹರಿದಾಡುತ್ತಿದೆ. ಅದು ಜಗದಗಲ ಮುಗಿಲಗಲ. ಅದರ ಶ್ರೀಚರಣ ಪಾತಾಳದಿಂದಲೂ

ಅತ್ತತ್ತ ಚಾಚಿಕೊಂಡಿದೆ. ತನುವಿನ ಶ್ರೀ ಮುಕುಟ ಬ್ರಹ್ಮಾಂಡದಿಂದತ್ತತ್ತಲೂ ಹಬ್ಬಿದೆ. ತನು ಗಮನಕ್ಕೆ ನಿಲುಕದ ಅಗಮ್ಯ. ಗೋಚರಕ್ಕೆ ನಿಲುಕದ ಅಗೋಚರ. ಯಾರೂ ಪ್ರಮಾಣಿಸಲು ಬಾರದ ಅಪ್ರಮಾಣ ಲಿಂಗವದು ; ಅಪ್ರತಿಮ ಲಿಂಗವದು. ಕಾಯದಲ್ಲಿ ಬಂದು ಚುಳುಕಾಗಿದೆ.

ಕಾಯವೆಂದರೆ ಹಿಮಾಲಯ, ಮೇಲುಗಿರಿ ಶಿಖರ. ಹಾಲ್ಗಡಲಿನಲ್ಲಿ ಅಮೃತ ಬೇರ್ಪಡಿಸಲು ಬಳಸಿಕೊಂಡ ಮಹಾ ಸಾಧನವದು. ಇದರಲ್ಲಿ ಅಮೃತವೇ ಇದೆ. ಮನದಿಂದಾಗಿ ವಿಷ ಆವರಿಸಿದೆ. ಬಿಂದುವೇ ಎರಡಾಗಿದೆ. ಅಮೃತವೂ ಆಗಿದೆ. ವಿಷವೂ ಆಗಿದೆ.ಎರಡೂ ಬಿಂದುಗಳೇ. ಒಂದು ಬಿಂದು ಚಿಪ್ಪಿನಲ್ಲಿ ಬಿದ್ದು ಮುತ್ತಾಯಿತು. ತನುವಿನ ಗರ್ಭದಲ್ಲಿ ಬಿದ್ದು ಅಮೃತವಾಯಿತು.ಹಾವಿನ ಗರ್ಭದಲ್ಲಿ ಬಿದ್ದು ವಿಷವಾಯಿತು. ಬಿಂದು ಒಂದೇ ಅದು ಅಮೃತ! ಸ್ವೀಕರಿಸಿದ ವಸ್ತು ಮಾತ್ರ ಬೇರೆ ಬೇರೆ !

ಅಮೃತ ತನುವಿನಲ್ಲಿ ತನ್ಮಯವಾಗಿದೆ. ಇದನ್ನು ತನು ಮಾತ್ರ ತಿಳಿಯುತ್ತದೆ. ಚಿಪ್ಪು ಹಾವು ತಿಳಿಯುವುದಿಲ್ಲ. ಅಮೃತ ಬಿಂದುವನ್ನು ಎರಡೂ ಸ್ವೀಕರಿಸಿದವು. ಒಂದು ಬಿಂದು ಮುತ್ತಾದರೆ ಮತ್ತೊಂದು ಕಾಲ್ಕೋಟ ವಿಷ.

ಹಾಲ್ಗಡಲಲ್ಲಿ ತೇಲಾಡುತ್ತಿರುವೆಯೆಂದು ತನು ತಿಳಿಯಬೇಕು. ತನುವನ್ನು ಆವರಿಸಿದ ಮನ ತನುವಿನಿಂದಲೇ ತಿಳಿಯಬೇಕು.ಆದರೆ ತನುವನ್ನು ಹಿಡಿದ ಮನ ತನುವಿನೊಂದಿಗೆ ಚಿಲುಮೆ ನೀರಿಗೆ ಹರಿದಾಡುತ್ತಿದೆ. ಇದರ ತಾಪತ್ರಯವನ್ನು ಯಾರು ತಪ್ಪಿಸಬೇಕು ? ಹಾಗೆಂದು ಮನವೇ ಯೋಚಿಸಬೇಕು, ತನುವಿನಲ್ಲಿ ತನ್ಮಯವಾಗಿದ್ದ ಸಂಗಯ್ಯ ತಾನಾಗಿ ಬಂದರೆ ಅಪ್ಪಿಕೊಳ್ಳುವ; ತನ್ನಂತೆ ಮನವನ್ನು ಒಪ್ಪಿಕೊಳ್ಳುವ.

226

ಹಾವ ಹಿಡಿವುದ ಹಾವಾಡಿಗ ಬಲ್ಲನಲ್ಲದೆ,
ಕಡೆಯಲ್ಲಿದ್ದ ಜಾವಳಿಗನೆತ್ತ ಬಲ್ಲನು?
ನೋವು ಬಂದರೆ ವ್ಯಾಧಿಯಲ್ಲಿ ನರಳುವಾತ ಬಲ್ಲನಲ್ಲದೆ,
ಕಡೆಯಲಿಪ್ಪ ದುರುಳನೆತ್ತ ಬಲ್ಲನು? ದೇವ ನಿಮ್ಮ ಶರಣನು ಬೆರೆದಿಪ್ಪ ಭೇದವ
ನೋವುತ್ತ ಬೇವುತ್ತ ಧಾವತಿ ಗೊಳುತಿಪ್ಪ ಗಾವಿಲರೆತ್ತ ಬಲ್ಲರು ಲಿಂಗೈಕ್ಯರನುವ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ?

ಜಗತ್ತಿನ ಸಕಲ ತನುಗಳೆಲ್ಲ ಬ್ರಹ್ಮ ತನುಗಳೇ ಆಗಿವೆ. ಜ್ಞಾನವುಳ್ಳ ತನುಗಳೇ ಆಗಿವೆ. ಆದರೂ ತನುವಿನ ಜ್ಞಾನ ತನುವಿಗೆ ಹೊಳೆಯುತ್ತಿಲ್ಲ. ಹೀಗಾಗಿರುವುದಕ್ಕೆ ಮನವೇ ಕಾರಣ. ಮನ, ಜ್ಞಾನ ಹೊರಗೆ ಇದೆ ಎಂದು ಭಾವಿಸಿ, ತನುಗಳಿಂದ ಸಂಗ್ರಹವಾದ ಪುಸ್ತಕ ಹಾಗೂ ಮಾತಿನ ಜ್ಞಾನವನ್ನು ಸಂಗ್ರಹ ಮಾಡಿಕೊಂಡು ಅದೇ ಶ್ರೇಷ್ಠವೆಂದು ಉದಾಹರಿಸುತ್ತದೆ. ಅದನ್ನೇ ಬಳಸಲು ಪ್ರಯತ್ನಿಸುತ್ತಲಿದೆ. ಹೀಗಾಗಿ ತನು, ಜ್ಞಾನ ತನುವೆಂದು ಕರೆಯಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಹಾಗೆಯೇ ಆ ತನುವಿನ ಜ್ಞಾನದ ಸುಖವನ್ನು ಆ ತನುವಿಗೇ ಅನುಭವಿಸಲು ಸಾಧ್ಯವಾಗುತ್ತಿಲ್ಲ.

ತನುವಿನ ಜ್ಞಾನವನ್ನು ತನುವೇ ಬಳಸಿಕೊಂಡು ಸುಖಿಸುವ ಆ ತನುವನ್ನು ಬ್ರಹ್ಮ ತನುವೆಂದು, ಬುದ್ಧ ತನುವೆಂದು, ಸಂತ, ಮಹಾನುಭಾವಿ ತನುವೆಂದು ಕರೆದರು; ಹಾಗೆಂದು

ಗುರುತಿಸಿದರು. ಉಳಿದೆಲ್ಲ ತನುಗಳಲ್ಲಿ ಜ್ಞಾನವಿದ್ದರೂ ಬಳಸಿಕೊಳ್ಳುವ ತಂತ್ರಗಾರಿಕೆ ತಿಳಿಯದ್ದರಿಂದ ಅವುಗಳನ್ನು ಭ್ರಮಾತನುವೆಂದು, ಭವಿತನುಗಳೆಂದು ಕರೆಯಿಸಿಕೊಂಡವು.

ಇದೆಲ್ಲದಕ್ಕೆ ಕಾರಣ ತನುವನ್ನು ಆವರಿಸಿದ ಮನವೇ ಆಗಿದೆ. ಈ ಮನವನ್ನು ಹಾವೆಂದು ಕರೆದರು. ಹಾವು ಹಿಡಿದು ಅದರ ವಿಷ ಹಿಂಡಿ ಪಳಗಿಸುವ ಅದನ್ನು ಆಡಿಸುವ ಶಕ್ತಿ ಇರುವುದು ಹಾವಾಡಿಗನಿಗೆ ಮಾತ್ರ . ಜಾಳಿಗೆ ಆಡಿಸುವವನಿಗೆ ಹಾವಾಡಿಸುವ ಶಕ್ತಿ ಇಲ್ಲ. ಹೊರಗಿನ ಹಾವನ್ನು ಹಿಡಿದು ಪಳಗಿಸುವುದು ಸುಲಭ. ಅಂಗವನ್ನು ಆವರಿಸಿದ ಮನವೆಂಬ ಹಾವನ್ನು ಹಿಡಿದು ಪಳಗಿಸಿ ಅದನ್ನು ಕೊರಳಲ್ಲಿ ಆಭರಣದಂತೆ ಧರಿಸಿಕೊಳ್ಳುವುದು ಶಿವನಿಗೆ - ಶರಣನಿಗೆ ಮಾತ್ರ ಸಾಧ್ಯ . ಹೀಗಾಗಿ ಶರಣನನ್ನೇ ಶಿವಶರಣನೆಂದು ಕರೆದಿದ್ದಾರೆ.

ಸಾಮಾನ್ಯನಿಗೆ ಮನವೆಂಬ ಹಾವು ಪಳಗಿಸುವುದು ಸಾಧ್ಯವಾಗುವುದಿಲ್ಲ. ಆ ಕಲೆಯ ಪರಿಚಯವೂ ಆತನಿಗೆ ಇರುವುದಿಲ್ಲ. ಹಾವು ಎಂದರೆ ವಿಷದ ಹಾವೆಂದೇ ತಿಳಿಯುತ್ತಾನೆ. ಶರಣರ ಭಾಷೆಯೇ ಹೀಗೆ ಅದು ಎಲ್ಲರಿಗೂ ಹೊಳೆಯುವುದಿಲ್ಲ. ತಿಳಿಯಬೇಕೆಂಬ ಆಸೆಯಾದರೆ ಸರ್ವ ತನುಗಳಿಗೂ ಹೊಳೆಯದೆ ಇರುವುದಲ್ಲ.

ಮನದಿಂದಾಗಿಯೇ ಸುಖಿಸುವ ಹಾಗೂ ದುಃಖಿಸುವ ಎರಡು ಗುಣಗಳು ತನುವಿಗೆ ಆವರಿಸಿವೆ. ತನು ಭೂಮಿಗೆ ಬಂದಿರುವುದು ಕೇವಲ ಜ್ಞಾನ ಸುಖವನ್ನು ಸುಖಿಸುವುದಕ್ಕಾಗಿ. ಆದರೆ ಕೇವಲ ಜ್ಞಾನ ತಿಳಿಯಲು ಮನಕ್ಕೆ ಸಾಧ್ಯವಾಗುವುದಿಲ್ಲ. ತನುವಿನ ಜ್ಞಾನವನ್ನು ಮತ್ತೊಂದು ತನುವಿನಿಂದ ತಿಳಿಯಲು ಹೋಗಿ, ಮನ ತನುವನ್ನು ಆ ತನುವಿಗೆ ಸೆರೆಯಾಳಾಗಿಸುತ್ತದೆ. ಗುರುವೆಂಬ ತನುವಿಗೆ ಶಿಷ್ಯನೆಂಬ ತನು ತನಗರಿಯದಂತೆ ಬಂಧಿಸಿಕೊಂಡು ಆ ಬಂಧನದಲ್ಲಿ ಎರಡೂ ತನುಗಳು ಸೆರೆಯಾಳಾಗುತ್ತವೆ. ಇವರಿಬ್ಬರೂ ತಿಳಿಯದವರು. ಒಂದು ಗುರುವಾಗಿ ವ್ಯವಹರಿಸುತ್ತದೆ. ಮತ್ತೊಂದು ಅರಿಯದೆ ಶಿಷ್ಯನಾಗಿ ಬಂಧಿಯಾಗುತ್ತದೆ. ಇವರಿಬ್ಬರೂ ಹಾವಾಡಿಗರಲ್ಲ . ಹಾವಿನ ಮಂತ್ರ ತಿಳಿಯದವರು. ಗಾವಿಲರು. ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಲಿಂಗವನ್ನು ಆವರಿಸಿದ ಮನವೆಂಬ ಹಾವಿಗೆ ಶರಣು ಹೋಗಿ ಅದರೊಂದಿಗೆ ಸರಸವಾಡುವವರು. ಆ ಹಾವಿನೊಂದಿಗೆ ಕಚ್ಚಿಸಿಕೊಂಡು ಸುಖಿಸುವ, ದುಃಖಿಸುವ ಧಾವತಿಗೆ ಶರಣು ಹೋದವರು. ಶಾಶ್ವತ ಸುಖದ ತಂತ್ರ ಜ್ಞಾನವನ್ನು ಅರಿಯದವರು ನೋವುತ್ತ ಬೇವುತ್ತ ಧಾವತಿಗೆ ಒಳಪಟ್ಟು ಬೇಯುತ್ತಿರುವವರು, ನಿಮ್ಮ ನೆತ್ತ ಬಲ್ಲರು ಎಂದು ಪ್ರಶ್ನಿಸಿದ್ದಾರೆ. ಹಡಪದ ಅಪ್ಪಣ್ಣ ಶರಣರು.

227

ಹಿಂದನರುಹಿ ಹಿಂದ ಹರಿದಿರಿ, ಮುಂದನರುಹಿ ಮುಕ್ತನ ಮಾಡಿದಿರಿ,
ಸಂದು ಸಂಶಯವನಳಿದಿರಿ, ಗುರುಲಿಂಗ ಜಂಗಮವ ಒಂದೇ ಎಂದು ತೋರಿದಿರಿ.
ಪ್ರಸಾದವೇ ಪರವೆಂದರುಹಿದಿರಿ.
ಇಂತಿವರ ಪೂರ್ವಾಶ್ರಯವ ಕಳೆದು ಎನಗೆ ಏಕವ ಮಾಡಿ ತೋರಬೇಕಾಗಿ,
ನೀವು ಒಂದು ಸಾಕಾರವ ತಾಳಿ ಬಂದಿರಿ.
ಇದು ಕಾರಣ ನಿಮ್ಮ ಲೋಕಾರಾಧ್ಯರೆಂದು ನೆರೆ ನಂಬಿ ಸಲೆಸಂದು
ನಿಮ್ಮ ಪಾದದೊಳು ಏಕವಾದೆನಯ್ಯ ಚೆನ್ನಮಲ್ಲೇಶ್ವರ.
ಇದ ನಿಮ್ಮನರಿದ ಶರಣರೇ ಬಲ್ಲರು, ಬಸವಪ್ರಿಯ ಕೂಡಲ ಚೆನ್ನಬಸವಣ್ಣ.

ತನುವಿಗೆ ಭೂತಕಾಲದ ಚಿಂತೆ, ಭವಿಷತ್ ಕಾಲದ ಚಿಂತೆ, ವರ್ತಮಾನ ಕಾಲದ ಚಿಂತೆ. ಮೂರೂ ಕಾಲದ ಚಿಂತೆಗಳನ್ನು ಮಾಡುತ್ತ ಒಂದು ದಿನ ತನು ಚಿತೆ ಏರುತ್ತದೆ. ಈ ಮೂರು ಕಾಲಗಳು ತನುವಿಗೆ ಪ್ರಸಾದವಾಗುವುದೇ ಇಲ್ಲ. ಕಾಲ ಮೆಲಕು ಹಾಕುತ್ತ ಹಾಕುತ್ತಾ ತನು ಕಾಲಗಳ ವಶವಾಗುತ್ತದೆ. ಕಾಲಗಳನ್ನು ಕರಗಿಸಿ ಕಾಲಾತೀತನಾಗುವುದಿಲ್ಲ. ತನು ಕಾಲಗಳನ್ನು ಹೇರಿಕೊಂಡಿದೆ. ಹಾಗೆಯೇ ಕಾಲಾತೀತನೂ ಆಗಿದೆ. ಕಾಲಾತೀತನಿಗೆ ಕಾಲಪ್ರಸಾದವಾಗುತ್ತದೆ.

ತನುವಿಗೆ ಮೂರೂ ಕಾಲಗಳ ಪರಿಚಯ ಉಂಟು; ಕಾಲಾತೀತನ ಪರಿಚಯ ಮಾತ್ರ ಇಲ್ಲ. ಅದಕ್ಕಾಗಿ ತನು ಪೂರ್ವಾಶ್ರಮಕ್ಕೆ ಒಳಪಟ್ಟಿದೆ. ತನಗೆ ತಾನೇ ಕಾಲಗಳಿಗೆ ಬಂಧಿಯಾಗಿದೆ. ಕಾಲಗಳನ್ನು ಪರಿಚಯಿಸಿಕೊಂಡಿದ್ದೇ ತಾನು, ಅರಿಯದಂತೆ ಕಾಲಗಳಿಗೆ ಬಂಧಿಯಾದದ್ದೇ ತಾನು. ಇದು ತನುವಿಗೆ ಗೊತ್ತಾಗುವುದಿಲ್ಲ. ತನುವಿನಲ್ಲಿಯೇ ತನ್ಮಯವಾದ ಕಾಲಾತೀತನಿಗೆ ಮಾತ್ರ ಗೊತ್ತು.

ಶರಣನಿಗೆ ಮಾತ್ರ, ಭೂತ ಭವಿಷತ್ ವರ್ತಮಾನ ಕಾಲಗಳು ಗೊತ್ತು; ಅದರ ತಂತ್ರಜ್ಞಾನವೂ ಗೊತ್ತು; ಹೀಗಾಗಿ ಭೂತಕಾಲದ ಸುಖ ದುಃಖಗಳನ್ನು ಕೊಡವಿಕೊಂಡು ತನುವಿನ ಜ್ಞಾನ ಸುಖವನ್ನು ಮಾತ್ರ ಸವಿಯುತ್ತಾನೆ. ವರ್ತಮಾನ ಭವಿಷ್ಯತ್ ಕಾಲದ ಸುಖದುಃಖಗಳನ್ನು ತಳ್ಳಿ ಅರಿವಿನ ಸುಖವನ್ನು ಮಾತ್ರ ಸವಿಯುತ್ತಾನೆ.

ಗಾಢವಾದ ನಿದ್ರೆಯಲ್ಲಿ ತನು ಹೆಣ್ಣು ಅಲ್ಲ, ಗಂಡೂ ಅಲ್ಲ. ರಾಜ ಅಲ್ಲ, ಕಾಲಾಳೂ ಅಲ್ಲ, ಮಂತ್ರಿ ಪ್ರಧಾನಿ ಶಾಸಕನೂ ಅಲ್ಲ. ಶ್ರೀಮಂತನೂ ಅಲ್ಲ, ಭಿಕ್ಷುಕನೂ ಅಲ್ಲ. ಭೂತಕಾಲದಲ್ಲಿ ತಾನು ಏನಾಗಿದ್ದೆನೆನ್ನುವ ಮಾಹಿತಿಯೂ ಇಲ್ಲ. ಭವಿಷ್ಯತ್ತಿನಲ್ಲಿ ತಾನು ಏನಾಗುತ್ತೇನೆ ಎನ್ನುವ ಸುಳಿವೂ ಇಲ್ಲ. ವರ್ತಮಾನ ಕಾಲದಲ್ಲಿ ತಾನು ಏನಿದ್ದೇನೆ ಎನ್ನುವ ಅರಿವೂ ಆ ತನುವಿಗೆ ಇಲ್ಲದೆ ಗಾಢವಾಗಿ ಮಲಗಿರುತ್ತದೆ. ಎಚ್ಚರವಾದಕೂಡಲೆ ತನುವಿನ ನಿದ್ರೆಯ ಸುಖ ಮಾಯವಾಗಿ ಇಲ್ಲದ ಸುಖ ದುಃಖಗಳು ತನುವಿಗೆ ಆವರಿಸುತ್ತವೆ.

ವರ್ತಮಾನದ ದುಃಖವನ್ನು ಸಹಿಸಿಕೊಳ್ಳಲು ಆಗುವುದಿಲ್ಲ. ತನ್ನಂತೆಯೇ ಇರುವ ಜ್ಯೋತಿಷಿಗೆ ತನು ಮರುಳಾಗುತ್ತದೆ. ಭೂತಕಾಲದ ಘಟನೆಯನ್ನು ಹೇಳಿ ಜ್ಯೋತಿಷಿ ತನ್ನ ತೆಕ್ಕೆಗೆ ಸೆಳೆದುಕೊಂಡು ಆ ತನುವಿನೊಂದಿಗೆ ವ್ಯವಹರಿಸುತ್ತಾನೆ. ಭವಿಷ್ಯದ ಆಸೆಯ ರುಚಿ ತೋರಿಸಿ ಮರುಳು ಮಾಡುತ್ತಾನೆ. ಭೂತಕಾಲದ ನೆನಪು ರಕ್ಕಸ ನಂತೆ ಕಾಡಿ ವರ್ತಮಾನದ ಬದುಕು ಹಾಳಾಗುತ್ತದೆ. ಭವಿಷ್ಯದ ಮೊರೆ ಹೋಗಿ ತನ್ನನ್ನು ತನ್ನ ಕಾಯವನ್ನು ಕಾಯದಲ್ಲಿದ್ದ ಜ್ಞಾನದ ಸಂಪತ್ತನ್ನು ಮರೆತು ತನು ಕಾಲಕ್ಕೆ ಶರಣು ಹೋಗಿ ಅಕಾಲಕ್ಕೆ ತುತ್ತಾಗುತ್ತದೆ. ಇದನ್ನು ಅರಿತು ಅರಿವಿನ ಪಾದದಲ್ಲಿ ಲೀನವಾದವರು ಶರಣರು ಮಾತ್ರ. ಅಂತಹ ಶರಣರನ್ನು ಕಂಡು ಹಿಡಿದು ಅವರಿಗೆ ಮೊರೆ ಹೋಗುವುದು ಸಾಮಾನ್ಯರಿಗೆ ಸಾಧ್ಯವಾಗುವುದಿಲ್ಲ. ಸಾಮಾನ್ಯನಿಗೆ ಬಯಕೆಯಾದರೆ ಸಾಧ್ಯವಾಗದ ಮಾತೇನೂ ಅಲ್ಲ. ಶರಣನೇ ಸಾಮಾನ್ಯನನ್ನು ಹುಡುಕಿಕೊಂಡು ಬರುತ್ತಾನೆ. ಬಯಕೆಯಾದ ಹೃದಯದಲ್ಲಿ ಬಯಲಬೀಜ ಬಿತ್ತುತ್ತಾನೆ.

228

ಹುಟ್ಟಲೇಕೋ ನರರ ಜನ್ಮದಲ್ಲಿ ? ಕಟ್ಟಲೇಕೋ ಕೊರಳಲ್ಲಿ ಲಿಂಗವ ?
ಕಟ್ಟಿಯೂ ಕಾಣದೆ, ತೊಟ್ಟನೆ ತೊಳಲಿ, ಅರಸಲೇಕೋ ಧರೆಯ ಮೇಲೆ ?
ಅರಸಿಯೂ ಕಾಣದೆ, ಸತ್ತು ಮೆಟ್ಟಿ ಮೆಟ್ಟಿ ಹೂಳಿಸಿಕೊಳ್ಳಲೇಕೋ ?

ಇದನರಿದು, ಹುಟ್ಟು ಹೊಂದಳಿದ ಶರಣರ ನಿತ್ಯ ನಿತ್ಯ ನೆನೆದು ಬದುಕಿದೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ನರನ ಜನ್ಮ ನಿತ್ಯ ನರಕ. ನರಕ ತಪ್ಪಿಸಿಕೊಳ್ಳುವುದಕ್ಕಾಗಿ ನರೇಶನ ಹುಡುಕಾಟ. ದೇವನ ಮೊರೆ. ಆ ದೇವ ಯಾರು ? ಆತ ಇದ್ದಾನೆಯೋ ಇಲ್ಲವೊ ? ಇದ್ದರೆ ಹೇಗಿದ್ದಾನೆ ? ಎಂಬ ಆಲೋಚನೆಯನ್ನು ಮಾಡದಷ್ಟು ಯಾತನೆ ಅವನಿಗೆ. ಯಾರು ಏನು ಹೇಳುತ್ತಾರೋ ಅವನಿಗೆ ಅವನು ಹೇಳಿದ ವಸ್ತುವಿಗೆ ಮೊರೆ ಹೋಗುವುದೇ ನರನ ಕೆಲಸ. ಅವನು ಹೇಳಿದ ಕಲ್ಲನ್ನೇ ಪಾಷಾಣವನ್ನೇ ಲಿಂಗವೆಂದು ನಂಬಿ ಕೊರಳಲ್ಲಿ ಕಟ್ಟಿಕೊಂಡು ನಿತ್ಯ ನಿತ್ಯ ಪೂಜಿಸುತ್ತಾನೆ. ನಿತ್ಯ ನಿತ್ಯ ಹುಡುಕುತ್ತಾನೆ. ಈ ಧರೆಯ ಮೇಲೆ ಏನಾದರೂ ತನಗೆ ಸಿಕ್ಕೀತೆಂದು.

ಹುಡುಕಿದರೂ ಸಿಗುವುದಿಲ್ಲ. ಸತ್ತು ಸತ್ತು ಹುಡುಕುತ್ತಾನೆ. ನರಕಯಾತನೆ ಅನುಭವಿಸುತ್ತಾನೆ. ತನ್ನೊಳಗೇ ತನ್ಮಯವಾದ ಅರಿವಿನ ದೇವ ಹೊರಗೆ ಹುಡುಕಿದರೆ ಸಿಗಬೇಕಲ್ಲ.

ಹುಟ್ಟು ಹೊಂದಳಿದ ಶರಣರ ನಿತ್ಯ ನಿತ್ಯ ನೆನೆದು ಬದುಕಿದೆ :

ಹುಟ್ಟೇ ಇಲ್ಲದ, ಸಾವೇ ಇಲ್ಲದ, ಕೇಡೇ ಇಲ್ಲದ,ರೂಪವೇ ಇಲ್ಲದ ಶಿವನಿಗೆ ಶರಣು ಹೋಗಿ ಶರಣನೇ ತಾನಾದ, ಅಂತಹ ಶರಣನ ನಿತ್ಯ ನಿತ್ಯ ನೆನೆದು ನಾನು ಬದುಕಿದೆ. ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವನ ದರುಶನವನ್ನು ಶರಣ ತನ್ನ ಕೈ ಬೆರಳಿಡಿದು ಕರೆದುಕೊಂಡು ಹೋಗಿ ಆತನಲ್ಲಿ ಬಿಟ್ಟು ಧನ್ಯತೆಯ ಮೆರೆದ ಮಹಾನುಭಾವನನ್ನು ನೆನೆ ನೆನೆದು ಬದುಕಿದೆ.

229

ಹುಟ್ಟಿದ ಮನುಜರೆಲ್ಲ ಹೊಟ್ಟೆಯ ಹೊರೆವುದೇನು ಸೋಜಿಗವೋ ?
ಹುಲಹೆಣಹನ ಸುಟ್ಟು, ಹೊಲೆಯನು ಹೊಟ್ಟೆಯ ಹೊರೆವುತ್ತ
ಅವನ ಸಂತೆಯಲ್ಲಿ ಎದೆಯ ಮೇಲೆ ಕಲ್ಲು ಹಾಕಿಕೊಂಬವನು,
ಹೊಟ್ಟೆಯ ಹೊರೆವುತ್ತಲವನೆ ಉಲಿ ಉಲಿದು ಕಂಡವರಿಗೆ ಹಲುಗಿರಿವನು.
ಹೊಟ್ಟೆಯ ಹೊರೆವುತ್ತ , ಅವನು,ಈ ಲಿಂಗದ ನೆಲೆಯನರಿಯದವರು
ಇವರೊಳು ಸಲುವರಲ್ಲದೆ ಎಮ್ಮ ಶರಣರಿಗೆ ನಿಲುಕರು ನೋಡಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಗಿಡ ಮರ ಬಳ್ಳಿ ಪಶು ಪಕ್ಷಿ ಪ್ರಾಣಿ ಸಂಕುಲಕ್ಕೆ ಹೊಟ್ಟೆಗೆ ಆಹಾರ ಸಂಪಾದಿಸುವುದು ಅಷ್ಟೊಂದು ತೊಂದರೆಯೇನೂ ಅಲ್ಲ. ಆದರೆ ಮನುಷ್ಯ ಮಾತ್ರ ಹೊಟ್ಟೆಗಾಗಿ ನಾನಾ ವಿಧದ ಕೆಲಸದಲ್ಲಿ ತೊಡಗಿದ್ದಾನೆ. ಹೆಣನ ಸುಡುವವನೊಬ್ಬ, ಸಂತೆಯಲ್ಲಿ ನೆರೆದ ಜನರಿಗೆ ಮನ ರಂಜಿಸಲು ಎದೆಯ ಮೇಲೆ ಬಂಡೆ ಹಾಕಿಕೊಳ್ಳುವವನೊಬ್ಬ,ಹಾವಾಡಿಸುವವನೊಬ್ಬ, ಕೋತಿ, ಕರಡಿ ಆಡಿಸಿ ಉಪ ಜೀವನ ಮಾಡುವವರೂ ಇದ್ದಾರೆ. ಉಪ ಜೀವನವೇ ಅಷ್ಟೊಂದು ಕಷ್ಟವಾದ ಮೇಲೆ ಜೀವನಕ್ಕೆ ಬರುವ ದಾರಿ ಇನ್ನೂ ಕಷ್ಟ.

ಜೀವನ ಉಪ ಜೀವನಕ್ಕೆ ದಾರಿ ತೋರಿಸುವ ಕೈಲಾಸಪತಿ ಕಾಯದಲ್ಲಿಯೇ ಇದ್ದಾನೆ. ಕಾಯವನ್ನು ಕಂಡವರಿಗೆ ಹಲುಗಿರಿಯುವ ಕಾಯಕಕ್ಕೆ ಹಚ್ಚಿ ಆ ಕಾಯದಲ್ಲಿಯೇ ಅಡಗಿದ್ದಾನೆ.

ಕಾಯ ಯಾವ ಕಾಯಕ ಮಾಡಿದರೇನು ಕಾಯದಲ್ಲಿದ್ದವನು ಬಲು ಶ್ರೀಮಂತ. ಕಾಯವನ್ನು ಆವರಿಸಿದವನು ಬಡವ. ಇವನಿಗೆ ಅವನ ನೆಲೆ ಗೊತ್ತಿಲ್ಲ. ತನ್ನಲ್ಲಿಗೆ ಬರುವವರಿಗೆ ಹಾದಿ ತೋರಿಸಿ ತನ್ನೊಳಗೆ ಸೆಳೆದುಕೊಳ್ಳುವ ಬಯಕೆ ಅವನಿಗಿಲ್ಲ. ಇಬ್ಬರೂ ಒಂದೆಡೆಯಿದ್ದರೂ ಮೂರು- ಆರು ಅಂಕಿಯಂತೆ ಅವನ ದರ್ಶನ ಇವನಿಗಿಲ್ಲ, ಇವನ ದರ್ಶನ ಅವನಿಗಿಲ್ಲ.

ಅವನಿಗೆ ಶರಣು ಹೋದ ಶರಣನಿಗೆ ಮಾತ್ರ ಅವನ ಪರಿಚಯ. ಶರಣ ಪರಿಪರಿಯಿಂದ ಅವನಲ್ಲಿಗೆ ಹೋಗುವ ದಾರಿ ತೋರಿಸಿದರೂ ಇತರರಿಗೆ ಆ ದಾರಿ ನಿಲುಕುವುದು ಬಲು ಜಟಿಲ. ತನು ಜನ್ಮ ತಳೆದಿರುವುದೇ ತನ್ಮಯವಾದ ಶಿವನ ದರ್ಶನಕ್ಕಾಗಿ. ಶಿವ ತನುವಿನಲ್ಲಿಯೇ ತನ್ಮಯವಾಗಿದ್ದರೂ ತನುವನ್ನು ಆವರಿಸಿದ ಮನಕ್ಕೆ ಶಿವ ನಿಲುಕುವುದಿಲ್ಲ. ಮನ ಶಿವನಿಗೆ ಶರಣು ಹೋಗದೆ ಉಪ ಜೀವನಕ್ಕೆ ಸೆರೆಯಾಗಿದೆ. ಅದಕ್ಕೆ ಬದುಕುವುದೆ ಬಲು ದುಸ್ತರವಾಗಿದೆ.

230

ಹುಟ್ಟುವಾತ ಲಿಂಗಪಿಂಡದೊಳಡಗಿ ಬರಲು,ಪಿಂಡಗತಸ್ಥಲವೆನಿಸಿತ್ತು .
ಬೆಳೆವಲ್ಲಿ ಶ್ರೀಗುರುಸ್ವಾಮಿ ಹಸ್ತಮಸ್ತಕ ಸಂಯೋಗ ಮಾಡಿ,
ಅಷ್ಟಾವರಣವನಳವಡಿಸಿ,ಅಷ್ಟತನುಗುಣವ ಕೆಡಿಸಿ,
ಇಷ್ಟಲಿಂಗವಂ ದೃಷ್ಟವ ಮಾಡಿಕೊಡುವಲ್ಲಿ,
ಅಂಗವೆ ಲಿಂಗಾರ್ಪಿತವೆಂದು ಸಂಗನ ಶರಣರಂ ಸಾಕ್ಷಿಯಂ ಮಾಡಿ,
ಮೋಕ್ಷವನೈದಿಸಿದಿರಾಗಿ ಅದೀಗ ಲಿಂಗೈಕ್ಯ .
ಇದು ಕಾರಣ, ಪಿಂಡಗತವೆಂದರೂ ಲಿಂಗೈಕ್ಯವೆಂದರೂ ಒಂದೇ ಸಮರಸ.
ಅದಕ್ಕೆ ದೃಷ್ಟ : ಅಭೇದಂ ಜ್ಞಾನರೂಪೇಣ ಮಹಾನಂದಮಯಮಲಂ ಧ್ರುವಂ ।
ಅತರ್ಕ್ಯಮದ್ವಯಂ ಪೂರ್ಣಂ ಬ್ರಹ್ಮೈವಾಸ್ತಿ ನ ಸಂಶಯಃ ।।
ಎಂದುರಾಗಿ,ಇದೀಗ ಲಿಂಗೈಕ್ಯದಿರುವು.
ಬಸವಪ್ರಿಯ ಕೂಡಲಸಂಗಮದೇವಾ,
ಮಾಂ ತ್ರಾಹಿ,ತ್ರಾಹಿ ಕರುಣಾಕರನೆ.

ಅಂಗದ ಗರ್ಭದಲ್ಲಿ ಲಿಂಗವಡಗಿ,ಲಿಂಗಪಿಂಡವೆನಿಸಿ,ಅಂಗವಾಗಿ ಹೊರಬರಲು ಅದು ಪಿಂಡಗತಸ್ಥಲವೆನಿಸಿತ್ತು .ಅದು ಬೆಳೆದು ದೊಡ್ಡದಾದಾಗ ಶ್ರೀಗುರುಸ್ವಾಮಿ ಅದರೊಳಗಿದ್ದ ಜ್ಞಾನವನ್ನು ಅದರೊಳಡಗಿದ ಸಂಪತ್ತನ್ನು ಅದಕ್ಕೆ ಪರಿಚಯಿಸುತ್ತಾ ಹಸ್ತ ಮಸ್ತಕ ಸಂಯೋಗ ಮಾಡುತ್ತಾನೆ. ಮುಟ್ಟಿ ತಟ್ಟಿ ಅಷ್ಟ ತನು ಗುಣವನ್ನು ತನುವಿನಲ್ಲಿಯೇ ತನ್ಮಯವಾದ ಅಷ್ಟಾವ ರಣದಿಂದ ಕೆಡಿಸಿ ಅದಕ್ಕೆ ಸೂಚಿಸುತ್ತಾನೆ. ಅಂಗವನ್ನು ಮುಟ್ಟಿ ಅದರೊಳಗೆ ಸಂಗಮವಾದ ಲಿಂಗಯ್ಯನ ದರ್ಶನವನ್ನು ಅಂಗಕ್ಕೆ ಮಾಡಿಸುತ್ತಾನೆ. ಆಗ ಅಂಗವನ್ನು ಆವರಿಸಿದ ಮನವೇ ಘನಮನವಾಗಿ ಲಿಂಗಯ್ಯನ ಮೊರೆ ಹೋಗುತ್ತದೆ; ಶರಣನಾಗುತ್ತದೆ. ಆ ಶರಣನನ್ನೇ ಸಾಕ್ಷಿಯನ್ನಾಗಿ ಮಾಡಿ ಆತನಿಗೆ ಮುಕ್ತಿ ಕಲ್ಪಿಸುತ್ತಾನೆ ಶ್ರೀಗುರುಸ್ವಾಮಿ.

ಗುರುದೇವ ಏನೂ ಹೇಳಲಿಲ್ಲ. ಶಿಷ್ಯ ಏನೂ ಕೇಳಲಿಲ್ಲ. ಎರಡೂ ಅಂಗಗಳೇ. ಒಂದಂಗಕ್ಕೆ ಲಿಂಗದ ಪರಿಚಯವಿದೆ. ಮತ್ತೊಂದಕ್ಕೆ ಲಿಂಗದ ಪರಿಚಯವಿಲ್ಲ. ಅದನ್ನು ಹತ್ತಿರ ಕರೆದು ಅದರೊಳಗಿದ್ದುದನ್ನು ಅದಕ್ಕೆ ಪರಿಚಯಿಸಿದ. ಆಗ ಶಿಷ್ಯನಿಗೆ ಪರಿಚಯವಾಯಿತು. ಶ್ರೀಗುರು

ವಿಗೆ ಪರಿಚಯವಿತ್ತು. ಇಬ್ಬರೂ ಒಂದಾದರು.

ಹುಟ್ಟುವಾಗಲೇ ಪಿಂಡದೊಳಡಗಿದ ಲಿಂಗ, ಪಿಂಡಸ್ಥಲವೆನಿಸಿತ್ತು. ಹೊರಬಂದ ಮೇಲೆ ಲಿಂಗೈಕ್ಯವೆನಿಸಿತ್ತು. ತಿಳಿದ ಮೇಲೆ ಲಿಂಗಾಂಗ ಸಮರಸವೆನಿಸಿತ್ತು.

231

ಹುಡಿಯ ಹಾರಿಸಿ ಅಡಗಿಸುವ ವಾಯು ಅಡಗಿ ತೋರುವ ಬೆಡಗಿನಂತೆ,
ಪ್ರಾಣಲಿಂಗಿಯ ಅಂಗ.ಅಂಗವಡಗಿದಲ್ಲಿ ವಾಯುವಿಂಗೆ ಭಂಗವೊ ?
ಅಲ್ಲಾ, ನುಡಿದವರ ನುಡಿಗೆ ಭಂಗವೊ ?
ಇದರ ತೊಡಕ ತಿಳಿದಾತನೆ ಮೃಡನು,
ಬಸವಪ್ರಿಯ ಕೂಡಲಸಂಗಮದೇವಾ ಪ್ರಭುವೆ.

ವಾಯುವಿನ ಬೆಡಗು ಹೀಗೆ ಎಂದು ಹೇಳಲು ಬರುವುದಿಲ್ಲ. ಪ್ರಶಾಂತ ವಾತಾವರಣ ವನ್ನು ಕಲಕಿ ಹುಡಿ ಮಾಡಿ ಕಸ ಕಡ್ಡಿ ಕಾಗದಗಳನ್ನು ತನ್ನ ಸುಳಿಯಲ್ಲಿ ಸಿಲುಕಿಸಿ ಮತ್ತೆ ನೆಲಕ್ಕೆ ತಳ್ಳಿ ತಣ್ಣನೆಯ ಗಾಳಿ ಬೀಸುತ್ತದೆ. ಭೂಮಿ ಗಿಡ ಮರ ಕಸ ಕಡ್ಡಿಗೆ ಭಂಗವಾಗುತ್ತದೆ. ಅಂಗಕ್ಕೂ ಭಂಗ ತರುತ್ತದೆ. ಲಿಂಗಾಂಗಕ್ಕೆ ಯಾವ ಧಕ್ಕೆಯೂ ಆಗುವುದಿಲ್ಲ.

ಗಾಳಿ, ನೀರು,ಭೂಮಿ,ಬೆಂಕಿ ಹೀಗೆ ಓಲಾಡುತ್ತವೆ. ಬಯಲು ಮಿಸುಕಾಡುವುದಿಲ್ಲ. ಬಯಲಲ್ಲಿಯೇ ಇವುಗಳ ಚೆನ್ನಾಟ. ಆದರೆ ಬಯಲು ಬಲು ಗಂಭೀರ ; ಘನ ಗಂಭೀರ. ನಾಲ್ಕಕ್ಕೆ ಜನ್ಮ ನೀಡಿದ್ದೂ ಬಯಲೇ. ನಾಲ್ಕನ್ನೂ ಗರ್ಭದಲ್ಲಿಟ್ಟುಕೊಂಡದ್ದೂ ಬಯಲೇ. ಬಯಲು ತಾಯಿಯಾದರೆ ಅವು ನಾಲ್ಕೂ ಮಕ್ಕಳು. ತಾಯಿಯ ಗರ್ಭದಲ್ಲಿಯ ಮಕ್ಕಳ ತುಂಟಾಟ ತಾಯಿಗೆ ಸಂತೋಷವಾಗುತ್ತದೆ. ಅವು ಒದ್ದರೂ ಆನಂದ, ಸುತ್ತಿದರೂ ಆನಂದ !

ಅಂಗ ಅರಿವಿನ ಲಿಂಗಾಂಗವಾದಾಗ ಮತ್ತೊಂದು ಅಂಗ ಆ ಅಂಗಕ್ಕೆ ಬಿರು ನುಡಿಗಳನ್ನು ನುಡಿದಾಗ ನುಡಿದ ಅಂಗಕ್ಕೆ ಭಂಗವೊ? ವಾಯುವಿಗೆ ಭಂಗವೊ? ಕೇಳಿಸಿಕೊಂಡ ಲಿಂಗಾಂಗಕ್ಕೆ ಭಂಗವೊ? ಇದು ಬಲು ತೊಡಕಿನ ವಿಷಯ. ಇದರ ತೊಡಕ ತಿಳಿದವನೇ ಮೃಢ !

ವಾಯುವಿನ ವಿಕೃತ ಗುಣಗಳು ಬಯಲಿಗೆ ಬಾಧೆ ಉಂಟು ಮಾಡಲಿಲ್ಲ. ಬಯಲಲ್ಲಿಯೇ ಸುತ್ತಿ ಸುತ್ತಿ ಬಯಲಲ್ಲಿಯೇ ಶಾಂತವಾಯಿತು ; ಬಯಲಲ್ಲಿಯೇ ಪ್ರಶಾಂತವಾಯಿತು. ಬಯಲಿಗೆ ಭಂಗವಾಗಲಿಲ್ಲ. ಹಾಗೆಯೇ ನುಡಿದವರ ನುಡಿಯಿಂದ ಲಿಂಗಾಂಗಕ್ಕೆ ಭಂಗವಾಗಲಿಲ್ಲ. ಏಕೆಂದರೆ ಅಂಗವಡಗಿ ಲಿಂಗಾಂಗವಾಗಿದೆ. ಭರದಿಂದ ಬಂದ ನುಡಿಯನ್ನು ಲಿಂಗಾಂಗ ಅರಿವಿನಿಂದ ಸ್ವೀಕರಿಸಿತು. ಪ್ರತಿ ನುಡಿಯಲ್ಲೂ ಅರಿವಿದೆ. ಅರಿಯದೆ ನುಡಿದ ಅಂಗಕ್ಕೆ ಬಾಧೆಯಾಯಿತು. ಅರಿತ ಅಂಗಕ್ಕೆ ಬಾಧೆಯಾಗಲಿಲ್ಲ. ಅರಿವಿನ ಅಂಗವದು ಗುರುವಿನ ಅಂಗ. ಮಹಾದೇವನ ಅಂಗ. ಮೃಢನ ಅಂಗ.

232

ಹುತ್ತಕ್ಕೆ ಹಾಲು ತುಪ್ಪವನೆರೆದು,
ಕೊಟ್ಟಿನ ಮೇಲೆ ಕೂಳನಿಕ್ಕಿ, ಒತ್ತಿ ಮಡಲದುಂಬಿ,

ಆ ಹೊತ್ತಿಗೆ ಮನೆಯ ಮೇಲೆ ಕೂಳ ಹಾಕಿ ಕಟ್ಟಿ,
ಬಡಿದುಕೊಂಡು ಅಳುವ ಲೊಟ್ಟಿಗಳ ಹಟ್ಟಿಯ ಮೆಟ್ಟಲಾಗದು.
ಅದೇನು ಕಾರಣವೆಂದರೆ,
ಅವರು ನಿತ್ಯ ನಿತ್ಯ ಮೃತ್ಯು ಮಾರಿಯ ಬಾಯತುತ್ತಹರೆಂದು-
ಎಮ್ಮ ಆದ್ಯರ ವಚನ ಸಾರುತಿಹವು ನೋಡಾ,
ಬಸವಪ್ರಿ ಕೂಡಲಚೆನ್ನಬಸವಣ್ಣಾ.

ಹುತ್ತಕ್ಕೆ ಹಾಲು ತುಪ್ಪವನು ಎರೆದರೆ ಹಾವು ಅಮೃತವನು ಚಿಮ್ಮದು. ಅದು ಕಕ್ಕುವುದು ಬರೀ ವಿಷವನೇ. ತನುವಿಗೆ ಎಷ್ಟು ಶೃಂಗರಿಸಿದರೇನು? ಮನ ಮರ್ಕಟನ ಬುದ್ಧಿಯನ್ನು ಬಿಡುವುದೆ?ತನುವನು ಕ್ಷಣ ಕ್ಷಣಕೂ ಮೃತ್ಯುವಿನ ದವಡೆಯಿಂದ ದೂರ ಸರಿಸುವುದೆ?

ಮನ ಕಣ್ಣಿನಲ್ಲಿ ಬೆರೆತು ಆ ಕಣ್ಣಿನಿಂದ ನೋಡಿ ತನುವನ್ನು ಮೃತ್ಯುವಿನ ದವಡೆಗೆ ತಳ್ಳುವುದು. ಕಿವಿಯಿಂದ ಕೇಳಿ, ಮೂಗಿನಿಂದ ಮೂಸಿಸಿ, ಚರ್ಮದಿಂದ ಮುಟ್ಟಿ, ನಾಲಿಗೆಯಿಂದ ರುಚಿಸಿ ತನುವನ್ನು ಮನವೆಂಬ ಹಾವು ಮೃತ್ಯುವಿನ ದವಡೆಗೆ ತಳ್ಳುವುದು.

ವಾಲ್ಮೀಕಿ ಮಹರ್ಷಿ ತನುವನ್ನೇ ವಾಲ್ಮೀಕಿಯೆಂದು ಕರೆದ. ವಾಲ್ಮೀಕಿಯೆಂದರೆ ಹುತ್ತ. ಹುತ್ತಕ್ಕೆ ನಾನಾ ಮುಖಗಳು. ಕಣ್ಣು, ಕಿವಿ, ಮೂಗು, ಬಾಯಿ, ನಾಲಿಗೆ, ಮೂತ್ರ ದ್ವಾರ, ಗುದದ್ವಾರ, ಹೊಕ್ಕಳು. ಈ ಎಲ್ಲ ದ್ವಾರಗಳಿಂದ ಮನವೆಂಬ ಹಾವು ಹರಿದಾಡಿ ವಾಸಿಸಲ್ಪಟ್ಟ ಹುತ್ತವೆಂಬ ತನುವಿಗೆ ಮೃತ್ಯು ತರುವುದು. ಇಂತಹ ತನುವಿಗೆ ಪಂಚಾಮೃತವನು ಎರೆದರೇನು? ಮೃಷ್ಟಾನ್ನವನು ತುರುಕಿದರೇನು ? ಅದು ಮೃತ್ಯುವಿನ ಬಾಯಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ತನುವನ್ನು ಆದರಿಸುವ, ತನುವನ್ನೇ ಗೌರವಿಸುವ, ತನುವಿಗಾಗಿ ಬಡಿದುಕೊಂಡು ಅಳುವ ಲೊಳಲೊಟ್ಟಿಗಳ ಮುಟ್ಟಲಾಗದು. ಏಕೆಂದರೆ ಅವರು ನಿತ್ಯ ನಿತ್ಯ ಮೃತ್ಯು ಮಾರಿಯ ಬಾಯಿಗೆ ತುತ್ತಾಗುವರೆಂದು ಆದ್ಯರ ವಚನ ಸಾರುತ್ತಿವೆ ಎಂದಿದ್ದಾರೆ ಅಪ್ಪಣ್ಣ ಶರಣರು.

233

ಹುತ್ತದ ಮೇಲಣ ಸರ್ಪ ಸತ್ತಿತ್ತೆಂದು ಮುಟ್ಟಿ ಬಾಳ್ದ ಮನುಜರುಂಟೆ ?
ಒತ್ತಿಗೆ ಬಂದ ವ್ಯಾಘ್ರವನಪ್ಪಿಕೊಂಡ ಮನುಜರುಂಟೆ ?
ತತ್ವವ ಬಲ್ಲ ಶರಣರು ಸತ್ತ ಹಾಗೆ ಇದ್ದರೆ,
ಇವರು ಕತ್ತೆಯ ಮನುಜರೆಂದು ಮರ್ತ್ಯದವರು ಒತ್ತಿ ನುಡಿದರೆ,
ಅವರೆತ್ತ ಬಲ್ಲರೊ ?
ಅವರ ನುಡಿದವರು ಅತ್ತಲೂ ಅಲ್ಲ, ಇತ್ತಲೂ ಅಲ್ಲ ನೋಡಾ,
ಬಸವಪ್ರಿ ಕೂಡಲಚೆನ್ನಬಸವಣ್ಣಾ.

ಶರಣರ ಸಂಗ ಮಾಡುವುದೆಂದರೆ ಹುಲಿಯ ಮೀಸೆ ಹಿಡಿದು ಉಯ್ಯಾಲೆಯಾಡಿ ದಂತೆ. ಹರಿವ ನಾಗರ ಹಿಡಿದು ಕೆನ್ನೆಯ ತುರಿಸಿಕೊಂಡಂತೆ. ಸುಣ್ಣದ ಕಲ್ಲು ಕಟ್ಟಿಕೊಂಡು ಮಡುವಿಗೆ ಬಿದ್ದಂತೆ ಎಂದು ಬಸವಣ್ಣನವರು ನುಡಿದಿದ್ದಾರೆ. ಅಪ್ಪಣ್ಣ ಶರಣರು ಕೂಡಾ ಅದೇ ಧಾಟಿಯಲ್ಲಿ ಹೇಳುತ್ತ ಜನರನ್ನು ಎಚ್ಚರಿಸಿದ್ದಾರೆ.

ಹುತ್ತದ ಮೇಲೆ ಸರ್ಪ ಸತ್ತಿದೆಯೆಂದು ಅದನ್ನು ಯಾರೂ ಮುಟ್ಟುವುದಿಲ್ಲ. ಹುಲಿಯನ್ನು ಅಪ್ಪಿಕೊಂಡ ಮನುಜರೂ ಇಲ್ಲ. ತತ್ವವ ಬಲ್ಲ ಶರಣರು ಸತ್ತ ಹಾಗೆ ಇರುತ್ತಾರೆ. ಅಂತಹವರನ್ನು ಕತ್ತೆಯ ಮನುಜರೆಂದು ಮರ್ತ್ಯದ ಮನುಜರು ನುಡಿದರೆ ಅವರೇನು ಸಿಟ್ಟಾಗುವುದಿಲ್ಲ. ಮರು ನುಡಿ ನುಡಿಯುವುದೂ ಇಲ್ಲ. ಆದರೆ ನುಡಿದವರ ಒಡಲು ಸುಡುವುದು. ಶರಣರಿಗೆ ನುಡಿದ ನುಡಿ ನುಡಿದ ಒಡಲನ್ನೇ ಸುಡದೆ ಬಿಡದು. ನುಡಿದ ಆ ಒಡಲು ಅತ್ತಲು ಅಲ್ಲ, ಇತ್ತಲೂ ಅಲ್ಲ ನೋಡಾ.

ಶರಣರದು ಸತ್ತ ಒಡಲು ! ಒಡಲನ್ನು ಆವರಿಸಿಕೊಂಡ ಮನವೆಂಬ ಹಾವು ಸತ್ತು ಬಿದ್ದಿದೆ. ಒಡಲೊಳಗಿದ್ದ ಸತ್ಯದ ಬೆಳಕು ಒಡಲನ್ನು ಬೆಳಗುತ್ತದೆ. ಇಂತಹ ಒಡಲಿಂಗೆ ಕತ್ತಲ ಮಾತುಗಳ ಪೆಟ್ಟು ಬಡಿಯುವುದಿಲ್ಲ. ಬಡಿದ ಮಾತುಗಳೆಲ್ಲ ಬೆಳಕಲ್ಲಿ ಬೆರೆತು ಬೆಳಗಾಗಿ ಬೆಳಗುತ್ತವೆ. ಮಾತ ಸ್ವೀಕರಿಸಿದ ಒಡಲು ಮೌನಿಯಾಗುತ್ತದೆ. ನುಡಿದ ಒಡ ಲು ಘಾಸಿಗೊಳ್ಳುತ್ತದೆ. ಏಕೆಂದರೆ ಶರಣರ ಒಡಲು ಸತ್ತ ಒಡಲು ! ಸತ್ಯದ ಒಡಲು.

ಸತ್ತ ಒಡಲ ಮುಂದೆ ಹಾಡಿದರೇನು ಆಡಿದರೇನು ಬಿರುನುಡಿ ನುಡಿದರೇನು ? ಅದು ಕೇಳಿಸಿಕೊಳ್ಳುವುದಿಲ್ಲ. ಶರಣರ ಒಡಲು ಸತ್ತ ಒಡಲಿನಂತಲ್ಲ ; ಅದು ಸತ್ಯದ ಒಡಲು ! ಒಡಲಿಗೆ ಬಡಿದ ನುಡಿಗಳನ್ನು ಅರಿವಿನಿಂದ ಕೇಳಿಸಿಕೊಳ್ಳುತ್ತದೆ. ಶಬ್ದ ನಿಃಶಬ್ದ ಮಾಡಿ ; ಆ ಶಬ್ದವನ್ನು ನಪುಂಸಕ ಮಾಡಿ ಕೇಳಿಸಿಕೊಳ್ಳುತ್ತದೆ. ಪ್ರತಿ ಶಬ್ದದಲ್ಲಿ ಅರಿವಿದೆ. ಅರಿವಿನ ಕಿವಿಗಳಿಂದ ಕೇಳಿಸಿಕೊಂಡರೆ ಶಬ್ದ ಅರಿವಾಗಿ, ನಪುಂಸಕವಾಗಿ,ನಿಃಶಬ್ದದಿಂದ ಯಾವ ಗಲಾಟೆ ಮಾಡದಂತೆ ತನುವಿನಲ್ಲಿ ಸೇರುತ್ತದೆ. ಶಬ್ದ ತನುವಿಗೆ ಪ್ರಸಾದವಾಗುತ್ತದೆ. ಅದು ತನುವಿನಲ್ಲಿ ಜೀರ್ಣವಾಗುತ್ತದೆ.ತನು ವಿಕೃತಗೊಳ್ಳುವುದಿಲ್ಲ. ಇದು ಶರಣನಿಗೆ ಮಾತ್ರ ಸಾಧ್ಯ. ಬ್ರಹ್ಮ ಜ್ಞಾನಿಗೆ ಮಾತ್ರ ಸಾಧ್ಯ. ತಿಳಿದರೆ ಸರ್ವ ತನುಗಳಿಗೂ ಸಾಧ್ಯ.

234

ಹುತ್ತದ ಮೇಲೊಂದು ಕಸ್ತೂರಿಯ ಮೃಗವ ಕಂಡೆ.
ಅದಕ್ಕೆ ಉದಯ ಅಸ್ತಮಯವಿಲ್ಲ.
ಒದವಿದ ಅಮೃತವನುಂಬುವುದು, ಸದಮಲವಾಸನೆಯ ತೀಡುವುದು.
ಆ ವಾಸನೆಯ ಬೆಂಬಳಿವಿಡಿದು,ನಾನು ಆ ವಾಸಕ್ಕೆ ಹೋಗಿ,
ದೇಶದ ಹಂಗು ಮರೆದು, ಸಾಸಿರ ಮುಖವಾಗಿಪ್ಪ ಈಶನೊಳು
ಲೇಸಿಂದ ಬೆರೆದು,ಮೀಸಲಳಿಯದೆ ಐಕ್ಯವಾದೆನಯ್ಯಾ ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಕಸ್ತೂರಿ ಹೊಕ್ಕಳಲ್ಲಿದ್ದರೂ ಅದು ಎಲ್ಲಿದೆಯೆಂದು ಮೃಗಕ್ಕೆ ಗೊತ್ತಿಲ್ಲ. ಹೀಗಾಗಿ ಕಸ್ತೂರಿಗಾಗಿ ದಣಿವರಿಯದೆ ಓಡುತ್ತ ಓಡುತ್ತ ಅಕಾಲ ಮೃತ್ಯುವಿಗೆ ಒಳಗಾಗುತ್ತದೆ. ಅಂತೆಯೇ ಮನುಷ್ಯನಿಗೂ ಕೂಡಾ ಆತನಲ್ಲಿದ್ದ ಅರಿವಿನ ಪರಿಮಳ ಆತನಿಗೇ ಗೊತ್ತಿಲ್ಲ. ಹೀಗಾಗಿ ಮನುಷ್ಯನೇ ಬರೆದ ಪುಸ್ತಕದಲ್ಲಿ ಅರಿವನು ಹುಡುಕುತ್ತಾನೆ.ಮನುಷ್ಯನೇ ಕೆತ್ತಿದ ಕಲ್ಲು ಲೋಹಗಳಲ್ಲಿ ಅರಿವನು ಹುಡುಕುತ್ತಾನೆ. ಮನುಷ್ಯ ಮನುಷ್ಯನಿಗೆ ಮರುಳಾಗಿ ಆ ಮನುಷ್ಯನಲ್ಲಿ ಅರಿವಿನ ಪರಿಮಳ ಹುಡುಕುತ್ತಾನೆ. ತನ್ನಲ್ಲಿಯೇ ಅರಿವಿನ ಪರಿಮಳ ಹುಡುಕುವುದನ್ನು ಮರೆಯುತ್ತಾನೆ. ಹಾಗೆ ಹುಡುಕಿದಾತನೇ ಜ್ಞಾನಿ.

ಅದು ಕಸ್ತೂರಿಯ ಮೃಗ ! ಅದಕ್ಕೆ ಬೆಳಕು ರಾತ್ರಿಗಳಿಲ್ಲ. ದಿನ ಒಂದೇ ಶರಣನಿಗೆ !

ತನುವಿನಲ್ಲಿ ತನ್ಮಯವಾದ ಅರಿವಿನ ವಾಸನೆ ಅದು ಸದಮಲ ವಾಸನೆ. ಸದಾ ಅರಿವಿನ ಅಮಲಿನಲ್ಲಿಡುವ ಅರಿವಿನ ಅಮೃತ ವಾಸನೆ. ಆ ವಾಸನೆಯ ಬೆಂಬಳಿವಿಡಿದು ಆ ವಾಸಕ್ಕೆ ಹೋಗಿ ಅಲ್ಲಿಯೇ ಲೀನವಾಗಿ ಮನ ಘನಮನವಾಗುವುದು.ದೇಶ ಭಾಷೆ ಜಾತಿ ಮತ ಪಂಥ ಹೆಣ್ಣು ಗಂಡು ಶ್ರೀಮಂತ ಬಡವನೆಂಬ ಅಜ್ಞಾನದ ಹಂಗು ಹರಿದು ಅದನ್ನು ಮರೆದು ಸಾಸಿರ ಮುಖವಾಗಿಪ್ಪ ಈಶನೊಳು ಬಲು ಲೇಸಿಂದ ಬೆರೆಯುವುದು.

ಮನ ಇರುವುದೇ ಘನಕ್ಕೆ ಮೀಸಲಾಗುವುದಕ್ಕೆ. ಅಂತಹ ಮೀಸಲಳಿಯದೆ ಘನದಲ್ಲಿ ಮನ ಐಕ್ಯವಾಗಿ ಘನಮನವಾಗುವುದು.ಅರ್ಧನಾರೀಶ್ವರನೇ ತಾನಾಗುವುದು.

235

ಹುಸಿಯ ಹಟ್ಟಿಯಲಿಪ್ಪ ಸೊನಗ, ಹಾಕಿದ ಹಿಟ್ಟಿಗೆ ಬೊಗಳುವುಂತೆ.
ಆರಾದರೂ ಕೊಟ್ಟುದೊಂದು ವಾಟುಹಾಸಿಗೆ,ಅವರಿಚ್ಛೆಗೆ ಬೊಗಳುವ
ಖೊಟ್ಟಿಗಳ ಮಾತ ಕೇಳಲಾಗದು.
ಅದೇನು ಕಾರಣವೆಂದರೆ,ಮುಟ್ಟಿ ಅವರ ಸಂಗವ ಮಾಡುವ ಮನುಜಗೆ,
ಕರ್ಮ ಕಟ್ಟಿಹುದಲ್ಲದೆ ಮಾಣದು ನೋಡಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಹಾಕಿದ ಅನ್ನಕ್ಕೆ ಬೊಗಳುವ ನಾಯಿಯಂತೆ ಮನ. ಅದು ಹುಸಿಯ ಮನೆಯಲ್ಲಿ ಮನೆ ಮಾಡಿಕೊಂಡು ಆ ಮನೆಯನ್ನೇ ತನ್ನದೆಂದುಕೊಂಡಿದೆ. ಹುಸಿಯ ಹಟ್ಟಿ ಎಂದರೆ ದೇಹ. ಇದು ಹುಸಿ. ಇಲ್ಲದ ಜಾಗದಿಂದ ಬಂದು ಇಲ್ಲವಾಗುತ್ತದೆ. ಮನ ಕೂಡಾ ಇಲ್ಲದ್ದೇ ; ಇಲ್ಲದ ಮನ ಇದ್ದಂತೆ ನಾಯಿಯ ರೀತಿ ಹಿಟ್ಟಿಗಾಗಿ ಬೊಗಳುತ್ತದೆ. ಹೀಗೆ ಬೊಗಳುವ ನಾಯಿಯ ಮಾತ ಕೇಳಲಾಗದು. ಅದರ ಸಂಗವನು ಮಾಡಲಾಗದು. ಮನವೆಂಬ ನಾಯಿಯ ಸಂಗ ಮಾಡುವ ಮನುಜನಿಗೆ ಕರ್ಮ ಕಟ್ಟಿಹುದಲ್ಲದೆ ಮಾಣದು.

ಇದು ಅತಿ ಸೂಕ್ಷ್ಮವಾದ ಸೂತ್ರ. ಒಂದು ತನುವಿಗೆ ಮತ್ತೊಂದು ತನು ವೈರಿಯೂ ಅಲ್ಲ; ಮಿತ್ರನೂ ಅಲ್ಲ. ತನುವಿಗೆ ತನುವನ್ನು ಆವರಿಸಿದ ಮನವೇ ವೈರಿ. ತನುವಿನಲ್ಲಿದ್ದ ಘನದ ಸಂಗಯ್ಯನ ಸಂಗ ಮಾಡುವ ಮನವೇ ಮಹಾದೇವ ; ಘನಮನ. ತನುವಿನಲ್ಲಿಯೇ ಕೆಲಸವಿದೆ. ಆದರೆ ತನು ತನುವನ್ನು ಬಿಟ್ಟು ಅನ್ಯ ತನುಗಳ ಸಹಾಯಕ್ಕಾಗಿ ಹರಿದಾಡುತ್ತದೆ.

ಮಸರಕಲ್ಲಿನ ಮುಕ್ತಾಯಕ್ಕ ತನುವಿನಲ್ಲಿ ತನ್ಮಯವಾದ ಸಂಪತ್ತನ್ನು ಕುರಿತು ಹೀಗೆ ಹೇಳುತ್ತಾಳೆ:

ವಾರಿಕಲ್ಲ ಕೊಡನ ತುಂಬ ಮುತ್ತು ಮಾಣಿಕವ ತುಂಬಿ, ಎತ್ತುವವರಿಲ್ಲದೆ ಸಖಿಯನು ಅರಸುತಿಪ್ಪೆ. ತನುವಿನ ಮನದಲ್ಲಿ ಮನದ ಆ ತನುವಿನಲ್ಲಿ, ಮನ ಮೇರೆ ದಪ್ಪಿ ತನಗೆ ತಾನು ಎತ್ತಿಕೊಂಡಡೆ ಉಕ್ಕಿ ಹರಿದಿತ್ತ ಅಜಗಣ್ಣನ ಭಾವ. ಎಂತಹ ಸುಂದರವಾದ ಸೂತ್ರ ! ತನುವಿನ ತುಂಬಾ ಮುತ್ತು ಮಾಣಿಕ್ಯಗಳು ತುಂಬಿವೆ. ತನು ಎಂಬುದೊಂದು ವಾರಿಕಲ್ಲಿನ ಕೊಡ. ಜಲ ಬಿಂದು ಗರ್ಭ ಹೊಕ್ಕು , ಆ ಜಲವೆ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಆಗಿ ಅವು

ಸೋರದಂತೆ ಚರ್ಮದ ಹೊದಿಕೆಯಿಂದ ಬಂಧಿಸಿ ಸುಂದರವಾದ ತನುವೆಂಬ ಹೆಸರು ಪಡೆದು ಗರ್ಭದಿಂದ ಹೊರಬಂದಿದೆ. ಅಂದ ಮೇಲೆ ಇದು ವಾರಿಕಲ್ಲ ಕೊಡವಲ್ಲವೆ? ಇದರ ತುಂಬ ಅರಿವಿನ ಮುತ್ತು ಮಾಣಿಕ್ಯಗಳೆ ತುಂಬಿವೆ. ಯಾರಾದರೂ ಎತ್ತುವುದಕ್ಕಾಗಿ ತನು ತನುವನ್ನೇ ಹುಡುಕುತ್ತದೆ. ತನು ತನುವನ್ನು ಎತ್ತಲು ಸಾಧ್ಯವೆ ? ತನು ತನುವಿಗೆ ಬೋಧಿಸಲು ಸಾಧ್ಯವೆ ?

ತನುವಿನ ತುಂಬಾ ಅರಿವೆಂಬ ಗುರುದೇವನೇ ಭರಿತನಾಗಿದ್ದಾನೆ. ತನುವನ್ನು ಆವರಿಸಿದ ಮನ ತನುವಿನಲ್ಲಿಯೇ ತನ್ಮಯವಾದ ಆ ಗುರುವಿನ ಸಂಬಂಧವನ್ನು ಬೆಳೆಸಬೇಕು ಇದು ತನಗೆ ತಾನೆ ಘಟಿಸಬೇಕು. ಯಾರಾದರೂ ಹೇಳಬಹುದು. ಆದರೆ ಹೇಳಿದವರ ಹಿಂದೆಯೇ ಮನ ನಾಯಿಯಂತೆ ಓಡಿದರೆ ಹೇಗೆ ? ಗುರು ಇರುವುದು ತನುವಿನಲ್ಲಿ, ಮನ ನೋಡುವುದು ಹೊರಗೆ. ಹೊರಗಿನ ಪುಸ್ತಕ, ಹೊರಗಿನ ಗುರು, ಹೊರಗಿನ ಕಲ್ಲು ಮಣ್ಣನ್ನೇ ಸಂಪತ್ತೆಂದು ತಿಳಿದು ತುಂಡು ಹಾಕಿದವರ ಹಿಂದೆ ಮನ ಓಡಿದರೆ ಅದಕ್ಕೆ ಅರಿವೆಂಬ ಗುರುವಿನ ದರ್ಶನ ಆಗುವುದು ಯಾವಾಗ ? ಅದೆಲ್ಲ ಖೊಟ್ಟಿ ಮಾತು. ಅವರಿಚ್ಛೆಗೆ ಬೊಗಳಿದ ನಾಯಿಯೆಂಬ ಮನಕ್ಕೆ ಗುರು ಒಲಿಯುವುದಿಲ್ಲ. ಅದರ ಸಂಗವನು ಮಾಡುವುದಿಲ್ಲ. ಸಾರಾಯದ ಮಾರ್ಗವನು ಯಾರು ತೋರಿದರೇನು ಅಂಗದಲ್ಲಿ ಸಂಗಮವಾಗುವ ಬಯಕೆ ಮಾತ್ರ ಮನಕ್ಕಿರಬೇಕು.

236

ಹೆತ್ತವರೇ ಹೆಸರಿಡಬೇಕಲ್ಲದೆ, ತೊತ್ತಿರು ಬಂಟರು ಎತ್ತ ಬಲ್ಲರೊ ?
ಕರ್ತೃ ನಿಮ್ಮ ನೆಲೆಯ ನಿಮ್ಮ ಒತ್ತಿನಲಿಪ್ಪ ಶರಣರು ಬಲ್ಲರಲ್ಲದೆ,
ಈ ಸತ್ತು ಹುಟ್ಟುವ ಮನುಜರೆತ್ತ ಬಲ್ಲರೊ ?
ನಿತ್ಯವಪ್ಪ ಮಹಾಘನ ಗುರು ಮಾತ ನೀನೆ ಬಲ್ಲೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಹೆತ್ತವರಿಗೆ ಕಾಗೆಯೂ ಕೋಗಿಲೆ. ಅಪ್ಪಣ್ಣ ಶರಣರು ತಮ್ಮ ಈ ವಚನದಲ್ಲಿ ಹೆತ್ತವನನ್ನು ಸ್ಮರಿಸಿದ್ದಾರೆ. ಹೊತ್ತವಳನ್ನಲ್ಲ. ಅದಕ್ಕೆ ಕಾರಣವಾದ ತಂದೆಯನ್ನೂ ಅಲ್ಲ. ತಂದೆ ನೀನು, ತಾಯಿ ನೀನು, ಬಂಧು ನೀನು ಬಳಗ ನೀನು. ನೀನಲ್ಲದೆ ಮತ್ತಾರೂ ಇಲ್ಲವಯ್ಯಾ ಕೂಡಲಸಂಗಮದೇವಾ ಎಂದು ಅಣ್ಣ ಬಸವಣ್ಣ ಹೆತ್ತವನನ್ನು ಸ್ಮರಿಸಿದ್ದಾರೆ. ಹೊತ್ತು ಹೆತ್ತವರಿಗೆ ಪ್ರೀತಿ ಸುಖ ದುಃಖ ಸಿಟ್ಟು ದ್ವೇಷ ಮಮಕಾರ ಮೋಹ ಎಲ್ಲ ಇರುತ್ತದೆ. ಆದರೆ ಹೆತ್ತವನಿಗೆ ಹಾಗಲ್ಲ ಮಗುವಿನ ತಪ್ಪು ಅನಂತ ಕೋಟಿಯಾದರೇನು ತಂದೆಯ ಸೈರಣೆಗೆ ಲೆಕ್ಕವಿಲ್ಲ. ಹೊತ್ತವರು ಹಾಗಲ್ಲ. ಮಗುವಿನ ಹತ್ತಾರು ತಪ್ಪುಗಳನ್ನು ಮಾತ್ರ ಸೈರಣೆ ಮಾಡುತ್ತಾರೆ. ಅದೂ ನೊಂದು ಬೆಂದು. ಮತ್ತೊಂದು ತಪ್ಪಿಗೆ ಮನೆಯಿಂದ ಹೊರಗೆ ತಳ್ಳುತ್ತಾರೆ. ಕೊಲೆ ಮಾಡಲೂ ಹೇಸುವುದಿಲ್ಲ. ಅದಕ್ಕಾಗಿಯೇ ಶರಣರು ಹೊತ್ತವರನ್ನು ಲಕ್ಷಿಸಲಿಲ್ಲ. ಹೆತ್ತವನನ್ನು ಲಕ್ಷಿಸಿದರು. ಅವನಿಗೆ ತಂದೆ ತಾಯಿ ಬಂಧು ಬಳಗ ಏನೆಲ್ಲ ನೀನೆ ಎಂದು ಕರೆದರು.

ಹೆತ್ತವನು ಹೊರಗಿಲ್ಲ. ಹೆತ್ತವನನ್ನೇ ಹೊತ್ತು ತಿರುಗುವ ತನಗೆ ಹೆತ್ತವನ ಪರಿಚಯವಿಲ್ಲ! ಇದೊಂದು ಸೋಜಿಗವೇ ಸರಿ ! ಆತ ಕರ್ತೃ. ಆತನ ನೆಲೆಯನು ಆತನನ್ನು ಹೊತ್ತು ತಿರುಗುವ

ಗೊತ್ತನರಿದ ಶರಣರು ಮಾತ್ರ ಬಲ್ಲರಲ್ಲದೆ ಸತ್ತು ಹುಟ್ಟುವ ಮನುಜರೆತ್ತ ಬಲ್ಲರೊ ? ಎಂದು ಪ್ರಶ್ನಿಸುತ್ತಾರೆ ಅಪ್ಪಣ್ಣ ಶರಣರು.

ತನುವಿನ ಹಣೆಬರಹವೇ ಹೀಗೆ. ಅದರ ಶಕ್ತಿ ಅದಕ್ಕೆ ಗೊತ್ತಿಲ್ಲವಲ್ಲ ಎನ್ನುವ ಅಳಲು ಶರಣರಿಗೆ. ತನುವಿನ ಶಕ್ತಿ ತನುವಿಗೆ ಪರಿಚಯಿಸಲು ಪರಿಪರಿಯಿಂದ ಹೇಳಿದ ಬುದ್ಧನನ್ನು , ಮಹಾವೀರನನ್ನು , ಏಸುಕ್ರಿಸ್ತನನ್ನು , ಸಂತ ಪೈಗಂಬರರನ್ನು , ಶರಣರನ್ನು , ದಾಸವರೇಣ್ಯರನ್ನು ತನು ಪೂಜಿಸಿ ಧನ್ಯತೆ ಮೆರೆಯಿತೆ ವಿನಃ ಅದರಂತಾಗಲಿಲ್ಲ. ತನುವಿನಲ್ಲಿಯೇ ತನ್ಮಯವಾದ ತನುವೇ ಹೊತ್ತು ತಿರುಗುವ ಭಗವಂತನನ್ನು ಮರೆಯಿತು. ತನುವಿನಲ್ಲಿ ಶಕ್ತಿ ಹೀಗೆ ಅದ್ಭುತವಾಗಿದೆ ಎಂದು ಹೇಳಿದ ತನುಗಳನ್ನೇ ಪೂಜಿಸಿತು.

ಬಸವಣ್ಣನವರು ತನುವಿನಲ್ಲಿರುವ ಶಕ್ತಿಯನ್ನು ಹೀಗೆ ಬಣ್ಣಿಸುತ್ತಾರೆ :

ಅಯ್ಯಾ ನೀನು ನಿರಾಕಾರವಾಗಿರ್ದಲ್ಲಿ ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ. ಅಯ್ಯಾ ನೀನು ನಾಟ್ಯಕ್ಕೆ ನಿಂದಲ್ಲಿ ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ. ಅಯ್ಯಾ ನೀನು ಆಕಾರವಾಗಿರ್ದಲ್ಲಿ ನಾನು ವೃಷಭನೆಂಬ ವಾಹನವಾಗಿರ್ದೆ ಕಾಣಾ. ಅಯ್ಯಾ ನೀನೆನ್ನ ಭವವ ಕೊಂದೆಹೆನೆಂದು, ಜಂಗಮಲಾಂಛನವಾಗಿ ಬಂದಡೆ ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ, ಕೂಡಲಸಂಗಮದೇವಾ.

ಆಹಾ ! ಎಂತಹ ಸತ್ಯವಾದ ಉಪಮೆ ! ಪ್ರತಿ ತನುವಿನಲ್ಲಿ ತನ್ಮಯವಾದ ಶಕ್ತಿಯನ್ನು ಆ ತನುವಿಗೆ ಹೇಳಿದರೂ ತಿಳಿಯಲಾರದ ತನು. ಭಗವಂತನನ್ನು ಹೊತ್ತು ತಿರುಗುವ ತನು ಭಗವಂತನನ್ನು ಹುಡುಕುತ್ತದೆ. ಆತನಿಗಾಗಿ ಭವ್ಯ ಮಂದಿರಗಳನ್ನು ಕಟ್ಟಿಸುತ್ತದೆ. ಕಲ್ಲನ್ನು , ಕೆತ್ತಿದವನನ್ನು ಮರೆತು, ಭಗವಂತನನ್ನು ಹೊತ್ತ ತನುವಿನಿಂದಲೇ ಭಗವಂತನೆಂದು ತಿಳಿದು ಕಲ್ಲನ್ನೇ ಪೂಜಿಸುತ್ತದೆ. ಇದು ಭಗವಂತನನ್ನು ಹೊತ್ತ ತನುವಿನ ದುರ್ದೈವವಲ್ಲದೆ ಮತ್ತೇನು ?

ದೇವರು ಇಲ್ಲ ; ಅವನೇ ಅಲ್ಲ. ಅವನು ಸಾಕಾರನಲ್ಲ ; ನಿರಾಕಾರ. ಅವನಿಗೆ ಪ್ರಾರ್ಥನೆಯೇ ಪೂಜೆ ಎಂದದ್ದೇ ಸಾಕಾಯಿತು. ತನುಗಳು ಪ್ರಾರ್ಥನಾ ಮಂದಿರಗಳಿಗೆ ತೆರಳಿದವ ಭವ್ಯವಾದ ಪ್ರಾರ್ಥನಾ ಮಂದಿರಗಳು ಸಿದ್ಧವಾದವು. ಪ್ರಾರ್ಥಿಸುವ ತನುಗಳದೇ ಒಂದು ಧರ್ಮವಾಯಿತು. ಜಾತಿ ಮತ ಪಂಗಡ ಕೋಮು ಭಾವನೆಗಳು ತನುವಿನಲ್ಲಿ ಮನೆ ಮಾಡಿಕೊಂಡವು. ಪ್ರಾರ್ಥಿಸುವ ತನು ಪ್ರಾರ್ಥಿಸದ ತನುಗಳನ್ನು ಕೊಂದವು. ಸಂತನ ಭಾಷೆ ತಿಳಿಯದ್ದಕ್ಕಾಗಿ ತನುವಿಗೆ ಈ ಪ್ರಾರಬ್ಧ. ತನುವಿನೊಳಗೆ ನಿರಾಕಾರದ ಭಗವಂತನನ್ನು ಹೊತ್ತು ಕೊಂಡು ತನಗರಿಯದಂತೆ ತನು ಸೈತಾನನಾಯಿತು. ಮುಸಲ್ಮಾನನಾಯಿತು. ಕ್ರಿಶ್ಚಿಯನ್ ಆಯಿತು. ತನುವಿನೊಳಗೆ ತನ್ಮಯವಾದ ನಿರಾಕಾರ ಭಗವಂತನನ್ನು ತನುವಿನಿಂದಲೇ ಪ್ರಾರ್ಥಿಸುವ ಇಸ್ಲಾಮನಾಗಲಿಲ್ಲ. ಏಸುಕ್ರಿಸ್ತನಂತೆ ಆಗಲಿಲ್ಲ.

ಅಯ್ಯಾ,ನೀನು ನಿರಾಕಾರವಾಗಿರ್ದಲ್ಲಿ ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ. ಇದು ಎಂತಹ ಸುಂದರವಾದ ಮಾತು. ಸಾಕಾರದಲ್ಲಿ ನಿರಾಕಾರ ಸಮ್ಮಿಳಿತವಾಗಿದೆ. ಕಣ್ಣು ಸಾಕಾರ. ನೋಡುವ ದೃಷ್ಟಿ ನಿರಾಕಾರ ! ಅಲ್ಲಿ ಭಗವಂತ ಮನೆ ಮಾಡಿಕೊಂಡಿದ್ದಾನೆ. ಆತನನ್ನು ನಿರಾಕಾರದ ದೃಷ್ಟಿಯಿಂದಲೇ ಪೂಜಿಸಬೇಕು. ತನು ಒಂದೇ. ತನುವಿನ ಚರ್ಮ, ಕಣ್ಣು , ಕಿವಿ, ಮೂಗು ನಾಲಗೆಗಳೆಲ್ಲ ಒಂದೇ. ಮುಸಲ್ಮಾನ, ಕ್ರೈಸ್ತ , ಹಿಂದೂ, ಪಾರ್ಸಿಗಳೆಂದು ಇಲ್ಲ. ಆದರೆ ಸೈತಾನನೆಂಬ ಅಜ್ಞಾನಿ ಕಣ್ಣಲ್ಲಿ ಆವರಿಸಿಕೊಂಡಿದ್ದರಿಂದ ಕಣ್ಣಿಗೆ ಹಿಂದು, ಮುಸಲ್ಮಾನ,

ಕ್ರೈಸ್ತ, ಹೆಣ್ಣು, ಗಂಡು, ಶ್ರೀಮಂತ, ಬಡವನೆಂದು ಕಾಣುತ್ತದೆ. ಹೀಗೆ ನೋಡುವ ಸೈತಾನನೂ ನಿರಾಕಾರ. ಇವೆಲ್ಲವುಗಳನ್ನು ಕಳೆದು ತನುವನ್ನು ತನ್ನಂತೆ ಇರುವ ತನುವೆಂದು ನೋಡುವ ಜ್ಞಾನವೂ ನಿರಾಕಾರ. ಆಹಾ ! ಎಂತಹ ಚಮತ್ಕಾರ.

ಕಣ್ಣಿನಲ್ಲಿಯೇ ಇದ್ದು ಕಣ್ಣಿಗೆ ಇಂತಹ ನೋಡುವ ಜ್ಞಾನವನ್ನು ಕರುಣಿಸಿದ ನಿರಾಕಾರ ಭಗವಂತನನ್ನು ನಿರಾಕಾರ ಜ್ಞಾನದಿಂದಲೇ ಪ್ರಾರ್ಥಿಸಬಾರದೆ ? ದೃಶ್ಯವೂ ನಿರಾಕಾರ. ಜ್ಞಾನವೂ ನಿರಾಕಾರ ! ಒಬ್ಬ ಭಗವಂತ ; ಮತ್ತೊಬ್ಬ ಭಕ್ತ ! ಕಣ್ಣು ಮತ್ತು ತನು ಮಾತ್ರ ಸಾಕಾರ. ಇಂತಹ ಸುಂದರವಾದ ಕಣ್ಣಿನಲ್ಲಿ ಸೈತಾನ ಆವರಿಸಿದ್ದಾನೆ. ಭಗವಂತನನ್ನು ಮರೆತು, ಜ್ಞಾನವನ್ನು ಮರೆತು ಸಾಕಾರ ಕಣ್ಣನ್ನು ಬಳಸಿ ಆ ಕಣ್ಣಿನಿಂದಲೇ ನೋಡುತ್ತಾನೆ. ಸೈತಾನನಿಗೆ ಕಾಣುವುದೆಲ್ಲ ಸುಳ್ಳೆ. ತನ್ನಂತೆಯೇ ಇರುವ ತನು ತನಗೆ ಭೋಗದ ಹೆಣ್ಣಾಗಿ, ಗಂಡಾಗಿ ಕಾಣುತ್ತದೆ. ಶ್ರೀಮಂತ ಬಡವನಾಗಿ ಕಾಣುತ್ತದೆ. ಹಿಂದು ಮುಸಲ್ಮಾನ ಕ್ರೈಸ್ತ ಘಾರ್ಸಿಯಾಗಿ ಕಾಣುತ್ತದೆ.

ಕಣ್ಣಲ್ಲಿದ್ದ ಭಗವಂತನ ತೇಜವಾದ ಕಿರಣ, ಆತನನ್ನು ಪ್ರಾರ್ಥಿಸಿ ಪೂಜಿಸುವ ಜ್ಞಾನಿಯೆಂಬ ಭಕ್ತನ ಮಾತುಗಳು ಕಣ್ಣನ್ನು ಆವರಿಸಿದ ಸೈತಾನನಿಗೆ ಕೇಳದೆ ಹೋಗುತ್ತವೆ. ಕಣ್ಣು ಸೈತಾನನ ಸಾಮ್ರಾಜ್ಯವಾಗುತ್ತದೆ. ಗಡ್ಡ ಬಿಟ್ಟ ತನುವನ್ನು ತನ್ನವನೆನ್ನುತ್ತಾನೆ. ಜುಟ್ಟು ಬಿಟ್ಟ ತನುವನ್ನು, ಶಿಲುಬೆ ಧರಿಸಿದ ತನುವನ್ನು ಖಡ್ಗ ಹಿಡಿದು ಕೊಲ್ಲುತ್ತಾನೆ. ತನುವಿನಲ್ಲಿ ಹಿಂದು ಮುಸಲ್ಮಾನ ಕ್ರೈಸ್ತರೆಂಬ ಸೈತಾನರು ಮನೆ ಮಾಡಿದ್ದಾರೆ. ಅವರದೇ ಸಾಮ್ರಾಜ್ಯ. ಒಂದನ್ನು ಗೌರವಿಸುತ್ತಾರೆ ಮತ್ತೊಂದನ್ನು ಕೊಲ್ಲುತ್ತಾರೆ.

ಕೋರ್ಟು, ಪೊಲೀಸರು, ಸರಕಾರ ತನುವಿಗೆ ಶಿಕ್ಷೆ ನೀಡುತ್ತವೆ. ತನು ಭಗವಂತನದೆಂದು ಅವುಗಳಿಗೆ ಗೊತ್ತಿಲ್ಲ. ಅಲ್ಲಿ ಭಗವಂತನೂ ಇದ್ದಾನೆ, ಜ್ಞಾನಿಯೂ ಇದ್ದಾನೆ, ಸೈತಾನನೂ ಇದ್ದಾನೆ. ಸೈತಾನನಿಗೆ ಶಿಕ್ಷೆ ಕೊಡುವ ತಾಕತ್ತು ಸರಕಾರ-ಕೋರ್ಟು, ಪೊಲೀಸರಿಗೆ ಇಲ್ಲ. ಸೈತಾನನ್ನು ಕೊಲ್ಲುವ ಶಕ್ತಿ ಜ್ಞಾನಿಗೆ ಮಾತ್ರ ಇದೆ; ಭಗವಂತನಿಗೆ ಮಾತ್ರ ಇದೆ. ಅವರಿಬ್ಬರೂ ತನುವಿನಲ್ಲಿಯೇ ಇದ್ದಾರೆ. ತನು ಭಗವಂತನನ್ನು ಹೊತ್ತಿದೆ; ಜ್ಞಾನಿಯನ್ನೂ ಹೊತ್ತಿದೆ; ಸೈತಾನನ್ನೂ ಹೊತ್ತಿದೆ.

ಅಜ್ಞಾನದ ಯುದ್ಧ ತನುವೆಂಬ ಕುರುಕ್ಷೇತ್ರದಲ್ಲಿಯೇ ನಡೆದಿದೆ. ತನು ಭಗವಂತನ ಸೊತ್ತು. ಜ್ಞಾನಿಯ ತೊತ್ತಾಗಬೇಕಿತ್ತು ; ಆದರೆ ಸೈತಾನನ ಕೈವಶವಾಗಿದೆ. ಈ ಸೈತಾನನನ್ನು ಭಗವಂತ ಮಾತ್ರ ಕತ್ತರಿಸಬಲ್ಲ ; ಜ್ಞಾನಿಯ ಕೈವಶಕ್ಕೆ ಕೊಡಬಲ್ಲ. ಆಗ ತನು ಜ್ಞಾನಿಯ ಸಾಮ್ರಾಜ್ಯವಾಗುತ್ತದೆ.

ಒಂದು ತನು ಮತ್ತೊಂದು ತನುವನ್ನು ಸುಧಾರಿಸಲಾರದು. ಅದೇನಿದ್ದರೂ ನಾಟಕ; ಮುಖವಾಡ. ಬದಲಾಗಿ ತನುವನ್ನೇ ತನು ಸುಧಾರಿಸಿಕೊಳ್ಳಬೇಕು. ಏಕೆಂದರೆ ತನುವಿನಲ್ಲಿಯೇ ಸುಧಾರಿಸಿಕೊಳ್ಳುವ ಸಕಲ ಉಪಕರಣಗಳಿವೆ! ಭಗವಂತನಿದ್ದಾನೆ; ಜ್ಞಾನಿಯೂ ಇದ್ದಾನೆ. ಇವರಿಬ್ಬರನ್ನೂ ತಿಳಿಯುವ ಜ್ಞಾನವೂ ಇದೆ. ಹೀಗಿದ್ದ ಮೇಲೆ ಒಂದು ತನು, ತನುವಿನಿಂದ ಹೊರಬಂದ ಪುಸ್ತಕ ತನುವನ್ನು ಸುಧಾರಿಸಲು ಸಾಧ್ಯವೆ ?

ಹೆತ್ತವರೇ ಹೆಸರಿಡಬೇಕಲ್ಲದೆ, ತೊತ್ತಿರು ಬಂಟರು ಎತ್ತಬಲ್ಲರೊ? ಕರ್ತೃ ನಿಮ್ಮ ನೆಲೆಯ ನಿಮ್ಮ ಒತ್ತಿನಲಿಪ್ಪ ಶರಣರು ಬಲ್ಲರಲ್ಲದೆ, ಈ ಸತ್ತು ಹುಟ್ಟುವ ಮನುಜರೆತ್ತ ಬಲ್ಲರೊ? ನಿತ್ಯವಪ್ಪ ಮಹಾಘನ ಗುರು ಮಾತ ನೀನೆ ಬಲ್ಲೆ.

ಅಪ್ಪಣ್ಣ ಶರಣರು ತನು ಹೆತ್ತವನನ್ನು ಬಲ್ಲ ಜಾಣರು ಅವರು. ಹೀಗಾಗಿ ತನುವನ್ನು

ಶೃಂಗಾರಗೊಳಿಸುವ ಕಾಯಕದಲ್ಲಿ ನಿರತರಾದರು. ಏಕೆಂದರೆ ತನುವನ್ನು ಹೆತ್ತವನು ತನುವಿನಲ್ಲಿಯೇ ಇದ್ದಾನೆ. ಹೆತ್ತವನನ್ನು ಹೊತ್ತ ತನು ಸಾಮಾನ್ಯವೆ ? ಅದು ಭಗವಂತನನ್ನು ಹೊತ್ತ ತನು. ಆ ತನುವಿನ ಸೇವೆ ಮಾಡುವುದೆಂದರೆ ಭಗವಂತನ ಸೇವೆ ಮಾಡಿದಂತೆ.

ತನುವಿನ ತಲೆಕೂದಲು ಕತ್ತರಿಸಿ ಶೃಂಗಾರಗೊಳಿಸುವುದು, ಮೀಸೆ, ಗಡ್ಡ ಮೂಗಿನ, ಕಿವಿಯ ಕೂದಲು ಕತ್ತರಿಸಿ ಓರಣಗೊಳಿಸುವುದು. ಕೈ ಕಾಲು ಬೆರಳುಗಳ ಉಗುರು ತೆಗೆದು ಆರೋಗ್ಯವಾಗಿಡುವುದು. ಇದು ಅಪ್ಪಣ್ಣ ಮಾಡಿದ ತನುವಿನ ಸೇವೆ. ಅದು ಹಿಂದುವಾದರೇನು, ಮುಸಲ್ಮಾನನಾದರೇನು, ಕ್ರೈಸ್ತನದಾದರೇನು? ತನು ಒಂದೇ ಅದರ ಕೂದಲು ಉಗುರು ಒಂದೇ. ಅದರಲ್ಲಿದ್ದ ಜ್ಞಾನ ಒಂದೇ. ಅದರಲ್ಲಿದ್ದ ಭಗವಂತ ಒಬ್ಬನೇ. ಅದನ್ನು ಓರಣಗೊಳಿಸುತ್ತ ಅದರ ಕತೆಯನ್ನು ಅದಕ್ಕೆ ಅರುಹುವುದು. ಅದನ್ನು ತಿಳಿದಾತ ಅಪ್ಪಣ್ಣ ಮಾತ್ರ. ದೇವನನ್ನು ಹೊತ್ತ ದೇಹದ ಸೇವೆ ಮಾಡುವ ಭಾಗ್ಯ ಯಾರಿಗುಂಟು ? ಪೈಗಂಬರ, ಕ್ರಿಸ್ತ, ಕ್ರಿಷ್ಣ, ಬುದ್ಧ , ಮಹಾವೀರ, ಬಸವಾದಿ ಶರಣರಿಗೆ ದಾಸವರೇಣ್ಯರಿಗಲ್ಲದೆ.

237

ಹೆಸರಿಗೆ ಬಾರದ ಘನವ ಹೆಸರಿಗೆ ತಂದು,
ನುಡಿದಾಡುವ ಕಿಸುವಾಯರ ಮಾತ ಕೇಳಲಾಗದು.
ಅದೇನು ಕಾರಣವೆಂದರೆ, ಈ ಪಶುಗಳೇನು ಬಲ್ಲರು ?
ಬಸವನೆಂತಿಪ್ಪನೆಂಬುದ ವಸುಧೆಯ ಮನುಜರೆತ್ತ ಬಲ್ಲರು ?
ಇದು ಹುಸಿ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ.
ಆ ಬಸವನ ನೆಲೆಯ ಬಸವಾದಿ ಪ್ರಮಥರೆ ಬಲ್ಲರಲ್ಲದೆ,
ಈ ಹುಸಿಮಾಯೆಗೊಳಗಾದ ಸೂತಕರೆತ್ತ ಬಲ್ಲರು ನಿಮ್ಮ ಶರಣರ ಸುದ್ದಿಯ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಬಲ್ಲವನೆ ಬಲ್ಲ ಬೆಲ್ಲದ ಸವಿಯ ಎಂಬಂತೆ, ಸ್ವರೂಪ ಜ್ಞಾನದ ರುಚಿಯನು ಬಲ್ಲವನೆ ಬಲ್ಲ. ಇದನ್ನು ಶಬ್ದದಿಂದ ಹೇಳಿದರೆ ಗೊತ್ತಿಲ್ಲದವನು ಕೋಲೆ ಬಸವನಂತೆ ತಲೆ ಹಾಕಬಹುದು ಆದರೆ ಅದು ಪಶು. ಪಶುವೇನು ಬಲ್ಲದು ಬಸವನ ರುಚಿಯ. ಬಸವನೆಂದರೆ ಶಿವನಿಗೆ ವಾಹನವಾದವನು. ಅವನನ್ನು ಹೊತ್ತು ; ಅವನೊಂದಿಗೆ ಇದ್ದು ; ಸರ್ವ ಸುಖದ ಸವಿಯನು ಬಲ್ಲವನು. '' ಅಯ್ಯಾ, ನೀನು ಆಕಾರವಾಗಿದ್ದಲ್ಲಿ ನಾನು ವೃಷಭನೆಂಬ ವಾಹನವಾಗಿರ್ದೆ ಕಾಣಾ '' ಇದು ಎಂತಹ ಸುಂದರವಾದ ಮಾತು. ಶಿವನಿಗೆ ವಾಹನವಾಗಿರುವುದು ಅದು ಸಣ್ಣ ಮಾತೇನಲ್ಲ. ಹಾಗೆ ಖಚಿತವಾಗಿ ಹೇಳುವುದಕ್ಕೆ ಧೈರ್ಯಬೇಕು. ಸಿದ್ಧಪಡಿಸಿ ತೋರಿಸುವುದಕ್ಕೆ ತಂತ್ರಗಾರಿಕೆಯ ಅವಶ್ಯಕತೆಯೂ ಇದೆ. ಹೀಗೆ ಬಸವಣ್ಣನವರು ಅಪ್ಪಣ್ಣನವರು ಮಾತ್ರ ಹೇಳಬಲ್ಲರೆ ಹೊರತು ಉಳಿದವರಿಗೆ ಇದು ಸಾಧ್ಯವಲ್ಲ.

ಪಶುಗಳೇನು ಬಲ್ಲರು ? ಬಸವನೆಂತಿಪ್ಪನೆಂಬುದ ವಸುಧೆಯ ಮನುಜರೆತ್ತ ಬಲ್ಲರು ? ಇದು ಹುಸಿ ಹುಸಿ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಆ ಬಸವನ ನೆಲೆಯ ಬಸವಾದಿ ಪ್ರಮಥರೆ ಬಲ್ಲರಲ್ಲದೆ, ಈ ಹುಸಿ ಮಾಯೆಗೊಳಗಾದ ಸೂತಕರೆತ್ತ ಬಲ್ಲರು ನಿಮ್ಮ ಶರಣರ ಸುದ್ದಿಯ.

ತನುವಿಗೆ ಶಬ್ದ ಸೂತಕ, ಸ್ಪರ್ಶ ಸೂತಕ, ದೃಶ್ಯ ಸೂತಕ, ಉಪಾಸನಾ ಸೂತಕ, ರುಚಿಸೂತಕಗಳ ಗರ ಬಡಿದಿದೆ. ಸೂತಕಗಳ ಗರ ಬಡಿಸಿಕೊಂಡು ಪಶುಗಳಂತಿರುವ ಮನುಜರಿಗೆ ಬಸವನ ಪರಿಚಯವಿಲ್ಲ. ವಸುಧೆಯ ಮನುಜರೆಲ್ಲ ಬಸವನ ಕುಲದವರೆ ಆದರೂ ಅವರು ಬಸವನಂತಲ್ಲ. ಬಸವನಂತೆ ಶಿವನ ವಾಹನವಲ್ಲ. ಬಸವ ಕಂಡ ಸುಖ ಅವರು ಕಂಡಿಲ್ಲವಾಗಿ.

ಬಸವ ನಿಃಶಬ್ದ ಸುಖವನುಂಡ. ಮನುಜರು ಶಬ್ದದ ಸುಖ ದುಃಖವನು ಉಂಡ ಸೂತಕಿಗಳು. ಸ್ಪರ್ಶದ ಸುಖ ದುಃಖವನು ಉಂಡ ಸೂತಕಿಗಳು.ದೃಶ್ಯ ರುಚಿ ವಾಸನೆಗಳಿಂದ ಮನುಜರು ಮುಕ್ತರಲ್ಲ. ಬದಲಾಗಿ ಸೂತಕಿಗಳು ; ರೌರವ ನರಕಿಗಳು. ಇವರಿಗೆ ಬಸವನ ಸುದ್ದಿಯ ಪರಿಚಯವಿಲ್ಲ. ಆದರೂ ಬಸವನನ್ನು ಪೂಜಿಸುವ ಬಸವನ ಕುಲದವರು ; ಬಸವಣ್ಣನಾಗುವ ಬಯಕೆಯಿಲ್ಲ ಇವರಿಗೆ. ಇವರಿಗೇನಿದ್ದರೂ ಬಸವನ ಪೂಜಿಸುವ ಬಯಕೆ.

ಸಕಲ ತನುವಿನಲ್ಲಿ ಶಿವನಿದ್ದಾನೆ. ಆತನನ್ನು ಆರಾಧಿಸಿ ಪೂಜಿಸಿ, ಹೊತ್ತು ತಿರುಗುವ ವೃಷ ಭನೆಂಬ ವಾಹನವೂ ತನುವಿನಲ್ಲಿಯೇ ಇದೆ. ತನು ಇವರಿಬ್ಬರನ್ನೂ ಹೊತ್ತ ದೇಶ ; ಪ್ರದೇಶ ! ದೇಶ, ಪ್ರದೇಶ, ದೇಶವೆಂದರೆ ಬಯಲು. ಈ ಬಯಲು ಎಂಬ ದೇಶದಲ್ಲಿಯೇ ಈಶನಿದ್ದಾನೆ; ಜಗದೀಶನಿದ್ದಾನೆ. ಅವನನ್ನು ಪೂಜಿಸಿ ಹೊತ್ತು ತಿರುಗುವ ವೃಷಭನೆಂಬ ಬಸವನೂ ಇದ್ದಾನೆ.

ಈಶ ನಿರಾಕಾರವಾಗಿರ್ದಲ್ಲಿ ಬಸವ ಜ್ಞಾನಿಯೆಂಬ ವಾಹನವಾಗಿದ್ದ. ಆತ ನಾಟ್ಯಕ್ಕೆ ನಿಂದು ನಟರಾಜನಾಗಿದ್ದಾಗ ಬಸವ ನಟರಾಜನಿಗೆ ಚೈತನ್ಯನೆಂಬ ವಾಹನವಾಗಿದ್ದ. ಆತ ಆಕಾರವಾಗಿರ್ದಲ್ಲಿ ಬಸವ ವೃಷಭನೆಂಬ ವಾಹನವಾಗಿದ್ದ. ಆತ ಜಂಗಮನಾಗಿದ್ದಾಗ ಬಸವ ಭಕ್ತನೆಂಬ ವಾಹನವಾಗಿದ್ದ. ದೇಹವೆಂಬ ದೇಶದಲ್ಲಿ ವಾಸಿಸುವ ಈಶನಿಗೂ ಆತನಿಗೆ ವಾಹನವಾಗಿದ್ದ ಬಸವನಿಗೂ ಅವಿನಾಭಾವ ಸಂಬಂಧ.

ದೇಹವೆಂಬ ದೇಶದಲ್ಲಿದ್ದ ಈಶನನ್ನು ಹೊತ್ತು ತಿರುಗುವ ಅನುಭವ ಆತನ ವಾಹನವಾದ ಬಸವನಿಗೆ ಮಾತ್ರ ಇದೆ. ಉಳಿದವರೆಲ್ಲ ಕೋಲೆ ಬಸವರು. ಬಸವನಿಗಿದ್ದ ಅನುಭವ ಆನಂದ ಕೋಲೆ ಬಸವರಿಗಿಲ್ಲ. ಏಕೆಂದರೆ ಅವರೆಲ್ಲ ಹುಸಿ ಮಾಯೆಗೊಳಗಾದ ಸೂತಕಿಗಳು. ಶರಣರ ಅರಿಯರು.

238

ಹೊತ್ತಾರೆ ಎದ್ದು, ಹೂವು ಪತ್ರೆ ಉದಕವ ತಂದು,
ಅಷ್ಟ ವಿಧಾರ್ಚನೆ ಷೋಡಶೋಪಚಾರವ ಮಾಡಿಹೆನೆಂದು,
ಸೊರಟೆಯ ಮೊರಟೆಯ ಹರಡಿ, ಕೈಕಾಲ ಮುಖವ ತೊಳೆದು,
ವಿಭೂತಿಯ ಧರಿಸಿ, ರುದ್ರಾಕ್ಷಿಯ ತೊಟ್ಟು,
ತನು ಶುದ್ಧವ ಮಾಡಿ, ಲಿಂಗಕ್ಕೆ ಮಜ್ಜನಕ್ಕೆರೆಯಬೇಕೆಂಬಿರಿ.
ಈ ಮೊದಲು ತಂದ ಪತ್ರೆ ಪುಷ್ಪ ಉದಕವೆ ದೇವರೊ ?
ಈ ಹರಡಿಕೊಂಡಿರುವ ಸೊರಟೆ ಮೊರಟೆಗಳೆ ದೇವರೊ ?
ಈ ತೊಳೆದುಕೊಂಬ ಕೈಕಾಲು ಮುಖಗಳೆ ದೇವರೊ ?
ಇವರೊಳಗೆ ಆವುದ ದೇವರೆಂಬಿರಿ ಅರಿವುಳ್ಳವರು ನೀವು ಹೇಳಿರೊ.
ದೇವರು ದೇವರು ಎಂದು ಒಂದಲ್ಲದೆ,ಎರಡುಂಟೆ ?

ಇಂತಿದನರಿಯದೆ, ಬರು ಸೂರೆ ಹೋದಿರಲ್ಲ.
ಇನ್ನಾದರೂ ಅರಿದು ಬದುಕಿರೊ ನಾನೊಂದ ಹೇಳಿದೆನು.
ಇವೆಲ್ಲವನು ಮಾಡಬೇಕೆಂಬುದೀಗ ಲಿಂಗ, ಮಾಡುವದೀಗ ಜಂಗಮ.
ಲಿಂಗ ಜಂಗಮವೆಂದರೆ ಒಂದೇ ಅಂಗಭೇದವು.
ನಿಮ್ಮ ಶರಣರು ಬಲ್ಲರಲ್ಲದೆ,
ಮರಣಬಾಧೆಗೆ ಒಳಗಾದ ಮರ್ತ್ಯದ ಮನುಜರು ಅರಿಯರು
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ತನ್ನ ಕೈ ಕಾಲು ಮುಖ ತೊಳೆದ ಬಳಿಕ ಲಿಂಗಕ್ಕೆ ಮಜ್ಜನಕ್ಕೆರೆವರು. ತಾನು ಲಿಂಗವೊ ? ಲಿಂಗ ಲಿಂಗವೊ ಬಲ್ಲವರು ನೀವು ಹೇಳಿರೊ? ಎಂದು ಅಪ್ಪಣ್ಣನಂತೆ ಅಲ್ಲಮ ಪ್ರಭುಗಳು ಕೂಡಾ ಮನುಜರನ್ನು ಪ್ರಶ್ನಿಸುತ್ತಾರೆ. ಮನುಜರೆಂದರೆ ಮನ ಉಳ್ಳವರು. ಮನದ ಮಾತು ಕೇಳುವವರು. ಹೀಗಾಗಿ ಈ ಮಾತು ಮನುಜರಿಗೆ ಹೇಳುವ ಮಾತಲ್ಲ. ಹಾಗೆ ಮಾಡಲು ತನುವಿಗೆ ಪ್ರೇರಣೆ ನೀಡುವ ಮನಕ್ಕೆ ಹೇಳುವ ಮಾತು.

ಮನದ ಕೈವಶದಲ್ಲಿದ್ದ ತನುಗಳಿಗೆ ಶರಣರ ಮಾತು ತಿಳಿಯುವುದಿಲ್ಲ. ಹೀಗಾಗಿ ಮನಕ್ಕೆ ಬಲಿಯಾದ ತನು ಹೊತ್ತಾರೆ ಎದ್ದು ಹೂವು ಪತ್ರೆ ಉದಕವ ತಂದು ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವುದಕ್ಕಾಗಿ ಕೈಕಾಲು ಮುಖವನು ತೊಳೆದುಕೊಳ್ಳಲು ಮನ ತನುವಿಗೆ ಪ್ರೇರಣೆ ನೀಡುತ್ತದೆ. ನಂತರ ಲಿಂಗಕ್ಕೆ ಮಜ್ಜನವ ಮಾಡಿ ಹೂ ಪತ್ರೆಗಳಿಂದ ಉದಕ ಭಸ್ಮಗಳಿಂದ ಪೂಜಿಸುತ್ತದೆ. ಮೊದಲು ತನುವಿಗೆ ಅಭಿಷೇಕ ; ನಂತರ ಲಿಂಗಕ್ಕೆ ಅಭಿಷೇಕ. ಅಂದ ಮೇಲೆ ತನು ಲಿಂಗವೊ ? ಲಿಂಗ ಲಿಂಗವೊ ? ಎಂದು ಮನ ತನಗೆ ತಾನೆ ಪ್ರಶ್ನಿಸಿಕೊಳ್ಳುವುದಿಲ್ಲ. ಅಷ್ಟೊಂದು ಮರೆವು ಮನಕ್ಕೆ.

ತನುವಿನೊಳಗೆ ತನ್ಮಯವಾದವನೇ ದೇವರು. ಅಂಗದೊಳಗೆ ಸಂಗಮವಾದ ಕೂಡಲ ಸಂಗಯ್ಯನೇ ದೇವರು. ಇದು ಒಂದಂಗಕ್ಕೆ ತಿಳಿದಿದೆ. ಮತ್ತೊಂದಕ್ಕೆ ತಿಳಿದಿಲ್ಲ. ಅಂಗದೊಳಗೆ ಸಂಗಮವಾದ ಲಿಂಗ ಒಂದೇ. ಜಂಗಮವೂ ಒಂದೇ. ಅದನ್ನು ತಿಳಿಯುವ ಭಕ್ತ ಒಬ್ಬನೇ. ಅದಕ್ಕೆ ಶರಣು ಹೋಗಿ ಶರಣನಾದವನೂ ಒಬ್ಬನೆ. ಅಂಗಭೇದವು ಮನಕ್ಕೆ ಇರುವುದರಿಂದ ಒಂದಂಗ ತಿಳಿದು ಸಂಗಯ್ಯನಾಗಿದೆ. ಮತ್ತೊಂದಂಗ ಅಂಗವಾಗಿದೆ. ಲಿಂಗ ಜಂಗಮರು ಒಳಗೆ ಇದ್ದಾರೆ.

ಇಂತಿದನರಿಯದೆ ಬರುಸೂರೆ ಹೋದಿರಲ್ಲ :

ಅಂಗವೇ ಲಿಂಗವರಿಯದೆ ಹೋದರೆ ಅಂಗಕ್ಕೆ ನಿತ್ಯ ನಿತ್ಯ ಮರಣ ಬಾಧೆ. ನೋಡಿದರೆ ಮರಣ. ಕೇಳಿದರೆ ಮರಣ. ಮುಟ್ಟಿದರೆ ಮರಣ. ರುಚಿಸಿ ಮೂಸಿಸಿದರೂ ಮರಣ. ಕ್ಷಣ ಕ್ಷಣಕ್ಕೂ ಆಪತ್ಕಾಲ ತಪ್ಪಿದ್ದಲ್ಲ. ಅಂಗವೇ ಲಿಂಗವೆಂದರಿಯದೆ ಕೊರಳಲ್ಲಿ ಕಟ್ಟಿದ್ದ ಲಿಂಗಕ್ಕೆ ಪತ್ರೆ ಪುಷ್ಪ ಗಂಧ ಉದಕವನೆರೆದು ಪೂಜಿಸಿದರೂ ಮರಣ ಭಾದೆ ತಪ್ಪುವುದಿಲ್ಲ. ದೇವರು ಯಾರೆಂದು ತಿಳಿಯುವುದೂ ಇಲ್ಲ. ದೇಹದಲ್ಲಿಯ ದೇವರ ದರ್ಶನ ಭಾಗ್ಯದೇಹಕ್ಕೆ ಆಗುವುದೇ ಇಲ್ಲ.

239

ಹೊತ್ತಾರೆಯಿಂದ ಹಸ್ತಮಯ ತನಕ

ಸುತ್ತಿರ್ದ ಮಾಯಾ ಪ್ರಪಂಚನೆ ಅಳೆವುತ್ತ ಸುರಿವುತ್ತಲಿರ್ದು,
ಕತ್ತಲೆಯಾದರೆ ಕಾಳು ವಿಷಯದೊಳಗೆ ಮುಳುಗುತ್ತ ಸತ್ತು ಹುಟ್ಟುತ್ತ ,
ಮತ್ತೆ ಬೆಳಗಾಗಿರ್ದು, ನಾನು ತತ್ವವ ಬಲ್ಲೆನೆಂದು ನುಡಿವ ಕತ್ತಲೆ ಮನುಜರ
ಅತ್ತ ಹೊದ್ದದೆ, ಇತ್ತಲೆ ನಿಂದು ನಾಚಿ-ನಗುತಿರ್ದ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ತನು ಬೆಳಕು ಹೊತ್ತಿದ್ದರೂ ಅದಕ್ಕೆ ಕತ್ತಲೆ ಆವರಿಸಿದೆ. ಹೀಗಾಗಿ ಅದು ಬೆಳಕಿದ್ದರೂ ಕತ್ತಲೆ ತನು ; ಕತ್ತಲೆ ಮನುಜನೆಂದು ಅಪ್ಪಣ್ಣ ಶರಣರು ನುಡಿದಿದ್ದಾರೆ. ಕತ್ತಲಾದರೆ ಸಾಕು ಕಾಳು ವಿಷಯದೊಳಗೆ ಬಂಧಿಯಾಗಿ ಸುಖಿಸುತ್ತಾ ದುಃಖ ತಂದುಕೊಳ್ಳುತ್ತಾನೆ. ಬೆಳಗಾದರೂ ಕತ್ತಲೆ ಸುಖವನ್ನೇ ಬೆಳಕಿನಲ್ಲಿ ಕಂಡು ಕತ್ತಲೆ ಆವರಿಸಿಕೊಳ್ಳುತ್ತಾನೆ.

ಮನುಜನಿಗೆ ಕತ್ತಲಲ್ಲಿಯೂ ಸತ್ಯ ಗೋಚರಿಸುವುದಿಲ್ಲ ; ಬೆಳಕಲ್ಲಿಯೂ ಸತ್ಯ ಗೋಚರಿಸುವುದಿಲ್ಲ. ಕತ್ತಲು ಬೆಳಕುಗಳೆರಡೂ ಕತ್ತಲೆಯಾಗಿಯೇ ಕಾಣುತ್ತವೆ. ಆ ಕತ್ತಲೆಯಲ್ಲಿ ಕಾಮ ವಿಷಯಕ್ಕೆ ತನಗರಿಯದಂತೆ ಹಂಬಲಿಸಿ ಹಂಬಲಿಸಿ ಜಾರುತ್ತಾನೆ.

ಬೆಳಗಾದರೆ ಸಾಕು ತತ್ತ್ವವ ಬಲ್ಲೆನೆಂದು ನುಡಿಯುತ್ತಾನೆ. ನಡೆಯಲು ಬರುವುದಿಲ್ಲ. ನುಡಿಯಲು ಬಂದಿದ್ದು ನಡೆಯಲು ಬರಬೇಕೆಂದು ಅನ್ನಿಸುವುದೇ ಇಲ್ಲ. ಗಿಳಿಯಂತೆ ನುಡಿದರೇನು ನುಡಿದದ್ದು ದೇಹಕ್ಕೆ ತಿಳಿಯದಿದ್ದರೆ ಹೇಗೆ ? ಹೀಗಾಗಿ ಕತ್ತಲಲ್ಲಿ ವಿಷಯದ ಸುಖ. ಬೆಳಗಲ್ಲಿಯೂ ವಿಷಯದ ಸುಖಕ್ಕೆ ಹಂಬಲಿಸುತ್ತಾನೆ.

ತನುವನ್ನು ಭಗವಂತ ತನ್ಮಯವಾಗಿ ಹೊದ್ದಿದ್ದಾನೆ. ತನುವಿನೊಳಗೆ ಇದ್ದು, ಕತ್ತಲಿನಲ್ಲಿ ತನು ಮಲಗಿದಾಗ ತನುವಿಗೆ ಜನನ ಮರಣಗಳ ಭಾದೆ ಕಳೆದು ಮರುಜವಣೆಯ ಹಣ್ಣ ಮೇಯಿಸಿ ದರ್ಶನವನ್ನು ನೀಡುತ್ತಾನೆ.

ಕಂದ ನೀನು ಹೆಣ್ಣಲ್ಲ ಗಂಡಲ್ಲ, ನನ್ನನ್ನು ಹೊದ್ದ ನೀನು ಅನಂತ. ಜಗದಗಲ ಮುಗಿಲಗಲ. ಅಪ್ರಮಾಣನು, ಆಗೋಚರನು, ಅಗಮ್ಯನು, ಅಪ್ರತಿಮ ಲಿಂಗಯ್ಯನು ನೀನು.

ಹಗಲು ವೇಷದ ಶ್ರೀಮಂತನು, ಬಡವನು, ದರಿದ್ರನು ನೀನಲ್ಲ. ಕಳ್ಳ ಜೂಜುಕೋರ ಅಧಿಕಾರಿಯೂ ನೀನಲ್ಲ. ಶಾಸಕ ಸಚಿವ ಪ್ರಧಾನಿ ಅಧ್ಯಕ್ಷನೂ ನೀನಲ್ಲ. ನೀನು ವಿರಾಟ ಸ್ವರೂಪನು. ಇರುಳು ಕಂಡ ಸತ್ಯವನು ಹಗಲು ಮರೆಯುವುದೆ ? ಎಚ್ಚೆತ್ತ ನೀನು ಮತ್ತೊಮ್ಮೆ ನೆನಪಿಸಿಕೋ. ಇರುಳು ಕಂಡ ಭಾವಿಯಲ್ಲಿ ಹಗಲು ಬೀಳುವುದೆ ? ಇರುಳು ಮಲಗಿದಾಗ ಸತ್ತಂತೆ ಇದ್ದೆ. ಸತ್ತಿರಲಿಲ್ಲ. ನೀನು ನೀನಾಗಿರಲಿಲ್ಲ. ನೀನು ಅನಂತನಾಗಿದ್ದೆ. ಅನಂತನೇ ಆಗಿರುವಿ. ಅದು ಕನಸಲ್ಲ. ಇರುಳು ಇದ್ದಂತೆ ಹಗಲು ಇರಲು ಬಂದರೆ ಅದೇ ಸತ್ಯ . ನಿನ್ನ ಪಾಠ ನಿನ್ನಲ್ಲಿಯೇ ಇದೆ. ನಿನ್ನ ಪಥ್ಯವೂ ನಿನ್ನಲ್ಲಿಯೇ ಇದೆ. ಇರುಳು ಮಲಗಿದಾಗ ಇದ್ದಂತೆ ಹಗಲು ಇರಲು ಬಯಕೆ ಮಾಡು. ನಿನ್ನನ್ನು ಹೊದ್ದವ ನಿನಗೆ ಸಹಾಯ ಮಾಡುವ ಗುರುವಾಗುತ್ತಾನೆ. ಬಯಸದಿದ್ದರೆ ಅತ್ತಲೇ ನಿಂತು ನಾಚಿ ನಗುತ್ತಾನೆ.

240

ಹೊತ್ತು ಹೊತ್ತಿಗೆ ನಿತ್ಯರ ಸಂಗವ ಮಾಡಿ,ಕರ್ತೃವೆಂಬುದನರಿದೆ,

ನಾ ಭೃತ್ಯನೆಂಬುದನರಿದೆ. ಸತ್ಯವೆಂಬುದನರಿದು, ಸದಾಚಾರವಿಡಿದು,
ತುದಿ ಮೊದಲು ಕಡೆ ನಡುವೆ, ಆದಿ ಅನಾದಿಗೆ ನಿಲುಕದ ಘನವೇದ್ಯ ಲಿಂಗವ ಕಂಡೆ.
ಆ ಲಿಂಗವ ಸೋಂಕಲೊಡನೆ ಲಿಂಗದಂತಾದೆ.
ಜಂಗಮವ ಮುಟ್ಟಿ ಪೂಜಿಸಲೊಡನೆ ಜಂಗಮದಂತಾದೆ.
ಪ್ರಸಾದವ ಕೊಳ್ಳಲಾಗಿ, ಪ್ರಸಾದದಂತಾದೆ.
ಇನ್ನು ಪರವಿಲ್ಲವೆಂದು ಪ್ರಸಾದದಲ್ಲಿಯೇ ತಲ್ಲೀಯನಾದೆ.
ಇದ ಬಲ್ಲವರು ನೀವು ಕೇಳಿ.
ಎನ್ನ ಹಮ್ಮು ಬಿಮ್ಮು ಉಂಟೆನಬೇಡ.
ಇದಕ್ಕೆ ದೃಷ್ಟವ ಹೇಳಿಹೆ ಕೇಳಿರಣ್ಣಾ!
ಕೀಡೆ ತುಂಬಿಯ ಸ್ನೇಹದ ಹಾಗೆ.
ಶರಣನಾದರೆ ಜ್ಯೋತಿಯ ಮುಟ್ಟಿದ ಹಾಗೆ.
ದರ್ಪಣ ದರ್ಪಣದೊಳಗೆ ಅಡಗಿದ ಹಾಗೆ.
ಇದಕೊಪ್ಪವ ಬಲ್ಲವರು ತಪ್ಪದೆ ಎನ್ನಂಗ,
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಹೊತ್ತು ಹೊತ್ತಿಗೆ ಹಗಲಿರುಳೆನ್ನದೆ ನಿತ್ಯರ ಸತ್ಯರ ಸಂಗವ ಮಾಡಿ ಬ್ರಹ್ಮನಾದೆ. ಬ್ರಹ್ಮಜ್ಞಾನಿಯಾದೆ. ಸ್ವರೂಪಜ್ಞಾನಿಯಾದೆ. ಸ್ವರೂಪವೇನೆಂದು ತಿಳಿದು ಆ ಪರಮಾತ್ಮನಿಗೆ ನಾನು ಸೇವಕನಾದೆ. ಸತ್ಯವೇನೆಂದು ಅರಿತು, ಸದಾಚಾರವಿಡಿದು, ತುದಿ ಮೊದಲಲ್ಲದ, ಆದಿ ಅನಾದಿಗೆ ನಿಲುಕದ, ಜಗದಗಲ ಮುಗಿಲಗಲ ವಿಸ್ತರಿಸಿಕೊಂಡಿದ್ದ ಘನಲಿಂಗವ ಕಂಡೆ. ಆ ಲಿಂಗವನು ಕಂಡು ಅದನು ಸೋಂಕಲೊಡನೆ ಆ ಲಿಂಗದಂತಾದೆ.

ಅಂಗದಲ್ಲಿಯೇ ಸಂಗಮವಾದ ಜಂಗಮನನ್ನು ಮುಟ್ಟಿದ ಕೂಡಲೇ ಆ ಜಂಗಮನೇ ನಾನಾದೆ. ಪ್ರಸಾದವ ಕೊಳ್ಳಲಾಗಿ, ಆ ಪ್ರಸಾದವೇ ನಾನಾದೆ. ಇದಕ್ಕೂ ಮಿಗಿಲಾದ ಸ್ವರ್ಗಸುಖವಿಲ್ಲವೆಂದು ತಿಳಿದು ಆ ಪ್ರಸಾದದಲ್ಲಿಯೇ ತಲ್ಲೀಯನಾದೆ. ಇದನ್ನು ಬಲ್ಲವರು ಮಾತ್ರ ಓದಬಹುದು, ತಿಳಿಯಬಹುದು. ಆ ಸ್ವರ್ಗಸುಖದ ಬಯಕೆಯನು ಬಯಸಬಹುದು.

ಈ ಜಗತ್ತು ನನ್ನಿಂದಲೇ ಆಗಿದೆ. ಬ್ರಹ್ಮ ವಿಷ್ಣು ರುದ್ರನು ನಾನೇ. ನನ್ನಲ್ಲಿಯೇ ಎಲ್ಲವೂ ಹುದುಗಿದೆ ಎಂದು ಹೇಳಿದ ಕ್ರಿಷ್ಣನನ್ನು ಅಹಂಕಾರ ಉಳ್ಳವನೆಂದು ಹೇಳಬಹುದು. ಅದು ಹಾಗೆ ನೋಡಿದವರ ಕೇಳಿದವರ ಕರ್ಮ. ಈ ಶಕ್ತಿ ಸಕಲ ತನುಗಳಲ್ಲಿಯೂ ತನ್ಮಯವಾಗಿದೆ. ಆದರೆ ಹೊತ್ತು ಹೊತ್ತಿಗೆ ನಿತ್ಯರ ಸತ್ಯರ ಸಂಗವ ಮಾಡಬೇಕು. ಇದಕ್ಕೆ ಉದಾಹರಣೆಯೆಂದರೆ ಕೀಡೆ ತುಂಬಿಯ ಸ್ನೇಹ ಮಾಡಿದ ಹಾಗೆ ಆ ಕೀಡೆ ತುಂಬಿಯೇ ಆದ ಹಾಗೆ.

ಜ್ಯೋತಿ ಬತ್ತಿಯನು ಮುಟ್ಟಿದ ಹಾಗೆ. ಬತ್ತಿ ಜ್ಯೋತಿಯಾಗಿ ಬೆಳಗಿದ ಹಾಗೆ. ದರ್ಪಣ ದರ್ಪಣದೊಳಗೆ ಅಡಗಿದ ಹಾಗೆ. ಈ ಸೂತ್ರವ ಬಲ್ಲ ಅಂಗಗಳೆಲ್ಲ ತಪ್ಪದೆ ಎನ್ನಂಗದಂತೆ !

ಜ್ಞಾನಿ ಅಜ್ಞಾನಿಯೊಂದಿಗೆ ಸಂಭಾಷಣೆ ಮಾಡುತ್ತಾನೆ. ಜ್ಞಾನ ಎಂದರೆ ಏನೆಂದು ಅಜ್ಞಾನಿಗೆ ತಿಳಿಯುವುದಿಲ್ಲ. ಅದರ ರುಚಿಯೂ ಗೊತ್ತಿಲ್ಲ. ಜ್ಞಾನದ ಸವಿ ತೋರಿಸುವುದಕ್ಕಾಗಿ ಅಂಗವನ್ನು ಹತ್ತಿರ ಕರೆದು ಅದರಲ್ಲಿ ಸಂಗಮವಾದ ಮಹಾಜ್ಞಾನದ ಸ್ವರ್ಗಸುಖವನ್ನು ಜ್ಞಾನಿ ಆ

ಅಂಗಕ್ಕೆ ಹೇಲುತ್ತಾ ಹೋಗುತ್ತಾನೆ. ಜ್ಞಾನದ ರುಚಿಗೆ ಮನಸೋತ ಮನ ಮತ್ತೆ ಮತ್ತೆ ಜ್ಞಾನದ ಸವಿ ಸವಿಯಲು ಜ್ಞಾನಿಯ ಹತ್ತಿರ ಹೋಗುತ್ತದೆ. ಆ ಅಂಗದೊಳಗೆ ಸಂಗಮವಾದ ಸಂಗಯ್ಯನ ದರ್ಶನ ಆ ಅಂಗಕ್ಕೆ ಆಗುವುದೊಂದೆ ತಡ ಬತ್ತಿ ಜ್ಯೋತಿಯಾಗಿ ಬೆಳಗುತ್ತದೆ. ಚುಂಬಿಸಿದ ಜ್ಯೋತಿ, ಬೆಳಗುವ ಜ್ಯೋತಿಗಳೆರಡೂ ಬೆಳಗುತ್ತವೆ.

ಇದೇ ಸ್ವರೂಪ ಜ್ಞಾನದ ಕಲೆ. ಇದೇ ಸ್ವರೂಪ ಜ್ಞಾನ ಶಿಕ್ಷಣ. ಸರ್ವಾಂಗಗಳಲ್ಲಿಯೂ ಈ ಶಿಕ್ಷಣ ಸಂಗಮವಾಗಿದೆ. ಅದನ್ನು ಅಂಗವೇ ಕಂಡುಕೊಳ್ಳಬೇಕು. ಲಿಂಗಾಂಗ ಅಂಗವನ್ನು ತನ್ನಂತೆ ಮಾಡಿಕೊಂಡು ಲಿಂಗಾಂಗವಾಗಿ ಬೆಳಗುತ್ತದೆ. ಆಗ ಅಂಗ ಬಹಿರಂಗವಾಗಿ ಅಹಂ ಬ್ರಹ್ಮಾಸ್ಮಿ ಎಂದು ಸಾರುತ್ತದೆ. ಇದರ ಜಾಡು ಬಲ್ಲವರು ಮಾತ್ರ ಶರಣರು.

ಸಕಲ ಶರಣರೆಲ್ಲ ಬ್ರಹ್ಮಜ್ಞಾನಿಗಳೆ. ಅವರು ಬರೆದ ಸಕಲ ವಚನಗಳೆಲ್ಲ ಬ್ರಹ್ಮಸೂತ್ರಗಳೇ ಆಗಿವೆ. ಅರಿಯದ ಸಾಹಿತಿ ಏನೇನೋ ಬೊಗಳುತ್ತಾನೆ. ಬೊಗಳುವವನಿಗೆ ನಷ್ಟ ! ಕಂಡು ಕೊಂಡವನಿಗೆ ಸುಖ. ಸುಖದ ಸುಖ ! ಈ ನಿಟ್ಟಿನಲ್ಲಿ ಶರಣರ ವಚನಗಳನ್ನು ಅಭ್ಯಾಸ ಮಾಡಬೇಕೆಂದು ಗುರುವರ್ಗವೂ ಅರಿಯರು. ಶಿಷ್ಯ ವರ್ಗವೂ ಅರಿಯದು. ವಿರಕ್ತ ಗುರುಪೀಠಗಳೆರಡೂ ಅರಿಯವು. ಅರಿತರೆ ಯಾವ ಪೀಠಗಳೂ ಬೇಡ. ಬ್ರಹ್ಮಪೀಠವೊಂದೇ ಸಾಕು !

241

ಹೊತ್ತು ಹೊತ್ತಿಗೆ ಲಿಂಗ ಪೂಜೆಯ ಮಾಡಿಯೂ
ಮತ್ತೆಯು ಸತ್ಯವಾವುದು, ನಿತ್ಯವಾವುದೆಂದರಿಯದೆ ಕೆಟ್ಟರೆಲ್ಲ ಜಗವು.
ಸತ್ಯವಾಗಿ ನುಡಿವ ಶರಣರ ಕಂಡರೆ, ಕತ್ತೆ ಮಾನವರೆತ್ತ ಬಲ್ಲರೊ ?
ಅಸತ್ಯವನೆ ನುಡಿದು, ಹುಸಿಯನೆ ಬೋಧಿಸುವ ಹಸುಕರ ಕಂಡರೆ,
ಇತ್ತ ಬನ್ನಿ ಎಂಬರು.
ಇಂತಪ್ಪ ಅನಿತ್ಯ ದೇಹಿಗಳ ಭಕ್ತರೆಂದು ಜಂಗಮರೆಂದು
ನೋಡಿದರೆ, ನುಡಿಸಿದರೆ, ಮಾತನಾಡಿದರೆ, ನೀಡಿದರೆ,
ಅಘೋರ ನರಕವೆಂದು ನಮ್ಮ ಆದ್ಯರ ವಚನ ಸಾರುತಿದೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ತ್ರಿಕಾಲ ಲಿಂಗಪೂಜೆ ಮಾಡಿಯೂ ಗುರುಪೀಠಕ್ಕೆ ವಿರಕ್ತ ಪೀಠಕ್ಕೆ ಅದರ ಮೇಲೆ ವಿರಾಜಿಸಿದ ಅಂಗಕ್ಕೆ ಶಿಷ್ಯವರ್ಗಕ್ಕೆ ಸತ್ಯವೆಂದರೇನೆಂದು ನಿತ್ಯವೆಂದರೇನೆಂದು ತಿಳಿಯದು. ಬ್ರಹ್ಮಜ್ಞಾನ, ಸ್ವರೂಪಜ್ಞಾನವೆಂದರೇನೆಂದು ತಿಳಿಯದು. ಅದನ್ನು ಪಡೆಯಬೇಕೆಂಬ ಹಂಬಲವೂ ಆ ಅಂಗಗಳಲ್ಲಿ ಉದಯಿಸದು. ಆದರೂ ತ್ರಿಕಾಲ ಲಿಂಗ ಪೂಜಿಸಿ ಪೂಜಿಸಿ ಜಗದ ಅಂಗಗಳೆಲ್ಲ ಕೆಟ್ಟವು. ಸತ್ಯ ಶರಣರು ಎದುರಿಗೆ ಬಂದರೂ ಅವರು ಯಾರೆಂದು ತಿಳಿಯದ ಅಜ್ಞಾನಿ ಅಂಗಗಳಿವು. ಆರೂ ಗುರುಗಳಾಗಿ ಶಿಷ್ಯರಿಗೆ ನಿರಂತರ ಬೋಧೆ ನಡೆದಿದೆ. ಗುರುವಾಗಿ ಗುರುವಿಗೆ ಬೋಧಿಸಬಹುದೆ ಎಂದು ಗುರುವರ್ಗಕ್ಕೆ ತಿಳಿಯದು.

ಗುರುವಾದರೇನು ಶಿಷ್ಯನಾದರೇನು ? ಎರಡೂ ಅಂಗಗಳೇ ! ಅಂಗದಲ್ಲಿದ್ದ ಲಿಂಗ ಜಂಗಮರು ಅಂಗಕ್ಕೆ ಒಲಿತ ಮೇಲೆ ಅವರನ್ನು ಮತ್ತೊಂದು ಅಂಗಕ್ಕೆ ಕೊಡಲು ಬರುವುದಿಲ್ಲ.

ಬದಲಾಗಿ ಅಂಗದಲ್ಲಿ ಲಿಂಗ ಜಂಗಮರಿದ್ದಾರೆಂದು ಸೂಚಿಸಬಹುದು. ಹೀಗೆ ಸೂಚಿಸುವುದನ್ನು ಅಂತಹ ಅಂಗವನ್ನು ಗುರುವೆನ್ನಬಹುದೆ ? ಸಕಲ ಅಂಗಗಳಲ್ಲಿಯೂ ಲಿಂಗ ಜಂಗಮರಿದ್ದಾರೆ. ಒಬ್ಬರಿಗೆ ಪರಿಚಯವಿದೆ. ಮತ್ತೊಬ್ಬರಿಗೆ ಪರಿಚಯವಿಲ್ಲ. ಪರಿಚಯವಿಲ್ಲದ ಅಂಗದಲ್ಲಿರುವ ಲಿಂಗ ಜಂಗಮರಿಗೆ ಬೋಧಿಸಲು ಸಾಧ್ಯವೆ ? ಹೀಗೆ ಬೋಧಿಸುವ ವೇಷಧಾರಿ ಅಂಗಕ್ಕೆ ಗುರುವೆನ್ನಬಹುದೆ ? ಅನ್ನಕ್ಕಾಗಿ ಬಟ್ಟೆ ಧರಿಸಿ ಗುರುವಾದ. ಇಂತಪ್ಪ ಅನಿತ್ಯ ದೇಹಿಗಳ ಅಂಗವನ್ನು ಭಕ್ತರೆಂದು ಜಂಗಮರೆಂದು ನೋಡಿದರೆ, ನುಡಿಸಿದರೆ, ಮಾತನಾಡಿದರೆ, ನೀಡಿದರೆ, ಅಘೋರ ನರಕವೆಂದು ಸಾರಿದ್ದಾರೆ ಅಪ್ಪಣ್ಣ ಶರಣರು.

242

ಹೊತ್ತು ಹೋಗದ ಮುನ್ನ ನೀವು ಸತ್ತಂತೆ ಇರಿರೊ.
ಸತ್ತಂತೆ ಇದ್ದಲ್ಲದೆ ತತ್ತ್ವವ ಕಾಣಬಾರದು.
ತತ್ತ್ವವ ಕಂಡಲ್ಲದೆ ಮನ ಬತ್ತಲೆಯಾಗದು.
ಮನ ಬತ್ತಲೆಯಾದಲ್ಲದೆ ಘನವ ಕಾಣಬಾರದು.
ಘನವ ಕಂಡಲ್ಲದೆ ನಿಮ್ಮ ನೆನಹು ನಿಷ್ಪತ್ತಿಯಾಗದು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಹೊತ್ತು ಹೋದ ಮೇಲೆ ಅಂಗ ನಿದ್ರಾವಸ್ಥೆಯಲ್ಲಿದ್ದು ಸತ್ತಂತೆ ಇರುತ್ತದೆ. ಅಂಗಕ್ಕೆ ಅಂಗದ ಪರಿಚಯವೇ ಇಲ್ಲ. ಅದರ ಮನೆತನ ಜಾತಿ ಮತ ಪಂಥ ಹುದ್ದೆ ಹೆಣ್ಣು ಗಂಡೆಂಬುದೂ ಪರಿಚಯವಿರುವುದಿಲ್ಲ.ಇದು ಅಂಗದಲ್ಲಿ ಸಂಗಮವಾದ ಶಿಕ್ಷಣ. ಅಂಗಕ್ಕೆ ರಾತ್ರಿ ಅಂಗವೇ ಶಿಕ್ಷಣ ನೀಡುತ್ತದೆ. ಹಗಲಾದರೆ ಸಾಕು ಅಂಗಕ್ಕೆ ಸರ್ವ ರೋಗಗಳೂ ಮುತ್ತಿಗೆ ಹಾಕಿ ಸಾವು ಬದುಕಿನಲ್ಲಿ ವಿಲವಿಲನೆ ಒದ್ದಾಡುತ್ತದೆ.

ರಾತ್ರಿ ಇದ್ದಂತೆ ಹಗಲು ಇರಲು ಬರುವುದಿಲ್ಲವೆ ಎಂದು ಅಂಗ ಅಂಗವನ್ನೇ ಪ್ರಶ್ನಿಸಿಕೊಳ್ಳುವುದಿಲ್ಲ. ರಾತ್ರಿ ಸತ್ತಂತೆ ಹಗಲು ಎಚ್ಚರದಲ್ಲಿದ್ದು ಸಾಯಲು ಬರುತ್ತದೆ. ರಾತ್ರಿ ಸತ್ತ ಆ ಸುಖ ಹಗಲು ಬರಬಾರದೆ ? ಸತ್ತಂತೆ ಇದ್ದಲ್ಲದೆ ಅಂಗದ ತತ್ತ್ವ ಅಂಗಕ್ಕೆ ನಿಲುಕದು. ಈ ತತ್ತ್ವವ ಕಂಡಲ್ಲದೆ, ಅಂಗವನ್ನು ಆವರಿಸಿದ ಮನ ಬತ್ತಲೆಯಾಗದು. ಮನ ಬತ್ತಲೆಯಾಗದಿದ್ದರೆ ಅಂಗದಲ್ಲಿಯೇ ಸಂಗಮವಾದ ಸಂಗಮ ನಾಥನ ದರ್ಶನ ಅಂಗಕ್ಕೆ ಆಗುವುದೇ ಇಲ್ಲ.

ಮನಕ್ಕೆ ಘನದ ದರ್ಶನವಾದರೆ ಸಾಕು ಆ ಮನವೇ ಘನಮನವಾಗುತ್ತದೆ.

243

ಹೊನ್ನ ಗಳಿಸಿದರೇನಯ್ಯಾ, ಹೊಲೆಯರ ಮನೆಯಲ್ಲಿದ್ದರೆ ?
ಹೆಣ್ಣ ಗಳಿಸಿದರೇನಯ್ಯಾ, ವೇಶಿಯರ ಮನೆ ದಾಸಿಯಾಗಿದ್ದರೆ ?
ಮಣ್ಣ ಗಳಿಸಿದರೇನಯ್ಯಾ, ಉಣ್ಣದಾಹಾರವ ನುಂಡರೆ ?
ಹೋಗುವ ಹಾಳುಗೇರಿಯಾಗಿರದೆ,ಇದನರಿದು ಮಹಾಘನವನೆ ಮರೆದು,
ಮತ್ತೆ ಹೊನ್ನು ಹೆಣ್ಣು ಮಣ್ಣು ತನ್ನದೆಂಬರು,

ಕಣ್ಣು ಗಾಣದ ಕುರುಡರಂತಾದರು ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ಅರಿಷಡ್ವರ್ಗಗಳಿದ್ದ ತನುವೆಂಬ ಮನೆಯೇ ಹೊಲೆಯರ ಮನೆ. ಅಂತಹ ತನುವೆಂಬ ಮನೆಯಲ್ಲಿದ್ದು ಹೊನ್ನು ಗಳಿಸಿದರೇನು, ಮಣ್ಣು ಗಳಿಸಿದರೇನು, ಪಾಂಡಿತ್ಯವನು ಗಳಿಸಿದರೇನು ? ಅದೆಲ್ಲವೂ ವ್ಯರ್ಥವೇ.

ಅಂಗ ಹೆಣ್ಣಲ್ಲ, ಗಂಡೂ ಅಲ್ಲ. ಅದು ಅರಿವಿನ ಲಿಂಗಜಂಗಮ. ಈ ಶಿಕ್ಷಣ ಅಂಗದಲ್ಲಿಯೇ ಸಂಗಮವಾಗಿದೆ. ಇಂತಹ ಘನ ಶಿಕ್ಷಣವನ್ನು ಮನವೆಂಬ ಸತಿಯಿಂದಲೇ ಅರಿಯಬೇಕು. ಅರಿತವನಿಗೆ ಮನವೆಂಬ ಸತಿ ಅರ್ಧನಾರಿಯಾದಳು. ಅರಿತ ತಾನು ಈಶ್ವರನಾದ. ಅರ್ಧನಾರೀಶ್ವರ ಅಂಗದಲ್ಲಿಯೇ ಇದ್ದಾನೆ. ಆದರೂ ಅಂಗ ಗಂಡೆಂದು ಹೆಣ್ಣೆಂದು ಗುರುತಿಸಿಕೊಂಡಿದೆ. ಹೆಣ್ಣು ಗಂಡು ತಾನೆಂಬುದು ತಿಳಿಯದೆ ಹೆಣ್ಣಿನ ಸಹವಾಸ ಮಾಡುವ ಅಂಗ ವೇಶಿಯ ಮನೆಯ ದಾಸಿಯಾಗುತ್ತದೆ. ಹೆಣ್ಣು ಹೆಣ್ಣನ್ನೇ ಹುಡುಕಿ ಆ ಹೆಣ್ಣನ್ನು ಕೂಡುವುದೆಂದರೇನು ? ಅರಿವಿನ ಮನೆಯೇ ದಾಸಿಯ ಮನೆಯಾದಂತೆ ಆಗಲಿಲ್ಲವೆ ? ಹಾಳುಗೇರಿ ಯಾದಂತೆ ಆಗಲಿಲ್ಲವೇ? ಅರಿವಿನ ಮನೆ, ಮಹಾದೇವನ ಮನೆ ಎಂದು ಅರಿಯದೆ ಹೊನ್ನು ಹೆಣ್ಣು ಮಣ್ಣು ತನ್ನದೆನ್ನುತ್ತದೆ ; ಕಣ್ಣು ಕಾಣದ ಕುರುಡು ತನು.

ತನುವನ್ನು ಆವರಿಸಿದ ಮನ ತನುವಿನಲ್ಲಿಯೇ ತನ್ಮಯವಾದ ಮಹಾಘನವನು ಕಂಡುಕೊಂಡು ಘನಮನವಾಗಬೇಕು.

ಭೂಮಿ ಗಳಿಸಿದರೇನು ಅದು ನಿನ್ನದೆ? ಹೇಮ ಗಳಿಸಿದರೇನು ಅದು ನಿನ್ನದೆ ? ಕಾಮಿನಿಯ ಗಳಿಸಿದರೇನು? ಅವಳು ನಿನ್ನವಳೆ ? ಇವು ಜಗಕ್ಕೆ ಇಕ್ಕಿದ ವಿಧಿಯೆಂದು ಅರಿಯಬೇಡವೆ ? ನಿನ್ನದೆಂಬುದು ನಿನ್ನಂಗದಲ್ಲಿಯೇ ಸಂಗಮವಾದ ಜ್ಞಾನ ಮಾತ್ರ. ಅದನ್ನು ಭೂಮಿ ಹೇಮ ಕಾಮಿನಿಗಾಗಿ ಕೆಡಗೊಡಲು ಬಿಟ್ಟರೆ ಹೇಗೆ? ಎಲೆ ಮನವೇ ಅಂಗದಲ್ಲಿ ಸಂಗಮವಾದ ಜ್ಞಾನರತ್ನ ಮಾತ್ರ ನಿನ್ನದು.ಅದನ್ನು ಸಂಪಾದಿಸದಿದ್ದರೆ ಕಣ್ಣಿದ್ದೂ ಹಗಲು ಗುರುಡನಂತೆ ನೀನು ಎಂದು ಎಚ್ಚರಿಸಿದ್ದಾರೆ ಹಡಪದ ಅಪ್ಪಣ್ಣ ಶರಣರು.

ಮಂಗಳಂ

ವಚನಾನುಕ್ರಮಣಿಕೆ

□

ಘನವೆಂದರೆ ಅರಿವು, ಮಹಾಜ್ಞಾನ, ನುಡಿದು ಹೇಳುವ ಗುರು. ಅದು ತನುವಿನೊಳಗೆ ತನ್ಮಯವಾಗಿದೆ. ತನುವನ್ನು ಮನ ಆವರಿಸಿ ಅರಿವಿನ ತನುವನ್ನು ತನ್ನೊಳಗೆ ಮಾಡಿಕೊಂಡಿದೆ. ಮನವೆಂದರೆ ಮಾಯೆ. ಮನದಿಂದಲೇ ತನುವನ್ನು, ತನುವಿನಲ್ಲಿ ತನ್ಮಯವಾದ ಅರಿವನ್ನು ಅರಿತು ಮನ ಘನಮನವಾಗಬೇಕಿತ್ತು. ಆದರೆ ಮಾಯೆಯೊಳಗೆ ಬಂಧಿಯಾಗಿದೆ.

ಮಾಯೆಯಿಂದಲೇ ಭಾವ ಸೃಷ್ಟಿಯಾಗಿದೆ. ಭಾವ ತನಗರಿಯದಂತೆ ಮಾಯೆಯೊಳಗೆ ಬಂಧಿಯಾಗಿದೆ. ಭಾವವೆನ್ನುವುದು ನಿರ್ಭಾವ; ಅದು ನಿಜಭಾವ. ಭಾವಿಸಿ ಭಾವವಾಗುತ್ತದೆ; ಅದೇ ಭಾವ ದುರ್ಭಾವಕ್ಕೆ ಒಳಗಾಗುತ್ತದೆ. ನಿರ್ಭಾವವೆನ್ನುವುದು ನಿರ್ಮೋಹ. ವಸ್ತುವಿನ ಸತ್ವವನ್ನು ಮಾತ್ರ ಆರಾಧಿಸುತ್ತದೆ.

ನಿರ್ಭಾವದ ಮೇಲೆ ಮೋಹಗೊಂಡ ಮನವೇ ಭಕ್ತನಾಗುತ್ತದೆ. ಭಕ್ತನೆಂದರೆ ವಿರಕ್ತ: ಮರದಲ್ಲಿ ಬಿಳಿ ರಕ್ತ ಹರಿಯುತ್ತದೆ. ಅದಕ್ಕಾಗಿ ಮರ ಹೂ ಹಣ್ಣು ಕಾಯಿ ಕೊಡುತ್ತದೆ; ಬೇಡುವುದಿಲ್ಲ. ಬೇಕೆನ್ನುವುದು ಮರದ ಜಾಯಮಾನವಲ್ಲ . ತನು ಕೂಡ ಜ್ಞಾನದ ಮರ. ಮರಕ್ಕೆ ಬೇರಿದೆ; ತನುವಿಗೆ ಬೇರಿಲ್ಲ. ಜಲಬಿಂದುವೇ ಗರ್ಭ ಹೊಕ್ಕು ತನುವಾಗಿ ಆ ತನುವಿನಲ್ಲಿ ರಕ್ತವಾಗಿ ಹರಿಯುತ್ತದೆ. ಜಲಬಿಂದುವೇ ಮರವಾಗಿ, ಮರದಲ್ಲಿ ವಿರಕ್ತವಾಗಿ ಹರಿಯುತ್ತದೆ. ಹೀಗಾಗಿ ಮರಕ್ಕೆ ಬಯಕೆಯಿಲ್ಲ.



ನಿರ್ಭಾವ ತತ್ವ ತಿಳಿದ ಮನ ಘನಮನವಾಗಿ ತನುವಿನಲ್ಲಿ ವಿರಕ್ತನಾಗಿ ಹರಿಯುತ್ತದೆ. ಭಕ್ತನಾಗಿ ಕೊಡುತ್ತದೆಯೇ ಹೊರತು ಮೋಹಮಾಡಿ ಬೇಡುವುದಿಲ್ಲ. ರಕ್ತಕ್ಕೆ ಬಯಕೆಯುಂಟು. ವಿರಕ್ತನಿಗೆ ಬಯಕೆಯಿಲ್ಲ. ತನುವಿಗೆ ವಿರಕ್ತನ ವೇಷ ಹಾಕಿದರೆ ಸಿದ್ಧಿಸುವುದಿಲ್ಲ. ಮನಕ್ಕೆ ಅರಿವಿನ ಶಿಕ್ಷಣ ದೊರೆತು, ಆ ಮನವೇ ಘನಮನವಾಗಿ ವಿರಕ್ತನಾಗಬೇಕು; ಭಕ್ತನಾಗಬೇಕು. ನಿಪುಣ ಜ್ಞಾನಿಯಿಂದ ವಿರಕ್ತನ ವೇಷದಲ್ಲಿದ್ದ ಸಕಲ ವಿರಕ್ತರೂ ಈ ಶಿಕ್ಷಣ ಪಡೆದು ವಿರಕ್ತ ಕುಲಕ್ಕೆ ನ್ಯಾಯ ಒದಗಿಸಬೇಕು. ಇದು ಅಪ್ಪಣ್ಣ ಶರಣರ ಆಶಯ!